ಭಗವಾನ್ ಶ್ರೀಶ್ರೀಶ್ರೀ ವೆಂಕಯ್ಯಸ್ವಾಮಿಯವರ
ಜೀವನ ಚರಿತ್ರೆ
ನಿತ್ಯ ಪಾರಾಯಣ ಗ್ರಂಥ

ಸಂಪಾದಕರು
ಪೆಸಲ ಸುಬ್ಬರಾಮಯ್ಯ
ಅನುವಾದಿಸಿದವರು ಶ್ರೀಮತಿ ಪದ್ಮಸ್ವಾಮಿ

ಪ್ರಕಾಶಕರು
ಶ್ರಿಸಾಯಿ ಮಾಸ್ಟರ್ ಸೇವಾ ಟ್ರಸ್ಟ್
ಗೊಲಗಮೂಡಿ
(Via) ಸರ್ವೆಪಲ್ಲಿ
ನೆಲ್ಲೂರು ಜಿಲ್ಲೆ (AP)
PIN – 524 321

ಕೃತಿಸ್ವಾಮ್ಯ: ಪ್ರಕಾಶಕರು

ಮೊದಲ ಮುದ್ರಣ: 1000 ಪ್ರತಿಗಳು

ಮೂಲ ಸ್ಥಳ:

ಶ್ರೀ ಸಾಯಿ ಮಾಸ್ಟರ್ ಸೇವಾ ಟ್ರಸ್ಟ್
ಗೋಲಗಮುಡಿ ಪೋಸ್ಟ್
(ಮೂಲಕ) ಸರ್ವೇಪಲ್ಲಿ - 524 321
ನೆಲ್ಲೂರು ಜಿಲ್ಲೆ (ಎ.ಪಿ.)

ಬೆಲೆ: ರೂ.80-00

ಮುದ್ರಕ:
ಮನೋಜ್ ಪ್ರಿಂಟರ್ಸ್
ಚಪ್ಪಲ್ ಬಜಾರ್, ಕಚೆಗುಡ, ಹೈದರಾಬಾದ್
ಸೆಲ್: 9246887388



ಭಗವಾನ್ ಶ್ರೀ ವೆಂಕಯ್ಯ ಸ್ವಾಮಿ



ಭಗವಾನ್ ಶ್ರೀ ವೆಂಕಯ್ಯ ಸ್ವಾಮಿ

ಭಗವಂತನ ಸೇವಕಿ ತುಳಸವ್ವ

ಚುಂಡು ನಾಗಯ್ಯ ಮತ್ತು ರೋಶಿ ರೆಡ್ಡಿ

ಮಾತಾಜಿ ವಕ್ಕೆಮ್ಮ



ಭಕ್ತರ ಗುರುಗಳಾದ ಶ್ರೀ ಅಕ್ಕಿ ವೆಂಕಟ ರಾಮರೆಡ್ಡಿ

ಶ್ರೀ ನಲ್ಲಪುರೆಡ್ಡಿ ಆದಿನಾರಾಯಣ ರೆಡ್ಡಿ



ಕೊಮರಗಿರಿ ರಾಮಣಯ್ಯ



ಬರಿಗೆಲ ನಾಗಯ್ಯ

ಶ್ರೀಮತಿ ಗುತ್ತಾ ನರಸಮ್ಮ



ಶ್ರೀ ಸ್ವಾಮೀಜಿ ಬಳಸುತ್ತಿದ್ದ ವಸ್ತುಗಳು: ಬಂಡಿ, ಚಪ್ಪಲಿಗಳು, ಡೋಲಿ, ಹಾಲು ಕಾಯುಸುವ ಪಾತ್ರೆಗ

ಭಗವಾನ್ ಶ್ರೀ ವೆಂಕಯ್ಯ ಸ್ವಾಮಿ

ಶ್ರೀ ವೆಂಕಯ್ಯ ಸ್ವಾಮಿ ಅಷ್ಟೋತ್ತರ ಶತನಾಮಗಳು

1.ಓಂ ಸಮರ್ಥ ಸದ್ಗುರು,ಶ್ರೀ ಸ್ವಾಮಿ ನಾಥಾಯ ನಮಃ (9 ಬಾರಿ ಹೇಳ ಬೇಕು)
2.ಓಂ ಗುರುದೇವ ದತ್ತಾತ್ರೇಯಾಯ, ಸ್ವಾಮಿ ನಾಥಾಯ ನಮಃ (9 ಬಾರಿ ಹೇಳ ಬೇಕು)
3. ಓಂ ವಿಶ್ವಪ್ರಾಣಾಯ, ಸ್ವಾಮಿನಾಥಾಯ ನಮಃ (9 ಬಾರಿ ಹೇಳ ಬೇಕು)
4.ಓಂ ಪಂಚಭೂತಾತ್ಮಸ್ವರೂಪಾಯ ನಮಃ
5. ಓಂ ಪ್ರಾಣಲಿಂಗಸ್ವರೂಪಾಯ ನಮಃ
6. ಓಂ ವಿಶ್ವಲಿಂಗಾಯ ನಮಃ
7. ಓಂ ಚಿದಂಬರಾಯ ನಮಃ
8. ಓಂ ಬಹಿರಂತರ್ವ್ಯಾಪಿನೇ ನಮಃ
9.ಓಂ ದೇಹಸ್ಥ ಪೃಥ್ವಿವ್ಯಾಪಸ್ತೆಜೋ ವಾಯು ರಾಕಶ ಸ್ವರೂಪಾಯ ನಮಃ
10. ಓಂ ಚಿದ್ರೂಪಾಯ ನಮಃ
11. ಓಂ ಚೈತನ್ಯ ಲಿಂಗಾಯ ನಮಃ
12. ಓಂ ಸರ್ವವ್ಯಾಪಿನೇ ನಮಃ
13. ಓಂ ದಿಗಂಬರಾಯ ನಮಃ
14. ಓಂ ಕೇವಲಾಯ ನಮಃ
15. ಓಂ ವಿಶ್ವಸಾಕ್ಷಿಣೇ ನಮಃ
16. ಓಂ ಸರ್ವಜೀವಸ್ವರೂಪಾಯ ನಮಃ
17. ಓಂ ನಾಮರೂಪರಹಿತಾಯ ನಮಃ
18. ಓಂ ಸರ್ವನಾಮರೂಪಿಣೇ ನಮಃ
19. ಓಂ ವಿಶ್ವರೂಪಾಯ ನಮಃ
20. ಓಂ ವಿರೂಪಾಯ ನಮಃ
21. ಓಂ ವಿರೂಪಾಕ್ಷಾಯ ನಮಃ
22. ಓಂ ನಿರ್ಗುಣಾಯ ನಮಃ
23. ಓಂ ನಿಶ್ಚಲಾಯ ನಮಃ
24. ಓಂ ಚಂಚಲಾಯ ನಮಃ
25. ಓಂ ಅರಿಷಡ್ವರ್ಗವಿನಾಶಕಾಯ ನಮಃ
26. ಓಂ ದೃಶ್ಯಾಯ ನಮಃ
27. ಓಂ ದೃಗ್ರೂಪಾಯ ನಮಃ
29. ಓಂ ಸರ್ವಲೋಕಾತ್ಮಕಾಯ ನಮಃ
30. ಓಂ ಸರ್ವಲೋಕಸಾಕ್ಷಿಣೇ ನಮಃ
31. ಓಂ ಸರ್ವದೇವತಾಸ್ವರೂಪಿಣೇ ನಮಃ
32. ಓಂ ಆಕಾಶ ಗಮನಾಯ ನಮಃ
33. ಓಂ ಗಮನಾಗಮನರಹಿತಾಯ ನಮಃ
34. ಓಂ ಸರ್ವತ್ರಸ್ಥಿತಾಯ ನಮಃ
35. ಓಂ ಸನ್ಮಾತ್ರಾಯ ನಮಃ
36. ಓಂ ಸರ್ವಧಾರಾಯ ನಮಃ
37. ಓಂ ನಾಥನಾಥಾಯ ನಮಃ
38. ಓಂ ಯೋಗಾಯ ನಮಃ
39. ಓಂ ಯೋಗೀಶ್ವರಾಯ ನಮಃ
40. ಓಂ ಯೋಗಯೋಗ್ಯಾಯ ನಮಃ
41. ಓಂ ಯೋಗಗಮ್ಯಾಯ ನಮಃ
42. ಓಂ ಸರ್ವಯೋಗಸ್ವರೂಪಾಯ ನಮಃ
43. ಓಂ ಸರ್ವಯೋಗಿಸ್ವರೂಪಾಯ ನಮಃ
44. ಓಂ ಸಿದ್ಧಿದಾಯ ನಮಃ
45. ಓಂ ಸಿದ್ಧಾಯ ನಮಃ
46. ಓಂ ಸಿದ್ಧಯೋಗಿನೇ ನಮಃ
47. ಓಂ ಸರ್ವಸಿದ್ಧಸೇವಿತಾಯ ನಮಃ
48. ಓಂ ಸರ್ವಸಿದ್ಧಿಸೇವಿತಾಯ ನಮಃ
49. ಓಂ ವಿಘ್ನರಾಜಾಯ ನಮಃ
50. ಓಂ ವಿಘ್ನಹಂತ್ರೇ ನಮಃ
51. ಓಂ ವಿಚಿತ್ರವೇಶಾಯ ನಮಃ
52. ಓಂ ಚಿತ್ತಚಾಂಚಲ್ಯವಿನಾಶಕಾಯ ನಮಃ
53. ಓಂ ಭೇದವರ್ಜಿತಾಯ ನಮಃ
54. ಓಂ ಕೃಪಾನಿಧಯೇ ನಮಃ
55. ಓಂ ಕರುಣಾಮೂರ್ತಯೇ ನಮಃ
56. ಓಂ ಸಮದರ್ಶಿನೇ ನಮಃ
57. ಓಂ ಆತ್ಮದರ್ಶಿನೇ ನಮಃ
58. ಓಂ ಪರಮಾತ್ಮ ಸ್ವರೂಪಾಯ ನಮಃ
59. ಓಂ ವರ್ಷರೂಪಕ ಯಜ್ಞಕೃತೇ ನಮಃ

60. ಓಂ ಸಕಾಲ ವರ್ಷ ಧಾತ್ರೇ ನಮಃ
61. ಓಂ ಸದ್ಧರ್ಮ ಸಂರಕ್ಷಕಾಯ ನಮಃ
62. ಓಂ ಸದಾಚಾರ ವಿಗ್ರಹಾಯ ನಮಃ
63. ಓಂ ಆಚಾರವರ್ಜಿತಾಯ ನಮಃ
64. ಓಂ ರೋಗ ನಿವಾರಿಣೇ ನಮಃ
65. ಓಂ ಸರ್ವಶಾಸ್ತ್ರಸ್ವರೂಪಾಯ ನಮಃ
66.ಓಂ ಸರ್ವಾಚಾರಸಂಸೇವಿತಾಯ ನಮಃ
67. ಓಂ ವೇದವೇದ್ಯಾಯ ನಮಃ
68. ಓಂ ವೇದಾತ್ಮನೇ ನಮಃ
69. ಓಂ ವೇದಕರ್ತ್ರೇ ನಮಃ
70. ಓಂ ವೇದ ಸಂರಕ್ಷಕಾಯ ನಮಃ
71. ಓಂ ಯಜ್ಞಾಯ ನಮಃ
72. ಓಂ ಯಜ್ಞಪುರುಷಾಯ ನಮಃ
73. ಓಂ ಯಜ್ಞಭೋಕ್ತ್ರೇ ನಮಃ
74. ಓಂ ಯಜಮಾನಿನೇ ನಮಃ
75. ಓಂ ಜ್ಞಾನಯಜ್ಞಾಯ ನಮಃ
76. ಓಂ ಧ್ಯಾನಯಜ್ಞಾಯ ನಮಃ
77. ಓಂ ಬೋಧಯಜ್ಞಾಯಾಯ ನಮಃ
78. ಓಂ ಭಕ್ತಿಯಜ್ಞಾಯ ನಮಃ
79. ಓಂ ಸೃಷ್ಟಿಯಜ್ಞಾಯ ನಮಃ
80. ಓಂ ಚದಗ್ನಿಕುಂಡಾಯ ನಮಃ
81. ಓಂ ವಿಭೂತಯೇ ನಮಃ
82.ಓಂಕಲ್ಪಿತಬ್ರಹ್ಮಾಂಡಮಂಡಲಾಯ ನಮಃ
83. ಓಂ ಸಂಕಲ್ಪಿತಸರ್ವಲೋಕಾಯ ನಮಃ
84. ಓಂ ಆಹಾರಾಯ ನಮಃ
85. ಓಂ ನಿರಾಹಾರಾಯ ನಮಃ
86. ಓಂ ತೀರ್ಥಪಾದಾಯ ನಮಃ
87. ಓಂ ತೀರ್ಥಪಾಲಕಾಯ ನಮಃ
88. ಓಂ ತ್ರಿಕಾಲಜ್ಞಾನಾಯ ನಮಃ
89. ಓಂ ಕಾಲರಹಿತಾಯ ನಮಃ
90.ಓಂ ಧೃಕ್ ದೃಶ್ಯಭೇದ ವಿವರ್ಜಿತಾಯ ನಮಃ
91. ಓಂ ಪ್ರಣವಾಯ ನಮಃ
92. ಓಂ ಶಬ್ದರೂಪಿಣೇ ಪರಬ್ರಹ್ಮಣೆ ನಮಃ
93. ಓಂ ದೇವಾಲಯಾಯ ನಮಃ
94. ಓಂ ಸರ್ವಧರ್ಮಸಂಸೇವಿತಾಯ ನಮಃ
95. ಓಂ ಸರ್ವಧರ್ಮಸಂಸ್ಥಾಪಕಾಯ ನಮಃ
96. ಓಂ ಧರ್ಮಸ್ವರೂಪಾಯ ನಮಃ
97. ಓಂ ಅವಧೂತಾಯ ನಮಃ
98. ಓಂ ಲೀಲಾಮಾನುಷವಿಗ್ರಹಾಯ ನಮಃ
99. ಓಂ ಲೀಲಾವಿಲಾಸಾಯ ನಮಃ
100. ಓಂ ಸ್ಮೃತಿಮಾತೃಪ್ರಸನ್ನಾಯ ನಮಃ
101. ಓಂ ಗೊಲಗಮೂಡಿ ಆಶ್ರಮವಾಸಿನೇ ನಮಃ
102. ಓಂ ಭಕ್ತಭಾರಭೃತಾಯ ನಮಃ
103. ಓಂ ವಿಶ್ವಪ್ರೇರಣಾಧಿಕಾರಿಣೇ ನಮಃ
104. ಓಂ ಸರ್ವಪ್ರೇರಣಾಧಿಕಾರಿಣೇ ನಮಃ
105. ಓಂ ಸರ್ವಸಮರ್ಥಾಯ ನಮಃ
106. ಓಂ ಸಚ್ಚಿದಾನಂದಸ್ವರೂಪಾಯ ನಮಃ
107. ಓಂ ಗುರುಭಕ್ತಿಪ್ರದಾತ್ರೇ ನಮಃ
108. ಓಂ ಆತ್ಮಜ್ಞಾನಪ್ರದಾತ್ರೇ ನಮಃ

ಪೂಜ್ಯರಾದ ಆಚಾರ್ಯ ಶ್ರೀ ಏಕ್ಕಿರಾಲ ಭರದ್ವಾಜರು

ಶ್ರೀ ಭರದ್ವಾಜ ಮೇಷ್ಟರು, ಅವಧೂತ ಶ್ರೀ ವೆಂಕಯ್ಯ ಸ್ವಾಮಿ ನಮ್ಮೊಂದಿಗೆ ಇರುವಾಗಲೇ ಅವರ ಜೀವನ ಚರಿತ್ರೆಯನ್ನು ಪ್ರಕಟಿಸಲು ಶ್ರಿ ಸ್ವಾಮಿಯವರ ಭಕ್ತರನ್ನು ಪ್ರೋತ್ಸಹಿಸಿದರು. ಒಂದು ಪಕ್ಷ, ಪ್ರಕಟಿಸಲು ಅವರ ಶಕ್ತಿಮೀರಿದ ಕೆಲಸವಾದಲ್ಲಿ, ಶ್ರೀ ಸ್ವಾಮಿಯವರ ಲೀಲೆಗಳನ್ನು ಕೈಯಲ್ಲಿ ಬರೆದು ಕರಪತ್ರವನ್ನು ನೆಲ್ಲೂರಿನ ಪ್ರತಿ ಓಂದು ಮನೆಗೂ ಹಂಚಲು ಹೇಳಿದರು. ಆದರೆ ಶ್ರಿ ವೆಂಕಯ್ಯ ಸ್ವಾಮಿಯವರ ಭಕ್ತರು ಆ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗಲಿಲ್ಲ. ಇದರಿಂದ, ಆಚಾರ್ಯ ಶ್ರಿ ಭರದ್ವಾಜರು, ಶ್ರಿ ಸ್ವಾಮಿಯ ಛಾಯಾಚಿತ್ರದೊಂದಿಗೆ ತಾವೇ ತಮ್ಮ ಕೈಯಲ್ಲಿ ಸ್ವಾಮಿಯವರ ಲೀಲೆಗಳನ್ನು ಬರೆದು, "ವಿದ್ಯಾನಗರ ಶ್ರೀ ಸಾಯಿ ದೇವಸ್ಥಾನದ ಪ್ರಾರಂಭೋತ್ಸವ ಸಂದರ್ಭದಲ್ಲಿ ಮೊದಲು ಬಾರಿಗೆ ಎಲ್ಲರಿಗೂ ಹಂಚಿದರು. ಈ ಕಾರ್ಯವನ್ನು ಮಾಡಿದರೆ ಶ್ರೀ ಸ್ವಾಮಿಯವರು ಕೋಪಿಸುತ್ತಾರೆ ಎಂಬ ಭಯ ಹಲವರಲ್ಲಿತ್ತು. ಆದರೆ ಆಚಾರ್ಯರು ಧೈರ್ಯದಿಂದ, "ಶ್ರೀ ಸ್ವಾಮಿಯವರ ಲೀಲೆ ಜನತೆಗೆ ತಿಳಿಯುವುದು ಮುಖ್ಯ. ನಾನು ಅವರ ಕೋಪಕ್ಕೆ ಗುರಿಯಾಗಿಬಿಟ್ಟರೂ, ನಾಲ್ಕು ಜನ್ಮ ಹಿಂದೆ ಹೋಗಬೇಕಾದರೂ, ಅದು ಪರವಾಗಿಲ್ಲ" ಎಂದು ನಿಶ್ಚಯಿಸಿದರು. ಈ ಮೂಲಕ ಶ್ರೀ ವೆಂಕಯ್ಯ ಸ್ವಾಮಿಯವರ ಲೀಲೆಗಳನ್ನು ಪ್ರಪಂಚಕ್ಕೆ ಪರಿಚಯಿಸಿದ ಪುಣ್ಯಾತ್ಮ ಆಚಾರ್ಯ ಭರದ್ವಾಜರೆಂದು ಹೆಸರು ಪಡೆದರು.

ಶ್ರೀ ವೆಂಕಯ್ಯ ಸ್ವಾಮಿಯವರು ಜೀವಂತರಾಗಿದ್ದಾಗಲೇ ಅವರ ಜೀವನಚರಿತ್ರೆಯನ್ನು ಶೇಖರಿಸಿ, ಮುದ್ರಿಸಲು ಪ್ರೋತ್ಸಾಹಿಸಿದ ಪುಣ್ಯಮೂರ್ತಿ ಆಚಾರ್ಯರು ಎಂಬುದನ್ನು ಶ್ರೀ ಪೇಸಲ ಸುಬ್ಬರಾಮಯ್ಯನವರು ತಮ್ಮ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ವಿಷಯ ಸೂಚಿಕೆ

ಮುನ್ನೋಟ iii

ಕೃತಜ್ಞತೆ v

ಗ್ರಂಥ ಪಾರಾಯಣ ಪದ್ಧತಿ vi

ಶ್ರೀಸ್ವಾಮಿಯವರನ್ನು ಸೇವಿಸುವ ವಿಧಾನಗಳು. vii

ದೀಕ್ಷೆ ತೆಗೆದುಕೊಳ್ಳುವವರಿಗೆ ಸೂಚನೆ ix

ಗುರು ದರ್ಶನ x

ಅಧ್ಯಾಯಗಳು :

1. ಶ್ರೀ ವೆಂಕಯ್ಯ ಸ್ವಾಮಿಯವರ ಜೀವನ 1
2. ಅನಿಕೇತ 8
3. ಅವಧೂತ ಲೀಲೆಗಳು 25
4. ಸರ್ವಜ್ಞ ಮೂರ್ತಿ 29
5. ಸರ್ವಸಮರ್ಥರು 51
6. ಭೂತನಿಯಂತ 63
7. ಆಪದ್ಬಾಂಧವರು 75
8. ಅಮೃತ ವಾಕ್ಯ 84
9. ದಯಾಸಾಗರರು 96
10. ಪತಿತಪಾವನರು 106
11. ಅವಧೂತ ವೈದ್ಯ 113
12. ಸಜ್ಜನ ವಂದಿತರು. 121
13. ದಕ್ಷಿಣೆ 124
14. ಸಾಧು ದೂಷಣೆ 128
15. ಭಿಕ್ಷಾನ್ನ 130
16. ಜನ್ಮಜನ್ಮದ ಅನುಬಂಧ 133

17. ದಿವ್ಯಾನುಭವಗಳು 138
18. ಲೋಕೋತ್ತರ ಆಸೆಗೆ ಒಳಗಾದವರು ಅವುಗಳ ಹಿಂದೆ ಸೆರೆಹಾಕಿಕೊಳ್ಳುತ್ತಾರೆ 149
19. ಸ್ವಾಮಿಯವರ ಅಭಯ 155
20. ಧರ್ಮಾಚರಣ 161
21. ಶ್ರೀ ಸ್ವಾಮಿಯವರ ದಿವ್ಯ ಬೋಧನೆಗಳು 166
22. ಶ್ರೀ ಸ್ವಾಮಿಯವರ ಸೂಕ್ತಿಗಳು 192
23. "ನಂಬಿದವರಿಗೆ ಐಶ್ವರ್ಯ – ಇಲ್ಲದಿದ್ದರೆ...." 195
24. ಶ್ರೀ ಸ್ವಾಮಿಯವರ ಅಭೇದಸ್ಥಿತಿ 200
25. ಮಹಾಸಮಾಧಿ 209
26. ಸಾಧನೆ 218
27. ಶ್ರೀಸ್ವಾಮಿಯ ಪ್ರಿಯ ಕಾರ್ಯದ ಹರ್ಷಭರಿತ ... 227
28. ರಚಯಿತರ ಸ್ವಾನುಭವಗಳು 230
29. ಮಹಾಸಮಾಧಿಯ ನಂತರ ಲೀಲೆಗಳು 236

ಮುನ್ನೋಟ

ಭಗವಂತನು ದೀನಜನರ ಉದ್ಧಾರಕ್ಕಾಗಿ, ಭಕ್ತಜನರ ಸಂರಕ್ಷಣೆಗಾಗಿ, ಮತ್ತು ಮುಮುಕ್ಷುಗಳಿಗೆ ಮಾರ್ಗದರ್ಶನ ನೀಡಲು ಸದ್ಗುರುವಿನ ರೋಪದಲ್ಲಿ ಅವತರಿಸುತ್ತಾನೆ. ಶಾಸ್ತ್ರಗಳಲ್ಲಿ ಸೂಚಿಸಿರುವಂತೆ, ಸರ್ವವ್ಯಾಪಕತ್ವ, ಸರ್ವಜ್ಞತೆ ಮತ್ತು ಸರ್ವಸಮರ್ಥತೆಗಳು ಶ್ರೀ ಸದ್ಗುರುನಲ್ಲಿ ಸಂಪೂರ್ಣವಾಗಿ ಪ್ರಕಟವಾಗುತ್ತವೆ. ಇಂತಹ ಸದ್ಗುರುಗುಣಗಳಿಂದ ಕೂಡಿ ಅವತರಿಸಿದವರೇ ಗೊಲಗಮೂಡಿಯಲ್ಲಿ ವಾಸಮಾಡುತ್ತಿರುವ ಅವಧೂತ ಶ್ರೀ ವೆಂಕಯ್ಯ ಸ್ವಾಮಿಯವರು.

ಮಹಾತ್ಮರು ಶರೀರವನ್ನು ತ್ಯಜಿಸಿದರೂ, ಸೂಕ್ಷ್ಮರೂಪದಲ್ಲಿ ಸರ್ವವ್ಯಾಪಿಯಾಗಿ ಇರುತ್ತಾರೆ. ಅವರು ಕೋರಿದ ಸ್ಥಳಗಳಲ್ಲಿ ನಿಜರೂಪದಲ್ಲಿ ಪ್ರತ್ಯಕ್ಷವಾಗ ಬಲ್ಲರು. ಅವರು ತಮ್ಮ ಭಕ್ತರ ಪ್ರಾರ್ಥನೆಗಳನ್ನು, ಚಲನವಲನಗಳನ್ನು ನಿರಂತರವಾಗಿ ಗಮನಿಸುತ್ತಾ, ಅವರನ್ನು ರಕ್ಷಿಸುತ್ತಿರುತ್ತಾರೆ. ಶ್ರೀಸ್ವಾಮಿಯವರು ಮಹಾಸಮಾಧಿಯಾಗಿದನಂತರವೂ ನಡೆಯುತ್ತಿರುವ ಲೀಲೆಗಳು ಇದಕ್ಕೆ ಸ್ಪಷ್ಟವಾದ ನಿದರ್ಶನವಾಗಿದೆ. ಶ್ರೀಸ್ವಾಮಿಯವರಿಗೆ ಯಾವುದೇ ಕುಲ, ಮತ ಅಥವಾ ಜಾತಿ ಭೇದಗಳಿಲ್ಲ. ಇಂದಿನವರೆಗೂ, ಶ್ರೀಸ್ವಾಮಿಯವರ ಸಮಾಧಿಯ ಬಳಿಗೆ ಬರುವ ಭಕ್ತರು ತಮ್ಮ ಕಷ್ಟ–ಸುಖಗಳನ್ನು ಅವರ ಮುಂದೆ ಹಂಚಿಕೊಳ್ಳುತ್ತಾ ಮತ್ತು ಶ್ರೀಸ್ವಾಮಿಯವರ ಅನುಗ್ರಹದಿಂದ ತಮ್ಮ ಕಷ್ಟಗಳಿಂದ ಮುಕ್ತಿಯನ್ನು ಪಡೆಯುತ್ತಿದ್ದಾರೆ.

ನಿರಂತರವಾಗಿ ಶ್ರೀ ಸದ್ಗುರುವಿನ ಸ್ಮರಣೆ ಮಾಡುವುದರಿಂದ, ಭವಬಂಧಗಳು ನಶಿಸಿ, ಸದ್ಗುರುವಿಗೂ ಭಕ್ತನಿಗೂ ಭೇದವಿಲ್ಲದಂತೆ ಭಕ್ತನು ಮುಕ್ತಿಯನ್ನು ಪಡೆಯುತ್ತಾನೆ ಎಂದು ಶಾಸ್ತ್ರಗಳು ಸ್ಪಷ್ಟವಾಗಿ ಸೂಚಿಸುತ್ತವೆ. ಈ ಹಿನ್ನೆಲೆಯಲ್ಲಿ, ನಮ್ಮ ಮನಸ್ಸಿನಲ್ಲಿ ಶ್ರೀಸ್ವಾಮಿಯವರ ಜೀವನದ ವಿಶೇಷ ಘಟನೆಗಳನ್ನು ಸ್ಮರಿಸುವುದೇ ಬಲವಾದ ಅವಲಂಬನೆಯಾಗುತ್ತದೆ. ಆ ಕಾರಣಕ್ಕೇ, ಶ್ರೀಸ್ವಾಮಿಯವರ ರೂಪ, ಅವರ ಜೀವನವಿಧಾನ ಮತ್ತು ಅವರ ಲೀಲಾಮಯ ಚರಿತ್ರೆಯನ್ನು ಈ ಗ್ರಂಥದಲ್ಲಿ ವಿವರಿಸಿದ್ದೇವೆ. "ಬೆಟ್ಟದ ಮೇಲಿರುವ ದೀಪದಂತೆ" ಶ್ರೀಸ್ವಾಮಿಯವರ ಜೀವನಚರಿತ್ರೆ, ನಿಜಹೃದಯ ಸಾಧುಗಳಿಗೆ ಮಾರ್ಗದರ್ಶನವಾಗಿದ್ದು, ಆತ್ಮೋನ್ನತಿಗೆ ಪ್ರೇರಕವಾಗಿದೆ. ಸರ್ವಜೀವಿಗಳ ಮೇಲಿನ ಪ್ರೇಮ, ನಿರಾಡಂಬರತೆ, ಧ್ಯೇಯಗಳ ಮೇಲಿನ ಗಾಢ ನಂಬಿಕೆ, ಕಾರ್ಯದೀಕ್ಷೆ, ವೈರಾಗ್ಯ, ಧರ್ಮಾಚರಣೆ ಮತ್ತು ಇಂದ್ರಿಯನಿಗ್ರಹ—ಇವೆಲ್ಲವೂ ಶ್ರೀಸ್ವಾಮಿಯವರು ತಾವು ಆಚರಿಸಿ ನಮಗೆ ತೋರಿಸಿದ ದಿವ್ಯ ಮಾರ್ಗಗಳು.

ಶ್ರೀಸಾಯಿನಾಥರು, ಶ್ರೀ ರಮಣ ಮಹರ್ಷಿಗಳನ್ನು ದರ್ಶಿಸುವ ಭಾಗ್ಯ ನಮಗೆ ದೊರೆತಿರಲಿಲ್ಲ. 1982 ರವರೆಗೆ, ನಮ್ಮನಡುವೆ ಇದ್ದ ಶ್ರೀಸ್ವಾಮಿಯವರನ್ನು ನೋಡಲು ನಮಗೆ ಸಾಧ್ಯವಾಗಿದ್ದೆಂದು ನೆನಸಿದಾಗ, ನಾವೆಷ್ಟು ಅದೃಷ್ಟವಂತರೆಂಬುದು ಸ್ಪಷ್ಟವಾಗುತ್ತದೆ. ತಮ್ಮ ಜೀವಿತಕಾಲದಲ್ಲಿ, ಸ್ವಾಮಿಯವರು ತಮ್ಮಮಹಿಮೆಗಳನ್ನು, ವಿಶ್ವರೂಪವನ್ನು ಬಹಿರಂಗಪಡಿಸದೆ, ಗುಟ್ಟಾಗಿ ಇಟ್ಟಿದ್ದರು. ಅವರ ಕೀರ್ತಿಯನ್ನು

ಪ್ರಚಾರಮಾಡುವ ಪ್ರಯತ್ನವನ್ನು ಅವರು ವಿಚಿತ್ರ ರೀತಿಯಲ್ಲಿ ವಿಫಲಗೊಳಿಸುತ್ತಿದ್ದರು. ಅವರ ಮಹಾಸಮಾಧಿ ಆದನಂತರವೇ, ಅವರ ಭಕ್ತರು ತಮ್ಮ ತಮ್ಮ ದಿವ್ಯಾನುಭವಗಳನ್ನು, ಪರಸ್ಪರ ಹಂಚಿಕೊಳ್ಳುವ ಮೋಲಕ, ಸ್ವಾಮಿಯವರ ಲೀಲಾಮಯ ತತ್ವದಲ್ಲಿ ತಲ್ಲೀನರಾಗುವ ಭಾಗ್ಯವನ್ನು ಪಡೆದುಕೊಂಡರು. ಸದ್ಗುರು ಸ್ಮರಣೆಯಿಂದ ಸರ್ವಜನರು, ಇಂತಹ ದಿವ್ಯಾನುಭೂತಿಯನ್ನು ಹೊಂದಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಬಲವಾದ ಸತ್ಸಂಕಲ್ಪದಿಂದ, ಭಕ್ತರು ಈ ದಿವ್ಯಾನುಭವಗಳ ಸಂಪುಟಗಳನ್ನು ರೂಪಿಸಲು ಸಹಕರಿಸಿದರು

ಕೃತಜ್ಞತೆ

ಈ ಗ್ರಂಥವನ್ನು ತೆಲುಗು ಭಾಷೆಯಲ್ಲಿ ಪ್ರಕಟಿಸಿದವರು ಶ್ರೀಪೆಸಲ ಸುಬ್ಬರಾಮಯ್ಯನವರು. ತಮ್ಮ ಕೃತಜ್ಞತೆಯನ್ನು ಈ ಕೆಳಗಿನ ರೀತಿಯಲ್ಲಿ ಅವರು ಅನೇಕ ಮಂದಿಗೆ ತಿಳುಸುತ್ತಿದ್ದಾರೆ.:

"ಈ ಜಗತ್ತೆಂಬ ನಾಟಕದಲ್ಲಿ ನನಗೂ ಒಂದು ಪಾತ್ರವನ್ನು ನೀಡಿ, ಪವಿತ್ರಜೀವನದ ದಿಕ್ಕಿನಲ್ಲಿ ನನ್ನನ್ನು ಪ್ರೇರೇಪಿಸಿದ ಪರಮಾತ್ಮನಿಗೆ, ಅವರ ಪ್ರತೀ ರೂಪವಾಗಿರುವ ಗುರುಗಳಾದ ಆಚಾರ್ಯ ಶ್ರೀ ಎಕ್ಕಿರಾಲ ಭರದ್ವಾಜ ಮೇಷ್ಟರವರಿಗೆ ನಾನು ಕೃತಜ್ಞನು. ಅವರು ನನ್ನ ಮೇಲೆ ತಂದೆಯಿಗಿಂತಲೂ ಹೆಚ್ಚು ಪ್ರೀತಿ ತೋರಿಸಿ, ನನ್ನನ್ನು ಶ್ರೀ ಸ್ವಾಮಿಯವರ ಸನ್ನಿಧಿಗೆ ಕಳುಹಿಸಿ, ಅವರ ಜೀವನಚರಿತ್ರೆಯ ಮಾಹಿತಿಗಳನ್ನು ಸಂಗ್ರಹಿಸಿ, ಮೊದಲ ಗ್ರಂಥರೂಪದಲ್ಲಿ ತಿದ್ದುಪಡಿಸಿ, ಮುದ್ರಿಸಲು ಅವಕಾಶ ನೀಡಿದರು. ಅವರ ಪಾದಪದ್ಮಗಳಿಗೆ ಸಹಸ್ರಸಾಷ್ಟಾಂಗ ಪ್ರಣಾಮಗಳು. ಅಂತಹ ನನ್ನ ಅಲ್ಪಸೇವೆಗಳನ್ನು ಸ್ವೀಕರಿಸಿದ ಶ್ರೀಸಾಯಿನಾಥರಗೂ, ಶ್ರೀವೆಂಕಯ್ಯ ಸ್ವಾಮಿಯವರಿಗೂ, ಕೋಟಿ ಕೋಟಿ ಪ್ರಣಾಮಗಳು.

ನನ್ನ ಪೂಜ್ಯ ಮಾತೃಶ್ರೀಯವರಾದ ಪೆಸಲ ಶೇಷಮ್ಮನವರಿಗೆ, ನನ್ನ ಸೋದರರಾದ ಶ್ರೀ ಪೆಸಲ ರಮಣಯ್ಯನವರಿಗೆ, ಕೃತಜ್ಞತೆಯ ಅಭಿವಂದನೆಗಳು. ಈ ಗ್ರಂಥ ಮುದ್ರಣಕ್ಕಾಗಿ ಸಹಕರಿಸಿದ ಶ್ರೀ ಎಂ ವೆಂಕಟೇಶ್ವರುಲುನವರು (ಒಂಗೋಲು) ಹಾಗು ಶ್ರೀ ಎ ಸೋಮಿಶೆಟ್ಟಿ ವೆಂಕಟೇಶ್ವರುಲುನವರು (ಸೂಳ್ಳೂರುಪೇಟ), ಶ್ರೀಸ್ವಾಮಿಯವರ ಆಶೀರ್ವಾದಗಳು ಸದಾ ಇರಲೆಂದು ಪ್ರಾರ್ಥಿಸುತ್ತಿರುತ್ತೇನೆ

ಪೆಸಲ ಸುಬ್ಬರಾಮಯ್ಯ

ಗ್ರಂಥ ಪಾರಾಯಣ ಪದ್ಧತಿ

ಈ ಸದ್ಗ್ರಂಥವನ್ನು ಕ್ರಮಬದ್ಧವಾಗಿ ಪಾರಾಯಣ ಮಾಡಿದರೆ, ಶ್ರೀಸ್ವಾಮಿಯವರ ಕೃಪೆಯನ್ನು ವಿಶಿಷ್ಟವಾಗಿ ಪಡೆಯಬಹುದು. ಇದು ಶ್ರೀ ದತ್ತಾತ್ರೇಯ ಸಂಪ್ರದಾಯ.

ಪ್ರತಿಯೊಬ್ಬರೂ, ಅವಕಾಶವಿದ್ದಾಗಲೆಲ್ಲ ಸಪ್ತಾಹ ಪಾರಾಯಣ ಮಾಡುವ ಅನುಕೂಲವಾಗುವಂತೆ ಈ ಗ್ರಂಥವನ್ನು ರಚಿಸಲಾಗಿದೆ. ಒಂದು ವೇಳೆ ಸಪ್ತಾಹ ಪಾರಾಯಣ ಸಾಧ್ಯವಾಗದಿದ್ದರೆ, ಅಮಾವಾಸ್ಯೆಯ ದಿನ ಶ್ರೀಸ್ವಾಮಿಯವರ ಪೂಜೆ ಮಾಡಿ, ಶುಕ್ಲ ಪಾಡ್ಯಮಿಯಿಂದ ಪಠಣ ಪ್ರಾರಂಭಿಸಿ ಪೌರ್ಣಿಮೆಯವರೆಗೂ 15 ದಿನಗಳ ಅವಧಿಯಲ್ಲಿ ಪೂರ್ಣಗೊಳಿಸಬಹುದು. ಯಾವ ದಿನ ಎಷ್ಟು ಓದಬೇಕು ಎಂಬುದನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ನಿರ್ಧರಿಸಬಹುದು. ಪಾರಾಯಣದ ಕೊನೆಯ ದಿನ, ಶ್ರೀಸ್ವಾಮಿಯವರ ಚಿತ್ರಪಟಕ್ಕಾಗಲಿ, ಶ್ರೀ ದತ್ತಾತ್ರೇಯರ ಚಿತ್ರಪಟಕ್ಕಾಗಲಿ ಅಥವಾ ಶ್ರೀ ಸಾಯಿನಾಥಸ್ವಾಮಿಯವರ ಚಿತ್ರಪಟಕ್ಕಾಗಲಿ—ಯಾವದು ಲಭ್ಯವಿದೆಯೋ, ಆ ರೂಪದ ಮುಂದೆ ಧೂಪ, ದೀಪ ಅರ್ಪಿಸಿ, 108 ಬಾರಿ ಅಕ್ಷತೆ, ತುಳಸಿ, ಹೂವುಗಳಿಂದ ಅರ್ಚಿಸಿ, ನೈವೇದ್ಯವಿಟ್ಟು ಆರತಿ ಬೆಳಗಬೇಕು. ಇದು ಸಾಧ್ಯವಾಗದಿದ್ದರೆ, ಪಾರಾಯಣವನ್ನು ಒಂದು ಗುರುವಾರ ಪ್ರಾರಂಭಿಸಿ ಎರಡನೇ ಗುರುವಾರ ಪೂರೈಸಬಹುದು. ಕೊನೆಯ ದಿನ ಶ್ರೀಸ್ವಾಮಿಯವರಿಗೆ ತೆಂಗಿನಕಾಯಿ, ಹೂವು ಸಮರ್ಪಿಸಿ, ಅವರ ರೂಪವನ್ನು ಭಾವಪೂರ್ವಕವಾಗಿ ಸ್ಮರಿಸಿ, ಶಕ್ತ್ಯಾನುಸಾರವಾಗಿ ಒಬ್ಬರಿಗಾದರೂ ಅಥವಾ ಮೂವರಿಗಾದರೂ ಅನ್ನದಾನ, ದಕ್ಷಿಣೆ, ತಾಂಬೂಲ ವಿತರಣೆಯು ಶ್ರೇಯಸ್ಕರ. ಇದೂ ಸಾಧ್ಯವಾಗದ ಪರಿಸ್ಥಿತಿಯಲ್ಲಿ, ಶ್ರೀಸ್ವಾಮಿಯವರಿಗಾಗಿ ಅಂತಃಕರಣದಿಂದ ಸಂಕಲ್ಪ ಮಾಡಿಸಿ, ಸ್ವಲ್ಪ ಭೋಜನವನ್ನು ಮನೆಯ ಹೊರಗೆ ಇಟ್ಟು, ಅನ್ನದಾನಕ್ಕಾಗಿ ಉದ್ದೇಶಿತ ಖರ್ಚನ್ನು ಪೂರ್ಣಾಶ್ರಮಕ್ಕೆ ಕಳುಹಿಸುವುದು ಯೋಗ್ಯ.

ಸ್ತ್ರೀಯರು ಬಹಿಷ್ಠಕಾಲದಲ್ಲಿ ಈ ಗ್ರಂಥವನ್ನು ಓದಬಾರದು. ಭಕ್ತರ ಮನಸ್ಸಿನಲ್ಲಿ ವ್ಯಸನ ಅಥವ ದುಃಖ ಇರುವ ಸಂದರ್ಭದಲ್ಲಿಯೂ ಈ ಗ್ರಂಥವನ್ನು ಪಠಿಸಬಾರದು. ಆ ಸಮಯದಲ್ಲಿ ಮನಸ್ಸು ಸೂತಕದಂತಹ ಸ್ಥಿತಿಯಲ್ಲಿ ಇರುವುದರಿಂದ, ಈ ಪವಿತ್ರಗ್ರಂಥವನ್ನು ಪಠಿಸಬಾರದು.

ಅವಕಾಶವಿರುವವರು ಒಂದು ವಾರದೊಳಗೆ ಗ್ರಂಥಪಠಣವನ್ನು ಪೂರೈಸಬಹುದು. 1,3,5 ಹೀಗೆ ಬೆಸ ಸಂಖ್ಯೆಯಲ್ಲಿ ಓದಿ ಮುಗಿಸುವುದು ಬಹಳ ಶ್ರೇಯಸ್ಕರ.

ಭಕ್ತರು ಪ್ರತಿವರ್ಷ ಸ್ವಾಮಿಯವರ ಆರಾಧನೋತ್ಸವದಲ್ಲಿ ಪಾಲುಗೊಳ್ಳುವದು ಅತ್ಯಂತ ಪುಣ್ಯದಾಯಕ. ಈ ಗ್ರಂಥವನ್ನು ಹಲುವಾರು ಬಾರಿ ಪಠಣ ಮಾಡಿದ ನಂತರ, ಈ ಗ್ರಂಥದಲ್ಲಿ ಹೇಳಿದ ಇತರ ಮಹನೀಯರ ಗ್ರಂಥಗಳನ್ನೂ ಪಾರಾಯಣ ಮಾಡುವುದು ಒಳ್ಳೆಯದು ಭಕ್ತಿಗೆ ಹೊಸ ಆಯಾಮ ನೀಡುವ ಮೂಲಕ ಆತ್ಮೋನ್ನತಿಗೆ ಸಹಕಾರಿ.

ಶ್ರೀಸ್ವಾಮಿಯವರನ್ನು ಸೇವಿಸುವ ವಿಧಾನಗಳು.

1. ಶ್ರೀಸ್ವಾಮಿಯವರ ಜೀವನಚರಿತ್ರೆಯ ಪಾರಾಯಣ.
2. ಪ್ರತಿದಿನವೂ, ಅಡುಗೆ ಮಾಡಿದನಂತರ, ಅದರಲ್ಲಿಂದ ಸ್ವಲ್ಪ ಅಂಶವನ್ನು ನೈವೇದ್ಯವಾಗಿ ಮನೆಯ ಹೊರಗೆ ಬಾಗಿಲಬಳಿಗೆ ಇಟ್ಟು, ಸಕಲಜೀವಸ್ವರೂಪರಾದ ಶ್ರೀವೆಂಕಯ್ಯಸ್ವಾಮಿಯವರಿಗೆ ಸಮರ್ಪಿಸುತ್ತೇನೆ ಎಂಬ ಭಾವನೊಂದಿಗೆ ನಮಸ್ಕರಿಸಿ, ಅದನ್ನು ಪಶುಪಕ್ಷಿಗಳಿಗೆ ಬಿಡುವುದು. ಶ್ರೇಷ್ಠ ಆಚರಣೆ.
3. ಶ್ರೀಸ್ವಾಮಿಯವರು, ತಮ್ಮ ಜೀವಿತಾವಧಿಯಲ್ಲಿ ಆಹಾರಕ್ಕಿಂತಲೂ ಧುನಿಯನ್ನು ಹೆಚ್ಚು ಪ್ರೀತಿಸುತಿದ್ದರು. ಆ ಕಾರಣದಿಂದ, ಶ್ರೀಸ್ವಾಮಿಯವರ ಧುನಿಗೆ ತೆಂಗಿನಕಾಯಿ, ಸಾಮ್ರಾಣಿ, ನವಧಾನ್ಯಗಳು ಮುಂತಾದವುಗಳನ್ನು ಅರ್ಪಿಸುವುದು.
4. ಮನೆಯಲ್ಲಿ ಶ್ರೀಸ್ವಾಮಿಯವರ ಪಟವನ್ನು ಶ್ರದ್ಧೆಯಿಂದ ಪೂಜಿಸುವುದು.
5. ಪೂಜೆಮಾಡಲಾಗದ ದಿನಗಳಲ್ಲಿ, ಮಹಿಳೆಯರು —ವಿಶೇಷವಾಗಿ ಶುದ್ಧ ಆಚರಣೆಯುಳ್ಳವರ—ಕೈಯಿಂದ ಪೂಜೆಯನ್ನು ಮಾಡಿಸಬಹುದು.ಬೇರೆಯವರ ಕೈಯಲ್ಲಿ ಪೂಜೆ ಮಾಡಿಸಬಹುದು.
6. ಶ್ರೀಸ್ವಾಮಿಯವರ ಹೋಮಕುಂಡಕ್ಕೆ, ಸಮಾಧಿಮಂದಿರಕ್ಕೆ ಶ್ರದ್ಧೆಯಿಂದ 108 ಪ್ರದಕ್ಷಿಣೆ ಮಾಡುವುದು.
7. ಶ್ರೀಸ್ವಾಮಿಯವರ ಸನ್ನಿಧಿಗೆ ಬಂದಾಗ ಲೌಕಿಕ ವ್ಯವಹಾರಗಳನ್ನು ಮರೆತು, ನಾಮಸ್ಮರಣೆ, ಪ್ರದಕ್ಷಿಣೆ, ಸದ್ಗ್ರಂಥ ಪಠಣೆಯಲ್ಲಿ ಸಮಯ ಕಳೆಯುವುದು.

ಶ್ರೀಸ್ವಾಮಿಯವರ ಜೀವಿತಕಾಲದಲ್ಲಿ, ಅವರ ಸೇವೇಮಾಡುವ ಸಮಯದಲ್ಲಿ, ಕೋಪ, ವಿಮರ್ಶಣೆ, ಮೊದಲಾದ ದುರ್ಗುಣ ಭಾವನೆಗಳಿಂದ ಮಾಡಿದ ಸೇವೆಗಳನ್ನು ಅಂಗೀಕರಿಸುತಿರಲಿಲ್ಲ.

ಬೇರೆಯವರನ್ನು ನಿಂದಿಸುತ್ತಿರುವುದನ್ನು ಕೇಳಿದ ಪಕ್ಷವೂ ದೋಷವೇ. ಇದಕ್ಕೆ ಒಂದು ಉದಾಹರಣೆ. ಒಂದು ದಿನ, ಒಬ್ಬಸೇವಕ, ಬೇರೆಯವರ ಬಗ್ಗೆ ಕೆಟ್ಟ ವಿಮರ್ಶೆಯನ್ನು ಕೇಳಿ ಸ್ವಾಮಿಯವರಿಗೆ ಗಂಜಿ ಕೊಡುವುದಕ್ಕೆ ಹೋದಾಗ, "ಚೆಪ್ಪುಡು ಮಾಟಲು ವಿನಿ ವಚ್ಚಾವು ನೀವು ಪೋಸೆ ಜಾವ ವದ್ದುಪೋ" (ಹೇಳಿಕೆ ಮಾತು ಕೇಳಿ ಬಂದೆ. ನೀನು ಕೊಡುವ ಗಂಜಿ ನನಗೆ ಬೇಡ ಹೋಗು) ಎಂದರು.

ಪ್ರಪಂಚದಲ್ಲಿ ಅತಿಮೂಲ್ಯವಾದದು ಮನಸ್ಸು. ದುರ್ಗುಣಗಳನ್ನು ತೊರೆದು, ಪವಿತ್ರ ಮನಸ್ಸಿನಿಂದ ಶ್ರೀಸ್ವಾಮಿಯವರ ಸ್ಮರಣೆಗೆ ವಿನಿಯೋಗಿಸಿದರೆ, ಅವರು ಸಂತೊಷದಿಂದ ಆ ಭಾವಪೂರ್ಣ ಸೇವೆಯನ್ನು ಸ್ವೀಕರಿಸುತ್ತಾರೆ. ಹಾಗೆ ಮಾಡದಿದ್ದರೆ, ನಮ್ಮ ಸೇವೆಯೆಲ್ಲವೂ ವ್ಯರ್ಥವಾಗುತ್ತದೆ. ಆದಕಾರಣ, ಭಕ್ತಿಯಿಂದ ಪಾವನಗೊಂಡ ಶುದ್ಧ ಮನಸ್ಸು ಎಂಬುದೇ ಪರಮಾರ್ಥದ ನಿಜವಾದ ಅರ್ಪಣೆ.

ಶ್ರೀಸ್ವಾಮಿಯವರು ಧುನಿಯನ್ನು ತೋರಿಸಿ, "ಕೋಟಿಲಿಂಗಾಲ ಪೂಜಗದಯ್ಯ

ಇಕ್ಕಡ ಜರಿಗೇದಿ" (ಇಲ್ಲಿ ಕೋಟಿಲಿಂಗಗಳ ಪೂಜೆ ನಡೆಯುತ್ತಿದೆ, ಅಲ್ಲವೇ) ಎಂದು ಹೇಳಿದ್ದಾರೆ. ಈ ವಾಕ್ಯದ ಅರ್ಥ ಆಳವಾಗಿದೆ. ಶ್ರೀಸ್ವಾಮಿಯವರು ಧುನಿಯ ಶಕ್ತಿ ಮತ್ತು ಪಾವಿತ್ರ್ಯವನ್ನು ಲಿಂಗಪೂಜೆಯಷ್ಟೇ ಶ್ರೇಷ್ಠವಾದುದಾಗಿ ವಿವರಿಸುತ್ತಿದ್ದಾರೆ. ಆದ್ದರಿಂದ, ನಾವು ಧುನಿಯ ಬಳಿ ಅಥವಾ ಸ್ವಾಮಿಯವರ ಸನ್ನಿಧಿಯಲ್ಲಿ ಇರುವಾಗ, ಅತ್ಯಂತ ಶ್ರದ್ಧೆ, ನಿಯಮ ಮತ್ತು ಶುದ್ಧ ಮನಸ್ಸಿನಿಂದ ಪೂಜೆ ಸಲ್ಲಿಸಬೇಕೆಂಬುದು ನಮ್ಮೆಲ್ಲರ ಆಲೋಚನೆಗೆ ಪಾತ್ರವಾಗುವ ಸಂಗತಿಯಾಗಿದೆ.

8. ಶ್ರೀಸ್ವಾಮಿಯವರ ಧುನಿಯ ಮಹಿಮೆಗೆ ಒಂದು ಸ್ಪಷ್ಟ ಉದಾಹರಣೆ. ಗೊಲಗಮೂಡಿಯಲ್ಲಿ ಒಂದು ಮಗು ಕಾಣೆಯಾದಾಗ, ಆ ಮಗುವಿನ ತಾಯಿ ಆತಂಕದಿಂದ ಸ್ವಾಮಿಯವರ ಸಮಾಧಿ ಮಂದಿರಕ್ಕೆ ಬಂದು, ಭಾವಪೂರ್ಣವಾಗಿ ಮೊರೆ ಇಟ್ಟಳು: "ನಾನು ಅರ್ಪಿಸಿದ ನೈವೇದ್ಯ ಎಲ್ಲಿಗೆ ಹೋಯಿತು? ನಾನು ಮಾಡುತ್ತಿರುವ ಪೂಜೆ, ಪಾರಾಯಣದ ಫಲ ಏನು ಆಯಿತು? ನನ್ನ ಮಗುವನ್ನು ಅನ್ನವಿಲ್ಲದೆ, ಬಿಸಿಲಿನಲ್ಲಿ ತತ್ತರಿಸುತ್ತಿರುವಂತೆ ಬಿಟ್ಟಿರುವುದು ನಿನಗೆ ನ್ಯಾಯವೇನು ಸ್ವಾಮಿ?" ಅವಳ ಕಣ್ಣೀರು ಭರಿತ ಮೊರೆಯಿಂದ ಮನಸ್ಸು ಕ್ಷಣಪಾಠ ತಕ್ಷಣವೇ ಶುದ್ಧವಾಯಿತು, ಮತ್ತು ಆಕೆಗೆ ಆಧ್ಯಾತ್ಮಿಕ ಎಚ್ಚರತೆ ಎದ್ದಿತು. ಆ ಸಂದರ್ಭದಲ್ಲಿ ಅವಳು ಧುನಿಯ ಅಗ್ನಿಕುಂಡದೊಳಗೆ ಅಖಂಡದೀಪದ ದರ್ಶನವನ್ನು ಪಡೆದಳು. ಅದೇ ದಿನದ ಸಾಯಂಕಾಲ, ತಪ್ಪಿಹೋಗಿದ್ದ ಮಗು, ಕ್ಷೇಮವಾಗಿ ತಾಯಿಯ ಬಳಿ ಸೇರಿತು. ಈ ಘಟನೆಯು ನಮಗೆ ಸ್ಪಷ್ಟವಾಗಿ ಸೂಚಿಸುತ್ತಿದೆ- ಶ್ರೀ ಸ್ವಾಮಿಯವರು ಧುನಿಯ ಅಗ್ನಿಕುಂಡದ ಮೂಲಕ, ಪೂಜೆ, ನೈವೇದ್ಯ, ಪಾರಾಯಣ ಮುಂತಾದ ಭಕ್ತಿಯ ಸೇವೆಗಳನ್ನು ಶಾಶ್ವತವಾಗಿ ಸ್ವೀಕರಿಸುತ್ತಾರೆ. ಇದನ್ನು ಆ ತಾಯಿಯ ಅನುಭವ ಸೂಚಿಸುತ್ತಿದೆಯಲ್ಲವೇ?

ದೀಕ್ಷೆ ತೆಗೆದುಕೊಳ್ಳುವವರಿಗೆ ಸೂಚನೆ

1. "ನೋರುವಿಪ್ಪಕೂಡದಯ್ಯ!"(ಮೌನ ವಾಗಿರಬೇಕಯ್ಯ) ಎಂದು ಸ್ವಾಮಿಯವರು ಹೇಳುತಿದ್ದರು.
2. ದೀಕ್ಷೆಯನ್ನು ಸ್ವೀಕರಿಸಿದವರು, ದೀಕ್ಷೆಯ ದಿನಗಳಲ್ಲಿ ಅನವಶ್ಯಕರವಾದ ಮಾತುಗಳನ್ನು ಮಾತನಾಡಬಾರದು, ಅನಗತ್ಯವಾದ ವಿಷಯಗಳನ್ನು ಕೇಳಬಾರದು ಮತ್ತು ಅಪ್ರಯೋಜಕ ಆಲೋಚನೆಗಳಿಂದ ದೂರವಿರಬೇಕು. ಆಸಮಯದಲ್ಲಿ ಶ್ರೀಸ್ವಾಮಿಯವರ ಲೀಲೆಗಳನ್ನು ಪಠಿಸುತ್ತಾ, ಮನನ ಮಾಡುತ್ತಾ ಇರುವುದು ಶ್ರೇಯಸ್ಕರ.
3. ಮಧ್ಯಾಹ್ನ ನಿದ್ರೆ ಮಾಡಬಾರದು. ಇದಕ್ಕೆ ಮಿತಾಹಾರ ಸೇವಿಸುವುದು ಅವಶ್ಯಕವಾಗುತ್ತದೆ. ಅತಿನಿದ್ರೆ ಕೂಡ ಸಲ್ಲದು.
4. ಸುಳ್ಳು ಹೇಳಬಾರದು, ಯಾರೊಡನೆಯೂ ಜಗಳ ಮಾಡಬಾರದು.
5. ನಾಮಜಪ ಮಾಡುತ್ತಾ ಧುನಿಗೆ ನಿತ್ಯ ಅಗ್ನಿಹೋತ್ರಕ್ಕೆ ಅಗತ್ಯವಿರುವ, ನವಧಾನ್ಯಗಳು, ತೆಂಗಿನಕಾಯಿ, ತುಪ್ಪ, ಸಾಮ್ರಾಣಿ, ಅಕ್ಕಿ, ಇತ್ಯದಿ ಶುದ್ಧಪದಾರ್ಥಗಳನ್ನು ಸಲ್ಲಿಸಬೇಕು. ನಮ್ಮ ದುಷ್ಕರ್ಮಗಳು ಸ್ವಾಮಿಯವರ ಕೃಪೆ ನಮ್ಮಮೇಲೆ ಬೀಳುವುದನ್ನು ತಡೆಯಬಹುದು. ಆದರೆ ನಾಮಸ್ಮರಣೆಯ ಮೂಲಕ ಇಂತಹ ದುಷ್ಟ ಭಾವಗಳನ್ನು ದೂರ ಮಾಡಬಹುದು. ಹಿರಿಯರ ಹೇಳುವಂತೆ, "ಭಗವನ್ನಾಮಸ್ಮರಣೆಯಿಂದ, ಬೆಟ್ಟದಷ್ಟು ದೊಡ್ಡ ಕಷ್ಟಗಳೂ ಮಂಜಿನಂತೆ ಕರುಗುತ್ತದೆ" ಎನ್ನುವುದು ಸತ್ಯ. ಆದ ಕಾರಣ ಒಂದು ಕ್ಷಣವೂ ವ್ಯರ್ಥ ಮಾಡದೇ ನಾಮಜಪ ಮಾಡುವುದು ಶ್ರೇಯಸ್ಕರ.
6. ಸಾಧ್ಯವಾದಾಗಲೆಲ್ಲಾ ಧುನಿ ಅಥವ ಸಮಾಧಿ ಮಂದಿರಕ್ಕೆ 108 ಪ್ರದಕ್ಷಣೆ ಮಾಡುವುದು.
7. ಎಲ್ಲಾಕಿಂತ ಮುಖ್ಯವಾದದ್ದು ಶ್ರೀಸ್ವಾಮಿಯವರ ಜೀವನಚರಿತ್ರೆ ಪಠಣೆ ಮಾಡುವುದು. ಅವಿದ್ಯಾವಂತರು, ಕೇಳುವುದು.
8. ಪೂರ್ಣ ವಿಶ್ವಾಸ, ಶ್ರದ್ದೆ ಸಹನೆ ಮತ್ತು ಭಕ್ತಿಂದ ಇರುವುದು.

ಗುರು ದರ್ಶನ

ನಾನು, ಶ್ರೀ ಭರದ್ವಾಜ ಮೇಷ್ಟರನ್ನು ಯಾವಾಗಲೂ ಭೇಟಿ ಮಾಡುತ್ತಿದ್ದೆ. ಆದರೆ ಅವರು ಹೇಳಿದಂತೆ ಶ್ರೀವೆಂಕಯ್ಯ ಸ್ವಾಮಿಯವರ ದರ್ಶನಕ್ಕೆ ಹೋಗುತ್ತಿರಲಿಲ್ಲ. ಅವರು ಒಂದು ವರ್ಷ ಸ್ವಾಮಿಯವರನ್ನು ಭೇಟಿಮಾಡು ಎಂದು ಹೇಳಿ ಕೊನೆಗೆ ಅವರು ಗಂಭೀರವಾಗಿ, ಆದರೆ ಪ್ರೀತಿಯಿಂದ "ನೀನು ಶ್ರೀಸ್ವಾಮಿಯವರನ್ನು ದರ್ಶಿಸುವವರೆಗೂ ನನ್ನ ಬಳಿಗೆ ಬರಬೇಡ" ಎಂದು ಹೇಳಿದರು. ಅವರ ಮಾತು ಕೇಳಿ ನನಗೆ ಬಹಳ ನಿರಾಸೆ ಆಯಿತು. ಅವರು ಅದನ್ನು ಗಮನಿಸಿದಾಗ, ಆ ಪ್ರೇಮಮೂರ್ತಿ "ಶ್ರಿಸ್ವಾಮಿಯವರು, ಭೂಮಿಮೇಲಿನ ದೇವರು, ಹೋಗಿ ಪರಿಕ್ಷೆ ಮಾಡು" ಎಂದರು. ಪರೀಕ್ಷಿಸುವ ವಿಧಾನವನ್ನೂ ಅವರು ತಮ್ಮದೇ ಆದ ಶೈಲಿಯಲ್ಲಿ ನನಗೆ ತಿಳಿಸಿದರು—

1. ಯಾರಿಂದಲೂ ಏನನ್ನೂ ಕೇಳಿ ಸ್ವೀಕರಿಸದ ಶ್ರೀಸ್ವಾಮಿಯವರು, ನನ್ನನ್ನು ಕೇಳಿ ಏನಾದರೂ ತಿನ್ನಲು ಸಮ್ಮತಿಸಬೇಕು ಎಂದು ಶ್ರೀಭರದ್ವಾಜ ಮೇಷ್ಟರು ಹೇಳಿದರು.
2. ಯಾರನ್ನೂ ಮುಟ್ಟಿಕೊಳ್ಳದ ಶ್ರೀಸ್ವಾಮಿಯವರು, ನನ್ನ ಕೈಯಿಂದ ಅವರ ಕಾಲಿಗೆ ಎಣ್ಣೆ ಹಚ್ಚಿಸಿಕೊಳ್ಳಬೇಕು ಎಂದು ಕೋರಿ, ಆ ಮೂಲಕ ನನ್ನ ಮೇಲಿನ ವಿಶೇಷ ಕೃಪೆಯನ್ನು ವ್ಯಕ್ತಪಡಿಸಬೇಕು ಎಂದು ಹೇಳಿದರು.

ಆಚಾರ್ಯ ಶ್ರೀ ಭರದ್ವಾಜ ಮೇಷ್ಟರ ಸಲಹೆಯಂತೆ, ನಾನು ನನ್ನ ಸ್ನೇಹಿತ ಶ್ರೀ ಬಿ.ವಿ. ಶೇಷಗಿರಿಯವರೊಂದಿಗೆ ಶ್ರೀಸ್ವಾಮಿಯವರ ದರ್ಶನಕ್ಕೆ ಹೋಗಿ, ಅವರ ಸಮಕ್ಷಮದಲ್ಲಿ ಕುಳಿತುಕೊಂಡೆವು. ಆಗ ಹೊಸಬರು ಶ್ರೀಸ್ವಾಮಿಯವರ ಪಾದಗಳನ್ನು ಮುಟ್ಟಬಾರದೆಂದು ಕಾವಲು ಕಾಯುತ್ತಿದ್ದ ಶ್ರೀ ರೋಶಯ್ಯನವರು ಮತ್ತು ಶ್ರೀ ಗುರುವಯ್ಯನವರು ಎಲ್ಲೀಯೋ ಹೊರಗೆ ಹೋಗಿದ್ದರು. ಅಂದು, ಆ ಅಮೂಲ್ಯ ಕ್ಷಣದಲ್ಲಿ ಶ್ರೀಸ್ವಾಮಿಯವರು ನನಗೆ ಕರುಣಾದೃಷ್ಟಿ "ತಿನೇಂದುಕು ಏಮೈನಾ ಪೆಡತಾಯ್ಯ?" (ತಿನ್ನುವುದಕ್ಕೆ ಏನಾದರೂ ಕೊಡುತ್ತೀಯಾ ಅಪ್ಪಾ?) ಎಂದು ಹಸ್ತವನ್ನು ನೀಡಿದರು. ನಾವು ತೆಗೆದುಕೊಂಡುಹೋದ ಹುರಿಗಡಲೆ ಮತ್ತು ಬೆಲ್ಲವನ್ನು ಪುಡಿಮಾಡಿ ತರುವಷ್ಟರೊಳಗೆ, ರೋಶಯ್ಯನವರು ಮತ್ತು ಗುರುವಯ್ಯನವರು ಪುಡಿಯನ್ನ ತೆಗೆದುಕೊಂಡು ಶ್ರೀಸ್ವಾಮಿಯವರ ಬಳಿ ಹೋದರು. ಆದರೆ ಸ್ವಾಮಿಯವರು ಅವರಿಂದ ಸ್ವೀಕರಿಸದೆ, ನನ್ನ ಕೈಯಿಂದಲೇ ಸ್ವೀಕರಿಸಿದರು. ಅದೇರೀತಿ, ಎಣ್ಣೆಯನ್ನೂ ನನ್ನಿಂದಲೇ ಕೇವಲ ಪಾದಗಳಿಗಲ್ಲದೇ ಪೂರ್ತಿ ಶರೀರ ಮರ್ದನ ಮಾಡಿಸಿಕೊಂಡರು. ಸ್ನಾನವನ್ನೂ ನಾನೇ ಮಾಡಿಸಿದೆ. ಈ ಅಪೂರ್ವ ಅನುಭವದ ಮೂಲಕ, ನನ್ನ ಮನಸ್ಸಿನಲ್ಲಿ ಶ್ರೀಸ್ವಾಮಿಯವರ ಮೇಲಿನ ಗಾಢವಾದ ಭಕ್ತಿ ಉಂಟಾಯಿತು. ಇದೊಂದು ಮುಕ್ತಾಯವಲ್ಲ, ಅದು ನನ್ನ ಶ್ರದ್ಧೆಯ ಆರಂಭವಾಗಿತ್ತು.

ಗುರುಪೂರ್ಣಿಮೆಯ ದಿನ ನಮ್ಮ ಮನೆಯಲ್ಲಿ ನಡೆಸುತ್ತಿದ್ದ ಶ್ರೀಸಾಯಿನಾಥನ ನಾಮ ಯಜ್ಞಕ್ಕೆ, ಸಕಲಸಾಧುಸ್ವರೂಪಿಯಾದ ಶ್ರೀಸಾಯಿನಾಥನನ್ನು ನಂಬಿಕೊಂಡು ನಾವು ಶ್ರೀಸ್ವಾಮಿಯವರನ್ನು ಕರೆದವು. ಎಷ್ಟು ಬಾರಿ ಆಹ್ವಾನಿಸಿದರೂ "ಇಪ್ಪುಡು

ಕಾದು"(ಈಗಲ್ಲ) ಎಂದು ಹೇಳುತ್ತಿದ್ದ ಸ್ವಾಮಿಯವರು, ಆದಿನ ನಮ್ಮ ಪ್ರಾರ್ಥನೆಯನ್ನು ಮನ್ನಿಸಿ , ನಮ್ಮ ಮನೆಗೆ ಆಗಮಿಸಿದರು. ಅಷ್ಟೇ ಅಲ್ಲದೆ, ನನ್ನ ಸ್ನೇಹಿತರಾದ ಶ್ರೀಶೇಷಗಿರಿರಾಯರ ಮನೆಯ ನಾಮಯಜ್ಞಕ್ಕೂ ಬಂದು ಆಶಿರ್ವಾದ ಮಾಡಿದರು.

ನಾನು ಶ್ರೀಸಾಯಿಚರಿತ್ರೆ ಪಠಣೆ ಮಾಡುತ್ತಿರುವಾಗ ಒಂದು ದಿನ ಶ್ರೀಸ್ವಾಮಿಯವರು ನನ್ನ ಕನಸಿನಲ್ಲಿ ಬಂದು "ಚಮರುಲೇಕುಂಡ ಕಾಲ್ಚು" (ಎಣ್ಣೆ ಇಲ್ಲದೆ ಸುಡು) ಎಂದು ಆದೇಶಿಸಿದರು. ಮಾರನೇದಿನ ಸ್ವಾಮಿಯವರನ್ನು ಕೇಳಿದಾಗ, ಮೌನವಹಿಸಿದರು. ಆದರೆ ಎಣ್ಣೆಯಪದಾರ್ಥ ತಿಂದಾಗಲೆಲ್ಲಾ ನನ್ನ ಉಬ್ಬಸ ಹೆಚ್ಚಾಗುತಿತ್ತು. ಅದರಿಂದ, ಸ್ವಾಮಿಯವರ ಸಂದೇಶ ನನಗೆ ಅರ್ಥವಾಯಿತು.

ಶ್ರೀಸ್ವಾಮಿಯವರ ಮಾತುಗಳಲ್ಲಿ ನಿಗೂಢವಾದ ಅರ್ಥಗಳು ಕಂಡು ಬರುತ್ತದೆ. ಅದಕ್ಕೆ ಒಂದು ಉದಾಹರಣೆ: 1980 ಇಸವಿಯಲ್ಲಿ, ಸ್ವಾಮಿಯವರ ಸನ್ನಿಧಿಯಲ್ಲಿದ್ದು ಸೇವೆಮಾಡುತ್ತೇನೆ ಎಂದಾಗ, "ನೀ ಅನ್ನಂ ನೀವು ತಿಂಟೂ ಉಂಡು"(ನಿನ್ನ ಅನ್ನವನ್ನು ನೀನೇ ಊಟಮಾಡು) ಎಂದರು. ಹಾಗೆ ಏಕೆ ಸ್ವಾಮಿ ಅಂತ ಕೇಳಿದಾಗ, "ವಾಳ್ಳು ಬಾಪನೋಳ್ಳು, ತಿನಕೂಡದು" (ಅವರು ಬ್ರಾಹ್ಮಣರು, ತಿನ್ನಬಾರದು) ಎಂದು ಹೇಳಿದರು. ಕಾಲಾಂತರದಲ್ಲಿ ಅವರ ಮಾತು ಅಕ್ಷರಶಃ ನಿಜವಾಯಿತು. ನಮ್ಮ ಮನೆಯಲ್ಲಿ ಬಿಟ್ಟು, ಹೊರಗಡೆ ಎಲ್ಲಿ ಭುಜಿಸಿದರೂ ಅನಾರೋಗ್ಯವಾಗುತಿತ್ತು. ಆದಕಾರಣ, ನಾನು ಸ್ವಾಮಿ ಹೇಳಿದ ನಿಯಮವನ್ನು ಪಾಟಿಸುತ್ತ, ನನ್ನ ಮನೆಯಲ್ಲೇ ಭುಜಿಸುತ್ತಿದ್ದೇನೆ.

1983ನೇ ಇಸ್ವಿಯಲ್ಲಿ, ನನ್ನ ಸ್ನೇಹಿತರ ಬಲವಂತ ಮಾಡಿದ ಪರಿಣಾಮವಾಗಿ, ನಾನು ಸ್ವಾಮಿಯವರು ಸೂಚಿಸಿದ್ದ ನಿಯಮವೊಂದನ್ನು ಉಲ್ಲಂಘಿಸಬೇಕಾಯಿತು. ಅದರ ತಕ್ಷಣದ ಪರಿಣಾಮವಾಗಿ, ನನಗೆ ಉಬ್ಬಸ, ಛಳಿ, ಕೆಮ್ಮು ಆರಂಭವಾಯಿರು. ಸುಮಾರು ಒಂದು ತಿಂಗಳ ಕಾಲ, ಆಯುರ್ವೇದ, ಹೋಮಿಯೋಪತಿ, ಮತ್ತು ಅಲೋಪತಿ ಚಿಕಿತ್ಸೆಗಳನೆಲ್ಲಾ ಪಡೆದರೂ ಏನೂ ಫಲವಾಗಲಿಲ್ಲ. ವೈದ್ಯರು ಮದ್ರಾಸಿಗೆ ಹೋಗಿ ಚಿಕಿತ್ಸೆಪಡೆಯಲು ಸೂಚಿಸಿದರು. ಮದ್ರಾಸಿಗೆ ಹೊರಡುವ ಮೊದಲು, ಸ್ವಾಮಿಯವರ ಸಮಾಧಿ ದರ್ಶನ ಮಾಡಿಕೊಂಡು ಹೋಗಬೇಕೆಂದು ನಿರ್ಧರಿಸಿ ಕಲಿಚೇಡು ಎಂಬ ಗ್ರಾಮದಲ್ಲಿ ಬಸ್ ಹತ್ತಿದೆನು. ಆ ಕ್ಷಣವೇ ನನ್ನ ಈತಿಬಾಧಗಳೆಲ್ಲಾ ಮಾಯವಾಗಿ ಹೋದವು. ಸ್ವಾಮಿಯವರ ಸಮಾಧಿ ದರ್ಶನ ಮಾಡಿ ಮೂರು ರಾತ್ರಿ ಕಳೆದು ಮನೆಗೆ ಬಂದ ಕೂಡಲೇ ಮತ್ತೆ ನನ್ನ ಬಾಧೆಗಳು ಮೊದಲಾದವು.

ಪೂಜಾರಿ ನಾಗಯ್ಯನವರ ಸಲಹೆಯ ಮೇರೆಗೆ, ನಾನು ದಿನದ ಬೆಳಗ್ಗೆ ಉದ್ಯೋಗಮಾಡಿಕೊಂಡು ಸಂಜೆ ಶ್ರೀಸ್ವಾಮಿ ಸಮಾಧಿ ದರ್ಶನ ಮಾಡುತ್ತೇನೆಂದು ನಿರ್ಧರ ಕೈಗೊಂಡೆನು. ಆ ಕ್ಷಣದಿಂದಲೇ, ನನ್ನ ದೀರ್ಘ ಕಾಲದ ಆರೋಗ್ಯ ತೊಂದರೆ ಎಲ್ಲಾ ನಿವಾರಣೆಯಾದವು. ಇದು ಶ್ರೀಸ್ವಾಮಿಯವರ ಕೃಪೆಯ ಸ್ಪಷ್ಟ ಪರಿಚಯವಾಯಿತು. ಆ ದಿನದಿಂದ ಆರಂಭವಾಗಿ, ಪ್ರತಿದಿನ ಸುಮಾರು 60km ಪ್ರಯಾಣ ಮಾಡಿ ಉದ್ಯೋಗ ಮುಗಿಸಿದ **ನಂತರ**, ಗೊಲಗಮೂಡಿಗೆ ತೆರಳಿ ಸ್ವಾಮಿಯವರ ದರ್ಶನ ಮಾಡುತಿದ್ದೆನು.

1989 ನೇ ಇಸ್ವಿ ನವೆಂಬರ್ ಮಾಸದಲ್ಲಿ ಶ್ರೀಸ್ವಾಮಿಯವರ ಆಜ್ಞೆಯ ಮೇರೆಗೆ ವಾಲೆಂಟರೀ ರಿಟೈರ್ಮೆಂಟ್ ತೆಗೆದುಕೊಂಡು ಮತ್ತು ಗೊಲಗಮೂಡಿಯಲ್ಲೇ ನನ್ನ ಸಂಸಾರ ಸ್ಥಾಪಿಸಿ, ಶ್ರೀ ಸ್ವಾಮಿಯವರ ಸನ್ನಿಧಿಯಲ್ಲಿ ಕಾಲ ಕಳೆಯಲು ಪ್ರಾರಂಬಿಸಿದೆನು. ಶ್ರೀಸ್ವಾಮಿಯವರ ಸಾನ್ನಿಧ್ಯದಲ್ಲಿ ಜೀವನ ನಡೆಸಲು ಆರಂಭಿಸಿದ ಬಳಿಕ ನನ್ನ ದೀರ್ಘಕಾಲದ ಉಬ್ಬಸ ಕಡಿಮೆಯಾಗತೊಡಗಿತು. ಈ ಅನುಭವದಿಂದ ನನಗೆ ಒಂದು ಮಹತ್ವಪೂರ್ಣ ಸತ್ಯ ಸ್ಪಷ್ಟವಾಯಿತು— ಗುರುಸಾನ್ನಿಧ್ಯದಲ್ಲಿ ಬಂದ ಕಷ್ಟಗಳು ಸಹ, **ಅವರ ಅನುಗ್ರಹದ ಭಾಗವಾಗಿರಬಹುದು.**

ಪ್ರತಿನಿತ್ಯ ದಾರಿಯಲ್ಲಿ ನಾಮಜಪಮಾಡುತ್ತಾ, 4 ಇಡ್ಲಿಗಳನ್ನು, ಸ್ವಾಮಿಯವರಿಗೆ ಕೃತಜ್ಞತಾ ಪೂರ್ವಕವಾಗಿ ಸಮರ್ಪಿಸುತ್ತಿದ್ದೆ ಅದನ್ನು ಅವರು ಸ್ವೀಕರಿಸುತ್ತಿದ್ದರು. ಒಂದು ದಿನ ನನ್ನ ಹತ್ತಿರ 10 ಪೈಸಗಳೇ ಇದ್ದವು. 10 ಪೈಸೆಗೆ ಒಂದೇ ಇಡ್ಲಿ ತರುವುದಾ? ಅಥವಾ ಸಾಲ ಮಾಡಿ 4 ಇಡ್ಲಿ ತರುವುದಾ ಎಂಬ ಆಲೋಚನೆಯಿಂದ ದಾರಿ ಉದ್ದಕ್ಕೂ ನಾಮಜಪ ಮಾಡಲಿಲ್ಲ. ಹಾಗೆ ಮಾಡದೇ ಇಡ್ಲಿಯನ್ನು ತಂದು ಸ್ವಾಮಿಯವರಿಗೆ ಸಮರ್ಪಿಸಿದಾಗ ಅದನ್ನು ಅವರು ಕೈಯಲ್ಲೂ ಮುಟ್ಟಲಿಲ್ಲ. ಇದರಿಂದ ಸ್ವಾಮಿಯವರಿಗೆ ನೈವೇದ್ಯಕ್ಕಿಂತ ಶ್ರದ್ಧೆ, ಭಕ್ತಿ, ನಾಮಜಪವೇ ಮುಖ್ಯ ಎಂದು ನನಗೆ ಸ್ಪಷ್ಟವಾಯಿತು.

ಇನ್ನೊಮ್ಮೆ, ಸ್ವಾಮಿಯವರ ವೃಂದಕ್ಕೆ ಇಡ್ಲಿ ತಂದುಕೊಡಲು ನಿರ್ಧರಿಸಿ, ಮುಂಜಾನೆ ಬೇಳೆ ನೆನೆಹಾಕಿದಾಗಲಿಂದ, ಬೆಳಗ್ಗೆ ಇಡ್ಲಿ ಮಾಡುವವರಿಗೆ, ಒಂದು ಕ್ಷಣವೂ ಮರೆಯದೆ ನಾಮಜಪವನ್ನು ಮಾಡುತ್ತಾ ಇಡ್ಲಿಯನ್ನು ಶುದ್ಧ ಮನಸ್ಸಿನಿಂದ ತಯಾರಿಸಿ, ತೆಗೆದುಕೊಂಡು ಹೋದೆ. ಆದರೆ ಸ್ವಾಮಿಯವರು ಹೋಟೆಲ್ನಿಂದ ತಂದ ಇಡ್ಲಿ ತಿಂದುಬಿಟ್ಟಿದ್ದರು. ಈ ವಿಷಯ ತಿಳಿದು ನಾನು ತುಂಬ ಬೇಸರದಿಂದ ಕುಳಿತುಕೊಂಡೆ. ಇದನ್ನು ಗಮನಿಸಿದ ಶ್ರೀ ನರಸಾರೆಡ್ಡಿ ಅವರ ಧರ್ಮಪತ್ನಿ ನನ್ನ ಚಿಂತೆಯ ಕಾರಣ ತಿಳಿದು, 4 ಇಡ್ಲಿಗಳನ್ನು ತಟ್ಟೆಯಲ್ಲಿಟ್ಟುಕೊಂಡು ಸ್ವಾಮಿಯವರ ಬಳಿ ಬಂದು ಸ್ವಾಮಿಯವರಿಗೆ ಕೊಟ್ಟರು, ಸ್ವಾಮಿಯವರು ಸ್ವೀಕರಿಸಿದರು. ಅದನ್ನು ನೋಡಿ ನನಗೆ ತುಂಬಾ ಸಂತಸವಾಯಿತು. ಈ ಎರಡು ಸನ್ನಿವೇಶಗಳು, ನಮ್ಮೊಳಗೆ ಒಂದು ಮಹತ್ವದ ಸಂದೇಶವನ್ನು ನೀಡುತ್ತವೆ: ನೈವೇದ್ಯಕ್ಕಿಂತಲೂ ಹೆಚ್ಚಿನದಾಗಿರುವುದು ನಾಮಜಪದಿಂದ ತುಂಬಿದ ಶುದ್ಧ ಭಾವನೆ. ಶ್ರದ್ಧೆಯಿಂದ, ನಿರಂತರ ನಾಮಸ್ಮರಣೆ ಮಾಡುವ ಭಕ್ತಿಯ ನೈವೇದ್ಯವನ್ನು ಶ್ರೀಸ್ವಾಮಿಯವರು ನಿಜವಾಗಿಯೂ ಸ್ವೀಕರಿಸುತ್ತಾರೆ. **ಆದ ಕಾರಣ, ನನ್ನ ಹೃದಯಪೂರ್ವಕ ಪ್ರಾರ್ಥನೆ: ಎಲ್ಲರೂ, ಶ್ರೀಸ್ವಾಮಿಯವರಿಗೆ ಅತೀ ಪ್ರೀತಿಕರವಾದ ನಾಮಜಪವನ್ನು ನಿತ್ಯ, ನಿರಂತರವಾಗಿ ಮಾಡಲಿ.**

ಓಂ ನಾರಾಯಣ ಆದಿ ನಾರಾಯಾಣ

ಅವಧೂತಲೀಲೆ

ಅಧ್ಯಾಯ 1

ಶ್ರೀ ವೆಂಕಯ್ಯ ಸ್ವಾಮಿಯವರ ಜೀವನ

ಭಗವಂತ ರೂಪ ನಾಮ ಗುಣರಹಿತ. ಆ ಭಗವಂತನ್ನ ಪ್ರೇಮದ ಮೂಲಕವೇ ವ್ಯಕ್ತಪಡಿಸಲು ಸಾಧ್ಯವಾಗುತ್ತದೆ. ಆದ್ದರಿಂದ ನಿರಂತರ ಪ್ರೇಮ, ನಿಸ್ವಾರ್ಥವಾದ ಪ್ರೇಮ ಇರುವ ಹೃದಯವೇ ಭಗವಂತನ ರೂಪವೆಂದು ಹೇಳುತ್ತಾರೆ. ಆ ರೀತಿಯ ಪ್ರೇಮಾಮೃತ ಹೃದಯದವರೇ ನಮ್ಮ ಭಗವಾನ್ ಶ್ರೀ ವೆಂಕಯ್ಯಸ್ವಾಮಿಯವರು.

ನೆಲ್ಲೂರು (ಆಂಧ್ರಪ್ರದೇಶದ ಒಂದು ಜಿಲ್ಲೆ) ಜಿಲ್ಲೆಯಲ್ಲಿ ತಲುಪೂರು ಚೆರ್ಲೊಪಲ್ಲಿ ಒಂದು ಚಿಕ್ಕ ಗ್ರಾಮ. ಅನಾವೃಷ್ಟಿಯಿಂದ ಆ ಗ್ರಾಮದಲ್ಲಿ ಒಂದು ಹಸಿರು ಹುಲ್ಲಿನ ಕಡ್ಡಿಯೂ ಬೆಳದಿರಲಿಲ್ಲ. ಹಸುವಿನಿಂದ ಬಳಲುತ್ತಿರುವವನಿಗೆ ಅನ್ನ ಸಿಕ್ಕರೆ ಎಷ್ಟು ಸಂತೋಷವೋ ಅಂತಹ ಸಂತೋಷ ದಿಂದ ಆ ಹಳ್ಳಿಯ ಜನರು "ಸ್ವಾಮಿ ಬಂದರು, ಸ್ವಾಮಿ ಬಂದರು" ಎನ್ನುತ್ತ ರಾಮಾಲಯದ ಹತ್ತಿರ ಬಂದರು. ಅವರ ಎದುರಿಗೆ ಒಬ್ಬ ಮುದುಕರು ತಾಟಿ ಎಲೆಯಮೇಲೆ ಕುಳಿತಿದ್ದರು ಮತ್ತು, ಅವರ ಎದುರಿಗೆ ಅಗ್ನಿಕುಂಡ ಉರಿಯುತ್ತಿತ್ತು. ಎಣ್ಣೆಯಪಾತ್ರೆಯಂತೆ ಹೊಳೆಯುತ್ತಿರುವ ಆ ವ್ಯಕ್ತಿಯ ಮೇಲೆ ಕೌಪೀನ ಬಿಟ್ಟು ಬೇರೆ ಬಟ್ಟೆ ಇರಲಿಲ್ಲ. ಗುಳಿಬಿದ್ದಿರುವ ಕೆನ್ನೆ, ಬೊಚ್ಚುಬಾಯಿ, ಫಳಫಳನೆ ಹೊಳೆಯುತ್ತಿರುವ ಕಣ್ಣು ಇರುವ ಆಮುದುಕರು ಕೈಬೆರಳಗಳನ್ನು ಎಣಿಸುತ್ತಾ, ತಮ್ಮಲ್ಲಿ ತಾವೇ ಮಾತನಾಡಿಕೊಳ್ಳುತ್ತಾ ಮಧ್ಯೆ ಮಧ್ಯೆ ಅಗ್ನಿಕುಂಡದ ಚಕ್ಕೆಗಳನ್ನು ಕದಲಿಸುತ್ತಾ ಇದ್ದರು. ಎಷ್ಟೊ ನಿರಾಡಂಬರವಾಗಿ, ಅನಾಮಧೇಯರಾಗಿ, ಕಾಣುತ್ತಿದ್ದ ಆ ವ್ಯಕ್ತಿಯೇ "ಸ್ವಾಮಿ" ಎಂದರೆ ನಂಬಲಾಗುವಂತಿರಲಿಲ್ಲ. ಆ ಹಳ್ಳಿಯ ಜನರು ಅವರ ಹತ್ತಿರ ಏನೋ ಹೇಳಬೇಕೆಂದುಕೊಂಡರೆ ಆ ಮುದುಕರ ವೈಖರಿ ನೋಡಿ ಮಾತು ಹೊರಬರುತ್ತಿರಲಿಲ್ಲ. ಅಷ್ಟರಲ್ಲಿ ಆ ವ್ಯಕ್ತಿಯ ದೃಷ್ಟಿ ಆ ಪಕ್ಕದಲ್ಲೆ ಎಸದಿದ್ದ ಕಾಗದಗಳು, ಊಟದಎಲೆಗಳು ಮೇಯುತಿದ್ದ ಪಶುಗಳಮೇಲೆ ಬಿದ್ದಿತು. ಸ್ವಲ್ಪ ಹೊತ್ತು ಅವುಗಳನ್ನು ಜಾಗ್ರತೆಯಿಂದ ಪರಿಶೀಲಿಸಿ "ಅಯ್ಯ" ಎಂದು ಜೋರಾಗಿ ಕರೆದರು. "ಏನು ಸ್ವಾಮಿ" ಎನ್ನುತ್ತ ಅವರ ಸೇವಕರು ಮುಂದೆ ಬಂದರು. "ಮನಂ ಆ ಚೇಲ್ಲೋಕಿ ಪೋವಾಲಟಯ್ಯಾ ಪೋದಾಂ ಪದಂಡಿ" (ನಾವು ಕೆರೆಯನ್ನು ದಾಟಿ ಆಕಡೆಗೆ ಹೋಗಬೇಕಯ್ಯಾ ಹೋಗೋಣ ನಡೆಯಿರಿ) ಅಂತ ಸ್ವಾಮಿಯವರು ಆಜ್ಞಾಪಿಸಿದರು. ಆಕಡೆಗೆ ಏಕೆ ಹೋಗಬೇಕೆನ್ನುತ್ತಾರೋ ತಿಳಿಯದೆ, ಸೇವಕರು ಒಬ್ಬರಮುಖವನ್ನು ಒಬ್ಬರು

ನೋಡತೊಡಗಿದರು. ಶ್ರೀ ಸ್ವಾಮಿಯವರನ್ನು ಡೋಲಿಯಲ್ಲಿ ಕರೆದು ಕೊಂಡು ಅವರು ಹೇಳಿದಜಾಗಕ್ಕೆ ಹೋದರು.

ಮಳೆಯಿಲ್ಲದಿದ್ದರಿಂದ ಒಂದು ಹಸಿರು ಹುಲ್ಲು ಇಲ್ಲದ ಮರುಭೂಮಿಯಂತಹ ನೆಲದಮೇಲೆ ಒಂದುಕಡೆ ಇಳಿದು "ಇಕ್ಕಡ ನಿಪ್ಪು ಚೂಡಂಡಯ್ಯ" (ಇಲ್ಲಿ ಉರಿ ಹಾಕಿರಯ್ಯ) ಎಂದು ಆಜ್ಞಾಪಿಸಿದರು. ಆ ಸೇವಕರು ಸ್ವಾಮಿಯವರ ಆಜ್ಞೆಯಂತೆ ಅಲ್ಲಿ ಅಗ್ನಿಕುಂಡ ವನ್ನು ಏರ್ಪಡಿಸಿದರು. ಅಲ್ಲಿ ಕೆಲವು ಗಂಟೆಗಳು ಕಳೆದಮೇಲೆ, ಶ್ರಿ ಸ್ವಾಮಿಯವರ ಸೂಚನೆಯಂತೆ ಸ್ವಾಮಿಯವರನ್ನು ಹಳ್ಳಿಯೊಳಗೆ ಕರೆದುಕೊಂಡು ಹೋದರು. ಆ ಗ್ರಾಮಕ್ಕೆ ಹೋದತಕ್ಷಣ ಅಲ್ಲಿ ಮೋಡಗಳುಕವಿದು ಕುಂಭವೃಷ್ಠಿ ಆಯಿತು. ಬೆಳಗಾಗುವುದರಲ್ಲಿ ಸುತ್ತಮುತ್ತಲಿನ ಕೆರೆಗಳು ತುಂಬಿದವು. ಸಂಕಲ್ಪಮಾತ್ರದಿಂದ ಪಂಚಭೂತಗಳನ್ನು ಆಜ್ಞಾಪಿಸುವ ಶಕ್ತಿ ಇರುವ ಆ ಮಹಾತ್ಮರ ಕೀರ್ತಿಯನ್ನು ಗ್ರಾಮಸ್ಥರಲ್ಲದೇ ಸರ್ವಜೀವಿಗಳೂ ಹೃದಯಪೂರ್ವಕ ಕೃತಜ್ಞತೆಯೊಂದಿಗೆ ಸ್ತುತಿಸಿದರು. ಪ್ರಕೃತಿ ಮಾತೆ ಅವರ ಕರುಣೆಗೆ ಕೃತಜ್ಞತಾಪೂರ್ವಕವಾಗಿ ನೃತ್ಯ ಮಾಡಿದಳು. ಆದರೆ ಕರುಣಾಮೂರ್ತಿ ಸ್ವಾಮಿಯವರು ಆ ಸ್ತುತಿಗಳನ್ನು ಕೇಳುತ್ತಾರೆಯೇ? ತಾವು ಏನೂಮಾಡಲಿಲ್ಲ, ತಮಗೇನೂ ಗೊತ್ತಿಲ್ಲ ಎನ್ನುವಂತೆ ಆ ಹಳ್ಳಿಯನ್ನು ತನ್ನ ಸೇವಕರೊಂದಿಗೆ ಬಿಟ್ಟು ಹೊರಟು ಹೋದರು.

ಕಾಲಚಕ್ರ ತಿರುಗಿತು. ಆ ದಿನ ತಲಪೂರು ಗ್ರಾಮವನ್ನು ಬಿಟ್ಟು ಹೊರಟಂತೆಯೇ, ನಿರಾಡಂಬರಮೂರ್ತಿಯಾದ ಸ್ವಾಮಿಯವರು, 1982 ನೇ ಇಸವಿ ಆಗಸ್ಟ್ 24 ನೇ ತಾರೀಖು ತಮ್ಮ ಭೌತಿಕ ಶರೀರವನ್ನು ತ್ಯಜಿಸಿದರು. ಆ ವಿಷಾದ ವಾರ್ತೆ ನೆಲ್ಲೂರು ಜಿಲ್ಲೆಯಲ್ಲಿ ಕರೀಮೋಡದಂತೆ ಹರಡಿತು. ಎಲ್ಲರಿಗೂ, ಶ್ರೀ ಸ್ವಾಮಿಯವರು ತಮ್ಮನ್ನು ಬಿಟ್ಟು ಹೊರಟಮೇಲೆ, ಅವರಿಗೆ ಯಾರುದಿಕ್ಕು ಎನ್ನುವ ಪ್ರಶ್ನೆಯು ಕಾಡಿತು.

1982 ನೇ ಇಸವಿ ಗೋಪಾರಂ ಪ್ರಾಂತವೆಲ್ಲಾ ಮಳೆಯಿಲ್ಲದೆ ಕ್ಷಾಮದಿಂದ ಬಳಲುತ್ತಿತ್ತು. ಪಶುಗಳು ಆಹಾರ ಪಾನೀಯಗಳಿಲ್ಲದೇ ಪರಿತಪಿಸುತಿದ್ದವು. ಆಗ ಪಾಲಕೊಂಡ ಸುಬ್ಬಾರೆಡ್ಡಿಯವರು, ಬಸ್ಸಿನಲ್ಲಿ ಹೋಗುತ್ತಾ ಮನಸ್ಸಿನಲ್ಲಿ "ಸ್ವಾಮಿ, ನೀವು ಸಶರೀರರಾಗಿ ನಮ್ಮ ಮಧ್ಯೆ ಇದ್ದಾಗ, ನಮ್ಮ ಬಾಧೆಗಳನ್ನು ಹೇಳಿಕೊಂಡರೆ, ಅದನ್ನು ತೀರಿಸುತ್ತಿದ್ದಿರಿ. ಈಗ ಯಾರಲ್ಲಿ ಹೇಳಿಕೊಳ್ಳಬೇಕು? ಮಳೆಯಿಲ್ಲದೆ ಜನರು, ಪಶುಪಕ್ಷಿಗಳು ಪರಿತಪಿಸುತ್ತಿದ್ದಾರೆ" ಅಂತ ತುಂಬಾ ತನ್ಮಯತೆಯಿಂದ ಅಂದುಕೊಂಡರು. ಆಗ ಸ್ವಾಮಿಯವರು ಆತನ ಮನೋನೇತ್ರಕ್ಕೆ ಗೋಚರಿಸಿ "ಅಯ್ಯಾ, ನಿನ್ನ ಕೋರಿಕೆ ಲೋಕಕ್ಕಾಗಿಯಲ್ಲವೇ? ನಿನಗಾಗಿ ಅಲ್ಲ, 3 ದಿನಗಳಲ್ಲಿ ಮಳೆ ಬೀಳುತ್ತದೆ" ಎಂದರು. ಅದೇರೀತಿ, ಮಳೆ ಬಂದು ಕೆರೆಗಳು ತುಂಬಿತುಳುಕಾಡಿದವು. ಮಳೆ ಅದೊಂದುಕಡೆ ಆದರೂ ಸುತ್ತಮುತ್ತಲಿನ ಕೆರೆ, ಕುಂಟೆಗಳು ತುಂಬಿ ಒಳ್ಳೆ ಫಸಲೂ ಬಂದಿತು.

ಸ್ವಾಮಿಯವರು ತಮ್ಮ ಭೌತಿಕ ಶರೀರದಲ್ಲಿ ಇಲ್ಲದಿದ್ದರೂ, ಭಕ್ತರ ರಕ್ಷಣಾನಿರತರಾಗಿ, ಸೂರ್ಯ ಚಂದ್ರ ಇರುವವರೆಗೂ, ರಕ್ಷಿಸುತ್ತೇನೆಂಬ ವಚನವನ್ನು ಇವತ್ತಿನವರಗೂ ನಿರ್ವಹಿಸುತಿದ್ದಾರೆ .

ಜೀವ ನದಿಯಾದ ಪವಿತ್ರಗಂಗಾನದಿ, ತಾನು ಹುಟ್ಟಿದಜಾಗದಲ್ಲಿ ಚಿಕ್ಕಕಾಲುವೆಯಾಗಿ ಹರಿದಂತೆ ಶ್ರೀಸ್ವಾಮಿ ವೆಂಕಯ್ಯನವರು, ಅವರಜೀವನ ಆರಂಭದಲ್ಲಿ ಲೋಕದ ದೃಷ್ಟಿ ಯಲ್ಲಿ ವಿಚಿತ್ರ ವ್ಯಕ್ತಿಯಾಗಿ ಹುಚ್ಚವೆಂಕಯ್ಯನಾಗಿ ಪ್ರಕಟವಾದ ಪರಿಸ್ಥಿತಿಗಳು ಕೂಡಾ ಇದ್ದವು.

ಹುಚ್ಚವೆಂಕಯ್ಯ

ನೆಲ್ಲೂರು ಜಿಲ್ಲೆಯ ನಾಗುಲವೆಲ್ಲಟೂರು ಗ್ರಾಮದಲ್ಲಿ, ಬೀದಿಯುದ್ದಕ್ಕೂ ಮತ್ತು ಸಮೀಪದ ಚಿಕ್ಕಕಾಡಿನಲ್ಲಿ "ಚಾಕಲಿ ಯೋಗಂ, ಮಂಗಲಿ ಯೋಗಂ, ಡುಬುಡುಕ್, ಡುಬುಡುಕ್" ಎಂದು, ಕೂಗುತ್ತಾ ಓಡಾಡುತಿದ್ದ ಯುವಕನಾಗಿ, ಆ ಮಹನೀಯರು, ಜನಗಳ ದೃಷ್ಟಿಗೆ ಆಕರ್ಷಿತರಾದರು. ಹುಚ್ಚ ವೆಂಕಯ್ಯ ಎಂದು ಲೋಕದ ಬಾಯಲ್ಲಿ ನಿಂತರು. ಆದರೆ ಯಾರಿಗೂ ಗೊತ್ತಿಲ್ಲದ ವಿಷಯವೇನೆಂದರೆ, ಈಲೊಕವೆನ್ನುವ ಹುಚ್ಚಾಸ್ಪತ್ರೆಯಲ್ಲಿ ಸಮಾಜದ ಹುಚ್ಚನ್ನು ಬಿಡಿಸುವುದಕ್ಕೆ ಸಾಟಿ ಇಲ್ಲದ ವೈದ್ಯರು ಇವರು. ಹುಚ್ಚ ವೆಂಕಯ್ಯ ಎಂದು ಹಿಂದೆ ಪರಿಹಾಸಮಾಡಿದವರೇ ಆಮೇಲೆ ಅವರನ್ನು "ಭಗವಾನ್ ಅವಧೂತ ಶ್ರೀವೆಂಕಯ್ಯಸ್ವಾಮಿ" ಎಂದು ಕೀರ್ತಿಸಿದಲ್ಲದೆ ಅವರಹತ್ತಿರ ಓಡೋಡಿ ಬಂದರು.

ಸತ್ಯ ಮತ್ತು ಸೂರ್ಯನಂತೆ ಪ್ರಕಾಶವಂತರಾದ ಸ್ವಾಮಿಯವರನ್ನು ಗುರ್ತಿಸಲಾಗದಿರುವುದೇ ನಮ್ಮ ಹುಚ್ಚುತನ. ಸ್ವಾಮಿಯವರನ್ನು ಹುಚ್ಚನೆಂದು ಕರೆದವರೆಲ್ಲರೂ ಹುಚ್ಚರಾದರೆ, ಸ್ವಾಮಿಯವರ ಹುಚ್ಚು ಮೇಲಾ ಅಥವ ಜನದ ಈ ಸಣ್ಣಬುದ್ದಿ ಮೇಲಾ ಎಂದು ಯೋಚಿಸುವುದೇ ನಮ್ಮ ಹುಚ್ಚನ್ನುತೊಲುಗಿಸುವ ಸರಿಯಾದ ಮಾರ್ಗ.

ಭಗವಾನ್ ಶ್ರೀವೆಂಕಯ್ಯ ಸ್ವಾಮಿಯವರ ತಂದೆಯವರ ಹೆಸರು ಶ್ರೀ ಸೊಂಪಲ್ಲಿ ಪೆಂಚಲ್ಲಯ್ಯ. ತಾಯಿಯವರು ಶ್ರೀಮತಿ ಪಿಚ್ಚಮ್ಮನವರು. ಹುಟ್ಟಿದಜಾಗ ಆತ್ಮಕೂರು ತಾಲೂಕ, ನಾಗುಲವೆಲ್ಲಟೂರು, ಹುಟ್ಟಿದ ತಾರೀಖು ಸಿಗಲಿಲ್ಲ. 1927 ನೇ ಸಂವತ್ಸರ "ದೊಡ್ಡ ಗಾಳಿ ಮಳೆ" ಬಂದಾಗ ಇವರಿಗೆ 30 ವರ್ಷಗಳ ವಯಸ್ಸು.

ವೆಂಕಯ್ಯ ಚಿಕ್ಕವರಾಗಿದ್ದಾಗ, ಎಲ್ಲ ಮಕ್ಕಳಂತೆಯೇ ಇದ್ದರು. ಸ್ವಲ್ಪದಿನ ಶ್ರೀಸಿದ್ದಿರಾಜುರಾಮಯ್ಯನವರ ಹತ್ತಿರ, ಓದು ಕಲಿಯಲು ರಾತ್ರಿಯ ಹೊತ್ತು ಹೋಗುತ್ತಿದ್ದರಂತೆ. ಅವರ ಓದು ಅಕ್ಷರಮಾಲೆಯಲ್ಲೇನಿಂತು ಹೋಯಿತು. ಆಟಪಾಟಗಳಲ್ಲಿ ಕೋಡ ಮಿಕ್ಕ ಮಕ್ಕಳಂತೆಯೇ ಆಡುತಿದ್ದರು. ಏನೂಭೇದವಿರುತ್ತಿರಲಿಲ್ಲ.

ಶ್ರೀ ಕೊಮರಗಿರಿ ರಮಣಯ್ಯನವರು ಹೇಳಿದಂತೆ, 5 ವರ್ಷ ವಯ್ಯಸ್ಸಿನಲ್ಲೇ ಸ್ವಾಮಿಯವರು ಏಕಾಂತಪ್ರಿಯರು. ಆಟ ಆಡಲು ಮಕ್ಕಳು ಇವರನ್ನು ಕರಿಯಲು ಬಂದಾಗ, "ಒರೇಯ್, ನೇನು ದೊಂಗತನಂ ಚೇಸಿವಚ್ಚಾನು, ಪೋಲೀಸುಲು ವಚ್ಚಿ ನನ್ನು ಪಟ್ಟುಕುಂಟಾರು, ಪೋಂಡಿ" (ಅಲೇ, ನಾನು ಕಳ್ಳತನ ಮಾಡಿ ಬಂದಿದ್ದೇನೆ. ಪೋಲೀಸರು

ನನ್ನನ್ನು ಹಿಡಿದುಕೊಂಡು ಹೋಗುತ್ತಾರೆ. ನೀವೆಲ್ಲಾ ಹೋಗಿ) ಎನ್ನುತ್ತಾ ಅವರೆಲ್ಲರನ್ನು ಕಳುಹಿಸಿ ಬಾಗಿಲು ಹಿಂದೆ ಧ್ಯಾನಮಗ್ನರಾಗುತಿದ್ದರು.

ದೇಶೀಯ ಕ್ರ್ಯಾನ್ ಬೆರ್ರೀಸ್(cranberries) ತರಲು ಮಕ್ಕಳೆಲ್ಲರೂ ಕಾಡಿಗೆ ಹೋದರೇ, ಶ್ರೀ ಸ್ವಾಮಿಯವರು ಯಾರ ಜೊತೆಯಲ್ಲಿಯೂ ಇರದೆ ಗಿಡಗಳ ಮರೆಯಲ್ಲಿ ಇರುತ್ತಿದ್ದರು. ಯಾರಾದರೂ ಹತ್ತಿರ ಬಂದರೆ ಮೇಲೆ ಹೇಳಿದ ಮಾತುಗಳು ಹೇಳಿ ತಾವು ಏಕಾಂತದಲ್ಲಿರುತ್ತಿದ್ದರು.

17, 18 ವಯಸ್ಸಿನಲ್ಲಿ ಕಟ್ಟಿಗೆಯನ್ನು ಹೊಡೆದು, ಬಂಡಿಯಲ್ಲಿ ತೆಗೆದುಕೊಂಡು ನೆಲ್ಲೂರಿಗೆ ಹೋಗಿ ಮಾರಿ ಬರುತ್ತಿದ್ದರು. ಊಟದ ಎಲೆಗಳನ್ನುಕಿತ್ತು, ದೊನ್ನೆಗಳನ್ನು ತಯಾರಿಸಿ, ನೆಲ್ಲೂರಿನಲ್ಲಿ ಮಾರಿಕೊಂಡು ಬರುತ್ತಿದ್ದರು. ಶ್ರಮದ ಕೆಲಸ ಗಳನ್ನು ಅಚ್ಚುಕಟ್ಟಾಗಿಮಾಡುತ್ತಿದ್ದರು. ಯಾವ ಕೆಲಸಮಾಡಿದರೂ, ಇತರರು ಹೊಗಳುವಂತೆ ಮಾಡುತ್ತಿದ್ದರು. ಕೂಲಿ ಕೆಲಸಕ್ಕೆ ಕೂಡಾ ಹೋಗುತ್ತಿದ್ದರು. ಇವರ ತಂದೆತಾಯಿಯವರು ಇವರನ್ನು ಎಷ್ಟೋ ಗೌರವದಿಂದ ಕಾಣುತ್ತಿದ್ದರು. ಆದ್ದರಿಂದ, ಇತರ ಕೂಲಿಗಳ ಹಾಗೆ, ಕೂಲಿಗೆ ಕೊಡುತ್ತಿದ್ದ ಧಾನ್ಯಗಳನ್ನು ಬಟ್ಟೆಯಲ್ಲಿ ಮೂಟೆಕಟ್ಟಿಕೊಂಡು, ತಲೆಯಮೇಲಿಟ್ಟುಕೊಂಡು ಮನೆಗೆ ತರಲು ಬಿಡುತ್ತಿರಲಿಲ್ಲ. ತಮ್ಮಂದಿರನ್ನಾಗಲಿ, ತಂಗಿಯನ್ನಾಗಲಿ ಕಳಿಸಿ, ತರಿಸುಕೊಳ್ಳುತ್ತಿದ್ದರು.

ಸ್ವಾಮಿಯವರ ಬಾಲ್ಯವನ್ನು ಕುರಿತು, ಅವರ ಸೋದರಿ ಶ್ರೀಮತಿ ಮಂಗಮ್ಮನವರು ಹೀಗೆ ಹೇಳುತ್ತಿದ್ದರು. ಚಿಕ್ಕವಯಸ್ಸಿನಲ್ಲೇ ಕೂದಲು ಗಂಟುಹಾಕಿಕೊಳ್ಳುತ್ತಿದ್ದರು. ಪಂಚೆ, ಷರಟು ಧರಿಸುತ್ತಿದ್ದರು. ಶ್ರಮದ ಕೆಲಸಗಳನ್ನು ಎಷ್ಟು ಅಚ್ಚುಕಟ್ಟಾಗಿ ಮಾಡುತ್ತಿದ್ದರೋ ಅದನ್ನು ಹೇಳಲಾರೆ. ಹೊಲ, ಗದ್ದೆ ಉಳುವಾಗ, ನೇಗಿಲು ಹಾಕಿದರೆ ತುಂಬಾ ಹಸನಾಗಿ ಇರುತ್ತಿತ್ತು. ಪೆನ್ಸಿಲ್ ನಿಂದ ಇಂಚು ಪಟ್ಟಿ ಹಿಡಿದು ಗೀರು ಹಾಕಿದರೆಹೇಗೋ ಹಾಗಿರುತ್ತಿತ್ತು. ಸ್ವಾಮಿಯವರು ಚಿಕ್ಕಂದಿನಲ್ಲಿ ಮನೆಯಸುತ್ತಲೂ ಬೇವು, ಹುಣಸೆ, ನುಗ್ಗೆಕಾಯಿ ಬೀಜಗಳನ್ನು ನೆಟ್ಟರು. ನಾವುಗಳು ಅವುಗಳನ್ನು ನೋಡಿಕೊಳ್ಳದಿದ್ದರೂ ಅವುಗಳು ಬೆಳದು ತೋಪಿನಂತಾದವು.

ಚಿಕ್ಕತನದಿಂದಲೂ ತುಂಬಾ ಬುದ್ಧಿವಂತರಾಗಿ, ಗೌರವದಿಂದ ಇರುತ್ತಿದ್ದರು. ನಾನು ಅವರಿಗಿಂತ ಚಿಕ್ಕವಳಾದರೂ, "ಅಮ್ಮೆ"(ಹುಡುಗಿ) ಅಂತಾಗಲಿ "ಇಟ್ಲ ರಾ" (ಇಲ್ಲಿ ಬಾ) ಅಂತ ಏಕವಚನ ಪ್ರಯೋಗ ಮಾಡುತ್ತಿರಲಿಲ್ಲ. "ಅನ್ನಂ ಪೆಟ್ಟೂ ಮಂಗಮ್ಮ" (ಊಟ ಬಡಿಸು ಮಂಗಮ್ಮ) ಅಂತ ಕೇಳುತ್ತಿದ್ದರು. ಜೊತೆಯಮಕ್ಕಳು ವೆಂಕಣ್ಣ ವೆಂಕಣ್ಣ ಅಂತ ಕರೆಯುತ್ತಿದ್ದರು. ನಾನು ಹಾಗೆ ಕರೆದರೆ ಎಲ್ಲರೂ ವೆಂಕಣ್ಣ ಎಂದರೆ ನೀನೂ ಹಾಗೆ ಕರಿಯ ಬೊಹುದಾ? ನೀನು ಅಣ್ಣ ಅಂತ ಕರೆಯ ಬೇಕಮ್ಮ ಹೆಸರು ಇಟ್ಟು ಕರೆಯ ಬಾರದು ಎಂದು ಬುದ್ಧಿ ಹೇಳುತ್ತಿದ್ದರು. ಜೊತೆಯ ಮಕ್ಕಳೆಲ್ಲರೂ ಅವರ ಜಗಳಗಳನ್ನು ತೀರಿಸಲು ಇವರಹತ್ತಿರ ಬರುತ್ತಿದ್ದರು. ಹೊಲದಲ್ಲಿ ಮಕ್ಕಳು ಬೆರಣಿ ತಯಾರು ಮಾಡುವುದಕ್ಕೆ ಇವರೇ ನಾಯಕರು.

16 ವರ್ಷಗಳಾದಾಗ ಜೋಳದ ಪೈರನ್ನು ಕುಯ್ದರೆ ನೋಡಲು

ಅಂದವಾಗಿರುತ್ತಿತ್ತು. ಪೈರೆಲ್ಲಾ ಒಂದೇ ಎತ್ತರದಲ್ಲಿ ಕತ್ತರಿಸುತ್ತಿದ್ದರು. ಎಂತಹ ಚಿಕ್ಕ ಕೆಲಸವಾದರೂ ಶ್ರದ್ಧೆಯಿಂದ ಪೂರ್ತಿ ಮಾಡುವುದೇ ಯೋಗವೆಂದು ಭಾವಿಸುತ್ತಿದ್ದರು. ಇದೇ ಅವರ ಉದ್ದೇಶ್ಯವಾಗಿರಬಹುದು.

ನನ್ನನ್ನು ದೂರದಲ್ಲಿ ದಕ್ಷಿಣ ದೇಶದ ರಾಜಪದ್ಮಾಪುರದವರಿಗೆ ಕೊಟ್ಟು ವಿವಾಹ ಮಾಡಲು ನಮ್ಮ ತಂದೆತಾಯಿಯವರು ಆಲೋಚಿಸಿದರೆ, ಸ್ವಾಮಿಯವರು ಒಪ್ಪಲಿಲ್ಲ. ಆ ಹೊತ್ತಿಗೆ, ಸ್ವಾಮಿಯವರಿಗೆ "ಹುಚ್ಚ" ಎನ್ನುವ ಪಟ್ಟಾ ಬಂದಿರಲಿಲ್ಲ. ನಮ್ಮ ಮೂರು ಗಂಡು ಮಕ್ಕಳ ಮಧ್ಯೆ ಒಬ್ಬಳೇ ತಂಗಿ, ಅವಳನ್ನು ಅಷ್ಟು ದೂರ ಮದುವೆ ಮಾಡಿ ಕಳುಹಿಸುತ್ತೀರ ಅಂತ ತಾಯಿಯವರ ಜೊತೆ ಜಗಳ ಮಾಡಿದರು. ಆದರೆ, ನಮ್ಮ ತಾಯಿಯವರು ಪಟ್ಟು ಬಿಡದೆ ನನ್ನನ್ನು ರಾಜಪದ್ಮಾಪುರದವರಿಗೇ ಕೊಟ್ಟು ಮದುವೆ ಮಾಡಿದರು. ಮದುವೆಯ ದಿನ, ಸ್ವಾಮಿಯವರು ಕೋಪದಿಂದ, ಬೇಜಾರಿನಿಂದ ಮದುವೆಯ ಮನೆಯಲ್ಲಿರದೆ, ಜೋಳದ ಹೊಲದಲ್ಲಿ ಮಲಗಿದ್ದರು.

ಸ್ವಾಮಿಯವರಿಗೆ ಚಿಕ್ಕತನದಿಂದಲೂ ಸುಳ್ಳು ಹೇಳುವುದನ್ನು ಕಂಡರೆ ಆಗುತ್ತಿರಲಿಲ್ಲ. ಸುಮಾರು 10 ವರ್ಷದ ವಯಸ್ಸಿನಲ್ಲಿರುವಾಗ ಅವರ ಮನೆಗೆ ಒಬ್ಬ ಭಿಕ್ಷುಕ ಬಂದ. ಅವರ ಅಮ್ಮ ಮನೆಯಲ್ಲಿ ಒಂದು ಕಾಳು ಧಾನ್ಯವೂ ಇಲ್ಲ ಹೋಗು ಎಂದರು. ಆಗ ಸ್ವಾಮಿಯವರು, ಇನ್ನು ಅರ್ಧ ಗಂಟೆ ಆದ ಮೇಲೆ ಪಾತ್ರೆಯಿಂದ ಜೋಳ ತೆಗೆಯುತ್ತಾರೆ ಆಗ ಹಾಕಿಸಿಕೋ ಎಂದರು. ಸ್ವಾಮಿಯವರು ಹಸಿರು ಹುಲ್ಲು ತರುತ್ತಿರುವಾಗ, ಪಶುಗಳು ಒಣಗಿದ ಹುಲ್ಲು ತಿನ್ನುತ್ತಿದ್ದರೆ, ಈ ಹಸಿರು ಹುಲ್ಲನ್ನು, ಆ ಪಶುಗಳ ಮುಂದೆ ಹಾಕಿ ಬರೀ ಕೈಯಲ್ಲಿ ಮನೆಗೆ ಬರುತ್ತಿದ್ದರು. ಹುಲ್ಲು ಎಲ್ಲಿ ಎಂದರೆ ಮೌನವಹಿಸುತ್ತಿದ್ದರು.

ಶ್ರೀ ಸ್ವಾಮಿಯವರಿಗೆ 20 ವರ್ಷ ವಯಸ್ಸಿನಲ್ಲಿ ತುಂಬಾ ಜ್ವರ ಬಂದಿತು. ಆ ದಿನಗಳಲ್ಲಿ, ಆ ಗ್ರಾಮದಲ್ಲಿ ವೈದ್ಯರಾಗಲಿ, ಆಸ್ಪತ್ರೆಯಾಗಲಿ ಇರಲಿಲ್ಲ. ಅನ್ನ ತಿನ್ನದೆ 2 ಹೊತ್ತಿದ್ದರೆ ತಾನೆ ಜ್ವರ ಇಳಿಯುತ್ತೆ ಅನ್ನುವ ವಾಡಿಕೆ. ಹಾಗೇ ವಾರ ಕಳೆಯಿತು, ಕಡಲೇಕಾಯಿ ಕುಯ್ಯುವದಕ್ಕೆ ಹೋದ ತಮ್ಮಂದಿರು, ಕಡಲೇಕಾಯನ್ನು ತಂದರೆ ಅದನ್ನು ತಿಂದು ಮಂಚದಮೇಲೆ ಹಾಸಿಗೆಯಲ್ಲಿ ಮುದುರಿಕೊಂಡು ಮಲಗುತ್ತಿದ್ದರು. ಒಂದು ದಿನ ಸ್ವಾಮಿಯವರು, "ನಮ್ಮ ಮನೆಯನ್ನು ಹರಾಜು ಹಾಕುತ್ತಾರೆ, ನೀವು ಎಲ್ಲಿ ಇರುತ್ತೀರಿ ಅಂತ ಅವರ ತಂದೆ ತಾಯಿಯನ್ನು ಕೇಳಿದರು. ನಮಗೆ ಸಾಲ ಸೋಲಗಳಿಲ್ಲ. ಮನೆಯಾಕೆ ಹರಾಜು ಹಾಕುತ್ತಾರೆ?" ಎಲ್ಲೋ ಜ್ವರದ ಬಾಧೆಯಿಂದ ಪಿತ್ಥ ನೆತ್ತಿಗೇರಿ ಹಾಗೆ ಮಾತನಾಡುತ್ತಿದ್ದಾನೆ ಅಂತ ಭಾವಿಸಿ, ತಲೆಗೆ ನಿಂಬೆರಸ ತಿಕ್ಕಿ, ತಣ್ಣೀರಿನಲ್ಲಿ ಸ್ನಾನ ಮಾಡಿಸಿದರು. ಕರೆದರೆ ಸ್ವಾಮಿಯವರು "ಆ,ಹೂ" ಎಂದು ಮಾತ್ರವೇ ಉತ್ತರ ಕೊಡುತ್ತಿದ್ದರು. ಆದ್ದರಿಂದ, ಸ್ವಾಮಿಯವರಿಗೆ ದೆಯ್ಯ ಹಿಡಿದಿದೆ ಅಂತ ಭೂತವೈದ್ಯ ನಾಟಿವೈದ್ಯ ಎಲ್ಲ ಮಾಡಿಸಿದರು. ಏನೂ ಲಾಭ ವಾಗಿಲಿಲ್ಲ. ಒಂದು ತಿಂಗಳಾದ ಮೇಲೆ "ಚಾಕಲಿ ಯೋಗಮ್, ಜಕ್ಕಲಿ ಯೋಗಂ, ಮಂಗಲಿ ಯೋಗಂ" ಎಂದು ಕೂಗುತ್ತಾ ಊರಲೆಲ್ಲಾ ಓಡುತ್ತಿದ್ದರು. ಜನಸಂಚಾರಕ್ಕೆ ದೂರವಾಗಿ ಇರುವ ಜಾಗದಲ್ಲಿ ಕೂಗುತ್ತಿದ್ದರು. 2-3 ದಿನಗಳು ಕೂಡ ಮನೆಗೆ ಬರುತ್ತಿರಲಿಲ್ಲ ತಂದೆ ತಾಯಿಗಳು ಸೇವಕನೊಂದಿಗೆ ಬುತ್ತಿ

ಕಟ್ಟಿಕೊಟ್ಟು, "ಮಗನನ್ನು ಹುಡುಕಿ, ಊಟಕೊಟ್ಟು ಬಾ" ಎಂದು ಕಳುಹಿಸಿತ್ತಿದ್ದರು. ಬುತ್ತಿ ನೋಡಿದಕೂಡಲೆ, ಆ ಸೇವಕನೊಂದಿಗೆ, ಮನೆಗೆ ಬಂದು ಊಟ ಮಾಡಿ, ಮತ್ತೆ ಹೊರಟು ಹೋಗುತ್ತಿದ್ದರು. ಒಮ್ಮೆ ಸ್ವಾಮಿಯವರನ್ನು ಮನೆಯಲ್ಲಿ ಕಟ್ಟಿಹಾಕಿದರೆ, ಊಟವನ್ನೂ, ನೀರನೂ ಕೇಳದೆ ಹಾಗೇ ಕುಳಿತುಬಿಟ್ಟಿದ್ದರು. ತಾಯಿ ತಂದೆಯವರಿಗೆ, ಅವರ ಮಗನ ಸ್ಥಿತಿಯನ್ನು ನೋಡಿ, ಕನಿಕರದಿಂದ, ಬೇಜಾರಿನಿಂದ, ಅವರನ್ನು ಸ್ವೇಚ್ಛೆ ಯಾಗಿ ಬಿಟ್ಟುಬಿಟ್ಟರು. ಹೊಲದಲ್ಲೋ, ಮನೆಯ ಹಿಂಬಾಗದಲ್ಲೊ ತಿರುಗುತ್ತಿದ್ದರು.

ಯಾರ ಬಳಿಯೆಂದರೆ ಅವರ ಹತ್ತಿರ ಊಟ ಮಾಡುತ್ತಿದ್ದರು. ಹಾಗೆ ವಿಚಕ್ಷಣೆ ಇಲ್ಲದೆ, ಯಾರಬಳಿ ಎಂದರೆ ಆಹಾರ ತೆಗೆದುಕೊಳ್ಳುತ್ತಿದ್ದರಿಂದ, ಕುಲದ ಹಿರಿಯರು, ಸ್ವಾಮಿ ಕುಲಭ್ರಷ್ಠರಾದರೆಂದು, ಅವರ ನಾಲಿಗೆಗೆ ಬರೆ ಹಾಕಬೇಕೆಂದುಕೊಂಡರು. ಅದನ್ನು ಮಾಡಿದರೋ ಇಲ್ಲವೋ ನಮಗೆ ಗೊತ್ತಿಲ್ಲ.

ಎಲ್ಲೆಲ್ಲೋ ಕಾಡಿನಲ್ಲಿ ತಿರುಗುತ್ತಿದ್ದರಿಂದ, ಅವರ ಬಟ್ಟೆಗಳು, ಚಿಂದಿಚಿಂದಿಯಾಗುತ್ತಿದ್ದವು. ಅವರ ತಂದೆ ತಾಯಿರು ಹೊಸ ಬಟ್ಟೆ ತಂದಿಟ್ಟರೆ, ಯಾವಾಗಲೋ, ಬಂದು ಅದನ್ನು ಧರಿಸಿ ಹೊರಟು ಹೋಗುತ್ತಿದ್ದರು. ಮಹಿಳೆಯರನ್ನು ಕಂಡರೆ "ಹುಲಿಯನ್ನು ನೋಡಿದ ಹಸುವಿನಂತೆ" ಓಡಿ ಹೋಗುತ್ತಿದ್ದರು.

ಈ ದೆಶೆಯಲ್ಲಿ ಎಲ್ಲರೂ ಇವರನ್ನು, ಹುಚ್ಚುವೆಂಕಯ್ಯ ಅನ್ನುತ್ತಿದ್ದರು. "ಚಾಕಲಿ ಯೋಗಂ ಎವರಿದಿ ವೆಂಕನ್ನ" (ಅಗಸನ ಯೋಗ ಯಾರದ್ದು ವೆಂಕಣ್ಣಾ) ಅಂದರೆ, ಅವರ ಸೋದರ ಮಾವನ ಮನೆಹೆಸರು ಹೇಳುತ್ತಿದ್ದರು. ರಾಜಪದ್ಮಾಪುರದಲ್ಲಿ ಇದ್ದ ತಂಗಿ ಮಂಗಮ್ಮನವರ ಮನೆಯಲ್ಲಿ ಊಟಮಾಡುತ್ತಾ ಓಡಾಡುತ್ತಿದ್ದರು. ಒಂದು ದಿನ, ತೀಟೆ ಮಾಡುವ ಹುಡುಗರು, "ವೆಂಕನ್ನ, ಯಾವುದಾದರು ಕಥೆ ಹೆಳು, ನಿನಗೆ ಗಂಜಿ ಕೊಡುತ್ತೇವೆ" ಅಂದರು. "ಅನ್ನ ಕೊಟ್ಟರೆ ಕಣ್ಣುಹೋಗುತ್ತೆ ಅದಕ್ಕೇ, ಗಂಜಿನೇ ಕೊಡಿ" ಎಂದು ಹೇಳುತ್ತಿದ್ದರು. ಅದನ್ನು ಕೇಳಿ ಎಲ್ಲರು "ಇವರಿಗೆ ಹುಚ್ಚು ಎನ್ನುತ್ತಾರೆ, ಆದರೆ ಇವರಿಗೆ ಹುಚ್ಚು ಇಲ್ಲ" ಅಂದುಕೊಂಡರು. ಯಾರನ್ನೂ ಬೈಯ್ಯುತ್ತಿರಲಿಲ್ಲ, ಯಾರನ್ನೂ ಹೊಡೆಯುತ್ತಿರಲಿಲ್ಲ, ಅಗೌರವದಿಂದ ಮಾತನಾಡುತ್ತಿರಲಿಲ್ಲ, ಕೊಡುವವರ ಹತ್ತಿರ ತೆಗೆದುಕೊಳ್ಳುತ್ತಿದ್ದರು, ಇಲ್ಲದಿದ್ದರೆ ಅದೇ ಕೆಲಸವಾಗಿ ವಿರಾಮವಿಲ್ಲದೇ, ತಿರುಗುತ್ತಿದ್ದರು.

ಇದೇ ಸಮಯದಲ್ಲಿ ಮಂಗಮ್ಮನವರ ಮಗುವಿಗೆ ಜ್ವರಬಂದು, ಅದು ಇಳಿಮುಖವಾಗದಿದ್ದಾಗ, ಮಗುವಿನ ಬಾಧೆ ನೋಡಿ, ತಾಯಿ ಮಂಗಮ್ಮನವರು ಅಳುತ್ತಿದ್ದರು "ಏಕೆ ಅಳುತ್ತಿದ್ದೀಯಮ್ಮ? ಮಗುವಿಗೆ ಜ್ವರ ಕಮ್ಮೀ ಆಗುತ್ತದೆ, ಭಯಪಡ ಬೇಡ" ಎಂದು ಮಗುವಿನ ಮುಖವನ್ನು ಅಂಗೈನಿಂದ ಸವರಿದರು. ನಾಲಕ್ಕನೇ ದಿನವೇ ಯಾವವೈದ್ಯವೂ ಇಲ್ಲದೇ ಮಗುವಿಗೆ ಗುಣವಾಯಿತು. ಈಗ ಸ್ವಾಮಿಯವರಿಗೆ ನಡೆಯುತ್ತಿರುವ ವೈಭವವಾದ ಪೂಜೆ ಸತ್ಕಾರಗಳನ್ನು ನೋಡಿ, ಮಂಗಮ್ಮನವರು ತಮ್ಮ ಮನಸ್ಸಿನಲ್ಲಿ ನೊಂದುಕೊಂಡು ಕಣ್ಣೀರು ಹಾಕಿದರು. ಏಕೆಂದರೇ, "ಹೀಗೆ ಅವರ ಅಣ್ಣ ಎಲ್ಲರಿಗೂ ದೇವರಾಗುತ್ತಾರೆಂದು ತಿಳಿದಿದ್ದರೆ, ಅವರನ್ನ ಅತಿ ಗೌರವವಾಗಿ ಕಾಣುತ್ತಿದ್ದೆವು, ಇದನ್ನು ತಿಳಿಯದೇ ಅಣ್ಣಾ ಎಂದು ಸಲಿಗೇ ಇಂದಲೆ ನೋಡಿದೆವು." ಈ ಸಂದರ್ಭದಲ್ಲಿ

ಮಂಗಮ್ಮನವರು ಸ್ವಾಮಿಯವರ ಕೆಲವು ವಿಚಾರಗಳನ್ನು ತಿಳಿಸಿದರು. ಸ್ವಾಮಿಯವರು ಇಬ್ಬರು ಮಾಡುವ ಕೆಲಸವನ್ನು ತಾವು ಒಬ್ಬರೇ ಮಾಡುತ್ತಿದ್ದರು. ಅವರು ಪೌಷ್ಟಿಕ ಆಹಾರವನ್ನು ಸೇವಿಸುತ್ತಿದ್ದರು. ಸ್ವಾಮಿಯವರು ಉನ್ಮತ್ತಾವಸ್ಥೆಯಲ್ಲಿದ್ದಾಗ, ಕಪಿಲ ಭಾವಿ ಕಡೆ ವಾಲಿದ್ದ ಮರದ ಕೊಂಬೆಯನ್ನು ತನ್ನ ಕಾಲಿನಲ್ಲಿ ಸುತ್ತುಕೊಂಡು ತಲೆಕೆಳಗೆ ಮಾಡಿ ತೂಗಾಡುತ್ತಿದ್ದರು. ಆಕಸ್ಮಿಕವಾಗಿ ತಮ್ಮಕಾಲು ಜಾರಿ ಭಾವಿಯಲ್ಲಿ ಬಿದ್ದರೆ, ಮತ್ತೆ ಮೇಲೆ ಬಂದು ಅದೇರೀತಿ ತೂಗಾಡುತ್ತಿದ್ದರು.

ಈ ರೀತಿಯಸಾಧನೆ ಶ್ರೀ ಸಾಯಿಬಾಬಾ ಅವರ ಗುರುಗಳು ವಿಧಿಸಿದಂತೆ, ಮತ್ತೆ ಕೆಲವು ಮಹನೀಯರು ಮಾಡಿದ ವಿವರಗಳು "ಶ್ರೀಸಾಯಿ ಲೀಲಾಮೃತಂ" ಎನ್ನುವ ಗ್ರಂಥದಲ್ಲಿ ಕಾಣಬಹುದು.

ಶ್ರೀ ಸ್ವಾಮಿಯವರ ತಮ್ಮನವುರು, ಶ್ರೀಚಿನ್ನಪ್ಪನಾಯಡುರವರು ತಾವು ಸ್ವತಃ ನೋಡಿದ ವಿಷಯ ಈ ರೀತಿ ತಿಳಿಸಿದರು. "2 ಎತ್ತುಗಳ ಬಂಡಿ ಕಂಡರೆ ಶ್ರೀಸ್ವಾಮಿಯವರು, ಆ ಬಂಡಿಯ ಹಿಂದೆ ಬಂದು, ಗಾಡಿಯಲ್ಲಿ ಕುಳಿತುಕೊಳ್ಳುತ್ತಿದ್ದರು. ಕಾಲು ಗಾಡಿಯ ಮೇಲೆ, ತಲೆ ಕೆಳಗೆ ಹಾಕಿಕೊಂಡು ತೂಗಾಡುತ್ತಿದ್ದರು. ಯಾರಾದರೂ ನೋಡಿದರೆ ಮತ್ತೆ ಸರಿಯಾಗಿ ಕುಳಿತು ಕೊಳ್ಳುತ್ತಿದ್ದರು."

ಓಂ ನಾರಾಯಣ ಆದಿ ನಾರಾಯಾಣ

ಅವಧೂತಲೀಲೆ

ಅಧ್ಯಾಯ 2

ಅನಿಕೇತ

"ಚಾಕಲಿ ಯೋಗಂ - ಮಂಗಲಿ ಯೋಗಂ" (ಅಗಸನ ಯೋಗ - ಕ್ಷೌರಿಕ ಯೋಗ - ಸ್ವಾಮಿಯವರು ಯಾವಾಗಲು ಕೂಗುತ್ತಿದ್ದ ಈ ಮಾತಿಗೆ ಬಹಳ ಆಳವಾದ ಅರ್ಥವಿದೆ ಈ ಜೀವಿತಾವಧಿಯಲ್ಲಿ ಮೋಕ್ಷವನ್ನು ಪಡೆಯಲು ಒಬ್ಬನು ತನ್ನನ್ನು ತಾನು ಶುದ್ಧೀಕರಿಸಿಕೊಳ್ಳಬೇಕು. ಮುಂದೆ ಬರುವ ಅಧ್ಯಾಯಗಳಲ್ಲಿ ಈ ವಾಕ್ಯದ ಅರ್ಥ ಇನ್ನು ಸ್ಪಷ್ಟವಾಗುತ್ತದೆ) ಎಂದು ನಿರ್ಜನ ಪ್ರದೇಶದಲ್ಲಿ ಕೂಗುತ್ತಾ ಓಡಾಡುತ್ತಿದ್ದ ಸೋಂಪಲ್ಲಿಯ ಹುಚ್ಚುವೆಂಕಯ್ಯ 20ನೇ ವರ್ಷದಲ್ಲಿ ಮನೆಬಿಟ್ಟು ಹೊರಟುಹೋದರು. ತಂದೆ ತಾಯಿಯವರಿಗೂ ಗೊತ್ತಾಗದ ಹಾಗೆ ಇವರು ಗುಪ್ತವಾಗಿದ್ದರು. ಆ ಸಮಯದಲ್ಲಿ ಇವರು ಯಾರುಯಾರಿಂದ ಅನುಗ್ರಹ ಪಡೆದರೋ, ಎಲ್ಲೆಲ್ಲಿ ತಪಸ್ಸು ಮಾಡಿದ್ದರೋ ಎನ್ನುವ ವಿಚಾರ, ಸ್ವಾಮಿಯವರು ಒಬ್ಬಬ್ಬರಿಗೆ ಒಂದೊಂದು ರೀತಿಯಲ್ಲಿ ತಿಳಿಸಿದ್ದಾರೆ. ಮೋಪೂರು ದಶಯ್ಯನವರಿಗೆ ಸ್ವಾಮಿಯವರು ಹೀಗೆ ಹೇಳಿದರಂತೆ - "ಅಯ್ಯಾ! ನಾನು ಕಾಡಿನಲ್ಲಿ ಅಲ್ಲಿ ಇಲ್ಲಿ ತಿರುಗಾಡುತ್ತಿದ್ದಾಗ, ಒಬ್ಬ ಸಂತರನ್ನು ಭೇಟಿಯಾದೆ. ಅವರು ಕಣ್ಣು ಮುಚ್ಚಿಕೋ ಎಂದರು, ಮರುಕ್ಷಣದಲ್ಲಿ ಪೆಂಚಲಕೋನದ ಗುಹೆಗಳಲ್ಲಿ ಇದ್ದ ಋಷಿಗಳ ಮಧ್ಯೆ ಇದ್ದೆ. ಕಣ್ಣು ತೆರೆದಾಗ, ಅದು ಒಂದು ದೊಡ್ಡ ಋಷ್ಯಾಶ್ರಮವೆಂದು ತಿಳಿಯಿತು. ಅಲ್ಲಿ ಸ್ವಲ್ಪಕಾಲ ಇದ್ದಮೇಲೆ, ಆ ಸಂತರು ಮತ್ತೆ ಕಣ್ಣು ಮುಚ್ಚಿಕೊ ಎಂದರು. ನಾನು ಕಣ್ಣು ತೆರೆದಾಗ, ಮದ್ರಾಸ್ ಹೈ ಕೋರ್ಟ್ ಹತ್ತಿರ ಇದ್ದೆ" ಎಂದು ಹೇಳಿದರು.

ಮನೆಬಿಟ್ಟು ಹೋದ ಹುಚ್ಚ ವೆಂಕಯ್ಯ ಮತ್ತೆ ಗ್ರಾಮಸ್ಥರ ಕಣ್ಣಿಗೆ ಕಾಣುವಹೊತ್ತಿಗೆ "ಶ್ರೀ ವೆಂಕಯ್ಯಸ್ವಾಮಿ ಅನ್ನುವ ನಾಮಧೇಯದಲ್ಲಿ, ಎಲ್ಲರಿಗೂ ಆಪದ್ಬಾಂಧವರಾಗಿ ಪ್ರಶಸ್ತಿ ಹೊಂದಿದ್ದರು. ತನ್ನ ಮನೆಯವರೆಲ್ಲರೂ ಎಷ್ಟು ಬೇಡಿಕೊಂಡರೂ ಮನೆಗೆ ಹೋಗಲಿಲ್ಲ ಅಲ್ಲದೇ ಆ ಗ್ರಾಮದಲ್ಲೂ ಕಾಲಿಡಲಿಲ್ಲ. ಒಂದು ಪಕ್ಷ ಹೋದರೂ, ಊರಿನ ಹೊರಗೆ ಹೊಲದಲ್ಲೋ ಅಥವ ಗದ್ದೆಯಲ್ಲೋ ಸ್ವಲ್ಪ ಕಾಲ ಕಳೆದು ಹೊರಟು ಹೋಗುತ್ತಿದ್ದರು.

ಸ್ವಾಮಿಯವರು, ಮೊಣಕಾಲು ಮೇಲೆ ಕಟ್ಟಿದ್ದ ಹರಿದಿರುವ ಪಂಚೆ, ಹರಿದುಹೋದ ಅಂಗಿ, ಕೈಯ್ಯಲ್ಲಿ ಮಡಿಕೆ ಹಾಗು ಒಂದು ಕೋಲನ್ನು ಹಿಡಿದುಕೊಂಡು

ಏಕಾಂತ ಪ್ರದೆಶಗಳಲ್ಲಿ ತಿರುಗುತ್ತಿದ್ದರು. ಯುವತಿಯರನ್ನು ಕಂಡರೆ, ದೂರವಾಗಿ ಹೋಗುತ್ತಿದ್ದರು. ಸಣ್ಣಗೆ ಉರಿಯುತ್ತಿದ್ದ ಕಪಿಲ ಹಗ್ಗವನ್ನು ಕೈಯ್ಯಲ್ಲಿ ಹಿಡುದುಕೊಂಡು, ಕಪಿಲ ಹಗ್ಗದ ತುಂಡುಗಳನ್ನು ಒಂದು ದೊಡ್ಡ ಹಗ್ಗದಲ್ಲಿ ಕಟ್ಟಿ ಅವರು ತಮ್ಮೊಂದಿಗೆ ಇಟ್ಟುಕೊಂಡು ಓಡಾಡುತ್ತಿದ್ದರು. ಸ್ವಲ್ಪಕಾಲ ಪೆನ್ನಾ ನದಿಯ (Penna River) ದಡದಲ್ಲಿ ಮತ್ತು ಅದರ ಸಮೀಪದ ಕಾಡಿನಲ್ಲಿ ಸಂಚರಿಸುತ್ತಿದ್ದರು.

ಶ್ರೀ ಚಲಮಾನಾಯುಡು ಎಂಬ ವ್ಯಕ್ತಿ ಇವರ ಹತ್ತಿರ ಸೇವಕರಾಗಿ ಸೇರಿ ಕೊಂಡ ನಂತರ, ಪೆನ್ನಬದ್ವೇಲು ಎನ್ನುವ ಒಂದು ಬೆಟ್ಟದಮೇಲೆ ಗುಡಿಸಲು ಹಾಕಿಕೊಂಡು, ಚಿಕ್ಕ ಎಣ್ಣೆ ದೀಪ ಹಚ್ಚಿಕೊಂಡು ತಂಬೂರಿಯನ್ನು ಮೀಟುತ್ತಿದ್ದರು. ಚಲಮಾನಾಯುಡುರವರು ಹತ್ತಿರದಲ್ಲಿದ್ದ ಹಳ್ಳಿಗೆ ಹೋಗಿ ಭಿಕ್ಷಾನ್ನವನ್ನು ತರುತ್ತಿದ್ದರು. ಆನೇಕ ಹಳ್ಳಿ ಜನರು, ಸ್ವಾಮಿಯವ ಹತ್ತಿರ ಬಂದು, ಪಶುಗಳ ವ್ಯಾಧಿ, ಕಾಲರಾ, ಸಿಡುಬು, ಮುಂತಾದ ವ್ಯಾಧಿಗಳಿಂದ, ಮುಕ್ತಿ ಹೊಂದುತ್ತಿದ್ದರು. ಭಕ್ತರ ಪ್ರಶ್ನೆಗಳಿಗೆ ಅವರು ಉತ್ತರಕೊಡುತ್ತಿದ್ದರೀತಿ ತುಂಬಾ ಪ್ರತ್ಯೇಕವಾಗಿರುತ್ತಿತ್ತು. ವಿವಾಹಕ್ಕೆ ಬಂದ ಸಂಬಂಧಗಳು ಯಾವುದು ಉತ್ತಮವಾದದ್ದು ಎಂದು ಕೇಳಿದರೆ, ಎಷ್ಟು ಸಂಬಂಧಗಳು ಇದ್ದರೆ ಅಷ್ಟು ಕಲ್ಲುಗಳನ್ನು ಇಡಲು ಹೇಳುತ್ತಿದ್ದರು. ತಂಬೂರಿಮೀಟುತ್ತಾ, "ಪೂರ್ವದಿಂದ ಎರಡನೆಯದು, ಪಶ್ಚಿಮದಿಂದ ಮೂರನೆಯದು" ಎಂದು ಹೇಳುತ್ತಿದ್ದರು. ಅಂದರೆ, ಪೂರ್ವದಿಂದ ಎರಡನೆಯದು ಯಾವಸಂಬಂಧವೋ ಅದು ಉತ್ತಮವಾದದ್ದು ಎಂದು ಅವರ ಮಾತಿನ ಅರ್ಥ. ಒಂದು ವೇಳೆ, ಮದುವೆಯ ಪ್ರಸ್ತಾಪದಲ್ಲಿ ಸ್ವಾಮಿಯವರು ಹೇಳಿದ ಭವಿಷ್ಯ ನಿಜವಾಗದಿದ್ದರೆ, ಸ್ವಾಮಿಯವರ ಮಾತನ್ನು ಅರ್ಥಮಾಡಿಕೊಳ್ಳುವದರಲ್ಲಿ ನಮ್ಮದೇ ತಪ್ಪು ಎಂದು ತಿಳಿಯಬೇಕು.

ಬದ್ವೇಲು ಗ್ರಾಮ ಬಿಟ್ಟು ಹೊರಟುಹೋದಮೇಲೆ, ಸ್ವಾಮಿಯವರು ಕೋಟಿ ತೀರ್ಥಂನಲ್ಲಿರುವ ದೇವಾಲಯದಲ್ಲಿ ವಾಸಮಾಡುತ್ತಿದ್ದರು. ಇಲ್ಲಿ ಸ್ವಾಮಿಯವರು ತಂಬೂರಿ ಮುಂದಿಟ್ಟುಕೊಂಡು ಹಗಲು ರಾತ್ರಿ ಎರಡುಕೈಯ್ಯಲ್ಲೂ ಈಚಲ ಗರಿಯನ್ನು ಹಿಡಿದು, ತಂಬೂರಿಯನ್ನು ಮೀಟುತ್ತಾ "ಓಂ ನಾರಾಯಣ, ಆದಿ ನಾರಾಯಣ" ಎನ್ನುವ ಮಂತ್ರವನ್ನು ಘಟ್ಟಿಯಾಗಿ ಉಚ್ಚರಿಸುತ್ತಿದ್ದರು. ತಂಬೂರಿಯ ತಂತಿ ಕಿತ್ತುಹೋದರೂ ಈಚಲ ಗರಿಗಳನ್ನು ಆಡಿಸುತ್ತಾ ಮಂತ್ರವನ್ನು ಈ ಲೋಕದಲ್ಲಿಲ್ಲದಂತೆ ಜಪಿಸುತ್ತಿದ್ದರು. ಯಾವಾಗಲೋ ಸ್ಪೃಹ ಬಂದಾಗ ತಂತಿ ಯನ್ನು ಕಟ್ಟಿಕೊಳ್ಳುತ್ತಿದ್ದರು. ಆಗಾಗ ಅಗ್ನಿ ಯನ್ನು ಕೂಡಾ ಉರಿಸುತ್ತಿದ್ದರು. ಚಲಮಾನಾಯುಡು ಮತ್ತು ಇತರ ಸೇವಕರು ಭಿಕ್ಷಾನ್ನವನ್ನು ತರುತ್ತಿದ್ದರು.

ಸ್ವಲ್ಪ ದಿನ ಅವರು ಹಾಗೆಯೇ ಸಂಚರಿಸುತ್ತಿದ್ದರು. ಶ್ರೀಸಾಯಿಬಾಬ ಧರಿಸುತ್ತಿದ್ದ ಕಫ್ನಿ ಯಂತೆ ಮೊಣಕಾಲಿನವರಗೂ ಇದ್ದ ಒಂದು ಜುಬ್ಬ ಧರಿಸುತ್ತಿದ್ದರು. ಅವರ ಜುಬ್ಬದ ಮೇಲೆ ಇಂಕಿನಲ್ಲಿ ಅಂಗೈ ಮತ್ತು ಬೆರಳಿನ ಮುದ್ರೆಗಳು ಇರುತ್ತಿದ್ದವು. ಕೆಲವು ಜುಬ್ಬಗಳಮೇಲೆ "ರಾಮ ರಾಮ" ಅನ್ನುವ ಅಕ್ಷರಗಳು ಅಚ್ಚುಹಾಕಿರುತ್ತಿದ್ದವು. ಯಾವಾಗಲೂ ಇಂಕಿನಿಂದ ಕಾಗದಗಳಮೇಲೆ ತಮ್ಮ ಬೆಟ್ಟಿನ ಗುರ್ತು ಹಾಕಿ ಆ

ಕಾಗದಗಳನ್ನು ತಮ್ಮ ಭಕ್ತರಿಗೆ ಕೊಡುತ್ತಿದ್ದರು. ಹಾಗೆ ಕೊಡುವಾಗ ತಮ್ಮ ಬಲ ಅಂಗೈಯನ್ನು ನಡುನೆತ್ತಿಗೆ ಸೋಕಿಸಿ ಆಮೇಲೆ ಆ ಮುದ್ರೆ ಮಾಡಿದ ಕಾಗದಗಳಿಗೆ ಸೋಕಿಸಿ ಕೊಡುತ್ತಿದ್ದರು. ನೆಲ್ಲೂರಿನಲ್ಲಿನ ಅನೇಕ ಗ್ರಾಮಗಳಲ್ಲಿ ಸಂಚರಿಸುತ್ತಿದ್ದರು. ಚಲಮಾನಾಯುಡು, ಪೋಲಿರೆಡ್ಡಿ ಮುಂತಾದ ಸೇವಕರು ಸ್ವಾಮಿಯವರೊಂದಿಗೆ ಪರಿಯಟಿಸುತ್ತಿದ್ದರು. ನಿರಂತರ ಬೆಟ್ಟಿನ ಗುರ್ತು ಹಾಕಿಸುತ್ತಿದ್ದರ ಜೊತೆಗೆ, ಅವರುಗಳು, ಆಗಾಗ್ಗೆ ಅಗ್ನಿಕುಂಡದ ಏರ್ಪಾಟನ್ನು ಕೂಡ ಮಾಡುತ್ತಿದ್ದರು. ದಿನಕ್ಕೆ ಎಷ್ಟು ರೀಮು ಕಾಗದಗಳು ಎಷ್ಟು ಇಂಕು ಉಪಯೋಗುಸುತ್ತಿದ್ದರೋ ಹೇಳಲು ಸಾಧ್ಯವಿರಲಿಲ್ಲ. ಸ್ವಾಮಿಯವರ ಕೃಪೆಯಿಂದ, ರೋಗಗಳಿಂದ ಮುಕ್ತಿಯನ್ನು ಪಡೆಯುತ್ತಿದ್ದ ಎಷ್ಟೋ ಜನ, ಈ ನಿರಂತರ ಯಜ್ಞಕ್ಕೆ ಕಾಗದಗಳು, ಇಂಕಿನ ಬಿಲ್ಲೆಗಳು ಮೂಟೆಯಗಟ್ಟಲೆ ಸಮರ್ಪಿಸುತ್ತಿದ್ದರು.

ಸ್ವಲ್ಪ ಕಾಲದ ನಂತರ, ಬೆರಳಿನ ಗುರ್ತುಗಳನ್ನು ಹಾಕುವುದು ಕಡಿಮೆಮಾಡಿ, ಹೆಚ್ಚಾಗಿ ಅಗ್ನಿಕುಂಡದ ಮುಂದೆ ಹಗಲೂ ರಾತ್ರಿ ಕುಳಿತಿರುತ್ತಿದ್ದರು. ಅದರಲ್ಲಿದ್ದ ಕಟ್ಟಿಗೆಗಳನ್ನು ಕದಲಿಸುತ್ತಾ ಅರ್ಥವಾಗದ ಭಾಷೆಯಲ್ಲಿ ಮತನಾಡುತ್ತಿದ್ದರು. ದಿನಕ್ಕೆ ಕನಿಷ್ಠ 2-3 ಬಂಡಿಗಳ ಕಟ್ಟಿಗೆಯನ್ನು ಉರಿಸುತ್ತಿದ್ದರು. ಎಷ್ಟು ಮಳೆಯಾದರೂ, ಅಥವ ಸುಡುತ್ತಿರುವ ಬೇಸಿಗೆಯಾದರೂ ಸರಿ, ಅಗ್ನಿಕುಂಡದ ಮುಂದೆ ಕುಳಿತಿರುತ್ತಿದ್ದರು. ವೆಂಕಯ್ಯಸ್ವಾಮಿಯವರ ಚಪ್ಪರದವಿಷಯವಾಗಿ ಒಂದು ಹಾಸ್ಯ ವಿವರಣೆ ಇದೆ - ಸ್ವಾಮಿಯವರು ಬೆಳಗ್ಗೆ 10 ಘಂಟೆಯ ಸಮಯದಲ್ಲಿ ಬಿಸಿಲು ತಮ್ಮ ತಲೆಯ ಮೇಲೆ ಬೀಳದಂತೆ ಇರುವುದಕ್ಕೆ, ಒಂದು ಕೋಲನ್ನು ನೆಲದಲ್ಲಿ ನೆಟ್ಟು, ಅದರಮೇಲೆ ಒಂದು ಹೆಣೆದ ಈಚಲಎಲೆಯನ್ನು (ನೆರಳಿಗೋಸ್ಕರ) ಇಡುತ್ತಿದ್ದರು. ಆ ಛತ್ರಿಯ ಕೆಳಿಗೆ ಅರ್ಧ ಗಂಟೆ ನೆರಳು ಇರುತ್ತಿತ್ತು, ಆಮೇಲೆ, ನೆರಳುಹೋಗಿ ಸ್ವಾಮಿಯವರು ಬಿಸಿಲಿನಲ್ಲೇ ಇರುತ್ತಿದ್ದರು. ಅವರು ಅಗ್ನಿಕುಂಡದ ಬಳಿ ಕುಳಿತು ನಿಮಗ್ನರಾಗಿ, ಈ ಪ್ರಪಂಚದಲ್ಲಿರುತ್ತಿರಲಿಲ್ಲ. ಬಿಸಿಲು, ನೆರಳು ಏನೂ ತಿಳಿಯುತ್ತಿರಲಿಲ್ಲ. ಎರಡು-ಮೂರು ದಿನ ಏಕಕಾಲದಲ್ಲಿ ಅಗ್ನಿಕುಂಡದ ಮುಂದೆ ಕುಳಿತಿದ್ದ ಒಂದೆರಡು ದಿನಗಳೂ ಇದ್ದವು. ಹಾಗೆ ನಿಮಗ್ನರಾಗಿದ್ದವರು ಯಾವಗಲೂ ಧುನಿಗೆ ಸಮೀಪದಲ್ಲಿ ಗೋಣೀ ಚೀಲದಮೇಲೆ ಮಲಗಿ ಅವರು ಅಂತರಮುಖರಾಗುತ್ತಿದ್ದರು. ಈ ಸ್ಥಿತಿಯಲ್ಲಿ ಸ್ವಾಮಿಯವರಿಗೆ ಅವರು ಧರಿಸಿದ್ದ ಬಟ್ಟೆಯ ಮೇಲೆ ಯಾವುದೇ ಪ್ರಜ್ಞೆ ಇರುತ್ತಿರಲಿಲ್ಲ. ಅವರು ಕೆಲವು ದಿನಗಳು ಪಂಚೆ ಮತ್ತು ಕೆಲವು ದಿನಗಳು ಕೌಪೀನವನ್ನು ಧರಿಸುತ್ತಿದ್ದರು. ತಮ್ಮ ಜೀವನದ ಕೊನೆಯವರೆಗೂ ಅವರು ತಮ್ಮ ಕಾಲಿಗೆ ಪಾದರಕ್ಷೆಗಳನ್ನು ಧರಿಸಿರಲಿಲ್ಲ.

ಸ್ವಾಮಿಯವರು, ನೆಲ್ಲೂರು ಜಿಲ್ಲೆ ಗೊಲಗಮೂಡಿ ಎನ್ನುವ ತಾಲೂಕಿಗೆ ಬಂದು ಸುಮಾರು 8 ವರ್ಷದ ಕಾಲ ಒಂದೇ ಜಾಗದಲ್ಲಿ ಧುನಿ ಏರ್ಪಡಿಸಿ ದಿನಕ್ಕೆ 5-6 ಬಂಡಿಗಳ ಕಟ್ಟಿಗೆಯನ್ನು ಉರಿಸುತ್ತಿದ್ದರು. ಆ 8 ವರ್ಷ ಅಗ್ನಿಕುಂಡ ಇದ್ದ ಜಾಗದಲ್ಲೇ, ಈಗ, ಸ್ವಾಮಿಯವರ ಸಮಾಧಿ ಮಂದಿರ ನಿರ್ಮಿಸಲಾಗಿದೆ.

ಶ್ರೀರಮಣಯ್ಯ ಎಂಬ ಒಬ್ಬ ಭಕ್ತ, ಎತ್ತುಗಳ ಬಂಡಿಯಲ್ಲಿ, ನಿರಂತರವಾಗಿ

ಅಗ್ನಿಕುಂಡಕ್ಕೆ ಕಟ್ಟಿಗೆಗಳು ಸಂಗ್ರಹಿಸುತ್ತಿದ್ದರು. ಮೋಪೂರು ದಶಯ್ಯ, ವೆಂಕಟಯ್ಯ ಮೊದಲಾದ ಸೇವಕರು ಕಟ್ಟಿಗೆ ಮತ್ತು ಮಂಡಗಳ್ಳಿ ಗಿಡಗಳನ್ನು ಕಡೆದು ತರುತ್ತಿದ್ದರು. ಒಮ್ಮೊಮ್ಮೆ ಸ್ವಾಮಿಯವರು ಕೂಡ ಅವರುಗಳ ಜೊತೆಯಲ್ಲಿ ಕಾಡಿಗೆ ಹೋಗುತ್ತಿದ್ದರು, ಆದರೆ ಏಕಾಂತವಾಗಿ ಇರುತ್ತಿದ್ದರು. ಕೆಲವು ದಿನ, ಕೇವಲ ಕೆಲವು ಮರಗಳನ್ನು ಮಾತ್ರ ಕಡೆಯಲು ತೋರಿಸುತ್ತಿದ್ದರು. ನಿರಂತರ ಅಗ್ನಿಕುಂಡ ಉರಿಸುತ್ತಿದ್ದ ಕಾರಣದಿಂದ, ಕೆಲವು ಮೈಲಿಗಳ ಕಾಡು, ನಿರ್ಮೂಲನವಾಯಿತು. ಸ್ವಾಮಿಯವರು ಹೀಗೆ ಹೇಳುತ್ತಿದ್ದರು, "ಇದಂತಾ ಪಂಟ ಚೇಲವುತಾಯಯ್ಯಾ ಇಕ್ಕಡಂತಾ ಊರವುತುಂದಿ, ಗೋವು ಪಾದಮಂತ ಸ್ಥಲಂ ಚಿಕ್ಕದು" (ಈ ಜಾಗವೆಲ್ಲಾ ಊರಾಗುತ್ತದೆ, ಹಸುವಿನ ಪಾದದಷ್ಟು ಕೂಡ ಸ್ಥಳಸಿಗುವುದಿಲ್ಲ ಎಂದರು). ಸ್ವಾಮಿಯವರು ಹೇಳಿದಮಾತು ಈಗ ನಿಜವಾಗಿದೆ.

ಸ್ವಾಮಿಯವರು, ತಮ್ಮಮನಸ್ಸಿಗೆ ಬಂದಂತೆ ಹಳ್ಳಿಗಳಲ್ಲಿಸಂಚರಿಸುತ್ತಿದ್ದರು. ಸ್ವಲ್ಪಕಾಲದ ನಂತರ, ಅವರು ಕಾಲಿನ ಸ್ವಾಧೀನ ಕಳೆದುಕೊಂಡರು, ಚಿಕಿತ್ಸೆಗೆ ಒಪ್ಪಲಿಲ್ಲ ಏಕೆ ಎಂದು ಕೇಳಿದಾಗ ಹೀಗೆ ಹೇಳಿದರು, "ಪೂರ್ವಂ ನೇನೊಕ ಆವುನು ಕೊಟ್ಟಾನು, ದಾನಿ ಫಲಿತಮೇ ಇದಿ, ಕನುಕ ದಾನಿನಿ ನೇನನುಭವಿಂಚಿ ನಾಕರ್ಮದೊಷಾನ್ನಿ ಪೋಗೊಟ್ಟುಕೋವಾಲಿ. ಕನುಕ ನೇನು ಮಂದು ತೀಸುಕೋನು" (ಹಿಂದೆ ನಾನೊಂದು ಹಸುವನ್ನು ಹೊಡೆದಿದ್ದೆ ಅದರ ಫಲವೇ ಇದು, ನಾನು ಅನುಭವಿಸಬೇಕು, ಆಕರ್ಮದೋಷವನ್ನು ಕಳೆದುಕೊಳ್ಳಬೇಕು) ಎಂದು ಖಂಡಿತವಾಗಿ ಹೇಳಿದರು.

ಸ್ವಾಮಿಯವರು ನಡಿಯುವುದಕ್ಕೆ ಆಗದೇ ಇದ್ದರಿಂದ, ಒಂದೇ ಕಡೆಯಲ್ಲಿ ಕೂತಿರುತ್ತಿದ್ದರು. ಒಂದು ದಿನ ಅವರ ಸೇವಕ ರೋಶಿರೆಡ್ಡಿಯವರಿಗೆ, "ನನ್ನು ತಾಟಾಕುಮೀದ ಕೂರ್ಚೋಪೆಟ್ಟಿ ಕೊಂಚೆಂದೂರಂ ಲಾಕ್ಕುಪೋಯ್ಯಾ" (ನನ್ನನ್ನು ತಾಟಿಎಲೆಯಮೇಲೆ ಕೂರಿಸಿ ಸ್ವಲ್ಪ ದೂರ ಎಳೆದುಕೊಂಡು ಹೋಗಯ್ಯ) ಎಂದರು. ಆತ ಸ್ವಾಮಿ ಹೇಳಿದಂತೆ ಮಾಡಿದರು. ತಾಟಿಎಲೆಯಮೇಲೆ ಕೂರಿಸಿ ಎಳೆಯುವುದರಿಂದ ಸ್ವಾಮಿಯವರಿಗೆ ಕಷ್ಟವಾಗುತ್ತದೆ ಎಂದು 6 ಅಂಗುಲ ಎತ್ತರವಿರುವ 4 ಚಕ್ರಗಳಿರುವ ಬಂಡಿಯಮೇಲೆ ಕೂರಿಸಿ, ಅವರು ಹೇಳಿದ ಜಾಗಕ್ಕೆ ಎಳೆದುಕೊಂಡು ಹೋಗುತ್ತಿದ್ದರು. ಒಮ್ಮೊಮ್ಮೆಯಂತೂ ಬಂಡಿ ಕೆಸರಿನಲ್ಲಿ ಹೂತು, ಮೈಯೆಲ್ಲಾ ಅಲುಗಾಡಿ ತೊಂದರೆ ಆಗುತ್ತಿತ್ತು. ಆಗ ಭಕ್ತರು ಸ್ವಾಮಿಯವರನ್ನು ಒಪ್ಪಿಸಿ, ಡೋಲಿಯಲ್ಲಿ ಕೂರಿಸಿ ಕರೆದುಕೊಂಡು ಹೋಗುತ್ತಿದ್ದರು. ಈರೀತಿಯಾಗಿ ಸ್ವಾಮಿಯವರನ್ನು ಅವರ ಮಹಾಸಮಾಧಿಗೆ 2 ವರ್ಷಗಳು ಮುಂದಿನವರಗೂ, ನೆಲ್ಲೂರು, ಪೊದಲಕೂರು, ಚಿಟ್ಟಿಪಾಳೆಂ, ಪೆನ್ನಬದ್ವೇಲು, ಕುಲ್ಲೂರು, ರಾಜುಪಾಳೆಂ, ಸೋಮಶೀಲ, ಕೋಟಿತೀರ್ಥಂ, ಇನುಕುರ್ತಿ, ಮುದಿಗೇಡು, ಡೇಗಪೂಡಿ, ತಲುಪೂರು, ಕಲಿಚೇಡು, ನವಕೋಟಿಸಿದ್ಧಲಯ್ಯಕೋನ, ಚರ್ಲೋಪಲ್ಲಿ, ತಿರುಪತಿ, ಕಂಚಿ, ಸಂಗಂ, ನೆಲ್ಲೂರು, ಪೆನಪರ್ತಿ, ಮೈಪಾಡು, ಇಂದುಕೂರುಪೇಟ, ಗೊಲಗಮೂಡಿ, ಮುಂತಾದ ಪ್ರಾಂತಗಳಲ್ಲಿ ಯಾವಾಗಲೂ ಸಂಚರಿಸುತ್ತಿದ್ದರು. ಅವರು ಯಾವತ್ತೂ ಗೃಹಸ್ಥರನ್ನು ಆಶ್ರಯಿಸಲಿಲ್ಲ. ದೇವಾಲಯಗಳು, ಪಾಳುಬಿದ್ದ ಮನೆ, ಚಾವಡಿ, ಪಾಠಶಾಲೆ, ಬೇವಿನಮರ,

ಮೊದಲಾದವುಗಳ ಆಶ್ರಯ ಪಡೆಯುತ್ತಿದ್ದರು. ನಿಷ್ಕಪಟವಾದ ಪ್ರೀತಿ, ಭಕ್ತಿಶ್ರದ್ಧೆಯಿಂದ, ಗೃಹಸ್ಥರು ಪೂರ್ಣಹೃದಯದಿಂದ ಆಹ್ವಾನಿಸಿದರೆ, ಅವರ ಮನೆಗಳಿಗೆ ಹೋಗುತ್ತಿದ್ದರು, ಆದರೆ, ಮನೆಯ ಹೊರಗೆಡೆ ಇದ್ದ ಕಟ್ಟೆಯಮೇಲಾಗಲಿ ಅಥವಾ, ವರಾಂಡದಲ್ಲಾಗಲಿ ಇರುತ್ತಿದ್ದರು. ಮಳೆ ಬಂದಾಗ, ಸೂರಿನ ಕೆಳಗೆ ಮಲುಗುತ್ತಿದ್ದರಾಗಲಿ, ಮನೆಯ ಒಳಗೆ ಬರುತ್ತಿರಲಿಲ್ಲ. ಯಾವಾಗಲಾದರೂ, ಮನೆ ಒಳಗೆ ಬಂದು ಧುನಿ ಏರ್ಪಡಿಸಿದರೆಂದರೆ ಆ ಮನೆಯವರು ತುಂಬಾ ಅದೃಷ್ಟವಂತರು ಎಂದು ಭಾವಿಸುತ್ತಿದ್ದರು.

ಸ್ವಾಮಿಯವರು ಯಾರ ಸಹಾಯವೂ ಇಲ್ಲದೆ ಸ್ವತಂತ್ರರಾಗಿ ನಡೆಯುತ್ತಿದ್ದ ಕಾಲದಲ್ಲಿ, ಹಸಿವಾದಾಗ, ಭಗವಂತ ತೋರಿಸಿದ ಮನೆಗೆ ಹೋಗಿ, ಆ ಮನೆಯವರು ಕೊಟ್ಟಿದ್ದನ್ನು ತಿಂದು ಹೊರಟು ಹೋಗುತ್ತಿದ್ದರು. ಕೆಲವು ಮನೆಗಳಲ್ಲಿ ಅಡಿಗೆ ಇದ್ದರೂ ಇಲ್ಲವೆಂದು ಹೇಳಿದಾಗ, ಅವರ ಮನೆಯಲ್ಲಿದ್ದ ಪ್ರತಿಯೊಂದು ಅಡಿಗೆಯ ಹೆಸರು ಹೇಳುತ್ತಿದ್ದರು. ಆಮನೆಯವರು, ಈ ಹುಚ್ಚು ವೆಂಕಯ್ಯ ಸಾಮಾನ್ಯ ಮನುಷ್ಯ ಅಲ್ಲ ಎಂದುಕೊಂಡು ಭಿಕ್ಷೆ ಕೊಡುತ್ತಿದ್ದರು. ಆ ಮನೆಯವರಿಗೆ, ನೂರರಷ್ಟು ಪ್ರತಿಫಲ ದೊರೆಯುತ್ತಿತ್ತು.

ಕಾಡಿನಲ್ಲಿ ಸಂಚರಿಸುತ್ತಿದ್ದಾಗ, ಕಾಲಿಗೆ ಮುಳ್ಳು ಚುಚ್ಚಿಕೊಂಡರೆ ತೆಗಿಯುವುದಕ್ಕಾಗಿ ನೆಗ್ಗಿನ ಮುಳ್ಳು, ಸೂಜಿ, ದಬ್ಬಳ, ಚಾಕು ತಮ್ಮೊಂದಿಗೆ ಇಟ್ಟುಕೊಂದಿರುತ್ತಿದ್ದರು. ಅವರ ಕಾಲಿನಿಂದ ಒಮ್ಮೊಮ್ಮೆಯಂತೂ, ಭಕ್ತರು 2 ಅಂಗುಲದ ಮುಳ್ಳನ್ನೂ ತೆಗಿಯುತ್ತಿದ್ದ ಸಂದರ್ಭಗಳೂ ಇದ್ದವು, ಅದನ್ನ ನೋಡಿದವರೆಲ್ಲರೂ ತುಂಬಾ ಆಶ್ಚರ್ಯ ಪಡುತ್ತಿದ್ದರು.

ಸ್ವಾಮಿಯವರು, ಧುನಿ ಇಟ್ಟುಕೊಂಡಾಗ, ಧುನಿಯಹತ್ತಿರ, 4 ಅಂಗುಲದ ದೂರದಲ್ಲಿ ಮಲುಗುತ್ತಿದ್ದರು. ಅಷ್ಟು ಹತ್ತಿರದಲ್ಲಿ ನಾವು ಮಲಗಿದರೆ ಆ ಶಾಖ ನಮಗೆ ತಡೆದುಕೊಳ್ಳಲು ಸಾಧ್ಯವೇ?

ರೈತರು ತಮ್ಮ ತೋಟದ ಹತ್ತಿರ, ಒಂದು ಹಳ್ಳತೋಡಿ, ಪೆನ್ನ ನದಿ ನೀರನ್ನು ಅದಕ್ಕೆ ಬಿಟ್ಟು, ಏತದ ಮೂಲಕ, ತಮ್ಮತೋಟಕ್ಕೆ ನೀರನ್ನು ಬಿಟ್ಟುಕೊಳ್ಳುತ್ತಿದ್ದಾಗ, ಸ್ವಾಮಿಯವರು ಅಲ್ಲಿಗೆ ಹೋಗಿ, ಆ ಕಾಲುವೆಯ ನೀರನ್ನು, ಅರ್ಧ ನೀರನ್ನು ಪೆನ್ನಾಗೆ ಬಿಡುತ್ತಿದ್ದರು, ಅರ್ಧ ನೀರನ್ನು ತೋಟಕ್ಕೆ ಬಿಡುತ್ತಿದ್ದರು. ನೀರು ತುಂಬಾ ಹೆಚ್ಚಾಗಿ ತೋಟಕ್ಕೆ ಬರುತ್ತಿತ್ತು.

ಒಮ್ಮೆ ಸ್ವಾಮಿಯವರು ಉನ್ಮತ್ತಾವಸ್ಥದಲ್ಲಿದ್ದಾಗ, ಒಂದು ಜಾಗದಲ್ಲಿ ಕಳ್ಳತನವಾಯಿತು. ಆ ಕಳ್ಳರನ್ನು ಹುಡುಕುತ್ತಾ ಪೋಲೀಸರು, ಸ್ವಾಮಿಯವರನ್ನು ನೋಡಿ, ಅವರನ್ನು ಅನುಮಾನಿಸಿ, ಪೋಲೀಸು ಠಾಣೆಯಲ್ಲಿ ಎರಡು ದಿನ ಇಟ್ಟುಕೊಂಡಿದ್ದರು. ಆ ಎರಡು ದಿನ ಮಾತಿಲ್ಲದೇ ಕುಳಿತುಕೊಂಡಿದ್ದರು. ನಂತರ, ಪೋಲೀಸರು ಅವರನ್ನು ಬಿಟ್ಟುಬಿಟ್ಟರು. ಅಲ್ಲಿಂದ ನೇರವಾಗಿ ರಾಜಪದ್ಮಾಪುರದಲ್ಲಿದ್ದ ತನ್ನ ತಂಗಿ ಮಂಗಮ್ಮನವರ ಹತ್ತಿರ ಹೋಗಿ ಎಲ್ಲಾ ಹೇಳಿಕೊಂಡು ಭೋರನೆ ತುಂಬಾ ದುಃಖ ಪಟ್ಟರು. ಸ್ವಾಮಿಯವರನ್ನು ನೋಡಿ, ಮಂಗಮ್ಮ ಕೂಡ ಅತ್ತರು. ಅಲ್ಲಿದ್ದವರಿಗೆ ಏನೂ ಅರ್ಥವಾಗಲಿಲ್ಲ. ವಿಷಯ ತಿಳಿದಮೇಲೆ, "ನಿನ್ನನ್ನು ಬಂಧಿಸಿದವರನ್ನು,

ಕರೆದುಕೊಂಡುಬಂದು ಚೆನ್ನಾಗಿ ಹೊಡೆಯುತ್ತೇವೆ" ಎಂದು ಸಮಾಧಾನ ಮಾಡಿದಮೇಲೆ, ಚಿಕ್ಕ ಮಗುವಿನಂತೆ ಅಳು ನಿಲ್ಲಿಸಿದರು.

ಸ್ವಾಮಿಯವರು, ಅಲ್ಲಲ್ಲಿ ತಿರುಗಿ ಸಾಯಂಕಾಲದ ಹೊತ್ತಿಗೆ ತಂಗಿಯಮನೆಗೆ ಊಟಮಾಡಲು ಬರುತ್ತಿದ್ದರು. ತಂಗಿಯ ಮೆನೆಯಲ್ಲಿ ಅವಳ ಭಾವ ಅಥವ ಅವಳ ಮೈದುನರು, ಒಂದು ವೇಳೆ, "ವೆಂಕಣ್ಣ ವ್ಯರ್ಥವಾಗಿ ಊಟ ಮಾಡುತ್ತಿದ್ದಾನೆಂದು" ತಂಗಿಯ ಭಾವ, ಮೈದುನರು, ಅಂದುಕೊಂಡರೂ, ಅಲ್ಲಿ ಒಂದು ಕ್ಷಣವೂ ಇರುತ್ತಿರಲಿಲ್ಲ. ಸ್ವಾಮಿಯವರು ಬಂದರೆ ಅವರ ತಂಗಿ ಮೌನವಾಗಿ ಊಟಕೊಟ್ಟು ಬಾಗಿಲು ಹಾಕಿಕೊಂಡು ನಾವು ಹೊರಗೆ ಹೋದರೆ ಊಟಮಾಡುತ್ತಾರೆ ಎಂದು ಹೊರಗೆ ಹೋಗುತ್ತಿದ್ದರು. ಯಾರಾದರೂ ಅವರ ಹತ್ತಿರ ಇದ್ದರೆ "ನೀವು ಹೊರಗೆ ಹೋಗಿ, ಊಟಮಾಡುತ್ತೇನೆ" ಎನ್ನುತ್ತಿದ್ದರು. ಸ್ವಾಮಿಯವರು ಸಂಜೆಯವರೆಗೆ ಹೊಲದಲ್ಲಿ ಮತ್ತು ಕಾಡಿನಲ್ಲಿ ತಿರುಗಿ, ಮನೆಗೆ ಬರುವಾಗ, 2 ಸೇರು ಕಡಲೆಕಾಯಿ ಬೀಜವನ್ನು ತಂಗಿಗೆ ಕೊಟ್ಟು, ಊಟಮಾಡಿ ಹೋಗುತ್ತಿದ್ದರು. ಯಾರಿಗೂ ಋಣ ಇರಬಾರದೆಂದು ಸ್ವಾಮಿಯವರು ಹಾಗೆ ಮಾಡುತ್ತಿದ್ದರೇನೋ ನಮಗೆ ತಿಳಿಯದು.

ಸ್ವಾಮಿಯವರು, ತಮ್ಮ ಮನೆಯನ್ನು ಬಿಟ್ಟಮೇಲೆ, ಮತ್ತೆ ಸ್ವಗ್ರಾಮ ಆದ ನಾಗವೆಲ್ಲಟ್ಟೂರಿಗೆ ಬರಲಿಲ್ಲವಂತೆ. ಒಂದು ಬಾರಿ ಪಕ್ಕದ ಗ್ರಾಮದಲ್ಲಿದ್ದಾಗ ಅವರ ತಮ್ಮ ಹೋಗಿ ಕರೆದಾಗ ಬಂದರಂತೆ. ಅವರ ತಮ್ಮ ಜೋಳದ ಪೈರನ್ನು ಕತ್ತರಿಸುತ್ತಿದ್ದಾಗ, ಸ್ವಾಮಿಯವರು ಕೂಡ "ಚಾಕಲಿ ಯೋಗಂ - ಮಂಗಲಿ ಯೋಗಂ" ಎಂದು ಉಚ್ಚರಿಸುತ್ತಾ ಇಬ್ಬರು ಮನುಷ್ಯರು ಕತ್ತರಿಸುವ ಪೈರನ್ನು, ತಾವು ಒಬ್ಬರೇ ಕತ್ತರಿಸಿದರಂತೆ. 4 ದಿನ ಕತ್ತರಿಸುವ ಫಸಲನ್ನು 2 ದಿನದಲ್ಲೆ ಕತ್ತರಿಸಿದರಂತೆ.

"ಸ್ವಾಮಿ" ಎಂದು ಪ್ರಖ್ಯಾತರಾದಮೇಲೆ, ಇವರು ಇರುವ ಜಾಗ ತಿಳುದುಕೊಂಡು, ಅವರ ತಂದೆ ಮತ್ತು ತಾಯಿ, ಅವರಿಗೆ, ವಿವಿಧ ತಿಂಡಿಗಳನ್ನು ತಂದರು. ಸ್ವಾಮಿಯವರು ಅವರ ಜೊತೆಯಲ್ಲಿ ಇದ್ದ ಎಲ್ಲರಿಗೂ ಆ ತಿಂಡಿ ಯನ್ನು ಸಮವಾಗಿ ಹಂಚುವುದಕ್ಕೆ ಹೇಳಿ ತಾವೂ ಸ್ವಲ್ಪ ಸೇವಿಸಿದರು. ಒಂದು ದಿನ ಮಂಗಮ್ಮನವರ ಮನೆಯಲ್ಲಿ ಊಟಮಾಡಿ ಹೊರಟು ಮತ್ತೆ ತಕ್ಷಣ ಬಂದು, "ಬಾವಾ ಮಂಗಮ್ಮ ಏದೋ ಮಂದು ಪೆಟ್ಟಿಂದಿ, ಒಳ್ಳಂತಾ ಸೂದುಲತೋ ಗುಚ್ಚಿನಟ್ಟು ಮಂಟಲು, ಚುರುಕಲುಗಾ ಉಂದಿ, ಅನ್ನಂ ಪೆಟ್ಟಂಡಿ" (ಭಾವ, ಮಂಗಮ್ಮ ಮದ್ದು ಹಾಕಿದ್ದಾರೆ, ಮೈಯೆಲ್ಲ ಉರಿಯುತ್ತಿದೆ, ಸೂಜಿಯಲ್ಲಿ ಚುಚ್ಚಿದಂತೆ ನೋವಾಗುತ್ತದೆ, ಸ್ವಲ್ಪ ಅನ್ನವನ್ನು ಕೊಡಿ) ಎಂದರು. ಆ ಹೊತ್ತಿಗೆ ಎಲ್ಲರ ಊಟವು ಮುಗಿದು, ಮಲಗಿದ್ದರು. ವೆಂಕಯ್ಯ, ಈ ಹೊತ್ತಿನಲ್ಲಿ ಅನ್ನಯೆಲ್ಲಿ ಇರುತ್ತದೆ? ಬೆಳಗ್ಗೆ ಅಡಿಗೆ ಮಾಡಿ ಬಡಿಸುತ್ತೆವೆ" ಅಂತ ಹೇಳಿದರು. ಹಾಗಾದರೆ, ಭತ್ತ ಆಗಲಿ, ರಾಗಿಯಾಗಲಿ ಕೊಡಿ ಎಂದರು. 2 ಸೇರು ರಾಗಿ ತೆಗೆದುಕೊಂಡು ಹೋಗಿ, ತಾವು ತಿನ್ನದೆ, ಇರುವೆಗಳಿಗೆ ಹಾಕಿದರು. ಇರುವೆಗಳ ಹಸಿವು ಹೋದರೆ, ತಮ್ಮ ಹಸಿವು ತೀರುತ್ತದೆ ಎಂದಿರಬಹುದು ಅಲ್ಲವೇ?

ಬದ್ವೇಲು ಗ್ರಾಮದ ಹತ್ತಿರ ಇದ್ದ ಅಂಕಾಳಮ್ಮ ಬೋಟು ಎಂಬ ಜಾಗದಲ್ಲಿ ಪೆನ್ನಾ

ನದಿ 20 ಅಡಿ ಅಗಲದಲ್ಲಿ ಹರಿಯುತ್ತಿತ್ತು. ಸ್ವಾಮಿಯವರು, ಆ ನದಿಗೆ ಸ್ವತಃ ಮರಳು ಹಾಕಿ 5 ಅಡಿಯ ಎತ್ತರದ ಕಟ್ಟೆಯನ್ನು ಕಟ್ಟಿದರು. ಆ ಸಮಯದಲ್ಲಿ, ಜಯರಾಮರಜು ಮತ್ತು ವೆಂಕಯ್ಯ, ಸ್ವಾಮಿಯವರಿಗೆ ಮರಳು ಎತ್ತಿ ಸಹಾಯವನ್ನು ಮಾಡಿದರು. ಪೆನ್ನಾ ನದಿ ಪ್ರವಾಹನಿಂತು, ನೀರು ಒಂದು ಜಾಗದಲ್ಲಿ ನಿಂತಾಗ, ಆ ನೀರಿನಿಂದ ಎರಡು ಅಡಿ ಅಗಲ ಕಾಲುವೆ ಅಗೆದು, ಆ ನೀರನ್ನು, ಪ್ರವಾಹವಾಗುತ್ತಿರುವ ದಿಕ್ಕಿಗೆ ವ್ಯತಿರೇಕ ದಿಕ್ಕಿನಲ್ಲಿ ನೀರು ಹೋಗುವಂತೆ ಮಾಡಿ, ಸ್ವಲ್ಪ ದೂರ ಹೋದನಂತರ, ಮತ್ತೆ ಆ ನೀರನ್ನು ನದಿ ಪ್ರವಾಹಕ್ಕೆ ಸೇರುವಂತೆ ಮಾಡುತ್ತಿದ್ದರು. ಆ ಚಿಕ್ಕ ಕಾಲುವೆ ಮತ್ತೆ ನದಿ ಪ್ರವಾಕ್ಕೆ ಸೇರುವ (Intersection) ಜಾಗದಲ್ಲಿ ಒಂದು ಕೋಲನ್ನು ಭೂಮಿಯೊಳಗೆ ನೆಟ್ಟಿ ಅದಕ್ಕೆ, ಬೆಂಕಿಯನ್ನು ಹಚ್ಚುತ್ತಿದ್ದರು. ಯಾರನ್ನೂ ಅದರ ಹತ್ತಿರ ಬರುವುದಕ್ಕೆ ಬಿಡುತ್ತಿರಲಿಲ್ಲ.

ಆ ನೀರನ್ನು ಮಡಿಕೆಯಲ್ಲಿ ತೆಗೆದು, ಆ ಬೆಂಕಿಯಸುತ್ತಲೂ ಹಾಕುತ್ತಿದ್ದರು. ಸೇವಕರಿಗೆ "ಅಯ್ಯ ಈ ನೀಳ್ಳ ವಿಲುವ ಎಂತನುಕುನ್ನಾವು? ತುಲಂ ಮುನ್ನೂರು ಕೋಟ್ಲು. ಈ ರೋಜು ಲೋಕಂ ಅಂತಟಿಕೀ ಖರ್ಚುಕು ಪೋನು ಇಂತ ಡಬ್ಬು ಮಿಗಿಲಿಂದಿ" (ಅಯ್ಯ, ಈ ನೀರಿನಬೆಲೆ ಎಷ್ಟುಎಂದುಕೊಂಡರಿ? ಒಂದು ತುಲಕ್ಕೆ ಮುನ್ನೂರುಕೋಟಿ. ಈದಿನ ಲೋಕದ ಖರ್ಚುಹೋಗಿ ಇಷ್ಟು ದುಡ್ಡು ಮಿಕ್ಕಿದೆ) ಎಂದು ಹೇಳುತಿದ್ದರು. ಇದೆಲ್ಲ ಏತಕ್ಕೆ ಸ್ವಾಮಿ ಎಂದರೆ, "ಸೀತಾಳೆಸಿಡುಬು, ಕಾಲರಾ ಮುಂತಾದ ವ್ಯಾಧಿಗಳಿಂದ ಪಾಪಗಳು ಕಡಿಮೆ ಆಗುವುದಕ್ಕಯ್ಯ" ಎಂದು ಹೇಳುತ್ತಿದ್ದರು.

ಕೆಲವೊಮ್ಮೆಯಂತೂ ಸೇವಕರ ಹತ್ತಿರ ಹಣ ಇರುತ್ತಿರಲಿಲ್ಲ. "ಇಪ್ಪುಡೇ ತಿರುವಳ್ಳೂರು ಪೋವಾಲಿ ಕದಲಂಡಿ"(ಈಗಲೇ ತಿರುವಳ್ಳೂರಿಗೆ ಹೋಗಬೇಕು ಹೊರಡಿ) ಎನ್ನುತ್ತಿದ್ದರು. ನೆಲ್ಲೂರು, ಜೊನ್ನವಾಡ, ಕಂಚಿ, ಮೊದಲಾದ ದೇವಸ್ಥಾನಗಳಿಗೆ ಹೋಗಬೇಕು ಎಂದು ಹೇಳುತ್ತಿದ್ದರು. ಹಣ ಇಲ್ಲಾ ಸ್ವಾಮಿ ಎಂದರೆ, "ವಸ್ತುಂದಿ ಕದಲಂಡಯ್ಯ"(ಬರುತ್ತದೆ ಹೊರಡಿ) ಎಂದು ಆತುರ ಪಡಿಸುತ್ತಿದ್ದರು. ಸ್ವಾಮಿಯವರು ಹೇಳಿದಂತೆಯೇ, ಯಾರೋ ಭಕ್ತರು ಬಂದು, ಪ್ರಯಾಣದ ಖರ್ಚಿಗೆ ಬೇಕಾದ ಹಣವನ್ನು ಸಮರ್ಪಿಸಿ ಹೋಗುತ್ತಿದ್ದರು.

ಒಂದು ದಿನ, ಮಟಮಟ ಮಧ್ಯಾಹ್ನ ಸೇವಕರು, ಅಡುಗೆ ಮಾಡುತ್ತಿದ್ದ ಸಮಯದಲ್ಲಿ, "ವೆಂಟನೇ ಕದಲಂಡಿ, ಒಕ್ಕ ಕ್ಷಣಂ ಉಂಡಕೂಡದು" (ಈಗಲೆ ಹೊರಡಬೇಕು, ಒಂದು ಕ್ಷಣವೂ ಇಲ್ಲಿರಬಾರದು) ಎಂದು ಸೇವಕರು ಹೊರಡುವರಗೂ ಸುಮ್ಮನಿರಲಿಲ್ಲ. ಅಡಿಗೆ ಆಗುತ್ತಿದೆ ಎಂದು ಸೇವಕರು ಹೇಳಿದರೆ, "ಅನ್ನಂ ವಸ್ತುಂದಿಲೆ ಪದಂಡಯ್ಯ" (ಅನ್ನ ಬರುತ್ತದೆ, ಹೊರಡಿ) ಎನ್ನುತ್ತಿದ್ದರು. ಎಲ್ಲರೂ, ಸ್ವಾಮಿಯಾಜ್ಞೆ ಯಂತೆ, ಬಸ್ಸು ನಿಲ್ದಾಣಕ್ಕೆ ಬಂದರು. ಪೊದಲಕೂರಿಗೆ ಹೋಗುವ ಬಸ್ಸು ಬಂದಿತು, "ಇದಿ ಕಾದಯ್ಯ ಮನ ಬಸ್ಸು ತರುವಾತ ಬಸ್ಸುಕು ಪೋದಾಂ" (ಈ ಬಸ್ಸ ಅಲ್ಲ ನಾವು ಹೋಗಬೇಕಾದದ್ದು ಆಮೇಲಿನ ಬಸ್ಸಿಗೆ ಹೋಗೋಣಾ) ಎಂದರು. ಈ ಹೊತ್ತಿಗೆ ಊಟವನ್ನು ಮಾಡಿ ಬರಬಹುದಾಗಿತ್ತಲ್ಲ ಎಂದು ಸೇವಕರು ಹೇಳಿದಾಗ, "ಅನ್ನಂ ವಸ್ತುಂದಯ್ಯ ಉಂಡಂಡಿ" (ಊಟ ಬರುತ್ತದೆ ಸುಮ್ಮನಿರಿ) ಎಂದು ಹೇಳಿದರು. ಹಣ ಇಲ್ಲ ಸ್ವಾಮಿ, ಎಂದು ಹೇಳಿ

ದಾಗ, "ಪೈವಾಳ್ಳು ಪಂಪುತಾರುಲೇ" (ಮೇಲಿನವರು ಕಳುಹಿಸುತ್ತಾರೆ ಬಿಡಿ) ಎಂದರು. ಅವರು ಹೇಳಿದಂತಯೇ, ಸ್ವಲ್ಪ ಹೊತ್ತಿನ ನಂತರ, ಸ್ವಾಮಿಯವರ ದರ್ಶನಕ್ಕಾಗಲಿ, ಪೊಟ್ಟೆಪಾಳೆಂ ಆದಿಲಕ್ಷ್ಮಿಯವರು ಕಾರಿನಲ್ಲಿ ಬಂದು ಬುಟ್ಟಿಯಲ್ಲಿ ದೋಸೆ, ವಡೆ, ಪೊಂಗಲು, ಪುಳಿಯೋಗರೆ ಮುಂತಾದ ಭೋಜನ ವನ್ನು ತೃಪ್ತಿಯಾಗುವಷ್ಟು ನೀಡಿ, ಅಗತ್ಯಕ್ಕಿಂತ ಹೆಚ್ಚಾಗಿ ದಕ್ಷಿಣೆಯನ್ನು ಸಮರ್ಪಿಸಿ ಹೊರಟುಹೋದರು.

ಕೆಲವೊಮ್ಮೆ ಒಂದೇ ಊರಿನಲ್ಲಿ, ಎರಡು ಮೂರು ಜಾಗದಲ್ಲಿ ಮೊಕ್ಕಾಂ ಬದಲಾಯಿಸುತ್ತಿದ್ದರು. ಸ್ವಾಮಿಯವರು ಒಂದು ದಾರಿಯಲ್ಲಿ ಹೋಗಬೇಕೆಂದು ನಿರ್ಧರಿಸಿದರೆ, ಆದಾರಿ ಎಷ್ಟೆ ಕಷ್ಟವಾಗಲಿ, ಹೋಗಲೇ ಬೇಕಗುತ್ತಿತ್ತು. ಊಟ ಮಾಡಲಿ, ಬಿಡಲಿ, ಬಿಸಿಲು ಇರಲೀ, ಮಳೆ ಇರಲೀ ಹೋಗಲೇಬೇಕಾಗುತ್ತಿತ್ತು. ಸ್ವಾಮಿಯವರು ನಡೆಯುತ್ತಿದ್ದ ಕಾಲದಲ್ಲೂ ಇದೇ ಕ್ರಮ.

ಕಾಡಿನಲ್ಲಿ ಸ್ವಾಮಿಯವರು, ಏನು ಮಾಡುತ್ತಿದ್ದಾರೆ ಎಂದು ನೋಡಲು ಅನೇಕರು ಪ್ರಯತ್ನಿಸಿದರು. ತಮ್ಮನ್ನು ಜನ ಹಿಂಬಾಲಿಸುತ್ತಿದ್ದರೆಂದು ತಿಳಿದರೆ ತಕ್ಷಣವೇ ಮುಳ್ಳಿನಮೇಲೆ ಹಾಗು, ಅಡ್ಡಾದಿಡ್ಡಿಯಾಗಿ ನಡೆಯುತ್ತಿದ್ದರು. ಆ ಮುಳ್ಳಿನಮೇಲೆ ನಡೆಯಲಾರದೆ, ಹಿಂಬಾಲಿಸಿದ ಜನ, ವಾಪಸ್ಸು ಹೋಗುತ್ತಿದ್ದರು. ಹಲ್ಲುಜ್ಜುವುದು, ಬಾಯನ್ನು ಮುಕ್ಕಳಿಸುವುದು, ಮಾಡುತ್ತಿರಲಿಲ್ಲ. ಬಾಯಲ್ಲಿ ಅಗೆಯುತ್ತಿದ್ದ ಹೊಗೆ ಸೊಪ್ಪನ್ನು ಉಗುಳಿ, ಗಂಜಿ ಕುಡಿಯುತ್ತಿದ್ದರು.

ಒಮ್ಮೆ ನನ್ನ (ಗ್ರಂಥ ರಚಯಿತ) ಉಬ್ಬಸ, ಶ್ರೀ ಸ್ವಾಮಿಯ ಬಳಿ ಕುಳಿತ ತಕ್ಷಣವೇ ನಿವಾರಣೆ ಆಯಿತು. ಆದ್ದರಿಂದ, ಆನಂದೋತ್ಸಾಹದಿಂದ ನಾನು ಪ್ರತಿಯೊಬ್ಬರಿಗೂ, ಸ್ವಾಮಿಯವರ ಬಗ್ಗೆ ಹೇಳಲು ಪ್ರಾರಂಭಿಸಿದೆ. ಆಗ, ಸ್ವಾಮಿಯವರು ಒಂದು ದಿನ ಏಕಾಂತದಲ್ಲಿ ನನಗೆ "ಎಟ್ಲಾಂಟೆ ಅಟ್ಲಾ ಮಾಟ್ಲಾಡುತಾವೇಮಿ"(ಹೇಗೆಂದರೆ ಹಾಗೆ ಮಾತನಾಡುತ್ತೀಯ ಏಕೆ?) ಎಂದರು. ಸ್ವಾಮಿಯವರ ಈ ವಾಕ್ಯದಿಂದ ನನಗೆ ಅಧಿಕವಾಗಿ ಹೊಗಳುವುದು, ಅಥವ ಮಾತನ್ನಾಡುವುದು ಬೇಕಿಲ್ಲ ಎಂದು ಆತ್ಮ ಬೋಧನೆ ಮಾಡಿದರು. ಮತ್ತೊಬ್ಬ ಗೊಲಗಮೂಡಿಯಲ್ಲಿದ್ದ ವ್ಯಕ್ತಿಗೆ "ಅಯ್ಯಾ! ನನ್ನು ಗುರಿಂಚಿ ಕಥಲು ಕಥಲುಗ ಚೆಪ್ಪುಕುಂಟುನ್ನಾರೇ ಅದಿ ತಪ್ಪುಕದಯ್ಯ"? (ಅಯ್ಯಾ! ನನ್ನ ವಿಚಾರ ಕಥೆ ಕಥೆ ಗಳಾಗಿ ಹೇಳುತ್ತಿದ್ದೀರಲ್ಲ ಅದು ತಪ್ಪಲ್ಲವೇ?) ಎಂದರು. ಇನ್ನೊಮ್ಮೆ "ವೀಳ್ಳಪ್ಪುಡೆ ಮೂಟವಿಪ್ಪಿ ಬಂಡ್ಲಕೆತ್ತುತುನ್ನಾರು ವದ್ದನಿ ಚೆಪ್ಪಮ್ಮ" (ಇವರುಗಳು ನನ್ನನ್ನು ಹೊಗಳಿ ಅಟ್ಟಕ್ಕೆ ಏರಿಸುತ್ತಿದ್ದಾರೆ ಅದು ಬೇಡ ಎಂದು ಹೇಳಮ್ಮ) ಎಂದು ತುಳಸಮ್ಮನೊಂದಿಗೆ ಹೇಳಿದರಂತೆ.

ಮೇಲೆ ಹೇಳಿದಂತೆ ತಮ್ಮ ಮಹಿಮೆ ಗುಟ್ಟಾಗಿ ಇಡುವ ಉದ್ದೇಶ್ಯದಿಂದ ಸ್ವಾಮಿಯವರು, ಹಾಗೆ ಮಾತನ್ನಾಡುತ್ತಿದ್ದರು. ಅದೂ ಅಲ್ಲದೆ, ಸ್ವಾಮಿಯವರು, ಕೋಟಿ, ಹೆಡೆ, ರಾಶಿ, ಎಂದು ತುಂಬ ರಹಸ್ಯವಾದ ರೀತಿಯಲ್ಲಿ ಜನಗಳಿಗೆ ಅರ್ಥವಾಗದಂತೆ ಮಾತನ್ನಾಡುತ್ತಿದ್ದರು. ಜನಗಳಿಗೆ ಇವರಮಾತು ಅರ್ಥವಾಗದೆ, ಸ್ವಾಮಿಯವರ ದರ್ಶನಕ್ಕೆ ಮತ್ತೆ ಬರುತ್ತಿರಲಿಲ್ಲ.

ಆಗಾಗ, ಸ್ವಾಮಿಯವರು, ಆಚಾರ, ನಿಯಮಕ್ಕೆ ವಿರುದ್ಧವಾಗಿ, ಅವರ ಮನಸಿಗೆಬಂದಂತೆ, ಕ್ಷೌರ ಮಾಡಿಸುಕೊಳ್ಳುತ್ತಿದ್ದರು. ಎಲ್ಲರೂ ಕ್ಷೌರಿಕನಿಗೆ 50 ಪೈಸ ಕೊಟ್ಟರೆ, ಸ್ವಾಮಿಯವರು, 1 ಅಥವ 2 ರೂಪಾಯಿ ಕೊಡುತ್ತಿದ್ದರು. 1980 ರ ನಂತರ ಸ್ವಾಮಿಯವರು ಕೇಳದಿದ್ದರೂ, ಅವರ ಸೇವಕರು, ಅವರ ತಲೆಯನ್ನು ಪೂರ್ತಿ ಕ್ಷೌರ ಮಾಡಿಸಿ, ಮೀಸೆಯನ್ನು ತೆಗಿಸುತ್ತಿದ್ದರು. ಸ್ವಾಮಿಯವರ ಭಕ್ತ, ಬರಿಗೆಲ ನಾಗಯ್ಯನವರು ಪ್ರತ್ಯೇಕವಾಗಿ ಈ ಸೇವೆ, ತಾವೇ ಮಾಡುತ್ತಿದ್ದರು. ಸ್ವಾಮಿಯವರು, ಯುವಕರಾಗಿದ್ದಾಗ, ಅವರಿಗೆ ಗುಂಗುರು ಕೂದಲು ಮತ್ತೆ ಮೀಸೆಯು ಇತ್ತು.

ಸ್ವಾಮಿಯವರು ಮಹಾಸಮಾಧಿಗೆ ಒಂದು ವರ್ಷ ಮೊದಲು, ನಿರಂತರವಾಗಿ ತಮ್ಮ ಎರಡು ಹಸ್ತಗಳ ಬೆರಳುಗಳನ್ನು ಪರಸ್ಪರ ಘಟ್ಟಿಯಾಗಿ ಜೋಡಿಸುಕೊಂಡಿರುತ್ತಿದ್ದರು. ಸ್ವಾಮಿಯವರು ಎಷ್ಟು ಅಸ್ವಸ್ಥರಾಗಿದ್ದರೂ, ಅಥವಾ ಯೋಗನಿದ್ರೆಯಲ್ಲಿದ್ದರೂ, ಅವರು, ಶೌಚಕ್ರಿಯೆ ಹಾಸಿಗೆಯಮೇಲಾಗಲಿ ಅಥವ ಕೂತ ಜಾಗದಲ್ಲಾಗಲಿ ಮಾಡುತ್ತಿರಲಿಲ್ಲ. ಶ್ರೀ ರೋಸಿರೆಡ್ಡಿಯವರು, ಸ್ವಾಮಿಯವರ ಮೂತ್ರವನ್ನು ಅತ್ಯಂತ ಪವಿತ್ರವೆಂದು ಪರಿಗಣಿಸಿ ಕುಡಿಯುತ್ತಿದ್ದರು. ಆದ್ದರಿಂದಲೇ ರೋಶಿರೆಡ್ಡಿಯವರು, ದೃಷ್ಟಿಹೀನರಾಗಿದ್ದರೂ, ಅನ್ನವನ್ನು ಬಿಟ್ಟು, ಅವಲಕ್ಕಿ ಮತ್ತು ದ್ರವ ಆಹಾರದೊಂದಿಗೆ ಜೀವಿಸುತ್ತಿದ್ದರೂ, ಅವರ ಕೊನೆಯ ದಿನಗಳ ತನಕ ಭಕ್ತರ ಸಲುವಾಗಿ, ಭಿಕ್ಷಾನ್ನವನ್ನು ತಂದು, ತಮ್ಮ ಅನ್ನದಾನದ ಸೇವೆಯನ್ನು ನಿಷ್ಠೆಯಿಂದ ಮಾಡುತ್ತಿದ್ದರು. ಸೇವಕರು, ಸ್ವಾಮಿಯವರ ಸೇವೆಯನ್ನು ಮಾಡಿದರೆ, ರೋಶಿರೆಡ್ಡಿಯವರು, ಈ ಸೇವಕರಿಗೆ ಅನ್ನದಾನದ ರೂಪದಲ್ಲಿ ತಾವು ಸೇವೆಯನ್ನು ಮಾಡುತ್ತಿದ್ದರು. ಸ್ವಾಮಿಯವರ ಮೇಲಿರುವ ಅಚಲ ವಿಶ್ವಾಸವೇ ಅವರಿಗೆ ಅಗಾಧವಾದ ಶಕ್ತಿ.

ಶ್ರಿಸ್ವಾಮಿಯವರಿಗೆ, ನಿಯಮಿತವಾದ ದಿನಚರ್ಯ ಎಂಬುದು ಇರಲಿಲ್ಲ. ಕೆಲವೊಮ್ಮೆಯಂತೂ, ಎರಡು ದಿನಗಳ ಕಾಲ ಹಗಲೂ ರಾತ್ರಿ ನಿರಂತರವಾಗಿ "ಬಂಡಿ ಆಪಂಡಯ್ಯ" (ಗಾಡಿ ನಿಲ್ಲಿಸರಯ್ಯ) ಅನ್ನುತ್ತಾ, ಮತ್ತೇನೋ ಇತರ ಮಾತುಗಳ್ಳನ್ನಾಡುತ್ತಾ ಒಂದೇ ಜಾಗದಲ್ಲಿ ನಿಶ್ಚಲರಾಗಿ ಕುಳಿತ್ತಿರುತ್ತಿದ್ದರು. ಅವರು ಆಡುತ್ತಿದ್ದ ಮಾತುಗಳನ್ನು, ಬೇರೆಯವರು ಗಟ್ಟೀಯಾಗಿ ಉಚ್ಚರಿಸುಬೇಕಾಗುತ್ತಿತ್ತು. ಕೆಲವೊಮ್ಮೆ ಅವರು ಯೋಗನಿದ್ರೆಯಲ್ಲಿ ಹಗಲುರಾತ್ರಿ ಇರುತ್ತಿದ್ದರು. ಮುಗ್ದ ಜನರು ಸ್ವಾಮಿಯವರು ಬಲಹೀನರಾಗಿ ನಿದ್ರೆಯಲ್ಲಿದ್ದಾರೆಂದು ಭಾವಿಸುತ್ತಿದ್ದರು. ಅಷ್ಟು ನಿದ್ರೆಯಲ್ಲಿದ್ದರೂ ಸ್ವಾಮಿಯವರು ಸರ್ವಜ್ಞತೆಯನ್ನು ಪ್ರದರ್ಶಿಸಿ ಭಕ್ತರನ್ನು ಕಾಪಾಡುತ್ತಿದ್ದದ್ದು ಎಷ್ಟೋ ಭಕ್ತರ ಅನುಭವ.

ಉದಾಹರಣೆಗೆ, 1978 ರಲ್ಲಿ ಒಮ್ಮೆ ಸ್ವಾಮಿಯವರು ಒಂದು ದಿನವೆಲ್ಲ (ಹಗಲು ರಾತ್ರಿ) ನಿದ್ರೆ ಮಾಡಿದರು. ಮಧ್ಯಾಹ್ನ 3 ಘಂಟೆಗೆ ಹಠಾತ್ತಾಗಿ ಎದ್ದು ನಾಮಸ್ಮರಣೆ ಮಾಡುತ್ತಾ ಬರುತ್ತಿದ್ದ ನನಗೆ(ಗ್ರಂಥಕರ್ತನಿಗೆ) ಒಂದು ಚೀಟೀ ಬರೆಯಿಸಿ, ಆಶಿರ್ವಾದ ಮುದ್ರೆಯನ್ನು ಹಾಕಿ ಕೊಟ್ಟು ತಕ್ಷಣವೇ ಮುಸುಕು ಹಾಕಿಕೊಂಡು ಮಲಗಿದರು. ಭಕ್ತರು, ಗಂಜಿಯನ್ನು ಕುಡಿಯರಿ ಎಂದು ಎಷ್ಟು ಪ್ರಾರ್ಥಿಸಿದರೂ ಅವರು ಮುಸುಕು ತೆಗಿಲಿಲ್ಲ. 5

ನಿಮಿಷದಲ್ಲೇ ರಚೈತರ ತಾಯಿ ಮರಣಾವಸ್ಥೆಯಲ್ಲಿದ್ದಾರೆನ್ನುವ ಸಮಾಚಾರವನ್ನು ಒಬ್ಬಸೇವಕ ತಂದ. ನಾನು ತಕ್ಷಣವೇ ಕಲಿಚೇಡಿಗೆ ಹೋಗಿ ಸ್ವಾಮಿಯವರ ಪಾದತೀರ್ಥ ಮತ್ತು ಊದಿ ಅವರ ಬಾಯಿಗೆ ಹಾಕಿದಾಗ, ಅದನ್ನು ಅವರು ನುಂಗಿದರು. ತುಳಸಿ ನೀರನ್ನು ಕುಡಿದರು. ಔಷದಿಯನ್ನು ಕೊಡುತ್ತೇನೆಂದರೆ ಬಾಯಿಬಿಡಲಿಲ್ಲ. ಸ್ವಾಮಿಯವರ ಪಾದತೀರ್ಥವನ್ನು ಸ್ವೀಕರಿಸಿ ಆ ತಾಯಿ ಪ್ರಾಣವನ್ನು ಬಿಟ್ಟರು. ಆಕೆ ತನ್ನ ಕಡೆಯ ಘಳಿಗೆಯಲ್ಲೂ ಶ್ರೀ ಸಾಯಿನಾಥನ ಪ್ರಾರ್ಥನೆ ಮಾಡಿದ ಪುಣ್ಯಮೂರ್ತಿ ಆದ್ದರಿಂದಲೇ ಸಾಯಿನಾಥನ ರೂಪದಲ್ಲಿದ್ದ ವೆಂಕಯ್ಯಸ್ವಾಮಿಯವರು, ತಮ್ಮ ಆಶೀರ್ವಾದಗಳನ್ನು ಕೊಟ್ಟು ಅನುಗ್ರಹಿಸಿದರು.

ಈ ಮೇಲಿನ ಸನ್ನಿವೇಶದಿಂದ ಸ್ವಾಮಿಯವರು ನಿದ್ರಾವಸ್ಥೆಯಲ್ಲಿದ್ದರೂ ಅದು ಸಹಜ ಮಾನವರ ನಿದ್ರೆಯಂತಲ್ಲ. ಅವರು ನಿದ್ರಾವಸ್ಥೆಯಲ್ಲಿದ್ದಾಗಲೂ ಅವರಿಗೆ ನಾನು ಮೂರು ಮೈಲಿ ದೂರದಿಂದ ಅವರ ಆಶಿರ್ವಾದ ಪಡೆಯಲು ನಡೆದುಕೊಂಡು ಬರುತ್ತಿದ್ದೇನೆಂದು ಅವರಿಗೆ ತಿಳಿದಿತ್ತು. 2 ಘಂಟೆಯಲ್ಲಿ ನನ್ನನ್ನು ಕರೆದುಕೊಂಡು ಹೋಗಲು ಜನ ಬರುತ್ತಾರೆಂದೂ, ನನ್ನ ತಾಯಿ ಪ್ರಾಣವನ್ನು ಬಿಡುತ್ತಾರೆಂದೂ ತಿಳಿದಿತ್ತು. ಆಕೆ ತನ್ನ ಕೊನೆಯ ಘಳಿಗೆಯ ವರೆಗೂ ಶ್ರೀ ಸಾಯಿನಾಥನ ನಾಮಜಪ ಮಾಡುತ್ತಿದ್ದ ಪುಣ್ಯಮೂರ್ತಿ ಎಂದು ಆಕೆಗೆ ಸದ್ಗತಿ ಸಿಕ್ಕಲೆಂದು ಯೋಗನಿದ್ರೆ ಇಂದ ಎದ್ದು ಆಶೀರ್ವದಿಸಿದ ಚೀಟಿ ಬರೆಯಿಸಿ ಕೊಟ್ಟರು. ನಿಜವಾದ ಯೋಗಿಗೆ ಹಗಲು ಅಥವ ರಾತ್ರಿ ಇರುವುದಿಲ್ಲ ಎಂದು ಶಾಸ್ತ್ರ ಹೇಳುತ್ತದೆ. ಅದು, ಸ್ವಾಮಿಯವರ ವಿಷಯದಲ್ಲಿ ಸತ್ಯ.

ಸ್ವಾಮಿಯವರ ಸಾಧನೆಯ ಕಾಲದಲ್ಲಿ, ಅವರ ವೈರಾಗ್ಯ ಸ್ಥಿತಿಯನ್ನು ನೋಡಿದವರೆಲ್ಲರು ಮುಗ್ಧರಾಗುತ್ತಿದ್ದರು. ಅವರಿಗೆ, ಲಾಡು ಕೊಟ್ಟರೂ ಬೇಡವೆನ್ನುತ್ತಿರಲಿಲ್ಲ ಆದರೆ, ಸ್ವಲ್ಪ ಖಾರ, ಉಪ್ಪಿನಕಾಯಿ ಆ ಲಾಡುವಿನ ಜೊತೆ ಕಲಸಿ ಕೊಂಡು ತಿನ್ನುತ್ತಿದ್ದರು. ಕೆಲವೊಮ್ಮೆ ಭಕ್ತರು ಹುರಿಗಡಲೆ, ಬೆಲ್ಲ ಕೊಬ್ಬರಿ ಕುಟ್ಟಿ, ಪುಡಿಮಾಡಿ ಡಬ್ಬದಲ್ಲಿ ಹಾಕಿಕೊಟ್ಟರೆ ತೆಗೆದುಕೊಂಡು ತಿನ್ನುತ್ತಿದ್ದರು. ಒಂದು ದಿನ ಭಕ್ತರು, ಹುರಿಗಡಲೆ ಪುಡಿಯ ಡಬ್ಬದ ಬದಲು, ನಿರುದ್ದೇಶಪೂರ್ವಕವಾಗಿ, ಸೀಗೇಕಾಯಿ ಪುಡಿ ಡಬ್ಬವನ್ನಿಟ್ಟಿದ್ದರು. ಸ್ವಾಮಿಯವರು, ಅದನ್ನು ತಿಂದುಬಿಟ್ಟರು. ಬೆಳಗಾದಮೇಲೆ, ಸೇವಕರಿಗೆ ತಮ್ಮ ತಪ್ಪು ಅರಿವಾಯಿತು, ತುಂಬ ದುಃಖ ಪಟ್ಟರು. ಶ್ರೀಸ್ವಾಮಿಯವರು ತಮ್ಮ ಮಹಾಸಮಾಧಿಗೆ ಮುಂಚೆ, 15 ವರ್ಷಗಳಿಂದ ತಣ್ಣೀರನ್ನು ಕುಡಿಯುತ್ತಿರಲಿಲ್ಲ. ಬಿಸಿನೀರಿನಲ್ಲಿ ಸ್ವಲ್ಪ ಸಕ್ಕರೆ ಹಾಕಿ ಕೊಟ್ಟರೆ, ಕುಡಿಯುತ್ತಿದ್ದರು. ಅವರನ್ನಾಗಲಿ, ಅಥವ ಅವರ ಪಾದಗಳನ್ನಾಗಲೀ ಯಾರನ್ನೂ ಮುಟ್ಟಲು ಬಿಡುತ್ತಿರಲಿಲ್ಲ. ಅವರ 10 ಜನಸೇವಕರಲ್ಲಿ 3 ಜನರಿಗೆ ಮಾತ್ರವೇ ಅವರನ್ನು ಮುಟ್ಟಲು ಅನುಮತಿ ಕೊಟ್ಟಿದ್ದರು. ಸ್ವಾಮಿಯವರು ಯಾರನ್ನೂ ತಮ್ಮ ಪೂಜೆ ಮಾಡಲು ಬಿಡುತ್ತಿರಲಿಲ್ಲ. ಅವರುಗಳು ಪ್ರದಕ್ಷಿಣೆ ಮಾಡಿದರೆ ಒಂದೇ ಒಂದು ಪ್ರದಕ್ಷಿಣೆ ಸಾಕು ಅನ್ನುತ್ತಿದ್ದರು.

ದಕ್ಷ ಎನ್ನುವ ಸಂಸ್ಕೃತ ಪದಕ್ಕೆ ಶ್ರದ್ಧೆ ಎಂದು ಅರ್ಥ. ನಮಗೆ ಯಾರಮೇಲೆ ಶ್ರದ್ಧೆ ಇರುತ್ತದೆಯೋ ಅವರಿಗೆ ನಮ್ಮ ಭಾವನೆ ವ್ಯಕ್ತಪಡಿಸುವ ಪದ್ಧತಿಯೇ ಪ್ರದಕ್ಷಿಣೆ

ಮಾಡುವುದು, ಅಥವ ದಕ್ಷಿಣೆ ಸಮರ್ಪಿಸುವುದು. ಯಾರು ನಮಗೆ ಅತ್ಯಂತ ಪ್ರೀತಿಪಾತ್ರರೋ (ಅದು ದೇವರೇ ಆಗಲಿ ಅಥವ ಸತ್ಪುರುಷರೇ ಆಗಲಿ) ಅವರುಗಳ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ನಿರಂತರ ಧ್ಯಾನ ಮಾಡಿದಾಗ ಪುಲಕಿತಗೊಳ್ಳುತ್ತದೆ. ನಮ್ಮ ಅಂತರಂಗದ ಬಾಹ್ಯಪ್ರಕಟನೆಯೇ ಪ್ರದಕ್ಷಿಣೆ. **ಈ ರೀತಿ, ನಮ್ಮ ಮನಸ್ಸು ಪ್ರೀತಿ ಮತ್ತು ಭಕ್ತಿಭಾವ ತುಂಬಿ ಒಂದು ಪ್ರದಕ್ಷಿಣೆ ಮಾಡಿದರೆ ಅಷ್ಟೆ ಸಾಕು ಎನ್ನುತ್ತಿದ್ದರು ಸ್ವಾಮಿಯವರು.**

ಶ್ರೀ ಸ್ವಾಮಿಯವರ ಜೀವನ ಬಹಳ ಸರಳವಾದದ್ದು. ಅವರಿಗೆ ತಾಟಿಎಲೆಯೇ ಆಸನ, ಮಡಿಕೆಯೇ ಪಾತ್ರೆ, ಗೋಣಿಚೀಲವೇ ಹಾಸಿಗೆ, ಭೂದೇವಿಯೇ ಉಯ್ಯಾಲೆ. ರಾಗಿ ಅಂಬಲಿ, ಚಿಕ್ಕಈರುಳ್ಳಿ, ಕಾರದಪುಡಿ, ಇವುಗಳೇ ಅವರಿಗೆ ಪಂಚಭಕ್ಷ್ಯಪರಮಾನ್ನಗಳು. ಹಳೇ ಪಂಚೆ, ಹಳೇ ಹೊದ್ದಿಕೆಗಳೇ ಅವರಿಗೆ ಚೀನಾಂಬರ. ಎಂತಹ ವೈರಾಗ್ಯ ಮೂರ್ತಿ?

ಬಾಲ್ಯದಿಂದಲೂ ಶ್ರೀ ಸ್ವಾಮಿಯವರು, ಯಾರನ್ನೂ ಹೊಗುಳುವುದಾಗಲಿ ತೆಗಳುವುದಾಗಲಿ ಮಾಡಿದ್ದೇ ಇಲ್ಲ. ಬಹಳ ಜನ ಇವರಿಗೆ ಹುಚ್ಚು ಹಿಡಿದಿದೆ ಎಂದು ಭಾವಿಸಿ ಅವರನ್ನ ಅವಮಾನಿಸಿದಾಗಲೇ ಆಗಲಿ, ಅವರು 20 ವರ್ಷದ ಯುವಕನಾದಾಗಲೇ ಆಗಲಿ, ಯಾರನ್ನೂ ಇವರು ನಿಂದಿಸಿದವರಲ್ಲ. ಸ್ವಾಮಿಯವರಿಗೆ ಇಷ್ಟಾನಿಷ್ಟಗಳು ಇರಲಿಲ್ಲ. ತನ್ನ ಸುತ್ತಲೂ ಇರುತ್ತಿದ್ದ ಸೇವಕರು, ಯಾವಾಗಲೂ ಲೋಕಾಭಿರಾಮವಾಗಿ, ಪರನಿಂದೆ ಮಾಡುತ್ತಿದ್ದರೂ, ಸ್ವಾಮಿಯವರು ಒಮ್ಮೆಯಾದರೂ "ಏಮಯ್ಯಾ! ಇಲಾ ಮಾಟ್ಲಾಡಡಂ ತಪ್ಪುಗದಾ" (ಏನಪ್ಪಾ! ಹೀಗೆ ಮಾತಾಡುವುದು ತಪ್ಪಲ್ಲವೆ) ಎಂದೂ ಹೇಳುತ್ತಿರಲಿಲ್ಲ.

ಸ್ವಾಮಿಯವರು, ಯಾವಾಗಲೂ ರುಚಿ, ಕೆಲಸ, ಅಥವ ಅಡಿಗೆಯ ವಿಷಯಗಳಲ್ಲಿ ವಿಮರ್ಶಿಸಿ ಗೊತ್ತೇ ಇಲ್ಲ. ಏನು ಸಿಕ್ಕರೇ ಅದನ್ನು ತೃಪ್ತಿಯಾಗಿ ಊಟಮಾಡುತ್ತಿದ್ದರು. ಗಂಜಿ ಇಲ್ಲ ಎಂದು, ಮಿಠಾಯಿ ಕೊಟ್ಟರೆ, ನಾಲಿಗೆಗೆ ರುಚಿತೋರಿಸ ಬಾರದೆಂದು, ಆ ಮಿಠಾಯಿ ಜೊತೆ, ಕಾರದಪುಡಿ ಕಲಸಿ ತಿನ್ನುತ್ತಿದ್ದರು. ಹೊರಗಿನ ಪರಿಸ್ಥಿತಿಗಳನ್ನು ಲೆಕ್ಕಮಾಡದೆ, ಧ್ಯೇಯದ ಕಡೆಯೇ ಹೋಗುವುದು ತಮ್ಮ ಲಕ್ಷ್ಯವೆಂದುಕೊಂಡು ನಡೆಯುತ್ತಿದ್ದರು. ಬಿಸಿಲು, ಮಳೆ, ಗಾಳಿ, ಇವುಗಳನ್ನು ಲೆಕ್ಕಮಾಡದೆ, ನಿರಂತರಾಗ್ನಿಯನ್ನು ನಿಯಮದಿಂದ ಉರಿಸುತ್ತಿದ್ದರು.

ಶ್ರೀ ಸ್ವಾಮಿಯವರು ಊಟಮಾಡುತ್ತಿದ್ದರೀತಿಯನ್ನು ಕುರಿತು, ದೇವೆಳ್ಳ ವೆಂಕಟಯ್ಯನವರು ಹೀಗೆ ಹೇಳಿದರು. "ಶ್ರೀ ಸ್ವಾಮಿಯವರು ತಮ್ಮ ಶಿಷ್ಯ ವೃಂದದೊಡನೆ ಎಲ್ಲಾದರೂ ಬಿಡದಿಮಾಡಿದಾಗ, ಸ್ವಾಮಿಯವರು ಒಂದು ನಿರ್ದಿಷ್ಟ ವಿಧಾನವನ್ನು ಅನುಸರಿಸುತ್ತಿದ್ದರು. ಮೊದಲು, ಅವರ ಊಟದ ಎಲಯಮೇಲೆ, ಎಲೆಯತುಂಬಾ ಅನ್ನವನ್ನು ಬಡಿಸಬೇಕು. ಅದನ್ನು ಎಲೆಯ ಅಂಚಿನಲ್ಲಿ ಕಟ್ಟೆಯ ಹಾಗೆ ಕಟ್ಟುತ್ತಿದ್ದರು. ಸ್ವಲ್ಪ ಅನ್ನ ಮಾತ್ರ ಮಧ್ಯದಲ್ಲಿರುವಹಾಗೆ ನೋಡಿಕೊಳ್ಳುತ್ತಿದ್ದರು. ಹಾಗೆ ಅನ್ನ ಬಡಿಸಿದಮೇಲೆ, ಮಜ್ಜಿಗೆಯನ್ನು ಹಾಕಿಸಿಕೊಂಡು ಊಟಮಾಡುತ್ತಿದ್ದರು. ಊಟಮಾಡಿದಮೇಲೆ, ಕಟ್ಟಿಕಟ್ಟಿದ್ದ ಅನ್ನವನ್ನು ತೋರುಬೆರಳಿಂದ ನೆಲದಮೇಲೆ ಯಾವ ಯಾವ ದಿಕ್ಕಿನಲ್ಲಿ ಕಟ್ಟೆಇರುತ್ತಿತ್ತೋ ಆಯಾ ದಿಕ್ಕಿನಲ್ಲಿ ಚಲ್ಲಿಬಿಡುತ್ತಿದ್ದರು. ಸ್ವಾಮಿಯವರು ಅನ್ನ

ಊಟಮಾಡುತ್ತಿದ್ದದಿನಗಳಲ್ಲಿ ಎರಡು ಎಲೆಗಳಮೇಲೆ ಅನ್ನವನ್ನು ಬಡಿಸಬೇಕಾಗುತ್ತಿತ್ತು. ಪಾತ್ರೆಯ ತುಂಬಾ ಅನ್ನವನ್ನು ತಂದು ಎಲೆಯಮೇಲೆ ಬೋರ್ಲು ಹಾಕಬೇಕಾಗುತ್ತಿತ್ತು. ಸವಟು, ಅಥವ ಅನ್ನದಕೈ ಉಪಯೋಗಮಾಡಲು ಒಪ್ಪಿಕೊಳ್ಳುತ್ತಿರಲಿಲ್ಲ. ಇಂಕು ಇರುತ್ತಿದ್ದ ತಮ್ಮ ಕೈಯೊಂದಿಗೆ ಅನ್ನವನ್ನು ಮುಟ್ಟಿ, ತಮಗೆ ಆತಿಥ್ಯ ನೀಡಿದ ಭಕ್ತರಿಗೆ ಕೊಡುತ್ತಿದ್ದರು. ಅದನ್ನ ಅವರು ಪ್ರಸಾದವೆಂದು ಸ್ವೀಕರಿಸಬೇಕಾಗುತ್ತಿತ್ತು. ಎರಡನೆ ಎಲೆಯಮೇಲಿರುವ ಅನ್ನವನ್ನು, ತಾವೇಸ್ವತಃ ಮುದ್ದೆಮಾಡಿ, ದೊಡ್ಡಮುದ್ದೆಗಳನ್ನು ಎಲೆಯಸುತ್ತಲೂ ಇಟ್ಟು, ಚಿಕ್ಕಮುದ್ದೆಯನ್ನು ಇನ್ನೊಂದು ವರಸೆ ಇಟ್ಟು ಮಿಕ್ಕ ಅನ್ನವನ್ನು ತಾವು ತಿನ್ನುತ್ತಿದ್ದರು. ಏರಡನೆ ಬಾರಿ ಅನ್ನವನ್ನು ಯಾವತ್ತೂ ಬಡಿಸುಕೊಳ್ಳುತ್ತಿರಲಿಲ್ಲ. ವೆಂಕಮ್ಮ ನವರಂತಹ ಭಕ್ತರ ಮನೆಗೆ ಬಂದಾಗ, ಮೊದಲು ಬಡಿಸಿದ ಅನ್ನವನ್ನು ಮುಟ್ಟಿ ಪ್ರಸಾದ ರೂಪವಾಗಿ ಕೊಡುತ್ತಿದ್ದರು.

ಕೆಲವೊಮ್ಮೆ "ಅಯ್ಯಾ ಒಕ್ಕರವ್ವ ಕಾರಂ ಪೆಡತಾವಾ?" (ಅಯ್ಯಾ ಸ್ವಲ್ಪ ಕಾರ ಕೊಡುತ್ತೀಯಾ?) ಎಂದು ಕೇಳುತ್ತಿದ್ದರು. ಆಗ, ಒಣಗಿದ ಕೆಂಪುಮೆಣಸಿನಕಾಯಿ, ಹರಳುಪ್ಪು, ಈರುಳ್ಳಿ ಕೊಟ್ಟರೆ, ಮೂರು ಬೆರಳುಗಳಲ್ಲಿ ಅಂಗೈಯಲ್ಲಿ ತೆಗೆದುಕೊಂಡು ಅನ್ನದೊಂದಿಗೆ ಕಲೆಸಿಕೊಂಡು ತಿನ್ನುತ್ತಿದ್ದರು. ಇದನ್ನು, ನೋಡಿದ ರೋಶಿರೆಡ್ಡಿ ಒಬ್ಬ ಭಕ್ತೆಯಕೈಯ್ಯಲ್ಲಿ ಒಣಮೆಣಸಿನಕಾಯಿ, ಕೊತ್ತಂಬರಿಬೀಜ, ಉಪ್ಪು ಹುರಿದು ಪುಡಿಮಾಡಿಸಿ ಒಂದು ಡಬ್ಬದಲ್ಲಿ ಹಾಕಿ ಇಟ್ಟುಕೊಳ್ಳುತ್ತಿದ್ದರು. ಸ್ವಾಮಿಯವರು ಕೇಳಿದಾಗ, ಬಡಿಸುತ್ತಿದ್ದರು. ಇನ್ನೂ ಕೆಲವೊಮ್ಮೆ ಸ್ವಾಮಿಯವರು "ಕೊಂಚಂ ಬೆಲ್ಲಂ ಪೆಟ್ಟಯ್ಯ" (ಸ್ವಲ್ಪ ಬೆಲ್ಲ ಕೊಡಪ್ಪ) ಎಂದು ಕೇಳಿ, ತಿನ್ನುತ್ತಿದ್ದರು. ಅಂದಿನಿಂದ, ರೋಶಿರೆಡ್ಡಿ ಹುರಿಗಡಲೆ, ಬೆಲ್ಲ ಪುಡಿ ಮಾಡಿ ಡಬ್ಬದಲ್ಲಿ ಇಡುತ್ತಿದ್ದರು. ಸ್ವಾಮಿಯವರು ಕೇಳಿದಾಗ ಕೊಡುತ್ತಿದ್ದರು. ಕರಿಬೇವಿನ ಪುಡಿ, ಹುಣಿಸೆ ಪುಡಿ, ಧನಿಯಾ ಪುಡಿ, ಕಾರದ ಪುಡಿ ಕೇಳಿ ಬಡಿಸಿಸಿಕೊಂಡು, ಅನ್ನದ ಜೊತೆ ಕಲಸಿಕೊಂಡು ತಿನ್ನುತ್ತಿದ್ದರು.

ಒಂದು ದಿನ ತನ್ನ ಸೇವಕನಿಗೆ "ಅನ್ನಂ ವಂಡಿ ಪೆಟ್ಟಯ್ಯಾ" (ಅನ್ನ ಮಾಡಿ ಕೊಡಯ್ಯ) ಎಂದು ಕೇಳಿದರು. ಭಕ್ತರು ಹಾಗೆ ಮಾಡಿ ಬಡಿಸಿದರು. ಸ್ವಾಮಿಯವರು, ತಮ್ಮ ಅಂಗೈಯನ್ನು ನೆತ್ತಿಗೆ ತಾಕಿಸಿ ಅದನ್ನ ಅನ್ನದೊಳಗೆ ಅದ್ದಿದರು. ಹೀಗೆ ಮೂರು ಬಾರಿ ಮಾಡಿ ಆ ಅನ್ನ ವನ್ನು ಸ್ವಲ್ಪವೂ ತಿನ್ನದೆ, ಒಬ್ಬ ಭಕ್ತನಿಗೆ ಕೊಟ್ಟು "ಅಂದರಿಕಿ ಪೆಟ್ಟಯ್ಯ ಜಬ್ಬುಲು ಪೋತಾಯಿ" (ಎಲ್ಲರಿಗೂ ಕೊಡು, ರೋಗಗಳು ಹೋಗುತ್ತವೆ) ಎಂದರು. ಆಗ, ಭಕ್ತರು ಹಾಗೇ ಮಾಡಿದರು.

ಕೆಲವೊಮ್ಮೆ ಸ್ವಾಮಿಯವರು "ನಾಕು ತ್ವರಗಾ ಆಕು ವಕ್ಕ ಪೆಟ್ಟಯ್ಯಾ" (ನನಗೆ ಬೇಗ ವಿಳ್ಳೇದೆಲೆ ಮತ್ತು ಅಡಿಕೆ ಕೊಡು) ಎನ್ನುತ್ತಿದ್ದರು. ತಂದು ಕೊಡುವುದರಲ್ಲಿ ಅನೇಕಬಾರಿ ಕೇಳಿ ಅವಸರ ಪಡಿಸುತ್ತಿದ್ದರು. ಕೊಟ್ಟಮೇಲೆ ಅದ್ದನ್ನು ತಿಂದು "ಚಪ್ಪಗಾ ಉಂದಯ್ಯಾ ಕಾರಂಗಾಚೇಸಿ ಇಂಕ ಕೊಂಚಂ ಪೆಟ್ಟು" (ಸಪ್ಪಗಿದೆಯಪ್ಪ! ಕಾರವಾಗಿ ಇನ್ನು ಸ್ವಲ್ಪ ಕೊಡು ಎನ್ನುತ್ತಿದ್ದರು) ಆಗ, ಸುಣ್ಣವನ್ನು ಜಾಸ್ತಿ ಹಾಕಿ ಕೊಟ್ಟರೆ "ತಿನಮ್ಮಾ ತಿನು ಬಾಗುಂದಿ ತಿನು" (ತಿನ್ನಮ್ಮಾ ತಿನ್ನು, ಚೆನ್ನಾಗಿದೆ ತಿನ್ನು) ಎಂದು ಯಾರೋ ಅದೃಶ್ಯ ವ್ಯಕ್ತಿಗೆ ಹೇಳುತ್ತಿದ್ದಂತೆ,

ಹೇಳುತ್ತಾ ತಿನ್ನುತ್ತಿದ್ದರು. ಸ್ವಲ್ಪ ಹೊತ್ತಿನಮೇಲೆ, "ಇಕ ಆಮೆನು ಪೊಮ್ಮನಿ ಚೆಪ್ಪಯ್ಯ ಅಂತಾ ನೇನು ಚೂಸುಕೊಂಟಾನು" (ಇನ್ನು ಆಕೆಯನ್ನು ಹೋಗು ಎಂದು ಹೇಳಪ್ಪ ಎಲ್ಲಾ ನಾನು ನೋಡಿಕೊಳ್ಳುತ್ತೇನೆ) ಎಂದು ಹೇಳುತ್ತಿದ್ದರು.

ಒಮ್ಮೆಆಂಜನೇಯಸ್ವಾಮಿ ಗುಡಿಯಲ್ಲಿ ಭಕ್ತರು ಹಾಡುತ್ತಿದ್ದ ತತ್ವಗಳನ್ನು ನಿಲ್ಲಿಸಿ ಎಂದು ಹೇಳಿ, "ಓಂ ನಾರಾಯಣ ಆದಿ ನಾರಾಯಣ" ಎನ್ನುವ ಮಂತ್ರವನ್ನು ತಾವೂ ಹೇಳಿ ಎಲ್ಲರ ಕೈಯಲ್ಲಿಯೂ ಹೇಳಿಸಿದರು. ಈ ಹಿಂದೆ ಸ್ವಾಮಿಯವರು ಯಾರನ್ನೂ ನಾಮಸ್ಮರಣೆ ಮಾಡಿ ಎಂದು ಮಾಡಿಸಿರಲಿಲ್ಲ.

ಅವರು ಗಂಜಿ ಕುಡಿಯುತ್ತಿದ್ದ ದಿನಗಳಲ್ಲಿ ಈರುಳ್ಳಿ ಯನ್ನು ಬೇಯಿಸಿ ಅಥವ ಸುಟ್ಟು ಸಿಪ್ಪೆಯನ್ನು ತೆಗೆದು ಕೊಟ್ಟರೆ, ಚಪ್ಪರಿಸಿ ನುಂಗುತ್ತಿದ್ದರು. ಸ್ವಾಮಿಯವರಿಗೆ ಗಂಜಿ ಮಾಡಿ ಕೊಡುವ ಕೆಲಸವನ್ನು ರೋಶಿರೆಡ್ಡಿ ಮಾಡುತ್ತಿದ್ದರು. ಒಂದು ದಿನ ಕಟ್ಟಿಗೆ ತರಲು ಹೋದ ಸಮಯದಲ್ಲಿ, ಬೇರೊಬ್ಬ ಸೇವಕ 'ಈ ದಿನ, ಸ್ವಾಮಿಯವರಿಗೆ ನಾನು ಗಂಜಿ ಮಾಡಿಕೊಡುತ್ತೇನೆ' ಎಂದು ಮಾಡಿ ಕೊಟ್ಟರು. ಸ್ವಾಮಿಯವರು ಸ್ವೀಕರಿಸಲಿಲ್ಲ, ಬೇಡಾ ಎಂದರು. ಕಟ್ಟಿಗೆ ತಂದಮೇಲೆ, ಅಭ್ಯಾಸದಂತೆ, ರೋಶಿರೆಡ್ಡಿ ಗಂಜಿ ಕೊಡಲು ಹೋದರು. ಆಗ, "ಸ್ವಾಮಿಯವರು ಗಂಜಿ ಬೇಡ ಎಂದರೆ ನೀನೇಕೆ ತೆಗೆದುಕೊಂಡು ಹೋಗುತ್ತೀಯ?" ಎಂದು ಆ ಭಕ್ತ ಅಡ್ಡ ಹಾಕಿದ. ರೋಶಿರೆಡ್ಡಿ ಅವನ ಮಾತನ್ನು ಲಕ್ಷ್ಯ ಮಾಡದೆ, ಸ್ವಾಮಿಯವರಿಗೆ ಗಂಜಿ ಕೊಟ್ಟರು. "ನೀವು ತೆಚ್ಚಾವುಗನುಕ ತ್ರಾಗುತಾನಯ್ಯ" (ನೀನು ತಂದೆ ಎಂದು ಕುಡಿಯುತ್ತೇನೆ) ಎನ್ನುತ್ತ ಗಂಜಿಯನ್ನು ಸ್ವೀಕರಿಸಿದರು. ಒಬ್ಬ ಭಕ್ತನಿಗೆ ಸ್ವಾಮಿಯವರು ದೈನಂದಿನ ಸೇವೆಯನ್ನು ನಿಯೋಜಿಸಿದರೆ, ಅವನೇ ಆ ಸೇವೆಯನ್ನು ನಿತ್ಯ ಮಾಡಬೇಕು. ಸ್ವಾಮಿಯವರು ಹೇಳದೇ ಆ ಕೆಲಸವನ್ನು ಬೇರೆಯವರು ಮಾಡಿದರೆ, ಒಪ್ಪುತ್ತಿರಲಿಲ್ಲ.

ಸ್ವಾಮಿಯವರು ಅನ್ನ ತಿನ್ನುತ್ತಿದ್ದ ದಿನಗಳಲ್ಲಿ ರೋಶಿರೆಡ್ಡಿ ಅಡಿಗೆ ಮಾಡುವ ಸೇವೆಯನ್ನು ಮಾಡುತ್ತಿದ್ದರು. ಒಮ್ಮೆ ಬೇರೆ ಸೇವಕ ಈ ಕೆಲಸ ತಾನೆ ಮಾಡುತ್ತೇನೆ ಎಂದು ಹಟ ಹಿಡಿದಿದ್ದರಿಂದ, ರೋಶಿರೆಡ್ಡಿ ಅಡಿಗೆ ಮಾಡದೇ ಸುಮ್ಮನಿದ್ದರು. ಆ ಸೇವಕ ಅಡಿಗೆ ಮಾಡಿ ಸ್ವಾಮಿಯವರಿಗೆ ಊಟ ಕೊಡಲು ಹೋದಾಗ, ಅಲ್ಲಿಟ್ಟು ಹೋಗು ಎಂದು ಹೇಳಿದರೇ ಹೊರತೂ ತಿನ್ನಲಿಲ್ಲ. ಆಮೇಲೆ, ರೋಶಿರೆಡ್ಡಿಯನ್ನು ಕರೆದು, "ಪೆಡಿತೇ ಅನ್ನಂ ನುವ್ವೇ ಪೆಟ್ಟು, ಲೇಕುಂಟೆ ನನ್ನು ಬಂಡಿಲೊ ವೇಸಿ ಆಶ್ರಮಂ ನುಂಚಿ ಬಯಟ ಲಾಗೇಯಿ" (ಬಡಿಸಿದರೆ ಅನ್ನವನ್ನು ನೀನೇ ಬಡಿಸು, ಇಲ್ಲದಿದ್ದರೆ ನನ್ನನು ಆಶ್ರಮ ದಿಂದ ಆಚೆ ಕಳುಹಿಸು) ಎಂದು ಕೋಪದಿಂದ ಹೇಳಿದರು. ಆ ದಿನದಿಂದ, ಇತರ ಸೇವಕರು ಯಾರೂ, ನಾವು ಅಡಿಗೆ ಮಾಡಿ ಬಡಿಸುತ್ತೇವೆ ಎಂದು ಮುಂದೆ ಬರುತ್ತಿರಲಿಲ್ಲ.

ಒಂದು ದಿನ ರೋಶಿರೆಡ್ಡಿ ಉರುಫ್ ನಾಗತಾತನವರೊಂದಿಗೆ, "ಕುಡಿಚೇತಿ ಅರಿಚೇಯ್ಯಿ ಪಟ್ಟಿ ರೆಂಡು ಉಡಿಸೆಳ್ಳೂ ನೀಳ್ಳುತಾಗು" (ಬಲಗೈ ಅಂಗೈಯ್ಯಲ್ಲಿ ಎರಡು ಬೊಗಸೆ ನೀರು ಕುಡಿ) ಎಂದರು. ಅಷ್ಟೆ ಅವತ್ತಿನಿಂದ ನಾಗತಾತನವರಿಗೆ ಬಾಯರಿಕೆ ನಿಂತು ಹೋಯಿತು.

ಸೇವಕರು ಅಗ್ನಿಕುಂಡವನ್ನು ನಿರಂತರವಾಗಿ ಉರಿಯಲು ಸಹಾಯಮಾಡುತ್ತಿದ್ದಾಗ, ಸ್ವಾಮಿಯವರು ಅದಕ್ಕೆ ಅಡ್ಡಿ ಹೇಳುತ್ತಿರಲಿಲ್ಲ, ಆದರೆ ಕೆಲವೊಮ್ಮೆ ಅಗ್ನಿಕುಂಡದ ಹತ್ತಿರ ಯಾರನ್ನೂ ಬಿಡುತ್ತಿರಲಿಲ್ಲ. ನಿತ್ಯವೂ ತುಳಸವ್ವ ಎಂಬ ಭಕ್ತೆ ಆ ಧುನಿ ಗೆ ಸಾಮ್ರಾಣಿ ಹಾಕಿ ನಮಸ್ಕಾರ ಮಾಡುತ್ತಿದ್ದರು. ಒಂದು ದಿನ, ಸ್ವಾಮಿಯವರು ಕೈಯ್ಯನ್ನು ಅಡ್ಡ ಇಟ್ಟು ಆಕೆಯನ್ನು ಧುನಿಯ ಹತ್ತಿರ ಬಿಡಲಿಲ್ಲ. ಬಹುಷಃ ನಮ್ಮ ಸ್ಥೂಲ ದೃಷ್ಟಿಗೆ ಅಗೋಚರವಾದ ರೀತಿಯಲ್ಲಿ ಋಷಿಗಳೋ, ಅಥವ ದೇವತೆಗಳೋ ಅಗ್ನಿಕುಂಡದ ಬಳಿ ಬಂದಿರಬಹುದೇನೋ ಎಂದು ಈ ಸನ್ನಿವೇಶದಿಂದ ನಾವು ಊಹಿಸಕೊಳ್ಳಬೊಹುದು. ಒಂದು ದಿನ ರೋಷಿರೆಡ್ಡಿಯವರನ್ನು ಕೂಡ ಕಟ್ಟಿಗೆ ಸರಿ ಮಾಡಲು ಹೋದಾಗ ಆ ಉರಿಯುತ್ತಿದ್ದ ಕಟ್ಟಿಗೆಯನ್ನು ಮುಟ್ಟಲು ಬಿಡದೆ "ಅಬ್ಬೋ ಅಬ್ಬೋ ಇಪ್ಪುಡು ತಾಕವಚ್ಚಾ" (ಅಬ್ಬ ಅಬ್ಬ, ಈಗ ಮುಟ್ಟಬಹುದಾ?) ಎಂದರು.

ಒಮ್ಮೆ ಮುಂಡುಕಳ್ಳಿ ಎನ್ನುವ ಗಿಡದ ಎಲೆಯನ್ನು ಧುನಿಯಲ್ಲಿ ಹಾಕಿ ಅವುಗಳು ಉರಿಯುವುದಕ್ಕೆ ಒಣಗಿದ ಹುಲ್ಲನ್ನು ಹಾಕಿ, ಸ್ವಾಮಿಯವರು ಪಕಪಕನೆ ನಗುತ್ತಿದ್ದರು. ಕಾರಣ ಕೇಳಿದರೆ "ಬೊಂತಲು ಪೋಟ್ಲಾಡುಕುಂಟುನ್ನಾಯಯ್ಯಾ" (ಮುಂಡುಕಳ್ಳಿ ಎಲೆಗಳು ಜಗಳವಾಡುತ್ತಿವೆ) ಎಂದರು.

ಸ್ವಾಮಿಯವರು ಮೈದಾನದಲ್ಲಿ ಧುನಿ ಇಟ್ಟೂಕೊಂಡು ಕುಳಿತಿದ್ದಾಗ, ಅವರ ವಿಷಯ ತಿಳಿಯದ ಒಬ್ಬ ವ್ಯಕ್ತಿ ಬೀಡಿ ಹಚ್ಚಿಕೊಳ್ಳಲು ಧುನಿಯ ಹತ್ತಿರ ಬಂದ. ಸ್ವಾಮಿಯವರ ಹತ್ತಿರ ಇದ್ದ ತಂಬೂರಿ ಮುಂತಾದಗಳನ್ನು ನೋಡಿ, ಆ ಉರಿಯಿಂದ ಬೀಡಿ ಹಚ್ಚಿಕೊಳ್ಳಬೊಹುದೋ ಇಲ್ಲವೋ ಎಂದು ಅನುಮಾನದಿಂದಲೇ ಸ್ವಾಮಿಯವರನ್ನು ಕೇಳಿದ. "ಏಮಯ್ಯ ಬೀಡಿ ಕಾಲ್ಚುಕುಂಟಾವಾ, ಕಾಲ್ಚುಕೊ" (ಏನಪ್ಪಾ ಬೀಡಿ ಹಚ್ಚಿಸುಕೊಳ್ಳುತ್ತೀಯ, ಹಚ್ಚಿಸುಕೊ) ಎಂದರು. ಅದನ್ನು ನೋಡಿ ಸೇವಕರು ಆಶ್ಚರ್ಯ ಪಟ್ಟರು. ಕಾರಣ, ಆ ದಿನಗಳಲ್ಲಿ ಒಂದು ಕಡ್ಡೀ ಧುನಿಯಲ್ಲಿ ಹಾಕ ಬೇಕಾದರೂ ತಾವೇ ಸ್ವತಃ ಹಾಕುತ್ತಿದ್ದರು, ಯಾರನ್ನೂ ಮುಟ್ಟಲು ಬಿಡುತ್ತಿರಲಿಲ್ಲ. ಆದರೆ, ಈ ವ್ಯಕ್ತಿಯ ವಿಷಯದಲ್ಲಿ, ಸ್ವಾಮಿಯವರ ವರ್ತನೆ ಭಿನ್ನವಾಗಿತ್ತು. ಏಕೆ ಎಂದು ಯೋಚಿಸಿದಾಗ, ಸ್ವಾಮಿಯವರು ಇತರರ ಭಾವನೆಗಳಿಗೆ ತಕ್ಕಂತೆ ನಡೆದುಕೊಳ್ಳುತ್ತಿದ್ದರು ಎಂಬುದನ್ನು ಮೇಲಿನ ಘಟನೆ ನಮಗೆ ಸೂಚಿಸಿತು.

ಸ್ವಾಮಿಯವರು ದಕ್ಷಿಣೆಯ ರೂಪದಲ್ಲಿ ಪಡೆದ ಹಣವನ್ನು ತಮ್ಮ ಸೇವಕರಿಗೆ ಅವರ ಕಷ್ಟ ಮತ್ತು ಅಗತ್ಯಗಳಿಗೆ ಅನುಗುಣವಾಗಿ ನೀಡುತ್ತಿದ್ದರು. ತಮ್ಮ ಹತ್ತಿರ ಏನೂ ಉಳಿಸಿಕೊಳ್ಳುತ್ತಿರಲಿಲ್ಲ. ಹಬ್ಬ ಹರಿದಿನಗಳಲ್ಲಿ, ಭಕ್ತರು ತರುತ್ತಿದ್ದ ತಿಂಡಿ ಪದಾರ್ಥಗಳನ್ನು ಎಲ್ಲ ಭಕ್ತರಿಗೆ ಹಂಚಲು ಹೇಳುತ್ತಿದ್ದರು. ದಶಯ್ಯ, ರಮಣಯ್ಯ ಮತ್ತು ರೋಶಿರೆಡ್ಡಿಯವರು, ತಮ್ಮ ಜೀವನದಲ್ಲಿ ಹಲವಾರು ಕಷ್ಟಗಳನ್ನು ಅನುಭವಿಸುತ್ತಿದ್ದ ಕಾರಣ ಸ್ವಾಮಿಯವರು ಕೆಲವು ಆಹಾರ ಪದಾರ್ಥಗಳನ್ನು ವಿಶೇಷವಾಗಿ ಬಚ್ಚಿಟ್ಟು ಕೊಡುತ್ತಿದ್ದರು. ಹಗಲು ರಾತ್ರಿ ತಮ್ಮೊಡನೆ ಇದ್ದು ನಿದ್ರೆ ಮಾಡುತ್ತಿದ್ದ ರೋಶಿ ರೆಡ್ಡಿಯನ್ನು ಮಧ್ಯ ರಾತ್ರಿಯಲ್ಲಿ ಎಬ್ಬಿಸಿ ತಮ್ಮ ಚಾಪೆ ಕೆಳಗಿಟ್ಟುಕೊಂಡಿದ್ದ ಸಿಹಿ ಪದಾರ್ಥವನ್ನು ಕೊಟ್ಟು

ಮರೆಗೆಹೋಗಿ ತಿನ್ನು ಎನ್ನುತ್ತಿದ್ದರು.

ಸ್ವಾಮಿಯವರು ಮಹಾ ಸಮಾಧಿ ಹೊಂದುವ ಹೊತ್ತಿಗೆ ಅವರ ವಯಸ್ಸು ಸುಮಾರು 95-98 ಇರಬಹುದು. ಕಡೇ 12 ವರ್ಷಗಳು ಅವರು ಬರೀ ದ್ರವ ಪದಾರ್ಥಗಳನ್ನೇ ತೆಗೆದು ಕೊಳ್ಳುತ್ತಿದ್ದರು. ಆದರೆ, ಅವರ ಶರೀರದ ಮೇಲೆ ಎಲ್ಲಿಯೂ ವಯಸ್ಸಾದ ಲಕ್ಷಣ ಕಾಣುತ್ತಿರಲಿಲ್ಲ. ಯೋಗದ ದೇಹವನ್ನು ತಿಳಿದವರು, ಸ್ವಾಮಿಯ ಹೊಳೆಯುವ ತೆಳ್ಳಗಿನ ದೇಹವನ್ನು ನೋಡಿದಾಗ ಅದು ಯೋಗದ ದೇಹವೆಂದು ತಿಳಿಯುತ್ತಿದ್ದರು. ಸ್ವಾಮಿಯವರ ಕಣ್ಣುಗಳಲ್ಲಿ ಪ್ರಶಾಂತತೆ, ಮುಖದ ಗಾಂಭೀರ್ಯ ಎದ್ದು ಕಾಣಿಸುತಿತ್ತು. ಚುರುಕಾಗಿ ಹೊಳಿಯುತ್ತಿದ್ದ ಕಣ್ಣುಗಳೇ ಆ ಮಹಾಯೋಗಿಯ ಆಭರಣಗಳು.

ಗುರವಯ್ಯ ಯಾವಾಗಲೂ, ಸ್ವಾಮಿಯವರ ಹತ್ತಿರ ಇದ್ದು ಅವರು ಉಚ್ಚರಿಸುತ್ತಿದ್ದ ಪದಗಳು, ವಾಕ್ಯಗಳನ್ನು, ಅವರಜೊತೆ ತಾನೂ ಗಟ್ಟಿಗಟ್ಟಿಯಾಗಿ ಹೇಳುತ್ತಾ ಎದ್ದಿರುತ್ತಿದ್ದರು. ಸ್ವಾಮಿಯವರು ತಮ್ಮ ಕೈಗಳನ್ನು ತಮ್ಮ ಹಿಂದೆ ಇಟ್ಟುಕೊಂಡು, ಅವರ ದೃಷ್ಟಿಯನ್ನು ಆಕಾಶದ ಕಡೆ ಕೇಂದ್ರೀಕರಿಸುತ್ತಿದ್ದರು. ಸ್ವಾಮಿಯವರ ಆ ಸ್ಥಿತಿಯನ್ನು ನೋಡಿದ ಗುರುವಯ್ಯ ಒಂದು ತರಹದ ತನ್ಮಯತ್ವದಲ್ಲಿ ಮುಳುಗಿ ಸ್ವಾಮಿಯವರ ಹತ್ತಿರವೇ ಇರುತ್ತಿದ್ದರು. ಅಂತಹ ಸಮಯದಲ್ಲಿ ಸ್ವಾಮಿಯವರಿಂದ ಒಂದು ಬೆಳಕು ತನ್ನಲ್ಲಿ ಪ್ರವಹಿಸಿತ್ತಿದ್ದಂತೆ ಅನುಭವ ಆಗುತ್ತಿತ್ತು ಗುರುವಯ್ಯನವರಿಗೆ.

ಮಹಾಸಮಾಧಿಗೆ ಮೂರು ವರ್ಷದ ಮೊದಲಿನಿಂದ ಸ್ವಾಮಿಯವರು ಯಾವಾಗಲೂ ಸಮಾಧಿಸ್ಥಿತಿಯಲ್ಲಿ ಇರುತ್ತಿದ್ದರು. ಹಾಸಿಗೆ ಹಾಸಿದರೆ, ಬೇಡ ಎನ್ನುತ್ತಿರಲಿಲ್ಲ. ಗುರುವಯ್ಯನನ್ನು ಕೂಡ ಹಾಸಿಗೆಯ ಮೇಲೆ ಕುಳಿತುಕೋ ಎಂದು ಕೂರಿಸುಕೊಳ್ಳುತ್ತಿದ್ದರು. ಅದಕ್ಕೆ ಮೊದಲು, ಈಚಲ ಎಲೆಯ ಮೇಲೆ ಚಾಪೆಯನ್ನು ಹಾಕಿ ಅದರ ಮೇಲೆ ಗೋಣಿಚೀಲ ಹಾಕಿ ಕೂರಿಸುತ್ತಿದ್ದರು. ಆದೇ ಅವರ ಮಲಗುತ್ತಿದ್ದ ಹಾಸಿಗೆ ಕೂಡ. ವಕ್ಕೆಮ್ಮನವರು ಭಕ್ತಿಯಿಂದ ನಾಮ ಜಪವನ್ನು ಮಾಡುತ್ತಾ ಮರದ ಹೊಟ್ಟಿನಿಂದ ತಯಾರು ಮಾಡಿದ ಹಾಸಿಕೆಯನ್ನು ಕೊಟ್ಟರೆ ಸ್ವೀಕರಿಸಿದರು. ಆ ಹಾಸಿಗೆ ಹರಿದು ಹೋದಮೇಲೆ ಭಕ್ತರು ಹತ್ತಿಯ ಹಾಸಿಗೆ ಮಾಡಿದರು.

ಯಾವ ಹಳ್ಳಿಗೆ ಹೋದರೂ ಎರಡು ದಿನ ಕಳೆದರೆ ಬೇರೇ ಊರು ಅಥವಾ ಅದೇ ಗ್ರಾಮದಲ್ಲಿ ಬೇರೇ ಮೊಕ್ಕಾಮು ಬದಲಾಯಿಸುತ್ತಿದ್ದರು. "ರಾತ್ರಿ, ಪಗಲು ನಾಕು ತೆಲಿಯಟಂಲೇದಯ್ಯ ಇಪ್ಪುಡು ಎಂತ ಪ್ರೊದ್ದೆಕ್ಕಿಂದಿ" (ರಾತ್ರಿ ಹಗಲು ನನಗೆ ತಿಳಿಯುತ್ತಿಲ್ಲ ಅಯ್ಯ! ಈಗ ಎಷ್ಟು ಹೊತ್ತಾಗಿದೆ?) ಎಂದು ಕೇಳುತ್ತಿದ್ದರು. ಆಗ ಸೇವಕರು ಸಮಯವನ್ನು ತಿಳಿಸುತ್ತಿದ್ದರು. 10-3-1980 ನೆ ದಿನ, ಸ್ವಾಮಿಯವರು ತಲಪೂರು ನಾರಾಯಣ ಆಶ್ರಮದಲ್ಲಿ ಬಿಡದಿ ಮಾಡಿದ್ದರು. ಗುರವಯ್ಯ ನೊಂದಿಗೆ "ಅಯ್ಯ ಇದಿ ಏ ಊರು?" (ಅಯ್ಯ ಇದು ಯಾವ ಊರು?) ಎಂದು ಕೇಳಿದರು. “ಇದು ತಲಪೂರು ಅಲ್ಲವೆ ಸ್ವಾಮಿ?” ಎಂದರೆ, “ಸರಿ” ಅಂದರು. ಭಗವದ್ಗೀತೆಯಲ್ಲಿ, "ನತದ್ಭಾಸಯತೇ ಸೂರ್ಯೋ

ನಶ ಶಾಂಕೋ ನಪಾವಕಃ ಯದ್ಗತ್ವಾ ನನಿವರ್ತಂತೇ ತದ್ಧಾಮ ಪರಮಂ ಮಮ" ಎನ್ನುವ ಸ್ಥಿತಿಯಲ್ಲಿ ಸ್ವಾಮಿಯವರು ಇದ್ದರು. ಸೂರ್ಯನಾಗಲೀ, ಚಂದ್ರನಾಗಲೀ, ಅಗ್ನಿಯಾಗಲೀ ನನ್ನ ಆ ಪರಮ ಗೃಹವನ್ನು ಬೆಳಗಿಸಲಾರವು. ಅಲ್ಲಿಗೆ ಹೋದ ನಂತರ, ಒಬ್ಬರು ಮತ್ತೆ ಈ ಭೌತಿಕ ಪ್ರಪಂಚಕ್ಕೆ ಹಿಂತಿರುಗುವುದಿಲ್ಲ ಎಂಬಂತಃ ಸ್ಥಿತಿ ಸ್ವಾಮಿಯವರದ್ದು.

ಸ್ವಾಮಿಯವರು ನಡೆಯಲಾಗದ ಕಾಲದಲ್ಲಿಯೂ ದೈಹಿಕಶೌಚಕರ್ಮಗಳನ್ನು ಪೂರೈಸಲು ತಮ್ಮಸೇವಕರ ಸಹಾಯ ಪಡೆದು, ಕೋಣೆಯಿಂದ ಹೊರಗೆ ಹೋಗುತ್ತಿದ್ದರು. ಸ್ವಾಮಿಯವರು, ಅವರ ಕೆಲಸವನ್ನು ಮುಗಿಸಿದಮೇಲೆ, ತುಂಬಾ ಬಿಸಿಬಿಸಿ ನೀರಿನಲ್ಲಿಸ್ನಾನ ಮಾಡುತ್ತಿದ್ದರು.

ಮಹಾಸಮಾಧಿಗೆ ಮುಂಚೆ, ಒಂದು ವರ್ಷ ನಿರಂತರ ಧ್ಯಾನ ನಿಷ್ಠೆಯಲ್ಲಿರುತ್ತಿದ್ದರು. ಸ್ನಾನಕ್ಕೆ ಇಟ್ಟಿದ್ದನೀರು, ಸ್ವಲ್ಪವಾದರೂ ಬಿಸಿ ಕಡಿಮೆಯಾದರೂ, "ಚಲಿ ಚಲಿ" (ಛಳಿ, ಛಳಿ) ಎನ್ನುತ್ತಾ ಕೂಗಾಡುತ್ತಿದ್ದರು. ಬಿಸಿ ನೀರಿನ ಹದ ಸರಿಯಾಗಿದ್ದರೆ, "ಅದ್ದೀ! ಅದ್ದೀ!" (ಅದ್ದೂ! ಅದ್ದೂ!) ಎನ್ನುತ್ತಾ ಸ್ನಾನ ಮಾಡುತ್ತಿದ್ದರು. ಒಂದೊಂದು ಬಾರಿ "ಇಂಕ ಚಾಲಮ್ಮಾ ಇಂಕ ಚಾಲು ಅಂತೇ, ಅಂತೇ" (ಇನ್ನು ಸಾಕಮ್ಮಾ, ಇನ್ನು ಸಾಕು) ಅನ್ನುತ್ತಿದ್ದರು. ಆವಾಗ ಸೇವಕರು ಬೇಗ ಬೇಗ ಮೈಒರೆಸಿ, ಅವರನ್ನು ಎತ್ತಿಕೊಂಡು ಹೋಗಿ ಹಾಸಿಗೆಯ ಮೇಲೆ ಮಲಗಿಸುತ್ತಿದ್ದರು. ಸ್ವಾಮಿಯವರ ಕೌಪೀನ ಹಿಂಡಿದ ನೀರನ್ನು ಭಕ್ತರು ಕಣ್ಣಿಗೆ ಒತ್ತಿಕೊಂಡು ತೀರ್ಥದಂತೆ ಸ್ವೀಕರಿಸುತ್ತಿದ್ದರು. ಕೆಲವರಿಗೆ ಕಣ್ಣುರಿ, ಕಣ್ಣು ಮಸುಕಾಗಿ ಕಾಣಿಸುತ್ತಿದ್ದರೆ, ಆ ನೀರನ್ನು (ಕೌಪೀನ ಹಿಂಡಿದ ನೀರು) ಕಣ್ಣೊಳಗೆ ಹಾಕಿಕೊಂಡು ಗುಣ ಮಾಡಿಕೊಳ್ಳುತ್ತಿದ್ದರು. ಅವರು ಪ್ರಜ್ಞೆಯಲ್ಲಿದ್ದಾಗ ಸಾಬೂನು ಉಪಯೋಗಿಸಲು ಬಿಡುತ್ತಿರಲಿಲ್ಲ. ಆದರಿಂದ ಭಕ್ತರು, ಸೀಗೆ ಪುಡಿ, ಕಡಲೆ ಹಿಟ್ಟಿನಿಂದ ಸ್ನಾನ ಮಾಡಿಸುತ್ತಿದ್ದರು. ಕೊನೆಯದಿನಗಳಲ್ಲಿ ಸಾಬೂನು ಉಪಯೋಗಿಸಿದರೂ ಏನೂ ಹೇಳುತ್ತಿರಲಿಲ್ಲ.

ಬಾಹ್ಯಪ್ರಜ್ಞೆ ಇದ್ದಾಗ, ಎಳ್ಳೆಣ್ಣೆಯನ್ನು ಕಾಲಿಗೆ, ಮತ್ತು ಶರೀರಕ್ಕೆ ಮರ್ದನ ಮಾಡಿಸಿಕೊಳ್ಳುತ್ತಿದ್ದರು. ತಮ್ಮ ಸೇವಕರನ್ನು ಬಿಟ್ಟು ಬೇರೆ ಯಾರೂ ಅವರನ್ನು ಮುಟ್ಟಲು ಬಿಡುತ್ತಿರಲಿಲ್ಲ. ಸ್ವಾಮಿಯವರನ್ನು ಮುಟ್ಟುವ ಭಾಗ್ಯಕ್ಕಾಗಿ ತಪನಪಡುತ್ತಿದ್ದ ಭಕ್ತರ ಮನಸ್ಸು ಅರಿತು ತಮ್ಮ ಸ್ಪರ್ಶ ಭಾಗ್ಯ ಪ್ರಸಾದಿಸುತ್ತಿದ್ದರು.

ಛಳಿ ಕಾಲದಲ್ಲಿ ಸ್ವಾಮಿಯವರ ಮೇಲೆ ಮಂಜು ಬೀಳುತ್ತದೆ ಎಂದು ಚಪ್ಪರ ಹಾಕಿದರೆ, ತಲುಪೂರಿನಲ್ಲಿಸ್ವಾಮಿ ಚಪ್ಪರವನ್ನು ಬಿಟ್ಟು ಬಯಲಿಗೆ ಬಂದು ಧುನಿಯೊಂದಿಗೆ ಕುಳಿತುಕೊಳ್ಳುತ್ತಿದ್ದರು. ಸೊಳ್ಳೆಕಾಟ ಬಹಳ. ಸೊಳ್ಳೆಗಳು ಕಚ್ಚುತ್ತಿದ್ದರೆ ಬಾಚಣಿಗಯಲ್ಲಿ ಕೆರೆಸುಕೊಳ್ಳುತ್ತಿದ್ದರು. ಸ್ವಾಮಿಯವರ ಬಾಧೆಯನ್ನು ನೋಡಿ ಸೇವಕರು ಸೊಳ್ಳೆಪರದೆ ಕಟ್ಟಿದರೆ, ಅದನ್ನು ಕಿತ್ತುಹಾಕುತ್ತಿದ್ದರು. ಸ್ವಾಮಿಯವರು ಕದಲದೇ ಇದ್ದ ಕಡೆಯದಿನಗಳಲ್ಲಿ ಸೇವಕರ ಪ್ರಯತ್ನ ಫಲಿಸಿತು. ಈ ಎರಡು ಚರ್ಯೆಗಳು ಶ್ರೀ ಸಾಯಿಬಾಬರವರ ಚರ್ಯೆಗಳ ಜೊತೆ ತುಂಬಾ ಹೋಲಿಕೆಗಳಿವೆ.

ರಾತ್ರಿಹೊತ್ತು ಸೇವಕರೆಲ್ಲರೂ ಸ್ವಾಮಿಯವರ ಸುತ್ತಲೂ ತುಂಬಾ ಹತ್ತಿರ

ಮಲಗುತ್ತಿದ್ದರು. ಯಾವತ್ತೂ ಯಾರನ್ನೂ ಹೋಗಿ ದೂರ ಮಲಗಿಕೊಳ್ಳಿ ಎಂದು ಹೇಳುತ್ತಿರಲಿಲ್ಲ. ಸ್ವಾಮಿಯವರು ನಿರಂತರ ಸಮಾಧಿಯ ಸ್ಥಿತಿಯಲ್ಲಿದ್ದಾಗ, ಅವರ ಸೇವಕರಾಗಲಿ ಅಥವಾ ಭಕ್ತರಾಗಲಿ ಮಾಡುತ್ತಿದ್ದ ಗಲಾಟೆಯಾಗಲಿ, ಬೇರೆಯವರನ್ನು ಮಾಡುತ್ತಿದ್ದ ದೂಷಣೆಯಾಗಲಿ, ರಾಜಕೀಯವಿಮರ್ಶೆಯಾಗಲಿ ಕೇಳುತ್ತಿರಲಿಲ್ಲ, ನಿಲ್ಲಿಸಿ ಎಂದು ಯಾವತ್ತೂ ಹೇಳುತ್ತಿರಲಿಲ್ಲ. "ಪೋತೂವುಂಟೆ ಪೋನಿಚ್ಚೇದೇಗದಯ್ಯಾ"! (ಹೋಗುತ್ತಿದ್ದರೆ ಹೋಗಲು ಬಿಡುವುದೇ ಅಲ್ಲವೇ) ಎಂದು ಒಮ್ಮೆ ಎಂದರು.

ಒಂದು ದಿನ ಸ್ವಾಮಿಯವರು "ಈ ರೋಜು ಎವ್ವರೂ ಮಾಟ್ಲಾಡಕೂಡದು ಸಮುದ್ರ ಸ್ನಾನಾನಿಕಿ ಪೋವಾಲಿ, ವಕ್ಕೆಮ್ಮನು ಕೂಡ ತೀಸುಕುಪೋವಾಲಿ" (ಈ ದಿನ ಯಾರೂ ಮಾತನ್ನಾಡಕೂಡದು, ಸಮುದ್ರ ಸ್ನಾನಕ್ಕೆ ಹೋಗಬೇಕು, ವಕ್ಕೆಮ್ಮನವರನ್ನು ಕರೆದುಕೊಂಡು ಹೋಗಬೇಕು) ಎಂದು ತುಂಬಾ ಅಪರೂಪವಾಗಿ ಆದೇಶಿಸಿದರು.

ಆದರೆ ವಿಚಿತ್ರ ಏನೆಂದರೆ, ಸ್ವಾಮಿಯವರು ಸಮುದ್ರಸ್ನಾನಕ್ಕೂ ಹೋಗಲಿಲ್ಲ, ಆದ್ದರಿಂದ ಮಿಕ್ಕವರಿಗೆ ಅವರ ಮಾತು ಅರ್ಥ ಆಗಲಿಲ್ಲ. ಸ್ವಾಮಿಯವರು ಹೇಳಿದಂತೆಯೇ ಆ ದಿನ ವಕ್ಕೆಮ್ಮ ಸಮುದ್ರ ಸ್ನಾನ ಮಾಡಿಕೊಂಡು ಬಂದಂತೆ ಕನಸು ಕಂಡರು. ಆ ಕನಸು ಕಾಕತಾಳೀಯವಲ್ಲ, ಸ್ವಾಮಿಯವರೇ ಆಕೆಗೆ ಪವಿತ್ರವಾದ ಅನುಭೂತಿಯನ್ನು ಕೊಡುತ್ತಿದ್ದೇನೆಂದು ಭಕ್ತರಿಗೆ ಹಾಗೆ ತಿಳಿಸಿದರು. ಭಕ್ತರು, ಆ ದಿನ ಯಾತಕ್ಕೆ ಮೌನವನ್ನು ಆಚರಿಸಬೇಕೆಂಬುದನ್ನು ಸ್ವಾಮಿಯವರನ್ನು ಕೇಳಲಿಲ್ಲ.

ಓಂ ನಾರಾಯಣ ಆದಿ ನಾರಾಯಾಣ

ಅವಧೂತಲೀಲೆ

ಅಧ್ಯಾಯ 3

ಅವಧೂತ ಲೀಲೆಗಳು

ಮಹನೀಯರು, ಚಿಕ್ಕ ಮಕ್ಕಳಂತೆ, ಹುಚ್ಚರಂತೆ, ಪಿಶಾಚಿಗಳಂತೆ ಭಯಾನಕವಾಗಿ ಕಾಣುತ್ತಾರೆಂದು ಆದಿಶಂಕರರು ಹೇಳಿದ್ದಾರೆ. ಪೂರ್ಣಪುರುಷರಾದ ಶ್ರೀ ಸ್ವಾಮಿಯವರಂತಹ ಮಹನೀಯರ ಪ್ರತಿ ಕಾರ್ಯದ ಹಿಂದೆ ಯಾವುದೋ ಬಲವಾದ ಕಾರಣ ಇರುತ್ತದೆ. ಆ ಕಾರಣ ನಮಗೆ ಅರ್ಥವಾಗದೇ, ಅವರು ಹುಚ್ಚರೆಂದು ನಾವು ಭ್ರಮಿಸುತ್ತೇವೆ. ನಮ್ಮ ದೃಷ್ಟಿಯಲ್ಲಿ ಇಂತಹ ಹುಚ್ಚರ ಕಾರ್ಯಗಳ ನಿಗೂಢತೆ ಅರ್ಥವಾಗುವುದಕ್ಕೆ ಸಮಯ ಹಿಡಿಯುತ್ತದೆ. ಸ್ವಲ್ಪ ಕಾಲದ ನಂತರ, ಬೇರೆ ಭಕ್ತರ ಮೂಲಕ, ಅವರಿಗೆ ಸ್ವಾಮಿಯವರಿಂದ ಹೇಗೆ ರಕ್ಷಣೆ ಹೊಂದಿದರು ಎನ್ನುವುದು ವಿವರಿಸಿದಾಗ, ಸ್ವಾಮಿಯವರ ಅನೇಕ ಲೀಲೆಗಳು ತಿಳಿಯುತ್ತದೆ. ಈ ರೀತಿಯಲ್ಲಿ ತಿಳಿದ ಲೀಲೆಗಳನ್ನು ನಾವು ಇಲ್ಲಿ ಇನ್ನು ಮುಂದೆ ಕಾಣುತ್ತೇವೆ.

ಒಂದು ದಿನ ಸ್ವಾಮಿಯವರು , "ಮಂಟಲು, ಮಂಟಲು, ಆಪಂಡಯ್ಯಾ! ನೀಳ್ಳು ಪೋಯಂಡಿ" (ಉರಿ, ಉರಿ (ಅಗ್ನಿಪ್ರಮಾದ), ಆರಿಸರಯ್ಯಾ, ನೀರು ಸುರಿಯಿರಿ) ಎಂದು ದೇಗಪೂಡಿ ಎಂಬ ಊರಿನ ರಾಮ ದೇವಾಲಯದ ಗೋಡೆಗಳ ಮೇಲೆ ಎಷ್ಟೋ ಬಿಂದಿಗೆಗಳ ನೀರು ಹಾಕಿಸಿದರು. "ಉರಿ ಆರಿ ಹೋಗಿದೆ, ಇನ್ನು ನಿಲ್ಲಿಸಿ" ಎಂದು ಬೇರೆ ಭಕ್ತರು ಹೇಳಿದಾಗ "ಲೇದಯ್ಯ ಇಂಕಾ ಪೊಯ್ಯಾಲಿ ಪೊಯ್ಯಂಡಿ" (ಇಲ್ಲಪ್ಪ, ಇನ್ನೂ ನೀರು ಹಾಕಿ) ಎಂದು ತುಂಬಾ ಸಮಯದ ವರಗೆ ದೇವಾಲಯದ ಮೇಲೆ ಕೂಡಾ ನೀರು ಹಾಕಿಸಿದರು. ತಮ್ಮ ಮಹಿಮೆಯನ್ನು ಅತಿ ಗೋಪ್ಯವಾಗಿ ಇಡುವುದಕ್ಕಾಗಿ ಸ್ವಾಮಿಯವರು ಯಾವ ಭಕ್ತನನ್ನು ಅಗ್ನಿ ಪ್ರಮಾದದಿಂದ ಕಾಪಾಡಿದರು ಎಂದು ನಮಗೆ ಆ ಭಕ್ತನ ವಿವರ ಹೇಳಲಿಲ್ಲ.

ಒಮ್ಮೆ ಸ್ವಾಮಿಯವರ ಕಾಲುಗಳು, ಕೈಗಳು ಮತ್ತು ದೇಹವು ಸುಟ್ಟಿ ಹೋಗಿತ್ತು, ಕಾರಣ ಯಾರಿಗೂ ತಿಳಿಯಲಿಲ್ಲ. ಸ್ವಾಮಿಯವರಿಗೆ ಕೆಲವೊಮ್ಮೆ ಮೂರ್ಛೆ ಬರುತ್ತಿತ್ತು. ರಾತ್ರಿ ಮೂರ್ಛೆಬಂದು ಉರಿಯಲ್ಲಿ ಬಿದ್ದಿದರಿಂದ ಸುಟ್ಟಿರ ಬಹುದು ಎಂದುಕೊಂಡರು ಭಕ್ತರು. ಒಮ್ಮೆ ಸಾಯಿ ಬಾಬಾರವರು, ಅವರ ಒಬ್ಬ ಭಕ್ತನ ಮಗು ಅಗ್ನಿ ಪ್ರಮಾದದಲ್ಲಿ ಸಿಕ್ಕಿಕೊಂಡಾಗ, ಆ ಮಗುವನ್ನು ರಕ್ಷಿಸಲು ಹೋಗಿ ತಮ್ಮ ಶರೀರವನ್ನು ಸುಟ್ಟಿಕೊಂಡಿದ್ದರು. ಹಾಗೆಯೇ, ಸ್ವಾಮಿಯವರ ಶರೀರವೂ ಸುಟ್ಟಿರ ಬಹುದು ಎಂದು ಭಾವಿಸಿ ಕೇಳಿದಾಗ, "ಪೈವಾಳ್ಳೊಚ್ಚಿ ದ್ರಾವಕಮ್ ಪೋಸಿ ಪೋಯಾರಯ್ಯ" (ಮೇಲಿನವರು ಬಂದು, ದ್ರಾವಕ

ಸುರಿದು ಹೋದರಪ್ಪ) ಅಂದರು. ಮೊಣಕಾಲಿನ ಗಾಯಗಳು ಗುಣವಾಗಲು ಆರಂಭಿಸಿದಾಗಲೆಲ್ಲ, ಲೋಳೆಸರದ (Aloevera) ಮುಳ್ಳುಗಳಿಂದ ಗಾಯವನ್ನು ರಕ್ತಸ್ರಾವವಾಗುವವರೆಗೆ ಕೆರೆಯುತ್ತಿದ್ದರು. ಸೇವಕರು ಪಟ್ಟಿಯನ್ನು ಕಟ್ಟಿದಾಗ, ಅದನ್ನು ಕಿತ್ತು ಹಾಕುತ್ತಿದ್ದರು. ಹೀಗೆ ಮೂರು ತಿಂಗಳು ಸಾಗಿದವು. ಹೆಚ್ಚಾಗಿ ಸುಟ್ಟ ಅವರ ಬಲ ಭುಜಕ್ಕೆ ವೈದ್ಯರು ಪಟ್ಟಿ ಕಟ್ಟಲು ಹೋದಾಗ, ಸ್ವಾಮಿಯವರು ಒಪ್ಪಿಗೆ ಕೊಡಲಿಲ್ಲ. ಭಕ್ತರು ಬಲವಂತವಾಗಿ ಔಷಧಿ ಹಾಕಿ ಪಟ್ಟಿಕಟ್ಟಿದರು. ಸ್ವಾಮಿಯವರು, ಸೇವಕರ ಕಣ್ಮರಸಿ, ಆ ಪಟ್ಟಿಯನ್ನು ಚಾಕುವಿನಿಂದ ಕತ್ತರಿಸಿ ಹಾಕುತ್ತಿದ್ದರು. ಸೇವಕರು, ಚಾಕುವನ್ನು ಕೊಡದಿದ್ದಾಗ, ಸ್ವಾಮಿಯವರು ತುಂಬ ಗಲಾಟೆ ಮಾಡುತ್ತಿದ್ದರು. ಭಕ್ತರು ಎರಡು ರಾತ್ರಿ ಕಾವಲು ಕಾಯುತ್ತಾ ಪಟ್ಟಿಯನ್ನು ಕತ್ತರಿಸಲು ಬಿಡಲಿಲ್ಲ. ಮೂರನೇ ರಾತ್ರಿ, ಸೇವಕನು ಒಂದು ಕ್ಷಣ ಕಣ್ಣು ಮುಚ್ಚಿದಾಗ ಸ್ವಾಮಿಯವರು ಪಟ್ಟಿಯ ಜೊತೆ, ಆ ಘಾಯದ ಚರ್ಮವನ್ನೂ ಕತ್ತರಿಸಿ ಒಂದು ಮಡಿಕೆಯಲ್ಲಿ ಹಾಕಿದರು. ಆ ಗಾಯದಿಂದ ರಕ್ತ ಸುರಿಯುವುದನ್ನು ನೋಡಿ ಸೇವಕರು ಭೋ ಎನ್ನುತ್ತ ದುಃಖ ಪಟ್ಟರು. ಆ ಮಡಿಕೆಯಲ್ಲಿ ಇದ್ದ ಚರ್ಮವನ್ನು, ತುಳಸಮ್ಮನವರು, ವೆಂಕಮ್ಮನವರು, ಒಂದು ಡಬ್ಬದ ಒಳಗೆ ಗುಪ್ತವಾಗಿ ಮುಚ್ಚಿಟ್ಟರು. ಆ ಡಬ್ಬದ ಒಳಗಿಂದ, ಒಂದು ಸುಗಂಧ ವಾಸನೆ ಆಶ್ರಮದ ಒಳಗೆಲ್ಲಾ ಹರಿಡಿತು. ಅದರ ಕಾರಣ ಹೇಳಿ ಎಂದು ತುಳಸಮ್ಮಮತ್ತು ವೆಂಕಮ್ಮನವರನ್ನು ಭಕ್ತರು ಕೇಳಿದರು. ಕಡೆಗೆ ವೆಂಕಮ್ಮ ಒಬ್ಬ ಭಕ್ತನಿಗೆ ಆ ಡಬ್ಬದ ಒಳಗಿದ್ದ ಚರ್ಮವನ್ನು ತೋರಿಸಿದರು. ತಕ್ಷಣವೇ ಆ ಸುಗಂಧ ವಾಸನೆ ನಿಂತು ಹೋಯಿತು.

ಸ್ವಾಮಿಯವರು ನಡೆದಾಡುತ್ತಿದ್ದ ಕಾಲದಲ್ಲಿ, ಒಮ್ಮೆ ಹಗಲೂ-ರಾತ್ರಿ ನಿದ್ರಾಹಾರವಿಲ್ಲದೆ ಏಕತಾರ ಮೀಟುತ್ತಿದ್ದರು. ರಾತ್ರಿ ನಿದ್ರೆ ಬಂದರೆ ನೆಗ್ಗಿ ಮುಳ್ಳಿನಲ್ಲಿ ಹಲ್ಲು ಚುಚ್ಚಿಕೊಂಡು ರಕ್ತ ಬಂದಾಗ ಬಾಯಿ ಮುಕ್ಕಳಿಸಿ ಮತ್ತೆ ಮೀಟುವುದನ್ನು ಪ್ರಾರಂಭಿಸುತ್ತಿದ್ದರು.

ಒಮ್ಮ, ಸೇವಕರು ಸ್ವಾಮಿಯವರನ್ನು ಎರಡು ಎತ್ತುಗಳು ಇರುವ ಗಾಡಿಯಲ್ಲಿ ಕೂರಿಸಿ, ಕರೆದುಕೊಂಡು ಹೋಗುತ್ತಿದ್ದರು. ಅವರು ಗಾಡಿಯಲ್ಲಿ ಮಲಗಿದರು. ಸ್ವಲ್ಪ ಸಮಯದ ನಂತರ, ಅವರು ಕಣ್ಣು ಮುಚ್ಚಿಕೊಂಡು ಧ್ಯಾನಸ್ಥರಾದರು. ಗಾಡಿ ತುಂಬಾ ಅಲುಗಾಡಿದರಿಂದ ಅವರು ಇದ್ದ ಸ್ಥಾನದಿಂದ ಜರುಗಿ, ಅವರ ಮೊಣಕಾಲು ಗಾಡಿಯ ಚಕ್ರಕ್ಕೆ ಉಜ್ಜಿಕೊಂಡು ಗಾಯವಾಗಿ ರಕ್ತ ಬರಲು ಪ್ರಾರಂಭವಾಯಿತು. ಸ್ವಲ್ಪ ಸಮಯದ ನಂತರ, ಭಕ್ತರಿಗೆ ಅದು ತಿಳಿದು ಗಾಡಿ ನಿಲ್ಲಿಸಿ, ಸ್ವಾಮಿಯವರಿಗೆ ವಿಚಾರವನ್ನು ಹೇಳಲು ಧೈರ್ಯ ಇಲ್ಲದೆ, ತಡಬಡಿಸುತ್ತಾ, ರಕ್ತ ಒರೆಸಲು ಪ್ರಯತ್ನಿಸಿದಾಗ, ಸ್ವಾಮಿಯವರು, ಧ್ಯಾನದಿಂದ ಎದ್ದು ಅವರನ್ನು ಒರೆಸಲು ಬಿಡಲಿಲ್ಲ. ಸಮಾಧಿ ಸ್ಥಿತಿಯಲ್ಲಿದ್ದ ಶ್ರೀ ರಾಮಕೃಷ್ಣ ಪರಮಹಂಸರನ್ನು ಪರೀಕ್ಷಿಸಲು ಶ್ರೀ ವಿವೇಕಾನಂದರು ಅವರ ತೊಡೆಯ ಮೇಲೆ ಕೆಂಡವನ್ನು ಇಟ್ಟರೂ ಪರಮಹಂಸರು ಅಲುಗಾಡಲಿಲ್ಲ ಎಂದು ಓದಿದ್ದೇವೆ. ಶ್ರೀ ಸ್ವಾಮಿಯವರೂ ಅಂತಹ ಸ್ಥಿತಿಯಲ್ಲಿ ಇದ್ದಿದ್ದನ್ನು ಭಕ್ತರು ಆ ದಿನ ನೋಡಿದರು.

ಸ್ವಾಮಿಯವರು ನಡೆಯಲಾಗದ ದಿನದಲ್ಲಿ ಅವರು ಒಂದು ದಿನ ಅಕ್ಕಿಂ

ವೆಂಕಟ್ರಾಮಿ ರೆಡ್ಡಿಯವರ ಮನೆಯಲ್ಲಿ ಇದ್ದರು. ಸುಮಾರು ರಾತ್ರಿ 10 ಘಂಟೆಯ ಸಮಯದಲ್ಲಿ, ಕೆಲಸ ಮಾಡುತ್ತಿದ್ದ ಸೇವಕರು ಸ್ವಾಮಿಯವರು ಮಲಗಿದ್ದ ಜಾಗದಲ್ಲಿ ಇಲ್ಲದ್ದನ್ನು ಗಮನಿಸಿ, ಹುಡುಕ ತೊಡಗಿದರು. ಅವರು ಒಂದು ಎತ್ತಿನ ಬಂಡಿಯ ಜಾಲದಲ್ಲಿ ಮುದುರುಕೊಂಡು ಮಲಗಿದ್ದರು. 12 ಅಂಗುಲದ ಕರುಳು ಆಸನದಿಂದ ಆಚೆ ಬಂದು ರಕ್ತ ಸುರಿಯುತ್ತಿತ್ತು. ಅದನ್ನ ಒಂದು ಕಾಗೆ ಕುಕ್ಕುತ್ತಿತ್ತು. ಭಕ್ತರು ಆ ಕಾಗೆಯನ್ನು ಓಡಿಸಲು ಹೋದಾಗ, "ಅಯ್ಯೋ, ಅಯ್ಯೋ, ಅದು ಪಾಪಗಳನ್ನು ತೊಲಗುಸುತ್ತಿದೆ, ಅದನ್ನ ಓಡಿಸಿದರೆ ಹೇಗೆ?" ಅಂದರು. ಈ ದೃಶ್ಯವನ್ನು ನೋಡಲಾಗದೆ ವೆಂಕಟ್ರಾಮಿ ರೆಡ್ಡಿಯವರು ಸ್ವಾಮಿಯವರಿಗೆ ಕಾಣದಂತೆ ಗಾಳಿಯಲ್ಲಿ ಕೋಲನ್ನು ಬೀಸಿ ಕಾಗೆಯನ್ನು ಓಡಿಸಿದರು. ಸ್ವಲ್ಪ ಹೊತ್ತಿಗೆ ಕರಳು ಒಳಕ್ಕೆ ಹೋಯಿತು. ಭಕ್ತರು ಸ್ವಾಮಿಯವರನ್ನು ಎತ್ತಿಕೊಂಡು ಮನೆಯೊಳಗೆ ಕರೆತರಲು ಸಹಾಯ ಮಾಡಲು ಬಂದಾಗ, ಅವರು ಅದನ್ನು ಸ್ವೀಕರಿಸಲಿಲ್ಲ ಬದಲಿಗೆ, ತಾವೇ ಬಂದು ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು.

ಅನೇಕ ಜನರು ಸ್ವಾಮಿಯವರ ಸನ್ನಿಧಿಯಲ್ಲಿದ್ದಾಗ, ಅವರಲ್ಲಿ ಕೆಲವರನ್ನು ಬೇರೆ ಬೇರೆ ಸಮಯದಲ್ಲಿ ಎದ್ದು ಮನೆಗೆ ಹೋಗುವಂತೆ ಅಥವಾ ಬೇರೆಡೆ ಕುಳಿತುಕೊಳ್ಳಲು ಅಥವಾ ರಸ್ತೆಯ ಬದಿಗೆ ನಡೆಯಲು ಹೇಳುತ್ತಿದ್ದರು. 1980 ರಲ್ಲಿ ಸ್ವಾಮಿಯವರು ತಮ್ಮ ಭಕ್ತರಾದ ನಾರಾಯಣ ದಾಸುರವರ ಆಶ್ರಮದಲ್ಲಿ ಇದ್ದಾಗ, ತಮ್ಮ ನಾಲ್ಕು ಸೇವಕರನ್ನು ಪೂರ್ವ ದಿಕ್ಕಿನಲ್ಲಿದ್ದ ಗುಡ್ಡದ ವರಗೆ ಹೋಗಿ ಬನ್ನಿ ಎಂದರು. ಇಬ್ಬರು ಹೋಗಿ ಬಂದರೆ, ಒಪ್ಪಿಕೊಳ್ಳಲಿಲ್ಲ, 4 ಜನರನ್ನೂ ಕಳುಹಿಸಿದರು. ಅವರು ಪೂರ್ವ ದಿಕ್ಕಿಗೆ ಹೋಗಿ ವಾಪಸ್ಸು ಬರುತ್ತಿದ್ದಾಗ, ಉತ್ತರ ದಿಕ್ಕಿನಿಂದ ಬರಬೇಕೆಂದು, ಇನ್ನೊಬ್ಬ ಭಕ್ತನ ಜೊತೆ ಆದೇಶವನ್ನು ಕಳುಹಿಸಿದರು. ಇದರ ಅರ್ಥ ಯಾರಿಗೂ ತಿಳಿಯಲಿಲ್ಲ.

ಕೆಲವೊಮ್ಮೆ ಸ್ವಾಮಿಯವರು ತಮಗೆ ತಾವೇ ಜೋರಾಗಿ ನಗುತ್ತಿದ್ದರು, ಏಕೆ ಎಂಬುದು ಯಾರಿಗೂ ಅರ್ಥವಾಗುತ್ತಿರಲಿಲ್ಲ. ಪೆಂಚಲಕೋನ ಎನ್ನುವ ಊರಿನಲ್ಲಿ ಶ್ರೀ ಸ್ವಾಮಿಯವರು ವಾಸವಾಗಿದ್ದಾಗ, ಅವರ ಬಳಿ ಯಾರಾದರೂ ಅನಾರೋಗ್ಯ ಪೀಡಿತರು ಬಂದರೆ, ಅವರು ಗುರವಯ್ಯನವರಿಗೆ ಮಂತ್ರ ಹಾಕುವುದಕ್ಕ ಹೇಳುತ್ತಿದ್ದರು. ನಂತರ, ಸ್ವಾಮಿಯವರು ಗುರವಯ್ಯನಿಗೆ ಮಂತ್ರ ಹಾಕಿ ತಮ್ಮ ಕೃಪೆ ಬೀರುತ್ತಿದ್ದರು.

ಸ್ವಾಮಿಯವರು ಜೀವಂತರಾಗಿದ್ದಾಗ, ಪೆನ್ನಬದ್ವೇಲು ಎಂಬುವ ಗ್ರಾಮದ ಬಳಿ ಇದ್ದ ಅಂಕಾಳಮ್ಮಬೋಟು ಎನ್ನುವ ಪ್ರಾಂತದಿಂದ ಒಬ್ಬ ಮಹಿಳೆ, ತಪ್ಪಿಸಿಕೊಂಡು ಹೋಗಿದ್ದ ತನ್ನ ಮೇಕೆ ಮರಿಯನ್ನು ಹುಡುಕುತ್ತಾ ಸ್ವಾಮಿಯ ಬಿಡದಿ ಹತ್ತಿರ ಬಂದರು. ಆಗ, ಆಕೆಗೆ ಸ್ವಾಮಿಯವರು ಅಗ್ನಿಕುಂಡದ ಒಳಗೆ ಕುಳಿತಿದ್ದಂತೆ ಕಂಡಿತು. ಆ ದೃಶ್ಯವನ್ನು ಕಂಡ ಆಕೆ ಇನ್ನು ಸ್ವಾಮಿಯವರು ನಮಗೆ ಸಿಗುವುದಿಲ್ಲ, ಸ್ವಾಮಿಯ ದರ್ಶನ ಆಗುವುದಿಲ್ಲ ಎಂದುಕೊಂಡು, ಅವರು ಹಿಂತಿರುಗಿದರು. ಮರುದಿನ, ಆಕೆ ಕೆರೆಗೆ ಹೋದಾಗ, ಅಲ್ಲಿ ಸ್ವಾಮಿಯವರು ಕೆರೆಯಲ್ಲಿ ಸ್ನಾನಮಾಡಿ, ತಮ್ಮ ಪಂಚೆ ಯನ್ನು ಒಣಗಿಸುಕೊಳ್ಳುವ ದೃಶ್ಯವನ್ನು ಕಂಡರು. ಈ ವಿಚಿತ್ರವನ್ನು, ಆಕೆ ಗೊಲಗಮೂಡಿಯ ಆಶ್ರಮದಲ್ಲಿ ಎಲ್ಲರಿಗೂ ಹೆಳಿದರು.

ಒಮ್ಮೆ ಸ್ವಾಮಿಯವರು, ಅವರ ಕಾಲಿಗೆ ಮುಳ್ಳು ಸಿಕ್ಕಿದ್ದರಿಂದ, ಅವರು ಸೇವಕರಿಗೆ ಅದನ್ನ ತೆಗೆಯಲು ಹೇಳಿದರು. ಅವರುಗಳು ಎಷ್ಟೋ ಪ್ರಯತ್ನಿಸಿದರೂ ತೆಗೆಯಲು ಸಾಧ್ಯವಾಗಲಿಲ್ಲ. ಕೋಡೂರು ವೆಂಕಮ್ಮನವರಿಗೆ ತಮ್ಮ ಕಾಲುಕೊಟ್ಟು, ಮುಳ್ಳು ತೆಗೆಯಲು ಹೇಳಿದರು. ಆಕೆ ಎಷ್ಟೋ ಆಳವಾಗಿ ಸೂಜಿಯಿಂದ ಚುಚ್ಚಿ, ಕೊನೆಗೆ 3 ಅಂಗುಲದ ಮುಳ್ಳನ್ನು ತೆಗೆದರು. ಅಷ್ಟು ಚುಚ್ಚುತ್ತಿದ್ದರೂ ಸ್ವಾಮಿಯವರು "ಅಬ್ಬ" ಅಂತಲೂ ಅನ್ನದೇ ಕಾಲನ್ನು ಕದಲಿಸದೇ ಕುಳಿತಿದ್ದರು. ಅಷ್ಟು ದೊಡ್ಡ ಮುಳ್ಳು ಕಾಲಿನಲ್ಲಿ ಇದ್ದಾಗ, ಹೇಗೆ ನಡೆದು ಬಂದರೋ! ಮುಳ್ಳು ತೆಗೆದ ವೆಂಕಮ್ಮನಿಗೆ ಒಂದು ಮುಳ್ಳು, ಸೂಜಿ, ಒಂದು ಬ್ಲೇಡು ಉಡುಗೊರೆಯಾಗಿ ಕೊಟ್ಟರು.

ನೆಲ್ಲೂರಿನಲ್ಲಿ ಟ್ರಾಫಿಕ್ ಜಾಸ್ತಿ ಆದ್ದರಿಂದ, ಶ್ರೀ ಸ್ವಾಮಿಯವರನ್ನ ಯಾವಾಗಲೂ, ಭಕ್ತರ ಮನೆಯಿಂದಾಗಲಿ ಅಥವ ದತ್ತಾತ್ರೇಯ ಮಂದಿರದಿಂದ ಆಗಲಿ ಬಸ್ಸು ನಿಲ್ದಾಣಕ್ಕೆ ರಿಕ್ಷಾದಲ್ಲಿ ಕರೆದೊಯ್ಯುತ್ತಿದ್ದರು. ಒಮ್ಮೆಸೇವಕರು, ಶ್ರೀ ಸ್ವಾಮಿಯವರನ್ನು ಒಬ್ಬರನ್ನೇ ವೆಂಕಟ್ರಾವು ಮನೆಯಲ್ಲಿ ಬಿಟ್ಟು, ಸಿನಿಮಾ ನೋಡಿಕೊಂಡು ಬಂದರು. ಮರುದಿನ, ಬಸ್ಸು ನಿಲ್ದಾಣಕ್ಕೆ ಹೋಗಲು ರಿಕ್ಷಾ ತಂದರೆ, ಅದರಲ್ಲಿ ಕುಳಿತು ಕೊಳ್ಳದೇ, ಡೋಲಿಯಲ್ಲಿ ಕರೆದೊಯ್ಯಲು ಹೇಳಿದರು. ರಾತ್ರಿ ಹೇಳದೇ ಸಿನಿಮಾಕ್ಕೆ ಹೋಗಿದ್ದರಿಂದ, ಈ ಶಿಕ್ಷೆ ಎಂದು ಆ ಸೇವಕರು ಗ್ರಹಿಸಿದರು. ಸ್ವಾಮಿಯವರ ಸೇವೆಯಲ್ಲಿ, ಅವರು ಹೇಳಿದ ರೀತಿ ಬಿಟ್ಟು ಬೇರೆಯ ರೀತಿ ಮಾಡಿದರೆ, ಅದನ್ನು ದೋಷವಾಗಿ ಪರಿಗಣಿಸಿ, ಸ್ವಾಮಿಯವರು, ಮೌನದಿಂದಿದ್ದು ಪ್ರಧಾನ ಸೇವಕನಿಗೆ ಶಿಕ್ಷೆ ಅನುಭವ ಆಗುವಂತೆ ಮಾಡಿ, ಇದು, ಇದಕ್ಕೆ ಶಿಕ್ಷೆ ಎಂದು ಆತ್ಮದಲ್ಲಿ ತಿಳಿಸುತ್ತಿದ್ದರು.

ರಾಜಪದ್ಮಾಪುರದ ನಿವಾಸಿಯಾದ ಬಿರಿಜೇಪಲ್ಲಿ ಮಸ್ತಾನ್ನಾಯುಡುರವರು ತಾವು ನೋಡಿದ ಒಂದು ಅಸಾಧಾರಣ ಲೀಲೆಯನ್ನು ವಿವರಿಸಿದರು. ಸ್ವಾಮಿಯವರು ಒಂದು ಮನೆಗೆ ಹೋಗಿ, "ಅಮ್ಮಾ ತಿನ್ನುವುದಕ್ಕೆ ಏನಾದರು ಕೊಡು ತಾಯೀ" ಎಂದರು. ಆದರೆ, ಆಕೆ ಮನೆಯಲ್ಲಿ ಸ್ವಾಮಿಯವರಿಗೆ ಸಮರ್ಪಿಸಲು ಏನೂ ಇರಲಿಲ್ಲ. ಈ ಪರಿಸ್ಥಿತಿ ಯನ್ನು ಸ್ವಾಮಿಯವರಿಗೆ ಹೇಗೆ ಹೇಳುವುದು ಎಂದು ಆಲೋಚಿಸುತ್ತಿದ್ದರು. ಸ್ವಾಮಿಯವರಿಗೆ ಆಕೆಯ ಪರಿಸ್ಥಿತಿ ಗೊತ್ತಿಲ್ಲದೇ ಇರಲಿಲ್ಲ. "ಅಮ್ಮಾ ಸ್ವಲ್ಪ ಕಾರದ ಪುಡಿ ಯನ್ನು ಕೊಡು" ಎಂದರು. ಆಕೆ, ಅಡುಗೆಗೆ ಉಪಯೋಗಿಸುತ್ತಾರೆ ಅಂತ ಅಂದುಕೊಂಡು 1 ಗ್ಲಾಸ್ ತುಂಬಾ ಮೆಣಸಿನ ಪುಡಿ ತಂದು ಒಂದು ತಟ್ಟೆಯಲ್ಲಿ ಹಾಕಿ ಕೊಟ್ಟರು. ಆ ತಟ್ಟೆಯಲ್ಲಿದ್ದ ಕಾರದಪುಡಿಯನ್ನು 2 ನಿಮಿಷಗಳಲ್ಲಿ ಚಪ್ಪರಿಸುತ್ತಾ ತಿಂದು ಮುಗಿಸಿ, ಕೈಯನ್ನು ಕೊಡುವಿಕೊಂಡರು. "ಇಕ ವ್ರಾಸುಕೋ ಅಯ್ಯಾ" (ಇನ್ನು ಬರೆದುಕೋ ಅಪ್ಪ) ಎಂದು ಆಕೆಗೆ, ಒಂದು ಆಶೀರ್ವಾದದ ಹಾಮಿಪತ್ರ ಬರೆಯಿಸಿ ಕೊಟ್ಟು ಹೊರಟರು.

ಓಂ ನಾರಾಯಣ ಆದಿ ನಾರಾಯಾಣ

ಅವಧೂತಲೀಲೆ

ಅಧ್ಯಾಯ 4

ಸರ್ವಜ್ಞ ಮೂರ್ತಿ

2 **ಸಾಧನೆಯ ಮೂಲಕ ಸದ್ಗುರುವಿನ ಕೃಪೆ ಪಡೆದು, ಅವರ ಅನುಗ್ರಹದಿಂದ ಆತ್ಮಜ್ಞಾನ ಹೊಂದಿದ ಮಹನೀಯರೇ ಸಿದ್ಧ ಪುರುಷರು.** ಶಾಸ್ತ್ರದಲ್ಲಿ ಭಗವಂತನ ವಿಚಾರವಾಗಿ ಹೇಳಲ್ಪಟ್ಟ ಗುಣಗಳು ಏನಂದರೆ, ಸರ್ವಜ್ಞತ್ವ, ಸರ್ವಸಮರ್ಥತೆ, ಸರ್ವವ್ಯಾಪಕತ್ವ, ಇವು ಸಂಪೂರ್ಣವಾಗಿ ಪ್ರಕಟವಾಗುವುದೇ ಭಕ್ತರಿಗಾಗುವ ಅನುಭವ. ಇಂತಹ ಮಹನೀಯರು ಪ್ರಪಂಚದಲ್ಲಿ ಎಲ್ಲೆಲ್ಲಿ ಏನೇನು ಜರುಗುತ್ತಿದೆಯೋ ಎಂದು ತಿಳಿದುಕೊಂಡು ತಮ್ಮ ಭಕ್ತರನ್ನು ಅದ್ಭುತರೀತಿಯಲ್ಲಿ ಸಂಕಟಗಳಿಂದ ರಕ್ಷಿಸುತ್ತಿರುತ್ತಾರೆ. ಈ ಅಧ್ಯಾಯದಲ್ಲಿ ಸ್ವಾಮಿಯವರ ಸರ್ವಜ್ಞತ್ವ, ಸರ್ವಸಮರ್ಥತೆಯನ್ನು ಕಾಣುತ್ತೇವೆ.

ಗೊಲಗಮೂಡಿಯಲ್ಲಿದ್ದ ಎಸ್.ಕೆ ಮಸ್ತಾನ್ ಎಂಬ ಮುಸ್ಲಿಂ ಭಕ್ತರ ತಂದೆ, ಶಿಕಾರಿ ಮಾಡಲು ಹೊರಗೆ ಹೋದರು. ಅವರು ಹೊರಗೆ ಹೋದ ಸ್ವಲ್ಪ ಹೊತ್ತಿನಲ್ಲೇ ತುಂಬ ಜೋರಾಗಿ ಮಳೆ ಬಂದಿತು. ಮನೆಯಿಂದ ಹೊರಗೆ ಹೋದ ವೃದ್ಧರು, 3 ದಿನಗಳಾದರೂ ಮನೆಗೆ ಬರಲಿಲ್ಲ, ಅವರನ್ನು ಎಲ್ಲಕಡೆ ಹುಡುಕಿದರು. "ಅವರು ಎಲ್ಲಿದ್ದಾರೋ ತಿಳಿಸಿ ಎಂದು ಸ್ವಾಮಿಯವರನ್ನ ಬೇಡಿಕೊಂಡರು". ಸ್ವಾಮಿಯವರು "ಆಯನ ವೇಷಂ ಮಾರ್ಚುಕುನ್ನಾರು. ರೇಪು ಪಂಜರಂ ತೆಸ್ತಾರು" (ಆತ ವೇಷ ಬದಲಾಯಿಸಿಕೊಂಡಿದ್ದಾರೆ. ನಾಳೆ ಪಂಜರ ತರುತ್ತಾರೆ) ಎಂದು ಹೇಳಿದರು. ಸ್ವಾಮಿಯವರ ಮಾತುಗಳು ಯಾರಿಗೂ ಅರ್ಥವಾಗಲಿಲ್ಲ. ಬೆಳಗಾಗುವ ಹೊತ್ತಿಗೆ ಯಾರದ್ದೋ ಶವ ಸಿಕ್ಕಿತೆಂದು ತಿಳಿದು ಹೋಗಿ ನೋಡಿದರು. ಆ ಶವದಲ್ಲಿ ಬರೀ ಮೂಳೆಗಳು ಮಾತ್ರವೇ ಕಾಣುತ್ತಿತ್ತು. ಮಾಂಸವನ್ನೆಲ್ಲಾ ಮೀನುಗಳು ತಿಂದುಬಿಟ್ಟಿದ್ದವು. ಆ ಅಸ್ತಿಪಂಜರಕ್ಕೆ ಇದ್ದ ಬಟ್ಟೆಯನ್ನು ನೋಡಿ ಅದು ಅವರ ತಂದೆಯವರೇ ಎಂದು ಗುರ್ತಿಸಿದರು. ಆ ಅಸ್ತಿಪಂಜರವನ್ನು ತಂದು ಅವರ ಮುಸ್ಲಿಂ ಸಂಪ್ರದಾಯಕ್ಕೆ ಅನುಗುಣವಾಗಿ ಸಮಾಧಿಯನ್ನು ಮಾಡಿದರು.

"ಆಯನ ವೇಷಂ ಮಾರಿಂದಿ" (ಆತನ ವೇಷ ಬದಲಾಗಿದೆ) ಎಂದು ಸ್ವಾಮಿಯವರು ಹೇಳಿದ್ದಕ್ಕೆ ಅರ್ಥ, ಆ ವೃದ್ಧರು ಮರಣ ಹೊಂದಿ ಬೇರೆ ದೇಹದಲ್ಲಿ ಇದ್ದಾರೆಂದು, ಮತ್ತು "ಪಂಜರಮು ತೆಸ್ತಾರು" (ಪಂಜರ ತರುತ್ತಾರೆಂದರೆ), ಬರೀ ಅಸ್ತಿ ಪಂಜರ ಮಾತ್ರವೇ ಸಿಗುತ್ತದೆ ಎಂದು ಆಮೇಲೆ ಎಲ್ಲರಿಗೂ ಅರ್ಥವಾಯಿತು.

ಮುನಿಕೂಟಿ ರಾಮಯ್ಯನವರ (ಮಹಿಮಲೂರು ಎಂಬ ಊರಿನ ನಿವಾಸಿ`)

ಮನೆಯಲ್ಲಿ ಸ್ವಾಮಿಯವರು ಇದ್ದಾಗ, ಆ ಹಳ್ಳಿಯವರು, ಸ್ವಾಮಿಯವರನ್ನ ತಮ್ಮ ಮನೆಗೂ ಬನ್ನಿ ಎಂದು ಆಹ್ವಾನಿಸಿದರು. "ದಾರಿಲೋ ಮುಂಡ್ಲು ಮಂಡಲೇಸಿ ಬಿಗಿಂಚಾರು, ವಚ್ಚೇದಾನಿಕಿ ವೀಲುಲೇದು" (ದಾರಿಯಲ್ಲಿ ಮುಳ್ಳುಗಳ ಅಡಚಣೆ ಇರುವುದರಿಂದ ಬರಲು ಆಗುವುದಿಲ್ಲ) ಎಂದರು ಸ್ವಾಮಿಯವರು. ಈ ಮಾತುಗಳ ಅರ್ಥ ಮನಸ್ಸಿನಲ್ಲಿರುವ ದುರ್ಗುಣಗಳೇ ಭಕ್ತಿ ಮಾರ್ಗಕ್ಕೆ ಅಡ್ಡಿ ಎನ್ನುವ ಭಾವನೆ ಇರಬಹುದು.

ಮಡಪಲ್ಲಿಯಲ್ಲಿ ಶ್ರೀ ಸ್ವಾಮಿಯವರು ಇದ್ದಾಗ, ನಾಗುಲವೆಲ್ಲಟೂರಿನ ಕೆಲವು ರೈತರು ಸ್ವಾಮಿಯವರನ್ನು ದರ್ಶಿಸಿದರು. "ಸ್ವಾಮಿ, ನಾವು ಜೋಳದ ಪೈರು ಹಾಕಿದ್ದೇವೆ, ಈ ವರ್ಷ ಫಸಲು ಚೆನ್ನಾಗಿ ಬರುತ್ತಾ" ಎಂದು ಕೇಳಿದರು. ಸ್ವಾಮಿಯವರು "ಕರ್ರಕಿ ಇದ್ದರು ಕದಯ್ಯ" (ಕಡ್ಡಿಗೆ ಇಬ್ಬರಲ್ಲವೇ) ಎಂದರು. ಜೋಳದ ಪೈರು ಚೆನ್ನಾಗಿ ಬರುತ್ತದೋ ಇಲ್ಲವೋ ಹೇಳಲಿಲ್ಲ. ಸ್ವಾಮಿಯವರು ಹೇಳಿದಂತೆ 10 ದಿನದಲ್ಲಿ ತೆನೆಗೆ 2 ಹುಳಗಳು ಬಂದು ಎಲ್ಲರ ಪೈರು ನಾಶವಾಗಿ ಹೋಯಿತು.

ಶ್ರೀ ಸ್ವಾಮಿಯವರ ಸಹೋದರಿ ಮಂಗಮ್ಮ ಅವರನ್ನು ಅತ್ಯಂತ ಬಡ ಕುಟುಂಬದಲ್ಲಿ ವಿವಾಹವಾಗಿದ್ದರು. ಅವರ ಜೀವನೋಪಾಯವನ್ನು ಪೂರೈಸುವುದು ದೈನಂದಿನ ಸವಾಲಾಗಿತ್ತು. ಒಂದು ದಿನ ಸ್ವಾಮಿಯವರು, ಉನ್ಮತ್ತಾವಸ್ಥೆಯಲ್ಲಿದ್ದಾಗ, ಮಂಗಮ್ಮನನ್ನು ತಮ್ಮ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದರಿಂದ ತಮ್ಮೊಂದಿಗೆ ಬರಲು ಕರೆದರು. ಆಕೆ, ಮನಸ್ಸಿನಲ್ಲಿಯೇ "ನಾನು ಈ ಹುಚ್ಚನೊಂದಿಗೆ ಹೋದರೆ, ಅವನು ನನ್ನನ್ನು ಯಾವುದಾದರೂ ಮರ ಅಥವಾ ಕಾಡಿನಲ್ಲಿ ಬಿಟ್ಟು ಹೋಗುತ್ತಾನೆ ಎಂದು ಅವಳು ಭಾವಿಸಿದಳು". ತಕ್ಷಣವೇ ಸರ್ವಜ್ಞಮೂರ್ತಿಯಾದ ಸ್ವಾಮಿಯವರು "ಏಂದಮ್ಮಾ ನಿನ್ನು ಚೆಟ್ಟುಕೋ ಪುಟ್ಟಕೋ ವದಿಲೇಸಿ ಪೋತಾನಾ? ಭಲೇದಾನಿವೇ!" (ಏನಮ್ಮ ನಿನ್ನನ್ನ ಮರದ ಹತ್ತಿರವೋ, ಹುತ್ತದ ಹತ್ತಿರವೋ ಬಿಟ್ಟು ಹೋಗುತ್ತೇನೆಯೇ? ಒಳ್ಳೇ ಹುಡುಗಿ) ಎಂದರು.

ಸ್ವಾಮಿಯವರು, ತಮ್ಮ ಅನುಯಾಯಿಗಳೊಂದಿಗೆ ಚಿಟ್ಟೆಪಾಳೆಂ ಎಂಬ ಗ್ರಾಮದಲ್ಲಿದ್ದರು. ಆ ಸಮಯದಲ್ಲಿ, ಗೊಲಗಮೂಡಿಯಲ್ಲಿದ್ದ ಒಬ್ಬ ಭಕ್ತ ಕೊಱ್ಱಕೂಟಿ ಬುಜ್ಜಯ್ಯನಿಗೆ ಅನಾರೋಗ್ಯ ಆಗಿದ್ದರಿಂದ, ಪಥ್ಯದಲ್ಲಿ ಇರಬೇಕಾಗಿಬಂದಿತು. ಆದ್ದರಿಂದ, ಸ್ವಾಮಿಯವರ ಹತ್ತಿರ ಹೋದರೆ, ಪಥ್ಯ ಮಾಡಲಾಗುವದಿಲ್ಲ ಎಂದು ಹೋಗಲಿಲ್ಲ. ನನಗೆ ಸತ್ಸಂಗ ಮಾಡಲು ಯಾರು ಇಲ್ಲ. ಸ್ವಾಮಿಯವರ ಸೇವಕನಾದ ರಾಮನಾಯುಡು ನನ್ನ ಹತ್ತಿರ ಇದ್ದರೆ ಒಳ್ಳೆ ಮಾತನ್ನು ಆಡುತ್ತಿದ್ದರು. ಈ ಹಳ್ಳಿಯಲ್ಲಿ ನನಗೆ, ಯಾರೂ ಅಂತಹ ಒಳ್ಳೆಯ ಒಡನಾಡಿಯೂ ಇಲ್ಲ ಎಂದು, ಮನಸ್ಸಿನಲ್ಲಿ ಸ್ವಾಮಿಯವರನ್ನು ಸ್ಮರಿಸಿ, ದುಃಖ ಪಟ್ಟರು. ಅದೇ ಸಮಯದಲ್ಲಿ ಸ್ವಾಮಿಯವರು, ರಾಮನಾಯಡುರವರನ್ನು ಗೊಲಗಮೂಡಿಗೆ ಹೋಗು ಎಂದು ಹೇಳಿದರು. ನಿತ್ಯವೂ ತಮ್ಮ ಹತ್ತಿರವೇ ಇಟ್ಟುಕೊಳ್ಳುತ್ತಿದ್ದ ಸ್ವಾಮಿಯವರು ಏಕೆ ಹೋಗು ಎಂದು ಹೇಳಿದರೋ ತಿಳಿಯಲಿಲ್ಲ. ನಾಯುಡುರವರು ತಕ್ಷಣವೇ ಹೊರಟು ಬುಜ್ಜಯ್ಯನವರನ್ನು ಭೇಟಿ ಆದಾಗ, ಕಾರಣ ತಿಳಿಯಿತು.

ಸೋಮಶಿಲ ಎಂಬ ಗ್ರಾಮದ ಹತ್ತಿರ ಇದ್ದ ಬೆಟ್ಟದ ಮೇಲೆ, ಸ್ವಾಮಿಯವರು

ಒಂದು ಚಿಕ್ಕ ಗುಡಿಸಲು ಹಾಕಿಕೊಂಡು ಚಿಕ್ಕ ದೀಪವನ್ನು ಇಟ್ಟಿಕೊಂಡು ರಾತ್ರಿಯೆಲ್ಲ ತಂಬೂರಿ ಮೀಟುತ್ತಾ ಇರುತ್ತಿದ್ದರು. ಒಂದು ಸಂಜೆ, ಅವರ ಹತ್ತಿರ ಸೇವೆ ಮಾಡುತ್ತಿದ್ದ ಚಲಮಾನಯುಡುರವರನ್ನು "ಇಬ್ಬರು ಮನುಷ್ಯರಿಗೆ ಸರಿಯಾಗುವಷ್ಟು ಊಟ ತೆಗೆದುಕೊಂಡು ಬಾ ಎಂದು ಹೇಳಿದರು. ಸ್ವಾಮಿಯವರ ಭಕ್ತರಿಗೆ ಸ್ವಾಮಿಯವರ ಆದೇಶದ ಒಳಾರ್ಥತಿಳಿದಿದ್ದರಿಂದ, ಅನ್ನದ ಜೊತೆ, ವಡೆ ಪಾಯಸ ತಯಾರು ಮಾಡಿ ಕೊಟ್ಟರು. ಆ ದಿನ ರಾತ್ರಿ 7 ಘಂಟೆಯ ಸಮಯದಲ್ಲಿ, ಮಾರ್ಗ ತಿಳಿಯದೆ ಗೊಂದಲದಲ್ಲಿದ್ದ ತಲಪೂರು ಪೆಮ್ಮಸಾನಿ ಮಸ್ತಾನಯ್ಯ ಮತ್ತು ಅವರ ಸ್ನೇಹಿತರು ಸ್ವಾಮಿಯವರ ದರ್ಶನಕ್ಕಾಗಿ ಬಂದರು. ಅವರುಗಳು ಬರುವ ಮೊದಲೇ ಸ್ವಾಮಿಯವರು ಅವರಿಗೋಸ್ಕರ ಔತಣ ತಯಾರು ಮಾಡಿಸಿದ್ದು ತುಂಬಾ ಆಶ್ಚರ್ಯಕರವಾದ ವಿಷಯ.

ಒಮ್ಮೆ, ತೂಪಿಲಿ ಪಿಚ್ಚಮ್ಮನವರು, ಸ್ವಾಮಿಯವರ ಆಶ್ರಮದಲ್ಲಿ ತನ್ನ ಸ್ನೇಹಿತೆಯೊಂದಿಗೆ ಬಂದು, ಭಜನೆ ಕಾರ್ಯಕ್ರಮವನ್ನು ಏರ್ಪಾಡು ಮಾಡಿದರು. ಆಗ ಸ್ವಾಮಿಯವರು ಆಶ್ರಮದಲ್ಲಿ ಇರಲಿಲ್ಲವಾದ್ದರಿಂದ, ಅವರ ಅನುಮತಿ ಪಡೆಯಲಿಲ್ಲ. ಸ್ವಾಮಿಯವರು ಎಲ್ಲೊ ದೂರದ ಜಾಗದಲ್ಲಿ ಇದ್ದು, ಅವರ ಸೇವಕರಿಗೆ "ಆಶ್ರಮದಲ್ಲಿ ಒಳ್ಳೇ ಭಜನೆ ನಡಿಯುತ್ತಿದೆ, ಅಲ್ಲಿಗೆ ಹೋಗಬೇಡವೇ? ನಡೆಯಿರಿ" ಎಂದು ಅವರ ಸೇವಕರೊಂದಿಗೆ ಬಂದು ಭಜನೆ ಮಂಡಲಿಯನ್ನು ಆಶಿರ್ವದಿಸಿದರು.

ಮಾನವರ ಪ್ರಾರಬ್ಧಕರ್ಮಗಳು ಎರಡು ವಿಧಗಳು. ಕೆಲವು ಕರ್ಮಗಳು ಧ್ಯಾನ, ಪ್ರಾರ್ಥನೆ ಮತ್ತು ತಪಸ್ಸಿನಿಂದ ಹೋಗಿಸಿಕೊಳ್ಳಬಹುದು, ಇನ್ನು ಕೆಲವು ಅನುಭವಿಸಲೇಬೇಕು. ಯಾರ ಕರ್ಮಗಳು ಯಾವ ವಿಧವಾದ್ದು ಎನ್ನುವುದು ಒಬ್ಬ ಸದ್ಗುರುವಿಗೆ ಮಾತ್ರ ತಿಳಿಯುತ್ತದೆ. ಮನುಷ್ಯರು ತಮ್ಮ ಅಜ್ಞಾನದಿಂದ ತಮ್ಮ ಕಷ್ಟಗಳನ್ನು ಸ್ವಾಮಿಯವರು/ಸದ್ಗುರುಗಳು ಕೂಡ ಸಂಪೂರ್ಣವಾಗಿ ನಿವಾರಣೆ ಮಾಡಲಾಗಲಿಲ್ಲವೆಂದು ಒಂದು ನಿರ್ಧಾರಕ್ಕೆ ಬಂದುಬಿಟ್ಟು, ದುಃಖ ಪಡುತ್ತಾರೆ. ಆ ದುಃಖದಲ್ಲಿ, ಕಷ್ಟಗಳನ್ನು ಕಮ್ಮಿ ಮಾಡು ಎಂದು ಭಗವಂತನನ್ನು ಪ್ರಾರ್ಥಿಸುತ್ತಾರೆ. ಆಗ ಭಗವಂತ/ಸದ್ಗುರುಗಳು, ಇವರ ಪ್ರಾರ್ಥನೆಯನ್ನು ಮನ್ನಿಸಿ, ಇವರು ಅನುಭವಿಸಲೇಬೇಕಾದ್ದ ಕಷ್ಟಗಳನ್ನು ಮುಂದಿನ ಜನ್ಮಕ್ಕೆ ಮುಂದೂಡುತ್ತಾರೆ. ಹಿರಿಯರು ಹೇಳುವಹಾಗೆ, ಭಗವನ್ನಾಮ ಸ್ಮರಣೆಯಿಂದ ತಪ್ಪದೇ ಅನುಭವಿಸಬೇಕಾದ್ದ ಕರ್ಮಗಳು ಕೂಡ, ಕಡಿಮೆ ಮಾಡಿಕೊಳ್ಳಬಹುದು. ಆದರೆ ಸದ್ಗುರುಗಳು ಮಾತ್ರ, ತಮ್ಮ ಕರ್ಮಗಳನ್ನು ಸಂಪೂರ್ಣವಾಗಿ ಈ ಜನ್ಮದಲ್ಲೇ ಅನುಭವಿಸುತ್ತಾರೆ. ಈ ವಿಷಯವನ್ನು ಸ್ವಾಮಿಯವರೇ ತಮ್ಮ ಭಕ್ತರಿಗೆ ಸ್ಪಷ್ಟಪಡಿಸಿದರು.

ದಾಚೂರಿಯಲ್ಲಿ ವಾಸವಾಗಿದ್ದ ಕಸ್ತೂರಿ ಅಂಕಯ್ಯನವರು ಹೀಗೆ ಹೇಳಿದರು. “ಸ್ವಾಮಿಯವರಿಗೆ ಮೊಣಕಾಲುಗಳಲ್ಲಿನ ಬಿಗಿತದಿಂದ ಅವರಿಗೆ ಬಗ್ಗಲಾಗುತ್ತಿರಲಿಲ್ಲ. ಎಲ್ಲರೂ ಚಿಕಿತ್ಸೆ ಮಾಡಿಸಿಕೊಳ್ಳಿ ಎಂದು ಎಷ್ಟು ಬೇಡಿಕೊಂಡರೂ, ಸ್ವಾಮಿಯವರು ಚಿಕಿತ್ಸೆಗೆ ಅನುಮತಿ ಕೊಡಲಿಲ್ಲ. ಯಾವ ಚಿಕಿತ್ಸೆ ಮಾಡಿದರೆ ಅವರ ಕಾಲು ಗುಣವಾಗುತ್ತದೆಯೋ ಆ ಚಿಕಿತ್ಸೆ ಮಾಡು ಎಂದು ಸ್ವಾಮಿಯವರು ನಾನು ಕೇಳದೇ ನನಗೆ

ಹೇಳಬೇಕು. ಆ ಚಿಕಿತ್ಸೆ ನಾನು ಮಾಡಿ ಅವರ ಕಾಲನ್ನು ಗುಣಪಡಿಸಬೇಕು" ಎಂದುಕೊಂಡು, ಗೊಲಗಮೂಡಿಗೆ ಬಂದು, ತಮ್ಮ ಕೆಲಸ ಮುಗಿಯುವವರೆಗೆ, ಸ್ವಾಮಿಯ ಸನ್ನಿಧಿಯಲ್ಲಿಯೇ ಇರಬೇಕೆಂದು ನಿರ್ಧಾರ ಮಾಡಿದರು. ಅವರು ಬಂದಾಗ ಅಲ್ಲಿ ಭಜನೆ ನಡೆಯುತ್ತಿತ್ತು. ಅಂಕಯ್ಯನವರು ಮೌನವಾಗಿ ಸ್ವಾಮಿಯವರ ಎದುರಿಗೆ ಕುಳಿತುಕೊಂಡು ತಮ್ಮ ಕೋರಿಕೆಯನ್ನು ಸ್ಮರಿಸುತ್ತಲೇ ಇದ್ದರು. ಸರ್ವಜ್ಞಮೂರ್ತಿ ಆದ ಸ್ವಾಮಿಯವರು "ಇತನಿಕೆಂದುಕಯ್ಯಾ! ಲೆಕ್ಕ ತಗ್ಗಿ ಪೋತುಂದಿ ಆಮಾಯನ್ನೇ ಕೂರ್ಚುಂಟೇ" (ಈತನಿಗೆ ಯಾಕೆ ಬೇಕಯ್ಯ? ಲೆಖ್ಖ ಕಡಿಮೆಯಾಗುತ್ತದೆ) ಎಂದರು. ಅಂಕಯ್ಯನವರು ಭಜನೆಗೆ ಹೋಗಿ ಮತ್ತೆ ರಾತ್ರಿ 2.30 ಘಂಟೆಗೆ ಸ್ವಾಮಿಯವರ ಮುಂದೆ ಬಂದು, ಅದೇ ಕೋರಿಕೆಯನ್ನು ಮನಸ್ಸಿನಲ್ಲೆ ಅಂದುಕೊಳ್ಳುತ್ತಿದ್ದಾಗ, ಸ್ವಾಮಿಯವರು "ಅಟ್ಲಾ ಅಡಗಕೂಡದಯ್ಯಾ" (ಹಾಗೆ ಕೇಳಬಾರದಯ್ಯ) ಎಂದರು. ಅಂಕಯ್ಯ ಹಾಗೆ ಮಾಡಲಾಗುವುದಿಲ್ಲ, ಹೇಳಲೇಬೇಕು ಎನ್ನುವಂತೆ ತಲೆ ಆಡಿಸಿದರು. ತಕ್ಷಣ ಸ್ವಾಮಿಯವರು ಉಚ್ಚಸ್ವರದಲ್ಲಿ "ಅಟ್ಲೈತೇ ಮರಲಾ ರಾವಾಲಯ್ಯಾ! ತಪ್ಪು, ಅಟ್ಲಾ ಅಡಗಕೂಡದು!" (ಹಾಗಾದರೆ ಮತ್ತೆ ಬರಬೇಕಯ್ಯಾ ತಪ್ಪು! ಹಾಗೆ ಕೇಳಬಾರದು) ಎಂದು ಗರ್ಜಿಸಿದರು. (ಸ್ವಾಮಿಯವರ ಮಾತಿನ ಅರ್, ಈ ಜನ್ಮದಲ್ಲಿ ಸ್ವಾಮಿಯವರು ಕಾಲುನೋವಿನ ಕರ್ಮವನ್ನು ಅನುಭವಿಸದಿದ್ದರೆ, ಮತ್ತೆ ಇನ್ನೊಂದು ಜನ್ಮ ಎತ್ತಿ ಅನುಭವಿಸಬೇಕಾಗುತ್ತದೆ ಎಂದು) .

ಇಂದುಕೂರುಪೇಟೆಯ ಆತ್ಮಕೂರು ವೆಂಕಯ್ಯನವರ ಮನೆಗೆ ಒಮ್ಮೆ ಸ್ವಾಮಿಯವರು ಹೋದರು. ಶ್ರೀ ಸ್ವಾಮಿಯವರು, ವೆಂಕಯ್ಯನವರ ಹತ್ತಿರ ಇದ್ದ ಎತ್ತುಗಳನ್ನು ನೋಡಿ "ಅಯ್ಯಾ! ದೀನಿಕಿ ಕಾಲು ಗಂಡಮು ವುಂದಿ" (ಅಯ್ಯಾ! ಇವಕ್ಕೆ ಕಾಲಿನ ಗಂಡಾಂತರವಿದೆ) ಎಂದರು, ಆದರೆ, ಆದರ ನಿವಾರಣೋಪಾಯ ಹೇಳಲಿಲ್ಲ. ಸ್ವಲ್ಪ ದಿನ ಕಳೆದ ಮೇಲೆ ನಯವಾದ ರಸ್ತೆಯಮೇಲೆ ಗಾಡಿ ಹೋಗುತ್ತಿದ್ದಾಗ, ಎತ್ತಿನಕಾಲು "ಕಟಕ್" ಎಂದಿತು. ಎತ್ತು ಕುಂಟಲು ಪ್ರಾರಂಭಿಸಿತು. ಎಷ್ಟು ಚಿಕಿತ್ಸೆ ಮಾಡಿದರೂ ಗುಣವಾಗಲಿಲ್ಲ. ಆಮೇಲೆ ಆ ಎತ್ತುಗಳನ್ನು ಮಾರಿಬಿಟ್ಟರು.

ಸೋಮಶೀಲ ಪ್ರಾಜೆಕ್ಟ್ ಗೆ ಶಂಕುಸ್ಥಾಪನೆ ಆಗುವದಕ್ಕೆ 10 ವರ್ಷಗಳ ಹಿಂದೆ, ಅದರ ನಿರ್ಮಾಣದ ವಿಷಯವಾಗಿ ಹೀಗೆ ಹೇಳಿದರು. ಒಮ್ಮೆ ಸ್ವಾಮಿಯವರು ಒಬ್ಬರೇ ಎಲ್ಲಿಗೋ ಹೋಗಿ ಬಂದರು, ಆಗ ಒಬ್ಬ ಸೇವಕ, "ಎಲ್ಲಿ ಹೋಗಿದ್ದಿರಿ ಸ್ವಾಮಿ?" ಎಂದು ಕೇಳಿದಾಗ "ಒಂದು ಸ್ಥಳವನ್ನು ತೋರಿಸಿ, ಅಲ್ಲಿ ಒಂದು ದೇವಸ್ಥಾನ ಕಟ್ಟುತ್ತಾರೆ ಆ ಸ್ಥಳವನ್ನು ಗುರ್ತು ಹಾಕಿ ಬಂದೆ ಎಂದರು. ಆಲ್ಲೇ ಈಗಿನ ಸೋಮಶೀಲ ಪ್ರಾಜೆಕ್ಟ್ ಹತ್ತಿರ ಕಟ್ಟಿರುವ ಪೆಂಚಲಸ್ವಾಮಿಯ ದೇವಸ್ಥಾನ.

ಒಮ್ಮೆ ಗೋಪಾರಂನಲ್ಲಿದ್ದ ಪಾಲಕೊಂಡ ಸುಬ್ಬಾರೆಡ್ಡಿಯವರೊಂದಿಗೆ ಸ್ವಾಮಿಯವರು ಹೀಗೆಂದರು, "ಅಯ್ಯಾ! ಸಮುದ್ರಂ ಇಕ್ಕಡ ಪೊಲ್ಲುಕೊಸ್ತುಂದಿ. ನೀವು ಇಚ್ಚಟ ವುಂಡಕೂಡದು, ವೆಂಟನೇ ಇಂಟಿಕಿ ವೆಳ್ಳಿಪೊ". (ಸಮುದ್ರ ಇಲ್ಲಿ ಉಕ್ಕಿಬರುತ್ತದೆ, ನೀನು ಇಲ್ಲ ಇರಕೋಡದು, ತಕ್ಷಣವೇ ಮನೆಗೆ ಹೋಗು) ಎಂದರು. ಸುಬ್ಬಾರೆಡ್ಡಿಯವರು,

ಮನೆಬಿಟ್ಟು ತುಂಬಾ ದಿನದಿಂದ ಸ್ವಾಮಿಯ ಸೇವೆಯಲ್ಲಿದ್ದರು, ಆದ್ದರಿಂದ ಅವರನ್ನು ಬಲವಂತವಾಗಿ ಮನೆಗೆ ಕರೆದು ಕೊಂಡು ಹೋಗಬೇಕೆಂದು, ಸುಬ್ಬಾರೆಡ್ಡಿಯವರ ಅಣ್ಣಂದಿರು ಬರುತ್ತಿದ್ದಾರೆಂದು ಸಾಯಂಕಾಲ ತಿಳಿಯಿತು. ಆದರೆ, ಇಬ್ಬರೂ, ಒಬ್ಬರನೊಬ್ಬರು ಭೇಟಿ ಮಾಡದೇ ಹೋದರು. ವಾಸ್ತವವಾಗಿ, ಸಮುದ್ರವೇ ಪಾಪಗಳನ್ನು ಹರಣಿಸುತ್ತದೆ, ಆದರೆ, ಸಂಸಾರದ ಸಾಗರ ಸಮುದ್ರಕ್ಕಿಂತಲೂ ಹೆಚ್ಚು ಪ್ರಮಾದಕರವಾದದ್ದು. ಇದು ಸ್ವಾಮಿಯವರ ಭಾವನೆ.

ಒಂದು ದಿನ ಕೊಮರಗಿರಿ ರಮಣಯ್ಯ ಮತ್ತು ಸುಬ್ಬಾರೆಡ್ಡಿ ಸ್ವಾಮಿಯವರ ಧುನಿಗೆ ಕಟ್ಟಿಗೆ ತರಲು ಹೋಗುತ್ತಿದ್ದರು. "ರಾತ್ರಿಯ ವೇಳೆ ಲಾಟೀನು ತೆಗೆದುಕೊಂಡು ಹೋಗಿ" ಎಂದು 3-4 ಬಾರಿ ಮತ್ತೆ ಮತ್ತೆ ಸ್ವಾಮಿಯವರು ಹೇಳಿದರು. ಸ್ವಾಮಿಯವರು ಹೇಳಿದ್ದರಿಂದ ಅವರು ಲಾಟೀನು ತೆಗೆದುಕೊಂಡು ಹೋದರು. ಒಂದು ಮರದ ಕೆಳಗೆ, ದೊಡ್ಡ ನಾಗರ ಹಾವು ಸುರಳಿ ಸುತ್ತಿಕೊಂಡು ಮಲಗಿತ್ತು. ಲಾಟೀನ್ ಬೆಳಕು ಬಿದ್ದ ತಕ್ಷಣ ಆ ಹಾವು ಮರದೊಳಗೆ ಹೋಯಿತು. ಶ್ರೀ ಸ್ವಾಮಿಯವರು, "ನಮ್ಮ ಮೇಲೆ ಕರುಣೆ ತೋರಿ ನಮ್ಮನ್ನು ಕಾಪಾಡಬೇಕೆಂದು ನೋಡಿದರೂ, ನಮಗೆ ಅವರ ಮೇಲೆ ವಿಶ್ವಾಸ ಇಲ್ಲದಿದ್ದಾಗ, ಅವರ ಆಜ್ಞೆಯ ಪಾಲನೆ ಮಾಡದಿದ್ದರಿಂದಾಗ, ಆಪತ್ತುಗಳು ತಪ್ಪುವುದಿಲ್ಲ. **ಸದ್ಗುರುಗಳು, ಯಾವ ಬಲವಾದ ಕಾರಣವಿಲ್ಲದೆ, ಮಾತನಾಡುವುದಿಲ್ಲ, ಯಾವುದೋ ಬಲವಾದ**
3 **ಕಾರಣವಿಲ್ಲದೇ ಅವರು ಏನೂ ಆದೇಶಿಸಿವುದಿಲ್ಲ ಎಂದು ತಿಳಿದುಕೊಂಡು, ಅವರ ಆದೇಶದಂತೆ ನಡೆತುಕೊಂಡರೆ ಭಕ್ತರು ಸುಖಪಡುತ್ತಾರೆ. ಸದ್ಗುರು ಸೇವೆಯಲ್ಲಿ ಇಷ್ಟಾನಿಷ್ಟಗಳನ್ನು ತ್ಯಜಿಸುವುದೇ ನಿಜವಾದ ಸಾಧನೆ!**

ಒಮ್ಮೆ ಚಲಮಾನಾಯುಡು ಎಂಬ ಭಕ್ತನಿಗೆ, "ಅಯ್ಯಾ! ಎಕ್ಕಡಿಕೀ ಪೋಕುಂಡಾ ನಾ ದಗ್ಗರ ವುಂಡು" (ಅಪ್ಪಾ! ನೀನು ಎಲ್ಲೂ ಹೋಗಬೇಡ, ನನ್ನ ಹತ್ತಿರವೇ ಇರು) ಎಂದರು. ಆತ, ತನ್ನ ಅಭ್ಯಾಸದಂತೆ, ಸ್ನೇಹಿತನನ್ನು ನೋಡಲು, ಅವರ ಮನೆಗೆ ಹೋದರು. ಆ ಸ್ನೇಹಿತ, ಪೂರ್ತಿ ನಶೆಯಲ್ಲಿದ್ದು, ಚಲಮಾನಾಯುಡು ಕೆನ್ನೆಗೆ ಜೋರಾಗಿ ಹೊಡೆದರು. ನಾಯುಡುರವರ ಎರಡು ಹಲ್ಲುಗಳು ಉದುರಿ, ಅವರು ಕೆಳಗೆ ಬಿದ್ದರು. ಅವರ ಕುತ್ತಿಗೆ ಕೂಡ ಊದಿಬಿಟ್ಟಿತ್ತು. ಆಗ, ಆತನಿಗೆ ಸ್ವಾಮಿಯವರ ಆದೇಶದ ಆಳ ಅರ್ಥವಾಯಿತು.

ತಿರುಪತಿ ನಿವಾಸಿ ಬಂಡಿ ವೆಂಕಟ ಮುನಿರೆಡ್ಡಿಯವರು, ಪ್ರತಿ ಪೌರ್ಣಮಿ, ನಿಯಮ ತಪ್ಪದೆ, ನಾರಾಯಣ ವನಕ್ಕೆ ಹೋಗಿ, ಅಲ್ಲಿದ್ದ ಸೊರಕಾಯ ಸ್ವಾಮಿಯವರ ಸಮಾಧಿಯನ್ನ ದರ್ಶಿಸುತ್ತಿದ್ದರು. "ಮಹಾತ್ಮಾ ನೀವು ಭೌತಿಕ ಶರೀರದಲ್ಲಿದ್ದಾಗ, ದರ್ಶನ ಮಾಡಲಾಗಲಿಲ್ಲ. ನಿಮ್ಮಂತಹ ಜೀವಂತ ಮಹಾತ್ಮರ ದರ್ಶನದ ಭಾಗ್ಯ ನೀಡಿ" ಎಂದು ನಿತ್ಯವೂ ಪ್ರಾರ್ಥಿಸುತ್ತಿದ್ದರು. ಈತ ಒಮ್ಮೆಇನುಕುರ್ತಿ ಗೆ ಕೆಲಸದ ಕಾರಣ ಬಂದರು. ಶ್ರೀ ಸ್ವಾಮಿಯವರ ವಿಷಯ ತಿಳಿದು ಮರು ದಿನವೇ ಗೊಲಗಮೂಡಿಗೆ ಬಂದು ಸ್ವಾಮಿಯವರ ದರ್ಶನ ಮಾಡಿದರು. ಆಗ ಸ್ವಾಮಿಯವರು ಇವರಿಗೆ ಒಂದು ಹಾಮಿ ಪತ್ರಯಲ್ಲಿ 21 ನೇ ದಿನ ದಾಳಿ ಆಗುತ್ತದೆ, ಆದರೆ, ಅದರಿಂದ ತೊಂದರೆ ಏನೂ ಇಲ್ಲ" ಎಂದು ಬರೆಸಿದರು. ನಿಜವಾಗಿ, 21ನೇ ದಿನ ಹೊಲದಲ್ಲಿ ಮಾರಾಮಾರಿ ನಡೆದು ಪರಿಸ್ಥಿತಿ ಭಯಾನಕವಾಯಿತು,

ಕೊಲೆಗಳು ನಡೆಯುವಂತಹ ಪರಿಸ್ಥಿತಿ ಬಂದಿತು. ಸ್ವಾಮಿಯವರ ಕೃಪೆ ಇಂದ ರೆಡ್ಡಿಯವರು, ಬಹಳ ಸಂಯಮದಿಂದ ಇದ್ದು ಯಾರು ಎಷ್ಟು ದೂಷಿಸಿದರೂ ಎದುರು ಮಾತನಾಡದೆ ಆ ಪರಿಸ್ಥಿತಿಯಿಂದ ಪಾರಾದರು. ಸರಿಯಾಗಿ 21ನೇ ದಿನ ಸ್ವಾಮಿಯವರು ಹೇಳಿದಂತೆಯೇ ಈ ಘಟನೆ ನಡೆದಿದ್ದರಿಂದ, ಸ್ವಾಮಿಯವರ ಮೇಲೆ ಅಪಾರ ನಂಬಿಕೆ ಉಂಟಾಯಿತು. ಸ್ವಾಮಿಯವರು ತಮ್ಮ ಭೌತಿಕ ದೇಹವನ್ನು ತ್ಯಜಿಸಿದನಂತರವೂ, ರೆಡ್ಡಿಯವರು ತಿರುಪತಿ ಇಂದ ಬಂದು, ಸ್ವಾಮಿಯವರ ಸಮಾಧಿ ದರ್ಶನ ಮಾಡುತ್ತಿದ್ದರು. ಒಮ್ಮೆ ಸೇವಕರು "ಸ್ವಾಮಿ, ವೆಂಕಟ ಮುನಿರೆಡ್ಡಿಯವರು ನಮಗೆಲ್ಲರಿಗೂ ಹೊಸ ವಸ್ತ್ರಗಳು ತಂದು ಕೊಟ್ಟಿದ್ದಾರೆ" ಎಂದು ಹೇಳಿದಾಗ, ಸ್ವಾಮಿಯವರು "ಅವರಿಗೆ ಎಷ್ಟೋ ಕಷ್ಟಗಳು ತೀರಿಹೋಗುತ್ತದೆ, ಆ ಕಾರಣದಿಂದಲೇ ಅವರು ಈ ಕೆಲಸ ಮಾಡುತಿದ್ದಾರೆ" ಎಂದರು.

ಸಂಗಂ ನಲ್ಲಿ ವಾಸಿಸುತ್ತಿದ್ದ ಪಲ್ಲಂರೆಡ್ಡಿ ಕೃಷ್ಣಾರೆಡ್ಡಿ ಒಮ್ಮೆ ಗದ್ದೆಯಲ್ಲಿ ಭತ್ತ ಹಾಕಿದರು. ಪೈರು ತುಂಬಾ ಚೆನ್ನಾಗಿ ಬಂದಿತ್ತು. ಆದರೆ, ಬೀಜ ಬರುವ ಹೊತ್ತಿಗೆ ನೀರು ಸಾಲದೆ, ಪೈರು ಎಲ್ಲ ಹೊಟ್ಟು ಜಾಸ್ತಿಯಾಗಿ, ಬೀಜ ಕಮ್ಮಿಯಾಯಿತು. 30 ಬುಟ್ಟಿ ಬರಬಹುದು ಎಂದು ಅಂದಾಜು ಹಾಕಿದ್ದರು, ಆದರೆ ಈ ಪರಿಸ್ಥಿತಿಯಲ್ಲಿ 2 ಬುಟ್ಟಿಯಾಗುವುದೇ ಕಷ್ಟ ಎನ್ನಿಸಿತು. ಕನಿಷ್ಟ 10 ಬುಟ್ಟಿಯಾದರು ಬಂದರೆ, ಸ್ವಾಮಿಯವರಿಗೆ 100ರೂ ಸಮರ್ಪಿಸುತ್ತೇನೆ ಎಂದು ಹರಕೆ ಹೊತ್ತರು. ಅರ್ದ ಪೈರು ಕುಯ್ದು ರಾಶಿ ಹಾಕಿ ಅದರ ಮೇಲೆ ಮಂಚ ಇಟ್ಟು ಮಲಗಿಕೊಂಡರು. ತುಫಾನು ಬರುವಂತೆ ಗಾಳಿ ಬೀಸತೊಡಗಿತು. ಆ ಗಾಳಿಗೆ ರೆಡ್ಡಿಯವರು ಮಂಚದೊಂದಿಗೆ ಕೆಳಗೆ ಬಿದ್ದರು. ಆದರೆ, ಸ್ವಾಮಿಯವರ ಕೃಪೆಯಿಂದ ಮತ್ತೆ ಗಾಳಿ ಮಳೆ ಬರಲಿಲ್ಲ. ಅವರು ಹರಕೆಯಂತೆ 10 ಬುಟ್ಟಿ ಭತ್ತ ಬಂದಿತು. ತಮ್ಮ ಹರಕೆಯ ಪ್ರಕಾರ 100 ರೂ ತೆಗೆದುಕೊಂಡು ಸ್ವಾಮಿಯವರ ದರ್ಶನಕ್ಕಾಗಿ ಬಂದರು. ಆದರೆ, ದಾರಿಯಲ್ಲಿ 30 ರೂ ಖರ್ಚಾಗಿ 70ರೂ ಮಿಕ್ಕಿತು. ಆ 70ರೂ ಸ್ವಾಮಿಯವರಿಗೆ ಸಮರ್ಪಿಸಬೇಕೆಂದು ಯಾರಿಗೂ ಹೇಳದೇ ಸ್ವಾಮಿಯವರ ಚಾಪೆಯ ಕೆಳಗೆ ಇಟ್ಟರು. ಸರ್ವಜ್ಞರಾದ ಸ್ವಾಮಿಯವರು "ಅನುಕುನ್ನದಂತಾ ಇವ್ವಲೇದು, ಇಂಕಾ 30ರೂ ಇವ್ವಾಲಿ. ಇವಿಕೂಡ ವದ್ದು ತೀಯಮನು" (ಹರಕೆಯಂತೆ ಪೂರ್ತಿ ಹಣ ಕೊಟ್ಟಿಲ್ಲ, ಇನ್ನು 30 ರೂ ಬಾಕಿ ಇದೆ, ಈ 70ರೂ ಕೂಡ ಬೇಡ, ವಾಪಸ್ಸು ತೆಗೆದುಕೊಂಡು ಹೋಗು) ಎಂದರು. ಸ್ವಾಮಿಯವರ ಪಕ್ಕದಲ್ಲಿ ಇದ್ದ ಒಬ್ಬ ಸೇವಕ "ಈಗ ಖರ್ಚಿಗೆ ಕೂಡ ದುಡ್ಡಿಲ್ಲವಂತೆ, ಆಮೇಲೆ ಕೊಡುತ್ತಾರೆ ಸ್ವಾಮಿ" ಅಂದರು. ಆಗ, ಸ್ವಾಮಿಯವರು "ಆಯನ ಇವ್ವಡು, ಆ ಬಾಕೀ ನುವ್ವು ಒಪ್ಪುಕೋ" (ಅವರು ಕೊಡುವುದಿಲ್ಲ, ಆ ಬಾಕಿಯನ್ನು ನೀನೆ ಕೊಡುತ್ತೇನೆಂದು ಒಪ್ಪಿಕೋ) ಎಂದರು. ಆಗ, ಆ ಸೇವಕರು, ತಾನು ಕೊಡುತ್ತೇನೆ ಎಂದು ಒಪ್ಪಿಕೊಂಡಮೇಲೆ, ಸ್ವಾಮಿಯವರು 70 ರೂ ಸ್ವೀಕರಿಸಿದರು. ಆದರೆ, ಕೃಷ್ಣಾ ರೆಡ್ಡಿ ಯಾಗಲಿ, ಅಥವ ಈ ಸೇವಕರಾಗಲಿ, ಸ್ವಾಮಿಯವರಿಗೆ 30 ರೂ ಕೊಡಲಿಲ್ಲ.

ಕಲಿಚೇಡಿನಲ್ಲಿ ಶಿಕ್ಷಕರು ಆಗಿರುವ ಅತ್ಯುತ ನೀಲಕಂಠರಾಜುರವರು, ಮತ್ತು ಅವರ ಧರ್ಮಪತ್ನಿ ನಾಗಭಾಸುರಾದೇವಿಯವರು, ಸ್ವಾಮಿಯವರೊಂದಿಗಿನ ತಮ್ಮ

ಅನುಭವಗಳನ್ನು ಈ ರೀತಿ ತಿಳಿಸಿದರು. ನೀಲಕಂಠರಾಜುರವರು ಚೀರಾಲಾದಲ್ಲಿ ಅವರ ಧರ್ಮಪತ್ನಿ, ಕಲಿಚೇಡಿನಲ್ಲಿ ಉದ್ಯೋಗ ಮಾಡುತ್ತಿದ್ದರು. ರಾಜುರವರಿಗೆ ಕಲಿಚೇಡಿನಲ್ಲಿ ಕೆಲಸ ಸಿಕ್ಕಿದರೆ ಆಗ ದಂಪತಿಗಳಿಬ್ಬರೂ ಒಂದೇ ಜಾಗದಲ್ಲಿ ಇರಬಹುದೆಂದು ಸ್ವಾಮಿಯವರನ್ನು ವಿನಂತಿಸಿದರು. ಮೂರು ತಿಂಗಳ ಒಳಗೆ ಕಲಿಚೇಡಿನಲ್ಲಿ ಕೆಲಸ ಸಿಕ್ಕುತ್ತದೆ ಎಂದು ಸ್ವಾಮಿಯವರು ಹೇಳಿದರು. ಆದರೆ, ಕಲಿಚೇಡಿನಲ್ಲಿ ಅದೇ ಕೆಲಸದಲ್ಲಿದ್ದ ಪಿ.ಇ.ಟಿ ಸಾಬ್ಜಾನ್ ಅವರಿಗೆ ಅಲ್ಲಿಂದ ಬದಲಿ ಆಗುವ ಯೋಚನೆ ಇರಲ್ಲಿಲ್ಲ. ಆದ್ದರಿಂದ ರಾಜುರವರಿಗೆ ಕಲಿಚೇಡಿಗೆ ಹೋಗುವ ಅವಕಾಶ ಇಲ್ಲವೆಂದು ನಿರಾಶೆ ಪಟ್ಟರು. ಕಾರಣಾಂತರದಿಂದ ಸಾಬ್ಜಾನ್ ಅವರು ರಾಜೀನಾಮೆ ನೀಡಬೇಕಾಗಿ ಬಂದಿತು. ಸ್ವಾಮಿಯವರು ಹೇಳಿದಂತೆ ರಾಜುರವರಿಗೆ ಕಲಿಚೇಡಿನಲ್ಲೇ ಕೆಲಸ ಸಿಕ್ಕಿತು. ಇನ್ನೊಂದು ನಡೆದ ಘಟನೆಯನ್ನು ಹೇಳಿದರು ನೀಲಕಂಠರಾಜು ದಂಪತಿಗಳು. ಇವರ ಮಗಳು ಪದ್ಮಜಳಿಗೆ ಯಾವಾಗಲು ಮೂರ್ಛೆ ಬರುತ್ತಿತ್ತು. ಸ್ವಾಮಿಯವರನ್ನು ಕೇಳಿದಾಗ, 9 ವರ್ಷದ ವಯಸ್ಸಿನಲ್ಲಿ ಗುಣವಾಗುತ್ತದೆ ಎಂದರು. ಅದರಂತೆಯೇ ಗುಣವಾಯಿತು.

ಪೊಂಗೂರು ವಾಸಸ್ಥ ಪಿ. ದಶರಥರಾಮಯ್ಯನವರು, ಶಾಲೆಯಲ್ಲಿ ಓದುತ್ತಿದ್ದ ಕಾಲದಿಂದ ಸ್ವಾಮಿಯವರ ದರ್ಶನ ಮಾಡುತ್ತಿದ್ದರು. ಆ ದಿನಗಳಲ್ಲಿ ಸ್ವಾಮಿಯವರು ಇವರನ್ನು "ಸಬ್ ಇನ್ಸ್‌ಪೆಕ್ಟರ್ ಆಗುತ್ತೀಯ" ಎಂದು ಆಶೀರ್ವದಿಸಿದರು. ಸ್ವಾಮಿಯವರು ಹೇಳಿದಂತೆ, ಸ್ವಲ್ಪ ಕಾಲದ ಮೇಲೆ, ಇವರು ಸೈನ್ಯ(ಆರ್ಮಿ)ದಲ್ಲಿ ಸೇರಿ (ಖಾಕಿ ಬಟ್ಟೆ ಧರಿಸಿ) ಕಾಶ್ಮೀರ ದಲ್ಲಿ ಪ್ರಭುತ್ವ ಉದ್ಯೋಗ ಮಾಡಿದರು.

ಒಮ್ಮೆ ನೆಲ್ಲೂರು ತಹಸೀಲ್ದಾರ್ ಗೊಲಗಮೂಡಿಗೆ ಬಂದು "ಸ್ವಾಮಿ! ಎಲ್ಲರೂ ನಿಮ್ಮನ್ನು ಮಹಾತ್ಮರೆನ್ನುತ್ತಾರೆ. ನನಗೆ ಏನಾದರೂ ಮಹತ್ವ ತೋರಿಸಿ" ಎಂದು ಪದೇ ಪದೇ ಪ್ರಾರ್ಥಿಸಿದರು. ಸ್ವಾಮಿಯವರು ತುಂಬ ಹೊತ್ತು ಮೌನವಾಗಿದ್ದು ಕೊನೆಗೆ "ಈತನಿಗೆ ಮಧ್ಯಾಹ್ನ (ಅನ್ನ) ಊಟ ಸಿಗುವುದಿಲ್ಲ" ಎಂದು ಒಂದು ಹಾಮಿ ಪತ್ರ ಬರೆದು ಕೊಡು ಎಂದರು. ಎಲ್ಲರೂ ತಹಸೀಲ್ದಾರ್ ಅವರಿಗೆ ಊಟ ಸಿಗುವುದಿಲ್ಲ ಎಂದರೇನು ಅರ್ಥ ಎಂದು ಯೋಚಿಸಿದರು. ತಹಸೀಲ್ದಾರ್ ಮನೆಗೆ ಹೋಗುವ ಹೊತ್ತಿಗೆ ಅವರ ಹೆಂಡತಿಗೆ ಹೊಟ್ಟೆನೋವು ಬಂದು, ಆಸ್ಪತ್ರೆಗೆ ಹೋಗಿದ್ದರು. ಮನೆಗೆ ಬೀಗ ಹಾಕಿತ್ತು. ಆಕೆಯನ್ನು ಯಾವ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆಂದು ತಿಳಿಯದೆ, ಮಧ್ಯಾಹ್ನ 3 ಗಂಟೆಯವರೆಗೂ ಹುಡುಕುತ್ತಿದ್ದರು. ಆಗ ಊಟ ಸಿಕ್ಕದೆ, ಉಪಹಾರ ತಿಂದು, ಚಹಾ ಕುಡಿಯಬೇಕಾಗಿ ಬಂದಿತು. ಮಾರನೆಯ ದಿನ ತಹಸೀಲ್ದಾರ್ ತಮಗೆ ಸ್ವಾಮಿಯ ಮಹತ್ವ ಅನುಭವ ಆಯಿತೆಂದು ಸ್ವಾಮಿಯವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಮಹಾತ್ಮರನ್ನ ಪರೀಕ್ಷೆ ಮಾಡಿದರೆ, ತುಂಬಾ ಕಷ್ಟಗಳನ್ನ ಎದುರಿಸಬೇಕಾಗುತ್ತದೆ.

ಒಮ್ಮೆ ದಂಪತಿಗಳು ಬಂದು 1 ತೆಂಗಿನ ಕಾಯಿ ಒಡೆದು ಧುನಿಯಲ್ಲಿ ಹಾಕಿ ನಮಸ್ಕರಿಸಿ ಹೋದರು. ಆ ದಂಪತಿಗಳು ಹೋದನಂತರ, ಸ್ವಾಮಿಯವರು "ಅಯ್ಯಾ! ಆ ಟೆಂಕಾಯ ಚಿಪ್ಪಲು ಗುಂಡಮು ನುಂಡಿ ತೀಸಿ ವೇಯಂಡಿ. ವಾಟಿನಿ ಕುಕ್ಕಲು ಕೂಡಾ ತಿನವು" (ಈ ತೆಂಗಿನಕಾಯಿ ಚಿಪ್ಪುಗಳನ್ನು ಈಚೆ ತೆಗೆದು ಹಾಕಿ, ನಾಯಿಗಳು ಸಹ

ತಿನ್ನುವುದಿಲ್ಲ) ಎಂದರು. ಸೇವಕರು ಹಾಗೇ ಮಾಡಿದರು, ಸ್ವಾಮಿಯವರು ಹೇಳಿದಂತೆ, ನಾಯಿಗಳು ಸಹ ಮುಟ್ಟಲಿಲ್ಲ.

ಶ್ರೀ ಸ್ವಾಮಿಯವರಲ್ಲಿ ಪೂರ್ಣ ನಂಬಿಕೆ ಇಟ್ಟುಕೊಂಡು, ನಿತ್ಯವೂ ಭಕ್ತಿಯಿಂದ ಸ್ಮರಿಸುವವರು, ತಮ್ಮ ಕಷ್ಟಗಳನ್ನು ಸ್ವಾಮಿಯವರಿಗೆ ಹೇಳುವ ಅವಶ್ಯಕತೆ ಇಲ್ಲ. ಆ ಸರ್ವಜ್ಞಮೂರ್ತಿಗೆ ತಿಳಿಯದ್ದೇನಿದೆ. ಆವಶ್ಯಕತೆ ಇದ್ದಾಗ ತಮ್ಮ ಮಕ್ಕಳಿಗೆ(ಭಕ್ತರಿಗೆ) ಏನು ಮಾಡಬೇಕೋ ಅವರಿಗೆ ಗೊತ್ತು. ನಾವು ಕೇಳಿಕೊಳ್ಳದೆಯೇ ನಮ್ಮ ಬಾಧೆಗಳನ್ನು ತೊಲಗಿಸುವ ಉಪಾಯ ನಮಗೆ ತಿಳಿಸಿ ಬಾಧೆಗಳು ಇಲ್ಲದಂತೆ ಮಾಡಿದ ಸನ್ನಿವೇಶಗಳು: 4

ಉದಾಹರಣೆ: ಶ್ರೀ ಸ್ವಾಮಿಯವರು, ರಾಮಯ್ಯನವರಿಗೆ ಒಂದು ಪತ್ರ ಬರೆಸಿದರು. ಅದರಲ್ಲಿ "ಆವುಲ ಲಕ್ಷ್ಮೀನರುಸು ಇಂಟಿಕಿ ಎದುರುಗಾ ವುನ್ನ ಶ್ರೀರಾಮಯ್ಯಗಾರಿ ಇಂಟಿ ಆವರಣಲೋ ವುಂಡೇ ಪೀನುಗುಲ ಪಾತರ ಎತ್ತಿ ವೇಸುಕೋವಾಲಿ" (ಆವುಲ ಲಕ್ಷ್ಮೀನರಸು ಮನೆ ಎದುರುಗಡೆ ಇರುವ ರಾಮಯ್ಯನವರ ಮನೆಯ ಆವರಣದಲ್ಲಿಂದ ಅಸ್ತಿಪಂಜರದ ಪಾತ್ರೆ ತೆಗೆದು ಹಾಕಬೇಕು) ಎಂದಿತ್ತು. ರಾಮಯ್ಯನವರ ಮನೆಯವರು ಹಾಗೆಯೇ ಅಲ್ಲಿ ಅಗೆದು ನೋಡಿದರೆ, ನಿಜವಾಗಲೂ ಅಲ್ಲಿ ಮೂಳೆಗಳು, ಕಲ್ಲಿದ್ದಿಲು ತುಂಬಾ ಇದ್ದವು. ಅದನ್ನೆಲ್ಲ ತೆಗೆದು ಹಾಕಿದಮೇಲೆ, ಅವರಮನೆಯಲ್ಲಿದ್ದ ಅನಾರೋಗ್ಯ, ಮನಸ್ತಾಪಗಳು ಎಲ್ಲಾ ಮಾಯ ಆಗಿ ಮನೆಯಲ್ಲಿ ಶಾಂತಿ ತುಂಬಿತು.

ಭಕ್ತರ ಸಮ್ರಕ್ಷಣೆಯೇ ತಮ್ಮ ಪ್ರಥಮ ಕರ್ತವ್ಯ ಎಂದು ಭಾವಿಸಿದ ಸ್ವಾಮಿಯವರು, ನಿರಂತರ, ನಿದ್ರಾಹಾರವಿಲ್ಲದೇ ತಮ್ಮ ಭಕ್ತರನ್ನು ಕಾಪಾಡುತ್ತಿದ್ದಾರೆ. ಭಕ್ತರಿಗೆ ಮುಂದೆ ಬರುವ ಕಷ್ಟಗಳನ್ನು ತಪ್ಪಿಸುಕೊಳ್ಳುವ ಮಾರ್ಗ ತೋರಿಸಿ, ಆ ಸೂಚನೆಗಳನ್ನು ಭಕ್ತರು ಮಾಡುವಂತೆ ಮತ್ತೆ ಮತ್ತೆ ಅವರನ್ನು ತಾಯಿಗಿಂತ ಹೆಚ್ಚು ವಾತ್ಸಲ್ಯದಿಂದ ಎಚ್ಚರಿಸುತ್ತಿದ್ದರು. ಅವರು ಹೇಳಿದ ಸೂಚನೆಗಳಂತೆ ಮಾಡುವಾಗ ಭಕ್ತರಿಗೆ ಅಡ್ಡಿಯುಂಟಾದರೆ, ಸ್ವಾಮಿಯವರೇ ಆ ಭಕ್ತರ ಕಷ್ಟವನ್ನು ತೊಲಗಿಸುತ್ತಿದ್ದರು. 5

ಉದಾಹರಣೆ: ಇನುಕುರ್ತಿಯಲ್ಲಿ ವಾಸಮಾಡುತ್ತಿದ್ದ ಕಾರಿ ರಾಮಸ್ವಾಮಿಯವರಿಗೆ ಮೂಗಿನಿಂದ ಮತ್ತು ಬಾಯಿಂದ ರಕ್ತ ಬರುತ್ತಿತ್ತು. ವೈದ್ಯರು ಅದನ್ನ ಗುಣ ಮಾಡಲಾಗಲಿಲ್ಲದ್ದರಿಂದ, ಸ್ವಾಮಿಯವರ ಹತ್ತಿರ ಬಂದರು. ಸ್ವಾಮಿಯವರು "ನಾಳೆ ಅಥವಾ ನಾಡಿದ್ದರಲ್ಲಿ ಹೋಗುತ್ತದೆ. 44 ದಿನಗಳಲ್ಲಿ ಒಂದು ದೊಡ್ಡ ಅಪಾಯವಿದೆ, ಹೋಗತ್ತೆ" ಎಂದರು. 72 ವರ್ಷ 2 ತಿಂಗಳು ಆಯಸ್ಸು. ತಿರುಪತಿ, ಕಂಚಿ, ತಿರುವಳ್ಳೂರಿಗೆ ಹೋಗಿ ಪ್ರತಿ ಜಾಗದಲ್ಲಿ ಸ್ನಾನಮಾಡಿ, ತೆಂಗಿನಕಾಯಿ ಒಡೆದು ನಿದ್ರೆ ಮಾಡಿ ಬರಬೇಕೆಂದು ಒಂದು ಚೀಟಿ ಬರೆಸಿ ಕೊಟ್ಟರು. ಸ್ವಾಮಿಯವರು ಹೇಳಿದಂತೆಯೇ 2 ದಿನಕ್ಕೆ ರಕ್ತ ಬರುವುದು ನಿಂತಿತು. ಆಗಾಗ ಬಂದು ಸ್ವಾಮಿಯವರ ದರ್ಶನ ಮಾಡುತ್ತಿದ್ದರು. ತಿರುಪತಿ, ಕಂಚಿ, ತಿರುವಳ್ಳೂರಿನ ಯಾತ್ರೆ ಮಾಡುವುದು ಮರೆತು ಬಿಟ್ಟರು. ಸ್ವಾಮಿಯವರು ತಲಪೂರಿನಲ್ಲಿರುವಾಗ, ರಾಮಸ್ವಾಮಿಯವರು ಸ್ವಾಮಿಯ ದರ್ಶನ ಮಾಡಲು ಬಂದಾಗ,

ಸಾಲಮಾಡಿಯಾದರೂ (ಹತ್ತಿರ ಹಣವಿಲ್ಲದಿದ್ದರೆ) ಯಾತ್ರೆಗೆ ಹೋಗು ಎಂದರು. ಆಗ, ರಾಮಸ್ವಾಮಿಯವರು ಮನೆಗೆ ಹೋಗದೇ, ಸಾಲವನ್ನು ಮಾಡಿ ಯಾತ್ರೆಗೆ ಹೋದರು. ಹಿಂತಿರುಗಿ ಬಂದಾಗ, ಕಸುಮೂರು ಮಸ್ತಾನಯ್ಯನ ದರ್ಗವನ್ನು ದರ್ಶಿಸಲು ಹೋದರು. ದರ್ಗ ಹಿಂಬಾಗದಲ್ಲಿ ಮೆಟ್ಟಲ ಮೇಲೆ ಒಂದು ದೊಡ್ಡ ನಾಗರಹಾವು ಇದ್ದಕ್ಕಿದ್ದಂತೆ ಅಡ್ಡ ಬಂದಿತು. ಭಯದಿಂದ, ಕಣ್ಣು ಮುಚ್ಚಿಕೊಂಡು ಸ್ವಾಮಿಯವರನ್ನ ಪ್ರಾರ್ಥಿಸಿದರು. ಕಣ್ಣು ಬಿಡುವಹೊತ್ತಿಗೆ, ಹಾವು ಹೊರಟು ಹೋಯಿತು. ಮಾರನೇ ದಿನ ಸ್ವಾಮಿಯವರ ಹತ್ತಿರ ಬಂದು ನಮಸ್ಕರಿಸಿದ ತಕ್ಷಣ "ನಿನ್ನೆಗೆ, ನಿನ್ನ 44 ದಿನಗಳ ಗಂಡಾಂತರ ಹೋಯಿತಲ್ಲವೇ?" ಎಂದರು. ಈ ರೀತಿಯಾಗಿ ಸ್ವಾಮಿಯವರು ತನ್ನ ಪ್ರೀತಿಯನ್ನು ಭಕ್ತರಿಗೆ ತಿಳಿಯುವಂತೆ ಮಾಡಿ ಭಕ್ತರ ವಿಶ್ವಾಸವನ್ನು ಹೆಚ್ಚು ಮಾಡುತ್ತಿದ್ದರು.

ಒಮ್ಮೆ ಸ್ವಾಮಿಯವರು ಅಕಸ್ಮಾತ್ತಾಗಿ ನೆಲ್ಲೂರಿನಿಂದ ನರಸಿಂಹ ಬೆಟ್ಟಕ್ಕೆ ಹೋಗಬೇಕೆಂದು ಬಸ್ಸು ಹತ್ತಲು ಅವರ ಸೇವಕರಿಗೆ ಹೇಳಿದರು. ಕೈಯಲ್ಲಿ ಛಾರ್ಜಿಗೆ ದುಡ್ಡಿರಲಿಲ್ಲ ಎಂದು ಸ್ವಾಮಿಯವರಿಗೆ ಹೇಳಿದಾಗ, "ಮುಂದು ಮೀರು ಎಕ್ಕಂಡಿ, ಡಬ್ಬು ವಸ್ತುಂದಿ"(ಮೊದಲು ನೀವು ಬಸ್ಸನ್ನು ಹತ್ತಿ, ಹಣ ಅದೇ ಬರುತ್ತೆ) ಎಂದರು. ಸೇವಕರು ಅನುಮಾನದಿಂದಲೇ ಬಸ್ಸು ಹತ್ತಿ ಕುಳಿತರು. ಬಸ್ಸು ಹೊರಡುವ ಹೊತ್ತಿಗೆ, ವೆಂಕಟ್ರಾವ್ ಅವರು ಸೈಕಲ್ ನಲ್ಲಿ ಆ ಮಾರ್ಗದಲ್ಲಿ ಹೋಗುತ್ತಾ ಇವರುಗಳನ್ನು ನೋಡಿ ಮಾತನಾಡಿಸಿ 50 ರೂ ಕೊಟ್ಟು ಹೊರಟು ಹೋದರು.

ಮೋಪೂರು ದಶಯ್ಯನಿಗೆ ಮತ್ತು ಅವರ ಪಕ್ಕದ ಮನೆಯವರ ಮಧ್ಯೆ ಇದ್ದ ಪ್ರಹರಿ ಬಿದ್ದು ನೆಲದ ಗುರ್ತು ಅಳಿಸಿಹೋಗಿ ಯಾರ ಹದ್ದು ಎಷ್ಟರ ವರೆಗೆ ಎಂದು ತಗಾದೆ ಬಂದಿತು. ಇಬ್ಬರೂ ಸ್ವಾಮಿಯವರನ್ನು ಕರೆದುಕೊಂಡು ಹೋಗಿ ಅವರಿಬ್ಬರ ಜಾಗದ ಹದ್ದು ಎಷ್ಟು ಎಂದು ತಿಳಿಸಿ ಎಂದು ಬೇಡಿಕೊಂಡರು. ಸ್ವಾಮಿಯವರು "ಅಬ್ಬೋ! ಮುನಗ ಚೆಟ್ಟುಕು ಕಾಕರ ಚೆಟ್ಟುಕು ತಗವುಲಾಟ ವಚ್ಚಿಂದೇ" (ಅಬ್ಬಾ ನುಗ್ಗೆಮರ ಮತ್ತು ಹಾಗಲಕಾಯಿ ಬಳ್ಳಿಗೂ ಜಗಳ ಬಂದಿತಲ್ಲ) ಎಂದರು. ಅವರ ಮಾತಿನ ಅರ್ಥ ಯಾರಿಗೂ ಆಗಲಿಲ್ಲ. ಸ್ವಾಮಿಯವರು ತಮ್ಮ ಪಾದದಿಂದ ನೆಲದಮೇಲೆ ಒಂದು ರೇಖೆ ಎಳಿಯುತ್ತಾ "ಇಬ್ಬರಿಗೂ ಇದು ಹದ್ದು, ನೀನು ಆಕಡೆ, ಅವನು ಈ ಕಡೆ ಇರಿ" ಎಂದು ಆಜ್ಞಾಪಿಸಿದರು. ಹಿಂದೆ ಪ್ರಹರೀ ಗೋಡೆ ಇದ್ದ ಜಾಗದಲ್ಲೇ ಸ್ವಾಮಿಯವರು ಪಾದದಿಂದ ರೇಖೆ ಹಾಕಿದ್ದು ಎಲ್ಲರನ್ನೂ ಆಶ್ಚರ್ಯ ಪಡಿಸಿತು. ಅಲ್ಲದೆ, ಒಬ್ಬರ ಮನೆಯಲ್ಲಿ ನುಗ್ಗೆಮರ, ಇನ್ನೊಬ್ಬರ ಮನೆಯಲ್ಲಿ ಹಾಗಲ ಬಳ್ಳಿ ಇದ್ದ ವಿಷಯ, ಸರ್ವಜ್ಞರಾದ ಸ್ವಾಮಿಯವರು ಅರಿತು, ಹೇಳಿದ ಹಾಸ್ಯಾಕರವಾದ ಮಾತು "ನುಗ್ಗೆ ಮರಕ್ಕು ಹಾಗಲಕಾಯಿ ಬಳ್ಳಿಗೂ ಜಗಳ" ಎಂಬುದೇ ಒಂದು ವಿಶೇಷ.

ಒಂದು ದಿನ ಸ್ವಾಮಿಯವರು, ಕೋಡೂರು ವೆಂಕಮ್ಮನವರ ಮನೆಗೆ ಬಂದಿದ್ದರು. ಎಲ್ಲರ ಊಟ ಮುಗಿದ ಮೇಲೆ, ಸ್ವಾಮಿಯವರು ಊಟ ಮಾಡುವ ವಾಡಿಕೆ. ಆ ದಿನ ಕೂಡ ಸ್ವಾಮಿಯವರನ್ನು ಊಟಕ್ಕೆ ಏಳಿ ಎಂದು ವೆಂಕಮ್ಮನವರು ಪ್ರಾರ್ಥಿಸಿದರು. ಆಗ, ಸ್ವಾಮಿಯವರು "40 ಜನ ಊಟಕ್ಕೆ ಬರುತ್ತಿದ್ದಾರೆ, ನೀನು ಏಕೆ ಹೀಗೆ

ನಿಂತುಕೊಂಡಿದ್ದೀಯ? ಹೋಗಮ್ಮ ಅಡಿಗೆ ಕೆಲಸ ನೋಡು " ಎಂದರು. ಆಕೆ ಒಳಗೆ ಹೋದ 10 ನಿಮಿಷಗಳಲ್ಲೇ, ನಿಜವಾಗಿಯೂ 40 ಜನರು ಊಟಕ್ಕೆ ಬಂದರು. ವೆಂಕಮ್ಮನವರು ಅನ್ನವನ್ನು ಮಾಡಿ, ಹಸಿರು ಮೆಣಸಿನಕಾಯನ್ನು ಸುಟ್ಟಿ, ಹುಣಸೇರಸದಲ್ಲಿ ಅದನ್ನ ಕಿವಿಚಿ ಹಸಿ ಹುಣಸೇಸಾರು (ಇದು ಆಂಧ್ರ ರಾಜ್ಯದ ಅಡಿಗೆ, ಇದನ್ನು ಪಚ್ಚಿ ಪುಲುಸು ಎನ್ನುತ್ತಾರೆ) ಮಾಡಿ ಎಲ್ಲರಿಗೂ ಬಡಿಸಿದರು.

ಮಹಾತ್ಮರು ಯಾರನ್ನೂ ಹೀಗೇ ಮಾಡಿ ಎಂದು ನಿರ್ಭಂದಿಸುವುದಿಲ್ಲ. ಸೂಕ್ಷ್ಮವಾಗಿ ಸಲಹೆ ನೀಡುತ್ತಾರೆ. ಅದನ್ನು ಪಾಲಿಸಿದರೆ, ಎಷ್ಟೋ ಮೇಲಾಗುತ್ತದೆ. ಇಲ್ಲದಿದ್ದರೆ ತುಂಬ ಕಷ್ಟ-ನಷ್ಟಗಳನ್ನು ಎದುರಿಸ ಬೇಕಾಗುತ್ತದೆ ಎಂದು ಈ ಕೆಳಗಿನ ಸನ್ನಿವೇಶ ಸಾಬೀತು ಪಡಿಸುತ್ತದೆ. 6

ಒಮ್ಮೆ ಸ್ವಾಮಿಯವರ ಒಬ್ಬ ಸೇವಕ ಮಹಿಮಲೂರಿನಲ್ಲಿ ಒಬ್ಬರ ಹತ್ತಿರ ಅಡಿಗೆ ಮಾಡಿಕೊಳ್ಳುವುದಕ್ಕಾಗಿ ಒಂದು ಪಾತ್ರೆ ತಂದುಕೊಂಡರು. ಸಾಯಂಕಾಲ ಆ ಪಾತ್ರೆಯನ್ನು ಹಿಂತಿರುಗಿಸಿ ಕೊಡಲು ಜಯರಾಮ ರಾಜು ಎಂಬ ಒಬ್ಬ ಸೇವಕ ಮೂರು ಮೈಲಿ ದೂರದಲ್ಲಿದ್ದ ಹಳ್ಳಿಗೆ ಹೊರಟರು. ಆಗ, ಸ್ವಾಮಿಯವರು "ಇಪ್ಪುಡು ವೊದ್ದು ರೇಪು ಪ್ರೊದ್ದುನ್ನ ಪೋ" (ಈಗ ಬೇಡ, ಬೆಳಗ್ಗೆ ಹೋಗು) ಎಂದರು. 'ತಡವಾಗುತ್ತಿರುವುದರಿಂದ ಸ್ವಾಮಿಯವರೇ ನನ್ನನ್ನು ತಡೆದಿರ ಬೇಕು', ಎಂದುಕೊಂಡರು ಜಯರಾಮರಾಜು. "ಹೇಗಾದರೂ, ನಾನು ಬೇಗನೆ ಹೋಗಿ ಹಿಂತಿರುಗುತ್ತೇನೆ" ಎಂದು ಹೊರಟರು. ದಾರಿಯಲ್ಲಿ ಒಂದು ಹಾವಿನ ಮರಿ ಅದರ ಬಾಲದಮೇಲೆ ನಿಂತು ಬುಸುಗುಟ್ಟುತ್ತಾ ಅಡ್ಡ ಹಾಕಿತು. 11/2 ಗಂಟೆಯ ಕಾಲ ಈತ ಯಾವಕಡೆ ಹೋದರೆ, ಅದು ಆಕಡೆ ಬರುತ್ತಿತ್ತು. ಈತ ನಿಂತರೆ, ಅದೂ ನಿಲ್ಲುತ್ತಿತ್ತು. ಕೊನೆಗೆ, ಪಶ್ಚಾತ್ತಾಪದಿಂದ, "ನಿಮ್ಮ ಮಾತು ಮೀರಿದರಿಂದ, ನನಗೆ ಪ್ರಾಣಹಾನಿಯಾಗುತ್ತಿದೆ" ಎಂದು ಕೆನ್ನೆಗೆ ಹೊಡೆದುಕೊಂಡು ಗುರುಗಳನ್ನು ಪ್ರಾರ್ಥಿಸಿಕೊಂಡರು. ತಕ್ಷಣವೇ ಆ ಹಾವು ಹೆಡೆ ಕೆಳಗೆ ಇಳಿಸಿ ಮರದೊಳಗೆ ಹೊರಟು ಹೋಯಿತು.

ಪಾಲಕೊಂಡ ಸುಬ್ಬಾರೆಡ್ಡಿ (ಗೋಪಾರಂ ನಿವಾಸಸ್ಥರು) ಸ್ವಾಮಿಯವರನ್ನು ಸಮೀಪದಲ್ಲಿದ್ದ ಒಂದು ನದಿಗೆ ಸ್ನಾನಕ್ಕಾಗಿ ಕರೆದುಕೊಂಡು ಹೋಗುತ್ತಿದ್ದರು. ಪ್ರತಿದಿನ ಬರುವಾಗ ದಾರಿಯಲ್ಲಿ ರೈತರು ಹಾಕಿದ್ದ ಕೆಲಸಕ್ಕೆಬಾರದ ಎಳ್ಳಿನ ಗಿಡದ ಕಸವನ್ನು ಒಂದು ಹೊರೆಯಾಗಿ ಕಟ್ಟಿ ತರಲು ಹೇಳುತ್ತಿದ್ದರು. ಸ್ವಲ್ಪ ದಿನಕ್ಕೆ ಅಲ್ಲಿದ್ದ ಕಸವೆಲ್ಲಾ ಖಾಲಿ ಆಯಿತು. ವೆಂಕಮ್ಮನವರ ಮನೆಯೆಲ್ಲ ಹೊರೆಯಿಂದ ತುಂಬಿಹೋಯಿತು. ಸುಬ್ಬಾರೆಡ್ಡಿಯವರು "ಈ ಕಸವೆಲ್ಲಾ ಏಕೆ ಸ್ವಾಮೀ ಎಂದು ಕೇಳಿದಾಗ" ಸ್ವಾಮಿಯವರು, "ಅಯ್ಯಾ! ನೆಲನಾಳ್ಳಕು ವಾನ ವೆಲ್ಲುವಲು ಪೆಟ್ಟುತುಂದಿ ಗದಯ್ಯಾ!" (ಅಯ್ಯಾ! ಇನ್ನೊಂದು ತಿಂಗಳಲ್ಲೇ ಮಳೆ ಪ್ರವಾಹದಂತೆ ಸುರಿಯುತ್ತದೆ ಅಲ್ಲವೆ) ಎಂದರು. ಸ್ವಾಮಿಯವರು ಹೇಳಿದಂತೆ ಒಂದು ತಿಂಗಳಿಗೆ, ಮೋಡ ಕವಿದು ಮಳೆ ಸುರಿಯತೊಡಗಿತು. ಭೂಮಿಯ ಮೇಲೆ ಒಣಗಿದ ಗಿಡದ ಕಾಂಡಗಳನ್ನು ಹಾಕಿ, ಅದರ ಮೇಲೆ ಕಸದ ಹೊರೆ ಹಾಕಿ ಅದನ್ನೇ ತಮ್ಮ ನಿರಂತರಾಗ್ನಿಹೋತ್ರವಾಗಿ ಉರಿಸುತ್ತಿದ್ದರು. ಮಳೆಯ ನೀರು ಕೆಳಗೆ ಹರಿಯುತ್ತಿತ್ತು, ಮೇಲೆ

ಹಾಕಿದ ಹೊರೆಯಿಂದ ಉರಿ ಆರುತ್ತಿರಲಿಲ್ಲ.

ಎಷ್ಟೋ ಭಕ್ತರು, ಶ್ರೀ ಸ್ವಾಮಿಯವರ ಹತ್ತಿರ ಬಂದು, ಅವರ ಸೇವೆ ಮಾಡುತ್ತಾ, ಅವರ ಲೀಲೆ ಗಳನ್ನು ಕೇಳಿ ರೋಮಾಂಚನಗೊಳ್ಳುತ್ತಿದ್ದ ಸಮಯದಲ್ಲೇ ಅಮೇರಿಕಾ ಅಂತರಿಕ್ಷ ಶಾಸ್ತ್ರಜ್ಞರು, ಅಂತರಿಕ್ಷ ನೌಕೆಯನ್ನು ಚಂದ್ರ ಮಂಡಲಕ್ಕೆ ಕಳುಹಿಸಿ ಅಲ್ಲಿ ಕಾಲೂರಿ ಬಂದರು. ಅದು ಒಂದು ದೊಡ್ಡ ಸಾಧನೆ ಎಂದು ಪರಿಗಣಿಸಿ ಲೋಕವೆಲ್ಲಾ ಪ್ರಶಂಸಿಸುತ್ತಿತ್ತು. ಆ ದಿನಗಳಲ್ಲೇ ನೂತೇಟಿ ಆದಯ್ಯ ಎಂಬ ಭಕ್ತ " ಮನುಷ್ಯರು ಚಂದ್ರ ಮಂಡಲಕ್ಕೆ ಹೋಗಿ ಬಂದರು" ಎಂದು ಆಶ್ಚರ್ಯ ಪಡುತ್ತಾ ಸ್ವಾಮಿಯವರಿಗೆ ಹೇಳಿದರು. ಆಗ ಸ್ವಾಮಿಯವರು "ಅದೆಂತಯ್ಯ! ಒಕ ಬ್ರಿಡ್ಜಂತಲೇದು" (ಅದರಲ್ಲಿ ಆಶ್ಚರ್ಯವೇನಿದೆ? ಒಂದು ಸೇತುವೆಯಷ್ಟು ಇಲ್ಲ) ಎಂದರು. ಎತ್ತರ,ಗಾತ್ರದಲ್ಲಿ, ಬ್ರಹ್ಮಾಂಡದಲ್ಲಿ ಇತರ ಗ್ರಹಗಳು, ನೀಹಾರಿಕೆ (ನೆಬ್ಯುಲ) ಗಳಿಗೆ ಹೋಲಿಸಿದರೆ, ಚಂದ್ರಮಂಡಲ ತುಂಬಾ ಚಿಕ್ಕದು. ವಿಶ್ವಮೂರ್ತಿ ಆದ ಸ್ವಾಮಿಯವರು ಹಾಗೆ ಹೇಳುವುದರಲ್ಲಿ ಆಶ್ಚರ್ಯವೇನಿದೆ?

ಒಮ್ಮೆ ಗೌನಿ ಪೆಂಚಲಮ್ಮ ಎಂಬ ಭಕ್ತೆ ಸ್ವಾಮಿಯವರಿಗೆ ತಾಂಬೂಲ ಸಮರ್ಪಿಸಬೇಕೆಂದು ಮುಂದೆ ಬಂದರು. ಅಲ್ಲಿ ಇದ್ದವರು ಈಗಲೆ ಬೇಡ ಎನ್ನುತ್ತ ಆ ತಾಂಬೂಲವನ್ನು ಪಕ್ಕಕ್ಕಿಟ್ಟರು. ಆಕೆ ನೊಂದುಕೊಂಡು ದೂರ ಹೋಗಿ ಮಲಗಿದರು. ಆಕೆಯ ಪ್ರೀತಿಯನ್ನು ಗುರ್ತಿಸಿ ಸ್ವಾಮಿಯವರು ಆ ತಾಂಬೂಲ ತಂದು ಕೊಡಿ ಎಂದು ಮತ್ತೆ ಮತ್ತೆ ಆಕೆ ಯನ್ನು ತೋರಿಸಿದರು. ಸೇವಕರು ಪೆಂಚಲಮ್ಮನ ಹತ್ತಿರ ಬಂದು ಸ್ವಾಮಿಯವರ ಆಜ್ಞೆಯಂತೆ, ಅವರನ್ನು ಕೇಳಿ ತಾಂಬೂಲ ತೆಗೆದುಕೊಂಡು ಬಂದರು. ಈ ವಿಷಯವನ್ನು ತಿಳಿದು, ಮಿಕ್ಕವರೆಲ್ಲರೂ ಆಶ್ಚರ್ಯ ಪಟ್ಟರು.

ಒಮ್ಮೆ ಸೇವಕರು ಉಪ್ಪಿಟ್ಟು ಮಾಡಿ ಸ್ವಾಮಿಯವರಿಗೆ ಕೊಟ್ಟರು. ಸ್ವಾಮಿಯವರು ಸ್ವಲ್ಪ ತಿಂದು, ಮಿಕ್ಕಿದ್ದನ್ನು ನಾಯಿಗೆ ಹಾಕು ಎಂದು ಮಲ್ಲಿಕ ವೆಂಕಯ್ಯನಿಗೆ 4 ದಿನಗಳು ಸತತವಾಗಿ ಹೇಳಿದರು. ಸ್ವಾಮಿಯವರ ಪ್ರಸಾದ ಸಿಕ್ಕಿದ್ದೇ ಸಾಕು ಎಂದು ವೆಂಕಯ್ಯ ನಾಯಿಗೆ ಹಾಕದೆ ಮರೆಯಲ್ಲಿ ಹೋಗಿ ತಾನೆ ತಿನ್ನುತ್ತಿದ್ದರು. ಈ ವಿಷಯವನ್ನು ಸ್ವಾಮಿಯವರು ಗುರ್ತಿಸಲಿಲ್ಲ ಎಂದು ತುಂಬಾ ಸಂತೋಷ ಪಟ್ಟರು. 5 ನೇ ದಿನ, ಶ್ರೀ ಸ್ವಾಮಿಯವರು "ಕುಕ್ಕನು ಮಿಂಚಿನ ರೆಂಡುಕಾಳ್ಳ ಕುಕ್ಕ ಕಾಜೇಸ್ತುಂದಿ" (ನಾಯಿಯನ್ನು ಮೀರಿ ಎರಡು ಕಾಲಿನ ನಾಯಿ ಖಾಲಿ ಮಾಡುತ್ತಿದೆ) ಎಂದು ಹೇಳುತ್ತಾ ವೆಂಕಯ್ಯನಿಗೆ ಕೊಡದೇ ತಾವೇ ಧುನಿಗೆ ಹಾಕಿದರು. ವೆಂಕಯ್ಯ ನಿರಾಶೆಯಿಂದ, ತನ್ನ ತಪ್ಪನ್ನು ಕ್ಷಮಿಸಿ ಎಂದು ಮನಸ್ಸಿನಲ್ಲೇ ಬೇಡಿಕೊಂಡರು

ಪಾಲಕೊಂಡ ಸುಬ್ಬಾರೆಡ್ಡಿಯವರು ಮಡಪಲ್ಲಿಯಿಂದ ಒಂದು ಹಸುವನ್ನು ಕೊಂಡುಕೊಂಡು ಮನೆಗೆ ಬರುತ್ತಿದ್ದರೆ, ದಾರಿಯಲ್ಲಿ ಅದು ಹೆದರಿ ತಪ್ಪಿಸಿಕೊಂಡು ಹೋಯಿತು. 25 ದಿನಗಳು ಎಷ್ಟು ಹುಡುಕಿದರೂ ಸಿಕ್ಕಲಿಲ್ಲ. ಕೊನೆಗೆ ಅವರು, ಸ್ವಾಮಿಯವರನ್ನು ದರ್ಶಿಸಿ ಹಸುವಿನ ವಿಚಾರ ಹೇಳಿದರು. ಸ್ವಾಮಿಯವರು "ನೀನು ಹುಡುಕ ಬೇಡ ಅದೇ ಬರುತ್ತೆ" ಎಂದರು. ಸುಬ್ಬಾರೆಡ್ಡಿಯವರು ಮನೆಗೆ ಹೋಗುವ ಹೊತ್ತಿಗೆ, ಅವರ ಜವಾನರು, ಹಸು ಎಲ್ಲಿದೆಯೆಂದು ತಿಳಿದು ಅದನ್ನ ಕರೆದುಕೊಂಡು

ಬಂದಿದ್ದರು. ಇದೇ ರೀತಿಯಲ್ಲಿ ಶ್ರೀ ಸಾಯಿ ಚರಿತ್ರೆಯಲ್ಲಿ ಚಾಂದ್ ಪಾಟೀಲರಿಗೆ ಎಷ್ಟು ಹುಡುಕಿದರೂ ಸಿಕ್ಕದಿದ್ದ ಕುದುರೆಯ ಜಾಗವನ್ನು ಶ್ರೀ ಸಾಯಿನಾಥರವರು ಸುಲಭವಾಗಿ ಸೂಚಿಸಿ, ಸಿಗುವಂತೆ ಮಾಡಿದರು.

ಇನ್ನೊಮ್ಮೆ ಸ್ವಾಮಿಯವರು ಪಾಲಕೊಂಡ ಸುಬ್ಬಾರೆಡ್ಡಿಯವರಿಗೆ ಭೂಮಿ ಸಿಕ್ಕುವ ಯೋಗವಿದೆ ಎಂದು ಚೀಟಿ ಬರೆಸಿ ಕೊಟ್ಟರು. ಸ್ವಲ್ಪ ದಿನಗಳ ನಂತರ ರೆಡ್ಡಿಯವರಿಗೆ ಬಂಜರು ಭೂಮಿ ಪಟ್ಟಾ ಸಿಕ್ಕಿತು. ಕರಣಂರವರು ಮೋಸದಿಂದ ಆ ಪಟ್ಟಾ ರದ್ದು ಮಾಡಿದರು. ಏನಾದರೇನು, ರೆಡ್ಡಿಯವರಿಗೆ ಆ ಪಟ್ಟ ಖಚಿತವಾಗಿ ಸಿಕ್ಕಿತು. ಮೋಸ ಮಾಡಿದ ಕರಣಂರವರ ಕೆಲಸ ಹೋಯಿತು. ಸ್ವಾಮಿಯವರ ಮಾತು ಸತ್ಯವಾಯಿತು.

1978-79 ಇಸವಿಯಲ್ಲಿ ಸ್ವಾಮಿಯವರು ತಲಪೂರಿನಲ್ಲಿ ಇದ್ದರು. ನೆಲ್ಲೂರು ದೊಡ್ಲ ಸುಬ್ಬಾರೆಡ್ಡಿಯವರ ನಿಕಟ ಸಂಬಂಧಿಗಳ 5 ವರ್ಷದ ಮಗಳು, ಬಾಯಿನಿಂದ ರಕ್ತ ಬರುತ್ತಿದ್ದರಿಂದ ತುಂಬಾ ಬಳಲುತ್ತಿದ್ದಳು. ಎಷ್ಟೋ ವೈದ್ಯರು ಚಿಕಿತ್ಸೆ ಮಾಡಿದರೂ ಗುಣವಾಗಲಿಲ್ಲ. ಕೊನೆಗೆ, ಸ್ವಾಮಿಯವರ ಮಹಿಮೆ ತಿಳಿದು, ಆ ಮಗುವನ್ನು ಸ್ವಾಮಿಯವರ ಹತ್ತಿರ ಕರೆದುಕೊಂಡು ಬಂದರು. ಸ್ವಾಮಿಯವರು ಆ ಮಗುವನ್ನು ಕಂಠದಿಂದ, ಕಾಲಿನ ವರೆಗೆ ತಮ್ಮ ಕೈನಿಂದ ಮೃದುವಾಗಿ ಸವರಿದರು. ಮಗುವಿಗೆ ಪೂರ್ತಿ ಗುಣವಾಯಿತು. ಆದ್ದರಿಂದ ಮುಂದಿನ ವಾರ ಆ ಮಗುವಿನ ತಂದೆ ತಾಯಿ ದಕ್ಷಿಣೆಯಾಗಿ 250/- ರೂ ಸ್ವಾಮಿಯವರಿಗೆ ಸಮರ್ಪಿಸಲು ತಂದರು. ಸ್ವಾಮಿಯವರು ಸ್ವೀಕರಿಸಲಿಲ್ಲ. ಎಷ್ಟು ಬೇಡಿಕೊಂಡರೂ ಸ್ವಾಮಿಯವರು ಸ್ವೀಕರಿಸದೆ ಕೊನೆಗೆ, "ನಾಲುಗು ನೆಲಲ ತರುವಾತ ಇವ್ವಂಡಿ ತೀಸುಕುಂಟಾನು" (4 ತಿಂಗಳಾದಮೇಲೆ ತಂದುಕೊಡಿ ಸ್ವೀಕರಿಸುತ್ತೇನೆ) ಎಂದರು. ಸರಿಯಾಗಿ 4 ತಿಂಗಳಾದ ಮೇಲೆ ಆ ಮಗು ಮರಣ ಹೊಂದಿತು. ಆ ಕಾರಣದಿಂದ ಆ ಮಗುವಿನ ಮನೆಯವರು ದಕ್ಷಿಣೆ ಕೊಡಲು ಬರುವ ಪ್ರಸಕ್ತಿ ಬರಲಿಲ್ಲ. ಈ ವಿಚಾರವನ್ನು ಸ್ವಾಮಿಯವರು ಮೊದಲೇ ಸೂಚಿಸಿದ್ದರು.

ಶ್ರೀ ಸ್ವಾಮಿಯವರನ್ನು ಸಂಪೂರ್ಣವಿಶ್ವಾಸದಿಂದ ಶರಣು ಹೋದವರನ್ನು, ಸ್ವಾಮಿಯವರೇ ಆ ಭಕ್ತರಕ್ಷಕರಾಗುತ್ತಾರೆ. ಇದಕ್ಕೆ ಒಂದು ರಹಸ್ಯವಿದೆ - ನಮ್ಮ ಹೃದಯದಲ್ಲಿ ಬೇರೆ ಭಾವನೆ ಇಟ್ಟುಕೊಳ್ಳದೆ, ನಮ್ಮ ಪ್ರಾಣವನ್ನು ಅವರ ಕೈಯಲ್ಲಿ ಇಟ್ಟು ನಿಶ್ಚಿಂತೆಯಿಂದ ಇರುವುದೇ ಆ ರಹಸ್ಯ.. ಇಲ್ಲಿ ನಮಗೆ ಸಾಯಿನಾಥರು ಹೇಳಿದ ಮಾತು "ನಮ್ಮ ಜೀವನದ ಲಗಾಮು ಸದ್ಗುರುವಿನ ಕೈನಲ್ಲಿಟ್ಟಮೇಲೆ ಚಿಂತೆಗೆ ದಾರಿನೇ ಇಲ್ಲ" ಎನ್ನುವುದು ಮನಸ್ಸಿನಲ್ಲಿ ದೃಢ ಪಡಿಸಬೇಕು. 7

ಒಮ್ಮೆ ಬುಜ್ಜಯ್ಯನವರಿಗೆ ಹಣದ ಅವಶ್ಯಕತೆ ಇತ್ತು. ಆತ ತನ್ನ ಕುರಿಗಳನ್ನು ಕಟುಕನಿಗೆ ಮಾರಬೇಕೆಂದು ನಿಶ್ಚಯಿಸಿಕೊಂಡರು. ರಾತ್ರಿ ಸ್ವಪ್ನದಲ್ಲಿ ಸ್ವಾಮಿಯವರು ಬಂದು "ಗೊಱ್ಱೆಲನು ಕಸಾಯಿವಾನಿಕಿ ಅಮ್ಮಡಂ ಎಂತ ಪಾಪಂ? ಯೇಮಿ ಸಂಗತಿ?" (ಕುರಿಗಳನ್ನ ಕಟುಕನಿಗೆ ಮಾರುವುದು ಎಷ್ಟು ದೊಡ್ಡ ಪಾಪ? ಏನು ಸಮಾಚಾರ) ಎಂದರು. ಆತನಿಗೆ ತಕ್ಷಣವೇ ಎಚ್ಚರವಾಗಿ, ಸ್ವಪ್ನದಲ್ಲಿ ಸ್ವಾಮಿಯವರು ಹೇಳಿದ ಮಾತು ನೆನಪಿಗೆ ಬಂತು. "ಸ್ವಾಮಿಯವರು ಹೇಳಿದ್ದು ನಿಜವೇ, ಆದರೆ ತನಗೆ ಹಣದ ಅವಶ್ಯಕತೆ

ಹೇಗೆ ತೀರುತ್ತದೆ ಎಂದು ಯೋಚಿಸಿದರು. ಕೊನೆಗೆ "ಶ್ರೀ ಸ್ವಾಮಿಯವರೇ ಕಾಪಾಡಬೇಕು" ಎಂದು ಕುರಿಗಳನ್ನು ನೆಲ್ಲೂರಿಗೆ ಕರೆದು ಕೊಂಡು ಹೋದರು. ಕಟುಕರ ಹತ್ತಿರ ಆ ಕುರಿಗಳನ್ನ ನಿಲ್ಲಿಸಿದರೆ, ಅನೇಕರು ನೋಡಿದರು ಆದರೆ, ಯಾರೂ ಕೊಳ್ಳಲಿಲ್ಲ. ಸ್ವಲ್ಪ ಹೊತ್ತಿಗೆ ಪಕ್ಕದ ಊರಿನವರು ಬಂದು, "ನಾವು ಮೇಯಿಸಿಕೊಳ್ಳುತ್ತೇವೆ, ಬೆಲೆ ಸ್ವಲ್ಪ ಕಡಿಮೆ ಮಾಡಿ" ಎಂದರು. ಬುಜ್ಜಯ್ಯ ತಕ್ಷಣ ಒಪ್ಪಿಕೊಂಡು, ಅವರಿಗೆ ಮಾರಿಬಿಟ್ಟರು. ಈ ರೀತಿಯಲ್ಲಿ ಸ್ವಾಮಿಯವರು ಆ ಕುರಿಗಳನ್ನ ಕಟುಕರಿಂದ ರಕ್ಷಿಸಿ, ಆ ಭಕ್ತನಿಗೆ ಪಾಪ ಬರುವುದರಿಂದ ವಿಮುಕ್ತಿ ಮಾಡಿದರು. ಇನ್ನೊಮ್ಮೆ ಸ್ವಾಮಿಯವರು ಸಮುದ್ರ ಸ್ನಾನ ಮಾಡಲು ಮೈಪಾಡಿಗೆ ಹೋದರು. ಬುಜ್ಜಯ್ಯ ನವರಿಗೆ 2 ಘಂಟೆಗಳಾದ ಮೇಲೆ ವಿಚಾರ ತಿಳಿದು ಸ್ವಾಮಿಯವರ ದರ್ಶನ ಮಾಡಬಹುದೆಂದು ಮೈಪಾಡಿಗೆ ಬಂದರು. ಸ್ವಾಮಿಯವರ ಸ್ನಾನ ಆದ ಮೇಲೆ ಅಲ್ಲೇ ಸಮುದ್ರ ತೀರದಲ್ಲೆ ಕುಳಿತಿದ್ದರು. ಎಷ್ಟು ಕರೆದರೂ ಸ್ವಾಮಿಯವರು ಕೂತ ಜಾಗದಿಂದ ಚಲಿಸಲಿಲ್ಲ. ಬುಜ್ಜಯ್ಯ ಬಂದು, ಸ್ವಾಮಿಯವರ ದರ್ಶನ ಮಾಡಿ ಸ್ನಾನ ಮಾಡಿದ ತಕ್ಷಣವೇ ಎದ್ದು ಬಂದರು. ಬುಜ್ಜಯ್ಯ ಬರುವ ವಿಚಾರ ಸ್ವಾಮಿಯವರಿಗೆ ಮೊದಲೇ ಗೊತ್ತಿದ್ದರಿಂದ ಅವರು ಏಳಲಿಲ್ಲ ಎಂದು ಆಗ ಸೇವಕರಿಗೆ ಅರ್ಥವಾಯಿತು.

ದಾಚೂರಿನಲ್ಲಿ ವಾಸವಾಗಿದ್ದ ಕಸ್ತೂರಿ ಅಂಕಯ್ಯನವರು ತಮ್ಮ ಮೊಮ್ಮಗನಿಗೆ ಏನು ಹೆಸರಿಡಬೇಕೆಂದು ಸ್ವಾಮಿಯವರನ್ನು ಕೇಳಿದರು, "ಅಯ್ಯಾ! ಈಯನ ಪೂರ್ವಜನ್ಮಲೋ ಸುಬ್ಬನ್ನ ಅನೇ ವರ್ತಕುಡು. ಅದೇ ಪೇರು ಪೆಟ್ಟು" (ಅಯ್ಯಾ! ಹಿಂದಿನ ಜನ್ಮದಲ್ಲಿ ಈತ ಸುಬ್ಬಣ್ಣ (ಸುಬ್ಬನ್ನ) ಎನ್ನುವ ವರ್ತಕ. ಆದೇ ಹೆಸರು ಇಡು) ಎಂದರು. 2 1/2 ವರ್ಷದ ವಯಸ್ಸಿನಲ್ಲಿ ನೀರಿನ ಗಂಡ ಇದೆ ಅದನ್ನು ವೀರರಾಘವಸ್ವಾಮಿ ತಪ್ಪಿಸುತ್ತಾರೆ ಎಂದು ಹಾಮಿಪತ್ರಬರೆಸಿ ಕೊಟ್ಟರು.

ಸುಬ್ಬಣ್ಣ ಮತ್ತು ಇವನ ಅಣ್ಣ (3 1/2 ವರ್ಷದ ವಯಸ್ಸಿನ ಬಾಲಾಜಿ) , ಮನೆಯ ಹತ್ತಿರ ಇದ್ದ ಇಳಿಯುವ ಭಾವಿಯಲ್ಲಿ ನೀರು ಕುಡಿಯಲು ಹೋದರು. ನೀರು ಕುಡಿಯುತ್ತಿರುವಾಗ, ಸುಬ್ಬಣ್ಣ ಕಾಲು ಜಾರಿ ಭಾವಿಯಲ್ಲಿ ಬಿದ್ದ, ಬಾಲಾಜಿ ಕಿರುಚುತ್ತಾ ಭಾವಿಯಿಂದ ಮನೆಕಡೆಗೆ ಓಡಿ ಹೋದ. ಮನೆಯಿಂದ ಅವರ ತಂದೆ ಓಡಿ ಬಂದು ಅವರ ಸೊಂಟದ ಮಟ್ಟದ ನೀರಿನಲ್ಲಿ ತೇಲುತ್ತಿದ್ದ ಮಗುವನ್ನು ಎತ್ತಿಕೊಂಡು ಬರುವುದರಲ್ಲಿ ಅವರ ಬಟ್ಟೆಯೆಲ್ಲಾ ಒದ್ದೆ ಆಯಿತು. ಆಳವಿದ್ದ ನೀರಿನಲ್ಲಿ ಬಿದ್ದ ಮಗು ಒಂದು ಗುಟುಕು ನೀರೂ ಕುಡಿಯದೇ ಹೇಗೆ ಇತ್ತು ಎಂದು ಊರಿನವರೆಲ್ಲಾ ಆಶ್ಚರ್ಯ ಪಟ್ಟರು. ಹಿಂದೆ ಸ್ವಾಮಿಯವರು ಬರೆಸಿದ ಹಾಮಿ ಪತ್ರ ನೋಡಿದರೆ ಆ ದಿನವೇ ಗಂಡ ಇತ್ತೆಂದು ತಿಳಿತು.

ಪೇರಂಕೊಂಡದಿಂದ ಬಂದ ನಾಯುಡುರವರು, ಅವರ ಅನುಭವವನ್ನು ಹೀಗೆ ತಿಳಿಸಿದರು. ಸ್ವಾಮಿಯವರು ಮತ್ತು ಸ್ವಲ್ಪ ಜನ ಭಕ್ತರು ಪಂಚಲಿಂಗಾಲ ಕೊನಕ್ಕೆ ಹೋಗುತ್ತಾ ವಿಶ್ರಾಂತಿ ಪಡೆಯಲು ಸ್ವಲ್ಪ ನಿಲ್ಲೋಣ ಎಂದು ಸ್ವಾಮಿಯವರನ್ನು ಕೇಳಿದರು. ಆಗ ಸ್ವಾಮಿಯವರು, ಇಲ್ಲಿ ಕುಳಿತುಕೊಳ್ಳುವುದು, ಮಲಗಿಕೊಳ್ಳುವುದು ಪ್ರಮಾದ ಎಂದು, ಅಲ್ಲಿಂದ ಎಲ್ಲರನ್ನು ಕರೆದುಕೊಂಡು ಹೊರಟು ಹೋದರು. ವಾಪಸ್ಸು ಬರುವಾಗ

ನೋಡಿದರೆ, ಆ ಜಾಗದಲ್ಲಿ ದೊಡ್ಡ ಬಂಡೆಗಳು ಬಿದ್ದಿದ್ದವು. ಸ್ವಾಮಿಯವರು ಹೇಳಿದ ಪ್ರಮಾದ ಏನೆಂದು ಎಲ್ಲರಿಗೂ ತಿಳಿಯಿತು. ಈ ಪ್ರಮಾದದ ವಿಷಯ ಸ್ವಾಮಿಯವರಿಗೆ ಮುಂಚೆನೇ ಗೊತ್ತಿತು.

1977 ರಲ್ಲಿ ದಿವಿ ತಾಲುಕಿನಲ್ಲಿ ದೊಡ್ಡ ತೂಫಾನು ಬಂದು ಭಾರಿ ನಷ್ಟಕ್ಕೆ ಕಾರಣವಾಯಿತು. ಆ ಸಮಯದಲ್ಲಿ ಸ್ವಾಮಿಯವರು ಮದ್ರಾಸ್ ರಾಜ್ಯದಲ್ಲಿ ಮನ್ನಾರುಕಂಡ್ರಿಯಲ್ಲಿ ಇದ್ದರು. ನೆಲ್ಲೂರು ಜಿಲ್ಲೆಗೂ ತುಫಾನು ಪ್ರಮಾದ ಇದೆಯೆಂದು ರೇಡಿಯೋ ಇಂದ ತಿಳಿಯಿತು. ಅದನ್ನು ಸ್ವಾಮಿಯವರಿಗೆ ಹೇಳಿದಾಗ, "ಅಯ್ಯಾ! ಮನ ಗುಂಡಾಲು ಕಾಪಲಾ ಗದಾ ಮನಕೇಂ ನಷ್ಟಂ ಲೇದುಲೇ. ಕಾನೀ ನೆಲ್ಲೂರುಕು 1 ಸಂವತ್ಸರಂ 6 ನೆಲಲ 12 ರೋಜುಲಕು ಗಾಲಿವಾನ ಗಂಡಂ ವುಂದಿ" (ಅಯ್ಯಾ! ನಮ್ಮ ಧುನಿಯ ರಕ್ಷಣೆ ಇದೆ, ನಮಗೇನೂ ನಷ್ಟವಿಲ್ಲ (ಭಯವಿಲ್ಲ) ಆದರೆ, ನೆಲ್ಲೂರಿಗೆ 1 ವರ್ಷ 6 ತಿಂಗಳು 12 ದಿನಗಳಿಗೆ ಗಾಳಿ ಮಳೆಯ ಗಂಡಾಂತರ ಇದೆ" ಅಂತ ಬರೆಸಿದರು. ಸ್ವಾಮಿಯವರು ಹೇಳಿದಂತೆ, ಆ ಸಮಯದಲ್ಲಿ ನೆಲ್ಲೂರಿಗೆ ಏನೂ ನಷ್ಟವಾಗಲಿಲ್ಲ.

ತ್ರಿಮೂರ್ತಿಸ್ವರೂಪರಾದ ಸದ್ಗುರುವಿನ ಆಜ್ಞೆಗೆ ದೇವತೆಗಳುಕೂಡ ಆಜ್ಞಾಪಾಲನೆ ಮಾಡುತ್ತಾರೆ ಎನ್ನುವುದಕ್ಕೆ ಈ ಕೆಳಗಿನ ಘಟನೆ ನಿರೂಪಿಸುತ್ತದೆ. 8

ಇನುಕುರ್ತಿಯ ನಿವಾಸಿ ಕಾರಿ ರಾಮಸ್ವಾಮಿಯವರ ಮಗಳಿಗೆ ಯಾವುದೋ ಶಕ್ತಿ ಆವರಿಸಿ, ಪೂಜೆ ಮಾಡುತ್ತಾ ಮನಸ್ಸು ಸ್ವಾಧೀನ ತಪ್ಪುತ್ತಿತ್ತು. ಅವರ ಮನೆಯಲ್ಲಿ ಹುತ್ತಗಳು ಎದ್ದಿದ್ದವು. ಈ ಸಮಸ್ಯೆಯಿಂದ ಮುಕ್ತಿ ಹೊಂದಲು ಕಸುಮೂರು ಮಸ್ತಾನಯ್ಯ ದರ್ಗ, ಅನಾಸಮುದ್ರಂಪೇಟ ಹತ್ತಿರ ನಾಗೂರು ನಾಗಪಟ್ನಂ ದರ್ಗಾಗಳಲ್ಲಿ 5 ವರ್ಷ ಪ್ರದಕ್ಷಿಣೆ ಮಾಡಿದರು. ಏನೂ ಪ್ರಯೋಜನವಾಗಲಿಲ್ಲ. ಸ್ವಾಮಿಯವರ ಹತ್ತಿರ ಬಂದರು. ಆಗ ಸ್ವಾಮಿಯವರು ಜೊನ್ನವಾಡ ಕಾಮಾಕ್ಷಮ್ಮ ಈ ಹುಡುಗಿಯಮೇಲೆ ಆವರಿಸುತ್ತಿದ್ದಾರೆ ಎಂದರು. ಆ ದೇವಿ ಈಕೆಯ ಮೈಮೇಲೆ ಬಂದಾಗ ಭೂತ, ಭವಿಷ್ಯ, ವರ್ತಮಾನಗಳನ್ನು ಜೊತೆಯಲ್ಲಿದ್ದವರಿಗೆ ಖಚಿತವಾಗಿ ಹೇಳುತ್ತಿದ್ದರು. ತುಂಬಾ ಜನ ಬಂದು ಪ್ರಶ್ನೆ ಕೇಳುತ್ತಿದ್ದರು. ಮನೆಯಲ್ಲಿ ಜನ ಸಂದಣಿಯಾಯಿತು. ಸ್ವಲ್ಪ ಸಮಯದ ನಂತರ ಸ್ವಾಮಿಯವರು ಶುಕ್ರವಾರ ಬಿಟ್ಟು ಬೇರೆ ಯಾವ ದಿನವೂ ದೇವಿ ಆ ಹುಡುಗಿಯ ಮೇಲೆ ಬರದಂತೆ ಹಾಮಿ ಪತ್ರ ಬರೆಸಿದರು. ಆದೇ ರೀತಿ ಶುಕ್ರವಾರದಲ್ಲೇ ಪ್ರಶ್ನೋತ್ತರಗಳು ನಡೆಯುತ್ತಿತ್ತು. ಇದನ್ನ ನೋಡಿ ಆ ಹುಡುಗಿಯ ತಂದೆ ಸ್ವಾಮಿಯವರ ಹತ್ತಿರಬಂದು, ಮದುವೆ ಆಗಬೇಕಾದ್ದ ಹುಡುಗಿ ಈ ತರಹ ಪ್ರಶ್ನೋತ್ತರಗಳು ಹೇಳುತ್ತಿರುವುದು ಬಹಳ ತೊಂದರೆ ಆಗುತ್ತದೆ ಆದ್ದರಿಂದ ದೇವಿ ಆವಾಹನೆ ಆಗದಂತೆ ಮಾಡಿ ಎಂದು ಪ್ರಾರ್ಥಿಸಿದರು. ಸ್ವಾಮಿಯವರು ಹಾಗೆ ಆಗಲಿ ಎಂದು ಹಾಮಿ ಪತ್ರ ಬರೆಸಿದರು. ಆ ದಿನದಿಂದ ದೇವಿ ಆವಾಹನೆ ಆಗುವುದು ನಿಂತಿತು. ಸ್ವಾಮಿಯವರ ಆಜ್ಞೆ ಯಂತೆ ಆಕೆಗೆ ಮದುವೆ ಮಾಡಿದರು, ಮಕ್ಕಳು ಕೂಡ ಹುಟ್ಟಿದವು.

ಭವಿಷ್ಯದಲ್ಲಿ ಬರುವ ಪ್ರಮಾದಗಳು/ಆಪತ್ತುಗಳು, ಮತ್ತು ಅವುಗಳ ನಿವಾರಣೆ ಮಾಡುವ ಉಪಾಯಗಳನ್ನು ಮುಂಚಿತವಾಗಿ ಹೇಳಿ ತಮ್ಮ ಭಕ್ತರನ್ನ ಕಾಪಾಡುತ್ತಿದ್ದರು. 9

ಪಾಲಕೊಂಡ ಸುಬ್ಬಾರೆಡ್ಡಿಯವರಿಗೆ ಸ್ವಾಮಿಯವರು ಒಂದು ಹಾಮಿ ಪತ್ರ ಬರೆಯಿಸಿ ಕೊಟ್ಟರು. ಅದರಲ್ಲಿ "ಮೀ ಗ್ರಾಮಸ್ತುಲಕು ಪ್ರಕ್ಕ ಗ್ರಾಮಸ್ಥುಲಕು ಪೆದ್ದ ತಗಾದಾ ವಸ್ತುಂದಿ. ನೀವು ಪೋಯಿ ಒಕ್ಕ ಮಾಟ ಚೆಬಿತೇ ಸರಿಪೋತುಂದಯ್ಯಾ" (ನಿಮ್ಮ ಗ್ರಾಮದವರಿಗೂ ಪಕ್ಕದ ಗ್ರಾಮದವರಿಗೂ ದೊಡ್ಡ ಜಗಳವಾಗುತ್ತದೆ. ನೀವು ಹೋಗಿ ಒಂದು ಮಾತು ಹೇಳಿದರೆ ಸರಿಹೋಗುತ್ತದೆ) ಎಂದು ಬರೆದಿತ್ತು. "ಸ್ವಾಮಿ! ಅಷ್ಟು ದೊಡ್ಡ ಜಗಳವಾದರೆ ನನ್ನ ಮಾತು ಕೇಳುತ್ತಾರೆಯೇ? ನಾನು ಅವರಿಗೆ ಹೇಳಬಲ್ಲೆನಾ?" ಅಂದಾಗ, "ಇಕ್ಕಡ ನುಂಡಿ ಪೋತುನ್ನಾವು ಗನುಕ ಒಕ್ಕ ಮಾಟತೋ ಸರಿಪೋತುಂದಿ" (ಇಲ್ಲಿಂದ ಹೋಗುತ್ತಿರುವುದರಿಂದ ಒಂದು ಮಾತಿನಿಂದ ಸರಿಹೋಗುತ್ತದೆ) ಎಂದು ಸ್ವಾಮಿಯವರು ಹೇಳಿದರು.

ಸ್ವಾಮಿಯವರು ಹೇಳಿದ ಪ್ರಕಾರ, ಕತ್ತಲಾದ ನಂತರ ಎರಡು ಊರಿನ ಜನರು ಕತ್ತಿ, ಕಠಾರಿ ತೆಗೆದುಕೊಂಡು ಊರಿನ ಆಚೆ ಬಂದು ಜಗಳಕ್ಕೆ ನಿಂತರು. ಸ್ವಾಮಿಯವರ ಮಾತುಗಳು ನೆನಪಿಗೆ ಬಂದು ರೆಡ್ಡಿಯವರು "ನೀವು ಎಲ್ಲರಿಗೂ ಬುದ್ದಿಹೇಳಬೇಕಾದ ಹಿರಿಯರು, ನೀವೆ ಹೀಗೆ ಜಗಳಕ್ಕೆ ನಿಂತರೆ ಚೆನ್ನಾಗಿರುತ್ತದೆಯೆ?" ಅಂದರು. ಆ ಮಾತಿನಲ್ಲಿ ಏನು ಪ್ರಭಾವವಿತ್ತೊ, ಆ ನಾಯಕರು, ತಮ್ಮ ಹಟವನ್ನು ಬಿಟ್ಟು, ಹಿಂತಿರುಗಿದರು. ಸ್ವಾಮಿಯವರ ಆಜ್ಞೆ ಮತ್ತು ಅವರ ಕೃಪೆಯಿಂದಲೇ ಇದು ಸಾಧ್ಯವಾಯಿತಲ್ಲವೆ?

ವಕ್ಕೆಮ್ಮನವರಿಗೆ ಕನಸಿನಲ್ಲಿ "ಒಬ್ಬ ಸ್ತ್ರೀ ಕಣ್ಣು ಕಪ್ಪಿನ ಭರಣಿ ಕೊಡುತ್ತಿದ್ದರೆ,, ಈಕೆ ಬೇಡ ಎಂದು ನೂಕಿದಂತೆ ಕಂಡಿತು. ಆಗ ಆ ಸ್ತ್ರೀ ಬೊಗಸೆ ತುಂಬಾ ಎಣ್ಣೆ ಹಾಕಿಕೊಂಡು ಬಲವಂತವಾಗಿ ವಕ್ಕೆಮ್ಮನವರ ನೆತ್ತಿಗೆ ಹಚ್ಚಿದರು". ಬೆಳಗಾಗುವ ಹೊತ್ತಿಗೆ ಆಕೆಯ ನೆತ್ತಿಯಮೇಲೆ ನಿಜವಾಗಿ ಬೊಬ್ಬೆ ಬಂದು ಬಾಧಿಸುತ್ತಿತ್ತು. ಸ್ವಾಮಿಯವರಗೆ ಹೇಳಿದರೆ "ಮಂಚಿದಿಕದಮ್ಮಾ ವಕ್ಕಮ್ಮ ಇಕ ವಚ್ಚೇದಿಲೇದೇ. ಗುಂಜಲಾಗ ವುಂಡೇದೇ ಗದಾ!" (ಒಳ್ಳೆಯದಾಯಿತು ಅಲ್ಲವೇ ವಕ್ಕಮ್ಮ! ಮತ್ತೆ ಬರುವುದಿಲ್ಲ ಇದು ಕೇವಲ ಊತವಾಗಿದೆ ಅಲ್ಲವೇ? (ಇಲ್ಲಿ ಸ್ವಾಮಿಯವರು ವಕ್ಕೆಮ್ಮನವರಿಗೆ ಮರುಜನ್ಮ ಇಲ್ಲ ಎಂದು ಸೂಚಿಸಿದರು, ಆದ್ದರಿಂದ, ಈ ಊತದಿಂದ ಆದ ಬಾಧೆಯನ್ನು ಅನುಭವಿಸುವುದು ಒಳ್ಳೆಯದು ಎಂದು ಸ್ವಾಮಿಯವರ ಆದೇಶ).

ಶ್ರೀ ಸ್ವಾಮಿಯವರು ತಮ್ಮ ಗುಟ್ಟು ಬಯಲಾಗದಂತೆ ಅವರು ಅದ್ಭುತವಾಗಿ ನಟಿಸುತ್ತಿದ್ದರು. 'ಯದ್ಭಾವಂ ತದ್ಭವತಿ' ಎನ್ನುವ ಹಾಗೆ ಸ್ವಾಮಿಯವರ ಮಾತಿನಲ್ಲಿ "ವಾಳ್ಳುಂಡೇ ದಾನಿ ಬಟ್ಟಿ ಗದಯ್ಯಾ ಮನಮುಂಡೇದಿ" (ಯಾರು ಹೇಗೆ ಪ್ರವರ್ತಿಸುತ್ತಾರೆಯೋ ನಾವು ಅವರಂತೆಯೇ ಪ್ರವರ್ತಿಸಬೇಕು) ಅನ್ನುತ್ತಿದ್ದರು. ಭಕ್ತ ಜನರು ತಮ್ಮ ಸಮಸ್ಯೆಗಳನ್ನು ಹೇಳಿ ಪರಿಷ್ಕಾರ ಮಾರ್ಗವನ್ನು ತಿಳಿಸಿ ಎಂದು ಪ್ರಾರ್ಥಿಸಿದರೆ, ಕೆಲವರಿಗೆ ತಮ್ಮ ತಂಬೂರಿ ಮೀಟುತ್ತಾ, ಬೆರಳು ಎಣಿಸುವುದಾಗಲಿ, ಆಕಾಶ ನೋಡಿ ವಿಚಿತ್ರ ಭಂಗಿಗಳನ್ನು ತೋರಿಸುತ್ತಾ, ಒಂದೋ ಎರಡೊ ಮಾತುಗಳು ಹೇಳುತ್ತಿದ್ದರು. ಕೆಲವರಿಗೆ ಅವರು ಬಂದು ಕೇಳುವ ಮೊದಲೇ ಅವರು ಬಂದ ವಿಷಯಗಳನ್ನು, ವಿವರವಾಗಿ ಹೇಳಿ, ಭೂತ, ಭವಿಷ್ಯ, ವರ್ತಮಾನಗಳನ್ನು, ತಾರೀಖು

ಗಳನ್ನು ಹೇಳುತ್ತಿದ್ದರು.

ಉದಾಹರಣೆಗೆ: ನೂತೇಟಿ ರಾಮಯ್ಯನವರ ಪತ್ನಿ ಮತ್ತು ವೇಲೂರು ಗೋವಿಂದಯ್ಯನವರ ಪತ್ನಿ ಇಬ್ಬರೂ ಗರ್ಭವತಿಯರು. ಶ್ರೀ ರಾಮಯ್ಯ ಶ್ರೀ ಗೋವಿಂದಯ್ಯ ಇವರಿಬ್ಬರು ತಮಗೆ ಯಾವ ಮಗು ಹುಟ್ಟುತ್ತದೆ ಎಂದು ಕೇಳಲು ಸ್ವಾಮಿಯವರ ಹತ್ತಿರ ಬಂದರು. ಇಬ್ಬರೂ ಕೇಳುವ ಮೊದಲೇ "ಮೀಕು ಇದ್ದರಿಕಿ ಮೊಗಪಿಲ್ಲಲೇ ಪುಡತಾರು, ಇಕ ಪೋಂಡಿ" (ಇಬ್ಬರಿಗೂ ಗಂಡು ಮಕ್ಕಳೇ ಹುಟ್ಟುತ್ತಾರೆ, ಇನ್ನು ಹೊರಡಿ" ಎಂದು ಒಂದೇ ಮಾತು ಹೇಳಿ ಕಳುಹಿಸಿದರು. ಅವರಿಗೆ ಸ್ವಾಮಿ ಹೇಳಿದಂತೆಯೆ ಗಂಡು ಮಕ್ಕಳಾದವು.

ರಾಮಯ್ಯ ಮತ್ತು ಗೋವಿಂದಯ್ಯನವರಿಬ್ಬರಿಗೂ ಪರಮ ಕರುಣಾಮೂರ್ತಿಯಾದ ಸ್ವಾಮಿಯವರು ಹೇಳಿದ ರೀತಿ ಕೋಪದಿಂದ, ಸಿಡುಕಿದಂತೆ ಇತ್ತಂತೆ. ಯಾಕೆ ಹಾಗೆ ಸಿಡುಕಿದರು? ಇದಕ್ಕೂಮುಂಚೆ ಅವರುಗಳಿಗೆ ಸ್ವಾಮಿಯವರು ಎಷ್ಟೋ ಅನುಭವಗಳನ್ನ ಕೊಟ್ಟಿದ್ದರು. **ಆದರೆ ಆ ಅನುಭವಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಇರುವ ಅವರ ದುರ್ಬಲ ಸ್ಥಿತಿಯನ್ನು ಕಂಡು ಸ್ವಾಮಿಯವರು ಸಿಡುಕಿದರು. ಯಾವ ಮಗು ಬೇಕೆಂದರೆ ಆ ಮಗುವನ್ನು ಪ್ರಸಾದಿಸಬಲ್ಲ ಸ್ವಾಮಿಯವರ ದಿವ್ಯಶಕ್ತಿಯನ್ನು ಗುರುತಿಸದೆ, ಯಾವ ಮಗು ಹುಟ್ಟುತ್ತೆ ಎಂದು ಕೇಳುವುದು ಎಂತಹ ಹೀನಸ್ಥಿತಿ ಅಲ್ಲವೆ!** 10

ಕೆಲವು ವರ್ಷಗಳ ಹಿಂದೆ ಅಮೆರಿಕನ್ ಶಾಸ್ತ್ರಜ್ಞರು ಸ್ಕೈಲಾಬ್ ಅನ್ನುವ ಪರಿಕರಣೆಯನ್ನು ಅಂತರಿಕ್ಷ ನೌಕೆಯಲ್ಲಿಟ್ಟು ಆಕಾಶಕ್ಕೆ ಕಳುಹಿಸಿದರು. ಅದು ಸ್ವಲ್ಪ ದಿನ ಭೂಮಿಯ ಸುತ್ತ ತಿರುಗಿತು. ಅದರ ಜೀವಿತಕಾಲ ಪೂರ್ತಿ ಆದಮೇಲೆ ಯಾವ ದೇಶದ ಮೇಲಾದರೂ ಬೀಳ ಬಹುದು ಎಂದು ಶಾಸ್ತ್ರಜ್ಞರು ಪ್ರಕಟಿಸಿದರು. ಅದರಿಂದ ಇಲ್ಲಿನ ಪ್ರಜೆಗಳೆಲ್ಲಾ ತುಂಬಾ ಭಯ ಪಟ್ಟಿದ್ದರು. ಒಬ್ಬ ವ್ಯಕ್ತಿ ಸ್ಕೈಲಾಬ್ ಎಲ್ಲಿ ಬೀಳುತ್ತದೆ ಎಂದು ಸ್ವಾಮಿಯವರನ್ನ ಕೇಳಿದರು. ಆಗ ಸ್ವಾಮಿಯವರು "ಅದಿ ಅಕ್ಕಡೆಕ್ಕಡೋ ಸಮುದ್ರಂಲೊ ಪಡುತುಂದಿಲೇಯ್ಯಾ" (ಅದು ಅಲ್ಲೆಲ್ಲೋ ಸಮುದ್ರದೊಳಗೆ ಬೇಳುತ್ತದೆ ಅಯ್ಯಾ) ಎಂದರು. ಹಾಗೆಯೆ ಅದು ಪೆಸಿಫಿಕ್ ಮಹಾಸಮುದ್ರದಲ್ಲಿ ಬಿದ್ದಿತು.

ಗೊಲಗಮೂಡಿ ಕರಣಂ ಸುಬ್ಬಾರಾವ್ ಅವರ ಮಗ ಶ್ರಿ ಸ್ವಾಮಿಯವರ ಭಕ್ತ. ಆತ, ಇಂಟರ್ ಪರೀಕ್ಷೆಗೆ ಹೋಗುವ ಮೊದಲು ಹಾಲ್ ಟಿಕೆಟ್ ಸ್ವಾಮಿಯವರಿಗೆ ಕೊಟ್ಟು ಆಶೀರ್ವಾದ ಪಡೆದುಕೊಂಡು ಪರೀಕ್ಷೆಗೆ ಹೋದರು. ಪರೀಕ್ಷೆಯಲ್ಲಿ ಉತ್ತೀರ್ಣ ನಾಗುತ್ತೀಯ ಎಂದು ಹಾಮಿ ಪತ್ರ ಬರೆಸಿದರು. ಅದು ತಿಳಿದು ಬಹಳ ಸಂತೋಷದಿಂದ ಇದ್ದರು. ಫಲಿತಾಂಶ ಬಂದಾಗ, ಪಟ್ಟಿಯಲ್ಲಿ ಆತನ ಹೆಸರು ಇರಲಿಲ್ಲ. ಆ ಹುಡುಗನ ತಾಯಿ ತುಂಬಾ ಭಯದಿಂದ ಸ್ವಾಮಿಯವರನ್ನು "ಪಟ್ಟಿಯಲ್ಲಿ ಹೆಸರು ಇಲ್ಲವಲ್ಲ, ಫೇಲ್ ಆದನಲ್ಲ" ಎಂದು ಕೇಳಿದರು. ಸ್ವಾಮಿಯವರು "ಲೇದಮ್ಮ ಆಯನ ಪಾಸಾಯಿನಾಡು" (ಇಲ್ಲಮ್ಮ ಅವನು ಪಾಸಾಗಿದ್ದಾನೆ) ಎಂದು ಖಚಿತವಾಗಿ ಹೇಳಿದರು. ಮಾರ್ಕ್ಸ್ ಕಾರ್ಡ್ ಬಂದಾಗ,

ಅದರಲ್ಲಿ ಸ್ವಾಮಿಯವರು ಹೇಳಿದಂತೆ, ಪಾಸಾಗಿದ್ದಾನೆಂದು ಇತ್ತು. ಸ್ವಾಮಿಯವರ ಮಾತು ಯಾವಾಗಲಾದರೂ ಸುಳ್ಳಾಗುತ್ತದೆಯೇ?

1968 ನೇ ಇಸವಿಯಲ್ಲಿ ಸ್ವಾಮಿಯವರು ಶ್ರೀರಾಮಯ್ಯನೊಂದಿಗೆ, "ಶ್ರೀರಾಮಯ್ಯಾ! ನೀಕು ಇಲ್ಲು ಲೇದೇ!" (ಶ್ರೀರಾಮಯ್ಯ ನಿನಗೆ ಮನೆ ಇಲ್ಲವಲ್ಲಾ!) ಎಂದರು. ಅದು ಹೇಗೆ ಎಂದು ಸ್ವಾಮಿಯವರ ಜೊತೆ ವಾದಿಸಿದಾಗ, ಸ್ವಾಮಿಯವರು "ನೀ ಇಲ್ಲು ಅನಂತಪ್ಪ ಕೊಂಟುಂಡ್ಲಾ" (ನಿನ್ನ ಮನೆ ಅನಂತಪ್ಪ ಕೊಂಡುಕೊಳ್ಳುತ್ತಿಲ್ಲವೇ?) ಎಂದರು. ಆದಿನಗಳಲ್ಲಿ ಶ್ರೀರಾಮಯ್ಯ ತುಂಬಾ ಶ್ರೀಮಂತ ರೈತ ಅವರ ಪಕ್ಕದ ಮನೆಯಲ್ಲಿದ್ದ ಅನಂತಪ್ಪ ತುಂಬಾ ಬಡವ ರೈತ. ಸ್ವಾಮಿಯವರ ಮಾತನ್ನು ಕೇಳಿ ಅದು ಕೇವಲ ಹುಚ್ಚು ಮಾತು ಎಂದುಕೊಂಡರು ಶ್ರೀರಾಮಯ್ಯನವರು. ಸ್ವಲ್ಪ ದಿನಗಳ ನಂತರ, 1983 ನೇ ಇಸವಿ ಹೊತ್ತಿಗೆ ಇಬ್ಬರ ಆರ್ಥಿಕ ಪರಿಸ್ಥಿತಿಯಲ್ಲಿ ಬದಲಾವಣೆ ಬಂದಿತು. ಅನಂತಪ್ಪ ಭಾಗ್ಯವಂತರಾದರು, ಶ್ರೀರಾಮಯ್ಯ ಅವರ ಮನೆಯನ್ನು ಮಾರಾಟಕ್ಕಿಟ್ಟಿದ್ದರು, ಅದನ್ನ ಅನಂತಪ್ಪ ಕೊಂಡು ಕೊಂಡರು. 20 ವರ್ಷಗಳ ನಂತರ ಯಾರ ಮನೆ ಯಾರು ಕೊಳ್ಳುತ್ತಾರೋ, ಅವರ ಹೆಸರನ್ನು ಖಚಿತವಾಗಿ ಸ್ವಾಮಿಯವರು ಹೇಳಿದರೆಂದರೆ ಅವರು ಸರ್ವಜ್ಞಮೂರ್ತಿ ಎಂದು ತಿಳಿಯುವುದಿಲ್ಲವೇ? ಸೃಷ್ಟಿಯಲ್ಲಿ ಪ್ರತಿಯೊಂದು ಸಣ್ಣ ವಿಷಯವೂ ಮೊದಲೇ ನಿರ್ಧಾರವಾಗಿರುತ್ತದೆ, ಅದರಂತೆಯೇ ನಡಿಯುತ್ತದೆ. **ಕೆಲವು ನಿರ್ಣಯಗಳು ನಮ್ಮ ಪ್ರಯತ್ನಗಳಿಂದ ಬದಲಾಯಿಸ ಬಹುದು. ಆದರೆ ಹಾಗೆ**
11 **ಬದಲಾಯಿಸುವುದಕ್ಕೆ ಸರಿಯಾದ ಪ್ರಯತ್ನ ಮಾಡುವ ಸಂಸ್ಕಾರವಂತರು ನೂರು ಜನಗಳಲ್ಲಿ ಒಬ್ಬರು ಅಲ್ಲವಲ್ಲ ಸಾವಿರ ಜನಗಳಲ್ಲಿ ಒಬ್ಬರು ಹಾಗೆ ಮಾಡಬಲ್ಲರು ಎಂದು ಶ್ರೀ ಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ ಹೇಳಿದರು. ಸದ್ಗುರುಗಳೆಲ್ಲರಿಗೂ ನಿರ್ಣಯಗಳನ್ನು ಬದಲು ಮಾಡುವ ಶಕ್ತಿ ಇರುತ್ತದೆ. ನಾವು ಗುರುಗಳ ಕೃಪೆಯನ್ನು ಪಡೆಯದಿದ್ದರೆ, ಸದ್ಗುರುಗಳು ಆ ನಿರ್ಣಯಗಳನ್ನ ಬದಲಾಯಿಸುವುದಿಲ್ಲ.**

ದಾರಾ ಪುಲ್ಲಯ್ಯನವರ ಹೆಂಡತಿ ಚಿನ್ನಮ್ಮ ನವರು 60 ನೇ ವರ್ಷದಲ್ಲಿ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡರು. ಇನ್ನೂ ಕಣ್ಣು ನೋವಿನಲ್ಲೇ ಬಾಧೆ ಪಡುತ್ತಿದ್ದರು. "ಶಸ್ತ್ರ ಚಿಕಿತ್ಸೆ ಹೇಗೆ ಮಾಡಿದರೋ? ಕಣ್ಣು ಕಾಣಿಸುತ್ತದೆಯೋ, ಇಲ್ಲವೋ" ಎಂದು ಭಯದಿಂದ ಸ್ವಾಮಿಯವರನ್ನು ಪ್ರಾರ್ಥಿಸಿದರು. ಆಕೆಯ ಸ್ವಪ್ನದಲ್ಲಿ ಸ್ವಾಮಿಯವರು ದರ್ಶನ ಕೊಟ್ಟು, "ಏಮಿ ಭಯಪಡವದ್ದು. ಆಪರೇಷನ್ ಚೇಸಿನಂತಸೇಪು, ನೇನಕ್ಕಡನೇ ವುನ್ನಾನು ಕದಾ?" (ಏನೂ ಭಯ ಪಡ ಬೇಡ. ಶಸ್ತ್ರ ಚಿಕಿತ್ಸೆ ನಡೆಯುವವರೆಗೂ ನಾನು ಅಲ್ಲೇ ಇದ್ದೆನಲ್ಲವೆ?) ಎಂದರು. ಸ್ವಾಮಿಯವರು ಹೇಳಿದಂತೆಯೇ, ನೋವು ಕಮ್ಮಿಯಾಗಿ ಕಣ್ಣು ಚೆನ್ನಾಗಿ ಕಾಣಿಸತೊಡಗಿತು. ತನ್ನ ಪ್ರಾರ್ಥನೆಯನ್ನು ಮನ್ನಿಸಿ ಸ್ವಪ್ನದಲ್ಲಿ ದರ್ಶನ ಕೊಟ್ಟು ಅಭಯ ಕೊಟ್ಟ ಸ್ವಾಮಿಯವರಿಗೆ ನಾನೆಷ್ಟೋ ಋಣ ಇದ್ದೇನೆ" ಎಂದು ಹೇಳಿದರು.

ನಿಜವಾದ ಭಕ್ತಿ, ಪ್ರೇಮಗಳಿಗೆ ಸ್ವಾಮಿಯವರು ಎಷ್ಟು ಬೆಲೆ ಕೊಡುತ್ತಿದ್ದರು 12
ಎಂದು ಈ ಕೆಳಗಿನ ವಿಷಯದಿಂದ ತಿಳಿಯುತ್ತದೆ

ಒಂದು ದಿನ, ನಾನು (ಈ ಪುಸ್ತಕ ಬರೆದ ಲೇಖಕರು) ಮನೆಯಲ್ಲಿ ಇಡ್ಲಿ ತಯಾರು ಮಾಡಿಸಿ ಸ್ವಾಮಿಯವರಿಗೋಸ್ಕರ ತರುತ್ತಿದ್ದೆ. ಸ್ವಾಮಿಯವರು ಅದನ್ನ ತಿನ್ನುವ ವರೆಗೂ ನಾಮ ಜಪವನ್ನು ಬಿಡದೇ ಮಾಡಬೇಕೆಂದು, ನಾಮ ಜಪವನ್ನು ಮಾಡುತ್ತಾ ಇಡ್ಲಿಯನ್ನು ತಂದೆ. ಆದರೆ ಸ್ವಾಮಿಯವರು ನಾನು ಬರುವುದರಲ್ಲಿ, ಆಚೆಯಿಂದ ತಂದ ಇಡ್ಲಿ ತಿಂದುಬಿಟ್ಟಿದ್ದರು. ಅದರಿಂದ ಸ್ವಾಮಿಯವರ ಸೇವಕರು, ನಾನು ತಂದಿದ್ದ ಇಡ್ಲಿಗಳನ್ನು ಸ್ವಾಮಿಯವರಿಗೆ ಕೊಡಲಿಲ್ಲ. ಈ ವಿಷಯ ತಿಳಿದು ನಾನು ತುಂಬಾ ಬೇಸರದಿಂದ ಕುಳಿತು ಕೊಂಡಿದ್ದೆ. ಇದನ್ನು ನೋಡಿದ ಶ್ರೀ ನರಸಾರೆಡ್ಡಿ ಅವರ ಧರ್ಮಪತ್ನಿ ಈಶ್ವರಮ್ಮನವರು ನನ್ನ ಚಿಂತೆಯ ಕಾರಣ ತಿಳಿದು, 4 ಇಡ್ಲಿಗಳನ್ನು ತಟ್ಟೆಯಲ್ಲಿಟ್ಟುಕೊಂಡು ಸ್ವಾಮಿಯವರಿಗೆ ನಿವೇದಿಸಿ ಸ್ವಲ್ಪವಾದರು ತಿನ್ನಿ ಎಂದು ಬೇಡಿಕೊಂಡರು. ಸ್ವಾಮಿಯವರು ಅದನ್ನು ಸ್ವೀಕರಿಸಿ 4 ಇಡ್ಲಿಗಳನ್ನು ಪೂರ್ತಿಯಾಗಿ ತಿಂದು ಬಿಟ್ಟರು. ಆ ದೃಶ್ಯ ನೋಡಿ ನನಗೆ ತುಂಬಾ ಸಂತೋಷ ಆಯಿತು. ಸರ್ವಜ್ಞಮೂರ್ತಿ ಸ್ವಾಮಿಯವರು ಈ ರೀತಿಯಲ್ಲೇ ಎಷ್ಟೋ ಜನ ಭಕ್ತರನ್ನು ಸಂತೋಷ ಪಡೆಸಿದರು.

ಸ್ವಲ್ಪ ಜನ ಭಕ್ತರು ಸ್ವಾಮಿಯವರ ಅನುಮತಿ ಇಲ್ಲದೇ ಅವರ ಮಾತುಗಳನ್ನು ಟೇಪ್ ಮಾಡಿದರು. ಆಮೆಲೆ ಆ ಟೇಪನ್ನು ಹಾಕಿದಾಗ, ಅದು ಖಾಲಿ ಇರುತ್ತಿತ್ತು.

ಕೋಟದಲ್ಲಿ ವಾಸಿಸುತ್ತಿದ್ದ ವೆಂಕಟರಮಣಯ್ಯ ಫೊಟೋಗ್ರಾಫರ್ ಕರೆದುಕೊಂಡು ಬಂದು "ಸ್ವಾಮಿಯವರ ಫೋಟೋ ತೆಗಿ " ಎಂದರು. ಪ್ರತಿ ಸಾರಿ ಪ್ರಯತ್ನ ಮಾಡಿದರೂ ಕ್ಲಿಕ್ ಮಾಡುವ ಹೊತ್ತಿಗೆ ಸ್ವಾಮಿಯವರು ಅಲಗಾಡುತ್ತಿದ್ದರು. "ಈಗ ಇದು ಸರಿಯಲ್ಲ" ಎಂದು ರಮಣಯ್ಯ "ನಾನು ಧ್ಯಾನದಲ್ಲಿ ಕುಳಿತುಕೊಳುತ್ತೇನೆ, ನೀನು ತಯಾರಾಗಿದ್ದು ಸ್ವಾಮಿಯವರು ಪೋಜ್ ಕೊಟ್ಟಾಗ, ಫೋಟೋ ತೆಗಿ" ಎಂದು ಹೇಳಿ ಧ್ಯಾನ ಮಾಡುತ್ತಾ ಕುಳಿತುಕೊಂಡರು. ಸ್ವಲ್ಪ ಸಮಯದ ನಂತರ, ದಯಾಮಯರಾದ ಸ್ವಾಮಿಯವರು, ಅವರ ತಲೆ ಮೇಲೆ ಎತ್ತಿ ಮಲಗಿಕೊಳ್ಳುವ ಭಂಗಿಯಲ್ಲಿ ಕುಳಿತುಕೊಂಡರು. ತಕ್ಷಣವೇ ಫೋಟೋಗ್ರಾಫರ್ ಫೋಟೋ ತೆಗೆದರು. ಈಗ ಸಮಾಧಿ ಮಂದಿರದಲ್ಲಿ, ಇದೇ ಫೋಟೋ ಕಾಣುತ್ತದೆ ಅದರಲ್ಲಿ ಸ್ವಾಮಿಯವರು ತಮ್ಮ ಮುಷ್ಟಿಯನ್ನು ಬಿಗಿದು ಕೊಂಡಿದ್ದಾರೆ. ಶ್ರೀ ಸ್ವಾಮಿಯವರ ಎಲ್ಲಾ ಫೋಟೋಗಳಗಿಂತ ಈ ಫೋಟೋನಲ್ಲಿ ಅವರು ತುಂಬ ಪ್ರಸನ್ನರಾಗಿ, ಮತ್ತು ಕಿರುನಗೆ ತಾಂಡವವಾಡುತ್ತಿದೆ ಎಂದು ಪ್ರತಿಯೊಬ್ಬರೂ ಹೇಳುತ್ತಿದ್ದಾರೆ.

ಕಾಟಂರೆಡ್ಡಿ ಸುಬ್ಬಾರೆಡ್ಡಿ, ಕಲ್ಲೂರುಪಲ್ಲಿ ಗ್ರಾಮ ನೆಲ್ಲೂರು ತಾಲುಕು, ಅವರ ತಂದೆ, ಸುಬ್ಬರಾಮಿ ರೆಡ್ಡಿ ಅವರಿಗೆ ಸ್ವಾಮಿಯವರಿಂದ ಪಡೆದ ಅನುಭವ ಹೀಗೆ ವರ್ಣಿಸಿದ್ದಾರೆ.

1966 ನೇ ಇಸವಿ ನಮ್ಮ ತಾಯಿಯವರು ನಿಧನರಾದ ಮೇಲೆ, ನಮ್ಮ ತಂದೆಯವರು ತುಂಬ ದುಃಖಿತರಾದರೆಂದು ಅವರ ಸ್ನೇಹಿತರು, ಅವರನ್ನು ಸ್ವಾಮಿಯವರ ದರ್ಶನಕ್ಕಾಗಿ ಕರೆದು ಕೊಂಡು ಬಂದರು. ಮೊದಲನೇ ದರ್ಶನದಿಂದಲೇ ನಮ್ಮ ತಂದೆಯವರಿಗೆ ತುಂಬ ಮನಸ್ಸಿನ ಶಾಂತಿ ಸಿಕ್ಕಿತು. ಅಂದಿನಿಂದ, ಪದೇ ಪದೇ

ಸ್ವಾಮಿಯವರ ದರ್ಶನ ಮಾಡುತ್ತಿದ್ದರು. 1969 ನೇ ಇಸವಿಯಲ್ಲಿ ಮನೆಯ ಬಾಧ್ಯತೆಗಳನ್ನೆಲ್ಲಾ ನನಗೆ ಒಪ್ಪಿಸಿ, ಸ್ವಾಮಿಯವರ ಸನ್ನಿಧಿಯಲ್ಲೇ ಇದ್ದು ಸೇವೆ ಮಾಡಲು ಪ್ರಾರಂಭಿಸಿದರು. ನಾನು ಕೆಲವೊಮ್ಮೆ ಸ್ವಲ್ಪ ಹಣ ಮತ್ತು ಅಕ್ಕಿಯನ್ನು ಕೊಡುತ್ತಿದ್ದೆ.

ನಮ್ಮ ತಂದೆಯವರು ಒಮ್ಮೆ ಧುನಿಗೆ ತೆಂಗಿನಕಾಯಿ ಒಡೆದು ಹಾಕಲು ಹೋದಾಗ, "ಅಯ್ಯಾ! ಅಂಟು, ಕೊಟ್ಟ ಕೂಡದು" (ಅಯ್ಯಾ! ಅವರಿಗೆ ಸೂತಕ, ಅವರು ತೆಂಗಿನಕಾಯಿ ಹಾಕಬಾರದು) ಎಂದು ಹೇಳಿದರು. ತಂದೆಯವರಿಗೆ ಏನೂ ಅರ್ಥವಾಗಲಿಲ್ಲ. ಸ್ವಲ್ಪ ಸಮಯದ ನಂತರ, ನನ್ನ ತಮ್ಮನ ಹೆಂಡತಿ ನಿಧನ ಹೊಂದಿದ್ದಾರೆ ಎಂದು ಸುದ್ದಿ ಬಂದಿತು.

ಆಗ ನಮ್ಮ ತಂದೆಯವರು "ಮನೆಗೆ ಹೋಗಿ ಮಕ್ಕಳನ್ನು ನೋಡಿ ಬರುತ್ತೇನೆ" ಎಂದು ಸ್ವಾಮಿಯವರನ್ನು ಕೇಳಿಕೊಂಡರು. "ಅಯ್ಯಾ! ಎಟ್ಟಾ ಪೋಯಿನವಾಡಿವಿ ಅಟ್ಟಾಗೇ ರಾವಾಲಿ. ಕಂಟ ತಡಿ ಪೆಟ್ಟ ಕೂಡದು" (ಅಯ್ಯಾ! ಹೇಗೆ ಹೋಗುತ್ತೀಯೋ ಹಾಗೆ ಬರಬೇಕು, ಕಣ್ಣೀರು ಹಾಕ ಬಾರದು) ಎಂದು ಸ್ವಾಮಿಯವರು ಹೇಳಿದರು. ನಮ್ಮ ತಂದೆಯವರು ಮನೆಗೆ ಬಂದು ಸೇರಿದ 2 ಘಂಟೆಯನಂತರ ನನ್ನ ತಮ್ಮ ಕೂಡ ನಿಧನ ಹೊಂದಿದ. "ಕಣ್ಣೀರು ಹಾಕಬಾರದೆಂದು" ಸ್ವಾಮಿಯವರ ಮಾತಿನ ಅರ್ಥ ಆಗ ತಿಳಿಯಿತು.

ನನ್ನ ತಮ್ಮ ಮತ್ತು ಅವನ ಪತ್ನಿ(ನನ್ನ ನಾದನಿ) ಮರಣಿಸುವುದಕ್ಕಿಂತ ಮೊದಲು, ಸ್ವಾಮಿಯವರು ನನಗೆ ಮಕ್ಕಳಿಲ್ಲ ಎಂದು ಹೇಳಿದ್ದರು. ನಮ್ಮ ಮದುವೆ ಆಗಿ 8 ವರ್ಷಗಳಾಗಿದ್ದವು. ಇನ್ನು ಮಕ್ಕಳಾಗುವ ಆಸೆ ಇರಲಿಲ್ಲ. ಸ್ವಾಮಿಯವರು, ನನ್ನ ತಮ್ಮ ಮತ್ತು ನಾದನಿ ಮರಣಿಸಿದ ನಂತರ, “ಅವರಿಬ್ಬರೂ ಮತ್ತೆ ನನ್ನ ಮಕ್ಕಳಾಗಿ ಹುಟ್ಟುತ್ತಾರೆ" ಎಂದು ಹೇಳಿದರು. ಮೊದಲು ಹೇಳಿದ ಮಾತಿಗೂ, ಮತ್ತೆ ಈಗಿನ ಮಾತು ವಿರುದ್ಧವಾಗಿದ್ದರಿಂದ, ನಾನು ಸ್ವಾಮಿಯವರನ್ನು ತುಂಬಾ ಅವಹೇಳನೆ ಮಾಡಿದೆ. ನಮ್ಮ ತಂದೆಯವರು ಸ್ವಾಮಿಯವರ ಘನತೆ ಬಗ್ಗೆ ಪ್ರಸ್ತಾಪನೆ ಮಾಡಿದಾಗಲೆಲ್ಲ ಕೋಪದಿಂದ ಮೈಕಂಪಿಸಿ ಸ್ವಾಮಿಯವರ ಬಗ್ಗೆ ಹೀನಾಯವಾಗಿ ಮಾತನಾಡುತ್ತಿದ್ದೆ. ಸ್ವಾಮಿಯವರು ಹೇಳಿದಂತೆಯೇ ನನಗೆ ಸಂತಾನ ಆಯಿತು ಆದರೂ, ಅವರ ಬಗ್ಗೆ ವಿಶ್ವಾಸ ಬರಲಿಲ್ಲ.

ಒಂದು ದಿನ ಸ್ವಾಮಿಯವರು "ಅಯ್ಯಾ! ಅಡುಗೋ, ನೀ ಕೊಡುಕು ನೆತ್ತಿನ ದಬರ ಪೆಟ್ಟುಕೊನಿ ವಸ್ತುನ್ನಾಡು. ಕೂಲೋಳ್ಳಕಿ ಅನ್ನಮು ಎತ್ತುಕೊನಿ ಪೋತುನ್ನಾಡು" (ಅಯ್ಯಾ! ಅಲ್ಲಿ ನೋಡು, ನಿನ್ನ ಮಗ ತಲೆಯ ಮೇಲೆ ಡಬರಿ ಇಟ್ಟುಕೊಂಡು ಹೋಗುತ್ತಿದ್ದಾನೆ. ಕೂಲಿಯವರಿಗೆ ಊಟ ತೆಗೆದುಕೊಂಡು ಹೋಗುತ್ತಿದ್ದಾನೆ) ಎಂದರು. "ಎಲ್ಲಿ ಸ್ವಾಮಿ ನಮಗೆ ಕಾಣುಸುತ್ತಿಲ್ಲವೇ?" ಎಂದರೆ, "ಅಡುಗೋನಯ್ಯಾ, ನೆತ್ತಿನ ದಬರ ಪೆಟ್ಟುಕೊನಿ" (ಅಲ್ಲಿ ನೋಡಪ್ಪಾ ಡಬರಿ ತಲೆಯ ಮೇಲಿಟ್ಟುಕೊಂಡು) ಎಂದಷ್ಟೇ ಹೇಳಿದರು. ಸ್ವಾಮಿಯವರ ಮಾತು ಪರೀಕ್ಷಿಸುವುದಕ್ಕಾಗಿ, ತಂದೆಯವರು ಮನೆಗೆ ಬಂದು ವಿಚಾರಿಸಿದಾಗ, ಆ ಸಮಯದಲ್ಲೇ ನಾನು ಹೊಲಕ್ಕೆ ಊಟ ತೆಗೆದುಕೊಂಡು ಹೋಗಿದ್ದು

ನಿಜ ಎಂದು ತಿಳಿಯಿತು. ಆ ಮಹನೀಯರಿಗೆ ಪ್ರಪಂಚದಲ್ಲಿ ಯಾರು ಏನು ಮಾಡುತ್ತಿದ್ದಾರೂ ಎಲ್ಲಾ ಕಾಣಿಸುತ್ತಿರುತ್ತದೆ.

ಶ್ರೀ ಸ್ವಾಮಿಯವರೆಂದರೆ ಭಕ್ತಿ ಶ್ರದ್ಧೆ ನನಗೆ ಇಲ್ಲದಿರುವುದನ್ನು ನಮ್ಮ ತಂದೆಯವರು ಸ್ವಾಮಿಗಳಿಗೆ ತಿಳಿಸಿದಾಗ, "ಆಯನ ನೀಕಂಟೇ ಗೊಪ್ಪವಾಡವುತಾಡುಲೇಯ್ಯ!" (ಅವನು ನಿನಗಿಂತಾ ದೊಡ್ಡ ಭಕ್ತನಾಗುತ್ತಾನಯ್ಯ!) ಎಂದು ಅಭಯ ಕೊಟ್ಟರು. ಈಗ ನನಗೆ ಸ್ವಾಮಿಯವರಮೇಲೆ ಭಕ್ತಿ ಶ್ರದ್ಧೆ ಉಂಟಾಗುವುದಕ್ಕೆ ಅವರ ಆಶೀರ್ವಾದವೇ ಕಾರಣ ಎಂದು ನಂಬುತ್ತೇನೆ.

ತಲಪೂರಿನಲ್ಲಿ ನಮ್ಮ ತಂದೆಯವರಿಗೆ ಅಕ್ಕಿ ಕೊಟ್ಟು ಬರುತ್ತಿದ್ದಾಗ, ಸ್ವಾಮಿಯವರು ನನಗೆ ಒಂದು ಹಾಮಿಪತ್ರಬರೆಯಿಸಿ ಕೊಟ್ಟರು. ಅದರಲ್ಲಿ "ಈಯನಕು ಕೋಳ್ಳಪಾಪಂ ಆವರಿಂಚಿಂದಿ. ಮೂಡು ರೋಜುಲು ಕೋಮಟಿ ಇಂಟ ಅನ್ನಂ ತಿಂಟೇ ಆ ಪಾಪಂ ಪೋತುಂದಿ" (ಇವನಿಗೆ ಕೋಳಿ ಪಾಪ ಆಗಿದೆ. 3 ದಿನ ಒಬ್ಬ (ಶೆಟ್ಟರು) ಕೋಮಟಿಯವರ ಮನೆಯಲ್ಲಿ ಊಟ ಮಾಡಿದರೆ ಆ ಪಾಪ ಹೋಗುತ್ತದೆ) ಎಂದಿತ್ತು. ಆರೋಗ್ಯವಾಗಿರುವ ನನಗೆ ಈ ಮಾತಿನ ಅರ್ಥ ಆಗಲಿಲ್ಲ. ನಾನು ವಾರಕ್ಕೆ 4 ದಿನಗಳು ಕೋಳಿಯನ್ನು ತಿನ್ನುವ ವಿಷಯ ನಮ್ಮ ತಂದೆಯವರೇ ಸ್ವಾಮಿಯವರಿಗೆ ಹೇಳಿದ್ದಾರೆಂದು ಅವರ ಜೊತೆ ಜಗಳವಾಡಿದೆ. "ನೀವೇ ಆ ಪಾಪದ ಕೆಲಸ ಮಾಡಬೇಡ ಎಂದಿದ್ದರೆ, ನಿಮ್ಮ ಮೇಲಿನ ಗೌರವದಿಂದ, ನಾನು ಆ ಕೆಲಸ ಮಾಡುತ್ತಿರಲಿಲ್ಲ." ನಾನು ನಿಮಗಿಂತ ಆ ಸ್ವಾಮಿಯವರನ್ನು ಹೆಚ್ಚು ಗೌರವಿಸುತ್ತೇನೆಂದುಕೊಂಡಿರಾ? ಎಂದು ಸ್ವಾಮಿಯವರ ಬಗ್ಗೆ ಅಗೌರವದಿಂದ ಮಾತಾಡಿದೆನು. ನಮ್ಮ ತಂದೆಯವರು ಕೋಪಿಸಿಕೊಂಡು ಬುದ್ದಿ ಹೇಳಿದರು.

"ಸ್ವಾಮಿ! ಕೋಳಿ ಪಾಪದ ವಿಚಾರ ನನ್ನ ಮಗನಿಗೆ ನಂಬಿಕೆ ಬರುತ್ತಿಲ್ಲ" ಎಂದು ತಂದೆಯವರು ಸ್ವಾಮಿಯವರೊಂದಿಗೆ ಬೇಡಿಕೊಂಡರು. "ಅಯ್ಯಾ! ಒಕ ನೆಲ ರೋಜುಲಕು ಆಯನಕೇ ತೆಲಿಸಿ ಮನ ದಗ್ಗರಿಕಿ ವಸ್ತಾಡು ಲೇ ಬಾಧಪಡವದ್ದು" ("ಅಯ್ಯಾ! ಇನ್ನೊಂದು ತಿಂಗಳಲ್ಲಿ, ಅವನಿಗೇ ಅರ್ಥವಾಗಿ, ಅವನೇ ನಮ್ಮ ಹತ್ತಿರ ಬರುತ್ತಾನೆ, ನೊಂದುಕೊಳ್ಳ ಬೇಡ") ಎಂದು ಸ್ವಾಮಿಯವರು ಹೇಳಿದರು.

ಒಂದು ತಿಂಗಳಾದಮೇಲೆ, ನಿಜವಾಗಿಯೂ ಕೋಳಿ ಮಾಂಸವನ್ನು ತಿಂದರೆ ಹೊಟ್ಟೆ ನೋವು, ಮತ್ತು ವಿರೋಚನೆ ಆಗುವುದು ಪ್ರಾರಂಭವಾಯಿತು. ವೈದ್ಯರಿಗೆ ತೋರಿಸಿದಾಗ ಕರುಳಿನಲ್ಲಿ ಹುಣ್ಣಾಗಿದೆ, ಶಸ್ತ್ರ ಚಿಕಿತ್ಸೆ ಮಾಡಬೇಕೆಂದರು. ಮೂರು ತಿಂಗಳು ಔಷಧಿಯನ್ನು ತೆಗೆದುಕೊಂಡರೂ, ಗುಣವಾಗಲಿಲ್ಲ. ರೋಗವು ಹಾಗೇ ಇದೆ. ತಂದೆಯವರು ಬಲವಂತವಾಗಿ ಸ್ವಾಮಿಯವರ ಬಳಿ ಕರೆದುಕೊಂಡು ಹೋದರು. ಸ್ವಾಮಿಯವರು, ನಕ್ಕು ಬಿಟ್ಟುರು. "ಅಯ್ಯಾ ಪ್ರೊದ್ದು ಕೂಕುತುಂದಿ, ಮೂಡು ಮುದ್ದಲು ಮಿರಿಯಾಲ ಪೊಡಿ ಕಲಿಪಿ ಅನ್ನಮು ಪೆಟ್ಟಂಡಿ, ಪೋತುಂದಿ" (ಅಯ್ಯಾ! ಸಂಜೆ ಆಗುತ್ತಿದೆ, ಮೂರು ತುತ್ತು ಕಾಳು ಮೆಣಸಿನ ಪುಡಿ ಅನ್ನ ದಲ್ಲಿ ಕಲೆಸಿ ಕೊಡಿ, ಕಡಿಮೆ ಆಗುತ್ತದೆ) ಎಂದರು. ಸ್ವಾಮಿಯ ಆದೇಶದಂತೆ ಊಟ ಕೊಟ್ಟರು. ಹತ್ತು ದಿನದಲ್ಲಿ ನಾನು ಪೂರ್ತಿ

ಗುಣವಾದೆ. ಒಂದು ತಿಂಗಳಲ್ಲಿ ಕೋಳಿ ಮಾಂಸ ನೋಡಿದರೆ ಇಷ್ಟ ಇಲ್ಲದ ಪರಿಸ್ಥಿತಿಗೆ ಬಂದಿತು. ನಾನು ಪೂರ್ತಿಯಾಗಿ ಅದನ್ನ ಬಿಟ್ಟು ಬಿಟ್ಟೆ. ಇಷ್ಟಾದರೂ ನನಗೆ ಸ್ವಾಮಿಯವರ ಮೇಲೆ ಭಕ್ತಿ ಶ್ರದ್ದೆ ಉಂಟಾಗಲಿಲ್ಲ ಎಂದರೆ ಅದು ನನ್ನ ಕರ್ಮಫಲ.

ಒಮ್ಮೆ ನಮ್ಮ ತಂದೆಯವರಿಗೆ ವಿರೋಚನವಾಗಿ ಸಾಯುವ ಸ್ಥಿತಿಯಲ್ಲಿದ್ದರು. 6 ಮೈಲಿ ದೂರ ಇದ್ದ ನೆಲ್ಲೂರಿಗೆ ಕರೆದುಕೊಂಡು ಹೋಗಲು ಗಾಡಿಯಲ್ಲಿ ಊರ ಹೊರಗೆ ಬಂದೆವು. ನಮ್ಮ ತಂದೆಯವರು ಆಸ್ಪತ್ರೆಗೆ ಬರಲು ಒಪ್ಪಲಿಲ್ಲ. "ನನ್ನ ಮೇಲೆ ಪ್ರೀತಿ ಇದ್ದರೆ, ಸ್ವಾಮಿಯವರ ಹತ್ತಿರ ಹೋಗಿ ಹಾಮಿ ಪತ್ರ ಬರೆಸಿಕೊಂಡು ಬಾ, ನಾನು ಬದುಕಿದರೂ ಸತ್ತುಹೋದರೂ ಅವರೆ ನನಗೆ ದಿಕ್ಕು" ಎಂದು ಹಟ ಹಿಡಿದು ಮನಗೆ ಬಂದು ಬಿಟ್ಟರು. ವಿಧಿ ಇಲ್ಲದೇ ತಲಪೂರಿನಲ್ಲಿದ್ದ ಸ್ವಾಮಿಯವರ ಹತ್ತಿರ ಹೋದೆ. ಆ ರಾತ್ರಿ ಅಲ್ಲೇ ಇರಬೇಕಾಗಿಬಂತು. ಬೆಳಗ್ಗೆ ಸ್ವಾಮಿಯವರು ನನ್ನ ತಂದೆ ಯವರ ವಿಷಯ ತಿಳಿದು ನಕ್ಕು ಬಿಟ್ಟು "ಆಯನಕೇಮಯ್ಯಾ ಆಯನ ಆಸ್ಪತ್ರಿಕಿಪೋಡೇ, ಈಯನ ಪೋಯೇತಲಕಿ, ಅನ್ನಮು ತಿಂಟೂ ವುಂಟಾಡು ಲೇ" (ನಿನ್ನ ತಂದೆಯವರಿಗೇನಪ್ಪಾ! ಅವರು ಆಸ್ಪತ್ರೇಗೆ ಹೋಗುವುದಿಲ್ಲ, ನೀನು ಮನೆಗೆ ಹೋಗುವುದರಲ್ಲಿ ಅವರು ಊಟ ಮಾಡುತ್ತಿರುತ್ತಾರೆ) ಎಂದು ಹೇಳಿ ಅವರ ಭಾಷೆಯಲ್ಲಿ 'ಕೋಟಿ', 'ಮಣ' ಎಂದು ಆಶೀರ್ವದಿಸಿ ಹಾಮಿ ಪತ್ರಬರೆಸಿ ಕೊಟ್ಟರು. ನಾನು ಮನೆಗೆ ಹೋಗುವುದರಲ್ಲಿ ನನ್ನ ತಂದೆ ಮರಣ ಹೊಂದಿರುತ್ತಾರೆ ಎಂದು ನನ್ನ ಮನಸ್ಸಿನಲ್ಲಿ ಅಂದುಕೊಂಡಿದ್ದೆ ಆದರೆ, ನನ್ನ ತಂದೆಯವರು ಸ್ವಾಮಿಯವರು ಹೇಳಿದಂತೆ, ಊಟ ಮಾಡುತ್ತಿದ್ದರು.

ಒಮ್ಮೆ ನಮ್ಮ ಎಮ್ಮೆಗಳು ತಪ್ಪಿಸಿ ಹೋದಾಗ 10 ದಿನ ಹುಡುಕಿ ಹುಡುಕಿ ಆಸೆ ಬಿಟ್ಟು ಬಿಟ್ಟೆವು. ನಮ್ಮ ತಂದೆಯವರು ಸ್ವಾಮಿಯವರಿಗೆ ಈ ವಿಚಾರ ಹೇಳಿದಾಗ, ಸ್ವಾಮಿಯವರು "ಅಯ್ಯಾ! ವಾಳ್ಳಕು ಕಾಳ್ಳ ತಿಪ್ಪಟ ಕರ್ಮವುಂಡಿ ತಿರಿಗಾರು. ನಾಲುಗವ ಮೈಲುಲೋ ಬಜ್ಜೆಲನು ಕಟ್ಟೇಸಿ ಮೇಪುತುನ್ನಾರು. ರೆಂಡು ರೂಪಾಯಲು ಇಸ್ತೇ ತೋಲಿ ಪೆಡ್ತಾರು" (ಅಯ್ಯಾ! ಅವುಗಳಿಗೆ ತಿರುಗಾಡುವ ಕರ್ಮ ಇದೆ, ಅದಕ್ಕೇ ತಿರುಗಾಡುತ್ತಿವೆ. ಇಲ್ಲಿಂದ 4 ಮೈಲಿ ದೂರದಲ್ಲಿ ಅವುಗಳನ್ನ ಕಟ್ಟಿ ಹುಲ್ಲು ತಿನ್ನಿಸುತ್ತಿದ್ದಾರೆ. 2 ರೂಪಾಯಿ ಕೊಟ್ಟರೆ, ಅವುಗಳನ್ನ ತಂದು ಬಿಡುತ್ತಾರೆ" ಎಂದು ಹೇಳಿದರು. ಸ್ವಾಮಿಯವರ ಮಾತಿನಲ್ಲಿ ಸಂಪೂರ್ಣ ವಿಶ್ವಾಸವಿದ್ದ ತಂದೆಯವರು ನಮ್ಮ ಹತ್ತಿರ ಕೆಲಸಮಾಡುತಿದ್ದ ಜವಾನನಿಗೆ 2 ರೂಪಾಯಿ ಕೊಟ್ಟು, 4 ಮೈಲಿ ದೂರದಲ್ಲಿ ಹುಡುಕಲು ಹೇಳಿದರು. ನಮ್ಮ ಎಮ್ಮೆಗಳು ಸುರಕ್ಷಿತವಾಗಿ ಇರುವುದಲ್ಲದೇ ಸ್ವಾಮಿಯವರು ಹೇಳಿದಂತೆ, 2 ರೂಪಾಯಿಗಳು ಮಾತ್ರ ತೆಗೆದುಕೊಂಡು ನಮ್ಮ ಎಮ್ಮೆಗಳನ್ನ ಕಳುಹಿಸಿದರು.

ನಮ್ಮ ತಂದೆಯವರು ಮುದ್ದೆ ಊಟ ಮಾಡುತ್ತಿರಲ್ಲಿಲ್ಲ ಆದ್ದರಿಂದ ಅವರಿಗೆ ಪ್ರತ್ಯೇಕವಾಗಿ, ಅಕ್ಕಿಯನ್ನು ತರಿಸಿ ಅನ್ನವನ್ನು ಮಾಡಿಸಿ ಕೊಡುತ್ತಿದ್ದರು ಸ್ವಾಮಿಯವರು." ಸೃಷ್ಟಿಯಲ್ಲಿ ನಿರ್ಣಿತವಾದ ಎಷ್ಟೇ ಸಣ್ಣ ವಿವರಗಳು ಕೂಡ ಸರ್ವಜ್ಞಮೂರ್ತಿಯಾದ ಶ್ರೀ ಸ್ವಾಮಿಯವರಿಗೆ ಗೊತ್ತು ಎನ್ನುವ ವಿಷಯವನ್ನು, ಪೆನವರ್ತಿ ಗ್ರಾಮಸ್ಥ, ಮೋಪೂರು ದಶಯ್ಯನವರ ತಂಗಿ ವನಮ್ಮನವರು ಹೀಗೆ ಹೇಳಿದರು. ಒಮ್ಮೆ ಎಲ್ಲರಿಗೂ ಕೇಳುವಂತೆ

ಸ್ವಾಮಿಯವರು ದಶಯ್ಯನವರೊಂದಿಗೆ ಹೀಗೆ ಹೇಳಿದರು, "ಅಯ್ಯಾ! ವನಮ್ಮ ವೇರೇಬೋತುಂದಿ, ಅಪ್ಪುಡು ಅನ್ನೀ ಮನಮೀಯಾಲಯ್ಯಾ" (ಅಪ್ಪಾ! ವನಮ್ಮ ಬೇರೇ ಹೋಗುತ್ತಾಳೆ, ಆಗ ನಾವು ಎಲ್ಲ ಕೊಡಬೇಕಪ್ಪಾ!). ವನಮ್ಮ ತನ್ನ ಗಂಡ ಮರಣಿಸಿದ ಮೇಲೆ ತನ್ನ ಅಣ್ಣನ ಮನೆಯಲ್ಲಿದ್ದರು. ಆಕೆ ಬೇರೇ ಇರುವ ಅವಕಾಶವೇ ಇರಲಿಲ್ಲ. ಶ್ರೀ ಸ್ವಾಮಿಯವರು ಏಕೆ ಹಾಗೆಂದರು ಅನ್ನುವುದು ಯಾರಿಗೂ ಅರ್ಥವಾಗಲಿಲ್ಲ.

ಸ್ವಾಮಿಯವರು ಹಾಗೆ ಹೇಳಿದ 1 ವಾರದ ನಂತರ, ದಶಯ್ಯನಿಗೆ ಮತ್ತು ವನಮ್ಮನಿಗೆ ಭಿನ್ನಾಭಿಪ್ರಾಯ ಬಂದು ಆಕೆ ಅವರ ಮನೆಯಲ್ಲೇ ಬೇರೆ ಅಡಿಗೆ ಮಾಡಿಕೊಂಡು ಊಟ ಮಾಡುತ್ತಿದ್ದರು. ಅಡಿಗೆಯ ಸಾಮಾನೆಲ್ಲಾ ದಶಯ್ಯನವರದ್ದೇ. 4 ನೆಯ ದಿನ, ದಶಯ್ಯನ ಮಗ "ವನಮ್ಮ ಬೇರೆ ಅಡಿಗೆ ಮಾಡಿಕೊಂಡು ಊಟ ಮಾಡಿದರೆ ತಾನು ಅನ್ನವನ್ನು ಮುಟ್ಟುವುದಿಲ್ಲ" ಎಂದು ಹೇಳಿ ನಮ್ಮ ತಂದೆಯವರ ಮಾತನ್ನು ಮರೆತು, ಯಥಾ ಪ್ರಕಾರ ಮೊದಲಿನಂತೆಯೇ ಇರಬೇಕೆಂದು" ತುಂಬಾ ಬೇಡಿಕೊಂಡ. ಆಗ, ವನಮ್ಮ ಮೊದಲಿನಂತೆಯೇ ಅವರುಗಳ ಜೊತೆ ಇರತೊಡಗಿದಳು. ಆಮೇಲೇ ಸ್ವಾಮಿಯವರ ದರ್ಶನಕ್ಕಾಗಿ ವನಮ್ಮ ಬಂದಾಗ "ವನಮ್ಮ ವೇರೇ ಬೋವಡಮ್ಮೈಪೋಯಿಂದೇ! ಮರ್ಲ ಮಾಮೂಲೇನೇ" (ವನಮ್ಮ ಬೇರೇ ಹೋಗುವುದು ಮುಗಿದುಹೋಯಿತು! ಮತ್ತೆ ಎಲ್ಲ ಮಾಮೂಲಾಗಿದೆ) ಎಂದು ಪಕಪಕಾ ನಕ್ಕರು. ಸ್ವಾಮಿಯವರು ಸರ್ವಜ್ಞರು ಅನ್ನುವುದು ಎಲ್ಲರೂ ಗುರುತಿಸಿದರು.

ಈ ಲೀಲೆಯಿಂದ ಸ್ವಾಮಿಯವರು ನಮಗೆ ಅತಿ ಸೂಕ್ಷ್ಮವಾದ ಬೋಧನೆ ಮಾಡಿದರು. ನಮ್ಮ ಭವಿಷ್ಯದ ತುಂಬಾ ಸೂಕ್ಷ್ಮವಾದ ವಿವರಗಳು ಮೊದಲೇ ನಿರ್ಧರಿಸಲಾಗಿರುತ್ತದೆ. ಉದಾಹರಣೆಗೆ, ಯಾರು, ಯಾರಜೊತೆ, ಯಾವಾಗ ಮಾತನ್ನಾಡುತ್ತಾರೋ ಅಥವಾ ಜಗಳವಾಡುತ್ತಾರೋ ಅನ್ನುವ ವಿಷಯದಿಂದ, ಯಾವ ಧಾನ್ಯ ಯಾರಿಗೆ ಸೇರಬೇಕಾದಿಯೋ ಅನ್ನುವ ವಿಷಯದವರೆಗೂ ಎಲ್ಲಾ ಮೊದಲೇ ನಿರ್ಣಯವಾಗಿರುತ್ತದೆ ಎಂದು ಕಬೀರ್ ಹೇಳಿದ ಮಾತು ನಿಜವೆಂದು ತೋರುತ್ತದೆ. ಈ ಜೀವನದ ಸೂಕ್ಷ್ಮಗಳು ಸ್ವಾಮಿಯವರಿಗೆ ಗೊತ್ತಿದ್ದರಿಂದ, ಅವರು ಮೊದಲೇ ಎಚ್ಚರ ಪಡಿಸಿದರು.

ಯಾರು ಏನೇ ಮಾತಾಡಲಿ, ಅಥವಾ ಏನೇ ಮಾಡಲಿ ಅದು ಪೂರ್ವ ನಿರ್ಧಾರದಂತೆಯೇ ಮಾತನಾಡುತ್ತಾರೆ ಅಥವಾ ಮಾಡುತ್ತಾರೆ. ಅದಕ್ಕೆ ಭಿನ್ನವಾಗಿ ಯಾರೂ ಪ್ರವರ್ತಿಸುವುದಕ್ಕೆ ಆಗುವುದಿಲ್ಲ. ಒಬ್ಬ ಸದ್ಗುರು ಸಂಕಲ್ಪಿಸಿದಂತೆ ನಡೆಯಬಲ್ಲವರು ಮಾತ್ರವೇ ಗುರುವಿನ ಸಂಕಲ್ಪದಂತೆ ನಡೆಯಬಲ್ಲರು. ಆದ್ದರಿಂದ, ಯಾರು ಏನೆಂದರೂ, ಏನೇ ಕೊಡಲೀ, ಬಿಡಲಿ, ದೂಷಣೆ ಮಾಡಲೀ ಬಿಡಲಿ, ರಾಗದ್ವೇಷರಹಿತರಾಗಿ, ಉದಾಸೀನ ಭಾವದಿಂದ ಸ್ವಾಮಿಯವರು ಹೇಳಿದಂತೆ ಮೌನವಾಗಿದ್ದರೇ ಸ್ವಾಮಿಯವರ (ಗುರುವಿನ) ಕೃಪೆಯನ್ನು, ಪೂರ್ತಿಯಾಗಿ ಪಡೆದು, ಕರ್ಮಫಲಿತಗಳು ಕ್ಷೀಣಿಸಿ ಸಂಸಾರಚಕ್ರದಿಂದ ವಿಮುಕ್ತಿ ಹೊಂದುತ್ತಾರೆ. ಹಿರಿಯರು "ಉದಾಸೀನೋಗತವ್ಯಥಃ" ಎಂದರು ಅಲ್ಲವೆ?

13

ಅವಧೂತ ಲೀಲ

ಅಧ್ಯಾಯ - 5

ಸರ್ವಸಮರ್ಥರು

ಅಜ್ಞಾನದಿಂದ ದೇಹಪರಿಮಿತವಾದ ನಮಗೆ, ನಮ್ಮ ದೇಹದ ಎಲ್ಲಾ ಅವಯವಗಳು ನಮ್ಮ ಅಧೀನದಲ್ಲಿ ಇರುವುದಿಲ್ಲ. ಗುರು ಕೃಪೆಯಿಂದ ದೇಹ ಭ್ರಾಂತಿಯನ್ನು ಅತಿಕ್ರಮಿಸಿದ ಶ್ರೀ ಸ್ವಾಮಿಯವರಂತಹ ಜ್ಞಾನಿಗಳಿಗೆ, ತಾವೆ ಇಡೀ ವಿಶ್ವವಾಗಿ, ಮತ್ತು, ಆ ವಿಶ್ವವನ್ನೇ ತಮ್ಮ ಆಧೀನದಲ್ಲಿ ಇಟ್ಟುಕೊಳ್ಳಬಲ್ಲರು. ಅವರಿಗೆ ಅವಶ್ಯಕತೆ ಎನ್ನಿಸಿದಾಗ, ನಮ್ಮ ಕರ್ಮಸೂತ್ರ ಗಳನ್ನುಕೂಡ ಸಡಿಲಗೊಳಿಸಿ ಭಕ್ತ ಸಂರಕ್ಷಣೆ ಮಾಡಬಲ್ಲ ಸರ್ವಸಮರ್ಥರಾಗಿರುತ್ತಾರೆ. ಅಂತಹ ಮಹನೀಯರ ಕೃಪೆಯನ್ನು ಪಡೆಯುವ ಪ್ರಯತ್ನದಲ್ಲಿ ನಮ್ಮ ಬದುಕಿನ ರೀತಿಯನ್ನು ನಡಿಸುಕೊಳ್ಳ ಬೇಕು. ಆ ಶೈಲಿ ಯಲ್ಲಿ ಜೀವನ ನಡೆಸಿದರೇ ಎಷ್ಟೋ ಜನ ಧನ್ಯ ಜೀವಿಗಳಾಗಿ ಸ್ವಾಮಿಯವರ ಕೃಪೆಗೆ ಪಾತ್ರರಾಗಿರುತ್ತಾರೆ. 14

ರೋಶಿ ರೆಡ್ಡಿಯವರು, ತುಂಬಾ ಸಮಯದಿಂದ ಸ್ವಾಮಿಯವರ ಸೇವೆಗೆ ಅಂಕಿತರಾಗಿ ಮನೆಯ ಕಡೆ ಹೋಗದೆ, ಸ್ವಾಮಿಯವರನ್ನ ಸೇವಿಸುತ್ತಿದ್ದರು. ಅವರು ವುದ್ಧರಾದಮೇಲೆ, ಕಣ್ಣು ಸರಿಯಾಗಿ ಕಾಣಿಸದಿದ್ದರೂ, ಸ್ವಾಮಿಯವರ ಸೇವೆ ಮಾಡುವುದು ನಿಲ್ಲಿಸಲಿಲ್ಲ. ಯಾರೋ ಅಜ್ಞಾನಿಗಳು, "ಈ ಮುದುಕ ಕೆಲಸ ಕಾರ್ಯ ಇಲ್ಲದೆ, ದಂಡವಾಗಿ ಊಟಮಾಡುತ್ತಿದ್ದಾನೆ" ಅಂದರಂತೆ. ಅದನ್ನು ಕೇಳಿದ ರೋಶಿರೆಡ್ಡಿ "ಈ ಬದುಕು ಯೇತಕ್ಕೇ? ವಿಷ ತೆಗೆದುಕೊಂಡು ಸಾಯುವುದೇ ಮೇಲು ಎಂದು ಮನಸ್ಸಿನಲ್ಲೇ ನಿರ್ಧರಿಸಿದರು. ಆ ರಾತ್ರಿ, ಶ್ರೀ ಸ್ವಾಮಿಯವರು ರೆಡ್ಡಿಯವರನ್ನ ಏಕಾಂತದಲ್ಲಿ ಕರೆದು ತಮ್ಮ ಕಾಲನ್ನು ಒತ್ತಿಸಿಕೊಳ್ಳುತ್ತಾ, "ಎವರೋ ಏಮೋ ಅನ್ನಾರನಿ ಪೋವಾಲಂಟಾವಾ? ಭಿಕ್ಷ ತೆಚ್ಚುಕೊನಿ ತಿಂಟೂ ಯಿಚ್ಚಟನೇ ಉಂಡು" (ಯಾರೋ ಯೇನೋ ಅಂದರೆಂದು, ಹೋಗಬೇಕೆಂದು ತೀರ್ಮಾನ ಮಾಡಿಬಿಟ್ಟೆಯಾ? ಭಿಕ್ಷೆ ಬೇಡಿ ಅದನ್ನೇ ಉಣ್ಣುತ್ತಾ ಇಲ್ಲೇ ಇರು) ಎಂದು ಆದೇಶಿಸಿದರು. ಶ್ರೀ ಸ್ವಾಮಿಯವರ ಸರ್ವಜ್ಞತೆ ನೋಡಿ ರೆಡ್ಡಿಯವರು ತುಂಬಾ ಆಶ್ಚರ್ಯ ಪಟ್ಟರು.

ಇನ್ನೊಮ್ಮೆ ಸ್ವಾಮಿಯವರು '5 ರೋಜುಲು ಅನ್ನಂ ತಿನಕುಂಡಾ ವುಂಡೇವಾರೆವರೋ ಚೂಪು' (5 ದಿನಗಳು ಊಟ ಮಾಡದೇಇರುವವರನ್ನ ತೋರಿಸು) ಎಂದರು. "ಯಾರೋ ಯಾಕೆ, ನಾನೇ ಇರುತ್ತೇನೆ" ಎನ್ನುತ್ತಾ 5 ದಿನ ರೋಶಿ ರೆಡ್ಡಿಯವರು ದ್ರವಾಹಾರದಲ್ಲಿದ್ದರು. ಅದೇ ಮೊದಲು ಕೆಲವುದಿನ ಶನಿ, ಸೋಮವಾರ ಪೂರ್ತಿಯಾಗಿ ಉಪವಾಸವಿರುತ್ತಿದ್ದರೆ ಮಿಕ್ಕದಿನ ಒಂದು ಹೊತ್ತು ಮಾತ್ರವೇ ಊಟಮಾಡುತ್ತಿದ್ದರು. ಆಮೇಲೆ ಅನ್ನ ತಿನ್ನುವುದನ್ನು ಬಿಟ್ಟು ಅವಲಕ್ಕಿ, ಹಾಲು ಮಾತ್ರ ತಿನ್ನುತ್ತಾ ಪ್ರತಿದಿನ ಭಿಕ್ಷೆ ತರುವುದು ನಿಯಮವಾಗಿಟ್ಟುಕೊಂಡು ಕೆಲಸ ಮಾಡುತ್ತಾ ಸ್ವಾಮಿಯವರ ಸನ್ನಿಧಿಯನ್ನು ಸೇರಿಕೊಂಡರು.

ಒಮ್ಮೆ ಶ್ರೀ ಸ್ವಾಮಿಯವರು "ವೆಂಕಯ್ಯದಿ ಒಕೇ ಮಾಟ ಗದಯ್ಯಾ!" (ವೆಂಕಯ್ಯನದು ಒಂದೇ ಮಾತಲ್ಲವೇ?) ಎಂದರು. ಶ್ರೀ ಸ್ವಾಮಿಯವರ ವಿಷಯವನ್ನು ವಿಶ್ಲೇಷಿಸಿ ನೋಡಿದರೇ ಸ್ವಾಮಿಯವರು ಹೇಳಿದಮಾತು ಸರಿಯನ್ನಿಸುತ್ತದೆ.

ರೋಶಿ ರೆಡ್ಡಿ ತನ್ನ ಹೆಂಡತಿ ಮಕ್ಕಳನ್ನು ಬಿಟ್ಟು ಯಾವಾಗಲೂ ಸ್ವಾಮಿಯವರ ಸೇವೆಯಲ್ಲಿ ಇರುತ್ತಿದ್ದರು. ಒಮ್ಮೆ ಸ್ವಾಮಿಯವರು "ಅಯ್ಯಾ! ಮೀ ಗ್ರಾಮಂ ವೆಳ್ಳಿ ನಿಮ್ಮಚೆಟ್ಲು ಗುಚ್ಚಿಪೆಟ್ಟಿರಾ" (ಅಪ್ಪಾ! ನಿಮ್ಮ ಹಳ್ಳಿಗೆ ಹೋಗಿ, ನಿಂಬೇ ಗಿಡಗಳನ್ನು ನೆಟ್ಟಿ ಬಾ) ಎಂದರು. ರೋಶಿ ರೆಡ್ಡಿ ಹಳ್ಳಿಗೆ ಹೋಗಿ ನಿಂಬೇ ಸಸಿ ನೆಟ್ಟಿ, ನಿಂಬೇ ತೋಟ ತಯಾರು ಮಾಡಲು ಹೊದಾಗ, ಹೆಂಡತಿ ಮಕ್ಕಳು ಒಪ್ಪಿಕೊಳ್ಳಲಿಲ್ಲ. "ನೀವು ನಿಂಬೆ ಸಸಿ ನೆಟ್ಟಿ ಸ್ವಾಮಿಯವರ ಸೇವೆಗೆ ಹೊರಟುಹೋದರೆ, ಯಾರು ಬೇಲಿ ಕಟ್ಟುತ್ತಾರೆ ಮತ್ತು ಆ ಸಸಿಗಳಿಗೆ ನೀರು ಹಾಕುತ್ತಾರೆ? ಅದು ನಮ್ಮಿಂದ ಸಾಧ್ಯವಿಲ್ಲ ಆದ್ದರಿಂದ, ನೀವು ಸಸಿಗಳನ್ನು ನೆಡಬೇಡಿ ಎಂದರು." ಆದರೆ, ರೋಶಿ ರೆಡ್ಡಿ ಅವರ ಮಾತು ಕೇಳದೆ ಗುರುವಿನ ಮಾತಿನ ಮೇಲೆ ಅಚಲ ನಂಬಿಕೆ ಇದ್ದಿದ್ದರಿಂದ, ಸಾಲ ಮಾಡಿ ಸಸಿಗಳನ್ನು ನೆಟ್ಟು ಸ್ವಾಮಿಯವರ ಸೇವೆಗೆ ಬಂದರು. ರೋಶಿ ರೆಡ್ಡಿ ಹೆಂಡತಿ ಮಕ್ಕಳು ಅದಕ್ಕೆ ಬೇಲಿ, ನೀರು ಹಾಕಿ ಅವುಗಳನ್ನ ಬದುಕಿಸಿಕೊಂಡರು. ಆ ತೋಟವನ್ನು ಕಾಪಾಡುವುದು ತಮ್ಮ ಶಕ್ತಿಗೆ ಮೀರಿದ ಕೆಲಸ ಎಂದು ಭಾವಿಸಿ, ಸ್ವಾಮಿಯವರ ಬಳಿ ಬಂದು "ಇಂತಹ ಭಾರವಾದ ಕೆಲಸ ನಮ್ಮಗಳ ಮೇಲೆ ಏಕೆ ಹೊರಿಸಿದಿರಿ?" ಎಂದು ಗಲಾಟೆ ಮಾಡಿದರು. ಆಗ ಸ್ವಾಮಿಯವರು, "ಆ ತೋಟಕು, ಅಮ್ಮಣ್ಣಿ ಕಾಪಲಾ ವುನ್ನದಿ. ಅದಿ ಒಕಟಿನ್ನರ ಲಕ್ಷಲ ರೂಪಾಯಲ ಆಸ್ತಿ. ಮೀರು ತೋಟಲೋ ಕಾಪುರಮುಂಡಿ ಆ ಪ್ರದೇಶಾನಿಕಿ ಶಿರಿಮೆಳ್ಳ ಅನೇಪೇರು ಪೆಟ್ಟುಕೋಂಡಿ!" (ಆ ತೋಟವನ್ನು ದೇವಿ ಕಾಪಾಡುತ್ತಿದ್ದಾರೆ. ಅದು 1.5 ಲಕ್ಷ ರೂಪಾಯಿಯ ಆಸ್ತಿ. ಆ ತೋಟದಲ್ಲೇ ನಿವಾಸ ಮಾಡುತ್ತಾ, ಆ ಪ್ರಾಂತಕ್ಕೆ ಶಿರಿಮೆಳ್ಳ ಎಂದು ಹೆಸರಿಡಿ) ಎಂದರು. ಅವರುಗಳು ಇಷ್ಟವಿಲ್ಲದೇ ಆ ತೋಟವನ್ನು ಬೆಳಸಿದರು. ಸ್ವಾಮಿಯವರು ಹೇಳಿದಂತೆ ಆ ಪ್ರಾಂತದಲ್ಲಿ ಎಲ್ಲಾ ತೋಟಗಳಿಗಿಂತ ಈ ತೋಟವೇ ಉತ್ತಮ ತೋಟ ಎನ್ನಿಸಿಕೊಂಡಿತು. ಈಗ ಆ ತೋಟವನ್ನು 3 ಲಕ್ಷಕ್ಕೆ ಕೇಳುತ್ತಿದ್ದರೂ, ಇವರಿಗೆ ಅದನ್ನ ಮಾರುವುದಕ್ಕೆ ಇಷ್ಟವಿಲ್ಲ.

ಕಲಿಚೇಡಿನಲ್ಲಿ ವಾಸವಾಗಿದ್ದ ನರಸಾರೆಡ್ಡಿಯವರ ಪತ್ನಿ ಈಶ್ವರಮ್ಮ ಹೊಸ ಮನೆ ಕಟ್ಟಿದರು. ಶ್ರೀ ಸ್ವಾಮಿಯವರ ಪಾದ ಸ್ಪರ್ಶದಿಂದ ಪವಿತ್ರಮಾಡಿ ಗೃಹ ಪ್ರವೇಶ ಮಾಡಬೇಕೆಂದು ಸ್ವಾಮಿಯವರನ್ನು ಬರಲು ಆಮಂತ್ರಿಸಿದರು. ಸ್ವಾಮಿಯವರು ಒಪ್ಪಿಕೊಂಡರು. ಆದರೆ (ಬಹುಶಃ ಆಕೆಯ ಶ್ರದ್ಧೆಯನ್ನು ಪರೀಕ್ಷಿಸಲು) ಸ್ವಾಮಿಯವರು ಆ ಪ್ರಾಂತಕ್ಕೆ 3 ತಿಂಗಳು ಬರಲಿಲ್ಲ. ಸ್ವಾಮಿಯವರು ಬರದೇ ಇದ್ದುದರಿಂದ, ಗೃಹಪ್ರವೇಶ ಮಾಡದೇ ಶಬರಿಯಂತೆ ನಿರೀಕ್ಷಣೆ ಮಾಡಿದರು. ಆಕೇಗೆ ಮನೆ ಇಲ್ಲದೇ ಅವರ ಸಾಮಾನೆಲ್ಲಾ ಅಂಗಡಿ ಯಲ್ಲಿ ಇಟ್ಟು ಮಳೆ ಬಂದರೆ ಅಂಗಡಿ ಕೆಳಗೆ ಮಂಚ ಹಾಕಿ ಮಲುಗುತ್ತಿದ್ದರು. ಆಕೆಯನ್ನು ನೋಡಿ ಊರಿನವರೆಲ್ಲರೂ ನಗುತ್ತಿದ್ದರು. ಆದರೂ ಆಕೆ ತಮ್ಮ ಹಟ ಬಿಡಲಿಲ್ಲ. ಸ್ವಾಮಿಯವರು ಪಕ್ಕದ ಹಳ್ಳಿಗೆ ಬಂದಿದ್ದಾರೆಂದು ತಿಳಿದು ಅಲ್ಲಿಗೆ ಹೋಗಿ ಮತ್ತೆ ಆಹ್ವಾನಿಸಿದರು. "ರೇಪು ಸೂರ್ಯೋದಯ ಕಾಲಂ ಬಾಗುನ್ನದಿ, ನೇನು ವಸ್ತಾನು, ಗೃಹಪ್ರವೇಶಂ ಚೇಯಿ" (ನಾಳೆ ಸೂರ್ಯೋದಯದ ಕಾಲ ಪ್ರಶಸ್ತವಾಗಿದೆ, ನಾನು ಬರುತ್ತೇನೆ, ನೀನು ಗೃಹ ಪ್ರವೇಶ ಮಾಡು) ಎಂದರು. ಆಗ, ಈಶ್ವರಮ್ಮನವರು, "ಇಷ್ಟು ಕಮ್ಮಿ ಅವಧಿಯಲ್ಲಿ ಹಬ್ಬದ ವ್ಯವಸ್ಥೆ ಮಾಡುವುದು ಕಷ್ಟ ಸ್ವಾಮಿ" ಎಂದರು. ಸ್ವಾಮಿಯವರು "ಅನ್ನೀ ಅವೇ ವಸ್ತಾಯಿಪೋ" (ಯೆಲ್ಲ ಅವೇ ವ್ಯವಸ್ಥೆ ಆಗುತ್ತದೆ) ಅಂದರು. ಆಕೆ, ರಾತ್ರಿ ಸುಣ್ಣ ಬಣ್ಣ ರಂಗೋಲಿ ಹಾಕುವ ಪ್ರಯತ್ನದಲ್ಲಿದ್ದರು. ಎಷ್ಟೋ ದಿನಗಳಿಂದ ಇವರ ಬಾಕೀ ತೀರಿಸ ಬೇಕಾಗಿದ್ದ ಕೂಲಿಯವರು, "ನಮ್ಮ ಹತ್ತಿರ ಪೂರ್ತಿ ಹಣವಿಲ್ಲ, ಅದರ ಬದುಲು, ಅಕ್ಕಿ ಮತ್ತು ಸ್ವಲ್ಪ ಹಣವನ್ನು ಕೊಡುತ್ತೇವೆ, ಇದನ್ನ ಜಮ ಮಾಡಿಕೊಳ್ಳಿ" ಎಂದು ಬಾಕಿ ತೀರಿಸಿ ಹೋದರು. ಈಕೆ ಗೆ, ಸಾಲ ಮಾಡುವ ಕಷ್ಟ ತಪ್ಪಿತು. ಸ್ವಾಮಿಯವರು ತಮ್ಮ ಶಿಷ್ಯರೊಂದಿಗೆ ರಾತ್ರಿ ಎಲ್ಲ 5 ಗ್ರಾಮಗಳು ತಿರುಗಿ ಬೆಳಗಿನಝಾವ 3 ಘಂಟೆಗೆ ಆಕೆಯ ಮನೆಗೆ ಬಂದರು. ಸ್ವಾಮಿಯವರು ಸ್ವಹಸ್ತದಿಂದ ಕರ್ಪೂರ ಹಚ್ಚಿ ಒಲೆ ಹಚ್ಚಿದರು. ಆಕೆ ಹತ್ತು ಸೇರು ಅಕ್ಕಿ ಹಾಕಿ ಅಡಿಗೆ ಮಾಡಿದರು. ಆಕೆಯ ಸ್ನೇಹಿತೆ 200 ಊಟದ ಎಲೆ ಕೊಟ್ಟಿದ್ದರು. ಅದನ್ನು ಪಂಕ್ತಿಯಲ್ಲಿ ಹಾಕಿದರೇ ಎಲ್ಲಾ ಖಾಲಿ ಆಯಿತು. ಅಡಿಗೇ ಕೂಡ ಖಾಲಿಯಾಯಿತು. ಶ್ರೀ ಸ್ವಾಮಿಯವರಿಗೆ ಆಕೆಗೆ ಅಡಿಗೆ ಮಿಗಲಿಲ್ಲ. ಮಾಡಿಟ್ಟಿದ್ದ ಬೆಲ್ಲದ ಪೊಂಗಲು ಬಡುಸುವುದು ಮರೆತು ಹೋಗಿತ್ತು. ಅದನ್ನೇ ಸ್ವಾಮಿಯವರಿಗೆ ನೈವೇದ್ಯವಾಗಿ ಸಮರ್ಪಿಸಿ, ಆ ಪ್ರಸಾದವೆಂದು ಆಕೆಯೂ ತೆಗೆದುಕೊಂಡರು. 10 ಸೇರು ಅಕ್ಕಿಯಿಂದ 200 ಜನಕ್ಕೆ ಸಂತರ್ಪಣೆ ಮಾಡಿಸಿದರು ಸ್ವಾಮಿಯವರು.

ಪೂಸಲ ಮೀರಯ್ಯನವರು (ಪೆನವರ್ತಿ) ಪ್ರಸ್ತುತ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಪತ್ನಿ ಸ್ವಾಮಿಯವರ ಪ್ರಥಮ ಆರಾಧನೆಗೆ ಗೊಲಗಮೂಡಿ ಬಂದರು. ಸ್ವಾಮಿಯವರ ನಿತ್ಯ ಪೂಜೆಗೆ ಭಕ್ತರು ಪ್ರತಿ ತಿಂಗಳೂ ಸ್ವಲ್ಪ ದಕ್ಷಿಣೆ ಕಳುಹಿಸುವ ಏರ್ಪಾಡು ಮಾಡಿದ್ದರು. ಈಕೆಯೂ ಪ್ರತಿ ತಿಂಗಳೂ 10 ರೂ ಕಳುಹಿಸುತ್ತೇನೆಂದು ಅವರ ಪತಿಯ ಹೆಸರನ್ನು ಬರೆಯಿಸಿದರು. ಆಮೇಲೆ ಆಕೆ, "ನನ್ನ ಪತಿಯ ಅನುಮತಿ ಇಲ್ಲದೇ ಹೆಸರು ಬರೆಸಿದೆ. ಅವರೂ ಒಪ್ಪಿಕೊಳ್ಳುವಂತೆ ಮಾಡಿ ಸ್ವಾಮಿ" ಎಂದು ಪ್ರಾರ್ಥನೆ

ಮಾಡಿಕೊಂಡರು. ಮನೆಗೆ ಹೋದ ನಂತರ, ಗಂಡನಿಗೆ ಹೇಳಿದರು, ಆದರೆ ಆತ, "ಸ್ವಾಮಿಯವರು ನನ್ನನ್ನೇ ಕೇಳಿದರೆ ಕೊಡುತ್ತೇನೆ ಎಂದರು. ಸ್ವಲ್ಪ ದಿನದ ನಂತರ, ಸ್ವಾಮಿಯವರು ಆತನ ಸ್ವಪ್ನದಲ್ಲಿ ಜೋಳಿಗೆ ಹಾಕಿ ಕೊಂಡು ಬಂದು ದರ್ಶನ ಕೊಟ್ಟು "ಏಮೈನಾ ವೇಯಿ" (ಏನಾದರೂ ಹಾಕು) ಎಂದರು. "ಏನು ಕೊಡು ಎನ್ನುತ್ತೀರ ಸ್ವಾಮಿ?" ಎಂದು ಕೇಳಿದಾಗ, "ಏದಿ ವುಂಟೆ ಅದಿ ವೇಯ್ಯಿ" (ಏನಿದ್ದರೆ ಅದೇಹಾಕು) ಎಂದರು. ಮರುದಿನ ಮೀರಯ್ಯ ಅವರು ಆ ದಿನದವರೆಗು ಎಷ್ಟು ದಕ್ಷಿಣೆ ಬಾಕಿ ಇದ್ದರೋ ಅಷ್ಟೋ ಸ್ವಾಮಿಯವರಿಗೆ ಸಮರ್ಪಿಸಿ, ಸ್ವಾಮಿಯವರ ಸಮಾಧಿ ದರ್ಶನ ಮಾಡಿದರು.

ಒಮ್ಮೆ ಪಲ್ಲಂರೆಡ್ಡಿ ಕೃಷ್ಣಾರೆಡ್ಡಿಯವರು (ಸಂಗಂ), ವಿನಾಯಕ ಚತುರ್ಥಿ ಸ್ವಾಮಿಯವರ ಸನ್ನಿಧಿಯಲ್ಲಿ ಆಚರಿಸಬೇಕೆಂದು, ಗೊಲಗಮೂಡಿಗೆ ಬಂದರು. ಅಲ್ಲಿ 1 ಕಿಲೋ ಕಡಲೇ ಉಸಲಿ, 2 ಕಿಲೋ ಅಕ್ಕಿ ಬೆಲ್ಲದ ಪೊಂಗಲ್, 1 ಕಿಲೊ ಉದ್ದಿನ ವಡೆ ಮಾಡಿಸಿದರು. ಸ್ವಾಮಿಯವರ ಒಬ್ಬ ಸೇವಕ ಅನಿಕೇಪಲ್ಲಿಗೆ ಹೋಗಿ ಮಧ್ಯಾಹ್ನ 1 ಘಂಟೆಗೆ ಭಿಕ್ಷಾನ್ನ ತೆಗೆದುಕೊಂಡು ಬರುವುದು ಆತನ ದಿನಚರಿ. ಆದಿನ ಬಸ್ಸು ತಪ್ಪಿ ಹೋಗಿ, ಆ ಸೇವಕ ಬರಲಿಲ್ಲ. ಆಗ, ಪೊಂಗಲ್ ತಯಾರಾಗುತ್ತಿತ್ತು. ಸ್ವಾಮಿಯವರು ಸ್ವಲ್ಪ ಅನ್ನವನ್ನು ತನ್ನಿಯಂದರು. ಆಗ, ಭಕ್ತರು, ಅನ್ನವಿಲ್ಲಾ ಸ್ವಾಮಿ ಆದರೆ ಪೊಂಗಲ್ ತಯಾರಾಗುತ್ತಿದೆ ಎಂದರು. ಅದಕ್ಕೆ ಸ್ವಾಮಿಯವರು "ಪರವಾಲೇದು ತೀಸುಕುರಾ!" (ಪರವಾಗಿಲ್ಲ ಅದನ್ನೆ ತೆಗೆದುಕೊಂಡು ಬಾ) ಎಂದರು. ಆಗ, ಒಂದು ಎಲಯ ಮೇಲೆ ಉಸಲಿ, ಪೊಂಗಲ್, ವಡೆ ಹಾಕಿಕೊಂಡು ಬಂದು ಸ್ವಾಮಿಯವರಿಗೆ ಸಮರ್ಪಿಸಿದರು. ಸ್ವಾಮಿಯವರು, ಅದನ್ನ ಸ್ವಲ್ಪ ತಿಂದು, "ಇಕ ಮೀರು ತಿನಂಡಯ್ಯಾ!" (ಇನ್ನು ನೀವುಗಳು ತಿನ್ನಿರಯ್ಯಾ!) ಎಂದರು. ಭಿಕ್ಷಾನ್ನ ತರಲು ಹೋದ ಸೇವಕ ಬರದೇ ಇದ್ದರಿಂದ, ಕೃಷ್ಣಾರೆಡ್ಡಿಯವರು ಮಾಡಿಸಿದ ಪ್ರಸಾದ 25 ಜನ ತೃಪ್ತಿ ಯಾಗಿ ಭುಜಿಸಿ, ಇನ್ನೂ ಮಾರನೇ ದಿನಕ್ಕೆ ಮಿಕ್ಕಿತು. (ಏಸುಕ್ರೀಸ್ತು 7 ರೊಟ್ಟಿ, 7 ಮೀನು 7000 ಜನಗಳು - ಪುರುಷರು, ಸ್ತ್ರೀಯರು, ಮಕ್ಕಳಿಗೆ ಹಂಚಿದಮೇಲೆ 7 ಬುಟ್ಟಿಗಳ ತುಂಬಾ ಆಹಾರ ಮಿಕ್ಕಿತ್ತಲ್ಲವೇ! (ಮತ್ತಯಿ 14 : 17 - 21)

ರೆಡ್ಡಿಯವರು ಒಂದು ದಿನ ಗೊಲಗಮೂಡಿಯಲ್ಲಿ ಸೇವೆಮಾಡಿದ ನಂತರ, ಮನೆಗೆ ಹೋಗಬೇಕೆಂದು ಸ್ವಾಮಿಯವರನ್ನ ಅಪ್ಪಣೆ ಕೇಳಿದರು. ಸ್ವಾಮಿಯವರು "ನೇನು ಕೂಡ ವಸ್ತುಂಡ್ಲಾಯ್ಯಾ" (ನಾನು ಕೂಡ ಬರುತ್ತೇನೆ) ಎಂದರು. ಶ್ರೀ ಸ್ವಾಮಿಯವರನ್ನ ತಮ್ಮ ಮನೆಗೆ ಕರೆದು ಕೊಂಡು ಹೋಗುವುದಕ್ಕೆ ರೆಡ್ಡಿಯವರಿಗೆ ಒಂದು ಸಮಸ್ಯೆ ಇತ್ತು. ರೆಡ್ಡಿಯವರ ಮನೆಯಲ್ಲಿ ಒಬ್ಬ ವೃದ್ಧರಿದ್ದರು. ಅವರಿಗೆ, ಇವರು ಸಾಧು ಸತ್ಪುರುಷರನ್ನು ಕರೆದು ಕೊಂಡು ಹೋಗುವುದು, ಸತ್ಕಾರ ಮಾಡುವುದು ಇಷ್ಟವಿರಲಿಲ್ಲ. ಒಂದು ವೇಳೆ ಸ್ವಾಮಿಯವರನ್ನು ಕರೆದುಕೊಂಡು ಹೋದಮೇಲೆ, ವೃದ್ಧರು ಸ್ವಾಮಿಯವರನ್ನ ಅವಮಾನಿಸಿದರೆ ತಾವು ನಿಸ್ಸಹಾಯಕನಾಗಿ, ಏನೂ ಮಾತನಾಡದೇ ಇರಬೇಕಾಗುತ್ತದೆ. ಆದ್ದರಿಂದ, ಶ್ರೀ ಸ್ವಾಮಿಯವರನ್ನು ಮನೆಗೆ ಕರೆದುಕೊಂಡು ಹೋಗದಿರುವುದೇ ಮೇಲು ಎಂದು ಕೊಂಡರು. ಆದರೆ, "ಸ್ವಾಮಿ ನೀವು ನಮ್ಮ ಮನೆಗೆ ಬರಬೇಡಿ" ಎಂದು ಹೇಗೆ ಹೇಳುವುದು ಎಂದು ಮನಸ್ಸಿನಲ್ಲೇ ಯೋಚಿಸುತ್ತಿದ್ದಾಗ, ಸರ್ವಜ್ಞ ಮೂರ್ತಿಯವರಾದ

ಸ್ವಾಮಿ ತಕ್ಷಣ, "ಎಪ್ಪುಡ್ಡೈನ ವಸ್ತುಂಡ್ಲಾಯ್ಯಾ" (ಬೇರೆ ಯಾವಾಗಲಾದರೂ ಬರುತ್ತೇನೆ) ಎಂದರು. ಅದನ್ನು ಕೇಳಿ ರೆಡ್ಡಿಯವರು "ಇನ್ನೊಮ್ಮೆ ನೋಡಿಕೊಳ್ಳೋಣ" ಎಂದುಕೊಂಡು ಹೊರಟು ಹೋದರು.

1982 ನೇ ವರ್ಷ ಸ್ವಾಮಿಯವರು ಮಹಾಸಮಾಧಿ ಹೊಂದಿದರು. 1986 ಏಪ್ರಿಲ್ ನಲ್ಲಿ ರೆಡ್ಡಿಯವರ ಮನೆಯಲ್ಲಿದ್ದ ವೃದ್ಧರು ಭಗವಂತನ ಸಾನಿಧ್ಯ ಪಡೆದರು. ಬಂಧು-ಮಿತ್ರರು, ಮತ್ತು ಬಡವರನ್ನು 14ನೇ ದಿನದ ಅಂತ್ಯೇಷ್ಟಿಗೆ ಆಹ್ವಾನಿಸಲಾಗಿತ್ತು. 170 ಕಿಲೋ ಅಕ್ಕಿಯಿಂದ ಸುಮಾರು 500 (170 x 3 = 510) ಜನಕ್ಕೆ ಅಡಿಗೆ ತಯಾರು ಮಾಡಿಸಿದ್ದರು. ಸ್ವಾಮಿಯವರ ಭಾವ ಚಿತ್ರಕ್ಕೆ ಕರ್ಪೂರ ಆರತಿ ಬೆಳಗಿ, ಊಟ ಬಡಿಸಲು ಪ್ರಾರಂಭಿಸುವ ಹೊತ್ತಿಗೆ ಒಬ್ಬ ಸಾಧು ಅವರ ಮನೆಗೆ ಬಂದರು. ಆಗ, ರೆಡ್ಡಿಯವರು, ಆರತಿ ಮಾಡುವುದು ನಿಲ್ಲಿಸಿ, "ಸ್ವಾಮಿಯವರು ಬಂದಿದ್ದಾರೆ ಎಂದು, ಅವರಿಗೆ ಮೊದಲು ಬಡಿಸಿ" ಎಂದು ಆ ಸಾಧುವಿಗೆ ಊಟ ಬಡಿಸಿದರು. ಆದ ನಂತರ, ಸ್ವಾಮಿಯವರ ಭಾವಚಿತ್ರಕ್ಕೆ ಆರತಿ ಬೆಳಗಿ, ಎಲ್ಲರಿಗೂ ಬಡಿಸಲು ಪ್ರಾರಂಭಿಸಿದರು.

ನಿರೀಕ್ಷಿಸಿದಕ್ಕಿಂತಲೂ ಹೆಚ್ಚು ಜನರು ಹಾಜರಾಗಿದ್ದರಿಂದ, ಅಡಿಗೆ ಸಾಲುವುದಿಲ್ಲವೇನೋ ಎಂದು ರೆಡ್ಡಿಯವರು ಆತಂಕ ಪಟ್ಟರು. ಮತ್ತೆ ಹೊಸದಾಗಿ ಅಡಿಗೆ ಮಾಡಲು ವ್ಯವಧಿ ಇಲ್ಲವಾದ್ದ ಕಾರಣದಿಂದ, ಕೆಲಸದವರ ಮನೆಗೆ ಕಳುಹಿಸಬೇಕಾದ ಅಡಿಗೆ ಕಳುಹಿಸುವುದನ್ನು ನಿಲ್ಲಿಸಿದರು. ಆದರೇ, 500 ಜನಕ್ಕೆ ಮಾಡಿಸಿದ ಅಡಿಗೆಯನ್ನು 1000 ಜನಕ್ಕೆ ಮೀರಿ ಊಟಮಾಡಿದರು. ಆಮೇಲೆ 10 ಬುಟ್ಟಿಯಷ್ಟು ಅನ್ನ ಅದಕ್ಕೆ ತಕ್ಕ ಮಿಕ್ಕ ಅಡುಗೆ 400 ಜನಕ್ಕೆ ಸರಿಹೋಗುವಷ್ಟು ಮಿಕ್ಕಿತು. ಈ ಅದ್ಭುತವನ್ನು ನೋಡಿದಾಗ, ರೆಡ್ಡಿಯವರಿಗೆ ವಾಸ್ತವ ಮಿಂಚಿನಂತೆ ತಿಳಿಯಿತು. ಆ ದಿನ ಸ್ವಾಮಿಯವರು "ಏಪ್ಪುಡ್ಡೈನಾ ವಸ್ತುಂಡ್ಲಾಯ್ಯಾ!" (ಇನ್ಯಾವತ್ತಾದರೂ ಬರುತ್ತೇನೆ) ಎಂದಿದ್ದರು. ಆದಿನ ನುಡಿದ ಮಾತನ್ನು ಈದಿನ, ಸಾಧುರೂಪದಲ್ಲಿ ಬಂದು ತಮ್ಮ ಮಾತು ಉಳಿಸಿಕೊಂಡರು.

ರೆಡ್ಡಿಯವರು, ಸ್ವಾಮಿಯವರನ್ನ ಹೃದಯ ಪೂರ್ವಕವಾಗಿ ಸೇವೆ ಮಾಡಿದ್ದರಿಂದ, "ಯಾವ ವೃದ್ಧರು ಸಾಧು ಸತ್ಪುರುಷರ ಆಥಿತ್ಯಮಾಡಲು ಅಡ್ಡವಾಗಿದ್ದರೋ, ಆ ವೃದ್ಧರು ನಿಧನ ಹೊಂದಿದಮೇಲೆಯೇ ಸಾಧುವಿನ ರೂಪದಲ್ಲಿ ಬಂದು, ರೆಡ್ಡಿಯವರ ಸೇವೆ ಸ್ವೀಕರಿಸಿ, ಎಲ್ಲಾ ಸಾಧು ಸತ್ಪುರುಷರೂ ಒಂದೇ ಎಂದು ನಿರೂಪಿಸಿದರು. ಹಿಂದಿನ ಕಾಲದಲ್ಲಿ ಏಸುಕ್ರೀಸ್ತು, 7 ಮೀನು, 7 ಸಾವಿರಜನಕ್ಕೆ ಬಡಿಸಿದಮೇಲೆಯೂ 7 ಬುಟ್ಟಿಯಷ್ಟು ಊಟ ಮಿಕ್ಕಿದಹಾಗೆ ಇದೆಯಲ್ಲವೇ ಈ ಲೀಲೆ!

ನಾವು ಶ್ರೀ ಸ್ವಾಮಿಯವರನ್ನ ಹೃದಯ ಪೂರ್ವಕವಾಗಿ ಸೇವಿಸುತ್ತಾ, ನಮ್ಮ ಎಲ್ಲಾ ಭಾರಗಳನ್ನು ಅವರ ಮೇಲೆ ಹಾಕಿ ನಾವು ನಿಶ್ಚಿಂತೆಯಿಂದ ಇದ್ದರೆ, ಅವರು ನಮ್ಮ ಬಾಧ್ಯತೆಗಳನ್ನು ತಾವೆ ಹೇಗೆ ನಿರ್ವಹಿಸುತ್ತಾರೆಂದು ಈ ಕೆಳಗಿನ ಲೀಲೆಯಿಂದ ತಿಳಿಯುತ್ತದೆ. ಅವರು ನಮ್ಮನ್ನ ಮಾತ್ರ ಅಲ್ಲದೇ ಯಲ್ಲರ ಬಾಧ್ಯತೆಗಳನ್ನ ಸರ್ವಜ್ಞರಾಗಿ, ಸರ್ವಸಮರ್ಥರಾಗಿ, ಸರ್ವವ್ಯಾಪಿಯಾಗಿ ನೆರವೇರುಸುವುದನ್ನು ನಾವು ಕಾಣುತ್ತೇವೆ. 15

ಬಹಳ ಸಮಯದಿಂದ ಸ್ವಾಮಿಯವರ ಸೇವೆ ಮಾಡುತ್ತಿದ್ದ ರೋಶಿ

ರೆಡ್ಡಿಯವರನ್ನು ಸ್ವಾಮಿಯವರು ಒಮ್ಮೆ "ಮೀ ಚಿನ್ನ ಕುಮಾರುನಿ ಪೇರ ಚೀಟೀ ವ್ರಾಸಿ ಇವ್ವು" (ನಿಮ್ಮ ಚಿಕ್ಕಮಗನ ಹೆಸರಿನಲ್ಲಿ ಒಂದು ಹಾಮಿಪತ್ರ ಬರೆದು ಕೊಡು) ಎಂದು ರೋಶಿ ರೆಡ್ಡಿಯನ್ನು ಆತುರ ಪಡಿಸಿದರು. ಹಾಮಿಪತ್ರ ಬರೆದು ಕೊಟ್ಟಮೇಲೆ, ಅದನ್ನು ತಮ್ಮ ತೊಡೆಯ ಕೆಳಗೆ ಇಟ್ಟುಕೊಂಡು ಕುಳಿತಿದ್ದರು. "ಸ್ವಾಮಿಯವರು ತನ್ನ ಮಗನನ್ನು ಯಾವುದೋ ಆಪತ್ತಿನಿಂದ ರಕ್ಷಿಸುತ್ತಾರೆಂದು ಅಂದುಕೊಂಡರೇ ಹೊರತು ಏನಾಯಿತು ಎಂದು ತಿಳಿಯಲಿಲ್ಲ. ಮೂರು ದಿನಗಳ ನಂತರ ಯಾರ ನಿಮಂತ್ರಣವೂ ಇಲ್ಲದೇ ರಜಂಪೇಟ ತಾಲೂಕ ನಿಂದ ರೆಡ್ಡಿಯವರ ಮಗ ಸ್ವಾಮಿಯವರ ದರ್ಶನ ಮಾಡಲು ಬಂದನು. "ತುಂಬಾ ಭಾರ ಹೊತ್ತಿದ್ದ ಎತ್ತಿನಗಾಡಿ, ರಾಜಂಪೇಟೆಯ ಹತ್ತಿರದ ಬೆಟ್ಟ ಹತ್ತುವಾಗ, ಎತ್ತುಗಳು ಗಾಡಿಯೊಂದಿಗೆ ಹಿಂದಕ್ಕೆ ಜಾರಿ ಪಲ್ಟಿ ಹಾಕಿ 40 ಅಡಿಯ ಕಣಿವೆಯಲ್ಲಿ ಬಿದ್ದುಬಿಟ್ಟರು. ಗಾಡಿ, ಎತ್ತುಗಳು ಮತ್ತು ನನಗೆ ಯಾವರೀತಿಯ ಏಟೂ ಬೀಳಲಿಲ್ಲ. ಇದು ಕೇವಲ ಸ್ವಾಮಿಯವರ ಕೃಪೆ ಎಂದು ಸ್ವಾಮಿಯವರಿಗೆ ಕೃತಜ್ಞತೆ ಹೆಳಲು ಬಂದೆ" ಎಂದು ತಿಳಿಸಿದನು. ಶ್ರೀ ಸ್ವಾಮಿಯವರು ಚೀಟೀ ಬರೆಸಿದ ಸಮಯದಲ್ಲೇ ಈ ಪ್ರಮಾದ ನಡೆದಿದ್ದು. ಎಲ್ಲರಿಗೂ ತುಂಬಾ ಆಶ್ಚರ್ಯವಾಗಿದ್ದಲ್ಲದೇ ಸ್ವಾಮಿಯವರು ಸರ್ವಾಂತರ್ಯಾಮಿ, ಸರ್ವವ್ಯಾಪಕರು ಮತ್ತು ಸರ್ವಸಮರ್ಥರು ಎನ್ನುವುದು ಎಲ್ಲರಿಗೂ ನಿರೂಪಣೆ ಆಯಿತು.

ಉಮೆನ್ಸ್ ಹಾಸ್ಟಲ್ ನಲ್ಲಿ ಕೆಲಸ ಮಾಡುವ ಜಯಮ್ಮನವರ ಪತಿ ಜಯಚಂದ್ರಾ ರೆಡ್ಡಿಯವರು ಷಿರಡಿ ಸಾಯಿಬಾಬಾ ಭಕ್ತರು. ಸ್ವಾಮಿಯವರು ಕೊಟ್ಟ ಪ್ರಥಮ ದರ್ಶನದ ಬಗ್ಗೆ ಹೀಗೆ ಹೇಳಿದರು - "ಶ್ರೀ ಸ್ವಾಮಿಯವರ ವಿಚಾರ ಶ್ರೀ ಸಾಯಿ ಲೀಲಾಮೃತ ದಲ್ಲಿ ಓದಿದ್ದೆ. ಆದರೆ, ಶ್ರೀ ಸ್ವಾಮಿಯವರ ದರ್ಶನ ಮಾಡಿರಲಿಲ್ಲ. ಅವರ ಮಂಡಲಾರಾಧನೆಯ ದಿವಸಕೂಡ ಗೊತ್ತಿರಲ್ಲಿಲ್ಲ. ಸರಿಯಾಗಿ ಹಿಂದಿನ ದಿನ ನನಗೆ ವಿಚಿತ್ರದಕನಸು ಬಿದ್ದಿತು. ನೆಲ್ಲೂರಿನಲ್ಲಿ, ಗಾಂಧಿಯವರ ಪ್ರತಿಮೆಯ ಬಳಿ ಒಬ್ಬ ಅಪರಿಚಿತನಾದ ವೃದ್ಧರು, "ನೆಲ್ಲೂರು ಪ್ರಾಂತದಲ್ಲಿ, ಗೊಲಗಮೂಡಿಯಲ್ಲಿರುವ ಅವಧೂತರನ್ನು ನೋಡಿದ್ದೀಯಾ? ನೋಡಿಲ್ಲ ದಿದ್ದರೆ, ಹೋಗಿ ದರ್ಶನ ಮಾಡು. ನೆಲ್ಲೂರಿಗೆ ದಕ್ಷಿಣ ದಿಕ್ಕಿಗೆ ಹೋಗು. ಮಿಲಿಟರಿಯವರು ನಿನಗೆ ರಸ್ತೆ ಹೆಳುತ್ತಾರೆ." ಎಂದು ಹೇಳಿದರು. ನಾನು ಕನಸಿನಲ್ಲೇ ಅವಧೂತರ ದರ್ಶನಕ್ಕಾಗಿ ಹೋಗುತ್ತಾ ವೇದಾಯಪಾಲೆಂ ಸಮೀಪದಲ್ಲಿ ಮಿಲಟರಿ ಗುಡಾರ ನೋಡಿ, ಅವರಿಂದ ಗೊಲಗಮೂಡಿಗೆ ಹೋಗುವ ದಾರಿ ತಿಳಿದುಕೊಂಡು ಕೊಂಡಾಯಪಾಳೆಂ ದಾಟಿದ ಮೇಲೆ, ಒಬ್ಬ ಸಣ್ಣಗಿರುವ ವ್ಯಕ್ತಿ ಕೌಪೀನದಲ್ಲಿದ್ದರು. ಒಂದು ಕೋಲು, ಮತ್ತು ಒಂದು ಮಡಿಕೆ ಕೈಯ್ಯಲ್ಲಿಟ್ಟುಕೊಂಡಿದ್ದರು. ಹಳೆ ಬಟ್ಟೆ, ಕೆಲವು ವಸ್ತುಗಳನ್ನ ಚಿಕ್ಕ ಚಿಕ್ಕ ಮೂಟೆಗಳಾಗಿ ಕಟ್ಟಿ, ಕತ್ತಿಗೆ ಹಾಕಿಕೊಂಡಿದ್ದರು. ಇವರೇ ಸ್ವಾಮಿಯವರು ಎನ್ನಿಸಿ ಸಾಷ್ಟಾಂಗ ನಮಸ್ಕಾರ ಮಾಡಿದೆ. ಅಷ್ಟರಲ್ಲೇ ಎಚ್ಚರ ಆಯಿತು. ಮಾರನೇದಿನ ನನ್ನ ಸ್ನೇಹಿತರು "ಸ್ವಾಮಿಯವರ ಮಂಡಲಾರಾಧನೆಗೆ ಹೋಗುತ್ತಿದ್ದೇವೆ ಬಾ" ಎಂದು ಕರೆದಾಗ, ಗೊಲಗಮೂಡಿಗೆ ಬಂದು, ಸ್ವಾಮಿಯವರ ಸಮಾಧಿ, ಧುನಿಯ ದರ್ಶನ ಮಾಡಿದ್ದಲ್ಲದೆ, ನಮ್ಮ ಗುರುಗಳಾದ ಭರದ್ವಾಜ ಮೇಷ್ಟರ ದರ್ಶನವನ್ನೂ ಮಾಡಿದೆ. ಈ ರೀತಿಯಲ್ಲಿ

ಸರ್ವಜ್ಞಮೂರ್ತಿಯಾದ ಸ್ವಾಮಿಯವರು ತನ್ನ ಭಕ್ತರನ್ನು ಮಂಡಲಾರಾಧನೆಗೆ ಕರೆಸಿಕೊಂಡರು." ಸಾವಿರ ಕುರಿಗಳ ಮಧ್ಯವಿದ್ದರೂ ನಮ್ಮ ಕುರಿಯನ್ನು ಕಾಲು ಹಿಡಿದು ಎಳೆದುಕೊಂಡು ಬರುತ್ತೇನೆಂದು ಹೇಳಿದ್ದಾರಲ್ಲವೆ ಸ್ವಾಮಿಯವರು!

ಗೊಲಗಮೂಡಿಯಲ್ಲಿ ವಾಸವಾಗಿರುವ ತೂಪಿಲಿ ವೆಂಕಯ್ಯ ತಮ್ಮ ಮಗಳು ಉಮಾಮಹೇಶ್ವರಿಯನ್ನು ಅನಿಕೇಪಳ್ಳಿ ವರನಿಗೆ ಕೊಟ್ಟು ಮದುವೆ ಮಾಡಿಕಳುಹಿಸಿದ್ದರು. ಅನೇಕ ಕಾರಣಗಳಿಂದ ಅವಳ ಗಂಡ ಅವಳ ಜೊತೆ ಸಂಸಾರಮಾಡಲು ಒಪ್ಪಿಕೊಳ್ಳಲಿಲ್ಲ. ಕೊನೆಗೆ ವಿಚ್ಛೇದನೆ ಕೊಡಲು ಒತ್ತಡಿ ತಂದ. ಅವನು ಬಹಳ ಕ್ರೂರವಾಗಿ ವರ್ತಿಸುತ್ತಿದ್ದ. ಕೊನೆಗೆ, ಅವಳನ್ನು ಬೀದಿಗೆ ಎಳೆದುಕೊಂಡು ಬಂದು, ಊರಿನ ಹಿರಿಯರ ಎದುರಿಗೆ ವಿಚಾರಣೆ ಮಾಡಿಸಿದ. ಕೊನೆಗೆ, ಬೇಜಾರಾಗಿ ಉಮಾಮಹೇಶ್ವರಿ, ವಿವಾಹ ವಿಚ್ಛೇದನ ಮಾಡಿ ಮಂಗಳ ಸೂತ್ರ ತೆಗೆದು ಹಾಕಿದಳು. ಆಗ, ಪಿಚ್ಚಮ್ಮ ತನ್ನ ಮಗಳು ಉಮಾಳನ್ನ ಮೊದಲು ಬಾರಿ ಸ್ವಾಮಿಯವರ ಆಶ್ರಮದಲ್ಲಿ ಸೇವೆ ಮಾಡಲು ತುಳಸವ್ವನ ಆಧೀನದಲ್ಲಿ ಬಿಟ್ಟರು. ಆ ಮಹಾಭಕ್ತೆಯ ಆಧೀನದಲ್ಲಿ ನಿರಾಶೆ ಹೃದಯದಿಂದ "ಸ್ವಾಮಿಯವರೇ ನನ್ನ ಸರ್ವಸ್ವ" ಎಂದು ಒಂದು ವರ್ಷ ಸ್ವಾಮಿಯವರ ಸೇವೆ ಮಾಡಿದಳು ಉಮಾ. ಮತ್ತೆ ಬೇರೆ ಮದುವೆ ಮಾಡಿಸುವ ಎಲ್ಲರ ಪ್ರಯತ್ನವನ್ನು ಒಪ್ಪಿಕೊಳ್ಳಲಿಲ್ಲ. ಎಷ್ಟೋ ಜನ ತಾಳಿಯನ್ನು ಧರಿಸು ಎಂದರೆ ಅವರ ಮಾತು ಕೇಳದೆ, "ನನಗೆ ಗಂಡ ಇಲ್ಲ" ಎಂದು ಜೋರಾಗಿ ಕಿರುಚಾಡಿದಳು. ತುಳಸವ್ವ, ಈಕೆಯ ಮಂಗಳಸೂತ್ರವನ್ನು ತರಿಸಿ ಸ್ವಾಮಿಯವರ ಆಸನದ ಕೆಳಗೆ ಇಡಿಸಿದರು. ಸ್ವಾಮಿಯವರ ಕೃಪೆಯಿಂದಾಗಲಾದರೂ ಮಂಗಳಸೂತ್ರ ಕತ್ತಿನಲ್ಲಿ ಹಾಕಿಕೊಳ್ಳುತ್ತಾಳೆಂದು ತುಳಸವ್ವನ ಭಾವನೆ. ಆದರೆ ಸ್ವಾಮಿಯವರು ಗಂಡ ಹೆಂಡತಿಯರ ಮನಸ್ಸು ಬದಲಾವಣೆ ಆಗುವ ಹಾಗೆ ಮಾಡಿದರು. ಒಬ್ಬರ ಮೇಲೊಬ್ಬರಿಗೆ ಮನಸ್ಸು ಬರುವಂತೆ ಮಾಡಿದರು. ಗಂಡ ಕರೆದರೆ ಹೋಗಿ ಸಂಸಾರ ಮಾಡುತ್ತೇನೆಂದು ಉಮ, ಹೆಂಡತಿ ಬಂದರೆ ಅವಳಜೊತೆ ಸಂಸಾರ ಮಾಡುತ್ತೇನೆಂದು ಗಂಡ, ಮಧ್ಯವರ್ತಿಗಳ ಮೂಲಕ, ಮಾತು ನಡಿಸಿ ಒಪ್ಪಿಕೊಂಡರು. ಒಂದು ಶುಭ ಮುಹೂರ್ತದಲ್ಲಿ ಯಾರ ಪ್ರಮೇಯವಿಲ್ಲದೇ, ಉಮ ಶ್ರೀ ಸ್ವಾಮಿಯವರ ಸೇವಕ ಗುರವಯ್ಯನವರನ್ನ ಕೇಳಿ ತಾಳಿ ತೆಗೆದುಕೊಂಡು ತನ್ನ ಕತ್ತಿಗೆ ಹಾಕಿಕೊಂಡಳು. ಉಮ ತನ್ನ ತಾಯಿಗೆ ಕೂಡ ಹೇಳದೇ 2 ಮೈಲಿ ದೂರ ಇದ್ದ ಅನಿಕೇಪಲ್ಲಿಯಲ್ಲಿದ್ದ ಗಂಡನ ಹತ್ತಿರ ಬಂದಳು. ಹೆಂಡತಿ ಬಂದಿದ್ದೇ ಸಾಕು ಎನ್ನುತ್ತ ಗಂಡ ಕೃತಜ್ಞತಾಪೂರ್ವಕ ಭಾವದಿಂದ ಸ್ವೀಕರಿಸಿದನು. ಈಗ ಉಮಳಿಗೆ ಇಬ್ಬರು ಹೆಣ್ಣು ಮಕ್ಕಳು. ಆ ದಂಪತಿಗಳು ತುಂಬ ಸಂತೊಷವಾಗಿ ತಮ್ಮ ಮಕ್ಕಳೊಂದಿಗೆ ಜೀವನ ನಡಿಸುತ್ತಿದ್ದಾರೆ. ಸರ್ವಸಮರ್ಥರಾದ ಸದ್ಗುರುಗಳಿಗೆ ಮಾತ್ರವೇ ಈ ರೀತಿಯ ವಿಚಿತ್ರವಾದ ಸನ್ನಿವೇಶಗಳನ್ನು ಸರಿಪಡಿಸವುದು ಸಾಧ್ಯವಲ್ಲವೇ?

ಒಮ್ಮೆ ಸ್ವಾಮಿಯವರು ಪೆನ್ನಾನದಿಯ ಚೆ ದಡದಲ್ಲಿ ಬಿಡಿದಿ ಮಾಡಿದ್ದರೆಂದು ವಕ್ಕೆಮ್ಮ ಎಂಬ ಒಬ್ಬ ಭಕ್ತೆಗೆ ತಿಳಿಯಿತು. ಆಕೆ ಆತುರಾತುರವಾಗಿ ಸ್ವಾಮಿಯವರ ದರ್ಶನ ಮಾಡಬೇಕೆಂದು ಹೊರಟರು. ಆದರೇ ನದಿ ತುಂಬಾ ಆಳವಾಗಿದೆ, ನೀರಿನ ಪ್ರವಾಹ

ತುಂಬ ಜೋರಾಗಿ ಇರುವುದರಿಂದ, "ಹೋಗಬೇಡ" ಎಂದು ಸ್ನೇಹಿತರು ಸಲಹೇ ನೀಡಿದರು. ಅದು ಕೇಳಿ, "ಹೋಗದೆ ಇರುವುದಕ್ಕೆ ಆಗುತ್ತಿಲ್ಲವಲ್ಲವೇ" ಎಂದು ಅತ್ತರು. ಕೊನೆಗೆ, "ಏನಾದರೂ ಆಗಲಿ, ಸ್ವಾಮಿಯವರ ದರ್ಶನ ಮಾಡಲೇ ಬೇಕೆಂದು" ನಿರ್ಧರಿಸಿ ಹೊರಟುಬಿಟ್ಟಳು. ನೀರಲ್ಲಿ ನಡೆಯುತ್ತಿದ್ದಾಗ, ನೀರು ಹಿಮ್ಮಡಿ ವರೆಗೆ ಇತ್ತು. "ಆ ವ್ಯಕ್ತಿ ಏಕೆ ಸುಳ್ಳು ಹೇಳಿದರು?" ಎಂದು ಆಕೆ ಅಂದುಕೊಂಡಳು. ಆದರೆ ಆಕೆ ಸ್ವಾಮಿಯವರ ಹತ್ತಿರ ಹೋದಾಗ, ಅಲ್ಲಿದ್ದ ಸೇವಕರು "ನೀನು ನದಿಯನ್ನು ದಾಟಿ ಹೇಗೆ ಬಂದೆ?" `ಎಂದು ಆಶ್ಚರ್ಯದಿಂದ ಕೇಳಿದರು. ಆಕೆ ಮತ್ತೆ ನೋಡಿದಾಗ ನದಿಯಲ್ಲಿ ನೀರಿನ ಎತ್ತರ ತುಂಬ ಮೇಲಿನ ತನಕ ಇದ್ದು ಪ್ರವಾಹ ಜೋರಾಗೇ ಇತ್ತು. ಆಗ ಆಕೆಗೆ ಸ್ವಾಮಿಯವರ ಮಹತ್ವದಿಂದ ತಾನು ಪ್ರವಾಹ ದಾಟಿ ಬರಲು ಸಾಧ್ಯವಾಯಿತೆಂದು ಅರ್ಥವಾಯಿತು.

1982 ನೆ ವರ್ಷದಲ್ಲಿ ಕನ್ನವರಂ ರಾಜಯ್ಯನವರಿಗೆ, ತುಂಬಾ ಬಲಹೀನತೆ, ಹೃದಯದಲ್ಲಿ ದಡದಡ ಮತ್ತು, ಒಂದು ಅವ್ಯಕ್ತವಾದ ಭಯ ಇತ್ತು. ನೆಲ್ಲೂರಿನ ವೈದ್ಯರಿಗೆ ತೋರಿಸಬೇಕು ಎಂದುಕೊಂಡರು. ಶ್ರೀ ಸ್ವಾಮಿಯವರ ಪಟಕ್ಕೆ ತನ್ನ ಪರಿಸ್ಥಿತಿಯನ್ನು ಹೇಳಿಕೊಂಡು, ಆ ಭಾವಾವೇಶದಲ್ಲಿ ಬಿಕ್ಕಿ ಬಿಕ್ಕಿ ಅತ್ತು ಬಿಟ್ಟರು. ಬೆಳಗಾದ ನಂತರ, ನೆಲ್ಲೂರಿಗೆ ಹೋಗಿ ಇಂಜೆಕ್ಷನ್ ತೆಗೆದುಕೊಂಡು ಮನೆಗೆ ಬರುವಹೊತ್ತಿಗೆ, ರಿಯಾಕ್ಷನ್ ಆಯಿತು. ಅವರನ್ನು ಸ್ವಾಮಿಯವರ ಹತ್ತಿರ ಕರೆದುಕೊಂಡುಬಂದು ಮೈಗೆಲ್ಲಾ ವಿಭೂತಿ ಸವರಿ, ಸ್ವಲ್ಪ ತಿನ್ನಿಸಿ ತಕ್ಷಣವೇ ಕಾರಿನಲ್ಲಿ ನೆಲ್ಲೂರಿಗೆ ಕರೆದುಕೊಂಡು ಹೊದರು. ಕಾರಿನ ಮುಂದೆ 10 ಮಾರು ದೂರದಲ್ಲಿ "ಕೈಯ್ಯಲ್ಲಿ ಒಂದು ಕೋಲು ಹಿಡಿದುಕೊಂಡು ಸ್ವಾಮಿಯವರು ಹೋಗುತ್ತಿದ್ದಾರೆ ನೋಡಿ" ಎಂದು ರಾಜಯ್ಯ ಹೇಳಿದರು. ಆದರೆ, ರಾಜಯ್ಯನವರಿಗೆ ಬಿಟ್ಟು ಬೇರೇ ಯಾರಿಗೂ ಸ್ವಾಮಿ ಕಾಣಲಿಲ್ಲ. ಇವರು ಹೋಗುವ ಹೊತ್ತಿಗೆ ಆಸ್ಪತ್ರೆ ಟೈಂ ಆಗಿಹೊಗಿದ್ದರಿಂದ ವೈದ್ಯರು ಇರುವುದಿಲ್ಲವೆಂದು ಭಾವಿಸಿದರು. ಆದರೆ, ಒಂದು ಘಂಟೆಯ ಮುಂಚೆ ಮನೆಗೆ ಹೋಗ ಬೇಕಾಗಿದ್ದ ವೈದ್ಯರು, ಕುರ್ಚೀಯಲ್ಲಿ ಹಾಗೇ ಕುಳಿತಿದ್ದರು. ರಾಜಯ್ಯನಿಗೆ ಇಂಜಕ್ಷನ್ ಹಾಗು ಔಷಧಿ ಕೊಟ್ಟು, "ಯಾವಾಗಲೋ ಮನೆಗೆ ಹೋಗ ಬೇಕಗಿದ್ದ ನಾನು ಯೇಕೆ ಹೀಗೆ ಕುಳಿತುಬಿಟ್ಟಿನೋ ನನಗೇ ಗೊತ್ತಿಲ್ಲ, ಬಹುಶಃ ನಿಮಗೋಸ್ಕರವೇ ಆ ದೇವರು ಹೀಗೆ ಕೂರಿಸಿದ್ದರೇನೋ" ಎಂದು ಹೇಳಿದರು ಆ ವೈದ್ಯರು.

1981 ರಲ್ಲಿ ವೆಂಕಟಮುನಿ ರೆಡ್ಡಿ(ತಿರುಪತಿ) ಅವರ ಸ್ನೇಹಿತ ವಿ. ಬೋಡಯ್ಯನವರಿಗೆ ಶ್ರೀ ಸ್ವಾಮಿಯವರ ಮಹಿಮೆಗಳ ಬಗ್ಗೆ ತಿಳಿಯಿತು. ಆತನಿಗೆ ಕೆಲವು ತಿಂಗಳು ಟೈಫಾಯಿಡ್ ಜ್ವರ ಇದ್ದರಿಂದ, ಚಿತ್ತೂರಿನ ಆಸ್ಪತ್ರೆಯಲ್ಲಿ ಸೇರಿಸಿದರು. 18 ದಿನಗಳು ಆತನಿಗೆ ಅನ್ನ ಕೊಡಲಿಲ್ಲ, ಕೊನೆಗೆ ವೈದ್ಯರು ಲಾಭ ಇಲ್ಲ ಎಂದು, ರಾಯವೇಲೂರು ಕ್ರಿಶ್ಚಿಯನ್ ಮೆಡಿಕಲ್ (Rayavellore Christian Medical Hospital) ಆಸ್ಪತ್ರೆಗೆ ಹೋಗು ಎಂದರು. ಬೋಡಯ್ಯ ತುಂಬ ಬಡವ, ಆದ್ದರಿಂದ ತುಂಬ ಭಯಪಟ್ಟರು. ಆಗ, ತನ್ನ ಸ್ನೇಹಿತನಿಂದ ಕೇಳಿದ ವೆಂಕಯ್ಯಸ್ವಾಮಿಯವರ ನೆನಪಾಯಿತು, ಮನಸ್ಸಿನಲ್ಲೇ ತನ್ನ ಬಾಧೆಯನ್ನು ಸ್ವಾಮಿಯವರಲ್ಲಿ ಮೊರೆ

ಇಟ್ಟುಕೊಂಡರು. ತಕ್ಷಣವೇ ಸ್ವಾಮಿಯವರು ಭೌತಿಕವಾಗಿ ಬೋಡಯ್ಯನವರ ಮಂಚದ ಹತ್ತಿರ ಕಾಣಿಸಿ, "ನೀಕೇಮಿ ಪರವಾಲೇದು ಮೂಡುರೋಜುಲ್ಲೋ ತಗ್ಗಿಪೋತುಂದಿ" (ನಿನಗೇನೂ ಪರವಾಗಿಲ್ಲ 3 ದಿನಗಳಲ್ಲಿ ಗುಣವಾಗುತ್ತದೆ) ಎಂದು ಹೇಳಿ ಅದೃಶ್ಯವಾದರು. ತಕ್ಷಣವೇ ಬೋಡಯ್ಯನವರಿಗೆ ಎಲ್ಲಿಲ್ಲದ ಶಕ್ತಿ ಬಂದು ವೈದ್ಯರಿಗೆ ಹೇಳದೇ, ಅರ್ಧರಾತ್ರಿ 18 ಮೈಲಿ ದೂರದಲ್ಲಿದ್ದ ತನ್ನ ಹಳ್ಳಿಗೆ ನಡೆದು ಬಂದರು. ಆದಿನದಿಂದಲೇ ಯಾವ ಚಿಕಿತ್ಸೆಯೂ ಇಲ್ಲದೆ ಸ್ವಸ್ಥರಾದರು. ನಂತರ 1 ವಾರದಲ್ಲೇ ಬಂದು ಸ್ವಾಮಿಯವರ ದರ್ಶನ ಮಾಡಿ ತನ್ನ ಅದ್ಭುತವಾದ ಅನುಭವದ ಬಗ್ಗೆ ಎಲ್ಲರಿಗೂ ಹೇಳಿದರು.

ಒಂದು ದಿನ ತಲುಪೂರು ನಾರಾಯಣದಾಸರ ಆಶ್ರಮದಲ್ಲಿದ್ದಾಗ, ಸ್ವಾಮಿಯವರು "ಪೈವಾಳ್ಳಂತಾ ವಚ್ಚಿ ಪೆಂಚಲಕೋನಲೋ ಮೀಟಿಂಗು ಪೆಟ್ಟುಕೊನಿಯುನ್ನಾರು. ಪೆಂಚಲಯ್ಯ ವಾಳ್ಳಕೇಮೀ ಜವಾಬು ಚೆಪ್ಪಲೇಕ ಮನುಲನು ರಮ್ಮನಿ ಮೂಡುನಾಳ್ಳ ನುಂಡಿ ತಿರುಗುತುನ್ನಾಡು. ಮನಮೀರೋಜು ಪೋಯಿ ಎವರಿಕಿ ಚೆಪ್ಪೇಮಾಟ ವಾಳ್ಳಕು ಸರಿಚೆಪ್ಪಿ ಪೆಂಚಲಯ್ಯಕು ಎಲಾಂಟಿ ಆಟಂಕಮು ಲೇಕುಂಡ ಚೇಸಿ ರಾವಾಲಿ ಗನುಕ ಪ್ರಯಾಣಂ ಕಮ್ಮನಿ" (ಮೇಲಿನವರೆಲ್ಲಾ ಬಂದು ಪೆಂಚಲಕೋನದಲ್ಲಿ ಮೀಟಿಂಗ್ ಮಾಡುತ್ತಿದ್ದಾರೆ. ಪೆಂಚಲಯ್ಯ ಅವರಿಗೆ ಉತ್ತರ ಕೊಡಲು ಗೊತ್ತಾಗದೇ, 3 ದಿನಗಳದಿಂದ ನಮ್ಮನ್ನು ಬನ್ನಿರೆಂದು ಕರೆಯುತ್ತಾ ತಿರುಗುತ್ತಿದ್ದಾನೆ. ನಾವು ಈ ದಿನ ಹೋಗಿ ಯಾರಿಗೆ ಯಾವ ಮಾತನ್ನು ಹೇಳಬೇಕೋ ಅವರಿಗೆ ಆ ಮಾತು ಹೇಳಿ ಪೆಂಚಲಯ್ಯನಿಗೆ ಏನೂ ಅಡಚನೆ ಇರದಂತೆ ಮಾಡಿ ಬರಬೇಕು. ಆದ್ದರಿಂದ ಪ್ರಯಾಣ ಮಾಡೋಣ) ಎಂದು ತಮ್ಮ ಅನುಯಾಯಿಗಳೊಡನೆ ಪ್ರಯಾಣ ಮಾಡಿ ಪೆಂಚಲಕೊನೆಯನ್ನು ಸೇರಿದರು. ದೇವಾಲಯದ ಮುಂದೆ ಕುಳಿತುಕೊಂಡು ರಾತ್ರಿ 8 ಘಂಟೆಯಿಂದ ಬೆಳಗಿನಝಾವ 5 ರವರೆಗೆ ಕಣ್ಣಿಗೆ ಕಾಣದಿರುವ ಅದೃಶ್ಯ ವ್ಯಕ್ತಿಗಳೊಡನೆ ನಮಗೆ ಅರ್ಥವಾಗದ ಭಷೆಯಲ್ಲಿ ಮಾತನಾಡುತ್ತಿದ್ದರು. ಕೊನೆಗೆ "ಅಯ್ಯಾ! ಎವರಿಕಿ ಚೆಪ್ಪವಲಸಿನ ಮಾಟ ವಾಳ್ಳಕು ಚೆಪ್ಪಾಮು. ಪೆಂಚಲಯ್ಯಕು ಪೀಕುಲಾಟ ತಪ್ಪಿಂದಿ. ಇಕ ಪದಂಡಿ" (ಅಯ್ಯಾ! ಯಾರಿಗೆ ಯಾವ ಮಾತನ್ನು ಹೇಳಬೇಕೋ ಅವರಿಗೆ ಆ ಮಾತು ಹೇಳಿದ್ದೇವೆ. ಪೆಂಚಲಯ್ಯನಿಗೆ ಕಷ್ಟ ತಪ್ಪಿತು. ಇನ್ನು ಹೊರಡಿ) ಎಂದು ತಮ್ಮ ಅನುಯಾಯಿಗಳೊಡನೆ ವಾಪಸ್ಸು ಪ್ರಯಾಣ ಬೆಳೆಸಿದರು.

ಆ ದಿನ ಬುಧವಾರ. ಶನಿವಾರ ಮತ್ತು ಭಾನುವಾರ ಬಿಟ್ಟರೆ, ಬೇರೆ ದಿನಗಳಲ್ಲಿ ಪೆಂಚಲಕೋನಕ್ಕೆ ಬುಸ್ಸುಗಳು ಬರುತ್ತಿರಲಿಲ್ಲ. ಈ ವಿಷಯವನ್ನು ಸ್ವಾಮಿಯವರಿಗೆ ಹೇಳಿದರೆ, "ಬಸ್ಸು ವಸ್ತುಂದಿ, ಮೀರು ತ್ವರಗಾ ಪ್ರಯಾಣಂ ಚೇಯಂಡಿ" (ಬಸ್ಸು ಬರುತ್ತದೆ, ಬೇಗ ನೀವುಗಳು ಪ್ರಯಾಣಕ್ಕೆ ಸಿದ್ದರಾಗಿ) ಎಂದು ಮೂಟೆಗಳನ್ನು ಸಿದ್ದಮಾಡಿಸಿದರು. 15 ನಿಮಿಷಗಳಲ್ಲಿ ಬಸ್ಸು ಬಂದಿತು. "ಈ ದಿನ ಬುಧವಾರ ಅಲ್ಲವೇ ಬಸ್ಸನ್ನು ಏಕೆ ತಂದರಿ" ಎಂದು ಕೇಳಿದರೆ, "ಗೋನುಪಲ್ಲೆಯಿಂದ ಹೊರಟು 10 ಮಾರು ದೂರ ಹೋದಮೇಲೆ, ದೇವರನ್ನು ನೋಡಿ ಬರಬೇಕೆನ್ನಿಸಿ ಬಸ್ಸು ತಿರಿಗಿಸಿ ಕೊಂಡು ಬಂದೆವು, ಶ್ರೀ ವೆಂಕಯ್ಯ ಸ್ವಾಮಿಯವರನ್ನು ಕರೆದುಕೊಂಡು ಹೋಗುವುದಕ್ಕೇ ಭಗವಂತ ಹಾಗೆ ಮಾಡಿರಬೇಕು"

ಎಂದು ಹೇಳಿದರು. ಶ್ರೀ ವೆಂಕಯ್ಯ ಸ್ವಾಮಿಯವರು ಸಂಕಲ್ಪಿಸಿದ್ದರು ಎಂದು ಆ ಡ್ರೈವರ್ ಗುರುತಿಸಲಿಲ್ಲ.

ಹಿಂದೆ ಒಮ್ಮೆ ಅದೇ ರೀತಿಯಲ್ಲಿ ಕಲುವಾಯಿ ರೂಟ್ ನಲ್ಲಿ ಸ್ವಾಮಿಯವರು 4 ಮಾರಿನ ದೂರದಲ್ಲಿ ಬರುತ್ತಿದ್ದರೇ, ಇವರುಗಳನ್ನು ನೋಡಿದರೂ ಡ್ರೈವರ್ ಬಸ್ಸನ್ನು ನಿಲ್ಲಿಸಲಿಲ್ಲ. ಆ ಬಸ್ಸು 10 ಮಾರು ದೂರ ಹೋದ ಮೇಲೆ ವಿನಾಕಾರಣ ನಿಂತು ಹೋಯಿತು. ಶ್ರೀ ಸ್ವಾಮಿಯವರು ಬಸ್ಸು ಹತ್ತಿದ ತಕ್ಷಣವೇ ಬಸ್ಸು ಹೊರಟಿತು .

ಮಹನೀಯರು ತಮ್ಮ ಕೃಪೆಯನ್ನು ವಿಚಿತ್ರ ರೀತಿಯಲ್ಲಿ ಪ್ರದರ್ಶಿಸುತ್ತಾರೆ. ಅವರ ಮಾತು ಮತ್ತು ಅವರ ಮಾಡುವ ಕೆಲಸಗಳು ನಮ್ಮಂತಹ ಅಜ್ಞಾನಿಗಳಿಗೆ ಅರ್ಥವಿಲ್ಲದ ಕೆಲಸ ಎಂದು ಅನಿಸುತ್ತದೆ. ಆದರೆ, ಅವರ ಮಾತಿನಲ್ಲಿ ಅಚಂಚಲ ವಿಶ್ವಾಸ
16 **ಇಟ್ಟುಕೊಂಡು, ಅವರು ಯಾವಾಗಲೂ ಹಾಸ್ಯವಾಡುವುದಿಲ್ಲ ಎಂದು ಅರಿತವರು, ಅವರ ಮಾತಿನ ಪ್ರಕಾರ ನಡೆದುಕೊಂಡವರು, ತುಂಬಾ ಲಾಭಪಡುವರು. ಮಿಕ್ಕವರು (ಹಾಗೆ ಮಾಡದೇ ಇರುವವರು) ಮಹನೀಯರ ಕೃಪೆಯನ್ನು ಪಡೆಯುವುದಿಲ್ಲ.**

ಒಮ್ಮೆ ಕೊಱ್ಚಕೂಟಿ ಬುಚ್ಚಯ್ಯನವರು ಕೆಲವು ಕೋರ್ಟ್ ಕೇಸುಗಳು ಮತ್ತು ಅವರ ತಂದೆಯವರ ಅನಾರೋಗ್ಯದ ವಿಚಾರವಾಗಿ ಅಲೋಚಿಸುತ್ತಾ, ಮನಸ್ಸಿಗೆ ಶಾಂತಿ ಇಲ್ಲದೆ, ಸ್ವಾಮಿಯವರ ಹತ್ತಿರ ಬಂದು ಸ್ವಲ್ಪ ದೂರದಲ್ಲಿ ನಿಂತು ಕೊಂಡರು. ಅವರು ಸ್ವಾಮಿಯವರೊಡನೆ ತಮ್ಮ ಸಮಸ್ಯೆ ಹೇಳುವ ಮೊದಲೇ ಸ್ವಾಮಿಯವರು, "ಅಯ್ಯಾ ಮನಸುಲೋ ಏಮೀ ಪೆಟ್ಟುಕೋಕುಂಡಾ ಚಕಚಕಾ ಇಂಟಿಕಿ ಪೋ ಅನ್ನೀ ನೇನು ಚೂಸುಕುಂಟಾನು" (ಅಪ್ಪಾ! ಮನಸ್ಸಿನಲ್ಲಿ ಏನೂ ಇಟ್ಟುಕೊಳ್ಳದೇ, ಬೇಗ ಮನೆಗೆ ಹೋಗು, ನಾನು ಎಲ್ಲಾ ನೋಡಿಕೊಳ್ಳುತ್ತೇನೆ) ಎಂದು ಅಭಯ ಕೊಟ್ಟರು. ಅದೇ ರೀತಿಯಲ್ಲಿ ಬುಜ್ಜಯ್ಯನವರು ಮನೆಗೆ ಹೋದರು. ಸ್ವಾಮಿ ಹೇಳಿದಂತೆ ಎಲ್ಲವೂ ಸರಿಹೋಯಿತು.

ಸ್ವಲ್ಪ ದಿನದ ನಂತರ ಬುಜ್ಜಯ್ಯನವರು ತನ್ನ ಭಾವನವರು ಕ್ರಿಮಿನಲ್ ಕೇಸಿನಲ್ಲಿ ಸಿಕ್ಕಿಕೊಂಡು ಕೋರ್ಟು ಸುತ್ತಾ ತಿರುಗುತ್ತಿರುವ ಸಮಯದಲ್ಲಿ, ಈ ಕೇಸಿನಲ್ಲಿ ಸಹಾಯ ಮಾಡಿರೆಂದು ಸ್ವಾಮಿಯವರನ್ನ ಪ್ರಾರ್ಥಿಸಿದರು. ಆಗ ಸ್ವಾಮಿಯರು "ಅಯ್ಯಾ! ಕೊಂಡಾಯಪಾಳೆಂ ದಾಕ ಬಸ್ಸುಲೋಪೋಯಿ, ಅಕ್ಕಡನುಂಚಿ ನಡಿಚಿ ನೆಲ್ಲೂರುಕು ಪೋಯಿ, ಕೇಸುಕು ಸಂಬಂಧಿಂಚಿನ ವಿಷಯಂ ಮಾಟ್ಲಾಡಿ, ನೆಲ್ಲೂರು ರಂಗನಾಯಕುಲ ದೇವಸ್ಥಾನಂಲೋ, ಪೂಜ ಚೇಯಿಂಚಿ ಮಧ್ಯಾಹ್ನಂ 12 ಗಂಟಲಕು ತಿರಿಗಿ ವಚ್ಚೇಯಿ" (ಅಪ್ಪಾ! ಕೊಂಡಾಯಪಾಳಂ ವರೆಗೆ ಬಸ್ಸಲ್ಲಿ ಹೋಗಿ, ಅಲ್ಲಿಂದ ನಡೆದು ಕೊಂಡು ನೆಲ್ಲೂರಿಗೆ ಹೋಗಿ ಕೇಸಿಗೆ ಸಂಬಂಧಿಸಿದ ವಿಚಾರ ಎಲ್ಲಾ ಮಾತಾಡಿ, ನೆಲ್ಲೂರು ರಂಗನಾಯಕರ ದೇವಸ್ಥಾನದಲ್ಲಿ ಪೂಜೆ ಮಾಡಿಸಿ ಮಧ್ಯಾಹ್ನ 12 ಘಂಟೆಗೆ ತಿರುಗಿ ಬಂದುಬಿಡು) ಎಂದು ಆಜ್ಞಾಪಿಸಿದರು.

ಶ್ರೀ ಸ್ವಾಮಿಯವರ ಮಾತಿನ ಮೇಲೆ ದೃಢವಾದ ನಂಬಿಕೆ ಹೊಂದಿದ್ದ ಬುಜ್ಜಯ್ಯನವರು, ಅದೇ ರೀತಿಯಲ್ಲಿ ಬಸ್ಸಿನಲ್ಲಿ ಹತ್ತಿ, ಸ್ವಲ್ಪ ದೂರ ನಡೆದುಕೊಂಡು ಹೋಗಿ, ಕೇಸು ವಿಷಯವನ್ನು ಚರ್ಚಿಸಿ, ದೇವಸ್ಥಾನದಲ್ಲಿ ಪೂಜೆ ಮಾಡಿ ಹೊರಟರು. ಬಸ್ಸು

ಇರಲಿಲ್ಲ. ಓಡುತ್ತಾ ಬಂದರೂ 12 ಘಂಟೆಯ ಒಳಗೆ ಗೊಲಗಮೂಡಿ ಸೇರುವ ಸಾಧ್ಯತೆ ಇರಲಿಲ್ಲ. ಸ್ವಾಮಿಯವರು ಸ್ಮರಣೆ ಮಾಡುತ್ತಾ ಬೇಗ ಬೇಗ ನಡೆಯುತ್ತಿದ್ದರು. ಫತೈಖಾನ್ ಪೆಟೆಯ ಸಮೀಪದಲ್ಲಿ ಅವರ ಸ್ನೇಹಿತಸಿಕ್ಕಿ ಮಾತನಾಡಿಸಿ, ವಿಷಯವೆಲ್ಲಾ ತಿಳಿದು, ತಾವು ರದ್ದುಮಾಡಿಸಿದ ಪ್ರಭುತ್ವ ಕಾಂಪಿನ ಕೆಲಸವನ್ನು ಮತ್ತೆ ಹಾಕಿಸಿಕೊಂಡು, ತಮ್ಮ ಕಾರಲ್ಲಿ ಬುಜ್ಜಯ್ಯನವರನ್ನು ಹತ್ತಿಸಿಕೊಂಡು, ಗೊಲಗಮೂಡಿಯ ಸಮೀಪದಲ್ಲಿ ಬಿಟ್ಟು ಹೊರಟು ಹೋದರು. 12 ಘಂಟೆಯ ಒಳಗೆ ಸ್ವಾಮಿಯವರ ಹತ್ತಿರ ಬಂದು ಸೇರಿದರು.

ಕೇಸುಗಳೆಲ್ಲಾ ಮಂಜಿನಂತೆ ಕರಗಿ ಹೋದವು. ನೆಲ್ಲೂರಿ ನಿಂದ ಓಡೋಡಿ ಬಂದರೂ 12 ಘಂಟೆಯ ಒಳಗೆ ಬರಲಾಗುತ್ತಿರಲಿಲ್ಲ. ಸ್ವಾಮಿಯವರ ಮಾತಿನಲ್ಲಿ ಪೂರ್ತಿ ನಂಬಿಕೆ ಇಟ್ಟಿದ್ದರಿಂದಲೇ ಅವರ ಸ್ನೇಹಿತ ಸಿಕ್ಕಿ ಅವರನ್ನು ಸಕಾಲದಲ್ಲಿ ಸೇರುವಹಾಗೆ ಏರ್ಪಾಡು ಮಾಡಿದ್ದು ಸ್ವಾಮಿಯವರೆ! ತನ್ನ ಭಕ್ತನ ಬಾರ ತನ್ನದೇ ಎಂದಲ್ಲವೇ ಸ್ವಾಮಿಯವರು ಹೇಳಿದ್ದು.

ಶ್ರೀ ಸ್ವಾಮಿಯವರು ಕೆಲವು ಕೆಲಸಗಳನ್ನ ಮಾಡಿಸುವ ಪದ್ಧತಿ ತುಂಬಾ ವಿಚಿತ್ರವಾಗಿರುತ್ತದೆ. ಖಚ್ಚಿತವಾಗಿ ಇಂತಹ ಟೈಂನಲ್ಲಿಯೇ ಮಾಡು ಎನ್ನುವುದು, ಇಂತಹ ದೇವಾಲಯದಲ್ಲೇ ಪೂಜೆ ಮಾಡಿಸಿ, ಇಂತಹವರ ಜೊತೆ ಮಾತಾಡಿ ಬಾ ಎಂದು ಹೇಳುವುದನ್ನು ನೋಡಿದರೇ, ಆಜ್ಞಾನದ ಅಂಧತ್ವದಲ್ಲಿ ಇರುವ ನಮಗೆ, ಏನೂ ತಿಳಿಯದೇ, ಅದು ಅವರ ಹುಚ್ಚ ಪದ್ಧತಿ ಎಂದು ಭ್ರಮಿಸುತ್ತೇವೆ.

17

ಕೊಂಡಾಯಪಾಳೆಂ ನಲ್ಲಿ ಒಂದು ತೋಟದಲ್ಲಿ ನಿವಸಿಸುತ್ತಿದ್ದ ದೊಡ್ಡ ರಾಮಿರೆಡ್ಡಿಯವರು ತಾವು ಕೋರ್ಟಲ್ಲಿ ಕೇಸು ಗೆದ್ದಮೇಲೆ ಶ್ರೀ ಸ್ವಾಮಿಯವರಿಗೆ ತಮ್ಮ ಹರಿಕೆಯನ್ನು ತೀರಿಸುವುದಕ್ಕಾಗಿ ಬಂದು, "ಸ್ವಾಮೀ! ತಮ್ಮ ದಯದಿಂದ ಕೇಸು ಗೆದ್ದೆ. ನಿಮಗೋಸ್ಕರ ಒಂದು ದೊಡ್ಡ ಮನೆಯನ್ನು ಕಟ್ಟಿಸ ಬೇಕೆಂದುಕೊಂಡಿದ್ದೇನೇ. ಎಲ್ಲಿ ಕಟ್ಟಲಿ, ಯಾವ ತರಹಾ ಕಟ್ಟಲಿ ಎಂದು ನೀವೇ ದಯವಿಟ್ಟು ನನಗೆ ಹೇಳಿ" ಎಂದು ಕೇಳಿ ಕೊಂಡರು. ಸ್ವಾಮಿಯವರು, "ನಾಕು ಇಲ್ಲು ವದ್ದು ಗಾನೀ ಆಂಜನೇಯಸ್ವಾಮಿ ಗುಡಿಕಿ ಪ್ರಹರೀ ಕಟ್ಟಿಂಚು" (ನನಗೆ ಮನೆ ಬೇಡ, ಆದರೆ ಆಜನೇಯಸ್ವಾಮಿಯವರ ದೇವಸ್ಥಾನಕ್ಕೆ ಪ್ರಹರಿ (ಕಾಂಪೌಂಡ್ ವಲ್ಲ್) ಕಟ್ಟಿಸು" ಅಂದರು. ಆ ಭಕ್ತ ಸರಿ ಎಂದು ಹೊರಟು ಹೋದನು, ಆದರೆ, ತುಂಬಾ ದಿನಗಳು ಕೆಲಸ ಆರಂಭಿಸಲಿಲ್ಲ.

ಸ್ವಾಮಿಯವರು ಒಂದು ದಿನ, ಕೊಱ್ಱಕೂಟಿ ಬುಜ್ಜಯ್ಯನವರನ್ನ, ಕಾಟಂರೆಡ್ಡಿ ಸುಬ್ಬರಾಮ ರೆಡ್ಡಿಯವರನ್ನ ಕರೆದು "ಅಯ್ಯಾ! ಮೀರು ರಾತ್ರಿ 2 ಗಂಟಲಕು ಬಯಲು ದೇರಿ ನಡಚಿ ಪೋಯಿ ಆಯನ ಆಂಜನೇಯ ಸ್ವಾಮಿ ಗುಡಿಕಿ ಪ್ರಹರೀ ಗೋಡ ಕಟ್ಟಿಸ್ತಾನನ್ನಾಡು. ಆ ವಿಷಯಂ ಮಾಟ್ಲಾಡಿ ರಂಡಿ" (ನೀವುಗಳು ರಾತ್ರಿ 2 ಘಂಟೆಗೆ, ನಡೆಕೊಂಡು ಹೋಗಿ, ಆತ ಆಂಜನೇಯಸ್ವಾಮಿಯ ದೇವಸ್ಥಾನಕ್ಕೆ ಪ್ರಹರಿ ಗೋಡೆ ಕಟ್ಟಿಸುತ್ತೆನೆಂದಿದ್ದ. ಆ ವಿಷಯ ಮಾತಾಡಿ ಬನ್ನಿ) ಎಂದು ಆಜ್ಞಾಪಿಸಿದರು. ಸ್ವಾಮಿಯವರ ಮಾತಿನ ಮೇಲೆ ಅಚಂಚಲ ವಿಷ್ವಾಸ ಇದ್ದ ಈ ಭಕ್ತರು, ಸ್ವಾಮಿ ಹೇಳಿದ ಪ್ರಕಾರ 2 ಘಂಟೆಗೆ ಎದ್ದು 6 ಮೈಲಿ ನಡೆದು ಕೊಂಡು ಹೋಗಿ, ದೊಡ್ಡ ರಾಮಿ ರೆಡ್ಡಿಯವರನ್ನ ಎಬ್ಬಿಸಿ ವಿಷಯ ಹೇಳಿದರು.

"ನನಗೆ ಇನ್ನೂ ಕೆಲವು ಕೋರ್ಟ್ ಕೆಲಸಗಳಿವೆ, ಅದೂ ಪೂರ್ತಿಯಾದರೆ ಕಟ್ಟಿಸುತ್ತೇನೆ. ಸ್ವಾಮಿಯವರು ಕಳುಹಿಸಿದ್ದರಿಂದ ಈಗ 400 ರೂ ಕೊಡುತ್ತೇನೆ. ಮಿಕ್ಕ ಹಣವನ್ನು ನೀವುಗಳು ಚಂದಾ ಹಾಕಿ ಕಟ್ಟಿಸಿ" ಎಂದು ಹೇಳಿದರು. "ನಾವು ಸ್ವಾಮಿಯವರು ಹೇಳಿದ ಹಾಗೆ ಮಾಡುತ್ತೇವೆ. ಈ ಹಣ ನಿಮಗೆ ವಾಪಸ್ಸು ಕೊಡು ಎಂದರೆ ಮತ್ತೆ ಬಂದು ವಾಪಸ್ಸು ಕೊಡುತ್ತೇವೆ. ಇದಕ್ಕೆ ಒಪ್ಪಿಕೊಳ್ಳುವದಾದರೆ ಕೊಡಿ" ಎಂದರು. ಬುಜ್ಜಯ್ಯನವರು ಅದಕ್ಕೆ ಒಪ್ಪಿಕೊಂಡು 400/-ರೂ ಕೊಟ್ಟು ಕಳುಹಿಸಿದರು. ಈ ವಿಷಯ ಸ್ವಾಮಿಯವರಿಗೆ ಹೇಳಿದಾಗ, "ಆಯನೇ ವಚ್ಚಿ ಕಟ್ಟಿಸ್ತಾಡು ಲೇಯ್ಯಾ ಮೀರು ಪನಿ ಮೊದಲು ಪೆಟ್ಟಂಡಿ" (ಅವರೇ ಬಂದು ಕಟ್ಟಿಸುತ್ತಾರಯ್ಯಾ! ನೀವು ಕೆಲಸ ಪ್ರಾರಂಭಿಸಿ) ಎಂದರು. ಸ್ವಾಮಿಯವರ ಆಜ್ಞೆ ಯಂತೆ ಗೋಡೆಯ ಕೆಲಸ ಒಬ್ಬರಿಗೆ ಕಾಂಟ್ರಾಕ್ಟ್ಗೆ ಕೊಟ್ಟು ನಿಧಾನವಾಗಿ ಮಾಡಿಸುತ್ತಿದ್ದರು. 4 ನೇ ದಿನ ರಾಮಿ ರೆಡ್ಡಿಯವರು ಬಂದು ನಡಿಯುತ್ತಿರುವ ಕೆಲಸವನ್ನು ನೋಡಿದನಂತರ, ಅವರ ಮನಸ್ಸನ್ನು ಸ್ವಾಮಿಯವರು ಹೇಗೆ ಪರಿವರ್ತಿಸಿದರೋ ಎನೋ, "ಮಿಕ್ಕ ಹಣವನ್ನು ಕೂಡ ನಾನೇ ಕೊಡುತ್ತೇನೆ, ಹೆಚ್ಚು ಜನರನ್ನು ಇಟ್ಟು ಬೇಗ ಕೆಲಸ ಮಾಡಿಸಿ" ಎಂದು ಹೇಳಿ ಹೊರಟು ಹೊದರು. ಕೊನೇಗೆ, ಆತ ಒಬ್ಬರೇ ಆ ಪ್ರಹರಿ ಗೋಡೆಯ ಖರ್ಚನ್ನೆಲ್ಲಾ ಕೊಟ್ಟು ಗೋಡೆ ನಿರ್ಮಿಸಿದರು. ರಾತ್ರಿ 2 ಘಂಟೆಯ ಸಮಯದಲ್ಲಿ ಇಬ್ಬರು ವ್ಯಕ್ತಿಗಳನ್ನು ನಡೆದು ಕೊಂಡು ಹೋಗಿ ಎನ್ನುವುದರ ಅಂತರಾರ್ಥ ಸ್ವಾಮಿಯವರಿಗೇ ತಿಳಿಯಬೇಕು.

ಓಂ ನಾರಾಯಣ ಆದಿ ನಾರಾಯಣ

ಅವಧೂತ ಲೀಲೆ

ಅಧ್ಯಾಯ - 6

ಭೂತನಿಯಂತ

ನಿರ್ಮಲ, ನಿಷ್ಕಲ, ನಿತ್ಯ, ನಿರ್ವಿಕಲ್ಪ, ನಿರಂಜನ ಆಗಿರುವ ಆ ಪರಮಾತ್ಮ ತಾನು ಅನೇಕ ಆಗ ಬೇಕೆನ್ನುವ ದಿವ್ಯ ಸಂಕಲ್ಪದಿಂದ ಆದ ರೂಪವೇ ಈ ಸ್ಥೂಲ ಜಗತ್ತು. ನಮ್ಮ ಶರೀರ ಮತ್ತು ಮನಸ್ಸು ಅಧೀನವಾದಂತೆ, ನಮ್ಮ ಮನಸ್ಸು ಆತ್ಮಕ್ಕೆ ಅಧೀನ ಆಗಿದೆ. ಸದ್ಗುರುಗಳು ತ್ರಿಮೂರ್ತಿ ಸ್ವರೂಪರಾದ ಸಾಕ್ಷಾತ್ ಪರಬ್ರಹ್ಮರೇ ಆದ್ದರಿಂದ, ಜಗತ್ತೆಲ್ಲಾ ಅವರ ಅಧೀನ. **ಈ ವಿಷಯ ಸದ್ಗುರುಗಳ ದಿವ್ಯ ಲೀಲೆಗಳ ಮೂಲಕ ಭಕ್ತರಿಗೆ ತಿಳಿಯುತ್ತದೆ. ಅನಂತವಾದ ಈ ಪ್ರಕೃತಿಯನ್ನು ಶಾಸಿಸುವ ಸದ್ಗುರುವಿನ** 18
ಸಾಮರ್ಥ್ಯವನ್ನು ಅನುಭವಿಸಿದ ಭಕ್ತರಿಗೆ ಗುರುವಿನ ಮೇಲೆ ವಿಶ್ವಾಸ ದೃಢವಾಗಿ, ಶ್ರದ್ಧೆ ಮತ್ತು ಭಕ್ತಿಯಿಂದ ಅವರನ್ನು ಸೇವಿಸಿ ಧನ್ಯರಾಗುತ್ತಾರೆ.

ನಮ್ಮ ಜೀವಿತ ಸಂಘಟನೆಗಳನ್ನು ನಿಯಂತ್ರಣಗೊಳಿಸುವ ದೈವಶಕ್ತಿಯಿರುವುದು ಎಂಬ ವಿಶ್ವಾಸವನ್ನು ನಮಗೆ ತಿಳಿಸುವುದು ಸದ್ಗುರುಗಳ ಮುಖ್ಯವಾದ ಪ್ರಯತ್ನ. ಆದ್ದರಿಂದ, ನಿತ್ಯಜೀವನದಲ್ಲಿ ವಿವೇಕ ಮತ್ತು ವೈರಾಗ್ಯವು ಹುಟ್ಟಿ, ತ್ರಿಕರಣ ಶುದ್ಧಿಯೊಂದಿಗೆ ಧಾರ್ಮಿಕ ಜೀವನವನ್ನು ಪ್ರತಿಯೊಬ್ಬರೂ ಆಚರಿಸಬೇಕೆಂದು ಸದ್ಗುರುವಿನ ಲೀಲೆಗಳ ಉದ್ದೇಶ.

ಸದ್ಗುರುಗಳು ನಮ್ಮಿಂದ ನಿರೀಕ್ಷಿಸುವುದು ಪವಿತ್ರ ಜೀವನ ವಿಧಾನ. ನಮ್ಮ ಈ ವರ್ತನೆಯೇ ನಾವು ನೀಡುವ ದಕ್ಷಿಣೆ. ಹಾಗೆ ಮಾಡದಿದ್ದರೆ ಲೀಲೆಯ ರೂಪದಲ್ಲಿ ನಮ್ಮ 19
ಮೇಲೆ ಸುರಿಸಿದ ಅವರ ಕೃಪೆಯು ಕಾಡಿನಲ್ಲಿ ಬೀಳುವ ಚಂದ್ರನ ಬೆಳಕಿನಂತೆ ವ್ಯರ್ಥವಾಗುತ್ತದೆ.

ಒಮ್ಮೆ ಶ್ರೀ ಸ್ವಾಮಿಯವರು ತಲಪೂರು ಶಿವನ ದೇವಸ್ಥಾನದಲ್ಲಿ ಇದ್ದರು. ಅವರ ಜೊತೆಯಲ್ಲಿ ಒಬ್ಬ ಭಕ್ತ ಮಾತ್ರ ಇದ್ದ. ಆಗ ಮೋಡ ಬಂದು, ಸ್ವಲ್ಪ ಮಳೆ ಹನಿ ಹಾಕಿ, ಕತ್ತಲೆ ಆಗಿ, ಚಂಡ ಮಾರುತದಂತೆ ಗುಡುಗು, ಮಿಂಚು ಆರಂಭಿಸಿತು. ಸ್ವಾಮಿಯವರನ್ನು ಒಳಗೆ ಕರೆದುಕೊಂಡು ಹೋಗ ಬೇಕೆಂದು (ಆ ಸಮಯದಲ್ಲಿ, ಸ್ವಾಮಿಯವರು ನಡೆಯುತ್ತಿರಲಿಲ್ಲ, ಅವರನ್ನು ಎತ್ತಿಕೊಂಡು ಹೋಗ ಬೇಕಾಗುತ್ತಿತ್ತು), ಆ ಭಕ್ತನಿಗೆ

ಯಾರೂ ಸಹಾಯ ಇರಲಿಲ್ಲ. ಸ್ವಾಮಿಯವರು, "ಒಂದು ಚಾಪೆ ತಂದು ತಮ್ಮ ಮುಂದೆ ಹಾಕು" ಎಂದು ಆಜ್ಞಾಪಿಸಿದರು. "ಸ್ವಾಮಿ! ಮಳೆ ಬೀಳುತ್ತದೆ ಎಂದು ತೋರುತ್ತದೆ. ಇನ್ನೂ ಮುಂದೆ ಬಂದರೆ ನಾನೊಬ್ಬನೇ ನಿಮ್ಮನ್ನ ಒಳಗೆ ಎತ್ತಿ ಕೊಂಡು ಹೋಗಲಾರೆ" ಎಂದನು. ಆಗ ಸ್ವಾಮಿಯವರು, "ಉಂಡಯ್ಯಾ! ಮಬ್ಬು ಕಟ್ಟಾಲಾ?" (ಇರಪ್ಪಾ! ಮೋಡ ಬರ ಬೇಕಲ್ಲವೇ?) ಎಂದರು. ಅವರು ಚಾಪೆಯ ಮೇಲೆ ಕುಳಿತು ಸ್ವಲ್ಪ ಹೊತ್ತು ತಮ್ಮ ದೃಷ್ಟಿಯನ್ನು ಮೋಡದ ಕಡೆ ತೀಕ್ಷಣವಾಗಿ ನೊಡಿದರು. ಅಷ್ಟೇ! ಆಮೇಲೆ ಮೋಡ, ಗುಡುಗು, ಮಿಂಚು ಮಳೆ ಎಲ್ಲಾ ಹೋಗಿ ಯಥಾ ಸ್ಥಿತಿ ಆಯಿತು.

ತಲಪೂರಿನಲ್ಲಿ ನಾರಾಯಣದಾಸು ಎಂಬ ಸ್ವಾಮಿಯ ಭಕ್ತರು ಒಬ್ಬರಿದ್ದಾರೆ. 1977 ವರ್ಷದಲ್ಲಿ ಒಮ್ಮೆ ಸ್ವಾಮಿಯವರು ಅವರ ಆಶ್ರಮದಲ್ಲಿ ಇದ್ದರು. ಆಗ, ಸ್ವಾಮಿಯವರ ಸೇವಕ ಬರಿಗೆಲ ನಾಗಯ್ಯ ಸ್ವಾಮಿಯವರನ್ನು "ಮಳೆ ಯಾವಾಗ ಬರುತ್ತದೆ?" ಎಂದು ಕೇಳಿದರು. ಅದಕ್ಕೆ ಸ್ವಾಮಿಯವರು, "ಅಯ್ಯಾ! ಈ ಸಂವತ್ಸರಮು 3 ವಾನಲೇ ಕದಯ್ಯಾ! ಒಕಟಿನ್ನರ ನೆಲಕು ಒಕಸಾರಿ, 2 ನೆಲಲ 20 ರೋಜುಲಕು ಒಕಸಾರಿ, 3 ನೆಲಲ 5 ರೋಜುಲಕು ಒಕಸಾರಿ, ಪೈವಾಳ್ಳು ಕುರಿಪಿಂಚೇ ವಾನ ಇಂತೇನಯ್ಯಾ"! (ಅಯ್ಯಾ! ಈ ವರ್ಷ 3 ಬಾರಿ ಮಾತ್ರ ಮಳೆ ಬೀಳುವುದು. 1 1/2 ತಿಂಗಳಿಗೆ ಒಂದು ಬಾರಿ, 2 ತಿಂಗಳ 20 ದಿನಗಳಿಗೆ ಎರಡಿನೇ ಬಾರಿ, 3 ತಿಂಗಳ 5 ದಿನಗಳಿಗೆ ಮೂರನೇ ಬಾರಿ, ಮೇಲಿನವರು ಸುರಿಸುವ ಮಳೆ ಇಷ್ಟೇನಯ್ಯಾ!) ಎಂದರು. ಆಗ ನಾಗಯ್ಯನವರು, "1.5 ತಿಂಗಳಿಗೆ ಮಳೆ ಬೀಳದಿದ್ದರೆ, ಕುರಿ ಮರಿಗಳು ಮರಣಿಸುತ್ತವೆ" ಎಂದರು. "ಅಟ್ಲಾ ಅಯಿತೇ ಮನಮನ್ನಾ ಕಷ್ಟಪಡಿ ಕುರಿಪಿಂಚುಕೋವದ್ದಯ್ಯಾ?" (ಹಾಗಾದರೇ ಕಷ್ಟಪಟ್ಟು ನಾವೇ ಮಳೆಯನ್ನು ಬರಿಸಿಕೊಳ್ಳ ಬೇಕಲ್ಲವೇ?) ಎಂದರು ಸ್ವಾಮಿಯವರು. ನಾಗಯ್ಯನವರು ಸ್ವಾಮಿಯವರನ್ನು ಗಂಜಿ ಕುಡಿಯಿರಿ ಅಂದರು, ಆಗ "ಅಯ್ಯಾ! ಅನುಕುನ್ನ ಪನಿ ಪೂರ್ತಿ ಅಯಿತೇ ಕದಯ್ಯಾ ನೀಳ್ಳು ತಾಗವಲಸಿಂದಿ" (ಅಯ್ಯಾ! ಅಂದುಕೊಂಡ ಕೆಲಸ ಆದ ಮೇಲೆ ಅಲ್ಲವೇ ನೀರು ಕುಡಿಯಬೇಕಾದದ್ದು?) ಎಂದರು. ನಂತರ, ಸ್ವಾಮಿಯವರು, ಸಿದ್ದಲಯ್ಯ ಬೆಟ್ಟದ ಹತ್ತಿರ 3 ದಿನ, ಕಲಿಚೇಡಲ್ಲಿ 3 ದಿನ ನಿರಾಹಾರಿಯಾಗಿ "ಬಂಡಿ ಆಪಂಡಯ್ಯಾ" (ಗಾಡಿ ನಿಲ್ಲಿಸಿ) ಎಂದು ಹಗಲು ರಾತ್ರಿ ಕೂಗುತ್ತಿದ್ದರು. ಹಗಲು ರಾತ್ರಿ ನಿದ್ರೆ ಮಾಡದೆ ಕೂತುಕೊಂಡಿದ್ದರು, ಆಸನ ವನ್ನು ಕೂಡ ಬದಲಾಯಿಸಲಿಲ್ಲ. ಮೊದಲ ದಿನ ಹೇಗಿದ್ದರೋ ಕೊನೆಯ ದಿನ ಕೂಡ ಹಾಗೆ ಇದ್ದರು. ಅದಕ್ಕೆ ಮೊದಲು ಸ್ವಾಮಿಯವರು ಯಾವಾಗಲೂ ಮಲಗಿರುವುದನ್ನು ನೋಡಿದ ಭಕ್ತರು, "ಸ್ವಾಮಿಯವರಿಗೆ ವೃದ್ಧಾಪ್ಯದಿಂದ ಬಲಹೀನತೆ ಬಂದಿದೆ. ಇನ್ನು ಚೇತರಿಸಿಕೊಳ್ಳುವುದೇ ಇಲ್ಲ" ಎಂದು ಭಾವಿಸಿದ್ದರು. ಈಗಿನ ದೃಶ್ಯ ನೋಡಿದ ಮೇಲೆ, ಕಣ್ಣು ತೆರೆದು, "ಸ್ವಾಮಿಯವರ ಕಾರ್ಯದೀಕ್ಷೆ ಶಕ್ತಿ" ತಿಳಿದು ಬಂದಿತು. 6 ನೇದಿನ ಸಂಜೆ 4 ಘಂಟೆಗೆ, ತಮಗೆ ಸ್ನಾನ ಮಾಡಿಸಲು ಹೇಳಿದರು. ಅವರಿಗೆ ಸ್ನಾನ ಮಾಡಿಸಿ ಕೂರಿಸಿದ ತಕ್ಷಣವೇ ಜೋರಾಗಿ ನಗುತ್ತಾ " ಗಡ್ಡ ಗಡ್ಡ ಪೆಳ್ಳ ಗಿಂಚುಕುನ್ನದಯ್ಯಾ**" (ಗೆಡ್ಡೆ ಗೆಡ್ಡೇ ನಿರ್ಮೂಲವಾಯಿತಯ್ಯಾ) ಎಂದರು. ಮರುಕ್ಷಣವೇ ಕುಂಭ ವೃಷ್ಟಿಯಾಗುವುದು

ಪ್ರಾರಂಭವಾಗಿ ಕೆರೆಗಳು ತುಂಬುವ ವರೆಗೂ ನಿಲ್ಲಲಿಲ್ಲ. (**ಇಲ್ಲಿ ನಾವು ತಿಳಿಯಬೇಕಾದ್ದ ವಿಷಯವೇನೆಂದರೆ, ಶ್ರೀ ಸ್ವಾಮಿಯವರು, ಅನೌಪಚಾರಿಕ ಪ್ರಾದೇಶಿಕ ಭಾಷೆಯಲ್ಲಿ ಮಾತನ್ನಾಡುತಿದ್ದರು. ಮೇಲಿನ ವಾಕ್ಯ ದಲ್ಲಿ "ಗಡ್ಡೆ" ಎಂದರೆ, "ದಟ್ಟವಾದ ಮೋಡಗಳು" "ಪೆಳ್ಳಗಿಂಚುಕುನ್ನದಿ" ಎಂದರೆ ಮೋಡ ಕರಲಗಿ, ಮಳೆ ಬರುವುದು ಎಂದು ತಿಳಿಯ ಬೇಕು. ಆ ವಾಕ್ಯದ ಸಂಪೂರ್ಣ ವಿವರಣೆ ಕೆಳಗಕಂಡಂತಿದೆ.

ಋಷಿಗಳು ತಮ್ಮ ತಪಸ್ಸು, ಯಜ್ಞ, ಮತ್ತು ಯಾಗಗಳನ್ನು ಮಾಡುವುದರ ಫಲವೇ ಸಕಾಲದಲ್ಲಿ ಮಳೆ ಬಂದು ಪ್ರಪಂಚಕ್ಕೆ ಮೇಲಾಗುತ್ತದೆ ಎಂದು ಪುರಾಣಗಳಲ್ಲಿ ಓದಿದ್ದೆವು. ಅದರ ನಿದರ್ಶನ ಸ್ವಾಮಿಯವರನ್ನ ನೋಡಿದಾಗ ತಿಳಿಯುತ್ತದೆ. ಹಾಗೆ ಮಾಡುವ ಸಾಮರ್ಥ್ಯ ಇರುವವರನ್ನೇ "ಭಾಸುರರು" ಎಂದು ಬಹುಶಃ ಎನ್ನುತ್ತಾರೆ.

ಶ್ರೀ ಸ್ವಾಮಿಯವರು ಅಷ್ಟು ಶಕ್ತಿವಂತರೇ ಆದರೆ ಮಳೆ ಬರಿಸುವುದಕ್ಕೆ 6 ದಿನ ಏಕೆ ಬೇಕಾಯಿತು? ಎಂಬ ಪ್ರಶ್ನೆ ಬರಬಹುದು. ಸ್ಥಾನಿಕ ಪ್ರಜೆಗಳ ಪಾಪ ಕರ್ಮಗಳ ಫಲಿತವೇ ಅನಾವೃಷ್ಟಿಯ ಕಾರಣ ಎಂದು ಹಿರಿಯರು ಹೇಳುತ್ತಾರೆ. ಅವರೆಲ್ಲರ ಪಾಪ ಕರ್ಮಗಳನ್ನು ತಮ್ಮ ತಪಃ ಶಕ್ತಿಯಿಂದ ಹೋಗಲಾಡಿಸಲು ಅವರಿಗೆ ಅಷ್ಟು ಸಮಯ ಬೇಕಾಗಿದ್ದಿತ್ತು.

ಜನರು ಯಾವಾಗ ನಿಸ್ಸ್ವಾರ್ಥರಾಗಿ, ಶ್ರದ್ಧೆ ಭಕ್ತಿ, ಪ್ರೇಮಪೂರಿತ ಭಾವದಿಂದ ಭಗವಂತನ ಪೂಜೆ ಮಾಡದೇ ಇದ್ದಲ್ಲಿ ಅವರಲ್ಲಿ ಭಕ್ತಿ ಧರ್ಮಾಚರಣೆ ಜನಿಸುವುದಕ್ಕಾಗಿ ಮಾಡಬೇಕಾದ ಧರ್ಮಕಾರ್ಯಗಳನ್ನು ಮಾಡದಿರುವುದೇ ಅನಾವೃಷ್ಟಿಯಂತಹ ಅನಿಷ್ಟಗಳಿಗೆ ಕಾರಣವೆಂದು ಶಾಸ್ತ್ರದಲ್ಲಿ ಹೇಳುತ್ತದೆ.

ಒಮ್ಮೆ ಮುದಿಗೇಡಿನಿಂದ, ಸಿದ್ದಲಯ್ಯ ಬೆಟ್ಟಕ್ಕೆ ಸ್ವಾಮಿಯವರನ್ನು, ಅವರ ಸೇವಕರು, 2 ಎತ್ತಿನ ಗಾಡಿಯಲ್ಲಿ ಕೂರಿಸಿಕೊಂಡು ಹೋಗುತ್ತಿದ್ದರು. ಮಧ್ಯ ರಸ್ತೆಯಲ್ಲಿ ಕರಿಮೋಡ ಕವಿದು, ಸಣ್ಣಗೆ ಮಳೆ ಹನಿ ಪ್ರಾರಂಭವಾಯಿತು. ಆಗ ಸೇವಕರು, "ಸ್ವಾಮಿ ದೊಡ್ಡದಾಗಿ ಮಳೆ ಬರುತ್ತದೆ, ನಾವುಗಳು, ಸಾಮಾನುಗಳು ಎಲ್ಲಾ ಮಳೆಯಲ್ಲಿ ನೆನೆದು ಬಿಡುತ್ತೇವೆ" ಎಂದು ವಿನಯವಾಗಿ ಹೇಳಿದರು. ಶ್ರೀ ಸ್ವಾಮಿಯವರು ಮೌನ ವಹಿಸಿ, ತಮ್ಮ ಅಂಗೈಯನ್ನ ಆಕಾಶದ ಕಡೆ ತೋರಿಸುತ್ತಾ, ಸ್ವಲ್ಪ ನಿಲ್ಲು ಎನ್ನುವಂತೆ ಕೈಯನ್ನು ಮೇಲೆತ್ತಿ ಸ್ವಲ್ಪ ಹೊತ್ತು ಹಾಗೇ ಇಟ್ಟಿದ್ದರು – ಮಳೆ ನಿಂತು ಹೋಯಿತು!! ಶ್ರೀ ಸ್ವಾಮಿಯವರು ಸಿದ್ದಲಯ್ಯ ಬೆಟ್ಟವನ್ನು ಸೇರಿದ ಮರುಕ್ಷಣ ಜೋರಾದ ಮಳೆ ಪ್ರಾರಂಭವಾಯಿತು. ಈ ರೀತಿಯ ಲೀಲೆಗಳನ್ನು ಭಕ್ತರು ಪ್ರತ್ಯಕ್ಷವಾಗಿ ನೋಡಿದ್ದರಿಂದಲೇ, ಎಷ್ಟೇ ಕಷ್ಟ ಬಂದರೂ ಸಹಿಸಿ ನಿರಂತರವಾಗಿ ತಿರುಗುತ್ತಿದ್ದ ಸ್ವಾಮಿಯವರನ್ನು ಹಗಲು ರಾತ್ರಿ ಸೇವೆ ಮಾಡಿ ಧನ್ಯರಾದರು.

ತಲಪೂರಿನಲ್ಲಿ "ಡಿ" ಮೈನು ಅನ್ನುವ ಒಂದು ಮೈಕಾ ಗಣಿ ಇದೆ. ಸ್ವಾಮಿಯವರು ಅಲ್ಲಿದ್ದಾಗ ಮೋಡ ಬಂದು ಮಳೆಯ ವಾಸನೆ ತುಂಬಾ ಜೋರಾಗಿ ಬರುತ್ತಿತ್ತು. "ಸ್ವಾಮಿ, ಮಳೆ ಬಂದು ಬಿಡುತ್ತೆ, ನಮ್ಮ ಸಾಮಾನೆಲ್ಲಾ ನೆಂದು ಹೋಗುತ್ತದೆ ಇಲ್ಲಿ ಮನೆಯೂ ಇಲ್ಲ" ಎಂದರು ಸೇವಕರು. ಸ್ವಾಮಿಯವರು, ತಂಬೂರಿ ಮೀಟುತ್ತಾ ಸ್ವಲ್ಪ ಹೊತ್ತಾದ ಮೇಲೆ

"ಏಮೀ ವೀರರಾಘವುಲೂ? ಮೇಮು ಇಚ್ಚಟ ಉಂಡಾಮನಿ ತೆಲಿಯದಾ? ಮಾಸಾಮಾನು ಮೇಮು ಏಮೈಪೋವಾಲಿ? ಏಮಿಟಯ್ಯಾ? ನೀ ಇಷ್ಟಂ ವಚ್ಚಿನಟ್ಲುಂದೇ! ಮೇಮೇಂಕಾವಾಲಿ? ಮಾ ಮನುಷುಲೇಂ ಕಾವಾಲನಿ ಇಟ್ಲಾ ಚೇಸ್ತುನ್ನಾವು" (ಏನು ವೀರರಾಘವಾ? ನಾವು ಇಲ್ಲಿರುತ್ತೇವೆಂದು ತಿಳಿಯದೇ? ನಮ್ಮ ಸಾಮಾನು, ನಾವು, ಏನಾಗಬೇಕಯ್ಯಾ? ನಿನ್ನ ಇಷ್ಟ ಬಂದಹಾಗೆ ಮಾಡುತ್ತೀಯಾ? ನಾವೇನಾಗಬೇಕು, ನಮ್ಮ ಜನ ಏನಾಗಬೇಕೆಂದು ಹೀಗೆ ಮಾಡುತ್ತಿದ್ದೀಯ?) ಎಂದು ಒತ್ತಿ ಕೇಳಿದರು. 5 ನಿಮಿಷಗಳಲ್ಲಿ ಮೋಡಗಳು ತೆರಳಿದವು ಮತ್ತೆ ಸೂರ್ಯ ಸ್ಪಷ್ಟವಾಗಿ ಕಾಣಿಸಿಕೊಂಡನು. ಹೀಗೆಯೇ ಶಿರಿಡಿಯಲ್ಲಿ ಒಮ್ಮೆ ಗಾಳಿ, ಮಳೆ ಪ್ರಾರಂಭವಾದಾಗ, ಭಕ್ತರು ತಮ್ಮ ಮನೆ ಸೇರುವುದು ಹೇಗೆಂದು ಚಿಂತಿಸುತ್ತಿದ್ದಾಗ, ಸಾಯಿ ಬಾಬರವರು ಮಸೀದಿಯಿಂದ ಹೊರಗೆ ಬಂದು, "ಓ ಅಲ್ಲಾ! ನನ್ನ ಮಕ್ಕಳು ಕ್ಷೇಮವಾಗಿ ಬೇಗ ಮನೆ ಸೇರಬೇಕು ಮಳೆ ಇನ್ನು ನಿಲ್ಲಿಸು" ಎಂದು ಹೇಳಿದ ತಕ್ಷಣವೇ, ಮಳೆನಿಂತು ಹೋಯಿತು.

ಒಮ್ಮೆ ಮದ್ರಾಸ್ ರಾಜ್ಯದಿಂದ ಕೆಲವು ಭಕ್ತರು ಬಂದು "2 ವರ್ಷದಿಂದ ಆ ಪ್ರಾಂತದಲ್ಲಿ ಮಳೆ ಬಂದಿಲ್ಲ" ಎಂದು ಸ್ವಾಮಿಯವರಿಗೆ ಹೇಳಿದರು. "ಭಗವಂತುನಿಕಿ ಅರ್ಜಿ ವ್ರಾಯಂಡಯ್ಯಾ" (ಭಗವಂತನಿಗೆ ಅರ್ಜಿ ಬರೆದು ಕೊಡಿ) ಎಂದು ಹೇಳಿ ಅರ್ಜಿ ಒಂದು ಹಾಮಿ ಪತ್ರದಲ್ಲಿ ಬರೆಯಿಸಿ, ಅದನ್ನು ತಮ್ಮ ತೊಡೆಯ ಕೆಳಗೆ ಇಟ್ಟುಕೊಂಡರು. 5 ದಿನಗಳು ಅನ್ನ ಪಾನೀಯ ಇಲ್ಲದೆ, ನಿದ್ರೆ ಮಾಡದೇ, ಹಾಗೇ ಕುಳಿತಿದ್ದರು. 5 ನೇದಿನ, ಆ ಪ್ರಾಂತದಲ್ಲಿ ಮಳೆಬಂದು 1/2 ಘಂಟೆಯೊಳಗೆ ಕೆರೆಗಳು ತುಂಬಿ ಹೋದವು. ಕೆರೆಗಳು ತುಂಬಿದ ನಂತರವೇ, ಸ್ವಾಮಿಯವರು ಗಂಜಿ ಕುಡಿದರು.

ಕಲಿಚೇಡು ಸಿದ್ದುಲಯ್ಯ ಬೆಟ್ಟದ ಹತ್ತಿರ ಸ್ವಾಮಿಯವರು ಇದ್ದರು. ಕಟ್ಟುಮೂಡಿಪಲ್ಲೆಂ ನಲ್ಲಿ ಮಳೆ ಇಲ್ಲದೇ ನಾಟಿದ ಪೈರು ಒಣಗಿ ಹೋಗುತ್ತಿದ್ದವು. ರೈತರು ಬಂದು ಸ್ವಾಮಿಯವರ ಮೊರೆಹೊಕ್ಕರು. "ದೇವುನಿಕಿ ಅರ್ಜಿಪೆಟ್ಟುತಾಮಯ್ಯಾ! ರೇಪು ಮಧ್ಯಾಹ್ನಂಕು ರೆಂಡು ಪದುನುಲ ವರ್ಷಂ ಕುರಿಸ್ತುಂದಿ" (ದೇವರಿಗೆ ಅರ್ಜಿ ಹಾಕುತ್ತೇವೆ, ನಾಳೆ ಮಧ್ಯಾಹ್ನದ ಹೊತ್ತಿಗೆ ಮಳೆ ಬರುತ್ತದೆ) ಎಂದು ಖಾತರಿ ಪತ್ರೆ ಬರೆಸಿ, ಆಶೀರ್ವಾದದ ಮುದ್ರೆ ಹಾಕಿ ರೈತರಿಗೆ ಕೊಟ್ಟರು. ಬೆಳಗಾಗುತ್ತಲೆ ಮಳೆ ಬಂದು ಕೆರೆಗಳು ತುಂಬಿದವು, 3ನೇ ದಿನದಿಂದ ರೈತರು ನಾಟಿ ಹಾಕಲು ಆರಂಭಿಸಿದರು. ಆ ಗ್ರಾಮದವರೆಲ್ಲಾ ಸ್ವಾಮಿಯವರ ಶಕ್ತಿ ಸಾಮರ್ಥ್ಯಗಳನ್ನು ಪ್ರಶಂಸಿದರು.

ತಲಪೂರಿನಲ್ಲಿ ಒಮ್ಮೆ ಮಧ್ಯಾಹ್ನದ ವೇಳೆ, 'ತಾಟಿಬೊಲುಗು' ಎಂಬ ವಿಷ ಸರ್ಪ ಸ್ವಾಮಿಯವರ ತೊಡೆ ಕೆಳಗೆ ಬಂದಿತು. ಆ ವಿಚಾರ ಸ್ವಾಮಿಯವರಿಗೆ ಹೇಳಿದಾಗ, "ಅದೇಮಿ ಚೇಸ್ತುಂದಿಲೇ? ದಾನಿನಿ ಮೀರೇಮೀ ಚೇಯವದ್ದು" (ಅದೇನು ಮಾಡುತ್ತದೆ? ಅದಕ್ಕೆ ನೀವೇನೂ ಮಾಡ ಬೇಡಿ) ಎಂದರು ಸ್ವಾಮಿಯವರು. ಆಮೇಲೆ, ಅದರ ಪಾಡಿಗೆ ಅದು ಹೊರಟು ಹೋಯಿತು.

1974 ರಲ್ಲಿ ಅತ್ಯಂತ ತೀವ್ರವಾದ ಬೇಸಿಗೆ ಕಾಲ ಇತ್ತು. ಆ ಸಮಯದಲ್ಲಿ ಒಮ್ಮೆ ಗೊಲಗಮೂಡಿ ಆಶ್ರಮದ ಸುತ್ತಲೂ ಬೆಂಕಿ ಕವಿದು ಎಲ್ಲಾಕಡೆ ಹರಡುತ್ತಾ, ದಟ್ಟವಾದ

ಹೊಗೆ ಆಕಾಶದ ಎತ್ತರಕ್ಕೆ ಎದ್ದಿತು. ಪಶ್ಚಿಮ ದಿಂದ ಗಾಳಿ ಜೋರಾಗಿ ಬೀಸುತ್ತಿತ್ತು. ಹತ್ತಿರ ದಲ್ಲಿ ಎಲ್ಲಿಯೂ ಆ ಉರಿಯನ್ನು ಆರಿಸಲು ಬೇಕಾದಷ್ಟು ನೀರು ಇರಲಿಲ್ಲ. ರಮಣಯ್ಯ ಎಂಬ ಒಬ್ಬ ಶಿಷ್ಯ, ಸ್ವಾಮಿಯವರಿಗೆ ನಮಸ್ಕರಿಸಿ, ಏಣಿಯ ಸಹಾಯದಿಂದ ಮನೆಯ ಮೇಲೆ ಹೋಗಿ, ಚಿಕ್ಕ ಮಡಿಕೆಯಲ್ಲಿ ನೀರು ತೆಗೆದುಕೊಂಡು, ಆ ಉರಿಯ ಮೇಲೆ ಚುಮುಕಿಸಿದ. ಫೈರ್ ಇಂಜಿನ್ ಕೂಡ ಆರಿಸಲಾಗದ ಆ ಉರಿ ರಮಣಯ್ಯ ನೀರು ಚುಮುಕಿಸಿದ ಕೂಡಲೇ ಆರಿ ಹೋಯಿತು.

ಒಂದು ದಿನ ಸ್ವಾಮಿಯವರು ಕಲಿಚೇಡಿನಲ್ಲಿ ನರಸಾರೆಡ್ಡಿಯವರ ಮನೆಗೆ ಬಂದರು. ನರಸಾರೆಡ್ಡಿಯವರ ಪತ್ನಿ ಈಶ್ವರಮ್ಮ ಅಡುಗೆ ಮಾಡುತ್ತಿದ್ದ ಜಾಗಕ್ಕೆ ಹೋಗಿ, ಅದರ ಮೇಲೆ ಒಂದು ರೇಕು (metal sheet) ಹಾಕಿಸು ಎಂದರು. "ಆರ್ಥಿಕವಾಗಿ ಅಶಕ್ತನಾಗಿದ್ದೇನೆ ನಾನು, ನಿಮಗೆ ತಿಳಿಯದಿರುವುದು ಏನಿದೆ ಸ್ವಾಮಿ?" ಎಂದಳು ಆಕೆ. ಆಗ ಸ್ವಾಮಿಯವರು "ವಾಳ್ಳೇ ಚೂಸುಕುಂಟರುಲೇ" (ಅವರೇ ನೋಡಿಕೊಳ್ಳುತ್ತಾರೆ) ಎಂದು ಹೇಳಿದರು. 5 ದಿನಗಳಾದ ನಂತರ, ಆಕೆ ಸಜ್ಜೆಯ ವಡೆ ಮಾಡುತಿದ್ದರು. ಬಾಣಲೆಯಲ್ಲಿ ತೂತು ಇದ್ದರಿಂದ, ಎಣ್ಣೆ ಒಲೆಯಲ್ಲಿ ಸೋರಿತು. ಆಕೆ ತಕ್ಷಣ ಒಳಗಿಂದ ಒಂದು ದೊಡ್ಡ ಪಾತ್ರೆ ತಂದು ಮಿಕ್ಕ ಎಣ್ಣೆಯನ್ನು ಅದರ ಒಳಗೆ ಸುರಿದರು. ಅದರ ನಂತರ ಆಕೆಗೆ ಒಂದು ಆಶ್ಚರ್ಯವಾದ ವಿಷಯ ಹೊಳೆಯಿತು - "ಅಷ್ಟು ಎಣ್ಣೆ ಒಲೆ ಒಳಗೆ ಬಿದ್ದರೆ, ಉರಿ ತುಂಬಾ ಮೇಲೆ ಹೋಗಿ ಜಗುಲಿ ಮತ್ತು ಮನೆಯೆಲ್ಲಾ ಸುಟ್ಟು ಬಿಟ್ಟು ದೊಡ್ಡ ಪ್ರಮಾದ ಆಗ ಬೇಕಾಗಿತ್ತು ಅಲ್ಲವೇ?" ಆದರೆ, ಹಾಗಾಗಲಿಲ್ಲ! ಆಕೆ ಪಾತ್ರೆ ತಂದು ಎಣ್ಣೆ ಸುರಿಯುವ ವರೆಗೆ ಉರಿ ಮೇಲೆ ಹೋಗದೇ ಪ್ರಮಾದ ಆಗದೇ ಇದ್ದದ್ದು ಕೇವಲ ಸ್ವಾಮಿಯವರ ಕೃಪೆ! ಆದಿನ ಸ್ವಾಮಿಯವರು ಜಗುಲಿಯಮೇಲೆ ಶೀಟು ಹಾಕಿಸು ಎಂದು ಹೇಳಿ, ಮತ್ತು "ಅವರೇ ನೋಡಿಕೊಳ್ಳುತ್ತಾರೆಂದು" ಅಭಯ ಕೊಟ್ಟಿದ್ದರಿಂದ, ದೊಡ್ಡ ಪ್ರಮಾದ ತಪ್ಪಿತು ಎಂದು ಆಕೆ ಗುರುತಿಸಿದರು.

ಬೋಯಿನಪಳ್ಳಿ" ಎಂಬ ಒಂದು ಹಳ್ಳಿಯ ಹತ್ತಿರ ಕೆಲವು ಭಕ್ತರು "ಗೋವಿಂದಮ್ಮನವರು (ಬ್ರಹ್ಮಂಯವರ ಪತ್ನಿ) ನೀರಿನ ದೀಪ ಬೆಳಗಿದರು. ಅವರು ಎಂತಹ ಪವಾಡವನ್ನು ಮಾಡಿದರು" ಎಂದು ಆಶ್ಚರ್ಯ ಪಡುತ್ತಿದ್ದಾಗ, ಸ್ವಾಮಿಯವರು ಒಂದು ಚೊಂಬು ನೀರು ತರಿಸಿ, ಆ ಭಕ್ತರಿಗೆ ಕೊಟ್ಟು, "ನೀವು ದೀಪವನ್ನು ಬೆಳಗಿಸಿ" ಎಂದರು. ಅನಂತರ ಆ ನೀರನ್ನು ಉಪಯೋಗಿಸಿ ಅವರು ಕೂಡ ದೀಪ ಹಚ್ಚಿದಾಗ, ದೀಪ ಉರಿಯಲು ಆರಂಭವಾಯಿತು. ಸ್ವಾಮಿಯವರು ಅವರ ಜೀವಿತಾವಧಿಯಲ್ಲಿ ಇಂತಹ ವಿಶೇಷಗಳು ಹೊರಗೆ ಹೇಳಿದರೆ, ಸ್ವಾಮಿಯವರು ತಮ್ಮ ಒಪ್ಪಿಗೆ ನೀಡದೆ, ಅದನ್ನು ಗುಟ್ಟಾಗಿ ಇಡಬೇಕೆಂದು ಆದೇಶಿಸುತ್ತಿದ್ದರು.

ಪೆನವರ್ತಿಯ ನಿವಾಸಿ ಪೋಲು ಮಸ್ತಾನಯ್ಯ ಹೀಗೆ ಹೇಳಿದರು. "ಒಮ್ಮೆ ಪೆನವರ್ತಿಯಿಂದ ತಲುಪೂರಿಗೆ ನಾರಾಯಣ ರೆಡ್ಡಿಯವರ ಕಾರಿನಲ್ಲಿ ಹೋಗುತ್ತಿದ್ದಾಗ, ಸ್ವಾಮಿಯವರು, "ಅಯ್ಯಾ ಗೊಂತು ಕೋಯ ವಲಸಿ ವಸ್ತುಂದೇ" (ಅಪ್ಪಾ ಕತ್ತು ಕತ್ತರಿಸ ಬೇಕಾಗಿ ಬರುತ್ತದೆ) ಎಂದರು. ಸ್ವಲ್ಪ ಸಮಯ ನಂತರ ಇದ್ದಕಿದ್ದಂತೆ ಸ್ವಾಮಿಯವರು

ಜೋರಾದ ಕೂಗಿಗೆ, ಬ್ರೇಕ್ ಹಾಕದೇ ಕಾರು ನಿಂತುಹೋಯಿತು. ತಕ್ಷಣ ಒಂದು ಮೇಕೆ ಕಾರು ಮುಂದಿನಿಂದ ಹಾರಿ ರಸ್ತೆಗೆ ಅಡ್ಡವಾಗಿ ಓಡಿ ಹೋಯಿತು. ಆಕ್ಷಣ, ಕಾರು ನಿಲ್ಲದೆ ಹೋಗಿದ್ದರೆ, ಅದರ ಕತ್ತು ಕತ್ತರಿಸಿದಂತಹ ಕೆಲಸವೇ ಆಗುತ್ತಿತ್ತು. ಅಲ್ಲಿಯ ವರೆಗೆ ಸ್ವಾಮಿಯವರಲ್ಲಿ, ನಂಬಿಕೆ, ಭಕ್ತಿ ಮತ್ತು ಲಕ್ಷ್ಯವಿಲ್ಲದ ನಾನು ಈ ಘಟನೆಯಿಂದ ಅವರ ಭಕ್ತನಾದೆ.

ಒಂದು ರಾತ್ರಿ ರೋಶಿ ರೆಡ್ಡಿ ಚಪ್ಪರಕ್ಕೆ ಸಿಕ್ಕಿಕೊಂಡಿದ್ದ ಕಾಗದಗಳನ್ನು ತೆಗೆಯಲು ಹೋದರು. ಆತನ ತೋರು ಬೆರಳನ್ನು (fore finger) ಹಾವು ಕಚ್ಚಿಬಿಟ್ಟಿತು. ಸ್ವಾಮಿಯವರು ಆ ಬೆರಳನ್ನು ತಮ್ಮ ತೊಡೆಯ ಮೇಲಿಟ್ಟುಕೊಂಡು ತಮ್ಮ ಅಂಗೈಯಲ್ಲಿ 5 ನಿಮಿಷ ಅದುಮಿ ಇಟ್ಟು ಕೊಂಡಿದ್ದರು. ನೋವು ಪೂರ್ತಿಯಾಗಿ ಕಡಿಮೆ ಆಯಿತು. "ನೀ ವಳ್ಳು ಸಂಜೀವಿನಿ ಅಯ್ಯಿಂದಿ ಪೊ!" (ನಿನ್ನ ಶರೀರ ಸಂಜೀವಿನಿ ಆಗಿದೆ) ಹೋಗು ಎಂದರು. ಆಮೇಲೆ ರೋಶಿ ರೆಡ್ಡಿಯವರನ್ನು, ಯಾವ ವಿಷ ಪ್ರಾಣಿ ಕಚ್ಚಿದರೂ ವಿಷ ಏರುತ್ತಿರಲಿಲ್ಲ.

ಒಮ್ಮೆ ಯಾರ್ಲಪಾಡು ಎಂಬ ಹಳ್ಳಿಯಲ್ಲಿ ಜನಗಳು ನಿಷ್ಕಾರಣವಾಗಿ ಮರಣಿಸುತ್ತಿದ್ದರು. ಕಾರಣ ತಿಳಿಯದೇ ಭಯ ಪಡುತ್ತಿದ್ದರು. ಯಾವುದೋ ಒಂದು ದುಷ್ಟ ಶಕ್ತಿ ಊರಿಗೆ ಬಂದು ಹೀಗೆ ತೊಂದರೆ ಕೊಡುತ್ತಿದೆ ಎಂದುಕೊಂಡರು. ಊರಿನವರೆಲ್ಲಾ ಮನೆಯ ಹೊರಗೆ ಬರುವ ಧೈರ್ಯವಿಲ್ಲದೆ, ಬಾಗಿಲು ಹಾಕಿ ಕೊಂಡು ಮನೆಯ ಒಳಗೇ ಇರುತ್ತಿದ್ದರು. ಕೆಲವರು, ಶ್ರೀಸ್ವಾಮಿಯವರನ್ನ ಪದೇಪದೇ ಪ್ರಾರ್ಥಿಸಿ ತಮ್ಮ ಹಳ್ಳಿಗೆ ಕರೆದುಕೊಂಡುಹೋದರು. ಆ ಹಳ್ಳಿ ಸೇರುವ ಹೊತ್ತಿಗೆ ರಾತ್ರಿಯಾಗಿತ್ತು. ಯಾರ ಮನೆ ಬಾಗಿಲು ತಟ್ಟಿದರೂ ದುಷ್ಟಶಕ್ತಿ ಎಂದು ಭಾವಿಸಿ ಬಾಗಿಲು ತೆಗೆಯಲಿಲ್ಲ. ಕಡೆಗೆ ಒಬ್ಬ ವಯಸ್ಸಾದ ಹೆಂಗಸು ಬಾಗಿಲು ತೆಗೆದರು. ಸ್ವಾಮಿಯವರನ್ನು ನೋಡಿ ಎಲ್ಲರಿಗೂ "ಸ್ವಾಮಿಯವರೇ ಬಂದರು" ಎಂದು ಹೇಳಿದರು. ಅದರ ನಂತರ ಎಲ್ಲರೂ ಹೊರಗೆ ಬಂದು ಸ್ವಾಮಿಯವರನ್ನು ಸ್ವಾಗತಿಸಿದರು. ಆಗ ಸ್ವಾಮಿಯವರು ಆ ಊರಿನ ಜನರನ್ನು ಕರುಣಿಸಿ, ಆ ಊರಿನಲ್ಲೇ ಒಂದು ಜಾಗದಲ್ಲಿ ಅಗ್ನಿಕುಂಡ ಸ್ಥಾಪಿಸಿ ಸ್ವಲ್ಪ ದಿನ ಅಲ್ಲೇ ಇದ್ದರು. ಆಮೇಲೆ, ಆ ಊರಿನಲ್ಲಿ ಒಬ್ಬ ವ್ಯಕ್ತಿಯೂ ಮರಣಿಸಲಿಲ್ಲ.

ಮೋಪೂರು ದಶಯ್ಯ, ಕೊಮರಗಿರಿ ರಮಣಯ್ಯ ಜಮ್ಮಿ ಮರದ ಕಾಂಡವನ್ನು ಕಡಿದರು. ಅದನ್ನು 2 ಎತ್ತಿನ ಗಾಡಿಯ ಕೆಳಗೆ ಕಟ್ಟಿಕೊಂಡು ಬರಬೇಕಾಗಿತ್ತು. ಆ ಕಾಂಡವನ್ನು ಒಂದು ಪಕ್ಕಕ್ಕೆ ಕಟ್ಟಿದರು. ಇನ್ನೊಂದು ಪಕ್ಕಕ್ಕೆ ಕಟ್ಟಲು ಎಷ್ಟು ಪ್ರಯತ್ನಿಸಿದರೂ ಅದು ಭಾರಿ ತೂಕವಿದ್ದರಿಂದ ಮೇಲಕ್ಕೆ ಏಳಲೇಇಲ್ಲ. ಅಷ್ಟರಲ್ಲಿ ಸ್ವಾಮಿಯವರು ಆ ಜಾಗಕ್ಕೆ ಬಂದರು, ಇವರು ಸ್ವಾಮಿಯವರಿಗೆ ಹೇಳಿದರು. "ಪಲಾವು ತಿನೇ ವಾಳ್ಳನು ಪಿಲವಂಡಯ್ಯಾ ಲೇಸ್ತುಂದಿ" (ಪಲಾವ್ ತಿನ್ನುವವರನ್ನ ಕರೆಯಿರಿ, ಏಳುತ್ತದೆ) ಎಂದರು. ಆ ಮಾತಿನ ಅರ್ಥ ಯಾರಿಗೂ ಗೊತ್ತಿಲ್ಲ ಕೇವಲ ಸ್ವಾಮಿಯವರಿಗೇ ತಿಳಿಯಬೇಕು. ಸ್ವಾಮಿಯವರು ಹೊರಟು ಹೋದರು. ಒಂದು ಕೊನೆಯ ಬಾರಿ ಆ ಕಾಂಡವನ್ನು ಎತ್ತಲು ಪ್ರಯತ್ನಿಸಿದರು. ಅತಿ ಆಶ್ಚರ್ಯ!! ಅದು ಸುಲಭವಾಗಿ ಎದ್ದು

ಬಿಟ್ಟಿತು.

ಒಂದು ದಿನ, ಸ್ವಾಮಿಯವರ ಭಕ್ತೆ ವಕ್ಕೆಮ್ಮ ಸ್ವಾಮಿಯವರ ಸನ್ನಿಧಿಯಲ್ಲಿದ್ದರು. ಪ್ರವಾಹದಲ್ಲಿ ತೇಲಿಬಂದ ಒಂದು ಮುಳ್ಳಿನ ಬೇಲಿಯನ್ನು ಸ್ವಾಮಿಯವರು ಪೆನ್ನಾ ನದಿಯ ನೀರಿನ ಮೆಲೆ ಹಾಕಿದರು. ಆ ಬೇಲಿಯನ್ನು ತಮ್ಮ ಹತ್ತಿರ ಇರುವ ಕಪಿಲ ಹಗ್ಗಕ್ಕೆ ಅಂಟಿಸಿದ್ದ ಉರಿಯಿಂದ ಬೆಂಕಿ ಹಾಕಿದರು. ನದಿಯ ನೀರನ್ನು ತಮ್ಮ ಮಡಿಕೆಯಿಂದ ತುಂಬಿ ಆ ಉರಿಯ ಮೇಲೆ ಸುರಿಯುತ್ತಿದ್ದರು. ಆ ಉರಿ, ಆರುವ ಬದಲು, ಪ್ರಜ್ವಲವಾಗಿ ಉರಿಯುತ್ತಿತ್ತು. ಈ ರೀತಿಯ ಲೀಲೆ ಶ್ರೀ ಅಕ್ಕಲಕೋಟೆ ಸ್ವಾಮಿಯವರ ಚರಿತ್ರೆಯಲ್ಲಿ ಕೂಡ ನಮಗೆ ತಿಳಿದು ಬರುತ್ತದೆ.

ಎರುಕಲರಾಜು (ಕುಲ್ಲೂರು ರಾಜುಪಾಳೆಂ ನಿವಾಸಿ) ಅವರ ಭಾವಿಯಲ್ಲಿ ಬೇಸಿಗೆ ಕಾಲದಲ್ಲಿ ನೀರು ಇರುತ್ತಿರಲಿಲ್ಲ. ಮಳೆ ಕಾಲದಲ್ಲಿ ನೀರು ತುಂಬಿದರೂ, ಹುಳುಗಳು ಬಿದ್ದು ಕೆಟ್ಟ ವಾಸನೆ ಬರುತ್ತಿತ್ತು. ಒಮ್ಮ ಸ್ವಾಮಿಯವರು ಬಂದು ಆ ಭಾವಿಯಲ್ಲಿ ಮುಳುಗಿ ಬಂದರು. ಆ ದಿನದಿಂದ ಹುಳುಗಳು ಮತ್ತು ಕೆಟ್ಟ ವಾಸನೆ ಹೋಗಿ ನೀರು ಬಹಳ ಸ್ವಚ್ಛವಾಯಿತು.

ಒಮ್ಮೆ ಮಂಗುಪಲ್ಲೆ ಎಂಬ ಸಣ್ಣ ಹಳ್ಳಿಯಲ್ಲಿ ಕಾಲರಾ ಉಗ್ರವಾಗಿ ಹರಡಿ ಬಹಳ ಜನಗಳು ಗುಂಪು ಗುಂಪಾಗಿ ಮರಣಿಸುತ್ತಿದ್ದರು. ನದಿಯ ನೀರು ತುಂಬಿ ಹರಿಯುತ್ತಿದ್ದರಿಂದ, ಆ ಗ್ರಾಮದವರಿಗೆ ಸ್ವಾಮಿಯವರ ಹತ್ತಿರ ಬರಲು ಸಾಧ್ಯವಾಗಲಿಲ್ಲ. ಸ್ವಾಮಿಯವರು ಒಂದು ಕಾಗಡ ಹಚ್ಚಿ ಚಲಮಾ ನಾಯುಡುರವರಿಗೆ ಕೊಟ್ಟು, "ಅಟೂ ಇಟೂ ಚೂಡಕುಂಡಾ ನೀದೃಷ್ಟಿ ಕಾಗಡಪೈ ಪೆಟ್ಟಿ ನ ಡುವು" (ಅಲ್ಲಿ ಇಲ್ಲಿ ನೋಡದೆ, ನಿನ್ನ ದೃಷ್ಟಿಯನ್ನು ಕಾಗಡದ ಮೇಲೆ ಕೇಂದ್ರೀಕರಿಸಿ ನಡಿ ಎಂದರು). ಚಲಮಾ ನಾಯುಡು ಮುಂದೆ ಸ್ವಾಮಿಯವರು ಅವರ ಹಿಂದೆ ನಡೆಯುತ್ತಾ, ಆ ಗ್ರಾಮ ಸೇರಿದರು. ನದಿಯ ನೀರು, ಚಲಮಾ ನಾಯುಡುವಿನ ಮೊಣಕಾಲಿನವರೆಗೆ ಬಂದಿತು. **ಸ್ವಾಮಿಯವರು, ಆ ಊರಿನ ಹೊರ ವಲಯದಲ್ಲಿ 1 ಕೋಲು ನೆಟ್ಟರು, ಆ ಕೋಲಿಗೆ ಒಂದು ಹಾಮಿ ಪತ್ರ ಬರೆಸಿ ಅದಕ್ಕೆ ಕಟ್ಟಿ ಮರಳಿ ಬಂದರು. ಅವತ್ತಿನಿಂದ ಆ ಹಳ್ಳಿಯಲ್ಲಿ ಒಬ್ಬರೂ** 20
ಮರಣಿಸಲಿಲ್ಲ. ಸ್ವಾಮಿಯವರನ್ನು ನಂಬುವ ಜನರು ಸಹಾಯ ಕೇಳದೇ ಅವರಿಗೆ ಸ್ವಾಮಿಯವರ ರಕ್ಷಣೆ ಲಭಿಸುತ್ತದೆ ಎಂದು ಮೇಲಿನ ಲೀಲೆಯಿಂದ ಗಮನಿಸಬೇಕು.

ಸ್ವಾಮಿಯವರು ಯಾವಾಗಲೂ ಒಂದು ಮಾತು ಹೇಳುತ್ತಾರೆ, "ವೆಂಕಯ್ಯ
ಪೇರು ಮೀದ ಪೆಡಿಕೆಡನ್ನಂ ಪೆಟ್ಟಿನ ವಾರಿಕಿ, ತೆಚ್ಚಿನ ವಾರಿಕಿ, ವಾರಿ ಮಂಚಿ ಚೆಡ್ಡಲನ್ನೀ 21
ಮನಂ ಚೂಡೊದ್ದಯ್ಯಾ?" (ವೆಂಕಯ್ಯನ ಹೆಸರಿನಲ್ಲಿ ಕೈತುಂಬ ಅನ್ನ ಕೊಟ್ಟವರಿಗೆ, ತಂದವರಿಗೆ, ಅವರ ಯೋಗಕ್ಷೇಮ ನಾವು ನೋಡ ಬೇಕಲ್ಲವೇ?) ಎಂದು ಅಭಯವನ್ನು ಕೊಟ್ಟಿರುತ್ತಾರೆ. ಈ ವಿಷಯ ಶೇಷಯ್ಯ ನಾಯುಡುರವರ ವಿಚಾರದಲ್ಲಿ ಹೇಗೆ ನಿಜವಾಯಿತೋ ನೋಡೋಣ.

ಸ್ವಾಮಿಯವರು ಒಂಟಿಯಾಗಿ ಕಾಡಿನಲ್ಲಿ ತಿರುಗುತ್ತಿದ್ದ ದಿನಗಳಲ್ಲಿ, ಆಗಾಗ್ಗೆ, ಚೆರ್ಲೊಪಲ್ಲಿ ಗ್ರಾಮಸ್ಥರಾದ, ಎಸ್. ಶೇಷಯ್ಯ ನಾಯುಡುರವರ ಮನೆಗೆ ಬರುತ್ತಿದ್ದರು.

ಅರ್ಧ ರಾತ್ರಿ ಬಂದರೂ ಶೇಷಯ್ಯನವರ ತಾಯಿ ಈ ಮಹನೀಯರಿಗೆ ಹೊಟ್ಟೆ ತುಂಬ ಊಟ ಬಡಿಸುತ್ತಿದ್ದರು.

1976 ರಲ್ಲಿ ಚೆರ್ಲೊಪಲ್ಲಿ ಶೇಷಯ್ಯ ನಾಯುಡುರವರು ರಸ್ತೆಯಲ್ಲಿ ಬರುತ್ತಿದ್ದಾಗ ಸ್ವಾಮಿಯವರು ಅವರನ್ನು ಕರೆದು "ನೀಕು ಒಕ ಸಂವತ್ಸರಂ ನಾಲುಗು ನೆಲಲ ಆರು ರೋಜುಲಕು ಒಕ ಗಂಡಂ ಉಂದಿ. ತಿರುವಳ್ಳೂರು ವೀರ ರಾಘವಸ್ವಾಮಿ ತಪ್ಪಿಸ್ತಾರು" (ನಿನಗೆ ಒಂದು ವರ್ಷ 4 ತಿಂಗಳು 6 ದಿನಗಳಿಗೆ ಒಂದು ದೊಡ್ಡ ಗಂಡಾಂತರ ಇದೆ, ತಿರುವಳ್ಳೂರು ವೀರ ರಾಘವಸ್ವಾಮಿ ತಪ್ಪಿಸುತ್ತಾರೆ) ಎಂದು ಒಂದು ಹಾಮಿ ಪತ್ರ ಬರೆಸಿ ಕೊಟ್ಟರು. ಸ್ವಲ್ಪ ದಿನಗಳಾದಮೇಲೆ ಅವರು ತಮ್ಮ ಭತ್ತದ ಹೊಲ ದಲ್ಲಿ, ಮಡಿಗಳ ತುಂಬಾ ನೀರು ತುಂಬಿಸಿ ಉಳುವುದಕ್ಕೆ ನೇಗಿಲಿಗೆ ಎತ್ತುಗಳನ್ನು ಕಟ್ಟಿ, ಊಳಿಗೆ ಪ್ರಾರಂಭಿಸಿದ ತಕ್ಷಣ, ಒಂದು ಎತ್ತು ನೀರಿನಲ್ಲಿ ಬಿದ್ದು ಒದ್ದಾಡುತ್ತಿತ್ತು. ಆತುರದಿಂದ ನೀರಿನಲ್ಲಿ ಇಳಿದ ನಾಯುಡುರವರಿಗೆ, ಕಾಲಿಗೆ ಮುಳ್ಳು ಚಿಚ್ಚಿದಂತೆ ಆಯಿತು. ಆದರೆ ಅದನ್ನ ಲೆಕ್ಕ ಮಾಡದೆ, ಎತ್ತನ್ನು ಪಕ್ಕಕ್ಕೆ ಎಳೆಯುತ್ತಿದ್ದಾಗ, ಹೊಲದಲ್ಲಿ ಕರೆಂಟ್ ಪ್ರವಹಿಸುತ್ತಿರುವುದು ತಿಳಿಯಿತು. ತಕ್ಷಣ ಕೂಗಿ ಮೆಯಿನ್ ಆಫ್ ಮಾಡಿಸಿದರು. ಒಂದು ಎತ್ತು ಮರಣಿಸಿತು, ಇನ್ನೊಂದು ಎತ್ತು ಪ್ರಮಾದದಿಂದ ತಪ್ಪಿಸಿಕೊಂಡಿತು. ನಾಯುಡುರವರು ಕೂಡ ಪ್ರಮಾದ ತಪ್ಪಿಸಿಕೊಂಡಿದರು. ಎತ್ತಿನ ಮರಣಕ್ಕೆ ಕಾರಣ ತಿಳಿಯದೇ, ಕರೆಂಟ್ ಆನ್ ಮಾಡಿ, ಟೆಸ್ಟರ್ ನಿಂದ ಟೆಸ್ಟ್ ಮಾಡಿದರೆ, ಹೊಲದಲ್ಲೆಲ್ಲಾ ಕರೆಂಟ್ ಪ್ರವಹಿಸುತ್ತಿತ್ತು. ಆಗ ಅವರಿಗೆ ಸ್ವಾಮಿಯವರು ಹಿಂದೆ ಬರೆಯಿಸಿಕೊಟ್ಟ ಹಾಮಿ ಪತ್ರದ ನೆನಪಾಯಿತು. ಆ ಹಾಮಿ ಪತ್ರವನ್ನು ಹುಡುಕಿ ನೋಡಿದರೆ, ಸರಿಯಾಗಿ ಒಂದು ವರ್ಷ, 4 ತಿಂಗಳು 6 ದಿನಗಳ ಗಂಡಾಂತರ ಈ ದಿನವೇ. ಆ ಮರಣ ಗಂಡದಿಂದ ಸ್ವಾಮಿಯವರ ಕೃಪೆಯಿಂದಲೇ ತಪ್ಪಿತೆಂದು ನಾಯುಡುರವರು ತಿಳಿದುಕೊಂಡರು.

22 **ಶ್ರೀಸ್ವಾಮಿಯವರು, ಅಣಿಮ ಸಿದ್ಧಿ ಮತ್ತು ಮಿಕ್ಕ ಅಷ್ಟ ಸಿದ್ಧಿಗಳು ಅವರ ನಿಯಂತ್ರಣದಲ್ಲಿದ್ದವು, ಉದಾಹರಣೆ:**

ಒಮ್ಮೆ ಪಾಲಕೊಂಡ ಸುಬ್ಬಾರೆಡ್ಡಿ ಚಾಕಲಿಗುಂಟ ಎಂಬ ಒಂದು ಜಾಗದಲ್ಲಿ ಜಮ್ಮಿ ವೃಕ್ಷವನ್ನು ಕಡಿದು ಹಾಕಿದರು. ಆ ದಿನಗಳಲ್ಲಿ ಸ್ವಾಮಿಯವರು ನಡೆದಾಡುತ್ತಿದ್ದರು. ಸ್ವಾಮಿಯವರು, "ಮನಂ ವೆಂಟನೇ ವೆಳ್ಳಾಲಿ, ಮಾನು ಎತ್ತುಕೊಂಡಿ" (ನಾವು ತಕ್ಷಣವೇ ಹೊರಡಬೇಕು, ತೊಲೆ ಎತ್ತಿಕೊಳ್ಳಿ) ಎಂದರು. ಆ ತೊಲೆ ತುಂಬಾ ಭಾರವಾಗಿತ್ತು, ಸ್ವಾಮಿಯವರು ಹೇಳಿದರೆಂದು, ಪ್ರಾಣ ಬಿಗಿ ಹಿಡಿದು, ಸುಬ್ಬಾರೆಡ್ಡಿ ಹೇಗೋ ತಲೆಯ ಮೇಲಿಟ್ಟುಕೊಂಡರು. ಆದರೆ ಆ ತೊಲೆ, ಇವನು ಕುಸಿದು ಬೀಳುವಷ್ಟು ಭಾರವಿತ್ತು. 4 ಅಡಿ ನಡೆದ ಮೇಲೆ ಸ್ವಾಮಿಯವರು "ಬರುವುಗಾ ವುಂದಯ್ಯಾ? ಆಡ ವೇಯಿ" (ಭಾರವಾಗಿದೆಯ ಅಪ್ಪಾ! ಅಲ್ಲಿ ಹಾಕು) ಎಂದರು. "ಬದುಕಿದೆಯಾ ಬಡಜೀವವೇ" ಎಂದುಕೊಳ್ಳುತ್ತಾ ಆ ತೊಲೆಯನು ಕೆಳಗೆ ಹಾಕಿದರು. ಸ್ವಾಮಿಯವರು ತಮ್ಮ ಕೈಲಿದ್ದ ಕೋಲಿನಿಂದ, ಆ ತೊಲೆಯನ್ನು, ಆಕಡೆ, ಈಕಡೆ ಚುಚ್ಚಿದರು. "ಇಪ್ಪುಡು ಎತ್ತುಕೋ" (ಈಗ ಎತ್ತಿಕೋ) ಎಂದರು. ಆಗ ಆ ತೊಲೆಯನ್ನು ಎತ್ತಿಕೊಂಡರೆ ನಿಜವಾಗಿಯೂ ತುಂಬಾ

ಹಗುರವಾಗಿತ್ತು. ಸ್ವಾಮಿಯವರು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡ ಬಲ್ಲರು ಎಂದು ಮನಸ್ಸಿನಲ್ಲೆ ಅಂದುಕೊಂಡರು ಸುಬ್ಬಾ ರೆಡ್ಡಿ.

ನರಸಾಪುರಂನಲ್ಲಿದ್ದ ರೈತನೊಬ್ಬ ತನ್ನ ಹೊಲದಲ್ಲಿ ಒಂದು ಬಾವಿ ಅಗೆದ, ಎಷ್ಟು ಆಳ ಅಗೆದರೂ ಬಾವಿಯಲ್ಲಿ ನೀರು ಬರಲಿಲ್ಲ. ಆಗ, ಅವನು ಸ್ವಾಮಿಯವರಿಗೆ ಶರಣು ಹೋದ. ಸ್ವಾಮಿಯವರು ಆ ಬಾವಿಯಲ್ಲಿ ತೆಂಗಿನಕಾಯಿ ಒಡೆದು, ಸ್ವಲ್ಪ ಅಗೆದು ಮೇಲೆ ಬಂದುಬಿಟ್ಟರು ಬೆಳಗಾಗುವ ಹೊತ್ತಿಗೆ ಬಾವಿಯ ತುಂಬಾ ನೀರು ಬಂದಿತ್ತು. ಈ ವಿಚಿತ್ರವನ್ನು ನೋಡಿದ ಊರ ಜನರೆಲ್ಲಾ ಆಶ್ಚರ್ಯದಿಂದ ಸ್ವಾಮಿಯವರನ್ನು ಪ್ರಶಂಸಿದರು.

ನಾಗುಲವೆಲ್ಲಟ್ಟುರು ನಿವಾಸಿ ನೂತೇಟಿ ಶ್ರೀರಾಮುಲು ನಾಯುಡು ತಮ್ಮ ಹೊಲದಲ್ಲಿ ಭಾವಿ ತೋಡಿಸುತ್ತಿದ್ದರು. 18 ಅಡಿ ತೋಡಿದಮೇಲೆ ದೊಡ್ಡಬಂಡೆ ಅಡ್ಡ ಬಂದು ಕೆಲಸ ಮುಂದುವರೆಯಲಿಲ್ಲ. ಆ ಪ್ರಾಂತ್ಯದಲ್ಲಿ 30 ಅಡಿ ಅಗೆದ ಮಾತ್ರವೇ ನೀರು ಬರುತ್ತಿತ್ತು. ನಾಯುಡುರವರು ಸ್ವಾಮಿಯವರನ್ನ ಪ್ರಾರ್ಥಿಸಿಕೊಂಡರು. "ನಾಲುಗು ರೋಜುಲು ನಿಂಡು ಕುಂಡ ಅನ್ನಂ ಚೇಸಿ ಕೊಂಚೆಂ ಬಾವಿಲೋವೇಸಿ, ನಾಲುಗು ರೋಜುಲು ಪನಿ ಆಪಿ, ಅವತಲ ಏಮೌತುಂದೋ ಚೂಡು" (4 ದಿನ ಪಾತ್ರೆಯ ತುಂಬ ಮಾಡಿದ ಅನ್ನ ಸ್ವಲ್ಪ ತೆಗೆದು ಭಾವಿಯಲ್ಲಿ ಹಾಕಿ, ಆಮೇಲೆ 4 ದಿನ ಕೆಲಸ ನಿಲ್ಲಿಸಿ ಆಮೇಲೆ ಏನಾಗುತ್ತದೆಯೋ ನೋಡಿ) ಎಂದರು ಸ್ವಾಮಿಯವರು. ಆತ ಹಾಗೆ ಮಾಡಿ, 8 ನೇ ದಿನ ಕೆಲಸ ಆರಂಭಿಸಿದರೆ, ಅಂತಹ ಕಠಿನವಾದ ಬಂಡೆ ಮೆಲ್ಲಗೆ ಒಡೆಯಲಾರಂಭಿಸಿತು. ಕೆಲಸ ಸುಲಭವಾಗಿ ಪೂರ್ತಿಯಾಯಿತು.

ಗೋಪಾರಂ ಪಾಲಕೊಂಡ ಸುಬ್ಬಾರೆಡ್ಡಿಯವರು ಒಮ್ಮೆ ಭಾವಿ ತೋಡಿಸ ಬೇಕೆಂದುಕೊಂಡು ಸ್ವಾಮಿಯವರನ್ನು ಕೇಳಿದರೆ, "ಸಮುದ್ರಂ" ಎಂದು ಬರೆದುಕೋ ಎಂದರು. ಅವರು ಹೇಳಿದಹಾಗೆ ಆ ಭಾವಿಯಲ್ಲಿ ((ಊಟೆ)) 5 ಅಶ್ವ ಶಕ್ತಿಯ ಇಂಜಿನ್ ಹಾಕಿ ನೀರು ತೆಗೆಯಲು ಪ್ರಾರಂಭ ಮಾಡಿದರೂ ನೀರು ಸ್ವಲ್ಪವೂ ಕಡಿಮೆಯಾಗಲಿಲ್ಲ ಎಂದರೆ ಸಮುದ್ರವೇ ಅಲ್ಲವೇ?

ಮಲ್ಲಿಕ್ ವೆಂಕಯ್ಯ ಸ್ವಾಮಿಯವರ ಅಗ್ನಿ ಕುಂಡಕ್ಕೆ ಕಟ್ಟಿಗೆ ತಂದು ಹಾಕುತ್ತಿದ್ದ. ಒಂದು ದಿನ, ಸಿದ್ದಲಯ್ಯ ಬೆಟ್ಟದ ಹತ್ತಿರ ಕನ್ಯೆಯರು, ವೆಂಕಯ್ಯನನ್ನು ತಮ್ಮೊಡನೆ ಬರುವಂತೆ ಪೀಡಿಸಿದರು. "ನಮ್ಮೊಡನೆ ಬಂದರೆ ನಿನಗೆ ಬೇರೆ ಒಬ್ಬ ಖ್ಯಾತ ಗುರುವನ್ನು ತೋರಿಸುತ್ತೇವೆ" ಎಂದು ಆಸೆ ತೊರಿಸಿದರು. ಆದರೆ ವೆಂಕಯ್ಯ ತಾನು ತನ್ನ ಗುರುವನ್ನು ಬಿಟ್ಟು ಬರುವುದಿಲ್ಲ ಎಂದು ಅವರನ್ನು ತಕ್ಷಣ ವೇ ಹೊರಟು ಹೋಗಿ ಎಂದು ಹೇಳಿದರು. ಆದರೆ, ಆಗಾಗ ಬಂದು ಪೀಡಿಸುತ್ತಿದ್ದರು. ಒಂದು ದಿನ ವೆಂಕಯ್ಯ, ಸ್ವಾಮಿಯವರ ಸನ್ನಿಧಿಯಲ್ಲಿದ್ದಾಗಲೇ ಆ ಕನ್ಯೆಯರು ಧೈರ್ಯಮಾಡಿ, ಸ್ವಾಮಿಯವರ ಹತ್ತಿರ ಬಂದು ವೆಂಕಯ್ಯನನ್ನು ಕರೆಯಲಾರಂಭಿಸಿದರು. ಆಗ, ಸ್ವಾಮಿಯವರು ವೆಂಕಯ್ಯನನ್ನು ಹತ್ತಿರ ಕರೆದು, ಆತನ ಹೃದಯದ ಮೇಲೆ ಒಂದು ಏಟು ಹೊಡೆದು, ಆಮೇಲೆ ಸವರಿ "ನೀಕಿಕ ವಾಟಿ ಬಾಧಲೇದುಲೇ ಪೋ" (ನಿನಗೆ ಇನ್ನು ಅವರು ಪೀಡಿಸುವುದಿಲ್ಲ ಹೋಗು)

ಎಂದರು. ಆ ದಿನದಿಂದ ಆ ಕನ್ಯೆಯರು ವೆಂಕಯ್ಯನ ತಂಟೆಗೆ ಬರಲಿಲ್ಲ. ಒಂದು ದಿನ ಸ್ವಾಮಿಯವರು, "ವೆಂಕಯ್ಯ! ಏ ಗಾಲಿ ಗಾನಿ ಭೂತಂ ಗಾನಿ, ಪೆಶಾಚಂ ಗಾನಿ ನೀ ಆಜ್ಞ ಪಾಟಿಂಚಕುಂಟೇ, 'ನೇನು ಚೆಪ್ಪಿ ನಟ್ಲು ನಡುಚು ಕುಂಟಾವಾ ಲೇಕ ಗುರುದೇವುನಿ ಅಗ್ನಿ ಸ್ಥಂಭಂ ಪಟ್ಟುಕುಂಟಾವಾ?' ಅನಿ ದಬಾಯಿಂಚಿ ನಿಲೇಸೇಯ್. ನೇನು ಚೆಪ್ಪಿನ ನಿಯಮಾಲು ನೀವು ಪಾಟಿಂಚಿನಂತವರಕೂ ವಾಟಿನಿ ಚೂಚಿ ನೀವೇಮೀ ಭಯ ಪಡನಕ್ಕರ್ಲೇದು (ವೆಂಕಯ್ಯಾ! ಯಾವ ಗಾಳಿಯಾಗಲಿ, ಭೂತವಾಗಲೀ, ಪಿಶಾಚಿಯಾಗಲೀ ನಿನ್ನ ಆಜ್ಞೆ ಪಾಲಿಸದಿದ್ದರೆ " ನಾನು ಹೇಳಿದ ಹಾಗೆ ನಡೆದು ಕೊಳ್ಳುತ್ತೀಯಾ? ಇಲ್ಲ ಗುರುದೇವನ ಅಗ್ನಿ ಸ್ತಂಭ ಹಿಡಿದುಕೊಳ್ಳುತ್ತೀಯಾ" ಎಂದು ಗಟ್ಟಿಯಾಗಿ ದಬಾಯಿಸಿ ಕೇಳು. ನಾನು ಹೇಳಿದ ನಿಯಮಗಳನ್ನು ನೀನು ಪಾಲಿಸುವ ವರೆಗೆ ಅವುಗಳನ್ನು ನೋಡಿ ನೀನು ಭಯಪಡುವ ಅವಶ್ಯಕತೆ ಇಲ್ಲ" ಎಂದು ಅಭಯ ಕೊಟ್ಟರಂತೆ.

ಒಮ್ಮೆ ಕಂಟೇಪಲ್ಲಿ ಎಂಬ ಹಳ್ಳಿಯಲ್ಲಿ ಪಶುಗಳಿಗೆ ಗಾಲಿಕುಂಟೆ (ಈ ರೋಗ ಒಂದು ದುಷ್ಟ ಶಕ್ತಿಯ ಪ್ರಭಾವದಿಂದ ಬರುವುದು) ಎಂಬ` ರೋಗ ಬಂದು ಪಶುಗಳು ರೋಗ ಗ್ರಸ್ತರಾಗಿದ್ದವು. ಶ್ರೀ ಸ್ವಾಮಿಯವರ ಅಗ್ನಿಕುಂಡಕ್ಕೆ ಕಟ್ಟಿಗೆ ತರಲು ಯಾರೂ ಗಾಡಿಯಾಗಲೀ ಎತ್ತನ್ನಾಗಲೀ ಕೊಡಲಿಲ್ಲ. ಆಗ ವೆಂಕಯ್ಯ ತನ್ನ ಗುರುಗಳು ಹೇಳಿದ್ದ ಮಂತ್ರ ನೆನಪಿಸಿಕೊಂಡು ಪೋಲೇರಮ್ಮನನ್ನು ಆವಾಹನೆ ಮಾಡಿದರು. ಪೋಲೇರಮ್ಮ ಬಂದು ಆತನ ಮುಂದೆ ನಿಂತು, ತನ್ನ ಕೂದಲಿನ ಗಂಟನ್ನು ಬಿಚ್ಚಿ ಆ ಕೂದಲಿನಲ್ಲಿದ್ದ ಅಸಂಖ್ಯಾತ ಕಣ್ಣುಗಳನ್ನು ಪ್ರದರ್ಶಿದಳು. ಆ ದೃಶ್ಯವನ್ನು ನೋಡಿ ವೆಂಕಯ್ಯ ಹೆದರಿ ಓಡಿ ಹೋಗುತ್ತಾನೆ ಎಂದುಕೊಂದಳು ಆಕೆ. ಆದರೆ, ವೆಂಕಯ್ಯ ಅಂತಹ ಕ್ಷುದ್ರ ಶಕ್ತಿಗಳನ್ನು ಕಂಡು ಭಯ ಪಡುವವನಲ್ಲ ಬದಲಿಗೆ ಅವನು ಹೀಗೆಂದನು 'ನಿನ್ನ ಆಟಗಳು ನನ್ನ ಹತ್ತಿರ ನಡೆಯುವುದಿಲ್ಲ, ನೀನು ಈ ಕ್ಷಣವೇ ಕಂಟೇಪಲ್ಲಿಯನ್ನು ಬಿಟ್ಟು ಹೋಗುತ್ತೀಯ? ಇಲ್ಲ ಗುರುಗಳ ಅಗ್ನಿ ಸ್ತಂಭವನ್ನು ಹಿಡಿದುಕೊಳ್ಳುತ್ತೀಯಾ? ಎಂದು ಎದುರಿಸಿದನು. ಈ ಮಾತನ್ನು ಕೇಳಿ ಪೋಲೇರಮ್ಮ ತನ್ನ ಕೆನ್ನೆ ತಟ್ಟಿಕೊಳ್ಳುತ್ತಾ, 'ಮೂರನೇ ದಿನ ಬೆಳಿಗ್ಗೆಯಹೊತ್ತಿಗೆ ಹೊರಟುಹೋಗುತ್ತೇನೆ. ಇದಕ್ಕೆ ಭೂದೇವಿ, ಆಕಾಶ, ಸೂರ್ಯ ಚಂದ್ರರು ಸಾಕ್ಷಿ' ಎಂದು ಪ್ರಮಾಣ ಮಾಡಿದಳು. ಅದೇ ರೀತಿ, ಮೂರನೆ ದಿನ ಆ ಗ್ರಾಮಬಿಟ್ಟು ಹೊರಟಳು. ನಂತರ ಎಲ್ಲ ಪಶುಗಳ ರೋಗ ಗುಣವಾಗಿ, ಸ್ವಾಮಿಯವರ ಧುನಿಗೆ ಕಟ್ಟಿಗೆ ತರಲು ಗಾಡಿಯನ್ನು ಕಟ್ಟಿದರು.

23 **ಈ ಸೃಷ್ಟಿಯಲ್ಲಿ ಸದ್ಗುರುಗಳಿಗೆ ಸಾಧ್ಯವಾಗದ ಕೆಲಸ ಯವುದೂ ಇಲ್ಲ ಎನ್ನುವುದು ಈ ಕೆಳಗಿನ ಲೀಲೆಯಿಂದ ತಿಳಿಯುತ್ತದೆ.**

ಸ್ವಾಮಿಯವರು ಕೋಟಿ ತೀರ್ಥದಲ್ಲಿ ಬಿಡದಿ ಮಾಡಿದ್ದರು. ಆಗ, ಒಬ್ಬ ಭಕ್ತ ಸ್ವಾಮಿಯವರಲ್ಲಿ, "ಸಿದ್ಧಲಯ್ಯ ಬೆಟ್ಟದ ಮೇಲೆ ಇದ್ದ ದೇವಾಲಯದಲ್ಲಿ ಒಂದು ಕಲ್ಲು ಒಡೆದುಹೋಯಿತು, ಆ ಒಡೆದ ಕಲ್ಲನ್ನು ಒಬ್ಬ ಸಾಧು ಅಂಟಿಸಿದರು, ಎಂದು ಎಲ್ಲರೂ ಹೇಳುತ್ತಿದ್ದಾರೆ" ಎಂದು ಹೇಳಿದರು. "ನಿಜಮೇ ಅತುಕುತುಂದಿ, ನೇನು ಕೂಡಾ ಒಕಸಾರಿ

ಈ ದೇವಾಲಯಂಲೋ ಶಿವಲಿಂಗಂ ಮುಂದು ಮಂಟ ಪೆಟ್ಟಿ ತಲುಪುವೇಸಿ ಸಂದುಗುಂಡಾ ಚೂಚಾನು. ನೇಲ ಪೈ ಪರಚಿನ ರಾಳ್ಳು ಪಗಿಲಿ ಆ ಮುಕ್ಕಲು ಪೈಕಿ ಪೋಯಿನವಿ. ಅದಿ ಚೂಚಿ ನೇನು 'ಉದಯಂ ಗ್ರಾಮಸ್ಥುಲು ಚೂಚಿ ಏಮನುಕುಂಟಾರೋ?' ಅನಿ ಅನುಕೋಗಾನೆ ಮರಲಾ ಆ ಮುಕ್ಕಲನ್ನೀ ಕ್ರಮಂಗಾ ಕ್ರಿಂದಿಕಿ ವಚ್ಚಿ ಯಥಾ ಪ್ರಕಾರಂ ಅತುಕ್ಕುನ್ನಾಯಿ" (ನಿಜವೇ ಅಂಟು ಕೊಳ್ಳುತ್ತದೆ. ನಾನು ಕೂಡ ಒಂದು ಬಾರಿ ಈ ದೇವಾಲಯದಲ್ಲಿ ಶಿವ ಲಿಂಗದ ಎದುರಿಗೆ ಉರಿ ಹಾಕಿ, ಬಾಗಿಲು ಹಾಕಿ, ಬಾಗಿಲು ಸಂದಿನಿಂದ ನೋಡಿದರೆ, ನೆಲದಮೇಲೆ ಹರಡಿದ್ದ ಕಲ್ಲುಗಳು ಒಡೆದು ಚೂರುಗಳು ಮೇಲಕ್ಕೆ ಹೋದವು. ಅದನ್ನು ನೋಡಿ, ನಾನು 'ಬೆಳಗ್ಗೆ ಹಳ್ಳಿಯವರು ನೋಡಿ ಏನನ್ನುತ್ತಾರೆಯೋ' ಎಂದುಕೊಳ್ಳುತ್ತಿದ್ದಾಗ ಎಲ್ಲಾ ಚೂರುಗಳು ಕ್ರಮವಾಗಿ ಕೆಳಗೆ ಬಂದು ಅಂಟಿಕೊಂಡವು) ಎಂದರು ಸ್ವಾಮಿಯಾರು.

ಅಂದರೆ, "ಸಂಕಲ್ಪಮಾತ್ರದಿಂದ ಕಲ್ಲನ್ನು ಅಂಟಿಸ ಬಹುದು ಎಂದು ಸ್ವಾಮಿಯವರು ಹೇಳಿದರು." 24

ಸ್ವಾಮಿಯವರು ನಡೆದಾಡುತ್ತಿದ್ದ ಕಾಲದಲ್ಲಿ ಆಶ್ರಮದ ಒಳಗೆ ಒಂದು ದೊಡ್ಡ ಬಂಡೆ ಇತ್ತು. ಆ ಬಂಡೆ, ಇಬ್ಬರು ಕಷ್ಟ ಪಟ್ಟು ಎತ್ತಿದರೂ ಎತ್ತಲಾಗದ ಭಾರವಿತ್ತು. ಒಂದು ದಿನ, ಶ್ರೀ ಸ್ವಾಮಿಯವರು ಒಬ್ಬರೇ ಆ ಬಂಡೆಯನ್ನು ತಲೆಯ ಮೇಲಿಟ್ಟುಕೊಂಡು ಪಶ್ಚಿಮ ದಿಕ್ಕಿಗೆ ಹೊರಟು ಹೋದರು. 3 ಘಂಟೆಗಳ ನಂತರ ವಾಪಸ್ಸು ಬಂದರು. ಭಕ್ತರು ಬಂಡೆ ಎಲ್ಲಿ ಹೋಯಿತು ಸ್ವಾಮಿ ಎಂದು ಕೇಳಿದಾಗ, "ಅಬ್ಬೋ ಇಕ್ಕಡ ವುಂಡಕೂಡದಯ್ಯಾ" (ಅಬ್ಬೋ ಅದು ಇಲ್ಲಿ ಇರಬಾರದು) ಎಂದರು.

ಇದೇವಿಧವಾಗಿ ಒಬ್ಬ ಭಕ್ತ, ಮನೆ ಕಟ್ಟುವುದಕ್ಕೆ ಒಂದು ಬೇವಿನ ಮರದ ತೊಲೆ ತಂದಿಟ್ಟುಕೊಂಡಿದ್ದ. ಆ ರಾತ್ರಿ ಸ್ವಾಮಿಯವರು ಒಬ್ಬರೇ ಹೋಗಿ ಆ ತೊಲೆಯನ್ನು ಹೇಗೆ ತಂದರೋ ಗೊತ್ತಿಲ್ಲ. ಬೆಳಗಾಗುವ ಹೊತ್ತಿಗೆ ಆ ತೊಲೆ ಸ್ವಾಮಿಯವರ ಅಗ್ನಿ ಕುಂಡದೊಳಗೆ ಉರಿಯುತ್ತಿತ್ತು. ಆ ಭಕ್ತ ಬಂದು ಸ್ವಾಮಿಯವರ ಹತ್ತಿರ ಗೋಳಾಡಿದ. ಆಗ ಸ್ವಾಮಿಯವರು ಅವನಿಗೆ ಒಂದು ಕೊಡಲಿ ಕೊಟ್ಟು ಆ ಉರಿಯುತ್ತಿರುವ ತೊಲೆಯನ್ನು ಎರಡಾಗಿ ತುಂಡು ಮಾಡು ಎಂದರು. ಆತ ಹಾಗೆ ಹೊಡೆದಾಗ ಅದರ ಪೊಟರೆ ಒಳಗಿನಿಂದ ನಾಗರ ಹಾವು ಹೊರ ಬಂದಿತು. ಅಂತಹ ತೊಲೆಯನ್ನು ಮನೆ ಕಟ್ಟಲು ಉಪಯೋಗಿಸಿದರೆ, ಆ ಮನೆ ಸರ್ವ ನಾಶವಾಗುತ್ತದೆ ಎಂದು ವಾಸ್ತು ಶಾಸ್ತ್ರ ಹೇಳುತ್ತದೆ.

ಒಮ್ಮೆ ಸತ್ತೆಮ್ಮ ಎಂಬ ಸ್ವಾಮಿಯವರ ಭಕ್ತಳಿಗೆ ಸ್ವಪ್ನ ದಲ್ಲಿ ಸ್ವಾಮಿಯವರ ಬಾಯಲ್ಲಿ ಅದ್ಭುತವಾದ ಅಗ್ನಿ ಜ್ವಾಲೆಯನ್ನು ಉಗುಳುತ್ತಿರುವಂತೆ ಕಂಡಿತು. ಆಕೆ, ಸ್ವಾಮಿಯವರು ನಡೆಯುವ ರಸ್ತೆಯ ಮೇಲಿಂದ ಸಗಣಿ ಎತ್ತಿ ಹಾಕಿ ಶುಭ್ರ ಮಾಡುತ್ತಿದ್ದಳು. ಸ್ವಾಮಿಯವರು ಆಕೆಯ ಹತ್ತಿರ "ನಾ ಪೇರು ಮೀದ ಪಿಡಿಕೆಡು ಮೆತುಕುಲು ಪೆಟ್ಟಿನ ವಾರಿ ಮಂಚಿ ಚೆಡ್ಡಲನ್ನೀ ನೇನು ಸರಿ ಚೇಸಿ ರಾವಾಲಮ್ಮಾ" (ನನ್ನ ಹೆಸರು ಹೇಳಿ ಒಂದು ಹಿಡಿ ಅನ್ನ ದಾನ ಮಾಡಿದವರ ಯೋಗ ಕ್ಷೇಮಲವನ್ನು ಸರಿ ಮಾಡಿ ಬರಬೇಕಮ್ಮ) ಎಂದು ಹೇಳುತ್ತಿದ್ದರು.

ಮಲ್ಲಿಕ್ ವೆಂಕಯ್ಯ, ಶ್ರೀ ಸ್ವಾಮಿಯವರ ಮೊದಲ ಆರಾಧನೆಗೆ ಕಟ್ಟಿಗೆ ತರುವುದಕ್ಕೆ ಹೊರಟಿದ್ದ. ಬೆಳಗ್ಗೆ 4 ಘಂಟೆಯ ಸಮಯ, ಕತ್ತಲಲ್ಲಿ ಎತ್ತುಗಳು ಹಾವನ್ನು ತುಳಿದವೋ ಏನೋ, ಒಂದು ಜಾಗದಲ್ಲೊಂದು ನಾಗರಹಾವು ಹೆಡೆ ಬಿಚ್ಚಿ ಬಾಲದ ಮೇಲೆ ನಿಂತು ಗಾಡಿಯನ್ನು ಅಡ್ಡ ಹಾಕಿತು. ವೆಂಕಯ್ಯ ಗಾಡಿಯನ್ನು ನಿಲ್ಲಿಸಿ, ಕೊಡಲಿ ತೆಗೆದು ಕೊಂಡು ಆ ಹಾವನ್ನು ಕೊಲ್ಲಲು ಪ್ರಯತ್ನಿಸಿದ. ಅದು ಬುಸು ಗುಟ್ಟುತ್ತಾ, ಅದರ ಬಾಲದ ಮೇಲೆ ನಿಂತು ಕೊಂಡು, ಈ ಕಡೆ, ಆ ಕಡೆ, ಹರಿಯುತ್ತಾ ಅವನನ್ನು ಹೆದರಿಸಲು ಪ್ರಯತ್ನಿಸುತ್ತಿತ್ತು. ಆದರೆ ವೆಂಕಯ್ಯನಿಗಾಗಲಿ, ಎತ್ತುಗಳಿಗಾಗಲಿ ಏನೂ ಹಾನಿ ಮಾಡಲಿಲ್ಲ. ಆಗ ವೆಂಕಯ್ಯ ತನ್ನ ಗುರುಗಳು ಹೇಳಿದ ಮಂತ್ರವನ್ನು ನೆನಪು ಮಾಡಿಕೊಂಡನು. ತಕ್ಷಣವೇ ಆ ಹಾವು ತನ್ನ ಹೆಡೆ ಇಳಿಸಿ ಹೊರಟು ಹೋಯಿತು.

ಪೆನವರ್ತಿ ವಡ್ಡಿ ಪಾಳೆಂನಲ್ಲಿ ವಾಸಿಸುತ್ತಿರುವ ವ್ಯಕ್ತಿ ಹೀಗೆ ಹೇಳಿದರು. ನೆಲ್ಲೂರು ಜಿಲ್ಲೆಯ ಪೊಟ್ಟಿ ಪಾಳೆಂ ಸಮೀಪ ದಲ್ಲಿ ಪೆನ್ನಾ ನದಿಯಲ್ಲಿ ರೈತರು ಕಲ್ಲಂಗಡಿ ನೆಟ್ಟರು. ಸ್ವಾಮಿಯವರು ಅಲ್ಲಿ ಒಂದು ಮರಳಿನ ದಿಣ್ಣೆಯ ಮೇಲೆ ಯಥಾ ವಿಧಿಯಂತೆ ಅಗ್ನಿ ಕುಂಡ ಇಟ್ಟು ಅಲ್ಲೇ ವಾಸವಾಗಿದ್ದರು. ಆಗ ರೈತರು,"ಈ ಮುದುಕರು ಇಲ್ಲೇ ಇದ್ದಾರೆ, ಇನ್ನು ತೋಟವನ್ನು ಇವರೇ ಕಾವಲು ಕಾಯುತ್ತಾರೆ" ಎಂದು ಸಂತೋಷ ಪಟ್ಟರು. ಮಳೆ ಬಂದಿದ್ದರಿಂದ, ನದಿಯ ಮೇಲಿನ ಭಾಗದಲ್ಲಿ ನೀರು ಪ್ರವಹಿಸುತ್ತಿತ್ತು. ಆಗ, ಅವರು, 'ಮುದುಕರೇ ನದಿಯಲ್ಲಿ ನೀರು ಹೆಚ್ಚಾಗುತ್ತದೆ, ನೀವು ಊರೊಳಗೆ ಬನ್ನಿ' ಎಂದು ಎಷ್ಟು ಕರೆದರು ಸ್ವಾಮಿಯವರು ಅಲ್ಲಾಡಲಿಲ್ಲ. ಕೊನೆಗೆ ರೈತರು ಹೊರಟು ಹೋದರು. ನಂತರ, ಆ ನದಿನೀರು ತುಂಬಿ ಹೋಯಿತು. 3 ದಿನಗಳ ನಂತರ ರೈತರು ಬಂದು ನೋಡಿದರೆ ಸ್ವಾಮಿ ಯಥಾ ಸ್ಥಾನದಲ್ಲಿದ್ದರು. ಅವರ ಸುತ್ತಲೂ 10 ಗಜ ಎತ್ತರದ ಪುಡಿ ಮರಳು ಇತ್ತು. ನದಿಯ ದಡ ದಲ್ಲಿ ಸುಮಾರು 15-20 ಅಡಿಯ ಆಳ ದಲ್ಲಿ ಪ್ರವಾಹ ಹರಿದಂತೆ ಕಂಡಿತು. ನದಿಯ ದಡ ದಲ್ಲಿ ಸ್ವಾಮಿಯವರ ಸುತ್ತಲೂ ಒಣಗಿದ ಮರಳನ್ನು ನೋಡಿ ರೈತರು ಆಶ್ಚರ್ಯ ಚಕಿತರಾಗಿ ಸ್ವಾಮಿಯವರಿಗೆ ನಮಸ್ಕರಿಸಿದರು. ಹಿಂದೆ ಮೋಸೆಸ್ ಗೆ ನದಿ ದಾರಿ ಕೊಟ್ಟಿದಹಾಗೆ!

ಓಂ ನಾರಾಯಾಣ – ಆದಿನಾರಾಯಣ

ಅವಧೂತ ಲೀಲೆ

ಅಧ್ಯಾಯ - 7

ಆಪದ್ಬಾಂಧವರು

ಅಜ್ಞಾನ ಎಂಬ ಕತ್ತಲೆಯಲ್ಲಿ ಅಹಂಕಾರ ಎನ್ನುವ ಮೊಸಳೆಯ ಜೊತೆ ಹೋರಾಡುವ ನಮಗೆ "ಕರ್ಮವನ್ನು ದಾಟುವುದು ಹೇಗೆ ಸಾಧ್ಯ?" ಸೃಷ್ಟಿಕರ್ತನಾದ ಬ್ರಹ್ಮ ಬರೆದ ಬರಹವನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಎಂದು ಧೃಢವಾಗಿ ನಂಬಿ, ಮಹನೀಯರ ದಯಾಮಯತ್ವವನ್ನು ಗುರುತಿಸಲು ಸಾಧ್ಯವಾಗದಂತೆ ಮಾಡುತ್ತದೆ ನಮ್ಮ ಅಹಂಕಾರ. ಪೂರ್ವ ಜನ್ಮದ ಪುಣ್ಯದಿಂದ ನಮಗೆ ಸದ್ಗುರುವಿನ ಕೃಪೆ ಲಭಿಸುತ್ತದೆ. ಅವರ ಕೃಪೆಯಿಂದ, ನಮ್ಮಗಳ ಯಾವುದೇ ದುಷ್ಕರ್ಮ ಆಗಲಿ, ಅಥವಾ ಬ್ರಹ್ಮದೇವನ ಬರಹವನ್ನಾದರೂ ಅತ್ಯಂತ ಸುಲಭವಾಗಿ ತಪ್ಪಿಸಿಕೊಂಡು ನಮ್ಮ ಅಂತ್ಯ ಗುರಿಯನ್ನು ಸೇರುತ್ತೇವೆ ಎಂದು ಶ್ರೀ ಸ್ವಾಮಿಯವರ ಮತ್ತು ಶ್ರೀ ಶಿರಡಿ ಸಾಯಿಬಾಬ ಅವರಂತಹ ಮಹನೀಯರ ಚರಿತ್ರೆ ಸೂಚಿಸುತ್ತದೆ. ಅಲ್ಲದೇ, ನಮ್ಮ ಸಮಕಾಲೀನರಾದ ಭಕ್ತರ ಅನುಭವಗಳು ಸಹ ಮೇಲಿನ ವಿಷಯವನ್ನು ಸೂಚಿಸುತ್ತವೆ. ಸದ್ಗುರುಗಳ ಕೃಪೆಯಿಂದ, ನಾವು ಕೇವಲ ಪ್ರಾರ್ಥಿಸುವ ಸಮಯ ಅಲ್ಲದೇ, ನಾವು ಮರೆತರೂ, ಅವರು ನಮ್ಮ ನೆರಳಾಗಿ ನಮ್ಮನ್ನು ರಕ್ಷಿಸುತ್ತಾರೆ ಎನ್ನುವುದು ಈ ಕೆಳಗಿನ ನಿದರ್ಶನಗಳು ತಿಳಿಸುತ್ತದೆ. 25

ಕೊಜ್ಜಕೂಟಿ ಬುಜ್ಜಯ್ಯನವರ ತಂಗಿ ಪದ್ಮಮ್ಮನ ನಿಶ್ಚಿತಾರ್ಥ ಆಯಿತು. ಕಂಚಿ ವರದರಾಜ ಸ್ವಾಮಿಯವರ ಸನ್ನಿಧಿಯಲ್ಲಿ ಮದುವೆ ಮಾಡಿ ಎಂದು ಸ್ವಾಮಿಯವರು ಆಜ್ಞಾಪಿಸಿದರು. ಸ್ವಾಮಿಯವರ ಸಲಹೆಯಂತೆ ಎಲ್ಲಾ ಏರ್ಪಾಡು ಮಾಡಿಕೊಂಡು ಸ್ವಾಮಿಯವರನ್ನು ಈ ಮದುವೆಗೆ ಬಂದು, ದಂಪತಿಗಳನ್ನು ಆಶೀರ್ವದಿಸಿ ಎಂದು ಪ್ರಾರ್ಥಿಸಿದರು. ಸ್ವಾಮಿಯವರು ತಮ್ಮ ಸೇವಕರೊಂದಿಗೆ ಮದುವೆಗೆ ಬಂದು ಮಂಗಳಸೂತ್ರ, ಧಾರೆಯ ಅಕ್ಕಿ, ಎಲ್ಲವನ್ನೂ ತಮ್ಮ ಕೈಗಳಿಂದ ಮುಟ್ಟಿ, ಹತ್ತಿರ ಇದ್ದು ಆಶೀರ್ವದಿಸಿ,ಆ ಮದುವೆ ಯನ್ನು ಸುಸೂತ್ರವಾಗಿ ನೆರವೇರಿಸಿದರು. ಸ್ವಾಮಿಯವರು 1 ರೂಪಾಯಿನ ಕರ್ಪೂರ ತರಿಸಿ, ಹಚ್ಚಿಸಿಕೊಂಡು ತಮ್ಮ ಹತ್ತಿರ ಇಟ್ಟು ಕೊಂಡರು. ಸ್ವಾಮಿಯವರು ತಮ್ಮ ಇಡೀ ಜೀವಿತಾವಧಿಯಲ್ಲಿ ಯಾರ ಮನೆಗಾಗಲಿ ಅಥವಾ ಮದುವೆಗಳಿಗಾಗಲಿ ಹೋಗಿರಲಿಲ್ಲ. ಒಮ್ಮೆ ಸ್ವಾಮಿಯವರು ಪದ್ಮಮ್ಮನಿಗೆ, "ಅಮ್ಮಾ! ಎನ್ನಿ ಕಷ್ಟಾಲೊಚ್ಚಿನಾ ಕಂಟತಡಿ ಪೆಟ್ಟ ಕೂಡದಮ್ಮಾ!" (ಅಮ್ಮಾ! ಎಷ್ಟೇ ಕಷ್ಟ ಬಂದರೂ ಕಣ್ಣೀರು ಹಾಕ ಬಾರದಮ್ಮಾ!) ಎಂದು ಹೇಳಿದರು. ಹಾಗೆಯೇ ಪದ್ಮಮ್ಮನಿಗೆ ಅನೇಕ ಕಷ್ಟಗಳು

ಬಂದರೂ ಶ್ರೀ ಸ್ವಾಮಿಯವರ ಕೃಪೆಯಿಂದ ನಿವಾರಣೆ ಆಗಿ ಶಾಂತಿಯಿಂದ ಜೀವಿಸುತ್ತಿದ್ದಾರೆ.

ಒಮ್ಮೆ ಶ್ರೀ ಸ್ವಾಮಿಯವರು ತಲುಪೂರಿನಿಂದ ಗೊಲಗಮೂಡಿಗೆ ಬರಬೇಕೆಂದು ನೆಲ್ಲೂರು-ಮದ್ರಾಸ್ ಬಸ್ ನಿಲ್ದಾಣಕ್ಕೆ ಬಂದಾಗ, "ಅಯ್ಯಾ ಮನಂ ಆಸುಪತ್ರಿಕಿಪೋವಾಲಿ" (ಅಪ್ಪಾ! ನಾವು ಆಸ್ಪತ್ರೆಗೆ ಹೋಗಬೇಕು) ಎಂದು ಸ್ವಾಮಿಯವರೇ ಜೂಬಿಲೀ ಆಸ್ಪತ್ರೆಗೆ (Jubilee) ಕರೆದು ಕೊಂಡು ಹೋಗಿ ಎನ್ನುತ್ತಾ ಆ ದಾರಿ ತೋರಿಸಿದರು. ಯಾವತ್ತೂ ಆಸ್ಪತ್ರೆಗೆ ಹೋಗದ ಸ್ವಾಮಿಯವರು ಏತಕ್ಕೆ ಈ ದಿನ ಹೋಗ ಬೇಕೆನ್ನುತಿದ್ದರೋ ಯಾರಿಗೂ ಅರ್ಥ ಆಗಲಿಲ್ಲ. ಅವರು ಆಸ್ಪತ್ರೆ ಸೇರುವ ಸಮಯಕ್ಕೆ ಅಲ್ಲಿ ಅವರನ್ನ ವಿಶಿಷ್ಟವಾಗಿ ಸ್ಮರಿಸುತ್ತಿದ್ದ ಬುಜ್ಜಯ್ಯ ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದ ಅವರ ತಂಗಿ ನಂಬೂರು ಪದ್ಮಮ್ಮ ಸ್ವಾಮಿಯವರನ್ನ ನೋಡಿ ಬಹಳ ಸಂತೋಷದಿಂದ ನಮಸ್ಕರಿಸಿದರು. ಅಲ್ಲಿ ಅವರ ಜೊತೆ ಸ್ವಲ್ಪ ಸಮಯ ಇದ್ದ ನಂತರ, ಸ್ವಾಮಿಯವರು "ಇಕ್ಕಡಿಕಿ ಲೆಕ್ಕ ಸರಿಪಡಿಂದಿ. ಮನಂ ಪೋದಾಂ ಪದಂಡಿ" (ಇಲ್ಲಿಗೆ ಲೆಖ್ಖ ಸರಿಹೋಯಿತು, ನಾವು ಇನ್ನು ಹೊರಡೋಣ ನಡೆಯಿರಿ) ಅಂದರು. ಸ್ವಲ್ಪ ದಿನಕ್ಕೆ ಆಕೆಯ ಆರೋಗ್ಯ ಗುಣವಾಗಿ ಸ್ವಾಮಿಯವರ ಕೃಪೆಯಿಂದ ಮನೆಯನ್ನು ಸೇರಿದರು.

ಕಮ್ಮಂಪಾಡು ಗ್ರಾಮದ ಲಲಿತಮ್ಮನವರಿಗೆ ಮದುವೆ ಆಗಿ 4 ವರ್ಷ ಆದರೂ ಸಂತಾನ ಆಗಿರಲಿಲ್ಲ. ಇವರಿಗೆ ನರಗಳ ದೌರ್ಬಲ್ಯದ ಕಾರಣದಿಂದ ಇವರ ದೇಹ ಬಹಳ ನೋವಿನಿಂದ ಕೂಡಿತ್ತು. ವೈದ್ಯರ ಚಿಕಿತ್ಸೆ (ಔಷಧಿ ಮತ್ತು ಇಂಜಕ್ಷನ್) ಗಳಿಂದ ಯೇನೂ ಪ್ರಯೋಜನವಾಗಲಿಲ್ಲ. ಆಕೆ ಶ್ರೀ ಸ್ವಾಮಿಯವರ ದರ್ಶನಕ್ಕೆ ಬಂದಾಗ, ಆಕೆ ಏನನ್ನೂ ಹೇಳುವ ಮೊದಲೇ ಸ್ವಾಮಿಯವರು, "ಆಮೇಕು ಜಬ್ಬಯ್ಯಾ? ಪೋತುಂದಿಲೇ, ಗೂಡೂರು ಕರಣಂ ಚನಿಪೋಯಾಡು. ಆಯನನು ಈಮೆ ಕಡುಪುನ ವೇಶಾನು" (ಈಕೆ, ರೋಗ ದಿಂದ ಬಳಲುತ್ತಿದ್ದಾಳೆ! ಗುಣವಾಗುತ್ತದೆ. ಗೂಡುರುನಲ್ಲಿ ಕರಣಂ (ಗೂಡುರು ಎನ್ನುವ ಗ್ರಾಮ, ಆ ಗ್ರಾಮದ ಪಟೇಲ) ಮರಣಿಸಿದ್ದಾರೆ, ಅವರನ್ನು ಈಕೆಯ ಹೊಟ್ಟೆಯಲ್ಲಿ ಇಟ್ಟಿದ್ದೇನೆ) ಎಂದು ಹೇಳಿ, ಅವರ ಬೆರಳಿನ ಮುದ್ರೆ ಹಾಕಿರುವ ಕಾಗದ ಮತ್ತು ದಾರವನ್ನು ಕೊಟ್ಟು ಕಳುಹಿಸಿದರು. ಆಮೇಲೆ ಆಕೆ ಯಾವ ಔಷಧಿಯನ್ನೂ ಸೇವಿಸದೇ ಆರೋಗ್ಯ ಸುದಾರಿಸಿ, ಗರ್ಭವತಿ ಆದರು. ಒಂದು ವರ್ಷದ ಒಳಗೆ ಗಂಡು ಮಗನ ತಾಯಿ ಆದರು. ಆಕೆ ಆಗಾಗ 50 ಮೈಲಿ ದೂರದಿಂದ ಬಂದು ಸ್ವಾಮಿಯವರ ಸಮಾಧಿಯ ದರ್ಶನ ಮಾಡುತ್ತಿರುತ್ತಾರೆ.

ಒಮ್ಮೆ ರೋಶಿ ರೆಡ್ಡಿಯವರನ್ನ ಯಾವುದೋ ಒಂದು ಹುಳು ಕಚ್ಚಿತು. ಕಾಲು ಕೆಂಪಾಗಿ ಊದಿ, ನಡೆಯುವುದಕ್ಕೆ ಸಾಧ್ಯ ಆಗಲಿಲ್ಲ. ನದಿ ಸ್ನಾನಕ್ಕೆ ಹೋಗಿ, ಸ್ವಾಮಿಯವರನ್ನು ಸ್ಮರಿಸುತ್ತಾ, "ನಿಮ್ಮನ್ನ ಬಿಟ್ಟರೆ ನನಗೆ ಯಾರುದಿಕ್ಕು ತಂದೆ?" ಎನ್ನುತ ಮರಳಿನಿಂದ ಹುಳು ಕಚ್ಚಿದ ಜಾಗವನ್ನು ಉಜ್ಜಿ ನೀರಿನಿಂದ ತೊಳೆದು ಸ್ವಾಮಿಯವರ ಸನ್ನಿಧಿಗೆ ಬಂದರು. ಸಂಜೆಯ ವೇಳೆಗೆ ಕಾಲು ಯಥಾಸ್ಥಿತಿಗೆ ಬಂದಿತು. ಆ ರಾತ್ರಿ ಸ್ವಾಮಿಯವರು ರೋಶಿ ರೆಡ್ಡಿಯೊಂದಿಗೆ, "ಸ್ನಾನಾನಿಕಿ ಪೋಯಿನ ದಗ್ಗರ ಚೂಚುಕೋ,

ಅರ್ಥಂ ಅವುತುಂದಿ" (ಸ್ನಾನಕ್ಕೆ ಹೋದ ಜಾಗದ ಹತ್ತಿರ ನೋಡಿಕೋ ಅರ್ಥವಾಗುತ್ತದೆ) ಎಂದು ಎಚ್ಚರಿಸಿದರು. ಈ ಮಾತನ್ನು ಕೇಳಿ, ಸ್ವಾಮಿಯವರು ಸರ್ವಾಂತರ್ಯಾಮಿ, ಯಾವಾಗಲೂ ಎಲ್ಲರ ಮೊರೆ ಕೇಳುತ್ತಿರುತ್ತಾರೆ ಎಂದು ರೋಶಿ ರೆಡ್ಡಿ ಗ್ರಹಿಸಿದರು. ಸ್ನಾನಕ್ಕೆ ಹೋದಾಗ, ನದಿಯ ದಡ ದಲ್ಲಿ ತಾನು ಮಾಡಿದ ಪ್ರಾರ್ಥನೆ ಸ್ವಾಮಿಯವರು ಕೇಳಿದರೆಂದು, ಮತ್ತೆ ಅವರನ್ನ ಸ್ಮರಿಸುತ್ತ ಮರಳನ್ನು ತಮ್ಮ ಕಾಲಿಗೆ ಉಜ್ಜಿದ ನಂತರವೇ ಕಾಲು ಗುಣವಾಯಿತೆಂದು ರೋಶಿ ರೆಡ್ಡಿ ತಿಳಿದು ಕೊಂಡರು.

ಬುಜ್ಜಯ್ಯ ಎಂಬ ಒಬ್ಬ ಭಕ್ತ, ಅನೇಕ ಕೋರ್ಟ್ ವ್ಯವಹಾರದಲ್ಲಿ (ಕೇಸು ಗಳಲ್ಲಿ) ಕ್ಷೋಭೆಗೊಂಡು ಸ್ವಾಮಿಯವರ ಸನ್ನಿಧಿಗೆ ಬಂದು ಸ್ವಲ್ಪ ದೂರ ನಿಂತುಕೊಂಡರು. "ಮನಸುಲೋ ಏಮೀ ಪೆಟ್ಟುಕೋವದ್ದು, ನೀವು ಚಕ್ಕಾ ಇಂಟಿಕಿ ಪೋ, ಅನ್ನೀ ನೇನು ಚೂಸುಕುಂಟಾನು" (ಮನಸ್ಸಿನಲ್ಲಿ ಏನೂ ಇಟ್ಟುಕೊಳ್ಳಬೇಡ. ನೀನು ಬೇಗ ಮನೆಗೆ ಹೋಗು. ನಾನು ಎಲ್ಲಾ ನೋಡಿಕೊಳ್ಳುತ್ತೇನೆ) ಎಂದು ಅಭಯ ಕೊಟ್ಟರು ಸ್ವಾಮಿಯವರು. ಅವರು ಹೇಳಿದಂತೆ ಬುಜ್ಜಯ್ಯನಿಗೆ ಎಲ್ಲಾ ಕಷ್ಟಗಳು ತೀರಿ ಹೋದವು.

ಗೊಲಗಮೂಡಿಯ ಕರಣಂ(ಪಟೇಲ) ಸುಬ್ಬಾರಾವ್ ಹೀಗೆ ಹೇಳಿದರು. "ಒಮ್ಮೆ ಒಬ್ಬ ಸರ್ಕಾರಿ ಉದ್ಯೋಗಿಯ ಮೇಲೆ ಆಪಾದನೆ ಬಂದಿತು. ಆ ಆಪಾದನೆ ಸಾಬೀತಾದ ಕಾರಣದಿಂದ, ಕಲೆಕ್ಟರವರು ಆತನ್ನ ಅಮಾನತು (ಸಸ್ಪೆಂಡ್) ಮಾಡುತ್ತೇನೆಂದು ಸೂಚನೆ ಪತ್ರ ಕೂಡ ಕಳುಹಿಸಿದರು. ಅಂತಹ ಕಷ್ಟ ಕಾಲದಲ್ಲಿ ಶ್ರೀ ಸ್ವಾಮಿಯವರ ಆಶೀರ್ವಾದ ಪಡೆಯಲು ಬಂದರು. "ಆಯನಕು ಚಾಕಲಿ ಮೂಟಂತ ಪಾಪಮುಂದಿ. ಆಯನ ಇಕ್ಕಡುಂಟೇ ಮನಕೊಕ ರವ್ವ (ಪೈಸಾ) ನಷ್ಟಂ, ವೆಂಟನೇ ಪೊಮ್ಮನಿ ಚೆಪ್ಪಯ್ಯಾ!" (**ಆತನಿಗೆ ಅಗಸನ ಹೊರೆಯಷ್ಟು ಪಾಪಗಳಿವೆ**, ಆತ ಇಲ್ಲಿದ್ದರೇ ನಮಗೆ ಒಂದು ಪೈಸದ ಲಾಭವೂ ಇಲ್ಲ ತಕ್ಷಣವೇ ಹೊರಟು ಹೋಗು ಎಂದು ಹೇಳಪ್ಪಾ) ಎಂದರು ಸ್ವಾಮಿಯವರು. ಆತ ನಿಂತ ಜಾಗದಿಂದ ಚಲಿಸಲಿಲ್ಲ. ಸ್ವಾಮಿಯವರು ಅದೇ ಮಾತು ಪದೇ ಪದೇ ಹೇಳಿ ಆತನನ್ನ ಕಳುಹಿಸಿ ಬಿಟ್ಟರು. ಆ ವ್ಯಕ್ತಿ ಅರ್ಧ ಗಂಟೆಯ ನಂತರ ಮತ್ತೆ ಬಂದು, "ಸ್ವಾಮೀ ನೀವು ಕೃಪೆ ತೋರಿಸದಿದ್ದರೆ ನಮ್ಮ ಗತಿ ಏನು?" ಎಂದು ಪದೇ ಪದೇ ಪ್ರಾರ್ಥಿಸಿದರು. ಆಗ ಸ್ವಾಮಿಯವರು, "ನೀ ಅಡ್ರೆಸ್ಸ್ ವ್ರಾಸಿಚ್ಚಿ ಪೋ, ಕಾಗಿತಂ ವ್ರಾಸಿ ಪಂಪುತಾನು" (ನಿನ್ನ ಅಡ್ರೆಸ್ಸ್ ಬರೆದು ಕೊಟ್ಟು ಹೊರಡು, ಕಾಗದ ಬರೆದು ಕಳುಹಿಸುತ್ತೇನೆ) ಎಂದು ಅಭಯ ಕೊಟ್ಟರು. ಆ ವ್ಯಕ್ತಿ ಸ್ವಾಮಿಯವರ ಆಜ್ಞೆಯಂತೆ ಮಾಡಿದರು. ಸ್ವಾಮಿಯವರ ಕೃಪೆಯಿಂದ ಅಮಾನತು (ಸಸ್ಪೆಂಶನ್) ತಪ್ಪಿ ಬೇರೆ ಊರಿಗೆ ವರ್ಗಾಯಿಸಲಾಯಿತು.

**(ಮುಖ್ಯ ಸೂಚನೆ: ಸ್ವಾಮಿಯವರು ಪಾಪಗಳನ್ನ ಅಗಸನ ಮೂಟೆಯ ಜೊತೆ ಹೋಲಿಸುತ್ತಾರೆ)

ಒಮ್ಮೆ ಸ್ವಾಮಿಯವರು ರೋಶಿ ರೆಡ್ಡಿಯವರಿಗೆ ಈ ರೀತಿಯಲ್ಲಿ ಹೇಳಿದರು, "ವೆಂಕಯ್ಯದಿ ಒಕಟೇ ಮಾಟ ಗದಯ್ಯಾ" (ವೆಂಕಯ್ಯಂದು ಒಂದೇ ಮಾತಲ್ಲವೇ?) ಅವರ ಆ ಅಮೃತ ವಾಕ್ಯದಲ್ಲಿ ಎಂತಹ ದೊಡ್ಡ ಶಕ್ತಿ ಇರುತ್ತದೆಯೋ, ಅವರು ಕೊಡುವ 26

ಚಿಕ್ಕ ಸೂಚನೆ ಹಿಂದೆ ಎಂತಹ ಬಲವತ್ತರವಾದ ಕಾರಣ ಅಡಗಿರುತ್ತದೆಯೋ ಅದು ಅನುಭವಿಸಿದವರಿಗೇ ಗೊತ್ತಾಗುತ್ತದೆ.

ಸ್ವಾಮಿಯವರು ಅವರ ಪ್ರತಿಒಬ್ಬ ಸೇವಕನಿಗೂ ಒಂದು ಕಾರ್ಯವನ್ನು ನಿಯೋಜಿಸಿದ್ದರು. ಅವರೆಲ್ಲರೂ ಪ್ರತಿ ನಿತ್ಯ ತಮ್ಮ ಕಾರ್ಯವನ್ನು ಭಕ್ತಿಯಿಂದ ನಿರ್ವಹಿಸುತ್ತಿದ್ದರು. ಅಗ್ನಿಹೋತ್ರಕ್ಕೆ ಕಟ್ಟಿಗೆ ತರುವ ಕೆಲಸ ವೈ ರಮಣಯ್ಯನದು. ಒಮ್ಮೆ ಸ್ವಾಮಿಯವರು ಬೆಳಗಾಗುತ್ತಲೇ ರಮಣಯ್ಯ ನನ್ನು ಕರೆದು, "ಈ ರೋಜು ಇಕ್ಕಡ ನೀಳ್ಳು, ನಿಪ್ಪೂ ಚೂಡಯ್ಯಾ!" (ಈ ದಿನ ಇಲ್ಲಿ ನೀರು ಮತ್ತೆ ಉರಿ ನೋಡುಕೊ) ಎಂದರು. ಇದೇನು? ಸ್ವಾಮಿಯವರು ದಿನದ ಕರ್ತವ್ಯವನ್ನು ಏಕೆ ಬದಲಾಯಿಸಿದರು, ಎಂದು ಅಂದುಕೊಂಡರು ರಮಣಯ್ಯ. ಸ್ವಲ್ಪ ಹೊತ್ತಾದ ನಂತರ, ಸ್ವಾಮಿಯವರ ಮಾತನ್ನು ನಿರ್ಲಕ್ಷಿಸಿ ಕಟ್ಟಿಗೆ ತರಲು ಹೊರಟು ಹೋದರು. ಅವರು ಒಂದು ದೊಡ್ಡ ಮರ ಹತ್ತಿ ಒಂದು ಕೊಂಬೆಯನ್ನು ಕಡಿಯುತ್ತಿದ್ದಾಗ ಒಂದು ದೊಡ್ಡ ಕೊಂಬೆ ಮುರಿದು, ಆತನ ಎದೆಗೆ ತಾಕಿ ಆತ ಕೆಳಗೆ ಬಿದ್ದುಬಿಟ್ಟರು. ಅವರ ಭುಜದ ಹತ್ತಿರ ಒಂದು ಮೂಳೆ ಮುರಿಯಿತು. ಆದರೆ, ಆತ 4 ಅಂಗುಲ ಪಕ್ಕದಲ್ಲಿ ಇದ್ದ ಬಂಡೆಯ ಮೇಲೆ ಬಿದ್ದಿದ್ದರೆ, ತಲೆ ಒಡೆದು ಅಲ್ಲೇ ಮರಣಿಸುತ್ತಿದ್ದರು. ಅದನ್ನು ಸ್ವಾಮಿಯವರಿಗೆ ಹೇಳಿದಾಗ, "ಆಸುಪತ್ರಿ ಆಪು" (ಆಸುಪತ್ರೆಯೇ ದಿಕ್ಕು) ಎಂದು ಹಾಮೀ ಪತ್ರ ಬರೆಸಿದರು.

ಬಹಳ ದಿನಗಳಿಂದ ಸ್ವಾಮಿಯ ಸೇವೆ ಮಾಡುತ್ತಿದ್ದ ಬರಿಗೇಲ ನಾಗಯ್ಯನವರ ಬಲಭಾಗದ ಕೆಳಗಿನ ಪಕ್ಕೆಲುಬುಗಳಲ್ಲಿ ನೋವಿನಿಂದ ವಿಲವಿಲ ಒದ್ದಾಡುತ್ತಿದ್ದರು. ಅಲ್ಲಿದ್ದ ಭಕ್ತರು ಡಾಕ್ಟರ್ ಹತ್ತಿರ ಸಲಹೆ ಪಡೆಯಿರಿ ಎಂದು ಹೇಳಿದಾಗ, 'ನನ್ನ ಡಾಕ್ಟರ್ ಸ್ವಾಮಿಯವರೇ! ನನಗೆ ಅವರೇ ಶರಣು' ಎಂದು ಸ್ವಾಮಿಯವರ ಸ್ಮರಣೆ ಮಾಡುತ್ತಿದ್ದರು. ನೋವು ಅಸಹನೀಯವಾಗಿತ್ತು. ಆಗ "ಏನು ಸ್ವಾಮಿ, ಕಲಿಯುಗದಲ್ಲಿ ಭೂಲೋಕ ಬಿಟ್ಟು ವೈಕುಂಠ ಸೇರಿದಿರಾ? ಅಥವ ನನ್ನನ್ನು ಮರೆತು ಬಿಟ್ಟಿರಾ?" ಎಂದು ಬಹಳ ವೇದನೆ ಇಂದ, ದುಃಖದಿಂದ ಕೇಳಿ ಕೊಂಡರು. ತಕ್ಷಣವೇ ನೋವು ಮಾಯವಾಗಿ, ನಿದ್ರೆಗೆ ಜಾರಿದರು. ಸ್ವಾಮಿಯವರು ಆತನ ಕನಸಿನಲ್ಲಿ ದರ್ಶನ ಕೊಟ್ಟು, "ನೇನೆಕ್ಕಡಿಕಿ ಪೋಯಾನಯ್ಯಾ? ನೀವೆಂಬಡೇ ಉಂಡ್ಲಾ?" (ನಾನೆಲ್ಲಿಗೆ ಹೋಗಿದ್ದೇನೆ? ನಿನ್ನ ಹತ್ತಿರವೇ ಇದ್ದೇನಲ್ಲಾ?) ಎಂದರು.

ಸ್ವಾಮಿಯವರ ಸೇವೆ ಮಾಡುತ್ತಿದ್ದ ಜಯ ರಾಮರಾಜು, ಒಮ್ಮೆ ತನ್ನ ಅನುಭವವನ್ನು ವೇಲೂರು ಸುಬ್ರಹ್ಮಣ್ಯಂ (ನಾಗುಲವೆಲ್ಲಟೂರು ನಿವಾಸಿ) ಅವರಿಗೆ ಹೀಗೆ ಹೇಳಿದರು: "ಒಮ್ಮೆ ನಾನು ನಮ್ಮ ಎತ್ತುಗಳನ್ನು ಮೇಯಿಸಲು , ಕಾಡಿಗೆ ಕರೆದು ಕೊಂಡು ಹೊರಟೆ. ಆಗ ಸ್ವಾಮಿಯವರು, "ವಾಟಿನಿ ತೋಲೇಸಿ ರಾಯ್ಯಾ! (ಅವುಗಳನ್ನ ಕಳುಹಿಸಿಬಾರಯ್ಯಾ) ಎಂದರು. "ನಾನು ಹಿಂತಿರುಗಿದರೆ, ನನ್ನ ದನಗಳನ್ನ ಯಾರು ಮೇಯಿಸುತ್ತಾರೆ? ಎಂದು ಕೇಳಿದೆ. ಆಗ ಸ್ವಾಮಿಯವರು, 'ಪರವಾಲೆದುಲೇ, ತೋಲೇಸಿ ವಚ್ಚೇಯಿ' (ಪರವಾಗಿಲ್ಲ, ಕಳುಹಿಸಿ ಬಾ) ಎಂದರು. ಸ್ವಾಮಿಯವರ ಮೇಲೆ ಭಾರ ಹಾಕಿ ಅಲ್ಲಿ ಎತ್ತುಗಳನ್ನ ನೋಡಿಕೊಳ್ಳುತ್ತಿದ್ದ ಬೇರೇ ಗೋಪಾಲಕರಿಗೆ ಹೇಳಿ ಬಂದು

ಸ್ವಾಮಿಯವರ ಹತ್ತಿರ ಕುಳಿತುಕೊಂಡೆ. ಸ್ವಲ್ಪ ಸಮಯದ ನಂತರ, ಸ್ವಾಮಿಯವರು ಇದ್ದಕ್ಕಿದ್ದಂತೆ, ಎದ್ದು ತಮ್ಮ ಕೋಲು ತೆಗೆದುಕೊಂಡು "ಥೆಯ್, ಥೆಯ್" ಎಂದು ಜೋರಾಗಿ ಕೂಗುತ್ತಾ 10 ಮಾರು ದೂರ ಹೋಗಿ ಮತ್ತೆ ಬಂದು ಕುಳಿತುಕೊಂಡರು. "ಏನು ಸ್ವಾಮಿ? ಅಲ್ಲಿ ಏನೂ ಇಲ್ಲದ್ದಿದ್ದರೂ ಏಕೆ ಬೆದರಿಸುತ್ತಿದ್ದೀರಾ? ಎಂದು ಕೇಳಿದೆ. "ನೀ ಎದ್ದುಲೇನಯ್ಯಾ" (ನಿನ್ನ ಎತ್ತುಗಳಯ್ಯಾ) ಎಂದರೆ ಹೊರತೂ ಯಾವ ವಿವರಗಳು ಹೇಳಲಿಲ್ಲ. ಬೆಳಗಾದ ನಂತರ, ಬೇರೆ ಗೋಪಾಲಕರು, "ನೆನ್ನೆ ಒಂದು ಚಿರುತೆ ಬಂದು ನಿಮ್ಮ ಎತ್ತಿನ ಮೇಲೆ ದಾಳಿ ಮಾಡಲು ಬಂದಾಗ, ಆ ಬೆರಳು ಗಳ ಮುದ್ರೆ ಹಾಕುವ ಸ್ವಾಮಿಯವರು ಬಂದು ತಮ್ಮ ದೊಣ್ಣೆ ಬೀಸಿ ಅದನ್ನು ಓಡಿಸಿದರು. ಇಲ್ಲದಿದ್ದರೇ, ನಿಮ್ಮ ಎತ್ತು ಆ ಚಿರತೆಗೆ ಆಹುತಿ ಆಗುತ್ತಿತ್ತು ಎಂದು ಹೇಳಿದರು. ಆಗ ನನಗೆ ಸ್ವಾಮಿಯವರು ದೊಣ್ಣೆ ತೆಗೆದುಕೊಂಡು "ಥೆಯ್, ಥೆಯ್" ಎಂದು ಬೆದರಿಸಿದ ಅರ್ಥ ತಿಳಿಯಿತು". ಜಯರಾಮರಾಜುರವರಿಗೆ ಎಷ್ಟೋ ಈ ತರಹದ ಅನುಭವಗಳು ಆಗಿದ್ದರಿಂದಲೇ ಅವರು ಸ್ವಾಮಿಯವರ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು.

ಒಂದು ದಿನ ಸ್ವಾಮಿಯವರು ತಮ್ಮ ಎಡ ಅಂಗೈಯನ್ನು ಮೇಲೆತ್ತಿ, ಬಲಗೈ ತೋರು ಬೆರಳನ್ನು ಅದರ ಮೇಲಿಟ್ಟು "ಪುಲ್ಲ ಗುಚ್ಚುಕುಂದಯ್ಯ" (ಸಣ್ಣ ಕಡ್ಡಿ ಚುಚ್ಚಿದೆ) ಎಂದರು. ಆದರೆ ನಿಜವಾಗಿಯೂ ಅಲ್ಲಿ ಏನೂ ಚುಚ್ಚಿರಲಿಲ್ಲ. ಸ್ವಾಮಿಯವರು ಏಕೆ ಹಾಗೆ ಹೇಳಿದರೆಂದು ಅಲ್ಲಿದ್ದ ಭಕ್ತರಿಗೆ ತಿಳಿಯಲಿಲ್ಲ. ಒಂದು ಗಂಟೆ ಆದ ನಂತರ ಅವರಿಗೆ ವಿಷಯ ತಿಳಿಯಿತು, ಏನೆಂದರೆ, ಅರ್ಧ ಮೈಲಿ ದೂರದಲ್ಲಿ ಇದ್ದ ಕೊಜ್ಜಕೂಟಿ ಬುಜ್ಜಯ್ಯನಿಗೆ (ಸ್ವಾಮಿಯ ಭಕ್ತ) ಅದೇ ಸಮಯದಲ್ಲಿ ಒಂದು ಚೇಳು ಕುಟುಕಿತು (ಕಚ್ಚಿತು). ಸ್ವಾಮಿಯವರು ತಮ್ಮ ಕೈಯ್ಯಲ್ಲಿ ತೋರಿಸಿದ ಅದೇ ಜಾಗ, ಅದೇ ಬೆರಳು, ಅದೇ ಸಮಯ. ಆಗ ಬುಜ್ಜಯ್ಯನವರು ಸ್ವಾಮಿಯ ಸ್ಮರಣೆ ಮಾಡಿದರು. ತಕ್ಷಣವೇ ಚೇಳು ಕಚ್ಚಿದ ಬಾಧೆ ಪೂರ್ತಿಯಾಗಿ ಕಡಿಮೆ ಆಯಿತು.

ಒಮ್ಮೆ ಸ್ವಾಮಿಯವರು ಕಲಿಚೇಡಿನಲ್ಲಿ ಇದ್ದರು. ಸ್ವಾಮಿಯವರ ಸೇವಕ ರೋಶಿ ರೆಡ್ಡಿಯವರಿಗೆ ಕಣ್ಣು ಶಸ್ತ್ರಚಿಕಿತ್ಸೆಯಾಗಿ ತುಂಬಾ ನೋವು ಅನುಭವಿಸುತ್ತಿದ್ದರು. ಆ ಸಮಯದಲ್ಲಿ ಒಂದು ದಿನ ಸ್ವಾಮಿಯವರು ರೋಶಿ ರೆಡ್ಡಿಯೊಂದಿಗೆ "ಅಯ್ಯಾ! ನೀವು ಇಂಟಿಕಿ ಪೋಯಿರಾವಾಲಿ. ನಲಭೈಲಕ್ಷಲು ಕಡಿತೆ ತ್ವರಲೋ ರಾಮಲಕ್ಷ್ಮಣುಲು ರಕ್ಷಿಸ್ತಾರು. ಊರಿಕಿ ಪೋತೇ ಅಮ್ಮಣ್ಣಿ ಕಾಪಾಡುತುಂದಿ. ರೇಪು ಉದಯಂ ನಾಕು ಚೆಪ್ಪಕುಂಡಾ ವೆಳ್ಳೀ ಮರಲಾ ವಚ್ಚೇಯ್" (ಅಯ್ಯಾ! ನೀನು ಊರಿಗೆ ಹೋಗಿಬರಬೇಕು. 40 ಲಕ್ಷ ಕಟ್ಟಿದರೆ ರಾಮಲಕ್ಷ್ಮಣರು ಕಾಪಾಡುತ್ತಾರೆ. ಊರಿಗೆ ಹೋದರೆ ದೇವಿ ರಕ್ಷಿಸುತ್ತಾರೆ. ನಾಳೆ ಬೆಳಿಗ್ಗೆ ನನಗೆ ಹೇಳದೇ ಹೋಗಿ ತಕ್ಷಣವೇ ಬಾ) ಎಂದು ಒಂದು ಹಾಮಿ ಪತ್ರವನ್ನು ಬರೆಸಿದರು ಸ್ವಾಮಿಯವರು. ರೋಶಿ ರೆಡ್ಡಿಯವರು ಸ್ವಾಮಿಯ ಆದೇಶದಂತೆ ಹೊರಟರು. ರಾಜಂಪೇಟೆ ರೈಲ್ ನಿಲ್ದಾಣದ ಪ್ಲಾಟ್ಫಾರಂ ಮೇಲೆ ನಡೆಯುತ್ತಿದ್ದಾಗ, ಲೈಟ್ ಕಣ್ಣು ಕುಕ್ಕಿದ್ದರಿಂದ ಕಣ್ಣು ಕಾಣದೆ ಫ್ಲಾಟ್ಫಾರಂನಿಂದ ಜಾರಿ 4 ಅಡಿಯ ಆಳ ದಲ್ಲಿದ್ದ ರೈಲು ಪಟ್ಟಿಗಳ ಮೇಲೆ ಬಿದ್ದು ಬಿಟ್ಟರು. ಅವರಿಗೆ ಪೆಟ್ಟೇನೂ ಆಗಲಿಲ್ಲ. ಊರಿಗೆ ಹೋದ ಮೇಲೆ,

ಅಲ್ಲಿದ್ದ 4 ದಿನಗಳು ಗ್ರಾಮ ದೇವತೆ ಎಲ್ಲಮ್ಮ ದರ್ಶನ ಕೊಟ್ಟರು. ರೈಲು ಪಟ್ಟಿಗಳ ಮೇಲೆ ಬಿದ್ದಾಗ ಅವರಿಗೆ ಸ್ವಾಮಿಯವರ ಮಾತುಗಳು (ರಾಮಲಕ್ಷ್ಮಣರು ರಕ್ಷಿಸುತ್ತಾರೆಂಬುದು) ಅರ್ಥವಾಯಿತು.

ಗೊಲಗಮೂಡಿ ಚೆತ್ತಯ್ಯನಿಗೆ ಹೊಲ ದಲ್ಲಿ ಕೆಲಸ ಮಾಡುತ್ತಿದ್ದಾಗ, ಅಂಗಾಲನ್ನು ಚೇಳು ಕುಟುಕಿತು. "ಓಂ ಗುರುದೇವಾ" ಎನ್ನುತ್ತಾ ಕಾಲು ಗಟ್ಟಿಯಾಗಿ ಹಿಡಿದು ಕೊಂಡು ಸ್ವಾಮಿಯವರ ಸ್ಮರಣೆ ಮಾಡಿದ. ತಕ್ಷಣ ಬಾಧೆ ಸಂಪೂರ್ಣವಾಗಿ ಹೋಯಿತು, ಮತ್ತೆ ಹೊಲ ದಲ್ಲಿ ಹೋಗಿ ಯಥಾಪ್ರಕಾರ ಕೆಲಸ ಮಾಡಲು ಪ್ರಾರಂಭಿಸಿದರು.

ಗೊಡ್ಡಟಿ ಶೇಷಯ್ಯನವರ ಎಮ್ಮೆ ತುಂಬಾ ರೋಗಗ್ರಸ್ಥವಾಗಿತ್ತು. ಅವರು ಸ್ವಾಮಿಯವರ ಬಳಿ ಬಂದರು. ಆಗ ಸ್ವಾಮಿಯವರು ಅಂಬಲಿ ಕುಡಿಯುತ್ತಿದ್ದರು. ಸೇವಕರು, "ಸ್ವಾಮಿಯವರು ಅಂಬಲಿ ಕುಡಿಯುತ್ತಿದ್ದಾರೆ, ದೂರ ಇರು" ಎಂದು ಹೇಳಿದರು. ಆದರೆ, ಶೇಷಯ್ಯನವರು ಬಹಳ ಆತುರದಲ್ಲಿದ್ದರು ಸ್ವಾಮಿಯವರು ಆತನ ಕಡೆ ನೋಡಿ ತಕ್ಷಣವೇ, "ಅಯ್ಯಾ ನೀವು ಪೋಯೇ ಸರಿಕಿ ಬರ್ರೆಕು ಬಾಗುಂತುಂದಿಲೇ ಪೋ" ("ಅಯ್ಯಾ! ನೀನು ಮನೆಗೆ ಹೋಗುವ ಹೊತ್ತಿಗೇ ಎಮ್ಮೇ ಗುಣವಾಗಿರುತ್ತದೆ. ಹೋಗು!) ಎಂದರು. ಅದೇ ರೀತಿ ಆತ ಮನೆ ಸೇರುವ ಹೊತ್ತಿಗೆ ಎಮ್ಮೆ ಗುಣವಾಗಿ, ಹುಲ್ಲು ಮೇಯುತ್ತಿತ್ತು.

ಗೊಲಗಮೂಡಿಯ ನಿವಾಸಿ ತೂಪಿಲಿ ವೆಂಕಯ್ಯ, ಬಹಳ ಕಾಲದಿಂದ ಸ್ವಾಮಿಯವರ ಸೇವಕರೆಲ್ಲರ ಬಟ್ಟೆಗಳನ್ನು ಶ್ರದ್ಧೆಯಿಂದ ಒಗೆಯುತ್ತಿದ್ದರು. 1981 ರ ಬೇಸಿಗೆಯ ಕಾಲದಲ್ಲಿ ಅವರಿಗೆ ಒಮ್ಮೆ ಒಂದು ಅರ್ಧರಾತ್ರಿಯಲ್ಲಿ ಎಚ್ಚರ ಆಗಿ, ನಿದ್ರೆ ಬರದೆ, ಮಂಚದ ಮೇಲೆ ಇರಲಾರದೇ, ಯಾರೋ ಎಬ್ಬಿಸಿದ ಹಾಗೆ ಎದ್ದು ಬೀಡಿ ಹಚ್ಚುವುದಕ್ಕೋಸ್ಕರ ಮನೆಯ ದೀಪದ ಹತ್ತಿರ ಬಂದರು. ಅರ್ಧ ರಾತ್ರಿ ಆಗಿತ್ತು, ಮಂದ ಕತ್ತಲೆಯಲ್ಲಿ, ಯಾರೋ ಒಬ್ಬ ವ್ಯಕ್ತಿ ಮನೆಯ ಮಧ್ಯ ಭಾಗದಲ್ಲಿ ಕೂತಿದ್ದನ್ನು ಕಂಡು ಜೋರಾಗಿ ಕಿರುಚಿದರು. ಆ ಕೂಗನ್ನು ಕೇಳಿ, ಆ ವ್ಯಕ್ತಿ ಕೂಡ ಜೋರಾಗಿ ಕಿರುಚಿದ. ಆಗ ಮನೆಯವರೆಲ್ಲರೂ ಎದ್ದು ಬಂದರು. ನೋಡಿದರೆ, ಒಂದು ಪಕ್ಕದಲ್ಲಿ ಮನೆಯ ಪಾತ್ರೆ ಸಾಮಾನುಗಳನ್ನೆಲ್ಲ ಹರಡಿ ಕೊಂಡು, ಇನ್ನೊಂದು ಪಕ್ಕ ಬಹಳ ದುಬಾರಿ ಬಟ್ಟೆಗಳು ಪೇರಿಸಿ ಕೊಂಡು ಒಬ್ಬ ಕಳ್ಳ ಕೂತಿಕೊಂಡಿದ್ದ. ಅವನ ಹತ್ತಿರ ಒಂದು ದೊಡ್ಡ ಕೋಲು ಇತ್ತು. ಆ ಕಳ್ಳನನ್ನು ಹಿಡಿದು ಕಟ್ಟಿ ಹಾಕಿ, "ಇದೇನು ಇಷ್ಟು ಸುಲಭವಾಗಿ ಸಿಕ್ಕಿ ಬಿಟ್ಟೆ?" ಎಂದು ಕೇಳಿದಾಗ, ಆ ಕಳ್ಳ ಹೀಗೆ ಹೇಳಿದ, " “ನಾನು ಮನೆಯೊಳಗೆ ಬರುತ್ತಿದ್ದಾಗ, ಯಾರೋ ನನ್ನ ಬೆನ್ನಿನ ಹಿಂದೆ ಇದ್ದು ಹಿಂಬಾಲಿಸಿದಂತೆ ಆಯಿತು, ನಾನು ಶಕ್ತಿಹೀನನಾದೆ. ಹೇಗೋ ಕಷ್ಟಪಟ್ಟು ಎದ್ದು ಎಲ್ಲ ಪಾತ್ರೆ, ಬಟ್ಟೆ ಸೇರಿಸಿ ಮೂಟೆ ಕಟ್ಟಿಕೊಂಡೆ. ಆದರೆ, 'ಎಲ್ಲಿದ್ದ ಸಾಮಾನು ಅಲ್ಲಿ ಇಟ್ಟುಬಿಡು!' ಎಂದು ಯಾರೋ ಹೆದರಿಸಿದಂತಾಯಿತು. ಆ ಆಜ್ಞೆ ಮೀರಲಾರದೆ, ಕಟ್ಟಿದ ಮೂಟೆ ಬಿಚ್ಚಿ, ಸಾಮಾನೆಲ್ಲಾ ಹರಡಿ ಕೊಂಡು ಕುಳಿತೆ. ಕಣ್ಣು ಕಾಣದೆ, ಏಳುವುದಕ್ಕೆ ಶಕ್ತಿಯಿಲ್ಲದೇ ಹೀಗೇ ಕುಳಿತುಬಿಟ್ಟೆ. ಇಲ್ಲದಿದ್ದರೆ, ನನ್ನ ಒಂದು ಏಟು ನೀವೆಲ್ಲರು ಸಹಿಸುಕೊಳ್ಳಬಲ್ಲಿರಾ? ಎಂದನು.

ಪೆಮ್ಮಸಾನಿ ಶ್ರೀಹರಿನಾಯುಡುರವರು, ಸ್ವಾಮಿಯವರನ್ನು ತಮ್ಮ ಗಾಡಿಯಲ್ಲಿ ಕೂರಿಸಿಕೊಂಡು ಅವರು ಹೇಳಿದ ಜಾಗಕ್ಕೆ ಕರೆದುಕೊಂಡು ಹೋಗಿ ಬಿಡುತ್ತಿದ್ದರು. ಆತನ ಪತ್ನಿ ಸ್ವಾಮಿಯವರ ಬಿಡದಿಗೆ ಬಂದು ನಮಸ್ಕರಿಸಿದರು. ಆಗ ಸ್ವಾಮಿಯವರು "ಅಮ್ಮಾ! ನೀಕು ಪಸುಪು ಕುಂಕುಮ ಗಂಡಮುನ್ನದಿ. ತಿರುವಳ್ಳೂರು ವೀರ ರಾಘವಸ್ವಾಮಿ ತಪ್ಪಿಸ್ತಾಡು" (ಅಮ್ಮಾ, ನಿನಗೆ ನಿನ್ನ ಅರಿಸಿನ ಕುಂಕುಮದ ಗಂಡಾಂತರ ಇದೆ, ತಿರುವಳ್ಳೂರು ವೀರ ರಾಘವಸ್ವಾಮಿ ತಪ್ಪಿಸುತ್ತಾರೆ) ಎಂದು ಹೇಳಿದರು. ಆ ರಾತ್ರಿ ಸ್ವಾಮಿಯವರು ಇವರ ಮನೆಗೆ ಬಂದು ಧುನಿಯನ್ನಿಟ್ಟು, ಬೆಳಗಾದ ನಂತರ ಅವರ ಗಾಡಿಯಲ್ಲೇ ಪಕ್ಕದಲ್ಲಿದ್ದ ಮೈಕಾ ಗಣಿಗೆ ಹೋದರು. ಶ್ರೀಹರಿನಾಯುಡು ಆ ದಿನ ತನ್ನ ಎತ್ತಿಗೆ ಹುಲ್ಲು ಹಾಕಲು ಹೋದರು. ಸಾಮಾನ್ಯವಾಗಿ ಬಹಳ ಸಾಧುವಾದ ಆ ಎತ್ತು, ಆ ದಿನ ಅವರ ಮೇಲೆ ದಾಳಿ ಮಾಡಿ, ಅವರ ವೃಷಣಗಳ ಹತ್ತಿರ ಕೊಂಬನ್ನು ತೂರಿಸಿ ಚುಚ್ಚಿ ಎತ್ತಿ ದೂರ ಎಸೆದು ಬಿಟ್ಟಿತು. ಅವರ ವೃಷಣಗಳಲ್ಲಿ ಕೊಂಬು ಚುಚ್ಚಿ, ಚರ್ಮ ಸೀಳಿ ಕೆಳ ಹೊಟ್ಟೆಯ ವರೆಗೆ 6 ಅಂಗುಲ ಆಳವಾದ ಗಾಯವಾಗಿ, ಬಹಳ ರಕ್ತಸ್ರಾವ ಆಯಿತು. ಅವರು ಆಸ್ಪತ್ರೆಗೆ ಹೋಗಿ ಅವರ ಗಾಯಕ್ಕೆ ಚಿಕಿತ್ಸೆ ಮಾಡಿಸಿಕೊಂಡರು. ಸ್ವಾಮಿಯವರ ಆಶೀರ್ವಾದ ಇದ್ದರಿಂದ ಪ್ರಾಣಾಪಾಯ ತಪ್ಪಿತು. ಇಂದಿಗೂ ಶ್ರೀಹರಿನಾಯುಡು ಸ್ವಾಮಿಯವರ ಸೇವೆಯನ್ನು ಅನೇಕ ರೂಪದಲ್ಲಿ ಮಾಡುತ್ತಿರುತ್ತಾರೆ.

ನೆಲ್ಲೂರಿನಲ್ಲಿ ಇದ್ದ ಮಾಕಾನಿ ವೆಂಕಟ್ರಾವ್ ಅವರು, ಮದ್ರಾಸ್ ಹೋಗುವುದಕ್ಕೆ ಸ್ವಾಮಿಯವರ ಅನುಮತಿ ಪಡೆಯಲು ಬಂದರು. ಸಾಮಾನ್ಯವಾಗಿ, ಸ್ವಾಮಿಯವರು, "ಹೋಗಿ ಬಾ" ಎಂದಾಗಲಿ, "ಹೋಗಿ ಬಾ ಬಂಗಾರ" ಎಂದು ಎನ್ನುತ್ತಿದ್ದವರು. ಅಂದಿನ ದಿನ ಮಾತ್ರ, "ತಿರುವಳ್ಳೂರು ವೀರ ರಾಘವಸ್ವಾಮಿ, ಕಂಚಿ ವರದರಾಜ ಸ್ವಾಮಿ ನಿನ್ನು ರಕ್ಷಿಸ್ತಾರು" (ತಿರುವಳ್ಳೂರು ವೀರರಾಘವ ಸ್ವಾಮಿ, ಮತ್ತು ಕಂಚಿ ವರದರಾಜಸ್ವಾಮಿ ಅವರು ನಿನ್ನನ್ನು ರಕ್ಷಿಸುತ್ತಾರೆ) ಎಂದರು. ವೆಂಕಟ್ರಾವ್ ಮದ್ರಾಸ್ ಸೇರಿದರು. ಅಲ್ಲಿ, ಕಿಕ್ಕಿರಿದು ತುಂಬಿದ ಬಸ್ ಹತ್ತುವುದಕ್ಕೆ ಒಂದು ಕಾಲು ಫುಟ್ಬೋರ್ಡ್ ಮೇಲಿಟ್ಟು, ಒಂದು ಕೈಯ್ಯಲ್ಲಿ ಕಂಬಿ ಹಿಡಿದು ಕೊಂಡರು. ಇನ್ನೊಂದು ಕಾಲು ಎತ್ತುವ ಮುಂಚೆ ಬಸ್ ಹೊರಟಿ ಬಿಟ್ಟಿತು. ಆದುದರಿಂದ, ಕಾಲು ನೆಲದಮೇಲೆ ಉಜ್ಜುತಿತ್ತು. ಅಲ್ಲಿನ ಮಿಕ್ಕ ಜನಗಳು ಆತ ಬಿದ್ದು ಬಿಟ್ಟರು ಎಂದು ಭಾವಿಸಿದರು. ಬಸ್ಸಿನಲ್ಲಿ ಹಿಂದಿದ್ದ ಜನರೆಲ್ಲರು ಡ್ರೈವರ್ ಗೆ "ಬಸ್ಸು ನಿಲ್ಲಿಸು" ಎಂದು ಕೂಗಿ ಹೇಳಿದರು. ಆದು ಡ್ರೈವರ್ ಗೆ ಕೇಳಿಸಲಿಲ್ಲ. ವೆಂಕಟ್ರಾವ್ ಕೂಡ ಬದುಕುವ ಆಸೆ ಬಿಟ್ಟು ಬಿಟ್ಟಿದ್ದರು. ತಕ್ಷಣವೇ ಬಸ್ಸಿನ ಮುಂದಿನ ಚಕ್ರದ ಟೈರು ಒಡೆದು ಬಸ್ಸು ನಿಂತು ಬಿಟ್ಟಿತು. ಹಾಗೆ ಆಗದಿದ್ದರೆ, ವೆಂಕಟ್ರಾವ್ ಅವರ ಕೈ ಹಿಡಿತ ತಪ್ಪಿ ಕೆಳಗೆ ಬಿದ್ದು ಪ್ರಾಣಾಪಾಯ ಆಗುತ್ತಿತ್ತು. ಟೈರ್ ತೂತು ಬಿದ್ದು ಒಡೆದದ್ದು ಅವರ ಅದೃಷ್ಟ ಎಂದು ಮಿಕ್ಕ ಜನರೆಲ್ಲರೂ ಭಾವಿಸಿದರು. ಸ್ವಾಮಿಯವರ ಆಶಿರ್ವಾದದ ಮಹತ್ವ ಆಗ ವೆಂಕಟ್ರಾವ್ಗೆ ಅರ್ಥವಾಯಿತು.

ಒಮ್ಮೆ ಸ್ವಾಮಿಯವರು ಅವರ ಸೇವಕರ ಜೊತೆ ತಿರುಪತಿಗೆ ಹೋಗಿದ್ದರು. ಶ್ರೀ ಸ್ವಾಮಿಯವರ ಸೇವಕ ರೋಶಿ ರೆಡ್ಡಿಯವರನ್ನ ಮರೆತು ತಿರುಪತಿಯಲ್ಲೇ ಬಿಟ್ಟು

ಮಿಕ್ಕವರೆಲ್ಲರೂ ಕಲಿಚೇಡಿಗೆ ಬಂದು ಬಿಟ್ಟರು. ರೋಶಿ ರೆಡ್ಡಿಯವರು ರೈಲಿನಲ್ಲಿ ಟಿಕೆಟ್ ಇಲ್ಲದೇ ಪ್ರಯಾಣ ಮಾಡುತ್ತಿದ್ದರು. ಹಣವಿಲ್ಲದೇ ಗೂಡುರು ನಿಂದ ಕಲಿಚೇಡಿಗೆ ಹೇಗೆ ಪ್ರಯಾಣ ಮಾಡಬೇಕೆಂದು ಆಲೋಚಿಸುತ್ತಿದ್ದಾಗ, ಯಾರೋ ಒಬ್ಬ ಅಪರಿಚಿತ ಮಹಿಳೆ ಒಂದು ತಟ್ಟೆಯಲ್ಲಿ ಬಾಳೇಹಣ್ಣು ಮತ್ತು 1.00 ರೂ ಇಟ್ಟು, "ಸ್ವಾಮಿ ನನ್ನ ಈ ಬಡತನದ ಕೊಡುಗೆಗಳನ್ನು ದಯವಿಟ್ಟು ಸ್ವೀಕರಿಸಿ" ಎಂದು ಪ್ರಾರ್ಥಿಸಿದಳು. ಈ ರೀತಿಯಲ್ಲಿ ಸ್ವಾಮಿಯವರು ಪ್ರಸಾದಿಸಿದ 1.00 ರೂ ಬಸ್ ಟಿಕೆಟ್ಟಿಗೆ ಕೊಟ್ಟು ಪ್ರಯಾಣ ಮಾಡಿ ಕಲಿಚೇಡಿಗೆ ಬಂದು ಸ್ವಾಮಿಯವರನ್ನ ಸೇರಿದರು.

ವಲ್ಲಪುರೆಡ್ಡಿ ತುಳಸಮ್ಮನ ಮಗ ನಾರಾಯಣ ರೆಡ್ಡಿಯವರಿಗೆ ಕ್ಷಯವ್ಯಾಧಿ ಬಂದು ಆತನ ಸ್ಥಿತಿ ತುಂಬಾ ಪ್ರಮಾದಕರ ಆಗಿತ್ತು. ಆತ ಬದುಕುವುದಿಲ್ಲ ಎಂದು ಎಲ್ಲರೂ ಬಂದು ನೋಡಿಕೊಂಡು ಹೋಗುತ್ತಿದ್ದರು. ತುಳಸಮ್ಮನವರು ಮನೆಯನ್ನು ಬಿಟ್ಟು, ಬಹಳ ಕಾಲದಿಂದ ಸ್ವಾಮಿಯವರ ಸೇವೆ ಮಾಡಿಕೊಂಡಿದ್ದರು. ತುಳಸಮ್ಮನವರನ್ನು ಮಿಕ್ಕ ಜನರು "ಹೋಗಿ ಮಗನನ್ನು ನೋಡಿಕೊಂಡು ಬಾ" ಎಂದು ಹೇಳಿದರು. ತುಳಸಮ್ಮನವರು, ಸ್ವಾಮಿಯ ಅನುಮತಿ ಪಡೆಯಲು ಸ್ವಾಮಿಯವರನ್ನು ಕೇಳಿದಾಗ, "ಆಯನಕೇಮಮ್ಮಾ! ಬಾಗಾ ವುಂಟಾಡು. ನೀವು ಪೋವದ್ದು" (ಆತನಿಗೇನಮ್ಮಾ! ಚೆನ್ನಾಗಿಯೇ ಇರುತ್ತಾನೆ, ನೀನು ಹೋಗಬೇಡ) ಎಂದರು ಸ್ವಾಮಿಯವರು. ಆಕೆ ಹೋಗಲಿಲ್ಲ. ಸ್ವಾಮಿಯವರು ಹೇಳಿದಂತೆಯೇ ನಾರಾಯಣ ರೆಡ್ಡಿಗೆ ಅರೋಗ್ಯ ಸಂಪೂರ್ಣವಾಗಿ ಗುಣ ಆಗಿ ಮದುವೆ ಮಾಡಿಕೊಂಡು ಮಕ್ಕಳೂ ಆದರು.

ಗೊಲಗಮೂಡಿಯ ಪಟೇಲರು ಸುಬ್ಬಾರಾವ್ ಅವರ ಮಗ ಸ್ನೇಹಿತರೊಂದಿಗೆ ನಡೆದುಕೊಂಡು ಬರುತ್ತಿದ್ದಾಗ, ಹಿಂದಿನಿಂದ ಒಂದು ಟ್ರಾಕ್ಟರ್ ಬಂದು ಗುದ್ದಿತು. ಆತ ಕೆಳಗೆ ಬಿದ್ದರು, ಆಗ ಆತನ ಹೊಟ್ಟೆಯ ಮೇಲೆ ಆ ಟ್ರಾಕ್ಟರ್ ಮುಂದಿನ ಚಕ್ರ ಹತ್ತಿತ್ತು. ಆತನ ಪಕ್ಕೆಯ ಮೂಳೆ ಒಂದು ಮುರಿದು ಹೋಯಿತು. ಅವರನ್ನು ಸರ್ಕಾರೀ ಆಸ್ಪತ್ರೆಗೆ ಸೇರಿಸಿದರು. ಡಾಕ್ಟರ್ 3 ತಿಂಗಳಾದಮೇಲೆ ನಡೆಯುತ್ತಾನೆ ಎಂದು ಹೇಳಿದರು. ಆತನ ಸ್ನೇಹಿತರು 4 ಚಕ್ರಗಳ ಮಧ್ಯೆ ಬಿದ್ದಿದ್ದರಿಂದ ಹೆಚ್ಚು ಪೆಟ್ಟಾಗಲಿಲ್ಲ. ಅದೇ ಸಮಯದಲ್ಲಿ ಸ್ವಾಮಿಯವರು ಆಶ್ರಮದಲ್ಲಿ "ಪ್ರಮಾದಂ ಪ್ರಮಾದಂ" ಎಂದು ಜೋರಾಗಿ ಕೂಗುತ್ತಾ "ದೀಪಂ ವೆಲಗಿಂಚಂಡಿ" (ಪ್ರಮಾದ ಪ್ರಮಾದ, ದೀಪ ಬೆಳಗಿರಿ) ಎಂದು ಹಗಲು ದೀಪಾರಾಧನೆ ಮಾಡಿಸಿದರು.

ಅಲ್ಲಿದ್ದ ಭಕ್ತರಿಗೆ ಸ್ವಾಮಿ ಹೀಗೇಕೆ ಮಾಡಿದರೆಂದು ಅರ್ಥ ಆಗಲಿಲ್ಲ. ಬೆಳಗ್ಗೆ ಪ್ರಮಾದದ ವಿಷಯ ತಿಳಿದಮೇಲೆ ಸ್ವಾಮಿಯವರ ಮಾತು ಅರ್ಥವಾಯಿತು. ಈ ವಿಚಾರ ಸ್ವಾಮಿಯವರಿಗೆ ತಿಳಿಸಿದಾಗ, "ಪದಿಹೇನು ರೋಜುಲಲೋ ನಯಮ್ಮೈವಸ್ತಾಡು. ದೇವುಡು ರಕ್ಷಿಂಚಾಡು" (ಹದಿನೈದು ದಿನಗಳಲ್ಲಿ ಗುಣವಾಗಿ ಬರುತ್ತಾನೆ, ದೇವರು ಕಾಪಾಡಿದರು) ಎಂದು ಹೇಳಿ ಹಾಮಿ ಪತ್ರೆಯನ್ನು ಬರೆಯಿಸಿ, ತಾವು ಉಪಯೋಗಿಸುತ್ತಿದ್ದ ಕೌಪೀನ ಕೊಟ್ಟು ಆತನ ಹಾಸಿಗೆಯ ಮೇಲೆ ಹಾಸಿ ಎಂದು ಹೇಳಿ, ವಿಭೂತಿಯನ್ನು ಕೊಟ್ಟು ಅದನ್ನು ಸೇವಿಸು ಎಂದು ಹೇಳಿ ಕಳುಹಿಸಿದರು.

ಆಶ್ಚರ್ಯ ಏನಂದರೆ -

1. ಟ್ರಾಕ್ಟರ್ ಹಿಂದಿನ ಚಕ್ರ ಈತನ ಮೇಲೆ ಏರದೇ ಇದ್ದದ್ದು.

2. ಮೂರು ತಿಂಗಳಿಗೆ ನಡೆಯುತ್ತಾನೆಂದು ಡಾಕ್ಟರ್ ಹೇಳಿದರೆ, ಸ್ವಾಮಿಯವರು ಹೇಳಿದಂತೆ 15 ದಿನಕ್ಕೆ ನಡೆಯಲು ಆರಂಭಿಸಿದರು, ಅವರನ್ನ ಆಸ್ಪತ್ರೆಯಿಂದ ಮನೆಗೆ ಕಳುಹಿಸಿ ಕೊಟ್ಟರು.

ಓಂ ನಾರಾಯಣ - ಆದಿನಾರಾಯಣ

ಅವಧೂತ ಲೀಲೆ

ಅಧ್ಯಾಯ - 8

ಅಮೃತ ವಾಕ್ಯ

27

ಪರಮಾತ್ಮನ ಒಂದು ದೈವಿಕ ಶಕ್ತಿ ಈ ವಿಶ್ವದಲ್ಲಿ ಎಲ್ಲಾ ರೂಪಗಳಲ್ಲಿ ಆವರಿಸಿದೆ. ಅದೇ ಶಕ್ತಿ ನಮ್ಮ ದೇಹದಲ್ಲೂ ಕೆಲಸ ಮಾಡುತ್ತದೆ, ಅದು ಸರಾಗವಾಗಿ ಕೆಲಸ ಮಾಡಿದರೆ, ನಾವು ಅರೋಗ್ಯವಾಗಿ ಇರುತ್ತೇವೆ. ಆ ಶಕ್ತಿ ಯಾವಾಗಲೂ ನಮ್ಮ ಪೂರ್ವ ಕರ್ಮವನ್ನು ಅನುಸರಿಸಿ ನಮ್ಮಲ್ಲಿ ಅಸ್ತವ್ಯಸ್ತವಾಗಿ ಕೆಲಸಮಾಡುತ್ತದೆ, ಆದೇ ರೋಗಕ್ಕೆ ಕಾರಣ. ಮಹನೀಯರಲ್ಲಿ ಈ ಶಕ್ತಿ ಅವರ ತಪಸ್ಸಿನ ಪ್ರಭಾವದಿಂದ ಬಹಳ ಶಕ್ತಿವಂತವಾಗಿ ಕೆಲಸ ಮಾಡುತ್ತದೆ, ಆದ್ದರಿಂದಲೆ ಅವರಿಗೆ ಪ್ರಕೃತಿಯ ಮೇಲೆ ಬಲವಾದ ಹಿಡಿತವನ್ನು ಹೊಂದಿರುತ್ತಾರೆ. ಮಹನೀಯರು, ಗುಣಪಡಿಸಲು ಅಸಾಧ್ಯವಾದ ರೋಗಗಳನ್ನು ಕೂಡ ಗುಣಪಡಿಸ ಬಲ್ಲರು. ಅಂತಹ ಸಹಾಯವನ್ನು ಪಡೆದವರು, ಆ ಮಹನೀಯರಿಗೆ ಕೃತಜ್ಞತೆಯನ್ನು ತೋರಿಸುತ್ತ ಧರ್ಮಾಚರಣೆ ಮಾಡುತ್ತಾರೆ. ಸಾಮಾನ್ಯವಾಗಿ ಭಗವಂತ ಇದ್ದಾನೆಂಬ ವಿಶ್ವಾಸ ನಮ್ಮಂತಹ ಮಾನವರಿಗೆ ಹೇಗೆ ಸಾಧ್ಯ? ಆ ವಿಶ್ವಾಸ ಹುಟ್ಟಿಸುವ ಸಾಧನೆಯೇ ಮಹನೀಯರ ಲೀಲೆ ಗಳಿಗೆ ಕಾರಣ.

ಹುಚ್ಚುವೆಂಕಯ್ಯ ಎಂಬ ಬಿರುದು ಹೋಗಿ ಭಗವಾನ್ ಶ್ರೀ ವೆಂಕಯ್ಯ ಸ್ವಾಮಿ ಎಂಬ ಬಿರುದು ಬಂದಿತು ಸ್ವಾಮಿಯವರಿಗೆ. ಎಲ್ಲಾದರೂ ಜಾನುವಾರುಗಳನ್ನು ಬಾಧಿಸುವ ಮೂರ್ಛೆ ರೋಗ (ದೊಮ್ಮ), ಅಥವ ನೆರಣಿ ರೋಗ, ಮನುಷ್ಯರಿಗೆ ಸಿಡುಬು ಅಥವ ಕಲರಾ ಮುಂತಾದ ರೋಗಗಳು ಬಂದಿದ್ದರೆ, ಆ ಗ್ರಾಮದಿಂದ ಒಂದಿಬ್ಬರು ಜನ ಬಂದು ಸ್ವಾಮಿಯವರ ಹತ್ತಿರ ತಮ್ಮ ಸಮಸ್ಯೆಗಳನ್ನು ಹೇಳಿ ಕೊಳ್ಳುತ್ತಿದ್ದರು. ಆಗ ಸ್ವಾಮಿಯವರು ಆಶೀರ್ವದಿಸಿ ಸಾಮ್ರಾಣಿ, ದಾರ ಕೊಡುತ್ತಿದ್ದರು. ಪಶು ಗಳನ್ನು ಗುಂಪಾಗಿ ಓಡಿಸಲು ನಿಲ್ಲಿಸಿ ಅವುಗಳಿಗೆ ಹೊಗೆ ಹಾಕಿಸುತ್ತಿದ್ದರು. ಆಗ ಆ ಗ್ರಾಮದಲ್ಲಿ ಪಶು ಗಳಾಗಲಿ ಅಥವ ಮನುಷ್ಯರಾಗಲಿ ಮರಣಿಸುತ್ತಿರಲಿಲ್ಲ. ಸ್ವಾಮಿಯವರು, ಹಾವು ಮತ್ತು ಚೇಳಿನ ಕಡಿತದಿಂದ ಜನರನ್ನು ರಕ್ಷಿಸಿದ ಉದಾಹರಣೆಗಳು ಲೆಕ್ಕವಿಲ್ಲದಷ್ಟು. ಇಂದಿಗೂ ಸ್ವಾಮಿಯವರ ಸಮಾಧಿಯ ಪ್ರದಕ್ಷಿಣೆ ಮಾಡಿದರೆ ವಿಷ ಜಂತುಗಳ ಬಾಧೆ ನಿವಾರಣೆ ಆಗುತ್ತದೆ. ಅನೇಕರು ದೀರ್ಘ ಕಾಲದ ರೋಗಗಳಿಂದ ಮುಕ್ತಿ ಹೊಂದುತ್ತಿದ್ದಾರೆ.

ಬುಜ್ಜಯ್ಯನ ಕತ್ತಿನ ಮೂಳೆಯ ಕೆಳಗೆ ರಕ್ತನಾಳ ಸಂಕುಚಿತಗೊಂಡಿದ್ದರಿಂದ ರಕ್ತದ ಹರಿವು ಅನಿಯಮಿತವಾಗಿ ಶರೀರವೆಲ್ಲಾ ಸೆಳೆಯುತ್ತಿತ್ತು. ಮದ್ರಾಸ ವೈದ್ಯ ರಾಮಮೂರ್ತಿ ಮತ್ತು ಇತರ ವೈದ್ಯರು ಚಿಕಿತ್ಸೆ ನೀಡಿದರು, ಆದರೆ ಸಂಪೂರ್ಣವಾಗಿ ಗುಣ ಮುಖನಾಗಲಿಲ್ಲ. ಕೊನೆಗೆ ತಮ್ಮ ಅರೋಗ್ಯ ಸ್ಥಿತಿಯನ್ನು ಸ್ವಾಮಿಯವರಲ್ಲಿ ಹೆಳಿಕೊಂಡಾಗ, ಸ್ವಾಮಿಯವರು "ಬಗ್ಗು" ಎಂದು ಹೇಳಿ ಅವರು ತಮ್ಮ ಕೈಗಳಿಂದ ಪೀಡಿತ ಭಾಗವನ್ನು ನಿಧಾನವಾಗಿ ಸ್ಪರ್ಶಿಸಿದರು. ಆ ದಿನದಿಂದ ಬುಜ್ಜಯ್ಯನವರಿಗೆ ಸಂಪೂರ್ಣವಾಗಿ ಗುಣವಾಯಿತು.

(ನಾಗುಲವೆಲ್ಲಟೂರು) ಸಂಜೀವಯ್ಯನವರ ಮಗ ಓಬಯ್ಯ ಸ್ವಾಮಿಯವರ ಬಾಲ್ಯ ಸ್ನೇಹಿತ. ಅವರು ಬಹಳ ಕಾಲ ಉಬ್ಬಸದಿಂದ ತುಂಬಾ ಬಳಲುತ್ತಿದ್ದರು. ಅವರು ತಮ್ಮ ಆರೋಗ್ಯದ ಸಮಸ್ಯೆಯನ್ನು ಸ್ವಾಮಿಯವರಲ್ಲಿ ಹೇಳಿ ಕೊಂಡರು. ಆಗ ಸ್ವಾಮಿಯವರು ಅವರ ಶರೀರವನ್ನು ತಮ್ಮ ಅಂಗೈಗಳಿಂದ ಉಜ್ಜಿದರು. ಅಂದಿನಿಂದ ಅವರಿಗೆ ಮತ್ತೆ ಉಬ್ಬಸ ಬರಲಿಲ್ಲ.

ಪೆನವರ್ತಿ ಎಂಬ ಗ್ರಾಮದ ನಿವಾಸಿ ವಲ್ಲಪುರೆಡ್ಡಿ ತುಲಸಮ್ಮನವರಿಗೆ ಕಾನ್ಸರ್ ವ್ಯಾದಿ ಇದ್ದುದರಿಂದ ಅಮೇರಿಕನ್ ಆಸ್ಪತ್ರೆಯಲ್ಲಿ ಸೇರಿಸಿದರು. ಡಾಕ್ಟರ್ ಬೇರಮ್ಮನವರು ಯಾವ ಭರವಸೆ ಇಲ್ಲವಾದ್ದರಿಂದ ರೋಗಿ ಯಾವ ಕ್ಷಣದಲ್ಲಾದರೂ ಮರಣಿಸಬಹುದೆಂದು ತಕ್ಷಣವೇ ಮನೆಗೆ ಕಳುಹಿಸಿಬಿಟ್ಟರು. ತುಲಸಮ್ಮನವರ ಸಂಬಂಧಿಕರು ಅವರನ್ನು ಆಸ್ಪತ್ರೆಯಿಂದ ಸ್ವಾಮಿಯವರ ಹತ್ತಿರ ಕರೆದುಕೊಂಡು ಬಂದು ಬಿಟ್ಟರು. ಆಕೆಯನ್ನು 3 ದಿನ ಸ್ವಾಮಿಯವರ ಹತ್ತಿರ ಬಿಟ್ಟಿದ್ದರು. ಸ್ವಾಮಿಯವರು, "ಆಕೆಯನ್ನು ಮನೆಗೆ ಕರೆದುಕೊಂಡು ಹೋಗಿ 3 ದಿನಗಳ ನಂತರ ಬನ್ನಿ" ಎಂದು ಆಜ್ಞಾಪಿಸಿದರು. ಅವರುಗಳು ಹಾಗೇ ಮಾಡಿದರು. ಆಕೆಯ ಕಾಯಿಲೆಗೆ ಮಾಯವಾಗಿ, ಆಮೇಲೆ ಅವರು 20 ವರ್ಷಗಳಕಾಲ ಬದುಕಿದರು. ಆಕೆ ಸ್ವಾಮಿಯ ಸೇವೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಆಕೆಯನ್ನು ಕುರಿತು ಸ್ವಾಮಿಯವರು ಒಮ್ಮೆ "ಅಯ್ಯೋ! ಅಮ್ಮಬೊಮ್ಮಪಾಟುನ ಗದಾ ಉಂಡೇದಿ!" (ಈ ವಾಕ್ಯದ ಅರ್ಥ - ಸ್ವಾಮಿಯವರು ತುಲಸಮ್ಮನನ್ನು ಸದಾ "ಅಮ್ಮಾ"ಎಂದು ಕರೆಯುತ್ತಿದ್ದರು. "ಬೊಮ್ಮ ಪಾಟು" ಎಂದರೆ ಭಗವಂತನ ಸಮೀಪದಲ್ಲಿ ಇರುವುದು ಎಂದು ಸ್ವಾಮಿಯವರ ಭಾವನೆ. ಅಮ್ಮ ಪ್ರಕೃತಿಯ ಸಂಕೇತ. ಆಕೆಯ ಹೊಸ ಜೀವನವು ಭಗವಂತನ ಕೊಡುಗೆ ಆಗಿರುವುದರಿಂದ, ಆಕೆ ತನ್ನ ಜೀವನವನ್ನು ಭಗವಂತನ ಸನ್ನಿಧಿಯಲ್ಲೇ, ಅವನ ಸೇವೆಯಲ್ಲಿ ಅರ್ಪಿಸಬೇಕೆಂದು ಸ್ವಾಮಿಯವರ ಧರ್ಮ ನಿರ್ಣಯ).

ತುಲಸಮ್ಮನವರಿಗೆ ಅಷ್ಟುಕಾಲ ಸ್ವಾಮಿಯವರ ಸನ್ನಿಧಿಯಲ್ಲಿದ್ದು ಅವರ ಸೇವೆ ಮಾಡುವ ಭಾಗ್ಯ ಮತ್ತು ಅವಕಾಶ ಹೇಗೆ ಲಭ್ಯವಾಯಿತೋ ಸ್ವಾಮಿಯವರೆ ಒಮ್ಮೆ ಹೇಳಿದರು. "ಅಯ್ಯಾ! ಅಮ್ಮ ಮನಕು 4 ಜನ್ಮಲ ನುಂಡಿ ಅನ್ನಂ ಪೆಡುತುಂದಯ್ಯಾ! (ಅಯ್ಯಾ! ಅಮ್ಮ ನಮಗೆ 4 ಜನ್ಮಗಳ ಕಾಲದಿಂದ ಊಟ ಕೊಡುತ್ತಿದ್ದಾರೆ) ಎಂದರು. ಹಾಗೆ

ಪ್ರೀತಿಯಿಂದ ಕೆಲವು ಜನ್ಮಗಳು ಸೇವೆ ಸಲ್ಲಿಸಿದವರಿಗೆ ಮಾತ್ರ ನಿರಂತರವಾಗಿ ಸದ್ಗುರುವಿನ ಸಾನಿಧ್ಯ ಸೇವೆ ಮಾಡುವ ಅವಕಾಶ ಸಿಗುತ್ತದೆ.

ಪಲ್ಲಂರೆಡ್ಡಿ ಕೃಷ್ಣಾರೆಡ್ಡಿಯವರು ಸ್ವಾಮಿಯವರನ್ನು ಹೆಚ್ಚು ಭೇಟಿ ಮಾಡಲು ಬರುತ್ತಿರಲಿಲ್ಲ. ಸಂಗಂ ಗ್ರಾಮದ ನಿವಾಸಿ ಒಬ್ಬರು, ಕೃಷ್ಣಾರೆಡ್ಡಿಯವರ ಜೊತೆ ಮಗಳ ಮದುವೆಯ ಪ್ರಸ್ತಾಪನೆ ಚರ್ಚಿಸಲು ಗೊಲಗಮೂಡಿಗೆ ಬಂದು ಸ್ವಾಮಿಯವರನ್ನು ನೋಡಿದರು. ಸ್ವಾಮಿಯವರನ್ನು ನೋಡಿ, "ಇವರು ಎಂತಹ ಸ್ವಾಮಿ? ಏಕೆ ಹೀಗಿದ್ದಾರೆ? ಎಂದು ಯೋಚಿಸಿ ಆಶ್ರಮದ ಸಮೀಪದಲ್ಲಿ ನಿಂತರು. ಅದೇವೇಳೆಗೆ ಒಬ್ಬರಿಗೆ ಚೇಳು ಕುಟುಕಿತು, ಅವರು ತೀವ್ರವಾದ ನೋವನ್ನು ಅನುಭವಿಸುತ್ತಾ ಸ್ವಾಮಿಯವರ ಹತ್ತಿರ ಬಂದರು. ಸ್ವಾಮಿಯವರು, "ಅದೇಮಿ ಚೇಸ್ತುಂದಯ್ಯಾ? ಪೋತುಂದಿ" (ಅಯ್ಯಾ! ಅದೇನು ಮಾಡುತ್ತದೆ? ನೋವು ಹೋಗುತ್ತೆ) ಎಂದರು. ಸ್ವಾಮಿಯವರ ಮಾತಿನಿಂದಲೇ ಆತನ ನೋವು ನಿವಾರಣೆಯಾಗಿ, ಅವರು, ಮನೆಗೆ ಹಿಂತಿರುಗಿದರು. ಇದೆಲ್ಲ ನೊಡಿ ರೆಡ್ಡಿಯವರ ಜೊತೆ ಬಂದ ವ್ಯಕ್ತಿಗೆ ಸ್ವಾಮಿಯವರ ಮಹಿಮೆ ತಿಳಿದು, ಬುದ್ಧಿ ಬಂದು ಭಕ್ತಿ ಭಾವದಿಂದ ನಮಸ್ಕರಿಸಿ ಹೊರಟು ಹೋದರು. ಇವರು ಹೋದ 5 ನಿಮಿಷಕ್ಕೆ ಸ್ವಾಮಿಯವರು "ತೇಲು ಕುಡಿತೇ ಭಲೇ ಬಾಧ ಗದಯ್ಯಾ!" (ಚೇಳು ಕುಟಿಕಿದರೆ ಬಹಳ ನೋವಾಗತ್ತೆಯಲ್ಲವೇ?) ಎಂದರು.

ಒಮ್ಮೆ, ಕಲಿಚೇಡು ನರಸಾರೆಡ್ಡಿಯವರ ಎತ್ತನ್ನು ಒಂದು ಹಾವು ಕಚ್ಚಿತು, ಅದರ ಕಾರಣದಿಂದಾಗಿ, ಎತ್ತಿನ ಹೊಟ್ಟೆ ಊದಿಕೊಂಡಿತ್ತು, ಅದು ಹುಲ್ಲು ತಿನ್ನದೆ, ಬಾಯಲ್ಲಿ ನೊರೆ ಪ್ರಾರಂಭವಾಯಿತು. ಮರಣಿಸುವ ಸ್ಥಿತಿಯಲ್ಲಿದ್ದ ಆ ಎತ್ತನ್ನ ಗಾಡಿಯಲ್ಲಿ ಹಾಕಿಕೊಂಡು ಸ್ವಾಮಿಯವರ ಹತ್ತಿರ ಕರೆದುಕೊಂಡು ಬಂದರು. ಸ್ವಾಮಿಯವರು, ಹಾವು ಕಚ್ಚಿದ ಜಾಗದಲ್ಲಿ ತಮ್ಮ ಕೈಯಿಟ್ಟು ತಮ್ಮ ಶ್ವಾಸವನ್ನು ಜೋರಾಗಿ ಬಿಗಿ ಹಿಡಿದು ಬಿಟ್ಟರು. ತಕ್ಷಣ ಎತ್ತು ಎದ್ದಿ ನಿಂತಿ ಸಗಣಿ ಹಾಕಿ ಹುಲ್ಲು ತಿನ್ನಲು ಪ್ರಾರಂಭಿಸಿತು. ಸ್ವಾಮಿಯವರ ಯೋಗ ಶಕ್ತಿ ನೋಡಿ ಆಶ್ಚರ್ಯ ಹೊಂದಿದರು.

ಒಂದು ದಿನ ಸ್ವಾಮಿಯವರು "ನರಸಾ ರೆಡ್ಡಿಕಿ ಪಾಮು ಗಂಡಮುನ್ನದಿ. ತಿರುವಳ್ಳೂರು ವೀರ ರಾಘವ ಸ್ವಾಮಿ ರಕ್ಷಿಸ್ತಾರು" (ನರಸಾ ರೆಡ್ಡಿಯವರಿಗ ಹಾವಿನ ಗಂಡಾಂತರವಿದೆ, ತಿರುವಳ್ಳೂರು ವೀರ ರಾಘವ ಸ್ವಾಮಿ ರಕ್ಷಿಸುತ್ತಾರೆ) ಎಂದು ಹಾಮಿ ಪತ್ರವನ್ನು ಬರೆಸಿದರು. ಸ್ವಲ್ಪ ಕಾಲದ ನಂತರ ಕಣಜದ (ದೊಡ್ಡ ಬೆತ್ತದ ಬುಟ್ಟಿ) ಕೆಳ ಭಾಗದಲ್ಲಿ ಸ್ವಲ್ಪ ಭತ್ತ ಮಿಕ್ಕಿತ್ತು, ಅದನ್ನು ತೆಗೆಯುವುದಕ್ಕಾಗಿ, ರೆಡ್ಡಿಯವರು ಅದರೊಳಗೆ ಇಳಿದರು. ಅವರು ಕೆಳಗೆ ಇಳಿದಾಗ, ಅವರ ಪಾದಗಳನ್ನು ಕಪ್ಪೆ ಸ್ಪರ್ಶಿಸಿದಂತೆ ಅವರಿಗೆ ಅನುಭವ ಆಯಿತು. ಅವರು ತಮ್ಮ ಕಾಲನ್ನು ಬೇರೇ ಬೇರೇ ಕಡೆ ಇಟ್ಟರು, ಅಲ್ಲಿಯೂ ಹಾಗೇ ಅನುಭವ ಆಯಿತು. "ಏನಿದು? ಇಷ್ಟೊಂದು ಕಪ್ಪೆಗಳು ಇಲ್ಲಿ ಇವೆಯಾ?" ಎಂದು ಲಾಟೀನು ತರಿಸಿ ನೋಡಿದರೇ ದೊಡ್ಡ ನಾಗರ ಹಾವನ್ನು ತುಳಿದರೆಂದು ತಿಳಿದು, ತಕ್ಷಣವೇ ಆಚೆ ದುಮುಕಿದರು. ನಂತರ ಆ ಹಾವನ್ನು ಕೊಂದು ಬಿಟ್ಟರು. ನಾಗರ ಹಾವಿನ

ಮೇಲೆ ಕಾಲಿಟ್ಟರೂ ಅದು ಕಚ್ಚಲಿಲ್ಲ ಎಂದರೆ ಅದು ಕೇವಲ ಸ್ವಾಮಿಯವರು ಕೊಟ್ಟ ಹಾಮೀ ಪತ್ರದ ಮಹಿಮೆ, ಮತ್ತು ಅವರೇ ರಕ್ಷಿಸಿದರೆಂದು ಗುರ್ತಿಸಿದರು.

ಒಮ್ಮೆ ಗುತ್ತಾ ನರಸಮ್ಮನವರಿಗೆ ತೀವ್ರವಾದ ಮೊಣಕಾಲು ನೋವಿನಿಂದ ಬಳಲುತ್ತಿದ್ದರು. ಆಕೆಗೆ ತಮ್ಮ ಕಾಲು ಮಡಚಲು ಸಾಧ್ಯವಾಗುತ್ತಿರಲಿಲ್ಲ. ಸ್ವಾಮಿಯವರ ವಿಭೂತಿ ಹಚ್ಚಿದರೂ ನೋವು ಕಡಿಮೆ ಆಗಲಿಲ್ಲ. ಆಗ, ಇತರ ಸೇವಕರು ಸ್ವಾಮಿಯವರೊಂದಿಗೆ 'ಸ್ವಾಮಿ ನಮಗೆ ಅಡಿಗೆ ಮಾಡುವ ನರಸಮ್ಮನವರಿಗೆ ತೀವ್ರ ವಾದ ಮೊಣಕಾಲು ನೋವಿನಿಂದ ಬಳಲುತ್ತಿದ್ದಾರೆ, ಅವರಿಗೆ ಕಾಲು ಮಡಚಲು ಸಾಧ್ಯವಾಗುತ್ತಿಲ್ಲ' ಎಂದು ಹೇಳಿದಾಗ, ಸ್ವಾಮಿಯವರು "ಇಂಕೆಪ್ಪಟಿಕೀ ರಾಕುಂಡಾ ಚೀಟಿ ವ್ರಾಸಿ ಇವ್ವಂಡಯ್ಯಾ!" (ಇನ್ನೆಂದಿಗೂ ಬರದಂತೆ ಒಂದು ಹಾಮಿ ಪತ್ರವನ್ನು ಬರೆದು ಕೊಡಿರಯ್ಯಾ) ಎಂದರು. ಸೇವಕರು ಸ್ವಾಮಿಯವರ ಆಜ್ಞೆಯಂತೆ ಒಂದು ಹಾಮಿ ಪತ್ರವನ್ನು ಬರೆದು ನರಸಮ್ಮನವರಿಗೆ ಕೊಟ್ಟರು. ಆ ಕ್ಷಣದಿಂದ, ಅವರ ನೋವು ಕಡಿಮೆ ಆಗಿ ಮತ್ತೆಂದೂ ಬರಲಿಲ್ಲ.

ಒಂದು ದಿನ ಸ್ವಾಮಿಯವರು ತನಗಾಗಿ ಮಂತ್ರಿಸಿ ಎಂದು ಗಲಾಟೆ ಮಾಡಿದರು. ಆರೋಗ್ಯವಾಗಿರುವ ಸ್ವಾಮಿಯವರು ಹೀಗೇಕೆ ಹೆಳುತ್ತಿದ್ದಾರೆಂದು ಭಕ್ತರಿಗೆ ಅರ್ಥವಾಗಲಿಲ್ಲ. ಸ್ವಲ್ಪ ಹೊತ್ತಾದಮೇಲೆ, ತೂಪಿಲಿ ಪಿಚ್ಚೆಮ್ಮನವರಿಗೆ ಹಾವು ಕಚ್ಚಿತೆಂದು ಸ್ವಾಮಿಯವರ ಹತ್ತಿರ ಕರೆತಂದರು. ಸರ್ವಜ್ಞರಾದ ಸ್ವಾಮಿಯವರು ತಮ್ಮ ಭಕ್ತೆಯ ಕಷ್ಟವನ್ನು ನಿವಾರಣೆ ಮಾಡುವುದಕ್ಕೇ ತಮಗಾಗಿ ಮಂತ್ರಿಸಲು ಹೇಳಿದರೆಂದು ಎಲ್ಲರಿಗೂ ಅರ್ಥವಾಯಿತು. ಯಾವುದೇ ಔಷಧಿಯನ್ನು ಬಳಸದೆ, ಕೇವಲ ಸ್ವಾಮಿಯವರ ವಿಭೂತಿಯಿಂದಲೇ ಅವರು ಗುಣ ಮುಖರಾದರು.

ಗೊಲಗಮೂಡಿಯ ಕರಣಂ ಸುಬ್ಬಾರಾವ್ ಅವರ ಪತ್ನಿ ಶಕುಂತಲಮ್ಮ ನವರು ಬಹಳ ಸಮಯದಿಂದ ಉಬ್ಬಸದಿಂದ ಬಳಲುತ್ತಿದ್ದರು. ಆಕೆಯನ್ನು ಅನೇಕ ವೈದ್ಯರು ಚಿಕಿತ್ಸೆ ನೀಡಿದರೂ ಗುಣ ಆಗಲಿಲ್ಲ. ಸಾವಿರಾರು ರೂಪಾಯಿಗಳು ಖರ್ಚು ಮಾಡಿದರೂ ಗುಣವಾಗಲಿಲ್ಲ. ಕೊನೆಗೆ ಆಂಜನೇಯ ಸ್ವಾಮಿಗೆ ಪ್ರದಕ್ಷಿಣೆ ಮಾಡಿಸ ಬೇಕೆಂದು ಅನಿಕೇಪಲ್ಲಿಯಿಂದ ಗೊಲಗಮೂಡಿಗೆ ಬಂದು ಶ್ರೀ ಸ್ವಾಮಿಯವರೊಂದಿಗೆ ಪ್ರಾರ್ಥಿಸಿದರು. "20 ರೋಜುಲಲೋ ತಗ್ಗಿಪೋತುಂದಿ. ಮೀರು ಗೊಲಗಮೂಡಿಲೋ ನಿವಸಿಂಚೇ ಇಲ್ಲು ವದಲಿ ಪೋವದ್ದು. ಮೀ ಸ್ಥಿರ ನಿವಾಸಮ್ಮೆನ ಅನಿಕೇಪಲ್ಲಿ ವದಲಿ ಗೊಲಗಮೂಡಿ ಲೋನಿ ಪೂರಿ ಪಾಕಲೋನೇ ಸ್ಥಿರಂಗಾ ಉಂಡಂಡಿ. ನೇನು ಚೆಪ್ಪಿನ ದಾಕ ಗಟ್ಟಿ ಇಲ್ಲು ಕಟ್ಟವದ್ದು" (20 ದಿನಗಳಲ್ಲಿ ಗುಣ ಆಗುತ್ತದೆ. ಗೊಲಗಮೂಡಿಯಲ್ಲಿರುವ ನಿಮ್ಮ ಪ್ರಸ್ತುತ ನಿವಾಸವನ್ನು ಬಿಡ ಬೇಡಿ. ನಿಮ್ಮ ಸ್ಥಿರ ನಿವಾಸ ಆದ ಅನಿಕೇಪಲ್ಲಿಯನ್ನು ಬಿಟ್ಟು ಗೊಲಗಮೂಡಿಯಲ್ಲಿ ಒಂದು ಗುಡಿಸಿಲಲ್ಲಿ ಇರಿ. ನಾನು ಹೇಳುವ ತನಕ ಸ್ಥಿರವಾದ ಮನೆಯನ್ನು ಕಟ್ಟ ಬೇಡಿ) ಎಂದು ಸ್ವಾಮಿಯವರು ಹೇಳಿದರು. ಸ್ವಾಮಿಯವರು ಹೇಳಿದಂತೆ ಮಾಡಿದರು. ಎಷ್ಟೋ ವರ್ಷಗಳಿಂದ ಬಳಲುತ್ತಿದ್ದ ಉಬ್ಬಸ ಸಂಪೂರ್ಣವಾಗಿ ಗುಣವಾಯಿತು. ಆದರೆ, 1981 ರಲ್ಲಿ ಬಿರುಗಾಳಿ ಬಂದಿದ್ದರಿಂದ ಗೊಲಗಮೂಡಿಯಲ್ಲಿನ

ಆ ಗುಡಿಸಲು ಬಿದ್ದು ಹೋಯಿತು. ಆ ಸ್ಥಳದಲ್ಲೇ ಮನೆ ಕಟ್ಟುವ ಪ್ರಯತ್ನದಲ್ಲಿ ಸ್ವಾಮಿಯವರಿಗೆ ಹೇಳದೆಯೇ ಅನಿಕೇಪಲ್ಲಿಯ ಅವರ ಹಳೇ ಮನೆಗೆ ತಾತ್ಕಾಲಿಕವಾಗಿ ಇರಲು ಬಂದರು. ಮತ್ತೆ ಅನಾರೋಗ್ಯಕ್ಕೆ ಗುರಿ ಆದರು. ಈ ಬಾರಿ ಆಪರೇಷನ್ ಮಾಡಿಸಬೇಕಾಯಿತು. ಮತ್ತೊಮ್ಮೆ ಶ್ರೀ ಸ್ವಾಮಿಯವರಿಗೆ ಹೇಳಿದಾಗ, "ಈ ಪೂರಿಂಟಿಲೋನೇ ಉಂಡಂಡಿ. ಆರೋಗ್ಯಂ ಬಾಗುಂಟುಂದಿ" (ಗುಡಿಸಿಲಿ ನಲ್ಲೇ ಇರಿ, ಆರೋಗ್ಯ ಚನ್ನಾಗಿರುತ್ತೆ) ಎಂದು ಹಾಮಿ ಪತ್ರವನ್ನು ಬರೆಯಿಸಿ ಕೊಟ್ಟರು. ಅವರುಗಳು ಸ್ವಾಮಿಯವರ ಆದೇಶ ದಂತೆಯೇ ಮಾಡಿದರು. ಸ್ವಾಮಿಯವರ ಕೃಪೆಯಿಂದ ಮತ್ತೆ ಆ ರೋಗ ಬರಲಿಲ್ಲ. ಅವರುಗಳು ಕೃತಜ್ಞತೆಯಿಂದ ಪ್ರತಿದಿನ ಪೂಜೆಯ ಸಾಮಗ್ರಿಗಳನ್ನು ತಂದು, ಸ್ವಾಮಿಯವರು ದೇಹ ತ್ಯಾಗ ಮಾಡಿದ ಜಾಗದಲ್ಲಿ, ಸ್ವಾಮಿಯವರು ಪ್ರತಿಷ್ಠಿಸಿದ ಪಾದುಕ ಗಳನ್ನು ಪೂಜಿಸುತ್ತಿರುತ್ತಾರೆ. ಈ ಪ್ರಕಾರ ಭಕ್ತಿ ಶ್ರದ್ಧೆಯಿಂದ ಜೀವನವನ್ನು ನಡೆಸುವುದಕ್ಕೆ, ಪ್ರಭಾವ ಬೀರುವುದಕ್ಕೆ ಸದ್ಗುರುವಿಗೆ ಮಾತ್ರ ಸಾಧ್ಯ.

ಪೆದ್ದ ಗೋಪಾರಂ ನಿಂದ ಸುಮಾರು 1979 ರಲ್ಲಿ ಒಬ್ಬ ಮಹಿಳೆ ಸ್ವಾಮಿಯವರ ದರ್ಶನಕ್ಕಾಗಿ ಬಂದರು. ಅವರಿಗೆ 22 ವರ್ಷದ ವಯಸ್ಸಿನ ಒಬ್ಬ ಮಗ ಇದ್ದನು. ಅವರಿಗೆ ಕಳೆದ 2 ವರ್ಷಗಳಿಂದ ಮಾನಸಿಕ ಅನಾರೋಗ್ಯದ ಕಾರಣದಿಂದ, ಅವನ ಮಾನಸಿಕ ಸ್ಥಿತಿ ಸರಿಯಿಲ್ಲದೆ ಹುಚ್ಚು ಹಿಡಿದ ಹಾಗಿತ್ತು. ಸ್ವಾಮಿಯವರು ಆ ಯುವಕನನ್ನು ತಮ್ಮ ಹತ್ತಿರ "ಬಿಡಿ" ಎಂದು ಆಜ್ಞಾಪಿಸಿದರು. ಸ್ವಾಮಿಯವರ ಆಜ್ಞೆಯಂತೆ ಆ ಯುವಕನನ್ನು ಅಲ್ಲಿ ಬಿಟ್ಟರು, ಕ್ರಮೇಣ ಹುಚ್ಚು ಕಡಿಮೇಯಾಗಿ ಸಂಪೂರ್ಣವಾಗಿ ಸ್ವಸ್ಥರಾದರು. ಆ ಮಹಿಳೆ ಇಂದಿಗೂ ತನ್ನ ಮನೆಯಲ್ಲಿ ಸ್ವಾಮಿಯವರಿಗೆ ನಿತ್ಯ ಪೂಜೆ ಮಾಡುತ್ತಾ ದೀಪವನ್ನು ಬೆಳಗುತ್ತಾರೆ.

ಕಲಿಚೇಡಿನ ಈಶ್ವರಮ್ಮನವರಿಗೆ ಹೊಟ್ಟೆಯಲ್ಲಿ ಗೆಡ್ಡೆ ಬೆಳೆದು ಒಂಬತ್ತು ತಿಂಗಳು ತುಂಬಿದ ಗರ್ಭವತಿಯಂತೆ ಕಾಣುತ್ತಿದ್ದರು. ವೈದ್ಯರು (ಡಾಕ್ಟರ್) ಶಸ್ತ್ರ ಚಿಕಿತ್ಸೆ ಮಾಡಬೇಕೆಂದರು. ಆಕೆಗೆ ಸ್ವಾಮಿಯವರಲ್ಲಿದ್ದ ಅನುಭವಗಳ ಕಾರಣ, ಪೂರ್ತಿ ವಿಶ್ವಾಸದಿಂದ ಸ್ವಾಮಿಯವರನ್ನೇ ಒಂದು ಉಪಾಯ ತೋರಿಸಿ ಎಂದು ಬೇಡಿಕೊಂದರು. ಆಗ ಸ್ವಾಮಿಯವರು, "ಅಮ್ಮಾ ನೀವು ೧೦೦ ರೂ ಕಡಿತೇ, ರೇಪಟಿಕಿ ಬಾಧ ನಿವಾರಣಮವುತುಂದಿ" (ಅಮ್ಮ ನೀನು 100 ರೂ ಕಟ್ಟರೇ, ನಾಳೆಯ ಹೊತ್ತಿಗೆ ಬಾಧೆ ನಿವಾರಣೆ ಆಗುತ್ತದೆ) ಎಂದರು. ಆಕೆ, ಪೂರ್ಣ ವಿಶ್ವಾಸದಿಂದ ತನ್ನ ಮನೆಗೆ ಹೋಗದೇ, ಯರನ್ನೋ ಕೇಳಿ 100 ರೂ ತಕ್ಷಣವೇ ಸಮರ್ಪಿಸಿದರು. ಆರಾತ್ರಿ ಆಕೆಯ ಸ್ವಪ್ನದಲ್ಲಿ ಸ್ವಾಮಿಯವರು ತನಗೆ ಶಸ್ತ್ರ ಚಿಕಿತ್ಸೆ ಮಾಡಿದ ಹಾಗೆ ಕಂಡಿತು. ಬೆಳಗಾಗುವ ಹೊತ್ತಿಗೆ ಕ್ರಮೇಣಾ ಬಾಧೆ ಕಡಿಮೆಯಾಗಿ, ಶಸ್ತ್ರಚಿಕಿತ್ಸೆ ಇಲ್ಲದೇ, ಅರೋಗ್ಯ ಸಂಪೂರ್ಣವಾಗಿ ಸುದಾರಿಸಿ, ಹೊಟ್ಟೆಯ ಊತ ಕಡಿಮೆ ಆಯಿತು.

ರೋಶಿ ರೆಡ್ಡಿ ಕೈಯ್ಯಿನ ಬೆರಳನ್ನು ಹಾವು ಕಚ್ಚಿ ಬಿಟ್ಟಿತು. ಸ್ವಾಮಿಯವರು ಆ ಬೆರಳನ್ನು ಸ್ವಾಮಿಯವರು ತಮ್ಮ ತೊಡೆಯ ಮೇಲಿಟ್ಟುಕೊಂಡು ತಮ್ಮ ಬಲ ಅಂಗೈಯನ್ನು ಹಾಕಿ ಅದುಮಿ ಸ್ವಲ್ಪ ಹೊತ್ತು ಇಟ್ಟುಕೊಂಡಿದ್ದರು. ನೋವು ಪೂರ್ತಿಯಾಗಿ ಕಡಿಮೆ

ಆಯಿತು. "ರೋಶಿರೆಡ್ಡಿ! ನೀ ವಳ್ಳು ಸಂಜೀವಿನಿ ಅಯ್ಯಿಂದಿ ಪೊ!" (ನಿನ್ನ ಶರೀರ ಸಂಜೀವಿನಿ ಆಗಿದೆ) ಹೋಗು ಎಂದರು. ಆಮೇಲೆ ರೋಶಿ ರೆಡ್ಡಿಯವರನ್ನು ಯಾವ ವಿಷ ಪ್ರಾಣಿ ಕಚ್ಚಿದರೂ ವಿಷ ಏರುತ್ತಿರಲಿಲ್ಲ.

ಕೊಜ್ಜಕೂಟಿ ಹರಿನಥ ನಾಯುಡು ಅವರಿಗೆ (ಗೊಲಗಮೂಡಿಯ ನಿವಾಸಿ) ಬಾಯಿ ನಿಂದ ರಕ್ತ ಬರುತ್ತಿತ್ತು. ಇಂಗ್ಲೀಷ್ ಔಷಧಿ ತೆಗೆದು ಕೊಂಡರೆ, ಗುಣವಾಯಿತು. ಆದರೆ, ಸ್ವಲ್ಪ ದಿನದ ನಂತರ ಮತ್ತೆ ಪ್ರಾರಂಭಿಸುತಿತ್ತು. ಈ ಬಾರಿ ವೈದ್ಯರಿಗೆಲ್ಲ ವೈದ್ಯರಾದ ಸ್ವಾಮಿಯವರಲ್ಲಿ "ಯಾವ ಔಷಧಿಯೂ ಇಲ್ಲದೆ, ಈ ರೋಗ ಗುಣ ಆದರೆ, ತೆಂಗಿನ ಕಾಯಿ ಒಡೆಯುತ್ತೇನೆ" ಎಂದು ಪ್ರತಿಜ್ಞೆ ಮಾಡಿದರು. ಹಾಗೆಯೇ ಯಾವ ಔಷಧಿಯೂ ಇಲ್ಲದೇ ರಕ್ತಸ್ರಾವ ಆಗುವುದು ಪೂರ್ತಿ ಆಗಿ ನಿಂತು ಬಿಟ್ಟಿತು.

ಒಮ್ಮೆ ಶ್ರೀ ವೆಂಕಯ್ಯ ಸ್ವಾಮಿಯವರು ಪೆನ್ನ ಬದ್ವೇಲಿನಲ್ಲಿ ಬಿಡಾರ ಹೂಡಿದ್ದರು. ಆ ಸಮಯದಲ್ಲಿ ಮಹಿಮಲೂರಿನಲ್ಲಿ ವಾಸವಾಗಿದ್ದ ಮುನಿಕೂಟಿ ರಾಮಯ್ಯನವರಿಗೆ ಹೊಟ್ಟೆನೋವು, ಹೃದಯ ದಡಗುಟ್ಟುವಿಕೆ, ಬಲಹೀನತೆ, ಶರೀರ ಎಲ್ಲಾ ನೋವು ಬಂದಿತು. ವೈದ್ಯರಿಂದ ಇದನ್ನು ಗುಣ ಮಾಡಲು ಸಾಧ್ಯ ಆಗಲಿಲ್ಲ. ಪೆನ್ನ ಬದ್ವೇಲು ನಿವಾಸಿ ಒಬ್ಬರು ರಾಮಯ್ಯನವರನ್ನು ಭೇಟಿ ಮಾಡಿ ಸ್ವಾಮಿಯವರ ಮಹಿಮೆಯ ವಿಚಾರ ತಿಳಿಸಿ, ಸ್ವಾಮಿಯವರು ಪೆನ್ನ ಬದ್ವೇಲಿಗೆ ಬಂದಿರುತ್ತಾರೆ, ಅಲ್ಲಿಗೆ ಬಂದು ಸ್ವಾಮಿಯವರನ್ನು ದರ್ಶಿಸಿ ಬಾಧೆಯಿಂದ ಮುಕ್ತಿ ಪಡೆಯಲು ಸೂಚಿಸಿದರು.

ಅದೇ ರಾತ್ರಿ ಶ್ರೀ ಸ್ವಾಮಿಯವರು ರಾಮಯ್ಯನವರಿಗೆ ಸ್ವಪ್ನ ದಲ್ಲಿ ದರ್ಶನ ಕೊಟ್ಟು, "ನೇನು ಪೆನ್ನ ಬದ್ವೇಲುಲೋ ಉನ್ನಾನು. ನಾ ದಗ್ಗರಕು ರಾ ನಯಂ ಚೇಸ್ತಾನು" (ನಾನು ಪೆನ್ನ ಬದ್ವೇಲು ನಲ್ಲಿ ವಾಸಿಸುತ್ತಿದ್ದೇನೆ, ನನ್ನನ್ನು ಭೇಟಿ ಮಾಡು, ನಾನು ನಿನ್ನನ್ನು ಗುಣ ಪಡಿಸುತ್ತೇನೆ) ಎಂದು ಹೇಳಿದರು. ಅದೇ ಪ್ರಕಾರ ರಾಮಯ್ಯ ಸ್ವಾಮಿಯವರ ದರ್ಶನ ಮಾಡಿದರು. ಕನಸಿನಲ್ಲಿ ಕಾಣಿಸಿ ಕೊಂಡು ಹೇಳಿದವರು ಇವರೇ ಎಂದು ಗುರ್ತಿಸಿ ಆಶ್ಚರ್ಯ ಪಟ್ಟರು.

ಸ್ವಾಮಿಯವರು ರಾಮಯ್ಯನವರನ್ನು ಒಂದು ತಿಂಗಳು ಅವರ ಸನ್ನಿಧಿಯಲ್ಲಿ ಇರು ಎಂದು ಆಜ್ಞಾಪಿಸಿದರು. ರಾಮಯ್ಯನವರು ಸ್ವಾಮಿಯವರ ಸೂಚನೆಯನ್ನು ಅನುಸರಿಸಿದ್ದರಿಂದ, ಅವರು ಯಾವುದೇ ಔಷಧಿ ಬಳಕೆ ಇಲ್ಲದೆ ಗುಣ ಮುಖರಾದರು. ಅದೇ ಮೊದಲು, ಅವರು ತನ್ನ ಮನೆಯ ಪಕ್ಕ ದಲ್ಲಿ ಒಂದು ಗುಡಿಸಲು ನಿರ್ಮಿಸಿ ಸ್ವಾಮಿಯವರನ್ನು ಗೌರವದಿಂದ ಅವರಿಗೆ ಆತಿಥ್ಯ ಮಾಡುತ್ತಾ, ಬಡವನಾದರೂ, ಬಹಳ ಭಕ್ತಿ-ಶ್ರದ್ಧೆಯಿಂದ ಸ್ವಾಮಿಯವರ ಸೇವೆ ಮಾಡಿದರು.

ಒಮ್ಮೆ ಸ್ವಾಮಿಯವರು ಮುನಿಕೂಟಿ ರಾಮಯ್ಯನವರ ಮನೆಯಲ್ಲಿದ್ದಾಗ, ಅವರನ್ನು ಸ್ವಲ್ಪ ಅಕ್ಕಿ ತನ್ನಿ ಎಂದು ಹೇಳಿ, ಅವರು ತಂದ ಅಕ್ಕಿಯನ್ನು ಒಂದು ದೊಡ್ಡ ನೀರಿನ ಮಡಿಕೆಯ ಹತ್ತಿರ ಹಾಕಿ, "ಅಯ್ಯಾ! ಇದಿ ಮಿದ್ದಿಯಿಲ್ಲೌತುಂದಿ" (ಅಪ್ಪಾ! ಇದು ಒಂದು ದೊಡ್ಡ ಮಹಡಿಯ ಮನೆ ಆಗುತ್ತದೆ) ಎಂದು ಆಶೀರ್ವದಿಸಿದರು. ಬಹಳ ಬಡವರಾಗಿದ್ದ ರಾಮಯ್ಯನವರು ಸ್ವಲ್ಪ ಸಮಯದ ನಂತರ ಬಹಳ ಶ್ರೀಮಂತನಾಗಿ

ಸ್ವಾಮಿಯವರ ಆಶಿರ್ವಾದದಂತೆ ದೊಡ್ಡ ಮಹಡಿಯಮನೆ ಕಟ್ಟಿದನು. ಸ್ವಾಮಿಯವರ ಮಹಾಸಮಾಧಿ ಹೊಂದಿದ ನಂತರವೂ, ಅವರು ರಾಮಯ್ಯನವರಿಗೆ ಸ್ವಪ್ನದಲ್ಲಿ ಕೊಡುತ್ತಿದ್ದ ಆಜ್ಞೆ ಪ್ರಕಾರ ತಿಂಗಳಿಗೆ ಒಮ್ಮೆ ಸಮಾಧಿಯನ್ನು ದರ್ಶಿಸಲು ಗೊಲಗಮೂಡಿಗೆ ಬರುತ್ತಿರುತ್ತಾರೆ.

ನಾರಾಯಣ ರೆಡ್ಡಿಯವರ ತಾಯಿ ಆದ ತುಳಸಮ್ಮನವರು, ನರಸಮ್ಮನವರಿಗೆ ಹೀಗೆ ಹೇಳಿದರು. "ಒಮ್ಮೆ ಒಬ್ಬ ವ್ಯಕ್ತಿ ಹೊಟ್ಟೆ ನೋವಿನಿಂದ ದೀರ್ಘ ಕಾಲ ಬಳಲುತ್ತಿದ್ದನು. ಅವನು ಹಲವಾರು ಚಿಕಿತ್ಸೆಗಳನ್ನು ಪ್ರಯತ್ನಿಸಿದನು, ಆದರೆ ಯಾವ ಚಿಕಿತ್ಸೆ ಇಂದಲೂ ಪರಿಹಾರವನ್ನು ಪಡೆಯಲಿಲ್ಲ. ಯಾರಿಂದಲೋ ಸ್ವಾಮಿಯವರ ಮಹಿಮೆ ತಿಳಿದು, ಅವರ ಬಳಿ ಬಂದು ಸ್ವಲ್ಪಕಾಲ ಅವರ ಸನ್ನಿಧಿಯಲ್ಲಿ ಇದ್ದನು. ನೊವು ಸ್ವಲ್ಪ ಕಡಿಮೇಯಾಯಿತು, ಆದರೆ ಸಂಪೂರ್ಣವಾಗಿ ಗುಣ ಆಗಲಿಲ್ಲ. ಒಂದು ರಾತ್ರಿ ಅವರಿಗೆ ಸ್ವಪ್ನದಲ್ಲಿ "ತಾಳೆ ಮರದ ಗಾತ್ರದಲ್ಲಿ ಅಗ್ನಿ ಕುಂಡದಿಂದ ಅಗ್ನಿ ಏರಿ ಅದರ ಮೇಲೆ ಸ್ವಾಮಿಯವರು ಕೂತಿರುವಂತೆ ದರ್ಶನ ಆಯಿತು". ಆ ದೃಶ್ಯ ನೋಡಿ ಬಹಳ ಭಯದಿಂದ ಜೋರಾಗಿ ಕಿರಿಚಿದನು. ಪಕ್ಕದಲ್ಲಿ ಇದ್ದವರೆಲ್ಲರೂ ಅವನನ್ನು ತಟ್ಟಿ ಎಬ್ಬಿಸಿ ಶಾಂತಗೊಳಿಸಿದರು. ಮರುದಿನ ಬೆಳಿಗ್ಗೆ ಅವನ ನೋವು ಸುಮಾರು 3/4 ಭಾಗದಷ್ಟು ಕಡಿಮೆ ಆಯಿತು. ಸ್ವಾಮಿಯವರು ಅವನಿಗೆ "ಅಯ್ಯಾ! ನೀ ನೊಪ್ಪಿ ಇಂತಕು ಪೆರಗದು, ತಗ್ಗದು, ನೀವು ಇಂಟಿಕಿ ಪೋ" (ಅಪ್ಪಾ! ನಿನ್ನ ನೋವು ಇದಕ್ಕಿಂತಾ ಹೆಚ್ಚಾಗುವುದಿಲ್ಲ ಇದಕ್ಕಿಂತ ಕಡಿಮೇ ಆಗುವುದಿಲ್ಲ, ಮನೆಗೆ ಹೋಗು) ಎಂದರು. ಅವನು ಸ್ವಾಮಿಯವರ ಸೂಚನೆಯಂತೆ ಮನೆಗೆ ಹೊರಟುಹೋದನು.

ನೆಲ್ಲೂರು ನಿವಾಸಿ ತಾಳ್ಳೂರು ಶ್ರೀನಿವಾಸರಿಗೆ ಎದೆ ನೋವು ಪ್ರಾರಂಭವಾಯಿತು. ಆತನಿಗೆ ಚಿಕ್ಕ ವಯ್ಯಸ್ಸಿನಿಂದಲೂ ಭಯ ಇತ್ತು. ಅವರು ಶ್ರೀ ಸ್ವಾಮಿಯವರ ದರ್ಶನ ಮಾಡಿದ ನಂತರ ಅವರ ಶಾರೀರಕ ಅಸ್ವಸ್ಥತೆ ಅಲ್ಲದೇ ಮಾನಸಿಕ ಅಸ್ವಸ್ಥತೆ ಕೂಡ ಮಾಯವಾಯಿತು. ಆದ್ದರಿಂದಲೇ ಅವರು ನಿರಂತರ ಸ್ವಾಮಿಯವರ ಸಮಾಧಿಯನ್ನು ದರ್ಶನ ಮಾಡುತ್ತಿರುತ್ತಾರೆ. ಒಮ್ಮೆ ಇವರಿಗೆ ಕೈ ವಿಪರೀತವಾಗಿ ನೋಯಲಾರಂಭಿಸಿತು. ಇವರ ಅಕ್ಕ ಮತ್ತು ಪತ್ನಿ ಇವರನ್ನ ಮಾತುಲ್ಲಾ ಆಸುಪತ್ರೆಗೆ ಕರೆದು ಕೊಂಡು ಬರುತ್ತಿದ್ದರು. ಆದರೆ, ಸ್ವಾಮಿಯವರ ಮೇಲೆ ಅಚಂಚಲ ವಿಶ್ವಾಸ ಇಟ್ಟುಕೊಂಡಿದ್ದ ಶ್ರೀನಿವಾಸುಲುರವರು, ಆಸುಪತ್ರೆಯ ಹತ್ತಿರ ಬಂದಾಗ, "ನಾನು ಸ್ವಾಮಿಯವರಬಳಿ ಹೋಗುತ್ತೇನೆ, ಈ ಔಷಧಿಗಳು ನನಗೆ ಸಹಾಯ ಮಾಡುವುದಿಲ್ಲ" ಎಂದು ನೇರವಾಗಿ ಸ್ವಾಮಿಯವರ ಸನ್ನಿಧಿಗೆ ಬರಲು ಗೊಲಗಮೂಡಿಯ ಬಸ್ಸು ಹತ್ತಿದರು. ಬಸ್ಸು ಹತ್ತಿದ ಮರುಕ್ಷಣ ನೋವು ಮಾಯವಾಯಿತು. ನಾನು (ರಚಯಿತ ಪೆಸಲ ಸುಬ್ಬರಾಮಯ್ಯನವರು) ಒಂದು ತಿಂಗಳು ಛಳಿ, ಜ್ವರದಿಂದ ಬಳಲುತ್ತಿದ್ದಾಗ, ಸ್ವಾಮಿಯವರ ದರ್ಶನ ಮಾಡಲು ಬಸ್ಸು ಹತ್ತಿದ ಮರುಕ್ಷಣ ಸ್ವಸ್ಥನಾಗಿಬಿಟ್ಟೆ. ನನ್ನ ಅನುಭವ ಮತ್ತು ಶ್ರೀನಿವಸುಲು ರವರ ಅನುಭವ ಒಂದೇ ರೀತಿಯಾಗಿದೆ. ಪೂರ್ವಿಕರು ಹೇಳಿದಂತೆ, ನಂಬಿಕೆಯು ಪರ್ವತಗಳನ್ನು ಚಲಿಸ ಬಲ್ಲದು ಎನ್ನುವುದು ನಿಜ ಅಲ್ಲವೇ!

ಡೇಗ ಪೂಡಿ ಗ್ರಾಮದಲ್ಲಿ ವಾಸವಾಗಿದ್ದ ಕಾಮಾಕ್ಷಮ್ಮನವರು, ಬಹಳ

ಸಮಯದಿಂದ ಸ್ವಾಮಿಯವರನ್ನು ಭಕ್ತಿಯಿಂದ ಸೇವಿಸುತ್ತಿದ್ದರು. ಒಮ್ಮೆ ಅವಳಿಗೆ ಸೊಂಟ ನೋವು ಪ್ರಾರಂಭ ಆಯಿತು. ಸ್ವಾಮಿಯವರಿಗೆ ಅನೇಕ ಬಾರಿ ಹೇಳುತ್ತಿದ್ದರು. ಸ್ವಾಮಿಯವರು ಎಲೆಗಳು ಪಟ್ಟು ಹಾಕಲು ಹೇಳಿದರು. ಹಾಗೆ ಮಾಡಿದರೂ ನೋವು ಗುಣವಾಗಲಿಲ್ಲ. ಇನ್ನೊಮ್ಮೆ ಸ್ವಾಮಿಯವರಿಗೆ ಹೆಳಿ ಕೊಂಡಾಗ, ಸ್ವಾಮಿಯವರು "ಎಲ್ಲುಂಡಿಕಿ ತೀಸೇಸಿನಟ್ಲು ಬಾಧಪೋತುಂದಿ" (ನಾಡಿದ್ದು ಹೊತ್ತಿಗೆ ನೋವು ನಿವಾರಣೆ ಆಗುತ್ತದೆ) ಎಂದು ಹಾಮಿ ಪತ್ರೆ ಬರೆಸಿದರು. ಸ್ವಾಮಿಯವರು ಹೇಳಿದಂತೆ, ಆ ನೋವು ಮತ್ತೆ ಬರಲಿಲ್ಲ. ಒಂದು ದಿನ, ಅವರು ಸ್ವಾಮಿಯವರ ಬಳಿ ಬಂದು ನಿಂತಾಗ, ಸ್ವಾಮಿಯವರು, "ಅಮ್ಮಾ! ವೀರ ರಾಘವುಲು ಸ್ವಾಮಿ ನೀ ತಮ್ಮುಡು, ಭಜನ ಚೇಸುಕೊ! ಜಬ್ಬುಲು ರಾವು, ಚೇಪ, ಮಾಂಸಂ ತಿನವದ್ದು" (ಅಮ್ಮಾ! ವೀರ ರಾಘವ ಸ್ವಾಮಿ ನಿನ್ನ ತಮ್ಮ ಭಜನೆ ಮಾಡು, ರೋಗಗಳು ಬರುವುದಿಲ್ಲ. ಮೀನು, ಮಾಂಸ ತಿನ್ನ ಬೇಡ) ಎಂದು ತಿಳಿಸಿದರು.

ಕಾಮಾಕ್ಷಮ್ಮನವರ ಮಗನಿಗೆ ಮದುವೆಯಾಗಿ 10 ವರ್ಷಗಳಾದರೂ ಮಕ್ಕಳಾಗಲಿಲ್ಲ. ಸ್ವಾಮಿಯವರನ್ನು ಕೇಳಿದರೇ ಅವರಿಗೆ ಮೂರು ಜನ ಮಕ್ಕಳು ಹುಟ್ಟುತ್ತಾರೆ ಎಂದು ಹೇಳಿದರು. ಇಷ್ಟು ದಿನ ಮಕ್ಕಳಾಗಲಿಲ್ಲ ಇನ್ನು ಯಾವಾಗಾಗುತ್ತದೆ ಸ್ವಾಮಿ ಎಂದು ಕೇಳಿದಾಗ, ಸ್ವಾಮಿಯವರು "ಕುಲಂಗಾನಿ ಕುಲಂ ವಾರು ವಸ್ತುಂಟೇ ಆಪುಚೇಶಾನು. ಇಪ್ಪುಡು ವೆಂಕಟಗಿರಿ ಕೋಮಿಟೋಳ್ಳ ಪಿಲ್ಲಲ್ನಿ ವದುಲುತುನ್ನಾನು" (ಕುಲ ಅಲ್ಲದ ಕುಲದವರು ಬರುತ್ತಿದ್ದರು, ಅದಕ್ಕೆ ನಿಲ್ಲಿಸಿದ್ದೆ. ಈಗ ವೆಂಕಟಗಿರಿ ಕೋಮಿಟಿಯವರ ಮಕ್ಕಳ್ಳನ್ನು ಬಿಡುತ್ತಿದ್ದೇನೆ) ಎಂದು ಹಾಮಿ ಪತ್ರವನ್ನು ಬರೆಸಿದರು. ಸ್ವಾಮಿಯವರು ಹೇಳಿದಂತೆಯೇ ಆತನಿಗೆ ಸ್ವಲ್ಪ ಕಾಲದ ನಂತರ ಒಬ್ಬ ಮಗ ಹುಟ್ಟಿದ. ಆದರೆ, ತಾಯಿಗೆ ಹಾಲು ಬರಲಿಲ್ಲ. ಸ್ವಾಮಿಯವರನ್ನು ಪ್ರಾರ್ಥಿಸಿದಾಗ, ರಾತ್ರಿ ಸ್ವಪ್ನದಲ್ಲಿ ಸ್ವಾಮಿಯವರು ದರ್ಶನ ಕೊಟ್ಟು ತನ್ನ ಕೌಪೀನ ವನ್ನು ಹರದು, ಹಗ್ಗದ ಹಾಗೆ ಹೊಸೆದು, ತಾಯಿಗೆ ಮುಟ್ಟಿಸಿ" ಎಂದರು. ಬೆಳಗಾಗುವ ಹೊತ್ತಿಗೆ ತಾಯಿಗೆ ಹಾಲು ಬಂತು. ಆ ದಿನದಿಂದ ಆ ಕುಟುಂಬದವರೆಲ್ಲಾ ಸ್ವಾಮಿಯವರ ಸೇವೆ ಮಾಡಲು ಪ್ರಾರಂಭಿಸಿದರು.

ಸ್ವಾಮಿಯವರು ನಡೆದಾಡುತಿದ್ದ ಕಾಲದಲ್ಲಿ, ಮುದಿಗೇಡಿನಲ್ಲಿ ತಿಮ್ಮ ರೆಡ್ಡಿಯವರ ಮನೆಗೆ ಅವರ ಅನುಯಾಯಿಗಳೊಂದಿಗೆ ಬರುತ್ತಿದ್ದರು. ಅದೆ ಊರಿನಲ್ಲಿದ್ದ ಕೋಡೂರು ವೆಂಕಮ್ಮನವರು ಅನೇಕಬಾರಿ ಆಹ್ವಾನಿಸಿದರೂ, "ಇಪ್ಪುಡು ಗಾದುಲೆ" (ಈಗಲ್ಲ) ಎನ್ನುತ್ತಿದ್ದರು ಸ್ವಾಮಿಯವರು. ಒಂದು ರಾತ್ರಿ ಸ್ವಾಮಿಯವರು ವೆಂಕಮ್ಮನವರ ಮನೆಗೆ ಬಂದು ದನದ ಕೊಟ್ಟಿಗೆಯಲ್ಲಿ ಕುಳಿತಿದ್ದರು. ವೆಂಕಮ್ಮನವರ ಭಾವನವರು ಎತ್ತುಗಳಿಗೆ ಹುಲ್ಲು ಹಾಕಲು ಬಂದು ಸ್ವಾಮಿಯವರನ್ನು ನೋಡಿ ಎಲ್ಲರನ್ನೂ ಎಬ್ಬಿಸಿ ಸ್ವಾಮಿಯವರಿಗೆ ಚಾಪೆ ಹಾಸಿ ಸ್ವಾಗತಿಸಿದರು. ಅಂದಿನಿಂದ ಸ್ವಾಮಿಯವರು ಆಗಾಗ್ಗೆ ಅವರ ಮನೆಗೆ ಬಂದು ಅವರ ಮನೆಯಲ್ಲಿ ಒಂದು ತಿಂಗಳು ಆತಿಥ್ಯ ಸ್ವೀಕರಿಸಲು ಪ್ರಾರಂಭಿಸಿದರು.

ಒಮ್ಮೆ ವೆಂಕಮ್ಮನಿಗೆ ಹಸಿವಾಗದೆ ಆಹಾರವನ್ನು ನೋಡಿದಾಗ ವಾಂತಿಯಾಗುತ್ತಿತ್ತು. 5 ವರ್ಷಗಳ ಕಾಲ ದೌರ್ಬಲ್ಯದಿಂದ ಅವರು ಹಾಸಿಗೆಯನ್ನು ಹಿಡಿದು ಬಿಟ್ಟರು. ಅವರು 20 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬಹುದು. ಎಷ್ಟೋ

ವೈದ್ಯರು, ಗಿಡ ಮೂಲಿಕೆ ವೈದ್ಯರು ಮತ್ತು ಮಂತ್ರ ಹಾಕುವವರ ಎಲ್ಲಾ ಪ್ರಯತ್ನಗಳು ವಿಫಲವಾಯಿತು. ಶ್ರೀ ಸ್ವಾಮಿಯವರು ಇವರ ಮನೆಗೆ ಬಂದಾಗಲೆಲ್ಲಾ ವೆಂಕಮ್ಮನ ತಾಯಿ ಸ್ವಾಮಿಯವರಲ್ಲಿ ಪ್ರಾರ್ಥಿಸುತ್ತಿದ್ದರು. ಆದರೆ, ಸ್ವಾಮಿಯವರು ಪೆನ್ನ ಬದ್ವೇಲಿನಲ್ಲಿ ಇದ್ದಾಗ, ತಮ್ಮ ಹತ್ತಿರ ಕರೆದು ಕೊಂಡು ಬರಲು ಒಂದು ಪತ್ರ ಬರೆಸಿದರು. ವೆಂಕಮ್ಮನ ಮನೆಯವರು ಸ್ವಾಮಿ ಹೇಳಿದಂತೆ ಮಾಡಿದರು. ಸ್ವಾಮಿಯವರನ್ನ ನೋಡಿದ ತಕ್ಷಣ ಆಕೇಗೆ ತುಂಬಾ ಹಸಿವು ಪ್ರಾರಂಭವಾಯಿತು. ಒಂದು ಸೇರು ಅಕ್ಕಿ ಅಡಿಗೆ ಮಾಡಿ ಅನ್ನ ಬಡಿಸಿದರೂ ಸಾಲಲಿಲ್ಲ. ಎರಡು ಸೇರು ಅಕ್ಕಿ ಅಡಿಗೆ ಮಾಡಿದರೆ, ಅಷ್ಟನ್ನೂ ತಿಂದು ಬಿಟ್ಟಳು. ರಾತ್ರಿ ಹಗಲು ಅವಳನ್ನ ನಿದ್ರೆ ಮಾಡಲು ಬಿಡದೇ ಸ್ವಾಮಿಯವರು ತಮ್ಮ ಬೆರಳು ಮುದ್ರೆ ಹಾಕಿಸುತ್ತಿದ್ದರು. ಮೂರನೆಯ ದಿನ ಸ್ವಾಮಿಯವರು ಆಕೆಗೆ ಅನ್ನ ತಿನ್ನಲು ಬಿಡಲಿಲ್ಲ, ರಾತ್ರಿ ಒಂದು ಬಾಳೆಯಹಣ್ಣು ಮತ್ತು ಒಂದು ಮುಷ್ಟಿ ಹುರಿಟ್ಟು ತಿನ್ನಿಸಿದರು. ಆ ದಿನದಿಂದ ಆಕೆಗೆ ಆರೋಗ್ಯ ಸರಿಹೋಗಿ, ಸಾಮಾನ್ಯವಾದ ಹಸಿವು ಪ್ರಾರಂಭವಾಯಿತು. ಸ್ವಾಮಿಯವರು ಜೀವಂತರಾಗಿದ್ದಾಗಲೇ ಅವರ ಸೇವೆ ಮಾಡಲು ಪ್ರಾರಂಭಿಸಿದ ವೆಂಕಮ್ಮ ಇಂದಿನವರೆಗೂ ಅವರ ಸಮಾಧಿಯನ್ನು ಭಕ್ತಿಯಿಂದ ಸೇವಿಸುತ್ತಿದ್ದಾರೆ.

ಗೌನಿ ಪೆಂಚಲಮ್ಮ(ಗೊಲಗಮೂಡಿ) ಉಬ್ಬಸ ಮತ್ತು ಕೆಮ್ಮಿನಿಂದ ಬಹಳ ದಿನಗಳಿಂದ ಬಳಲುತ್ತಿದ್ದಳು. ಎಲ್ಲಾ ಚಿಕಿತ್ಸೆಗಳು ವಿಫಲವಾಯಿತು. ಒಮ್ಮೆ ಅವರು ಸ್ವಾಮಿಯವರಲ್ಲಿ ಪ್ರಾರ್ಥಿಸಿದಾಗ, "ಆರು ರೂಪಾಯಿಲು ಪೆಟ್ಟು" (ಆರು ರೂಪಾಯಿ ಕೊಡು) ಎಂದರು. ಆಕೆಯ ಹತ್ತಿರ ಅಷ್ಟು ಹಣ ಇರಲಿಲ್ಲ ಆದ್ದರಿಂದ, ಬೇರೆ ಮಾತಾಡದೇ ನಿಂತು ಕೊಂಡಿದ್ದರು. "ಏಮಮ್ಮಾ! ಜಬ್ಬು ಪೋವಾಲನುಕುಂಟುನ್ನಾವಾ? ವೆಯ್ಯಿ(Rs.1000/-) ರೂಪಾಯಲು ಗುಂಡಮುಲೋ ಪೋಯಿ ಪೋತುಂದಿ" (ಏನಮ್ಮ! ರೋಗ ಗುಣವಾಗಬೇಕೆಂದು ಯೋಚಿಸುತ್ತಿದ್ದೀಯಾ? ಸಾವಿರ ರೂಪಯನ್ನ

ಅಗ್ನಿ ಕುಂಡದ ಒಳಗೆ ಹಾಕು, ಹೋಗುತ್ತದೆ) ಎಂದರು. ಅದಕ್ಕೆ ಕೂಡಾ ಆಕೆ ಏನೂ ಮಾತನ್ನಾಡದೇ ನಿಂತಿದ್ದರು. ಇನ್ನೊಂದು ದಿನ ಪೆಂಚಲಮ್ಮನವರು ಐದು ರೂಪಯಿಗಳನ್ನು ಸ್ವಾಮಿಯವರಿಗೆ ಅರ್ಪಿಸಿದಳು ಮತ್ತೆ ತನ್ನನ್ನು ಗುಣಪಡಿಸಿ ಎಂದು ಬೇಡಿಕೊಂಡಳು. ಆಗ "ನೇನು ಕಾದು ನೀಕು ಬಾಗು ಚೇಸೇದಿ, ಅಮ್ಮ ಬಾಗು ಚೇಸ್ತುಂದಿಪೋ!" (ನಿನ್ನನ್ನು ಗುಣಪಡಿಸುವವನು ನಾನಲ್ಲ, ಅಮ್ಮ ನಿನ್ನನ್ನು ಗುಣಪಡಿಸುತ್ತಾಳೆ) ಎಂದು ಸ್ವಾಮಿಯವರು ಹೇಳಿ, ಆ ಐದು ರೂಪಾಯಿಗಳನ್ನ ಮತ್ತೆ ವಾಪಸ್ಸು ಕೊಟ್ಟಿ ಆಕೆಯನ್ನು ತುಳಸವ್ವನ ಬಳಿ ಕಳುಹಿಸಿದರು. ತುಳಸವ್ವ ಇವರ ಮಾತು ಕೇಳಿ ನಕ್ಕುಕೊಂಡರು. "ಅವರು ಆಗಾಗ ಹಾಗೇ ಹೇಳುತ್ತಾರೆ, ನಿಜವಾಗಿ ನಿನ್ನ ರೋಗ ಅವರೇ ಗುಣಪಡಿಸಿದ್ದಾರೆ ಹೋಗು" ಎಂದು ಹೇಳಿದರು ತುಳಸವ್ವ. ಕ್ರಮೇಣಾ ಎರಡು ದಿನಗಳ ನಂತರ ಆಕೆಯ ರೋಗ ಸಂಪೂರ್ಣವಾಗಿ ಗುಣ ಆಯಿತು. ಅವರ ಕೆಮ್ಮು ಮತ್ತು ಉಬ್ಬಸ ಆಕೆಯನ್ನು ಮತ್ತೆಂದಿಗೂ ಪೀಡಿಸಲಿಲ್ಲ.

ಪಲ್ಲೆಂರೆಡ್ಡಿ ಕೃಷ್ಣಾ ರೆಡ್ಡಿಯವರಿಗೆ ಒಂದೇ ಒಂದು ಎಮ್ಮೆ ಇತ್ತು. ಅದಕ್ಕೆ ಅನಾರೋಗ್ಯದಿಂದ ಹೊಟ್ಟೆ ಉಬ್ಬಿ ಪ್ರಾಣ ಹೋಗುವಂತಿತ್ತು. 'ಸ್ವಾಮಿಯವರನ್ನ ನಂಬಿದ್ದಿಕ್ಕೆ

ಈ ಒಂದು ಎಮ್ಮೆಯನ್ನೂ ಸಾಯಲು ಬಿಡುತ್ತಿದ್ದಾರೆ" ಎಂದು ತುಂಬ ದುಃಖ ಪಡುತ್ತಾ ನಿದ್ರೆ ಮಾಡಿಬಿಟ್ಟರು. ಅವರ ಸ್ವಪ್ನದಲ್ಲಿ ಸ್ವಾಮಿಯವರು ಎಮ್ಮೆಯ ಹತ್ತಿರ ಕೂತಿರುವ ಹಾಗೆ ಕಂಡರು. ತಕ್ಷಣ ನಿದ್ರೆಯಿಂದ ಎಚ್ಚರವಾಗಿ ತಮ್ಮ ಎಮ್ಮೆಯನ್ನು ನೋಡಿದರೇ, ಅದು ಏನನ್ನೋ ಅಗಿಯುತ್ತಿತ್ತು. ಅದನ್ನ ಎಬ್ಬಿಸಿದಾಗ ಒಂದು ಬಕೆಟ್ ಗಂಜಲ ವಿಸರ್ಜನೆ ಮಾಡಿ ಹುಲ್ಲು ತಿನ್ನಲು ಪ್ರಾರಂಭಿಸಿತು. ಅದರ ಹೊಟ್ಟೆಯ ಊತ ಹೇಗೆ ಸಂಪೂರ್ಣವಾಗಿ ಕಡಿಮೆ ಆಯಿತೋ ಆಶ್ಚರ್ಯ!

ಶ್ರೀಸ್ವಾಮಿಯವರು ತಲಪೂರು 'ಮಾದಿಗನಾಂ' ಗಣಿ ಹತ್ತಿರ ಬಿಡಿದಿ ಮಾಡಿದರು. ಒಮ್ಮೆ ಅಲ್ಲಿಂದ ಹೊರಡಲು ತಮ್ಮ ಸಾಮಾನುಗಳನ್ನ ಕಟ್ಟಿಕೊಂಡು ಹೊರಡುವ ಹೊತ್ತಿಗೆ, "ನೊಪ್ಪಿ ವಚ್ಚಿಂದಿ ಪೋಯೇಂದುಕು ಲೇದು" (ನೋವು ಬಂದಿದೆ, ಹೊರಡುವುದಿಲ್ಲ) ಎಂದು ಸ್ವಾಮಿಯವರು ಇದ್ದ ಜಾಗದಿಂದ ಚಲಿಸಲಿಲ್ಲ. ಹಾಗೆ ಹೇಳಿದ ಒಂದು ಗಂಟೆ ಒಳಗೆ ಹೊಟ್ಟೆ ನೋವಿನಿಂದ ವಿಲ ವಿಲಾ ಒದ್ದಾಡುತ್ತಿದ್ದ ಮಗುವನ್ನು ಎತ್ತಿಕೊಂಡು ಒಬ್ಬ ತಾಯಿ ಬಂದಳು. ಸ್ವಾಮಿಯವರು ಹಾಮಿ ಪತ್ರವನ್ನು ಬರಿಸಿದ ಕೆಲವು ಕ್ಷಣಗಳಲ್ಲೇ ಆ ಮಗು ಸ್ವಸ್ಥ ಆದನು.

ತಲಪೂರು ಗ್ರಾಮದ ವಿಂಜಂ ಮೀನಮ್ಮನವರು ಹೀಗೆ ಹೆಳಿದರು - " ನನ್ನ ಮಗ ಚಿರಂಜೀವಿ ಪ್ರಸಾದ್ 11 ತಿಂಗಳ ಎಳೇ ಮಗು, ಪುಟ್ಟ ಪುಟ್ಟ ಹೆಜ್ಜೆ ಹಾಕುವ ದಿನಗಳಲ್ಲಿ 1972 ಇಸವೀನಲ್ಲಿ, ಅವನ ಎಡಗಾಲು ನಿರ್ಜೀವ ಆಗಿ ಮತ್ತು ನಡೆಯಲು ಸಾಧ್ಯವಾಗಲಿಲ್ಲ. ನೆಲ್ಲೂರು ವೈದ್ಯರು ಅವನ ಬೆನ್ನೆಲುಬಿನಿಂದ ನೀರು ತೆಗೆಯುವುದಕ್ಕೆ ಕೆಲವು ಔಷಧಿಗಳನ್ನು ಬರೆದರು, ಅದನ್ನು ಉಪಯೋಗಿಸುತ್ತಿದ್ದೆವೆ. 4ನೇ ದಿನ ಸ್ವಾಮಿಯವರು ನಮ್ಮ ಪಕ್ಕದ ಮನೆಯಲ್ಲಿ ಬಿಡಿದಿ ಮಾದಿದ್ದರು. ಅಲ್ಲಿದ್ದವರೆಲ್ಲರೂ ಮಗುವನ್ನು ಅವರಿಗೆ ತೋರಿಸು ಎಂದು ಹೇಳಿದರು.

ಅಲ್ಲಿಯವರೆಗು, ಸ್ವಾಮಿ ಮತ್ತು ಅವರ ಅನುಯಾಯಿಗಳೆಂದರೆ, ಹೊಟ್ಟೆ ಹೊರೆಯುವ ಸೋಮಾರಿ ಗುಂಪು ಎಂದು ಅವಹೇಳನಕರವಾಗಿ ಮಾತನಾಡುತ್ತಿದ್ದೆ. ಎಲ್ಲರ ಬಲವಂತಕ್ಕೆ ಮಗುವನ್ನು ಎತ್ತಿ ಕೊಂಡು ಹೋಗಿ ನಿಂತು ಕೊಂಡೆ. ಬೆಳಗ್ಗಿನಿಂದ ಎಷ್ಟೋ ಜನ ಬಂದರೂ ಏನೂ ಹೇಳದ ಸ್ವಾಮಿಯವರು, ನಾನು ಹೋದ ತಕ್ಷಣ, " ಈ ಪಿಲ್ಲವಾನಿಕಿ 16 ವ ರೋಜುಕು ಕಾಲುಪೋತುಂದಿ. ಆಯುಸ್ಸು 6, ಕಾದು, 7 ಆ! ಆ! 9, ಲೇದು 16 ಸಂವತ್ಸರಮುಲು ಅಂತೇ" (ಈ ಮಗುವಿಗೆ 16 ನೆ ದಿನಕ್ಕೆ ಕಾಲು ಹೋಗುತ್ತದೆ. ಆಯಸ್ಸು 6, ಅಲ್ಲ 7, ಆ! ಆ! ೯ ಅಲ್ಲ 16 ವರ್ಷಗಳು ಆಯಸ್ಸು ಅಷ್ಟೇ) ಎಂದು ಒಂದು ಪತ್ರ ಬರೆಸಿ ಕೊಟ್ಟರು. ನಾನು ದುಃಖದಿಂದ ಅಳುತ್ತಾ 'ನನ್ನ ಮಗುವನ್ನು ಈ ಹಾಳು ಮುದುಕನ ಬಳಿ ಏಕೆ ತಂದನೋ, ಹೀಗೆ ಆಶೀರ್ವದಿಸಿದ್ದಾನೆ' ಎಂದು ಅಳುತ್ತಾ ಹಿಂತಿರುಗಿದೆ.

16ನೆ ದಿನ ಯಾವಾಗ ಬರುತ್ತದೆಯೋ ಎಂದು ಎದುರುನೋಡುತ್ತಿದ್ದೆ. ಆ ದಿನ ನಿದ್ರೆಯಿಂದ ಎದ್ದ ತಕ್ಷಣ ಮಗು ನನ್ನ ಹತ್ತಿರ ಓಡಿ ಬಂತು. ಅದನ್ನ ನೋಡಿ ನನ್ನ ಸಂತೋಷ ತಡಿಯಲಾಗದೆ, ಮಾಡುತ್ತಿದ್ದ ಕೆಲಸಗಳನ್ನೆಲ್ಲಾ ಬಿಟ್ಟು, ಮಗುವನ್ನು

ಎತ್ತುಕೊಂಡು, ನಾವು ದಂಪತಿಗಳು 30 ಮೈಲಿ ದೂರದ ಗೊಲಗಮೂಡಿಯಲ್ಲಿದ್ದ ಸ್ವಾಮಿಯವರ ಸನ್ನಿಧಿಗೆ ಬಂದು ಕ್ಷಮಿಸಲು ಬೇಡಿ ಕೊಂಡೆವು. ಅವರಿಗೆ ಪೊಂಗಲ್, ತೆಂಗಿನ ಕಾಯಿ ಸಮರ್ಪಿಸಿ ಹೊರೆಟೆವು. ಆ ದಿನದಿಂದ, ನನ್ನ ಮಗು ಯಾವ ಔಷಧಿಗಳನ್ನು ಸೇವಿಸದೇ ಸಂಪೂರ್ಣವಾಗಿ ಸ್ವಸ್ಥ ನಾದನು. ಅವನ ಆಯಸ್ಸಿನ ವಿಷಯವಾಗಿ ಸ್ವಾಮಿಯವರ ಮಾತುಗಳು ಯಾವುದೋ ತಿಳಿಯ ದಂತಹ ರೀತಿಯಲ್ಲಿ ಅವರ ಆಶೀರ್ವಾದವೇ ಮಾಡಿದರೆಂದು ಅನ್ನಿಸುತ್ತದೆ. ಕಾರಣ ಸ್ವಾಮಿಯವರು, 'ಸಾವಿನ ಸಮೀಪದಲ್ಲಿರುವ ವ್ಯಕ್ತಿಗೆ ಸಹ ನಿಮ್ಮ ಆಯಸ್ಸು ತೀರಿತು' ಎಂದು ಅವರು ಎಂದಿಗೂ ಹೇಳಿದ್ದೇ ಇಲ್ಲ. 'ಪಂಕ್ತಿ ಭೊಜನಕ್ಕೆ ಹೋಗುತ್ತಾನೆ' ಎಂದೋ ಅಥವ 'ಮದುವೆಗೆ ಹೋಗುತ್ತಾನೆ' ಎಂದು ಹೇಳುತ್ತಿದ್ದರು.

ಬಿರಿಜೇ ಪಲ್ಲಿ ರಮಣಯ್ಯ ಹೀಗೆ ಹೇಳಿದರು. ರಾಜಪದ್ಮಾಪುರ ನಿವಾಸಿ ಒಂದು ಬಡಕಲು ಎತ್ತನ್ನು ವ್ಯವಸಾಯಕ್ಕಾಗಿ ಕರೆ ತಂದನು. ಆ ಹಳ್ಳಿಯ ಹತ್ತಿರ, ಎತ್ತು ಕೆಳಗೆ ಬಿದ್ದಿತು ಮತ್ತು ಇನ್ನು ಮುಂದೆ ಅದಕ್ಕೆ ನಡೆಯಲು ಸಾಧ್ಯವಾಗಲಿಲ್ಲ. ಎಷ್ಟು ಹೊಡೆದರೂ, ಅದರ ಬಾಲ ಹಿಡಿದು ಎತ್ತಿದರೂ ಏಳಲಿಲ್ಲ. ದೂರದಲ್ಲಿದ್ದ ಸ್ವಾಮಿಯವರು ತಮ್ಮ ಸೇವಕನನ್ನು ಕರೆದು "ಅಯ್ಯಾ! ಈ ಮಾರ್ಗಾನೇ ಪೋಯಿ ಎದ್ದುನು ಕೊಟ್ಟೇ ಆಯನನು ಕೊಟ್ಟ ವದ್ದನಿ ಚೆಪ್ಪು" (ಅಯ್ಯಾ! ಈ ದಿಕ್ಕಿನಲ್ಲಿ ಹೋಗಿ ಆ ವ್ಯಕ್ತಿಗೆ ತನ್ನ ಎತ್ತನ್ನು ಹೊಡೆಯುವುದನ್ನು ನಿಲ್ಲಿಸಲು ಹೇಳು) ಎಂದರು. ಸೇವಕ ಹೋಗಿ ಆ ವ್ಯಕ್ತಿಗೆ ಸ್ವಾಮಿಯವರು ಹೇಳಿದ ಮಾತು ತಿಳಿಸಿದನು. ಆದರೂ ಆ ವ್ಯಕ್ತಿ ಕೇಳಿಸಿ ಕೊಳ್ಳದೇ ಅವನ ಎತ್ತನ್ನು ಹೊಡೆಯುವುದು ನಿಲ್ಲಿಸಲಿಲ್ಲ. ಸೇವಕ ಹಿಂತಿರಿಗಿ ಬಂದು ಸ್ವಾಮಿಯವರಿಗೆ ಹೇಳಿದ. ಆಗ ಸ್ವಾಮಿಯವರು, ತಾವೆ ಸ್ವತಃ ಅಲ್ಲಿಗೆ ಹೋಗಿ ಎತ್ತನ್ನು ಮುಟ್ಟುತ್ತಾ "ಲೇಯ್" (ಏಳು) ಎಂದರು. ಅದಕ್ಕೆ ಎಲ್ಲಿಂದಲೋ ಶಕ್ತಿ ಬಂದು ತಕ್ಷಣ ಎದ್ದಿ ನಿಂತಿಕೊಂಡಿತು. ಸ್ವಾಮಿಯವರು "ಅಯ್ಯಾ! ನಾಲುಗು ರೋಜುಲು ಬಂಡಿ ಕಟ್ಟಬೋಕು. ತರುವಾತ ಬಾಗಾನೇ ಸೇದ್ಯಂ ಚೇಸ್ತುಂದಿ" (ಅಯ್ಯಾ! ನಾಲಕ್ಕು ದಿನ ಅದನ್ನ ಬಂಡಿಗೆ ಕಟ್ಟ ಬೇಡ. ಆಮೇಲೆ ಅದು ಚೆನ್ನಾಗಿ ವ್ಯವಸಾಯದ ಕೆಲಸ ಮಾಡುತ್ತದೆ) ಎಂದು ಆಶೀರ್ವದಿಸಿದರು. ಆಮೇಲೆ ಆ ಬಡಕಲ ಎತ್ತು ಪರ್ವತದಷ್ಟು ಕೆಲಸ ನಿರಂತರ ಮಾಡಲು ಪ್ರಾರಂಭಿಸಿತು.

ಒಮ್ಮೆ ಸ್ವಾಮಿಯವರು ನೆಲ್ಲೂರಿನ ಶ್ರೀ ರಂಗ ನಾಯಕ ಪೇಟೆಯ ದೇವಸ್ಥಾನಕ್ಕೆ ಹೋದರು. ಗರ್ಭ ಗುಡಿ ಮುಚ್ಚುವ ಸಮಯವಾಗಿದ್ದರೂ ಪೂಜಾರಿಯವರಿಗೆ, ಶ್ರೀ ಸ್ವಾಮಿಯವರಲ್ಲಿದ್ದ ಭಕ್ತಿಯಿಂದ ಗರ್ಭ ಗುಡಿಯ ಬಾಗಿಲು ತೆರೆದು, ಊಟ ಮಾಡಲು ಹೋದರು. ಶ್ರೀ ಸ್ವಾಮಿಯವರು ಅಲ್ಲಿ ಮಾತಾಡಿದ ವಿಧಾನ ಬಹಳ ವಿಚಿತ್ರವಾಗಿತ್ತು. "ಒರೇಯ್ ರಂಗನಾಯಕುಲಾ! ಪಿಲಿಸ್ತೇ ಪಲಕವೇಮೀ? ಕಾವರಮಾ? ಗ್ರುಡ್ಲು ವತ್ತೇಸ್ತಾ! ಜಾಗ್ರತ್ತ! ಏಮಿಟಿ ನೀ ಪದ್ಧತಿ? ಚೆಪ್ಪಿನಟ್ಲು ಚೇಸ್ತಾವಾ ಲೇಕ ಪಂಡ್ಲು ಊಡಕೊಟ್ಟಮಂಟಾವಾ? ಏಮನುಕುನ್ನಾವ್? ಮನಂ ಚೆಪ್ಪಿನಟ್ಲು ವಿಂಟಾಡಂಟ, ವಚ್ಚಿನ ಪನಿ ಅಯಿಂದಿ. ಮನಂ ಪೋದಾಂ ಪದಂಡಿ" (ಅಲೇಯ್ ರಂಗನಾಯಕಾ! ಕರೆದರೆ ಉತ್ತರ ಕೊಡುತ್ತಿಲ್ಲ ಏಕೆ? ಅಹಂಕಾರವೇ? ಕಣ್ಣು ಗುಡ್ಡೆಗಳನ್ನು ಒತ್ತಿ ಬಿಡುತ್ತೇನೆ!

ಹುಷಾರಾಗಿರು! ಇದೇನಾ ನಿನ್ನ ಪದ್ಧತಿ? ಹೇಳಿದಂತೆ ಮಾಡುತ್ತೀಯಾ ಇಲ್ಲ ನಿನ್ನ ಹಲ್ಲುಗಳನ್ನು ಉದರಿಸಲೇ? ಏನೆಂದುಕೊಂಡಿದ್ದೀಯ? ನಾವು ಹೇಳಿದಂತೆ ಕೇಳುತ್ತಾನಂತೆ, ಬಂದ ಕೆಲಸ ಮುಗಿದಿದೆ. ನಾವು ಹೋಗೋಣ ನಡೆಯಿರಿ) ಎಂದು ಎಲ್ಲರನ್ನೂ ಕರೆದುಕೊಂಡು ಹಿಂತಿರುಗಿದರು. ಇದೇ ರೀತಿ ಪೆಂಚಲ ನೃಸಿಂಹಸ್ವಾಮಿಯವರನ್ನು ಉಗ್ರವಾಗಿ ಬಯ್ಯುತ್ತಿದ್ದರು. ಶ್ರಿ ಸ್ವಾಮಿಯವರ ಆಜ್ಞೆಯನ್ನು ಅವರುಗಳು ಪಾಲಿಸುತ್ತೇವೆಂದು ಭರವಸೆ ಕೊಟ್ಟ ಮೇಲೆ ಶಾಂತರಾಗಿ ಹಿಂತಿರುಗುತ್ತಿದ್ದರು. ಇವರು ಏನು ಆಜ್ಞಾಪಿಸುತ್ತಿದ್ದರೋ ಅವರು ಏನು ಪಾಲಿಸುತ್ತೇವೆಂದು ಹೇಳುತ್ತಿದ್ದರೋ ಸ್ವಾಮಿಯವರೇ ಬಲ್ಲರು.

ಓಂ ನಾರಾಯಣ - ಆದಿನಾರಾಯಣ

ಅವಧೂತ ಲೀಲೆ

ಅಧ್ಯಾಯ - 9

ದಯಾಸಾಗರರು

28

ಅತ್ಯಂತ ಕರುಣಾ ಮೂರ್ತಸ್ವರೂಪರಾದ ಸ್ವಾಮಿಯವರು, ಅವರನ್ನು ನಂಬಿದ ಭಕ್ತರು, ಸಂಪೂರ್ಣ ಭಕ್ತಿ ಇಂದ ಸ್ಮರಿಸಿದಾಗ, ಯಾವುದೇ ಸಂಕಟ ದಲ್ಲಿ ಈ ಜಗತ್ತಿನಲ್ಲಿ ಎಲ್ಲೇ ಇರಲಿ, ಕ್ಷಣದಲ್ಲಿ, ಅತ್ಯಂತ ಆಶ್ಚರ್ಯಕರವಾದ ರೀತಿಯಲ್ಲಿ ರಕ್ಷಿಸುತ್ತಿದ್ದರು. ಅಸಹನೀಯವಾದ ಭಯಂಕರ ವ್ಯಾಧಿಯಿಂದ ಬಳಲುತ್ತಿರುವ ಭಕ್ತರು, ಸ್ವಾಮಿಯವರನ್ನು ಪ್ರಾರ್ಥಿಸಿದಾಗ, ಅವರುಗಳ ವ್ಯಾಧಿಯನ್ನು ತಾವೇ ತೆಗೆದುಕೊಂಡು ಅನುಭವಿಸಿ ಆ ಭಕ್ತರ ಕಷ್ಟವನ್ನು ದೂರ ಮಾಡುತ್ತಿದ್ದರು.

ಒಮ್ಮೆ ಸ್ವಾಮಿಯವರು ಉಬ್ಬಸದಿಂದ (ಆಯಾಸ) ಬಹಳ ಬಳಲುತ್ತಿದ್ದರು. ಭಕ್ತರು ಸಣ್ಣ ಈರುಳ್ಳೀ ರಸ ತೆಗೆದು, ಚಿಕ್ಕ ಲೋಟದಲ್ಲಿ ಕುಡಿಸಿದರು. ಸ್ವಾಮಿಯವರ ನಾಡಿ ಮಿಡಿತ ಕಳೆದು ಕೊಂಡರು. ಎಲ್ಲರೂ ಸ್ವಾಮಿಯವರು ತಮ್ಮ ದೇಹವನ್ನು ಬಿಡುತ್ತಿದ್ದಾರೆಂದು ಭಾವಿಸಿ ಮಧ್ಯ ರಾತ್ರಿಯವರೆಗೆ ಅಲ್ಲೇ ಕುಳಿತು, ಅಳುತ್ತಾ ನಿದ್ರೆ ಮಾಡಿ ಬಿಟ್ಟರು. ಸ್ವಲ್ಪ ಹೊತ್ತಾದ ನಂತರ, ಎಲ್ಲರೂ ನಿದ್ರೆಯಿಂದ ಎಚ್ಚರಗೊಂಡು ನೋಡಿದರೆ, ಸ್ವಾಮಿಯವರು ಕಾಣಲಿಲ್ಲ. ಎಲ್ಲರೂ ಎಲ್ಲಾಕಡೆ ಹುಡುಕಿದರು ಆದರೆ ಸ್ವಾಮಿಯವರು ಕಾಣಲಿಲ್ಲ. ಅರ್ಧ ಘಂಟೆಯ ನಂತರ, ಸ್ವಾಮಿಯವರು ಸ್ನಾನ ಮಾಡಿ ಉಲ್ಲಾಸಕರವಾಗಿ ನಗುತ್ತಾ ಬಂದರು. ಈ ದೃಶ್ಯವನ್ನು ನೋಡಿ ಎಲ್ಲರೂ ಆಶ್ಚರ್ಯ ಪಟ್ಟರು. ಯಾವ ಭಕ್ತನ ಬಾಧೆ ತೀರಿಸಲು ಸ್ವಾಮಿಯವರು ಈ ರೀತಿಯಲ್ಲಿ ಅನುಭವಿಸಿದರೋ ಸ್ವಾಮಿಯವರೇ ಬಲ್ಲರು.

ಒಮ್ಮೆ, ಕುಷ್ಟ ರೋಗದಿಂದ ಬಳಲುತ್ತಿದ್ದ ಒಬ್ಬ ವ್ಯಕ್ತಿಯು ಸ್ವಾಮಿಯವರ ಬಳಿ ಬಂದನು. ಸ್ವಾಮಿಯವರು ನೋವಿ ನಿಂದ ನರಳುತ್ತಿದ್ದರು. ಮಧ್ಯರಾತ್ರಿಯಲ್ಲಿ ರೋಶಿ ರೆಡ್ಡಿ ಸ್ವಾಮಿ ನರಳುವುದನ್ನು ಸಹಿಸಲಾರದೆ, ಅವರು ಸ್ವಾಮಿಯ ಕಾಲನ್ನು ಒತ್ತಲು ಕಾಲು ಹಿಡಿದು ಕೊಂಡರು. "ಅಬ್ಬೋ, ಅಬ್ಬೋ! ಇಪ್ಪುಡು ನನ್ನು ತಾಕ ಕೂಡದು. ದೂರಂಗಾ ಪೋಯ್ಯಾ" (ಅಬ್ಬೋ, ಅಬ್ಬೋ! ಈಗ ನನ್ನನ್ನು ಮುಟ್ಟಬಾರಾದು, ದೂರಾ ಹೋಗಪ್ಪಾ) ಎಂದರು ಸ್ವಾಮಿಯವರು. ಒಂದು ಗಂಟೆಯ ನಂತರ ರೋಶಿ ರೆಡ್ಡಿಯವರ ಕಾಲಿನ ಹೆಬ್ಬೆಟ್ಟಿನ ಕೆಳಭಾಗ ಯಾವದೇ ಕಾರಣ ಇಲ್ಲದೇ ಸೀಳಿ, ಕುಷ್ಟ ವ್ಯಾಧಿ ಯಂತೆ ವ್ಯಾಪಿಸಿತು. ಕುಷ್ಟ ರೋಗಿಯ ಬಾಧೆಯನ್ನು ಸ್ವಾಮಿಯವರು ತಮ್ಮ ಮೇಲೆ ತಂದು ಕೊಂಡು

ಅನುಭವಿಸುತ್ತಿದ್ದಾಗ, ರೋಶಿ ರೆಡ್ಡಿಯವರು ಸ್ವಾಮಿಯವರನ್ನ ಮುಟ್ಟಿದ್ದರಿಂದಲೇ ತನಗೆ ಹೀಗಾಯಿತೆಂದು ಗುರುತಿಸಿ, ರೋಶಿ ರೆಡ್ಡಿ 4 ದಿನ ಕೇವಲ ಗುರು ಸ್ಮರಣೆ ಮಾಡಿದರು. ನಾಲ್ಕನೇ ದಿನ ಅವರ ಕಾಲು ಯಾವ ಔಷಧಿ ಇಲ್ಲದೇ ಸರಿ ಹೋಯಿತು.

ಗೊಲಗಮೂಡಿಯ ಗೌನಿ ಪೆಂಚಲಮ್ಮನಿಗೆ ಶರೀರ ಎಲ್ಲ ವಿಪರೀತ ಕಡಿತ. ಬಹಳ ತಿಂಗಳಗಳಿಂದ ಕೆರೆದು ಕೆರೆದು ಶರೀರ ಎಲ್ಲ ಉರಿಯಲು ಪ್ರಾರಂಭಿಸಿತು. ಯಾವ ಚಿಕಿತ್ಸೆಯೂ ಉಪಯೋಗ ಆಗಲಿಲ್ಲ. ತನ್ನ ಈ ಬಾಧೆಯನ್ನು ಗುರವಯ್ಯನವರ ಮೂಲಕ ಸ್ವಾಮಿಯವರಿಗೆ ತಿಳಿಸಿದಳು. ಅವಳಿಗೆ 1000 ರೂ ಅಗ್ನಿ ಕುಂಡದೊಳಗೆ ಹಾಕು ಎಂದು ಸ್ವಾಮಿಯವರು ಆಜ್ಞಾಪಿಸಿದರು. ತನ್ನ ಹತ್ತಿರ ಅಷ್ಟೊಂದು ಹಣ ಇಲ್ಲ ಎಂದು ಹೇಳಿದಳು. "ಅಯಿತೇ 10 ರೂಪಾಯಲು ವೇಯಮನು" (ಹಾಗಾದರೆ 10 ರೂಪಾಯಿ ಹಾಕಕ್ಕೆ ಹೇಳು) ಎಂದು ಸ್ವಾಮಿಯವರು ಹೇಳಿದರು. ಆಗ, ಅವಳು ತನ್ನ ಹತ್ತಿರ 10 ಪೈಸೆ ಕೂಡ ಇಲ್ಲ ಎಂದು ಹೆಳಿ ಜೋರಾಗಿ ಅತ್ತಳು. "ಆಮೆನು ಐದು ನಿಮಿಷಾಲು ನಾ ಎದುರುಗಾ ನಿಲುಚೋಮನಯ್ಯಾ" (ಆಕೆಯನ್ನು ಐದು ನಿಮಿಷಗಳು ನನ್ನ ಎದುರಿಗೆ ನಿಂತುಕೋ ಎಂದು ಹೇಳಯ್ಯಾ) ಎಂದರು ಸ್ವಾಮಿಯವರು. ಆಕೆ ಹಾಗೆ ನಿಂತ 5 ನಿಮಿಷಗಳ ನಂತರ ಹೊರಟು ಹೋಗಲು ಹೇಳಿದರು. ಆ ಕ್ಷಣದಿಂದ ಆಕೆಗೆ ಕಡಿತ ಶಾಶ್ವತವಾಗಿ ನಿವಾರಣೆ ಆಯಿತು. ಆದರೆ, ಆ ಕ್ಷಣದಿಂದ ಸ್ವಾಮಿಯವರು ಒಂದು ಇಡೀ ವಾರ ಶರೀರವೆಲ್ಲಾ ತೀವ್ರವಾದ ನವೆಯಿಂದ ಬಳಲುತ್ತಾ, ಬಾಚಣಿಗೆಯಿಂದ ತನ್ನ ಶರೀರವೆಲ್ಲಾ ಕೆರೆಸಿಕೊಂಡರು.

ಶ್ರೀರಾಮ, ಶ್ರೀಕೃಷ್ಣ ಅಂತಹ ಅವತಾರ ಪುರುಷರು ಈ ಪ್ರಪಂಚದಲ್ಲಿ ಬಂದಾಗ ಸಾಮಾನ್ಯ ಮನುಷ್ಯರ ಹಾಗೆ ಜೀವನ ನಡೆಸಿದರು. ಅವರು ಸಾಮಾನ್ಯ ಮನುಷ್ಯರಂತೆ ಸಂತೋಷ ಮತ್ತು ದುಃಖವನ್ನು ಅನುಭವಿಸಿದರು. ಅದೇ ರೀತಿಯಲ್ಲಿ ನೋಡಿದರೆ ಶ್ರಿ ಸ್ವಾಮಿಯವರು ಶಿಬಿ ಚಕ್ರವರ್ತಿಗಿಂತ ದೊಡ್ಡ ತ್ಯಾಗ ಶಾಲಿ. ಏಕೆಂದರೆ, ತಮ್ಮನ್ನು ಆಶ್ರಯಿಸಿದವರಿಗೆ ತಮ್ಮ ಶರೀರವನ್ನೇ ಅರ್ಪಿಸಿದವರಲ್ಲವೇ? (ಮೇಲಿನ ವಿವಿಧ ಭಕ್ತರ ಅನುಭವಗಳೇ ಇದಕ್ಕೆ ಸಾಕ್ಷಿ)

ಶ್ರೀ ಸ್ವಾಮಿಯವರು ಕೆಲವರಿಗೆ ಪ್ರತ್ಯೇಕವಾಗಿ ಕೆಲವು ಕುಲದವರ ಮನೆಗಳಲ್ಲಿ ಊಟಮಾಡಿದರೆ ರೋಗಗಳು ಗುಣವಾಗುತ್ತದೆ ಎಂದು ಹೇಳುತ್ತಿದ್ದರು. ಬ್ರಾಹ್ಮಣರ ಮನೆಯಲ್ಲಿ ಎರಡು ಹೊತ್ತು ಊಟ ಮಾಡಿ ಅಥವ ವೈಶ್ಯರ ಮನೆಯಲ್ಲಿ ಮೂರು ಹೊತ್ತು ಊಟ ಮಾಡಿ ಎಂದು ಹೇಳುತ್ತಿದ್ದರು. ಹಾಗೆಯೇ ಇತರ ವರ್ಣಸ್ಥರ (ಬೇರೇ ಕುಲದವರು) ಮನೆಗಳಲ್ಲಿ ಊಟಮಾಡಲು ಹೇಳುತ್ತಿದ್ದರು. ಸ್ವಾಮಿಯವರ ಮಾತಿನಲ್ಲಿ ವಿಶ್ವಾಸ ಇಟ್ಟು ಅವರು ಹೇಳಿದ ಹಾಗೆ ಮಾಡಿದವರಿಗೆ ನಂಬಲಾರದಷ್ಟು ಮೇಲಾಗುತ್ತಿತ್ತು. ಅದೇ ಅವರ ಮಾತನ್ನ ನಿರ್ಲಕ್ಷ್ಯ ಮಾಡಿದವರು ಸ್ವಾಮಿಯವರ ಕೃಪೆ ಕಳೆದುಕೊಳ್ಳವರಾಗುತ್ತಿದ್ದರು.

ನೂತೇಟಿ ಶ್ರೀ ರಾಮಯ್ಯ ನಾಯುಡು ಸ್ವಾಮಿಯವರ ದರ್ಶನಕ್ಕೆ ಬಂದರು (ಇದು ಸ್ವಾಮಿಯವರು ನಡೆದಾಡುತಿದ್ದ ಕಾಲದಲ್ಲಿ). ಅದೇ ಸಮಯದಲ್ಲಿ ಸ್ವಾಮಿಯವರು ಊಟಕ್ಕೆ ಕುಳಿತು ಊಟ ಮಾಡಲು ಪ್ರಾರಂಭಿಸಿದರು. ಶ್ರೀ ರಾಮಯ್ಯನನ್ನು ಕೂಡ ಊಟ ಮಾಡು ಎಂದು ಸ್ವಾಮಿಯವರು ಎಷ್ಟೋ ಬಲವಂತ

ಮಾಡಿ ಹೇಳಿದರೂ ಅವರು ತಿನ್ನಲಿಲ್ಲ. ತಾನು ಊಟ ಮಾಡಿದರೆ, ಸ್ವಾಮಿಯವರಿಗೆ ಕಡಿಮೆ ಆಗುತ್ತದೆ ಎಂದು ಯೋಚಿಸಿದರು. "ಅಯ್ಯಾ ಇವಿ ವಟ್ಟಿ ಮೆತುಕುಲನುಕುನ್ನಾವಾ? ಮುಂದು ರೋಜುಲಲೋ ಕದಾ ತೆಲಿಸೇದಿ" (ಅಯ್ಯಾ ಇದು ಕೇವಲ ಅನ್ನದ ಅಗುಳು ಎಂದು ಭಾವಿಸುತ್ತಿದ್ದಿಯಾ? ಮುಂದೆ ಬರುವ ದಿನಗಳಲ್ಲಿ ಅಲ್ಲವೆ ಗೊತ್ತಾಗುವುದು) ಎಂದು ಹೇಳಿದರು ಸ್ವಾಮಿಯವರು. ಶ್ರೀ ರಾಮಯ್ಯನಿಗೆ ಒಂದು ಬೊಗಸೆ ಅನ್ನ ಕೊಟ್ಟು, "ಅಟ್ಲ ಪೋಯಿ ತಿನಿ, ಆ ಕುಮ್ಮರೋಳ್ಳಿಂಟ್ಲೋ ನೀಳ್ಳು ತ್ಯಾಗಿಪೋ" (ಆಕಡೆ ಹೋಗಿ ತಿಂದು, ಆ ಕುಂಬಾರರ ಮನೆಯಲ್ಲಿ ನೀರು ಕುಡಿದು ಹೋಗು) ಎಂದು ಸ್ವಾಮಿಯವರು ಹೇಳಿದರು. ರಾಮಯ್ಯ ಹಾಗೆಯೇ ಮಾಡಿದರು. ಎಷ್ಟೋ ವರ್ಷಗಳ ನಂತರವೂ, ಇಂದಿಗೂ ಸ್ವಾಮಿಯವರ ಸೇವೆಗೆ ಅಂಕಿತರಾಗಿ, ಸ್ವಾಮಿಯವರ ಸೇವಕರಿಗೆಲ್ಲರಿಗೂ ನಿರಂತರವಾಗಿ ಅನಿಕೇಪಲ್ಲಿಯಿಂದ ಭಿಕ್ಷಾನ್ನವನ್ನು ತಂದು ಕೊಡುತ್ತಿದ್ದಾರೆ. ಆ ದಿನ ಸ್ವಾಮಿಯವರು "ಮುಂದುರೋಜುಲಲೋ ಕದಯ್ಯಾ ತೆಲಿಸೇದಿ" (ಮುಂದೆ ಬರುವ ದಿನಗಳಲ್ಲಿ ಅಲ್ಲವೆ ಗೊತ್ತಾಗುವುದು) ಎಂದು ಆಶಿರ್ವಾದಿಸಿದ ಫಲಿತಾಂಶವಿರಬೊಹುದು.

ಕಲಿಚೇಡಿನ ನಿವಾಸಿ ಪೋಲಿರೆಡ್ಡಿಯವರು "ಕಲ್ಯಾಣರಾಂ ಮೈಕಾ ಗಣಿ" ಯಲ್ಲಿ ಸರ್ವೇಯರ್ ಪದವಿ ಹೊಂದಿದ್ದರು. ಅವರಿಗೆ ಕೋ-ಆಪರೇಟಿವ್ ಸೊಸೈಟೀಯಲ್ಲಿ ಸ್ವಲ್ಪ ತೊಂದರೆ ಉಂಟಾಯಿತು. ಅದೇ ಸಮಯದಲ್ಲಿ ಅವರು ಕೆಲಸ ಮಾಡುತ್ತಿದ್ದ ಗಣಿಯಲ್ಲಿ ಮೇನೇಜರ್ ಪದವಿ ಖಾಲಿ ಆಯಿತು. ಆದರೆ, ಸೊಸೈಟಿಯಲ್ಲಿ ಏನೋ ತೊಂದರೆ ಇದ್ದ ಕಾರಣದಿಂದ ಅವರು, ಗಣಿಯ ಮಾಲಿಕನಾದ ರಾಜಾರವರನ್ನು ತನಗೆ ಆ ಕೆಲಸವನ್ನು ಕೊಡಿ ಎಂದು ಕೇಳಿದರೂ ಪ್ರಯೋಜನ ಇರುವುದಿಲ್ಲ ಎಂದು ಕೇಳಲಿಲ್ಲ. ಸರ್ವಜ್ಞ ಮೂರ್ತಿಯಾದ ಸ್ವಾಮಿಯವರಿಗೆ ಆ ಸೊಸೈಟಿಯಲ್ಲಿ ನಡೆಯುತ್ತಿದ್ದ ಅವಾಂತರದ ಧರ್ಮಾಧರ್ಮಗಳು ಗೊತ್ತಿಲ್ಲದೇ ಇರುತ್ತದೆಯೇ? ಒಂದುದಿನ ಪೋಲಿರೆಡ್ಡಿಯವರು ಶ್ರೀ ಸ್ವಾಮಿಯವರನ್ನು ದರ್ಶಿಸಿ ನಮಸ್ಕರಿಸಿದರು. ಅವರು ತನ್ನ ವಿಷಯ ಏನೂ ಹೇಳದೇ, ಸ್ವಾಮಿಯವರು "ಅಯ್ಯೋ! ಈಯನ ಪಾತಾಳ ಲೋಕಾನಿಕಿ ಅಧಿಪತಿ ಕಾವಾಲಿ. ವಾಳ್ಳೆಂದುಕೋ ಅಡ್ಡುತಗುಲುತುನ್ನಾರು. ದೇವುಡು ಆಯನ್ನಿ ತೀಸೇಸ್ತಾಡು. ಈಯನಕೊಕ ಚೀಟೀ ವ್ರಾಸಿ ಇವ್ವಂಡಿ" (ಅಯ್ಯೋ! ಇವರು ಪಾತಾಳ ಲೋಕಕ್ಕೆ ಅಧಿಪತಿ ಆಗ ಬೇಕಾದವರು. ಅವರು ಏತಕ್ಕೋ ಅಡ್ಡಿ ಪಡಿಸುತ್ತಿದ್ದಾರೆ. ದೇವರು ಅಡ್ಡಿ ಹಾಕುವವರನ್ನು ತೆಗೆದು ಹಾಕುತ್ತಾರೆ. ಈತನಿಗೆ ಒಂದು ಚೀಟೀ ಬರೆದು ಕೊಡೀ) ಎಂದು ಹೇಳಿ ಒಂದು ಹಾಮಿ ಪತ್ರವನ್ನು ಬರೆಸಿ ಆಶಿರ್ವದಿಸಿ ಅವರಿಗೆ ಕೊಟ್ಟರು. ಪೋಲಿರೆಡ್ಡಿಯವರು ಯಾವ ಪ್ರಯತ್ನವೂ ಮಾಡದೇ ಇವರನ್ನೇ ಗಣಿಯ ವ್ಯವಸ್ಥಾಪಕರಾಗಿ(ಮ್ಯಾನೇಜರಾಗಿ) ನೇಮಿಸಲಾಯಿತು. ಅಂದಿನಿಂದ ರೆಡ್ಡಿಯವರಿಗೆ ಸ್ವಾಮಿಯವರಲ್ಲಿ ಅಪಾರವಾದ ಭಕ್ತಿ ಶ್ರದ್ಧೆ ಧೃಡವಾಗಿ, ಇಂದಿಗೂ ಪ್ರತಿ ತಿಂಗಳು 50 ರೂಪಾಯನ್ನು ಆಶ್ರಮಕ್ಕೆ ದಕ್ಷಿಣೆ ಕಳುಹಿಸುತ್ತಿದ್ದಾರೆ.

ಚೆರ್ಲೊಪಲ್ಲಿಯ ನಿವಾಸಿ, ಕೂಚಿ ಈಶ್ವರಮ್ಮನವರು ಅವರ ಅನುಭವವನ್ನು

ಹೀಗೆ ತಿಳಿಸಿದರು. ಒಂದು ರಾತ್ರಿ 9ಗಂಟೆ, ಎಲ್ಲರೂ ಮಲಗಿದ್ದರು. ಶ್ರೀ ಸ್ವಾಮಿಯವರು ಕುಳಿತುಕೊಂಡಿದ್ದರು. ಅವರ ಸಮೀಪದಲ್ಲಿ ರಮಣಯ್ಯನವರು ನಿದ್ರಾವಸ್ಥೆಯಲ್ಲಿದ್ದರು. ಶ್ರೀ ಸ್ವಾಮಿಯವರಿಗೋಸ್ಕರ ಹೆಸರು ಕಾಳಿನ ಉಸಲಿ ತಂದ ಈಶ್ವರಮ್ಮ ದೂರದಲ್ಲಿ ನಿಂತು ಕೊಂಡು "ಅಯ್ಯೋ! ಎಲ್ಲರೂ ನಿದ್ರೆ ಮಾಡುತ್ತಿದ್ದಾರೆ! ಈ ಉಸಲಿಗೆ ಉಪಯೋಗ ಪಡುವ ಯೋಗ ಇಲ್ಲದೇ ಹೋಯಿತಲ್ಲವೇ" ಎಂದು ಯೋಚಿಸುತ್ತಿದ್ದರು. ಆಗ, ಶ್ರೀ ಸ್ವಾಮಿಯವರು ತಮ್ಮ ಕೈ ಚಾಚಿ, "ನಾಕು ಪೆಸರ ಗುಗ್ಗಿಳ್ಳು ಪೆಟ್ಟು" (ನನಗೆ ಹೆಸರು ಕಾಳಿನ ಉಸಲಿ ಕೊಡು) ಎಂದು ರಮಣಯ್ಯನನ್ನು ಕೇಳುತ್ತಿದ್ದರು. ಇದು ರಾತ್ರಿಯ ಸಮಯ ಸ್ವಾಮಿ, ಬೆಳಗಾದಮೇಲೆ ತಯಾರು ಮಾಡಿಸಿ ಕೊಡುತ್ತೇವೆ ಎಂದು ರಮಣಯ್ಯನವರು ಹೇಳಿದರು. ಸ್ವಾಮಿಯವರು, "ನಾಕು ಇಪ್ಪುಡು ಕಾವಾಲಿ" (ನನಗೆ ಈಗ ಬೇಕು) ಎಂದು ಗಟ್ಟಿಯಾಗಿ ಕೇಳುತ್ತಿದ್ದರು. ಇವರ ಮಾತುಗಳನ್ನು ಕೇಳಿ ಈಶ್ವರಮ್ಮ ಬಹಳ ಸಂತೋಷದಿಂದ ಅವರು ತಂದಿದ್ದ ಉಸಲಿಯ ವಿಚಾರ ಹೇಳಿ ಸ್ವಾಮಿಯವರಿಗೆ ಸಮರ್ಪಿಸಿದರು.

ಕಲಿಚೇಡು ನಿವಾಸಿ ನರಸಾರೆಡ್ಡಿಯವರ ಪತ್ನಿ ಬಹಳ ಬಡವರು, ಅವರು ಸ್ವಾಮಿಯವರನ್ನು ಎಷ್ಟು ಪ್ರೀತಿಸುತ್ತಿದ್ದರೋ ಹೇಳಲು ಸಾಧ್ಯವಿಲ್ಲ. ಆಕೆ ಇದ್ದ ಪ್ರಾಂತದಲ್ಲಿ ಸ್ವಾಮಿಯವರು ಯಾವಾಗ ಬಂದರೂ ಇವರ ಮನೆಯ ಎದುರುಗಡೆ ಇದ್ದ ಮಸೀದಿಯ ಮುಂದೆ ಇದ್ದ ಬೇವಿನ ಮರದ ಕೆಳಗೆ ಬಿಡದಿ ಮಾಡುತ್ತಿದ್ದರು. ಈಶ್ವರಮ್ಮನವರು, ತನ್ನ ಮನೆಯಲ್ಲಿ 1 ಕಿಲೋ ಡಬ್ಬದ ತುಂಬಾ ಸಕ್ಕರೆ ಮುಚ್ಚಿಡುತ್ತಿದ್ದರು. ಯಾರನ್ನು ಮುಟ್ಟಲು ಬಿಡುತ್ತಿರಲಿಲ್ಲ. ಶ್ರೀ ಸ್ವಾಮಿಯವರು ಬರುತ್ತಿದ್ದಹಾಗೆ, ಬಿಸಿ ನೀರಿನಲ್ಲಿ ಸಕ್ಕರೆಯನ್ನು ಬೆರಸಿಕೊಡುತ್ತಿದ್ದರು. ಸ್ವಾಮಿಯವರು ಎಷ್ಟೋ ಪ್ರೀತಿಯಿಂದ ಸ್ವೀಕರಿಸುತ್ತಿದ್ದರು. ಸ್ವಾಮಿಯವರು ನಡೆಯುತ್ತಿದ್ದ ಕಾಲದಲ್ಲಿ ಆಗಾಗ ಇವರ ಮನೆಯಲ್ಲೇ ಬಂದಿದ್ದು, ಇವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದರು. ಕ್ರಮೇಣಾ ಸ್ವಾಮಿಯವರ ಅನುಯಾಯಿಗಳ ಸಂಖ್ಯ ಹೆಚ್ಚಳದಿಂದಾಗಿ ಆರ್ಥಿಕವಾಗಿ ಈಶ್ವರಮ್ಮನವರಿಗೆ ಹೊರೆಯಾಗಲು ಅವರು ಬಯಸಲಿಲ್ಲ, ಆದ್ದರಿಂದ ಸ್ವಾಮಿಯವರು ಈಶ್ವರಮ್ಮನವರ ಮನೆಗೆ ಅಪರೂಪವಾಗಿ ಬರಲು ಪ್ರಾರಂಭಿಸಿದರು.

ಒಂದು ದಿನ ಆಕೆ, ಅವರ ದಿನಚರಿಯಂತೆ, ಶ್ರೀ ಸ್ವಾಮಿಯವರ ಪಾದಮುಟ್ಟಿ ನಮಸ್ಕರಿಸಲು ಹೋದರು. ಆದರೆ, ಸ್ವಾಮಿಯವರ ಸೇವಕರು ಆಕೆಯನ್ನು ದೂರ ಇರು ಎಂದು ಜೋರಾಗಿ ಗದರಿಸಿದರು. ಆಕೆ ದೂರ ಕುಳಿತುಕೊಂಡು, "ಸ್ವಾಮೀ ನಿಮ್ಮ ದಿವ್ಯ ಸ್ಪರ್ಶದ ಭಾಗ್ಯ ಇಲ್ಲದೇ ನನ್ನನ್ನು ದೂರ ಇಡುತ್ತಿದ್ದೀರಾ?" ಎಂದು ಮನಸ್ಸಿನಲ್ಲೇ ದುಃಖ ಪಟ್ಟರು. ತಕ್ಷಣ ಸ್ವಾಮಿಯವರು "ಅಮ್ಮಾ ಕಾಲುಲೋ ಮುಲ್ಲುನ್ನದಿ, ತೀಸ್ತಾವಾ?" (ಅಮ್ಮಾ ಕಾಲಿನಲ್ಲಿ ಮುಳ್ಳಿದೆ, ತೆಗೆಯುತ್ತೀಯಾ?) ಎನ್ನುತ್ತಾ ಕಾಲು ಕೊಟ್ಟರು. ಆಕೆ, ಬಹಳ ಸಮಯ ಸ್ವಾಮಿಯವರ ಕಾಲಿನಲ್ಲಿ ಮುಳ್ಳನ್ನು ಹುಡುಕಿದರೂ ಮುಳ್ಳು ಕಾಣಲಿಲ್ಲ. "ಮುಳ್ಳು ಇಲ್ಲಾ ಸ್ವಾಮೀ" ಎಂದು ಹೇಳಿದಾಗ "ಲೇದಾ ಅಮ್ಮಾ! ಅಯಿತೇ ವದ್ದುಲೇ" (ಇಲ್ಲವಾ ಅಮ್ಮಾ! ಹಾಗಾದರೆ, ಬೇಡ ಬಿಡು) ಎಂದು ಸ್ವಾಮಿಯವರು ತಮ್ಮ ಕಾಲನ್ನು ತೆಗೆದರು.

ಡೋಲಿಯಲ್ಲಿ ತಿರುಗಾಡುವ ಶ್ರೀ ಸ್ವಾಮಿಯವರಿಗೆ ಕಾಲಿನಲ್ಲಿ ಮುಳ್ಳು ಹೇಗೆ ಚುಚ್ಚುತ್ತದೆ? ಅವರು "ಮುಳ್ಳು ತೆಗಿ" ಎಂದು ಹೇಳಿದ ಕಾರಣ ಆಗ ಎಲ್ಲರಿಗೂ ಅರ್ಥ ತಿಳಿಯಿತು. ಶ್ರೀ ಸ್ವಾಮಿಯವರು ತೀವ್ರವಾದ ಯೋಗಸ್ಥಿತಿಯಲ್ಲಿದ್ದಾಗ, ಎಲ್ಲರೂ ಸ್ವಾಮಿಯವರ ಸೇವೆ ಎಂಬ`ನೆಪದಲ್ಲಿ ಅವರನ್ನು ಮೂಟ್ಟಿದರೇ ಅವರಿಗೆ ತುಂಬಾ ಬಾಧೆ ಆಗುತ್ತದೆಯೆಂದು ಯಾರನ್ನು ಮುಟ್ಟಲು ಬಿಡಬಾರದೆಂದು ಸ್ವಾಮಿಯವರೇ ತಮ್ಮ ಸೇವಕರನ್ನು ಕಾವಲು ಇಟ್ಟಿದ್ದರು. ಆದರೆ, ಈಗ ಅವರ ಸೇವಕರ ಮಾತನ್ನು ಮೀರಿ, ಸ್ವಾಮಿಯವರೇ ತಮ್ಮ ಪಾದಕ್ಕೆ ನಮಸ್ಕಾರ ಮಾಡಲು ಅಡ್ಡಿಹಾಕಿದರೇ ಭಕ್ತರು ದುಃಖ ಪಡುತ್ತಾರೆಂದು, ಮುಳ್ಳು ತೆಗೆಯುವ ನೆಪಮಾಡಿ ಆಕೇಯ ಆಸೆಯನ್ನು ಪೂರೈಸಿದರು.

ತೂಪಿಲಿ ಪಿಚ್ಚಮ್ಮ ಸ್ವಾಮಿಯವರ ಬಟ್ಟೆಗಳನ್ನು ಒಗೆಯುತ್ತಾ, ಪ್ರತಿದಿನ ತನ್ನ ಎಮ್ಮೆಯ ಹಾಲನ್ನು ಸ್ವಾಮಿಯವರಿಗೆ ಸಮರ್ಪಿಸಿ ಸೇವೆ ಮಾಡುತ್ತಿದ್ದರು. ಆಕೆ, ಒಮ್ಮೆ ತನ್ನ ಮಕ್ಕಳ ಅನಾರೋಗ್ಯ, ಗಂಡನ ಕೋಳಿ ಪಂದ್ಯ ಮತ್ತು ಅವನ ಕುಡಿತದ ಚಟ ಮುಂತಾದ ಅನೇಕ ತೊಂದರೆಗಳಿಂದ ಬೇಸತ್ತು ಹೋಗಿದ್ದರು. ತುಳಸವ್ವನವರು, ಪಿಚ್ಚಮ್ಮನಿಗೆ ಅವರ ಹಳೆ ಮನೆಯನ್ನು ಬಿಟ್ಟು ಆಶ್ರಮದ ಪಕ್ಕದಲ್ಲೇ ಒಂದು "ಚಿಕ್ಕ ಗುಡಿಸಲು ಹಾಕಿಕೊಂಡು ಇರು" ಎಂದರು. ಆದರೆ ಆಶ್ರಮದ ಪಕ್ಕ ಇದ್ದ ಜಾಗ "ದೆವ್ವಗಳ ನಿವಾಸ, ಅಲ್ಲಿ ಇರಬೇಡಿ" ಎಂದು ವಾಸ್ತು ತಿಳಿದವರು ಸಲಹೆ ಕೊಟ್ಟರು. ಸ್ವಾಮಿಯವರನ್ನು ಕೇಳಿದರೆ, "ಗವರ್ನಮೆಂಟು ಡಬ್ಬುಲಿಸ್ತಾರು. ಇಲ್ಲು ವೇಸುಕುಂಟಾರು" (ಸರ್ಕಾರ ದುಡ್ಡು ಕೊಡುತ್ತದೆ. ಮನೆ ಕಟ್ಟಿಕೊಳ್ಳುತ್ತೀರ) ಎಂದು ಹೇಳಿದರು. ಆ ಜಾಗ ಒಳ್ಳೆಯದೋ ಅಲ್ಲವೋ ಹೇಳಲಿಲ್ಲ. ಸ್ವಲ್ಪ ಸಮಯದಮೇಲೆ ಗಾಳಿ ಮಳೆ ಸಹಾಯನಿಧಿ ಇಂದ ನಿಜವಾಗಲೂ ದಿಢೀರಾಗಿ ಸರ್ಕಾರಿ ಹಣವನ್ನು ಮಂಜೂರು ಮಾಡಿ ಹಣವನ್ನು ಸರ್ಕಾರ ಕೊಟ್ಟಿತು. ಆದ್ದರಿಂದಲೇ ಆ ದೆವ್ವಗಳ ಸ್ಥಳದಲ್ಲೇ ಒಂದು ಚಿಕ್ಕ ಗುಡಿಸಲು ಹಾಕಿದರು. ಪಿಚ್ಚಮ್ಮನವರು ಅವರ ಪರಿವಾರ ಸಮೇತ ಈ ಮನೆಯನ್ನು ಸೇರಿದರು. ಸ್ವಾಮಿಯವರು ಬಂದು ತನ್ನ ಮನೆ ಒಳಗೆ ಕಾಲಿಟ್ಟರೆ ಎಲ್ಲಾ ಪೀಡೆಗಳು ತೊಲಗಿ ಹೋಗುತ್ತವೆ ಎಂದು ಪಿಚ್ಚಮ್ಮನವರು ಆಸೆ ಪಟ್ಟರು. ಆದರೆ, ಸ್ವಾಮಿ ಇವರ ಮನೆಗೆ ಹೋದರೆ, ಇತರ ಭಕ್ತರು ಸ್ವಾಮಿಯವರು ತಮ್ಮ ಮನೆಗೂ ಬರಬೇಕೆಂದು ಗಲಾಟೆ ಮಾಡುತ್ತಾರೆಂದು ಸ್ವಾಮಿಯವರ ಕೆಲವು ಅನುಯಾಯಿಗಳು ಭಾವಿಸಿದರು. ಆದರೆ, 5 ನೆಯ ದಿನ ಸ್ವಾಮಿಯವರು "ನನ್ನು ಕೊತ್ತ ಇಂಟಿಕಿ ತೀಸುಕುಪೋಂಡಯ್ಯಾ!" (ನನ್ನ ಹೊಸ ಮನೆಗೆ ಕರೆದುಕೊಂಡು ಹೋಗಿರಯ್ಯಾ) ಎಂದು ಆತುರ ಪಡಿಸಿದರು. ಭಕ್ತರು ಶ್ರೀ ಆಂಜನೇಯ ಸ್ವಾಮಿ ಗುಡಿಗೆ ಕರೆದುಕೊಂಡು ಹೋದರು. ಆಗ ಸ್ವಾಮಿಯವರು "ಇಕ್ಕಡಿಕಿ ಕಾದು" (ಇಲ್ಲಲ್ಲ) ಎಂದು ದಕ್ಷಿಣ ದಿಕ್ಕಲ್ಲಿ ಪಿಚ್ಚಮ್ಮನವರ ಮನೆ ತೋರಿಸಿದರು. ಸೇವಕರು ಪಶ್ಚಿಮ ದಿಕ್ಕಲ್ಲಿದ್ದ ನೆರೆತೂಬು (floodgate) ಹತ್ತಿರ ಕರೆದುಕೊಂಡು ಹೋದರು. ಆಗ ಸ್ವಾಮಿಯವರು ಬಲವಂತವಾಗಿ ಎಲ್ಲರನ್ನೂ ದಕ್ಷಿಣ ದಿಕ್ಕಲ್ಲಿ ಕರೆದುಕೊಂಡು ಹೋಗಿ ಎಂದು ಗಲಾಟೆ ಮಾಡಿದರು. ಅಲ್ಲಿ ಹೋದ ತಕ್ಷಣ, "ಮನಮಿಚ್ಚಟ ಮೂಡು ರೋಜುಲುಂಡಾಲಯ್ಯಾ!" (ನಾವು ಇಲ್ಲಿ ಮೂರು ದಿನಗಳಿರಬೇಕಯ್ಯಾ) ಎಂದರು. ಆ ಸಮಯದಲ್ಲಿ ಪಿಚ್ಚಮ್ಮ

ಅಗಸರು ಬಟ್ಟೆ ಒಗಿಯುವ ಜಾಗದಲ್ಲಿ ಇದ್ದರು. ಸ್ವಲ್ಪ ಸಮಯದ ನಂತರ ಮನೆಗೆ ಬಂದಾಗ, ಸ್ವಾಮಿಯವರನ್ನು ನೋಡಿ, ತಾನು ನೋಡುತ್ತಿರುವುದು ಸ್ವಪ್ನವೋ ಅಥವ ಸತ್ಯವೋ ಎಂದು, ತನ್ನ ಆಸೆಯನ್ನು ತೀರಿಸಿದ ಸ್ವಾಮಿಯವರಿಗೆ ಹೇಗೆ ಉಪಚಾರಿಸಬೇಕೋ ಎಂದು ತೋಚದೇ ದಿಗ್ಭ್ರಾಂತಗೊಂಡು ನಿಂತುಬಿಟ್ಟರು. **ಭಗವಂತ ಭಕ್ತಿಗೆ ಬಂಧಿಯಲ್ಲವೇ?**

ಶ್ರೀ ಸ್ವಾಮಿಯವರು ಪೆನ್ನಬದ್ವೇಲ್ ಪ್ರದೇಶದಲ್ಲಿ ವಾಸಿಸುತ್ತಿದ್ದಾಗ ವಕ್ಕೆಮ್ಮನವರು ಸ್ವಾಮಿ ಮತ್ತು ಅವರ ಅನುಯಾಯಿಗಳಿಗೆ ಅಡಿಗೆ ಮಾಡುವುದಕ್ಕೆ ಬೇಕಾದ ಕಟ್ಟಿಗೆ ಮತ್ತು ಊಟದ ಎಲೆ ಜೋಡಿಸುತ್ತಾ ಒಂದು ಮರದ ಕೆಳಗೆ ಏಕಾಂತದಲ್ಲಿ ಕುಳಿತುಕೊಂಡು ಧ್ಯಾನ ಮಾಡುತ್ತಿದ್ದರು. ಇಂತಹ ಸಮಯದಲ್ಲಿ ಆಕೇಗೆ ಊಟ ತಿಂಡಿಗಳ ವಿಶಯವೇ ಮರೆತು ಬಿಡುತ್ತಿದ್ದರು. ಆಗ, ಪ್ರೇಮ ಮೂರ್ತಿಯಾದ ಸ್ವಾಮಿಯವರು, "ವಕ್ಕೆಮ್ಮ ಅನ್ನಂ ತಿನಮರಿಚಿ ಪೋಯಿಂದಯ್ಯಾ! ಆಮೆನು ಪಿಲಿಚಿ ಅನ್ನಂ ಪೆಟ್ಟಂಡಿ" (ವಕ್ಕೆಮ್ಮ ಆಹಾರವನ್ನು ತಿನ್ನಲು ಮರೆತುಬಿಟ್ಟಿದ್ದಾಳೇ, ಆಕೆಯನ್ನು ಕರೆದು ಊಟವನ್ನು ಕೊಡಿ) ಎಂದು ಸೇವಕರನ್ನು ಎಚ್ಚರಿಸುತ್ತಿದ್ದರು. 29

ವಕ್ಕೆಮ್ಮ ಆಗಾಗ ಬಂದು ಸ್ವಾಮಿಯವರ ದರ್ಶನ ಮಾಡಿ ಮನೆಗೆ ಹಿಂತಿರುಗುತ್ತಿದ್ದರು. ಒಮ್ಮೆ ಸ್ವಾಮಿಯವರು ವಕ್ಕೆಮ್ಮನಲ್ಲಿ ಕೆಲವು ಆಂತರಿಕ ಬದಲಾವಣೆಗಳನ್ನು ಹೇಗೆ ತಂದರೋ, ಅಂದಿನಿಂದ ವಕ್ಕೆಮ್ಮನವರಿಗೆ ಸ್ವಾಮಿಯವರನ್ನು ಬಿಟ್ಟು ಮನೆಗೆ ಹೋಗಲು ಸಾಧ್ಯವಾಗಲಿಲ್ಲ. ಆಕೆ ಬಂದು ನಮಸ್ಕರಿಸಿದಾಗ, **"ವಕ್ಕೆಮ್ಮ ಚಚ್ಚಿಪೋಯಿಂದನುಕುನ್ನಾನೇ" (ವಕ್ಕೆಮ್ಮ ಮರಣಿಸಿದಳು** ಎಂದು ಅಂದುಕೊಂಡನೇ) ಎಂದರು ಸ್ವಾಮಿಯವರು. ನಮ್ಮಲ್ಲಿರುವ ಆಶೆ, ವ್ಯಾಮೋಹಗಳು, ಬಂಧು ಪ್ರೀತಿ ಮುಂತಾದ ಚಾಪಲ್ಯಗಳನ್ನು, ಸ್ವಾಮಿಯವರು ತಮ್ಮ ಯೋಗ ಶಕ್ತಿಯಿಂದ ಶುದ್ದೀಕರಿಸುತ್ತಿದ್ದರು. ನಮ್ಮ ಆಧ್ಯಾತ್ಮಿಕ ಅಭಿವೃದ್ಧಿಯಲ್ಲಿ ಅವರಿಗಿದ್ದ ಶ್ರದ್ಧೆ, ಅವರ ಶಕ್ತಿ ಸಾಮರ್ಥ್ಯಗಳನ್ನು ನಾವು ಅರ್ಥ ಮಾಡಿಕೊಂಡು, ಅದಕ್ಕೆ ಅನುಗುಣವಾಗಿ ಸಾಧನೆ ಮಾಡುತ್ತೇವೆಂದು ಸ್ವಾಮಿಯವರು, ಅವರು ತಂದ ಬದಲಾವಣೆ ಯನ್ನು ಮೇಲೆ ಹೇಳಿದ ಮಾತಿನ ಮೂಲಕ, ನಮಗೆ ಅರಿವು ಮಾಡುತ್ತಿದ್ದರು. **ಇಲ್ಲಿಗಮನಿಸ ಬೇಕಾದ ಒಂದು ವಿಶಯ ಏನೆಂದರೆ "ಸಾವು/ಮರಣ" ಎಂದರೆ ದೈಹಿಕ ಮರಣ ಅಲ್ಲ. ಸಾವು ಎಂದರೆ ನಮ್ಮಲ್ಲಿರುವ ಅಹಂಕಾರ, ಆಸೆಗಳು, ದುರ್ಬುದ್ಧಿ ಇತ್ಯಾದಿಗಳ ನಾಶ ಆಗುವುದು ಎಂದು ನಾವು ಅರ್ಥ ಮಾಡಿಕೊಳ್ಳಬೇಕು.** 30

ಇದೇ ರೀತಿ, ನಿರಂತರ ಸ್ವಾಮಿ ಸೇವೇಯಲ್ಲಿ ನಿರತವಾಗಿರುತ್ತಿದ್ದ ಗುತ್ತಾ ನರಸಮ್ಮನಿಗೆ ಆಗಾಗ, ಮನೆಗೆ ಹೋಗಿ ಮನೆಯವರನೆಲ್ಲ ನೋಡಿ ಬರಬೇಕೆಂದು ಅನ್ನಿಸುತ್ತಿತ್ತು. ಸ್ವಾಮಿಯವರನ್ನು ಕೇಳಿದರೆ ಕಳುಹಿಸುತ್ತಿರಲಿಲ್ಲ. ಒಂದು ದಿನ "ನರಸಮ್ಮ ಚಚ್ಚಿಪೋಯಿಂದಿ" (ನರಸಮ್ಮ ಮರಣಿಸಿದ್ದಾಳೆ) ಎಂದು ಚೀಟೀ ಬರೆಯಿಸಿ ಅವರ ಆಶಿರ್ವಾದದ ಮುದ್ರೆಹಾಕಿಸಿ ನರಸಮ್ಮನಿಗೆ ಸ್ವಾಮಿಯವರು ಕೊಟ್ಟರು. ಆ ದಿನದಿಂದ ಆಕೆಗೆ ಮನೆಯ ಯೋಚನೆಯೇ ಬರಲಿಲ್ಲ.

ಒಮ್ಮೆ ಶ್ರೀ ಸ್ವಾಮಿಯವರ ಸೇವಕರೆಲ್ಲರೂ ಯಾವುದೋ ಕೆಲಸದ ಕಾರಣ ಹೊರಗಡೆ ಹೋಗಿದ್ದರು. ತುಳಸಮ್ಮ 'ನಾನು ಸ್ನಾನ ಮಾಡಿಲ್ಲ, ಸ್ವಾಮಿಯವರಿಗೆ ಗಂಜಿ ಕೊಡು' ಎಂದು ವಕ್ಕೆಮ್ಮನಿಗೆ ಹೇಳಿ ಕಳುಹಿಸಿದರು. ವಕ್ಕೆಮ್ಮ ಯಾವತ್ತೂ ಸ್ವಾಮಿಯವರಿಗೆ ಗಂಜಿ ಕೊಡುವ ಅಂತಹ ಸೇವೆ ಮಾಡಿರಲಿಲ್ಲ. ಅಲ್ಲದೇ, ತಾನು ಹರಿಜನ ಕುಲದಲ್ಲಿ ಹುಟ್ಟಿದ್ದರಿಂದ ತಾನು ಈ ಕೆಲಸಗಳಿಗೆ ಅರ್ಹಳೋ ಅಲ್ಲವೋ ಎನ್ನುವ ಸಂದೇಹದಿಂದ ಗಂಜಿ ತೆಗೆದುಕೊಂಡು ಸ್ವಾಮಿಯವರ ಹಿಂದೆ ನಿಂತಳು. ಸರ್ವಜ್ಞರಾದ ಸ್ವಾಮಿಯವರು "ರಾ ವಕ್ಕೆಮ್ಮಾ! ಭಯಮೆಂದುಕಮ್ಮಾ! ರಾ! ಜಾವ ರೇಕಲೋ ಪೋಯಿ" (ಬಾ ವಕ್ಕೆಮ್ಮಾ! ಭಯ ಏಕಮ್ಮಾ? ಬಾ ಬಟ್ಟಲಿನಲ್ಲಿ ಗಂಜಿ ಹಾಕು) ಎಂದು ಕರೆದರು. ಸತ್ಪುರುಷರ ಮೇಲೆ ಭಕ್ತಿ ಶ್ರದ್ಧೆ ಪವಿತ್ರವಾದ ನಡವಳಿಕೆ ಇಲ್ಲದಿರುವುದೇ ಕುಲಹೀನತೆ ಎಂದು ಸ್ವಾಮಿಯವರ ಭಾವನೆ.

ನಿಜವಾಗಿಯೂ ವಕ್ಕೆಮ್ಮನ ತತ್ವ ಬಹಳ ಸರಳ ತತ್ವ. ಒಮ್ಮೆ ಆಕೆ ನೆಲ್ಲೂರು ಬಸ್ ನಿಲ್ದಾಣದಲ್ಲಿ ನಿದ್ರಿಸುತ್ತಿರುವಾಗ ಒಬ್ಬ ಕಳ್ಳ ಆಕೆಯ ಬಲಕಿವಿಯ ಓಲೆ ತೆಗೆದುಕೊಳ್ಳುತ್ತಿದ್ದ. ಅದನ್ನು ಗಮನಿಸಿ ಕದಲದೆ, ಕಳ್ಳನಿಗೆ ತನ್ನ ಕಿವಿಯ ಓಲೆಯನ್ನು ತೆಗೆದುಕೊಳ್ಳಲು ಅವಕಾಶ ಮಾಡಿ ಕೊಟ್ಟಳು. ನಂತರ, ಪಕ್ಕಕ್ಕೆ ತಿರುಗಿ ಎಡ ಕಿವಿಯ ಓಲೆಯನ್ನೂ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಳು. ಬೆಳಗಾದ ಮೇಲೆ, ಆ ಓಲೆಗಳ ವಿಚಾರ ಆಶ್ರಮದವರು ಕೇಳಿದರೇ, "ನನಗಿಂತ ಬಡವ ಯಾರೋ ಓಲೆ ತೆಗೆದು ಕೊಂಡರೆ ಹೋಗಲಿ ಎಂದು ತೆಗೆದುಕೊಳ್ಳಲು ಬಿಟ್ಟೆ" ಎಂದು ಹೇಳಿದಳು.

ಗೋಪಾವರಂನಲ್ಲಿ ಕುರಿ ಹಿಂಡಿನ ಒಬ್ಬ ರೈತ ಇದ್ದ. ಒಂದು ನಾಯಿ, ಪ್ರತಿ ದಿನ ಹಿಂಡಿ ಇಂದ ಒಂದು ಕುರಿಯನ್ನು ಕೊಂದು ತಿನ್ನಲು ಪ್ರಾರಂಭಿಸಿತು. ಇದರಿಂದ ಆ ರೈತನ ಹೊಟ್ಟೆ ಉರಿದು ಒಂದು ಕತ್ತಿಯಿಂದ ನಾಯಿಯನ್ನು ಕೊಂದು ಬಿಟ್ಟನು. ಹಾಗೆ ಆದ ಮೇಲೆ ಅದೇನು ವಿಚಿತ್ರವೋ, ಇವನಿಗೆ ಹುಟ್ಟಿದ ಪ್ರತಿ ಒಂದು ಮಗು ನಾಯಿಯಂತೆ ಕಿರಿಚಿ ಸಾಯುತಿದ್ದವು. ಆ ರೈತ ತನ್ನ ದುಃಖವನ್ನು ಸ್ವಾಮಿಯವರಿಗೆ ಹೇಳಿಕೊಂಡನು. "ಪುಡುತಾಡು, ಪುಡುತಾಡು, ಪುಡುತಾಡು" (ಹುಟ್ಟುತ್ತಾನೆ, ಹುಟ್ಟುತ್ತಾನೆ, ಹುಟ್ಟುತ್ತಾನೆ) ಎಂದು ಮೂರು ಬಾರಿ ಸ್ವಾಮಿಯವರು ಹೇಳಿದರು. ಅವರ ಅಮೃತ ವಾಕ್ಯದಂತೆ ಮೂರು ಗಂಡು ಮಕ್ಕಳು ಹುಟ್ಟಿ ಜೀವಿಸುತ್ತಿದ್ದಾರೆ.

ಮಂದಲ ವೆಂಕಯ್ಯನವರಿಗೆ ಸ್ವಾಮಿಯವರ ಪರಿಚಯ ಇರಲಿಲ್ಲ. 1956 ರಲ್ಲಿ ಒಮ್ಮೆ ಬೆಳಗ್ಗೆ ಸ್ವಾಮಿಯವರು ಬೀದಿಯಲ್ಲಿ ವೆಂಕಯ್ಯನ ಎದುರಿಗೆ ಬಂದು, ತಮ್ಮ ಎರಡೂ ಕೈಗಳಿಂದ ತಮ್ಮ ತಲೆಯನ್ನು ಕೆರದುಕೊಳ್ಳುತ್ತಾ, ಹಿಂಜರಿಯುವ ಪದಗಳೊಂದಿಗೆ "ನೀಕೊಕ ಮಾಟ ಚೆಪ್ಪಾಲಿ, ಆನಕ (ತರ್ವಾತ) ಅಟುರಾ! ಊ ಆ" (ಸರೇನಾ) (ನಿನಗೊಂದು ಮಾತು ಹೇಳಬೇಕು, ಆಮೇಲೆ ಬಾ ಸರಿಯಾ?) ಎಂದು ಹೇಳಿ ಹೊರಟು ಹೋದರು. ಆ ಹಳ್ಳಿಯಲ್ಲಿ ಒಬ್ಬರು ತಮ್ಮ ಮನೆಗೆ ಸ್ವಾಮಿಯವರನ್ನು ಕರೆದುಕೊಂಡು ಹೋಗುತ್ತಿರುವಾಗ, ಅವರ ಹಿಂದೆ ವೆಂಕಯ್ಯನೂ ಹೋದರು. ಸ್ವಾಮಿಯವರು ಅವರೊಂದಿಗೆ ಒಂದು ಮಡಿಕೆ, ಕವಲು ಕೊಂಬೆ (a branch which had a

forked end), ಹಿಡಿದುಕೊಂಡು ಹೋಗುತ್ತಿದ್ದರು. ವೆಂಕಯ್ಯನೂ ಸ್ವಾಮಿಯ ಜೊತೆ ನಡೆಯುತ್ತಿದ್ದನು. ಸ್ವಾಮಿಯವರು ವೆಂಕಯ್ಯನ ಮನೆಗೆ ಬಂದು, ನಾಲ್ಕು ದಿಕ್ಕಿನಲ್ಲಿ ನೋಡಿ, "ಇಕ್ಕಡ ಮನಂ ಚೂಡ ವಲಸಿಂದೇಮಿಲೇದು. ಅನ್ನೀ ಬಾಗಾನೇ ವುನ್ನಾಯಿ. ತೆಲ್ಲ ಇಲ್ಲು ಕಡತಾಡು. ಇಂತ ವರಕೂ ತೆಲ್ಲ ಇಲ್ಲು ಕಡತಾರು" (ಇಲ್ಲಿ ನಾವು ನೋಡ ಬೇಕಾದುದ್ದೇನೂ ಇಲ್ಲ. ಎಲ್ಲಾ ಚೆನ್ನಾಗಿದೆ. ಬಿಳಿ ಮನೆ ಕಟ್ಟುತ್ತಾನೆ. ಇಲ್ಲಿಯ ವರೆಗೆ ಬಿಳಿಮನೆ ಕಟ್ಟುತ್ತಾರೆ) ಎಂದು ಕೈಯಲ್ಲಿ ನೆಲದ ಮೇಲೆ ಮಿತಿಗಳ ರೂಪ ರೇಖೆಯನ್ನು ಚಿತ್ರಿಸಿದರು. ಅವರು ಇರುತ್ತಿದ್ದ ಗುಡಿಸಲು ಒಳಗೆ ಹೋಗಿ, ಈಶಾನ್ಯ ದಿಕ್ಕಿನ ತೂಲೆಯ ಕೆಳಗೆ ಒಂದು ದೂಲದ (wooden beam) ಕೆಳಗೆ ಅವರು 9 ಇಂಚು ಅಗಲ ಮತ್ತು 9 ಇಂಚು ಆಳದ ಒಂದು ಗುಂಡಿಯನ್ನು ತೋಡಿ ಅದರ ಒಳಗೆ ಹಾಲು ತರಿಸಿ ಹಾಕಿದರು. ಸ್ವಾಮಿಯವರು ಹಾಕಿದ ಹಾಲು ಗುಂಡಿಯಿಂದ ಈಶಾನ್ಯ ದಿಕ್ಕಿಗೆ ಹರಿದು ಬಂತು. "ಅಂತೇಲೇ, ಇಂಕೇಮುಂದಿ? ಅಂತಾ ಬಾಗುಂದಿ" (ಅಷ್ಟೇ ಇನ್ನೇನಿದೆ? ಎಲ್ಲಾ ಚೆನ್ನಾಗಿದೆ) ಎಂದು ಹೇಳಿ ಹೊರಟು ಹೋದರು ಸ್ವಾಮಿಯವರು. ವೆಂಕಯ್ಯನ ಪ್ರಾರ್ಥನೆಯಮೇಲೆ ಆ ಮಧ್ಯಾಹ್ನ ಸ್ವಾಮಿಯವರು ಅವರ ಮನೆಯಲ್ಲೇ ಊಟಮಾಡಿದರು.

ಆಗಿನ ದಿನಗಳಲ್ಲಿ ವೆಂಕಯ್ಯನಿಗೆ ಮನೆ ಕಟ್ಟಲು ಶಕ್ತನಾಗಿರಲಿಲ್ಲ. ಆದರೆ, ಸ್ವಲ್ಪ ಸಮಯದ ನಂತರ ಸಿರಿ ಸಂಪತ್ತು ಕೂಡಿ ಬಂದು ಹೊಲ ಕೊಂಡಿದ್ದೂ ಅಲ್ಲದೇ ಸ್ವಾಮಿಯವರು ಹೇಳಿದಂತೆ ಒಂದು ತಾರಸಿ ಮನೆಯನ್ನೂ ಕಟ್ಟಿಕೊಂಡರು. ಆಶ್ಚರ್ಯದ ಮಾತೇನಂದರೆ, ವಾಸ್ತು ಹೇಳಿದವರು ಕೂಡ ಸ್ವಾಮಿಯವರು ತೋರಿಸಿದವರಗೇ ಮನೆಯ ಪ್ಲಾನ್ ತೀರ್ಮಾನಿಸಿ ಕೊಟ್ಟರು. "ಸ್ವಾಮಿಯವರ ಅನುಗ್ರಹದಿಂದಲೇ ನಾನು ಮನೆ ಕಟ್ಟಿ ಕೊಂಡವನಾದೆ" ಎಂದು ಸ್ವಾಮಿಯವರಿಗೆ ಕೃತಜ್ಞತೆಯನ್ನು ಹೇಳಿದರು.

ದೇವುಡಯ್ಯ (ಚಿಲಕ ಮಱ್ಱಿ ಯಲ್ಲಿ ವಾಸಿಸುತ್ತಿದ್ದನು) ಬಹಳ ಬಡವ, ಆದರೆ, ದೊಡ್ಡಭಕ್ತ ಮತ್ತು ತ್ಯಾಗಶಾಲಿ. ಸ್ವಾಮಿಯವರು ಅವರ ಹಳ್ಳಿಗೆ 5-6 ಬಾರಿ ಹೋದಾಗ ಎಲ್ಲ ಸ್ವಾಮಿಯವರಿಗೆ ಮತ್ತು ಅವರ ಅನುಯಾಯಿಗಳಿಗೆಲ್ಲರಿಗೂ ಅತ್ಯಂತ ಭಕ್ತಿ ಶ್ರದ್ಧೆಗಳಿಂದ ಆತಿಥ್ಯಮಾಡುತ್ತಿದ್ದರು. ಅವರ ಧರ್ಮ ಬುದ್ಧಿಯನ್ನು ನೋಡಿ ಸ್ವಾಮಿಯವರು ತುಂಬಾ ಸಂತೋಷ ಪಡುತ್ತಿದ್ದರು. ಇಂತಹ ಧರ್ಮವಂತರು, ಸಿರಿವಂತರಾಗುವುದರಿಂದ ಪ್ರಪಂಚಕ್ಕೇ ಬಹಳ ಪ್ರಯೋಜನ ಎಂದುಕೊಂಡರೋ ಏನೋ ಸ್ವಾಮಿಯವರು ದೇವುಡಯ್ಯನ ಮನೆಯಲ್ಲಿ ರಾಗಿ ಅಂಬಲಿ ಮಾಡಿಸಿ, ಹೊಸ ಮಡಿಕೆಯಲ್ಲಿ ಆ ಅಂಬಲಿ ತುಂಬಿಸಿ, ಮುಚ್ಚುಳ ಮುಚ್ಚಿ, ಆ ಮಡಿಕೆಯನ್ನು ಈಶಾನ್ಯ ದಿಕ್ಕಿನಲ್ಲಿ ಭೂಮಿಯಲ್ಲಿ ಒಂದು ಗಜ ಆಳವಾದ ಗುಂಡಿ ತೋಡಿಸಿ ಅದರಲ್ಲಿ ಹೂಡಿಸಿದರು. ಅಂದಿನಿಂದ ದೇವುಡಯ್ಯನವರು ಸಿರಿ ಸಂಪತ್ತುಗಳಿಂದ ತುಂಬಿ, ದಾನ ಧರ್ಮಗಳನ್ನು ಮಾಡುತ್ತಾ, ಪ್ರಶಸ್ತಿ ಪಡೆದು ಉನ್ನತ ಸ್ಥಿತಿ ಹೊಂದಿದರು.

ನೆಲ್ಲೂರಿನಲ್ಲಿ ವಾಸಿಸುತ್ತಿದ್ದ ತಿರುಪತಿ ಜಾನಕಿ ರಾಮಯ್ಯನವರ ಮಗಳು ರಮಣಮ್ಮ ಶ್ರೀ ಸ್ವಾಮಿಯವರ ವಿಷಯ ತಿಳಿದು ಅವರನ್ನು ದರ್ಶಿಸಲು ತುಂಬ ತಾಪತ್ರಯ ಪಡುತ್ತಿದ್ದಳು. ಆದರೆ ಅವಳಿಗೆ ಸ್ವಾಮಿಯವರನ್ನು ದರ್ಶನ ಮಾಡುವ

ಭಗ್ಯವಾಗಲಿಲ್ಲ. ಒಮ್ಮೆ ಸ್ವಾಮಿಯವರು ನೆಲ್ಲೂರಿನಲ್ಲಿ ಸರ್ಕಾರಿ ಆಸ್ಪತ್ರೆಯ ಎದುರಿಗೆ (ಈಗ ಧರ್ಮ ಛತ್ರ ಇರುವ ಪ್ರದೇಶದಲ್ಲಿ) ಬಿಡಿದಿ ಮಾಡಿದ್ದರು. ಆ ದಿನಗಳಲ್ಲಿ ಆ ಪ್ರಾಂತವೆಲ್ಲಾ ಕಗ್ಗಾಡು, ಇನ್ನೂ ಭವನಗಳನ್ನು ಕಟ್ಟಿರಲಿಲ್ಲ.

ಸ್ವಾಮಿಯವರ ದರ್ಶನಕ್ಕಾಗಿ ಹೋಗುತ್ತಿದ್ದ ಕೆಲವು ಸ್ನೇಹಿತರು ರಮಣಮ್ಮನನ್ನು ಕೂಡ ಕರೆದರು. ಅವಳು ಆ ಹೊತ್ತಿಗೆ ಊಟ ಮಾಡಿರಲಿಲ್ಲ, ಆಗ ಮಧ್ಯಾಹ್ನ ಒಂದು ಘಂಟೆ, ತಕ್ಷಣ ಹೊರಟಳು. 'ನಾವೆಲ್ಲರೂ ಊಟ ಮಾಡಿದ್ದೇವೆ, ನೀನು ಊಟ ಮಾಡಿ ಬಂದಿದ್ದರೆ ಚೆನ್ನಾಗಿತ್ತು, ಬಹಳ ಹೊತ್ತಾಗುತ್ತದೆ ಎಂದರು ಸ್ನೇಹಿತರು. 'ಸ್ವಾಮಿ ನನಗೆ ಊಟ ಕೊಡುವುದಿಲ್ಲವೇ?' ಎಂದು ಖಚ್ಚಿತವಾಗಿ ಕೇಳಿದಳು.' ಸ್ವಾಮಿ ಮತ್ತು ಅವರ ಅನುಯಾಯಿಗಳು ಮಧ್ಯಾಹ್ನ 12 ಘಂಟೆಗೇ ಊಟ ಮಾಡಿರುತ್ತಾರೆ, ಈಗ ಎಲ್ಲಿಂದ ಬರತ್ತದೆ ಅನ್ನ?' ಎಂದು ಕೇಳಿದರು ಅವಳ ಸ್ನೇಹಿತರು. ಸ್ವಾಮಿಯವರು ಬೆರೆ ಜಾಗಕ್ಕೆ ಹೋಗ ಬೇಕಾಗಿತ್ತು, ಅವರ ಅನುಯಾಯಿಗಳು ಊಟ ಮಾಡಿದ ಮೇಲೆ ಸ್ವಾಮಿಯವರನ್ನು ಹೊರಡಿ ಎಂದು ಹೇಳಿದರು. ಆಗ, ಸ್ವಾಮಿಯವರು ಕಿಸಿ ಕಿಸಿ ನಕ್ಕಿ "ಬಿಡ್ಡಲು ರಾವದ್ದಯ್ಯಾ? ಬಿಡ್ಡಲು ಇಕ್ಕಡುಂಟೇ ಮನಂ ಪೋತೇ ಎಟ್ಲಾ?" (ಮಕ್ಕಳು ಬರಬೇಕಲ್ಲವೇ? ಮಕ್ಕಳು ಇಲ್ಲಿಗೆ ಬಂದಾಗ ನಾವು ಹೋದರೇ ಹೇಗೆ?) ಎಂದು ಕೇಳಿದರು. ಅಷ್ಟರಲ್ಲೇ ರಮಣಮ್ಮ ಮತ್ತು ಅವಳ ಸ್ನೇಹಿತರು ಬಂದರು. ಎಲ್ಲರಿಗೂ ತಮ್ಮ ಆಶಿರ್ವಾದದ ಪತ್ರವನ್ನು ಬರಿಸಿ ಕೊಟ್ಟು, ರಮಣಮ್ಮನಿಗೆ ಮಾತ್ರ "ಈಮೇ ಮನಂ ಬುವ್ವ ಪೆಡತಾಮನಿ ವಚ್ಚಿಂದಯ್ಯಾ! ಬುವ್ವ ಪೆಟ್ಟಂಡಿ" (ಈಕೆ ನಾವು ಊಟ ಕೊಡುತ್ತೇವೆಂದು ಬಂದಿದ್ದಾಳೆ, ಇವಳಿಗೆ ಅನ್ನ ಬಡಿಸಿ) ಎಂದರು. ' ಅನ್ನ ಆಗಿ ಹೋಗಿದೆ ಸ್ವಾಮಿ' ಎಂದಾಗ, "ಅಯ್ಯೋ! ಅನ್ನಂ ವುಂಡ್ಲಾ? ಅನ್ನಂ ವಂಡಿನ ಪಾತ್ರಲೋ ಚೂಡಂಡಯ್ಯಾ?" (ಅಯ್ಯೋ! ಅನ್ನ ಇಲ್ಲವೇ? ಅನ್ನ ಮಾಡಿದ ಪಾತ್ರೆಯಲ್ಲಿ ನೋಡಿರಪ್ಪಾ) ಎಂದರು. ಆ ದಿನ ನಿಜಕ್ಕೂ ಅನ್ನ ಮಾಡಿದ ಪಾತ್ರೆಯನ್ನು ತೊಳಿಯದೇ ಹಾಗೇ ಇಟ್ಟಿದ್ದರು. ಸ್ವಾಮಿಯವರು ಹೇಳಿದರೆಂದು ಪಾತ್ರೆ ಬಳಿದು ನೋದಿದರೇ ಇಬ್ಬರಿಗಾಗುವಷ್ಟು ಅನ್ನ ಇತ್ತು. ಅದನ್ನ ರಮಣಮ್ಮ ತೃಪ್ತಿಯಿಂದ ಊಟಮಾಡಿದಳು. ಅವಳ ಸ್ನೇಹಿತರು ಕೂಡಾ ಪ್ರಸಾದ ಎಂದು ಸ್ವೀಕರಿಸಿದರು. "ಈಮೆ ಸಾಮಾನ್ಯಮ್ಮೈನದಿ ಕಾದು. ಪದೋ ಚೂಪು ಮನಿಷಿ" (ಅವಳು ಸಾಮಾನ್ಯ ವ್ಯಕ್ತಿ ಅಲ್ಲ ಅವಳು 10 ನೇ ಒಳನೋಟ (Insight) ಹೊಂದಿರುವ ವ್ಯಕ್ತಿ) ಎಂದು ಸ್ವಾಮಿಯವರು ಹಾಮಿ ಪತ್ರವನ್ನು ಬರೆಸಿಕೊಟ್ಟರು.

"ವಕ್ಕೆಮ್ಮ 99 ವಾಕಿಳ್ಳು ಎಕ್ಕಾಲಿ" (ವಕ್ಕೆಮ್ಮ 99 ಬಾಗಿಲುಗಳು ಹತ್ತಬೇಕು)** ಎಂದು ಸ್ವಾಮಿಯವರು ಒಮ್ಮೆ ಒಂದು ಪತ್ರವನ್ನು ಬರೆಸಿದರು. ಆ ಮಾತು ಕೇಳಿ ವಕ್ಕೆಮ್ಮ ತಡಿಯಲಾರದಷ್ಟು ದುಃಖದಿಂದ ಅಳುತ್ತಾ ಸ್ವಾಮಿಯವರ ಕಾಲಿಗೆ ಬಿದ್ದು 'ಸ್ವಾಮಿ ನಿಮಗೆ ಇಷ್ಟ ಇಲ್ಲದಿದ್ದರೆ, ನನ್ನನು ಕಾಡಿನಲ್ಲಿ ಯಾವದಾದರು ಮರವಾಗಿ ಹುಟ್ಟಿಸಿ. ಆದರೇ ಮತ್ತೆ ಮನುಷ್ಯನ ಜನ್ಮ ಬೇಡ' ಎಂದು ಎರಡು ಘಂಟೆಯ ಕಾಲ ಅವರ ಪಾದಗಳಿಗೆ ತನ್ನ ಕಣ್ಣೀರಿನಿಂದ ಅಭಿಷೆಕ ಮಾಡಿದರು. ಆಗ ಆ ಕರುಣಾಮೂರ್ತಿ, "ಆಮೆ ಇಕ ವಚ್ಚೇದಿ ಲೇದನಿ ದೇವುನಿಪೈ ಆನಪೆಟ್ಟಿ ವ್ಯಾಸಿವ್ವಯ್ಯಾ!" (ಆಕೆ ಇನ್ನು ಬರುವುದು (ಹುಟ್ಟುವುದು)

ಇಲ್ಲ ಎಂದು ದೇವರ ಮೇಲೆ ಆಣೆಮಾಡಿ ಬರೆದು ಕೊಡೀ) ಎಂದು ಒಂದು ಹಾಮೀ ಪತ್ರವನ್ನು ಬರೆಸಿದರು.

** ಸ್ವಾಮಿಯವರ ಮಾತಿನಲ್ಲಿ ನಾವು ತಿಳಿಯಬೇಕಾದ ಒಂದು ವಿಷಯವಿದೆ. ಮೇಲೆ 99 ಬಾಗಿಲುಗಳು ಎಂದರೆ 99 ಜೀವಿತಾವಧಿಯನ್ನು (lifetimes) ಸ್ವಾಮಿಯವರು ಸೂಚಿಸುತ್ತದ್ದಾರೆ ಎಂಬುದನ್ನು ಗಮನಿಸಬೇಕು.**

ತಲಪೂರು ನಿವಾಸಿ ವಿ. ಸುಂದರ ರಾಮಿರೆಡ್ಡಿಯವರು ಹೀಗೆ ಹೇಳಿದರು. 1977 ರಲ್ಲಿ, ಸ್ವಾಮಿಯವರ ಅನುಯಾಯಿಗಳು ಇರುವುದಕ್ಕೆ ಶ್ರೀ ಎಸ್.ವಿ.ಕೆ ರೆಡ್ಡಿಯವರ "ಪದ್ಮಾವತಿ" ಗಣಿಯಲ್ಲಿ 30 ಅಂಕಣದ (Columns) ವಿಶಾಲವಾದ ದೊಡ್ಡ ಗುಡಿಸಲು ವ್ಯವಸ್ಥೆಮಾಡಿದ್ದೆ. ಒಂದು ದಿನ ಬೆಳಗ್ಗೆ ಎದ್ದ ಕೂಡಲೆ, ಸ್ವಾಮಿಯವರು 'ಇಕ ಇಕ್ಕಡ ಕ್ಷಣಂ ಉಂಡಕೂಡದು. ವೆಂಟನೇ ಮರೊಕ ಚೋಟುಕು ವೆಳ್ಳಿಪೋವಾಲನಿ" (ಇನ್ನು ಇಲ್ಲಿ ಕ್ಷಣ ಕೂಡ ಇರಬಾರದು. ತಕ್ಷಣವೇ ಬೇರೇ ಜಾಗಕ್ಕೆ ಹೋಗಬೇಕು) ಎಂದು ಆತುರ ಪಡಿಸುತ್ತಿದ್ದರು. ಸ್ವಾಮಿಯವರ ಸೇವಕರು ಹೇಗಾದರೂ ಮಾಡಿ ಸ್ವಾಮಿಯವರನ್ನು ಮಧ್ಯಾಹ್ನ ಎರಡು ಗಂಟೆಯವರಗೆ ಅಲ್ಲಿಂದ ಹೋಗಲು ಬಿಡಲಿಲ್ಲ. ಸ್ವಾಮಿಯವರು ಬೇರೆ ಜಾಗಕ್ಕೆ ಹೋಗ ಬೇಕೆಂದು ಆತುರ ಪಡಿಸುತ್ತಿದ್ದರು, ಇಲ್ಲದಿದ್ದರೆ ತೊಂದರೆಯಾಗುತ್ತದೆ ಎಂದು ಹೇಳುತ್ತಿದ್ದರು. ಅಷ್ಟರಲ್ಲೇ ಆ ಗುಡಿಸಲು ಪೂರ್ತಿ ಬೆಂಕಿ ಹತ್ತು ಕೊಂಡಿತು. ಸ್ವಾಮಿಯವರನ್ನು ದೂರ ಕೂರಿಸಿದರು. ಸ್ವಾಮಿಯವರು ಆ ಬೆಂಕಿಯನ್ನು ತೋರಿಸುತ್ತಾ "ಅಂತಾ ಬಂಗಾರಂ ಕುರುಕುಲಯ್ಯಾ ಚೂಡಂಡಿ. ಅಂತಾ ಬಂಗಾರಮೇ" (ಎಲ್ಲಾ ಚಿನ್ನದ ರಾಶಿಗಳು ನೋಡಿರಯ್ಯಾ! ಎಲ್ಲಾ ಬಂಗಾರವೇ) ಎಂದು ಕೂಗಿ ಹೇಳುತ್ತಿದ್ದರು. "ತಗಲಬಡಿನಂದುಕಾಯನೇಮೀ ಬಾಧ ಪಡವದ್ದನಿ ಚೆಪ್ಪು. ಆಯನಕು 20 ಕೋಟ್ಲು ಆದಾಯಂ ವಸ್ತುಂದಿ" (ಬೆಂಕಿ ಹತ್ತಿದರಿಂದ ಏನೂ ಬೇಸರಿಸುವುದು ಬೇಡ ಎಂದು ಹೇಳು. ಅವರಿಗೆ 20 ಕೋಟಿ ಆದಾಯ ಬರುತ್ತದೆ) ಎಂದು ಒಂದು ಹಾಮಿ ಪತ್ರ ಬರೆಯಿಸಿ ನನ್ನ ಕೈಲಿ ಕಳುಹಿಸಿದರು. ಸ್ವಲ್ಪ ಕಾಲದಲ್ಲೇ ಶ್ರೀ ಯಸ್.ವಿ.ಕೆ. ರೆಡ್ಡಿಯವರಿಗೆ ಊಹಿಸದ ರೀತಿಯಲ್ಲಿ ಬಹಳ ಆರ್ಥಿಕ ಅಭಿವೃದ್ಧಿ ಆಗಿ ಸ್ವಾಮಿಯವರು ಹೇಳಿದಂತೆಯೇ ಲಾಭ ಆಯಿತು. ಇದೆಲ್ಲಾ ಸ್ವಾಮಿಯವರ ಆಶೀರ್ವಾದದ ಫಲಿತಾವೇ.

ಸ್ವಾಮಿಯವರು ಒಂದು ಬಾರಿ ವಿ.ಸುಂದರ ರಾಮಿರೆಡ್ಡಿಯವರ ತೋಟದಲ್ಲಿ ಬಿಡದಿ ಮಾಡಿದ್ದರು. ಅಲ್ಲಿದ್ದ ಒಣಗಿದ ಎಲೆಗಳು, ತುಕ್ಕು ಹಿಡಿದ ಕಸವನ್ನು ಸ್ವಾಮಿಯವರು ಅಗ್ನಿ ಕುಂಡದಲ್ಲಿ ಹಾಕಿದರು. ಆ ತುಕ್ಕಿನಮಧ್ಯ ಡೈನಮೈಟ್ ನಲ್ಲಿ ಉಪಯೋಗಿಸುವ ಕೇಪು ಇತ್ತು. ಆ ಕೇಪು ಅಗ್ನಿ ಕುಂಡದಲ್ಲಿ ಬಿದ್ದ ತಕ್ಷಣ, ದೊಡ್ಡ ಶಬ್ದ ಬಂದು ಸಿಡಿಯಿತು. ಅಲ್ಲಿದ್ದವರೆಲ್ಲಾ ಆ ಸದ್ದು ಕೇಳಿ ಭಯ ಭ್ರಾಂತರಾಗಿ ಚೆಲ್ಲಾ ಪಿಲ್ಲಿಯಾಗಿ ಓಡಿದರು. ಆದರೆ ಸ್ವಾಮಿಯವರು ಮಾತ್ರ ಒಂದು ಅಂಗುಲ ಕೂಡ ಚಲಿಸಲಿಲ್ಲ, ಅವರ ಮುಖದಲ್ಲಿ ಭಯದ ಚಿಹ್ನವೂ ಇರಲಿಲ್ಲ. ಅಲ್ಲಿ ಇದ್ದವರೆಲ್ಲಾ ಸ್ವಾಮಿಯವರ ಸ್ಥಿತಿಯನ್ನು ನೋಡಿ ಆಶ್ಚರ್ಯಚಕಿತರಾದರೇ ಹೊರತು, ಆದರೆ ಅವರ ವಾಸ್ತವವನ್ನು ಯಾರಾದರೂ ಅರಿತು ಕೊಂಡಿದ್ದಾರೆಯೇ?

ಅವಧೂತ ಲೀಲ

ಅಧ್ಯಾಯ - 10

ಪತಿತಪಾವನರು

ಪರಮ ದಯಾನಿಧಿಯಾದ ಪರಮಾತ್ಮ ದೀನಜನರ ಉದ್ಧಾರಕ್ಕಾಗಿ ಈ ಸೃಷ್ಟಿ ಇರುವ ವರೆಗೆ ಮಹನೀಯರ ರೂಪದಲ್ಲಿ ಅವತರಿಸುತ್ತಿರುತ್ತಾರೆಂದು ದತ್ತ ಮಹಿಮೆ ಹೇಳುತ್ತದೆ. ಈ ಮಹನೀಯರ ಕೃಪೆ ಎಷ್ಟು ಅಪಾರವೋ, ಅಮೋಘವೋ, ಆಯಾ ಮಹನೀಯರ ಚರಿತ್ರೆಯಲ್ಲಿ ಕಾಣ ಬಹುದು. ಇಂತಹ ಅವ್ಯಾಜವಾದ ಇವರ ಕೃಪೆ, ಆಪತ್ತಿನಲ್ಲಿ ರಕ್ಷಿಸುವುದು, ಗುಣಪಡಿಸಲಾಗದ
ರೋಗಗಳನ್ನು ಗುಣಪಡಿಸುವುದಲ್ಲದೆ, ಪತಿತರನ್ನು ಪಾವನಮಾಡುವುದೇ ಒಂದು ಅದ್ಭುತ ಲೀಲೆ. ನಾರದ ಮಹರ್ಷಿಗಳ ದರ್ಶನ ಮಾತ್ರದಿಂದ ಕ್ರೂರ ವಾಲ್ಮೀಕಿ ಹೇಗೆ ಮಹರ್ಷಿಯಾಗಿ ಬದಲಾದರೋ ಹಾಗೆ ನಮ್ಮ ಸ್ವಾಮಿಯವರು ಅನೇಕ ದುಷ್ಟರನ್ನು, ಕುಡುಕರನ್ನು ಸಜ್ಜನರನ್ನಾಗಿ ಮಾಡಿದ ಸನ್ನಿವೇಶಗಳಲ್ಲಿ ಕೆಲವನ್ನು ಮಾತ್ರ ನಾನು ಇಲ್ಲಿ ಪ್ರಸ್ತುತ ಪಡಿಸಿದ್ದೇನೆ.

ಸಹವಾಸ ದೋಷದಿಂದಾಗಲಿ, ಅಂತ್ಯ ಇಲ್ಲದ ಸಮಸ್ಯಗಳಿಂದಾಗಲಿ, ಮನಸ್ಸಿನ ಶಾಂತಿ ಕಳೆದುಕೊಂಡ ಕೆಲವರು ಕುಡಿತ, ಜೂಜಾಟ ಮತ್ತು ಇತರ ದುಶ್ಚಟಗಳ ಮೇಲೆ ಅವಲಂಬಿತರಾಗಲು ಪ್ರಾರಂಭಿಸಿ, ತಮ್ಮ ಮತ್ತು ತಮ್ಮವರನ್ನು ಅಶಾಂತಿಯಲ್ಲಿ ಮುಳಿಗಿಸುತ್ತಾರೆ. ಅಂತಹ ವ್ಯಕ್ತಿಗಳು ತಮ್ಮ ಬಲಹೀನತೆ ಇಂದ ಹೊರಕ್ಕೆ ಬರಬೇಕೆಂದು ಹೃದಯ ಪೂರ್ವಕವಾಗಿ ಬಯಸುದಿದ್ದರೆ, ಅವರು ಎಂದಿಗೂ ಬದಲಾಗುವುದಿಲ್ಲ. ಅಂತಹವರನ್ನು ಸ್ವಾಮಿಯಂತಹ ಮಹನೀಯರು ಮಾತ್ರ ಕಾಪಾಡ ಬಲ್ಲರು. ಸರ್ವ ಪ್ರೇರಣಾಧಿಕಾರಿ, ಸರ್ವ ಭೂತ ಹೃದಯಾಂತರ್ವರ್ತಿಯಾಗಿ ಇರುವ ಸದ್ಗುರುವಿಗೆ ಅಸಾಧ್ಯವಾದ ಕಾರ್ಯ ಯಾವುದು?

ಗೊಲಗಮೂಡಿ ಆಶ್ರಮದ ಬಳಿ ಒಂದು ದೊಡ್ಡ ಮರದಲ್ಲಿ ಒಂದು ಕೊಕ್ಕರೆ ಗೂಡು ಕಟ್ಟಿ ಅದರ ಮರಿಗಳ ಜೊತೆ ಆ ಗೂಡಲ್ಲಿ ಇತ್ತು. ಒಮ್ಮೆ ಆ ಕೊಕ್ಕರೆಯನ್ನು ಕೊಲ್ಲ ಬೇಕೆಂದು ಒಬ್ಬ ಹಾವಾಡಿಗ ತನ್ನ ಬಿಲ್ಲನ್ನು ಸಿದ್ಧಪಡಿಸಿಕೊಂಡನು. ಅದನ್ನು ನೋಡಿ ಆಶ್ರಮವಾಸಿಗಳು ಅವನಿಗೆ ಬುದ್ದಿ ಹೇಳಿದರು. ಎಷ್ಟು ಹೇಳಿದರೂ ಅವರ ಮಾತು ಕೇಳದೆ, ಅವರ ಕಣ್ಣು ಮರೆಸಿ ತನ್ನ ಬಾಣವನ್ನು ಗುರಿ ಇಟ್ಟ. ಕೊನೆಗೆ ಭಕ್ತರು, ಸ್ವಾಮಿಯವರಿಗೆ ಈ

ವಿಷಯವನ್ನು ಹೇಳಿದರು. ಆಗ ಸ್ವಾಮಿಯವರು "ಅದಿ ತಗಲದಯ್ಯಾ" (ಅದು ತಾಕುವುದಿಲ್ಲಯ್ಯಾ) ಎಂದರು. ಸ್ವಾಮಿಯವರು ಹೇಳಿದ ಹಾಗೆ, ಬಾಣ ಅದಕ್ಕೆ ತಾಕಲಿಲ್ಲ. ಆ ಬಾಣದ ಗುರಿ ತಪ್ಪಿ, ಕೊಕ್ಕರೆ ಹಾರಿ ಹೋಯಿತು. ಯಾವತ್ತೂ ಗುರಿ ತಪ್ಪದ ಆ ಹಾವಾಡಿಗ ಏನು ಯೋಚಿಸಿದನೋ ಅವನ ಬಿಲ್ಲನ್ನು ಮುರಿದು ಹಾಕಿ ಬಿಟ್ಟು ಮತ್ತೆ ಎಂದಿಗೂ ಆ ಬಿಲ್ಲನ್ನು ಮುಟ್ಟಲಿಲ್ಲ. ಸ್ವಾಮಿಯವರು ಕೊಕ್ಕರೆಯ ರಕ್ಷಣೆ ಮಾಡಿದ್ದಲ್ಲದೇ, ಅದನ್ನ ಕೊಲ್ಲುವ ಪ್ರಯತ್ನ ಮಾಡಿದ ಬೇಟೆಗಾರನನ್ನೂ ಆ ಪಾಪದ ಕೆಲಸ ಮಾಡುವುದನ್ನು ನಿಲ್ಲಿಸಿ ಅವನನ್ನು ರಕ್ಷಿಸಿದರು ಎಂಬುದು ನಾವು ಗುಗುರುತಿಸಬೇಕು.

ತುಂಬಾ ಕುಡಿಯುತ್ತಿದ್ದ ಬೇತು ಜಯರಾಮಯ್ಯ 1978 ರಲ್ಲಿ ಸ್ವಾಮಿಯ ದರ್ಶನಕ್ಕಾಗಿ ಬಂದು ತನ್ನನ್ನು ಸದಾ ನಶೆಯಲ್ಲಿಡುವಂತೆ ಬೇಡಿಕೊಂಡ. ಅಲ್ಲಿದ್ದ ಸೇವಕರು ಎಷ್ಟು ಹೇಳಿದರೂ, ಅವನು ಸ್ವಾಮಿಯ ಕಾಲನ್ನು ಬಿಡಲಿಲ್ಲ. ಕೊನೆಗೆ ಸ್ವಾಮಿಯವರು "ಅಟ್ಲಾಗೇ ಪೋಯ್ಯಾ!" (ಹಾಗೆ ಆಗುತ್ತೇ, ಹೋಗಯ್ಯಾ) ಎಂದರು. ಅವತ್ತಿನಿಂದ ಆತನ ವ್ಯಕ್ತಿತ್ವ ಬದಲಾಯಿಸಿತು. ಕುಡಿತ ಪೂರ್ತಿಯಾಗಿ ಬಿಟ್ಟು ಬಿಟ್ಟನು. ಯಾರೊಂದಿಗೂ ಮಾತನಾಡದೇ ಮೌನವಾಗಿ ಸಮಯ ಕಳಿಯುತ್ತಿದ್ದನು.

ಗೊಲಗಮೂಡಿಯಲ್ಲಿ ವಾಸಿಸುತ್ತಿದ್ದ ತೂಪಿಲಿ ವೆಂಕಯ್ಯ ಕುಡಿತ, ಕೋಳಿ ಪಂದ್ಯ ಮುಂತಾದ ವ್ಯಸನಗಳಿಂದ ತನ್ನ ಮನೆ ಹಾಳು ಮಾಡುತ್ತಿದ. ಅವನ ಪತ್ನಿ ಪಿಚ್ಚಮ್ಮನಿಗೆ ಸ್ವಾಮಿಯ ಮೇಲೆ ತುಂಬ ಭಕ್ತಿ ಮತ್ತು ಶ್ರದ್ಧೆ ಇತ್ತು. ಆಕೆ ಸ್ವಾಮಿಯ ಮತ್ತು ಅವರ ಅನುಯಾಯಿಗಳ ಬಟ್ಟೆಗಳನ್ನು ಶ್ರದ್ಧೆಯಿಂದ ಒಗೆದು ಕೊಡುತ್ತಿದ್ದಳು. ತನ್ನ ಗಂಡನ ಪ್ರವರ್ತನೆಯ ವಿಚಾರ ಹಲವಾರು ಬಾರಿ ಸ್ವಾಮಿಯವರೊಂದಿಗೆ ಹೇಳಿಕೊಂಡಾಗ ಸ್ವಾಮಿಯವರು ಮೌನ ವಹಿಸುತ್ತಿದ್ದರು. ಅವಳು ಪ್ರತಿನಿತ್ಯ ಸ್ವಾಮಿಯವರಿಗೆ ತನ್ನ ಮನೆ ಎಮ್ಮೆಯ ಹಾಲನ್ನು ಸಮರ್ಪಿಸುತ್ತಿದ್ದಳು. ಒಂದು ದಿನ, ಆಕೆಗೆ ಮನೆಯ ಕೆಲಸ ಮುಗಿದಿರಲಿಲ್ಲ, ಹಾಗಾಗಿ, ಹಾಲನ್ನು ತನ್ನ ಗಂಡನ ಜೊತೆ ಕಳುಹಿಸಿದಳು. ಆಗ, ಸ್ವಾಮಿಯವರು ಹಾಲು ಕುಡಿದು "ಕೊಕ್ಕರಕೋ" ಎಂದು ಜೋರಾಗಿ ಕೋಳಿಯಂತೆ ಕೂಗಿದರು. ಆ ಹಾಲು ಸಮರ್ಪಿಸಿದವನಿಗೆ (ವೆಂಕಯ್ಯನಿಗೆ) ಕೋಳಿ ಪಂದ್ಯದ ವ್ಯಸನ ಇದೆಯಂದು ತಿಳಿಸುವುದಕ್ಕೆ ಸ್ವಾಮಿಯವರು ಹಾಗೆ ಕೂಗಿದರೆಂದು ತಿಳಿದು ಎಲ್ಲರೂ ನಕ್ಕರು. ಆದರೆ, ವಿಚಿತ್ರವಾಗಿ, ಅಂದಿನಿಂದ ವೆಂಕಯ್ಯ ಕುಡಿತ ಮೊದಲಾದ ಕೆಟ್ಟ ವ್ಯಸನಗಳನ್ನೆಲ್ಲಾ ಬಿಟ್ಟು ಬಿಟ್ಟನು.

ಒಮ್ಮೆ ಶ್ರಿ ಸ್ವಾಮಿಯವರು ಗೊಲಗಮೂಡಿಯಲ್ಲಿ 8 ವರ್ಷ ನಿರಂತರವಾಗಿ ಅಗ್ನಿ ಹೋತ್ರವನ್ನು ಮಾಡಿದರು. ಅವರ ಸೇವಕರು ಹತ್ತಿರದಲ್ಲಿದ್ದ ಕಾಡಿನಲ್ಲಿ ದೊಡ್ಡ ಮರವನ್ನು ಹೊಡೆದು ಅಗ್ನಿ ಹೋತ್ರಕ್ಕೆ ಬೇಕಾದ ಕಟ್ಟಿಗೆಗಳು ಸಂಗ್ರಹಿಸಿ, ಕೋಣಗಳನ್ನು ಕಟ್ಟಿದ ಗಾಡಿಯಲ್ಲಿ ಆ ಕಟ್ಟಿಗೆಗಳನ್ನು ತರುತ್ತಿದ್ದರು. ಆ ಗ್ರಾಮದ ಸೋತ್ರಿಯಂದಾರಿ (ಅಟವಿ ಶಾಖದ ಅಧಿಕಾರಿ) ಸುಬ್ಬಾರಾಯರ ಕಡೆ ಮನುಷ್ಯರು ಸ್ವಾಮಿಯವರ ಸೇವಕರನ್ನು ಮರ ಕಡಿಯಲು ಬಿಡದೇ ಅಡ್ಡ ಹಾಕುವುದಕ್ಕೆ ಪ್ರಯತ್ನಿಸಿದರು. ಆದರೆ ಸ್ವಾಮಿಯವರ ಸೇವಕರು ನಿಲ್ಲಿಸಲಿಲ್ಲ. ಒಂದು ದಿನ ಸ್ವತಃ ಸುಬ್ಬರಾಯರು ಸ್ವಾಮಿಯ

ಅನುಯಾಯಿಗಳನ್ನು ನಿಲ್ಲಿಸಲು ನಿರ್ಧರಿಸಿದರು ಮತ್ತು ಮರಗಳನ್ನು ಕಡಿಯದಂತೆ ಎಚ್ಚರಿಕೆ ನೀಡಲು ಬಂದರು. ಸ್ವಲ್ಪ ದೂರದಲ್ಲಿದ್ದ ಸ್ವಾಮಿಯವರನ್ನ ನೋಡಿದ ಮೇಲೆ ಅವರ ಮನಸ್ಸು ಬದಲಾಯಿಸಿ, ತನ್ನ ಮನುಷ್ಯರಿಗೆ "ಲೇಯ್! ಈತ ಹುಚ್ಚನಲ್ಲವೇ? ಪಾಪ ಕಡಿದು ಕೊಳ್ಳಲಿ ಬಿಡು" ಎಂದು ಹೇಳುತ್ತಾ "ಅಯ್ಯಾ! ಬೇವಿನ ಮರವನ್ನು ಬಿಟ್ಟು ಬೇರೆ ಎಲ್ಲಾ ಮರಗಳನ್ನು ಕಡಿದುಕೊಂಡು ಹೋಗಿ" ಎಂದು ದಾನಪತ್ರ ಬರಿಸಿದಂತೆ ಹೇಳಿ ಬಿಟ್ಟರು.

ಸ್ವಾಮಿಯ ಮಹಿಮೆಯನ್ನು ಕಣ್ಣಾರ ಕಂಡ ಗೊಲಗಮೂಡಿ ನಿವಾಸಿ ಕೊಜ್ಜಕೂಟಿ ವೆಂಕಮನಾಯುಡು ಹೀಗೆ ತಿಳಿಸಿದರು: "ಶ್ರಿ ಸ್ವಾಮಿಯವರು ಒಂದೇ ಜಾಗದಲ್ಲಿ 8 ವರ್ಷದಕಾಲ ಈಗಿನ ಸಮಾಧಿ ಮಂದಿರದ ಪುಣ್ಯಭೂಮಿಯ ಸ್ಥಳದಲ್ಲಿ ನಿರಂತರ ಅಗ್ನಿಹೋತ್ರ ಮಾಡಿದ ದಿನಗಳು. ಗೊಲಗಮೂಡಿಗೆ ನೈರುತ್ಯ-ಪಶ್ಚಿಮ ಭಾಗದಲ್ಲಿರುವ ಕಾಡುಗಳಲ್ಲಿದ್ದ ಮರಗಳನ್ನು ಸ್ವಾಮಿಯವರು ತನ್ನ ಸೇವಕರೀಂದ ಕಡಿಸಿ, ದಿನಕ್ಕೆ 3-4 ಬಂಡಿಗಳ ತುಂಬಾ ಕಟ್ಟಿಗೆಯನ್ನು ಉರಿಸುತ್ತಿದ್ದರು. ಕಾಡಿನ ಸಾಂದ್ರತೆಯು(Density) ಕಡಿಮೆಯಾಗಲು ಪ್ರಾರಂಭಿಸಿತು. ಇವರ ಅಗ್ನಿಹೋತ್ರ ಹೀಗೆಯೇ ಸ್ವಲ್ಪ ದಿನಗಳ ಕಾಲ ನಡೆದರೆ, ಗೊಲಗಮೂಡಿ, ಕಂಟೆಪಲ್ಲಿ ಗ್ರಾಮಸ್ಥರಿಗೆ ಅಡಿಗೆಮಾಡುವುದಕ್ಕೆ ಬೇಕಾದ ಕಟ್ಟಿಗೆ ಸಿಗದೆ ಬಹಳ ಕಷ್ಟ ಆಗುತ್ತೆ ಎಂದು ಕೆಲವರು ಭಾವಿಸಿದರು.

ಒಮ್ಮೆ ಕಂಟೆಪಲ್ಲಿಯ ಕೆಲವು ಯುವಕರು, ಕಾಡಿಗೆ ಹೋಗುವ ಶ್ರೀ ಸ್ವಾಮಿಯವರ ಸೇವಕರಿಗೆ ಕಟ್ಟಿಗೆ ಕಡಿಯದೇ ಇರಲು ದೇಹ ಶುದ್ಧಿ ಮಾಡಿ (ಚೆನ್ನಾಗಿ ಹೊಡೆದು) ಪಾಠ ಕಲಿಸ ಬೇಕೆಂದು, ಕೋಲುಗಳನ್ನು ತೆಗೆದುಕೊಂಡು ಹೊರಟರು. ಅದೇ ಸಮಯದಲ್ಲಿ ಸ್ವಾಮಿಯವರಮೇಲೆ ಭಕ್ತಿ ಶ್ರದ್ದೆ ಇದ್ದ ನಾನು ನನ್ನ ಮೇಕೆಗಳನ್ನು ಹುಡುಕುತ್ತಾ ಕಂಟೆಪಲ್ಲಿಗೆ ಹೋಗಿದ್ದೆ. ಆ ಯುವಕರೆಲ್ಲಾ ಸ್ವಾಮಿಯವರನ್ನು ವಿವಿಧ ಕೆಟ್ಟಮಾತುಗಳಲ್ಲಿ ಬೈಯ್ಯುತ್ತಾ, ಇನ್ನು ಸ್ವಲ್ಪ ಹುಡುಗುರನ್ನ ಸೇರಿಸಿ ಕೊಳ್ಳುತ್ತಿದ್ದರು. ಆ ಮಹನೀಯರನ್ನು ಹಾಗೆ ಬಯ್ಯಬೇಡಿ ಎಂದು ನಾನು ಎಷ್ಟು ಹೇಳಿದರೂ ಅವರು ಕೇಳದೇ ಇನ್ನಷ್ಟು ಕೆರಳಿಸುತ್ತಿದ್ದರು. ಆ ಗುಂಪಿನವರೆಲ್ಲಾ ಕೋಲುಗಳೊಂದಿಗೆ ಬಹಳ ಉದ್ರೇಕದಿಂದ ಸ್ವಾಮಿಯವರು ಕಟ್ಟಿಗೆ ಕಡಿಸುವುತಿದ್ದ ಕಾಡಿನ ಕಡೆ ಅತಿ ವೇಗವಾಗಿ ಹೋಗುತ್ತಿದ್ದರು. ಈ ಹುಡುಗರು, ಅವರ ಉದ್ರೇಕದಿಂದ ಸ್ವಾಮಿ ಮತ್ತು ಅವರ ಸೇವಕರನ್ನ ಹೊಡೆಯುತ್ತಾರೇನೋ ಎಂದು ಭಯವಾಗಿ ನಾನೂ ಅವರನ್ನ ಹಿಂಬಾಲಿಸಿದೆ.

ಆ ಗುಂಪಿನವರು ಸ್ವಾಮಿಯಿಂದ ಒಂದು ಫರ್ಲಾಂಗ್ ದೂರದಲ್ಲಿದ್ದಾಗ, ಏನೋ ವಿಚಿತ್ರ ಸಂಭವಿಸಿತು, ಅವರ ಬಾಯಿಗಳು ಮುಚ್ಚಲ್ಪಟ್ಟವು ಮತ್ತು ಶಬ್ದವನ್ನು ಉಚ್ಚರಿಸಲಾಗಲಿಲ್ಲ. ಅವರ ನಡಿಗೆಯ ವೇಗವೂ ಕಡಿಮೆ ಆಯಿತು. ಅವರು ಸ್ವಾಮಿಯವರ ಹತ್ತಿರ ಹೋಗಿ ಖಾಲಿ ಬಂಡಿಗಳಿಗೆ ಕಟ್ಟಿಗೆ ಗಳನ್ನು ಬೇಗ ಬೇಗ ತುಂಬಲು ಪ್ರಾರಂಭಿಸಿದರು. ಈ ಕಟ್ಟಿಗೆ ಗಳನ್ನೆಲ್ಲಾ ಹುಡುಗರು ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗುತ್ತಾರೇನೋ, ಸ್ವಾಮಿಯವರಿಗೆ ಈ ದಿನ ಅಗ್ನಿ ಕುಂಡಕೆ ಕಟ್ಟಿಗೆ ಇರುವುದಿಲ್ಲವೆನೋ ಎಂದು ನಾನು ಭವಿಸುತ್ತಿದಾಗ, ಆ ಹುಡುಗರು 10 ನಿಮಿಷಗಳಲ್ಲಿ ಬಂಡಿ ತುಂಬಿಸಿ

ಸ್ವಾಮಿಯವರ ಹತ್ತಿರ ಹೋಗಿ "ಸ್ವಾಮಿ ಇಷ್ಟೇನಾ ಅಥವ ಇನ್ನೂ ಕಟ್ಟಿಗೆ ಇದೆಯಾ ಹೇಳಿ? ನಾಳೆ ನಮ್ಮ ಬಂಡಿಯಲ್ಲಿ ಎಲ್ಲಾ ಕಟ್ಟಿಗೆಗಳನ್ನು ತರುತ್ತೇವಿ, ಎಂದರು. ಸ್ವಾಮಿಯವರು ಏನೂ ತಿಳಿಯದಂತೆ "ಈ ಪೆದ್ದ ಮಾನುಲು ಮಾವಾಳ್ಳು ನರಕ ಲೇಕ ಪೋತುನ್ನಾರು, ವೀಟಿನಿ ರೇಪು ಮೀರು ನರಿಕಿ ತೋಲುಕೊಸ್ತಾರಯ್ಯಾ?" (ಈ ದೊಡ್ಡ ತೂಲೆಗಳನ್ನು (Branches) ನಮ್ಮವರಿಗೆ ಕಡಿಯಲು ಸಾಧ್ಯವಾಗುತ್ತಿಲ್ಲ. ಇದನ್ನ ನೀವುಗಳು ಕಡಿದು ನಾಳೆ ತರುತ್ತೀರಾ ಅಯ್ಯಾ?) ಎಂದರು. ಆ ಯುವಕರು 'ಹಾಗೆ ಆಗಲಿ ಸ್ವಾಮಿ' ಎಂದು ಹೇಳಿ ಅಲ್ಲಿ ಮಿಕ್ಕಿದ್ದ ಕೆಲವು ದೊಡ್ಡಕೊಂಬೆಗಳನ್ನು ಒಬ್ಬೊಬ್ಬರೂ ಒಂದೊಂದು ಕೊಂಬೆ ತಮ್ಮ ಭುಜಗಳ ಮೇಲಿಟ್ಟುಕೊಂಡು, ಆ ಕಟ್ಟಿಗೆಯ ಗಾಡಿಯನ್ನು ಗೊಲಗಮೂಡಿಯಲ್ಲಿದ್ದ ಸ್ವಾಮಿಯವರ ಆಶ್ರಮಕ್ಕೆ ತಂದು ಕಟ್ಟಿಗೆಗಳನ್ನು ಇಳಿಸಿದರು. 'ಸ್ವಾಮೀ, ನಾಳೆ ನೀವು ಹೇಳಿದ ತೂಲೆಗಳನ್ನು ತಂದು ಕೊಡುತ್ತೇವೆ. ನಮಗೆ ಹೊರಡಲು ಅಪ್ಪಣೆ ಕೊಡಿ' ಎಂದು ಎಷ್ಟು ಬೇಗ ಬಂದರೋ ಅಷ್ಟೇ ಬೇಗ ಕಿಮಕ್ಕನ್ನದೇ ಹೊರಟು ಹೋದರು. ಆ ಹುಡುಗರ ಪ್ರವರ್ತನೆಯ ಬದಲಾವಣೆ ನೋಡಿ ನನ್ನ ತಲೆ ತಿರುಗಿತು. ಶ್ರೀ ಸ್ವಾಮಿಯವರ ಮಹಾತ್ಮೆ ಬಾಯಲ್ಲಿ ವರ್ಣಿಸಲು ಸಾಧ್ಯವಿಲ್ಲ".

ನಾಗುಲ ವೆಲ್ಲಟುರು ನಿವಾಸಿ ಮಾಲೆಪಾಟಿ ಚೆಂಚಮ್ಮನವರು ಅವರ ಪ್ರಥಮ ಭೇಟಿಯಲ್ಲಿ ಸ್ವಾಮಿಯವರನ್ನು 'ನನಗೆ ಮತ್ತೆ ಜನ್ಮ ಇಲ್ಲದ ಹಾಗೆ ಮಾಡಿ ಸ್ವಾಮಿ' ಎಂದು ಬೇಡಿ ಕೊಂಡರು. "ಅಬ್ಬೋ! ಈಮೆ ಪದೋ ಚೂಪುಲೋ ಮನಿಷಿ, ಈಮೆಕು ಅನ್ನೀ ಸರಿ ಪಡತಾಯಿ" (ಅಬ್ಬೋ! ಈಕೆ ಹತ್ತನೇ ಒಳನೋಟ (10th insight) ಹೊಂದಿರುವ ಮಹಿಳೆ. ಇವರಿಗೆ ಎಲ್ಲಾ ಸರಿಯಾಗುತ್ತೆ) ಎಂದರು ಸ್ವಾಮಿಯವರು. ಆಕೆಯನ್ನು ತಮ್ಮ ಹತ್ತರವೇ ಇರಲು ಹೇಳಿದರು, ಆದರೆ ಆಕೆ ತನ್ನ ಸಂಸಾರ ಬಿಟ್ಟು ಬರಲಾಗದೆ, ಸ್ವಾಮಿಯವರಿಗೆ ಹೇಳದೆ ಆಶ್ರಮದಿಂದ ಹೊರಟು ಹೋದಳು. ಆಮೇಲೆ, ಆಕೆ ಬಂದಾಗಲೆಲ್ಲಾ ಸ್ವಾಮಿಯವರು ಮನೆಗೆ ಹೋಗುವುದಕ್ಕೆ ಅಪ್ಪಣೆ ಕೊಡುತ್ತಿರಲಿಲ್ಲ, ಆದರೆ, ಆಕೆ ಸ್ವಾಮಿಯವರಿಗೆ ಹೇಳದೆ ಹೊರಟು ಹೋಗುತ್ತಿದ್ದರು. ಒಮ್ಮೆ ಸ್ವಾಮಿಯವರು ಆಕೆಗೆ ಸ್ವಪ್ನದಲ್ಲಿ ಮಂತ್ರೋಪದೇಶ ಮಾಡಿದರು. ಇನ್ನೊಮ್ಮೆ ಸ್ವಪ್ನದಲ್ಲಿ ದೊಡ್ಡ ಬೆಳಕಿನಲ್ಲಿ ಚಂದ್ರ ಮಂಡಲದಲ್ಲಿ ಸ್ವಾಮಿಯವರು ಕೂತುಕೊಂಡು ದರ್ಶನ ಕೊಟ್ಟು "ಇದಿ ಗದಮ್ಮ ಲೋಕಂ ಮಾರ್ಪು!"(ಇದಲ್ಲವೇ ಲೋಕದ ಬದಲಾವಣೆ) ಎಂದು ಸ್ವಾಮಿಯವರು ಚಂದ್ರನನ್ನ ತೋರಿಸಿದರು.

ಆಕೆ ಎಷ್ಟು ದಿನಗಳಾದರೂ ತಮ್ಮ ಸೇವೆಗೆ ಬರದಿದ್ದಾಗ, ಒಮ್ಮೆ ಸ್ವಾಮಿಯವರು ಆಕೆಯ ಮನಸ್ಸಿನಲ್ಲಿ ವಿಚಿತ್ರವಾದ ಬದಲಾವಣೆ ತಂದರು. ಆಕೆ ಒಂದು ದಿನ ತಾನುಟ್ಟುಕೊಂಡಿದ್ದ ಸೀರೆಯಲ್ಲಿ ಸ್ವಾಮಿಯವರ ಸನ್ನಿಧಿಗೆ ಬಂದು ಬಿಟ್ಟರು. ಬಹುಶಃ ಸ್ವಾಮಿಯವರು ಆಕೆಯ ಮನಸ್ಸಿನ ಪ್ರವೃತ್ತಿಯಲ್ಲಿ ತುಂಬಾ ಬದಲಾವಣೆ ಮಾಡಿರಬಹುದು. ಈಗ, ಆಕೇಗೆ ಯಾವ ಸಾಧನಯೂ ಮಾಡಲು ಬಯಸಲಿಲ್ಲ. ಯಾವ ಲೌಕಿಕ ವ್ಯವಹಾರಗಳೂ ಅಥವ ಬಂಧನಗಳ ನೆನಪು ಬರಲಿಲ್ಲ. ನಿರಂತರ ಧ್ಯಾನದಲ್ಲಿ ಇರುತ್ತಿದ್ದರು. ಮನಸ್ಸು ಪೂರ್ತಿಯಾಗಿ ಆಧೀನದಲ್ಲಿ ಇಲ್ಲವೆಂದು ಆಕೆ ಬಹಳ ಬೇಜಾರು

ಪಡುತ್ತಿದ್ದರು. ಒಮ್ಮೆ ಸ್ವಾಮಿಯವರು ಆಕೆಗೆ ಸ್ವಪ್ನದಲ್ಲಿ ಕಂಡು "ಮಂಚಿ ಪೊಗರುಮೋತು ಗುಜ್ಜಂ ವುಂದನುಕೋ, ಅದಿ ಮಾಟ ವಿನದು. ದಾನ್ನಿ ನಾಕಿಸ್ತೇ ಸರಿಪೋತುಂದಿ ಕದಾ!" (ಒಳ್ಳೇ ಸೊಕ್ಕಿನ ಕುದುರೆ ಇದೆ ಎಂದು ಭಾವಿಸು, ಅದು ಮಾತು ಕೇಳುತ್ತಿಲ್ಲ. ಅದನ್ನ ನನಗೆ ಕೊಟ್ಟರೆ ಸರಿಹೋಗುತ್ತದೆ ಅಲ್ಲವೇ) ಎಂದು ಹೇಳಿದರು. ಆಂದರೆ ಆಕೆಯ ಮನಸ್ಸನ್ನು ಸ್ವಾಮಿಯವರು ಪರೀಕ್ಷೇ ಮಾಡಿ ಅನ್ಯ ಆಲೋಚನೆಗಳನ್ನು ತ್ಯಜಿಸಲು ಸಲಹೆ ಕೊಟ್ಟರು. ಪ್ರಾರ್ಥಿಸಿದವರಿಗೆ ಇದಕ್ಕಿಂತ ಆಧ್ಯಾತ್ಮಿಕ ಮಾರ್ಗ ದರ್ಶನ ಎಲ್ಲಿ ಸಿಗುತ್ತದೆ?

ನಾಗುಲವೆಲ್ಲಟ್ಟುರು ನಿವಾಸಿ ಆಗಿದ್ದ ನೂತೇಟಿ ಶ್ರೀ ರಾಮಯ್ಯ ಬಹಳ ದಿನದಿಂದ ಸ್ವಾಮಿಯವರ ಭಕ್ತ. ಸಂಸಾರದ ಭಾರವೆಲ್ಲಾ ತಮ್ಮ ಮಗನಿಗೆ ವಹಿಸಿ ಸ್ವಾಮಿಯವರ ಸನ್ನಿಧಿಯಲ್ಲಿ ಇರ ಬೇಕೆಂದುಕೊಂಡು ಗೊಲಗಮೂಡಿಗೆ ಬಂದರು. ಅವರು ಬರುವುದಕ್ಕೆ 2 ದಿನಗಳ ಮುಂಚೆಯಿಂದ ಸ್ವಾಮಿಯವರು ಗಂಜಿ ಕೂಡಾ ಕುಡಿಯದೇ ಮೌನವಾಗಿದ್ದರು. ಶ್ರೀ ರಾಮಯ್ಯ ಬಂದಕೂಡಲೇ ಸ್ವಾಮಿಯವರಿಗೆ ನಮಸ್ಕರಿಸಿ, "ನಿಮ್ಮ ಕೃಪೆಯಿಂದ ಈ ಭುಮಿಯಮೇಲೆ ಬದುಕಿದ್ದೇನೆ. ಇಲ್ಲದಿದ್ದರೆ ಯಾವಾಗಲೋ ಬೂದಿಯಾಗುಬಿಡುತ್ತಿದ್ದೆ" ಎಂದು ಮನಸ್ಸಿನಲ್ಲಿ ಅಂದುಕೊಂಡರು. ತಕ್ಷಣವೇ ಸ್ವಾಮಿಯವರು ಕಣ್ಣು ಬಿಟ್ಟು ಫಕ್ಕನೆ ನಕ್ಕು ಬಿಟ್ಟರು. "ಶ್ರೀ ರಾಮಯ್ಯನವರು ಬಂದ ಕೂಡಲೆ ಸ್ವಾಮಿಯವರು ಏಕೆ ನಕ್ಕರೋ" ಎಂದು ಎಲ್ಲರೂ ಆಶ್ಚರ್ಯ ಪಟ್ಟರು. ಆ ನಗುವಿನಲ್ಲಿ ಏನು ಪ್ರಭಾವವಿತ್ತೋ ಏನೋ ಆಗಲಿ, ಆ ದಿನದಿಂದ, ಶ್ರೀ ರಾಮಯ್ಯನವರು ಸ್ವಾಮಿಯವರ ಸೇವೆಗೆ ಅಂಕಿರತಾಗಿ ಅವರ ಕೊನೆಯ ಉಸಿರು ಇರುವ ವರೆಗೂ ಸ್ವಾಮಿಯವರ ಆಜ್ಞೆಯಂತೆ, ಅನಿಕೇಪಲ್ಲಿ ಯಿಂದ ಪ್ರತಿ ನಿತ್ಯವೂ ಭಿಕ್ಷಾನ್ನ ತರುತ್ತಿದ್ದರು.

ರಾಜಂಪೇಟೆಯ ನಿವಾಸಿ ಎಲ್ಲಂರಾಜು ಈಶ್ವರ ರಾಜುರವರು, ವಿದ್ಯಾನಗರದಲ್ಲಿ ಇದ್ದ ಶಿರಿಡಿ ಸಾಯಿಬಾಬಾ ಮಂದಿರದ ಉದ್ಘಾಟನೆ ಸಂದರ್ಭದಲ್ಲಿ ಪ್ರಕಟಿಸಿದ "ಸದ್ಗುರು ದರ್ಶನಂ" ಎಂಬ ಗ್ರಂಥ ಓದಿದರು. ಅದರಲ್ಲಿ ಶ್ರೀ ಸ್ವಾಮಿಯವರ ವಿಚಾರ ಓದಿದಮೇಲೆ ಸ್ವಾಮಿಯವರ ದರ್ಶನ ಮಾಡಬೇಕೆಂದು ಗೊಲಗಮೂಡಿಗೆ ಬಂದರು. ಸ್ವಾಮಿಯವರ ಪಾದ ತೀರ್ಥ ಸ್ವೀಕರಿಸಿದಾಗ ಎಷ್ಟೋ ಮಧುರವಾಗಿತ್ತು. ಅವರಿಗೆ "ಷಾಕ್" ಹೊಡೆದ ಹಾಗೆ ಅನುಭವ ಆಗಿ ಹೇಳಲಾರದಷ್ಟು ಆನಂದ ಹೊಂದಿದರು. ಆ ದಿನ ಮೊದಲು 'ಎಷ್ಟೇ ದೂರದಲ್ಲಿದ್ದರೂ ಸ್ವಾಮಿಯವರ ದರ್ಶನ ನೀಡುತ್ತಲೇ ಇರುತ್ತೇನೆ' ಎಂದು ಹೇಳಿದರು. ಇವತ್ತಿಗೂ ಇವರು ಸ್ವಾಮಿಯವರ ಸಮಾಧಿಯನ್ನು ದರ್ಶನ ಮಾಡುತ್ತಿರುತ್ತಾರೆ.

ಬದ್ವೇಲಿನಲ್ಲಿ ಇದ್ದ ಸುಬ್ಬಾ ರೆಡ್ಡಿ ಹೀಗೆ ಹೇಳಿದರು: ಶ್ರೀ ಸ್ವಾಮಿಯವರ ಧುನಿಗೋಸ್ಕರ ಕಟ್ಟಿಗೆ ತರುತ್ತಿದ್ದ ಎರಡು ಕೋಣಗಳೂ ಪಕ್ಕದಲ್ಲಿದ್ದ ಹೊಲದಲ್ಲಿ ಮೇಯುತಿದ್ದವು. ನಶೆಯಲ್ಲಿದ್ದ ಆ ಹೊಲದ ಯಜಮಾನ ಆ ಎತ್ತುಗಳನ್ನು ಹಿಡಿದು ಬಂದೆಲ ದೊಡ್ಡಿ (ಸ್ಟಾಕ್ ಯಾರ್ಡ್- ಕಸಾಯಿ ಖಾನೆಗೆ ಕಳುಸುವ ಮುಂಚೆ ಪಶುಗಳನ್ನ ಇಡುವ ಅಂಗಳ). ಸ್ವಾಮಿಯವರ ಶಿಷ್ಯರು ಎಷ್ಟು ಹೇಳಿದರೂ, ಕೇಳಿ ಕೊಂಡರೂ ಅವನು ಆ ಕೋಣಗಳನ್ನ ಬಿಡಲಿಲ್ಲ. ದಾರಿಯಲ್ಲಿ ಶ್ರೀ ಸ್ವಾಮಿಯವರು ಎದುರಾಗಿ, "ಎಕ್ಕಡಿಕಿ? ದುನ್ನಲನು ತೋಲುಕು ಪೋತುನ್ನಾವು?" (ಎಲ್ಲಿಗೆ? ಕೋಣಗಳನ್ನು ಕರೆದುಕೊಂಡು

ಹೋಗುತ್ತಿದ್ದೀಯ?) ಎಂದು ಕೇಳಿದರೂ ಅವನು ಉತ್ತರ ಕೊಡಲಿಲ್ಲ. ಸ್ವಾಮಿಯವರು ಅವನನ್ನು ತೀಕ್ಷ್ಣವಾಗಿ ನೋಡುತ್ತಾ, ಕೈನಿಂದ ನಿಲ್ಲು ಎಂದು ಸನ್ನೆ ಮಾಡಿದರು. ತಕ್ಷಣ, ಆ ವ್ಯಕ್ತಿ ಮಾತ್ರವಲ್ಲ ಆ ಕೋಣಗಳೂ ಕೂಡ ಬ್ರೇಕ್ ಹಾಕಿದ ಕಾರಿನಂತೆ ನಿಂತು ಬಿಟ್ಟರು. "ಇದೇಮಿ ನಾ ಸೊಂತಪನಿ ಕಾದು, ಲೋಕಂ ಪನಿ. ಕಾವಾಲಂಟೇ ಗುಂಡಂಲೋ ಭಾಗಂ ವ್ಯಾಯಿಂಚುಕೋ, ಇಟ್ಲಾ ಎಪ್ಪುಡೂ ಚೆಯ್ಯವದ್ದು. ಅಮ್ಮ ನಡಿಗಿ ಅನ್ನಂ ತಿನು" (ಇದೇನು ನನ್ನ ಸ್ವಂತ ಕೆಲಸವಲ್ಲ, ಲೋಕಕ್ಕಾಗಿ ಮಾಡುತ್ತಿರುವ ಕೆಲಸ. ಬೇಕಾದರೆ **ಅಗ್ನಿಕುಂಡದಲ್ಲಿ ಭಾಗ ಬರಿಸುಕೊ**, ಆದರೆ ಹೀಗೆ ಯಾವಾಗಲೂ ಮಾಡಬೇಡ. ಅಮ್ಮನ್ನ ಕೇಳಿ ಅನ್ನ ತಿನ್ನು) ಎಂದರು ಸ್ವಾಮಿಯವರು. ಆ ಕುಡುಕ ಕೋಣಗಳನ್ನ ಮರಳಿತಂದಿದ್ದೂ ಅಲ್ಲದೆ, ಅವತ್ತಿನಿಂದ ಪ್ರತಿದಿನ ಸ್ವಾಮಿಯವರ ಹತ್ತಿರವೇ ತಿರುಗುತ್ತಿದ್ದ.

** ಅಗ್ನಿಕುಂಡದಲ್ಲಿ ಭಾಗವೆಂದರೇ- ನಿರಂತರಾಗ್ನಿಹೋತ್ರ ದಿಂದ ಬರುವ ಪುಣ್ಯದಲ್ಲಿ ಭಾಗ ಎಂದು ಸ್ವಾಮಿಯವರ ಸೂಚನೆ**

ತಿರುಪತಿ ಜಾನಕಿ ರಾಮಯ್ಯನವರ ಮಗಳು ರಮಣಮ್ಮ ತನ್ನ ಅಕ್ಕನ ಮಗಳಜೊತೆ ಸ್ವಾಮಿಯವರ ದರ್ಶನಕ್ಕೋಸ್ಕರ ಗೊಲಗಮೂಡಿಗೆ ಬಂದಳು. ಅವರು 1/2 ಫರ್ಲಾಂಗ್ ದೂರದಲ್ಲಿದ್ದಾಗ, ಸ್ವಾಮಿಯವರು ಅವರು ಹತ್ತಿರ ಬರಬಾರದೆಂದು ಹೇಳಿಬರಲು ಒಬ್ಬ ವ್ಯಕ್ತಿಯನ್ನು ಕಳುಹಿಸಿದರು. ಸ್ವಾಮಿಯವರು ವಿಪರೀತವಾದ ಕೋಪದಿಂದ ಅವರ ಹತ್ತಿರವಿದ್ದ ವಸ್ತುಗಳನ್ನು ಧುನಿಯಲ್ಲಿ ಹಾಕುತ್ತಾ, ಅವರೇ ಧುನಿಯಲ್ಲಿ ಧುಮುಕಲು ಹೋಗುತ್ತಿದ್ದರು. ಆ ಹುಡುಗಿಯರು ಸ್ವಲ್ಪ ದೂರದಲ್ಲಿದ್ದಾಗಲೇ, ಸ್ವಾಮಿಯವರು ಕಳುಹಿಸಿದ ವ್ಯಕ್ತಿ ಮತ್ತು ಇತರ ವ್ಯಕ್ತಿಗಳು ಅವರನ್ನು ದೂರದಲ್ಲಿಯೇ ನಿಲ್ಲಿಸಿ ಬಿಟ್ಟರು. ಸಮಯದ ನಂತರ ರಮಣಮ್ಮ ಸ್ವಾಮಿಯವರಿಗೆ ಒಂದು ಮಾತು ಮಾತಾಡಿ ಹೋಗುತ್ತೇನೆಂದು ಹೇಳಿ ಕಳಿಸಿದಲು. ದಯಾಮಯರಾದ ಸ್ವಾಮಿಯವರು, 60 ಅಡಿಯ ದೂರದಲ್ಲಿ ನಿಂತು ಮಾತನಾಡಲು ಹೇಳಿದರು. ಆಕೆ ಬಂದು 'ಸ್ವಾಮೀ! ನೀವು ಯಾವ ಶಿಕ್ಷೆ ಹಾಕಿದರೂ ಅನುಭವಿಸುತ್ತೇನೆ ಆದರೆ, ನಿಮ್ಮನ್ನ ಬಿಟ್ಟು ವಾಪಸ್ಸು ಹೋಗುವುದಿಲ್ಲ' ಎಂದು ಜೋರಾಗಿ ಅತ್ತು ಬಿಟ್ಟಳು. "ಅಯ್ಯೋ! ಈಮೆ ಶಿಕ್ಷಲೋ ವುಂಟುಂದಟ, ಎಟ್ಲಾಗಯ್ಯಾ? ಸರೇ! ನಲುಗುರು ಮನುಷುಲನು ತೀಸುಕುಪೋಯಿ ಆಂಜನೇಯಸ್ವಾಮಿ ದೇವಾಲಯಂಲೋ ಭಜನ ಚೇಸುಕುನಿ ತೆಲ್ಲವಾರಿ ಅಮ್ಮ ದಗ್ಗರಕು ರಮ್ಮನು" (ಅಯ್ಯೋ! ಇವಳು ಶಿಕ್ಷೆಯಲ್ಲಿರುತ್ತಾಳಂತೆ! ಹೇಗಯ್ಯಾ? ಸರಿ, ೪ ಜನರೊಂದಿಗೆ ಹೋಗಿ ಆಂಜನೇಯಸ್ವಾಮಿಯ ದೇವಸ್ಥಾನದಲ್ಲಿ ಭಜನೆ ಮಾಡಿ ಬೆಳಗ್ಗೆ ಅಮ್ಮನವರ ಹತ್ತಿರ ಬ) ಎಂದು ಹೇಳಿದರು. ಅವಳು ಹಾಗೆಯೇ ಮಾಡಿ ಸ್ವಾಮಿಯವರ ಆಶಿರ್ವಾದ ಪಡೆದು ವಾಪಸ್ಸು ಹೊರಟು ಹೋದಳು. ಆದರೆ ಅವಳ ಅಕ್ಕನ ಮಗಳು ಮಾತ್ರ ತಕ್ಷಣ ಹೊರಟು ಹೋದಳು.

ಒಂದು ದಿನ ಸ್ವಾಮಿಯವರ ದರ್ಶನಕ್ಕಾಗಿ, ರೇಷ್ಮೇ ಸೀರೆ ಉಟ್ಟಿ, ಅಲಂಕರಿಸಿಕೊಂಡು 3 ಮಹಿಳೆಯರು ಬಂದು ನಿಂತರು. ಸ್ವಾಮಿಯವರು 3 ಬಾರಿ ಅವರುಗಳನ್ನ ಕುಳಿತುಕೊಳ್ಳಿ ಎಂದು ಹೇಳಿದರೂ, ಇಬ್ಬರು ಮಹಿಳೆಯರು ಮಾತ್ರ ಅವರ

ಸೀರೆಗೆ ಮಣ್ಣು ಅಂಟುತ್ತೆ ಎಂದು ತಾಟಿ ಚಾಪೆಯಮೇಲೆ ಕೂರಲಿಲ್ಲ. ಒಬ್ಬಳು ಮಾತ್ರ ಸ್ವಾಮಿಯವರು ಹೇಳಿದ ತಕ್ಷಣ ಕೂತಳು. ಆ ಕೂತಿದ ಮಹಿಳೆಗೆ ಮಾತ್ರ ಸ್ವಾಮಿಯವರು ಆಶೀರ್ವಾದದ ಚೀಟಿ ಬರೆಯಿಸಿ ಕೊಟ್ಟರು. ಮಿಕ್ಕ ಇಬ್ಬರಿಗೆ ಮೇಲಿನವರು ಅಪ್ಪಣೆ ಕೊಡಲಿಲ್ಲವೆಂದು ಚೀಟಿ ಕೊಡದೆ ಹಿಂತಿರುಗಿ ಹೋಗಲು ಹೇಳಿದರು. **ಶ್ರೀ ಸ್ವಾಮಿಯವರು ಅನುಗ್ರಹ ಮೂರ್ತಿ ಆದರೂ, ಅವರ ಮಾತುಗಳನ್ನು ಬೇರೇ ಆಲೋಚನೆ ಇಲ್ಲದೆ, ಪ್ರೀತಿಯಿಂದ ಕೇಳಿದವರೇ ಸ್ವಾಮಿಯ ಕೃಪೆ ಹೊಂದುತ್ತಾರೆ. ಕೆರೆಯಿಂದ ನೀರು ತೆಗೆದುಕೊಳ್ಳಬೇಕಾದರೆ, ಆ ನೀರಿ ಗೋಸ್ಕರ ಬಗ್ಗ ಬೇಕಲ್ಲವೇ?** 32

ಒಮ್ಮೆ ಶ್ರೀ ಸ್ವಾಮಿಯವರು ವೇಲೂರು ಸುಬ್ರಹ್ಮಣ್ಯಂರವರಿಗೆ "ಅಯ್ಯಾ ಗ್ರಾಮದೇವತ ಬಂಗಾರಮ್ಮ ಸಮುದ್ರಸ್ನಾನಂ ಪೋಯಿ ವಚ್ಚಿಂದಿ. ಇಕಮೀದಟ ಮೀ ಊಳ್ಳೋ ಅಂದರೂ ಪಾಲಪೊಂಗಳ್ಳು ಪೆಟ್ಟುಕೋವಾಲನಿ ದಂಡೋರಾ ವೇಯಿಂಚು" (ಅಯ್ಯಾ! ಗ್ರಾಮದೇವತೆ ಬಂಗಾರಮ್ಮ ಸಮುದ್ರ ಸ್ನಾನಕ್ಕೆ ಹೋಗಿ ಬಂದರು. ಇನ್ನಮೇಲೆ ನಿಮ್ಮ ಊರಿನಲ್ಲಿ ಎಲ್ಲರೂ ಹಾಲಿನ ಪೊಂಗಲ್ ಇಟ್ಟುಕೋಬೇಕು ಎಂದು ಡಂಗುರ ಹೊಡೆಯಿಸಿ) ಎಂದು ಹೇಳಿದರು. ಸುಬ್ರಹ್ಮಣ್ಯಂರವರು ಹಾಗೇ ಮಾಡಿದರು. ಅಂದಿನಿಂದ ಅವರ ಗ್ರಾಮದಲ್ಲಿ ಅಲ್ಲಿಯವರೆಗೆ ಇದ್ದ ಪಶುಬಲಿ ನಿಲ್ಲಿಸಿ, ಬಂಗಾರಮ್ಮನಿಗೆ ಹಾಲಿನ ಪೊಂಗಲ್ ಎಲ್ಲಾರೂ ನೈವೇದ್ಯ ಮಾಡುತ್ತಿದ್ದಾರೆ ಎಂದು ಹೇಳಿದರು ಸುಬ್ರಹ್ಮಣ್ಯಂರವರು.

ಅವಧೂತ ಲೀಲ

ಅಧ್ಯಾಯ - 11

ಅವಧೂತ ವೈದ್ಯ

33 **ಪರಬ್ರಹ್ಮ ಸ್ವರೂಪದವರಾದ ಸದ್ಗುರುಗಳು ಕೇವಲ ತಮ್ಮ ಸಂಕಲ್ಪದಿಂದ, ಎಂತಹ ಭಯಂಕರವಾದ ವ್ಯಾಧಿ ಆದರೂ ಗುಣಪಡಿಸುವುದು, ಮರಣಿಸಿದವರನ್ನ ಜೀವಂತರಾಗಿ ಮಾಡುವುದು,** ಇಂತಹ ದಿವ್ಯಲೀಲೆಗಳು ಗುರುಚರಿತ್ರ, ಸಾಯಿ ಚರಿತ್ರೆಯಂತಹ ಮಹನೀಯರ ಚರಿತ್ರೆಗಳಲ್ಲಿ ಕಾಣುತ್ತೇವೆ. ದತ್ತಾತ್ರೇಯರ ಪರಂಪರೆಯ ಅವಧೂತ ಸಾಂಪ್ರದಾಯದಲ್ಲಿ

33A **ರೋಗಿಗೆ ವಿಷ ಪದಾರ್ಥಗಳಿಂದ ಗುಣ ಪಡಿಸುವುದು ಒಂದು ದಿವ್ಯ ಲೀಲೆ.** ಅವರ ಮಾತಿನಮೇಲೆ ವಿಶ್ವಾಸ ಇಟ್ಟುಕೊಂಡರೆ, ರೋಗಿ ಗಳಿಗೆ ಅದು ಅಮೃತವಾಗಿ ಆರೋಗ್ಯ ಸರಿ ಪಡಿಸುತ್ತದೆ. ಈ ಅವಧೂತ ಸಂಪ್ರದಾಯಕ್ಕೆ ಸೇರಿದ ಮಹನೀಯರಾದ ಸ್ವಾಮಿಯವರು ವಿಷ ಪದಾರ್ಥಗಳಿಂದ ರೋಗ ನಿವಾರಣೆ ಮಾಡಿರುವ ಅನುಭವಗಳು ಎಷ್ಟೋ ಜನರಿಗಾಗಿದೆ.

ನಾಗುಲವೆಲ್ಲಟೂರು ನಿವಾಸಿಯಾದ ವೇಲೂರು ರಾಮಾನಾಯುಡುಗೆ ಕ್ಷಯ ರೋಗ ಇತ್ತು. ನೆಲ್ಲೂರು ಡಾಕ್ಟರುಗಳಿಂದ ಆ ವ್ಯಾಧಿಯನ್ನು ಗುಣಪಡಿಸಲು ಸಾಧ್ಯ ಆಗಲಿಲ್ಲ. ಮದ್ರಾಸಿನ ವೈದ್ಯರಿಗೆ ತೋರಿಸ ಬೇಕೆಂದುಕೊಂಡು ಸ್ವಾಮಿಯವರ ಆಶೀರ್ವಾದ ಪಡೆಯಲು ಬಂದರು. ಆಗ ಸ್ವಾಮಿಯವರು, "ಅಯ್ಯಾ ನೀ ಊಪಿರಿತಿತ್ತುಲೋ ಚೀಂಡಬ್ಬು ವೆಡಲ್ಪುನ ಮಚ್ಚಲುನ್ನಾಯಿ. ಅವೇಮಿ ಚೇಯವು. ನೀವು ಮದ್ರಾಸು ಪೋಬಳ್ಳೇದು. ಬೊಂತಜೆಮುಡು ಪಾಲು ತ್ಯಾಗು ಪೋತುಂದಿ" (ಅಯ್ಯಾ! ನಿನ್ನ ಶ್ವಾಸಕೋಶದಲ್ಲಿ ಸಣ್ಣ ಮಚ್ಚೆಗಳಿವೆ. ಅದೇನೂ ತೊಂದರೆ ಆಗುವುದಿಲ್ಲ. ನೀನು ಮದ್ರಾಸಿಗೆ ಪ್ರಯಾಣ ಮಾಡಬೇಕಾಗಿಲ್ಲ. ಜಡೆ ಕಳ್ಳಿಯ (euphorbia antiquorum) ಹಾಲು ಕುಡಿ, ವ್ಯಾಧಿ ಹೋಗುತ್ತದೆ) ಎಂದರು. ಸ್ವಾಮಿಯವರು ಸೂಚಿಸಿದ ಮದ್ದಿನ ವಿಚಾರ ಕೇಳಿದ ಮನೆಯವರು "ಹೀಗೆ ಮಾಡಿದರೆ ನಿನ್ನ ದೃಷ್ಟಿ ಕಳೆದು ಕೊಳ್ಳುತ್ತೀಯ, ಹೊಟ್ಟೆಯಲ್ಲಿ ಹುಣ್ಣಾಗಿ ಸಾಯುತ್ತೀಯ" ಎಂದರು. "ವೈದ್ಯರಿಂದ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡರೂ ಅಧಿಕ ದಿನ ಬದುಕುವುದಿಲ್ಲ" ಎಂದು ಯೋಚಿಸಿ, ಸ್ವಾಮಿಯವರ ಮಾತು ಕೇಳದೆ ಸಾಯುವುದುಕ್ಕಿಂತ, ಸ್ವಾಮಿಯವರು ಹೇಳಿದಂತೆ ಮಾಡಿ ಸಾಯುವುದು ಮೇಲು ಎಂದುಕೊಂಡು ಸ್ವಾಮಿಯವರ ಸನ್ನಿಧಿಗೆ ಬಂದು ಜಡೆಕಳ್ಳಿಯ

ಹಾಲು ಕುಡಿದು ಬಿಟ್ಟರು. ಆಮೆಲೆ, ಯಾವ ಔಷಧಿಯೂ ಸೇವಿಸದೇ ಅವರ ರೋಗ ಸಂಪೂರ್ಣಆರೋಗ್ಯ ಪಡೆದು, ಈಗಲೂ ಅವರು ಅರೋಗ್ಯವಾಗಿದ್ದಾರೆ.

ಶ್ರೀ ಸ್ವಾಮಿಯವರು ವೆಂಕಟರೆಡ್ಡಿ ಎಂಬ ಹಳ್ಳಿಯಲ್ಲಿ ಬಿಡಿದಿ ಮಾಡಿದ್ದರು. ಬದ್ವೇಲಿನಲ್ಲಿ ಇರುವ ಬಾಪನಪಲ್ಲಿ ಗ್ರಾಮದ ಒಬ್ಬ ವ್ಯಕ್ತಿಗೆ ತೀವ್ರವಾದ ಛಳಿ ಜ್ವರ ಬಂದು ವದ್ದಾಡುತ್ತಿದ್ದನು. ಆಗ ಆ ಪ್ರಾಂತದಲ್ಲಿ ವೈದ್ಯ ಚಿಕಿತ್ಸೆಯನ್ನು ನೀಡುತ್ತಿದ್ದ ನಾಟಿ ವೈದ್ಯರಿಂದ ಗುಣ ಪಡಿಸಲಾಗಲಿಲ್ಲ. ಅವನು ಸ್ವಾಮಿಯವರಲ್ಲಿ ಶರಣಾಗತನಾದನು. ಸ್ವಾಮಿಯವರು ಅವನಿಗೆ ಒಂದು ಬೊಗಸೆ ಕಡಲೆ ಕಾಯಿ ಬೀಜ ಕೊಟ್ಟು "ತಿನ್ನು" ಎಂದರು. ಅವನು ಭಯದಿಂದ ಅನುಮಾನಿಸುತ್ತಿದ್ದಾಗ, "ಅಯ್ಯಾ! ನೀ ಜಬ್ಬಂತಾ ಪೋತುಂದಿ. ತಿನಾಲಯ್ಯಾ" (ಅಯ್ಯಾ! ನಿನ್ನ ರೋಗ ಗುಣವಾಗುತ್ತದೆ ತಿನ್ನ ಬೇಕಯ್ಯಾ) ಎಂದರು. ಅವನು ಕಡಲೆ ಬೀಜಗಳನ್ನು ತಿಂದ ಮೇಲೆ ಒಂದು ಮಡಿಕೆ ತುಂಬ ಹುಳಿಯಾದ ನೀರು ಕೊಟ್ಟು ಕುಡಿಯಂದರು. ಅವನು ಭಯದಿಂದಲೇ ಕುಡಿದನು. ಆಮೇಲೆ, ಪಕ್ಕದಲ್ಲಿದ್ದ ನದಿಯಲ್ಲಿ ಒದ್ದೆ ಮರಳಿನಲ್ಲಿ 4 ಅಡಿ ಆಳ ಆದ ಗುಂಡಿ ತೋಡಿ, ಅದರಲ್ಲಿ ಅವನನ್ನು ಕೂರಿಸಿ ಕುತ್ತಿಗೆಯವರಗೆ ಮರಳು ತುಂಬಿ ಅರ್ಧ ಗಂಟೆಯಮೇಲೆ ಕರೆದುಕೊಂಡು ಬನ್ನಿ ಎಂದರು. ಇಷ್ಟು ಛಳಿ ಜ್ವರ ಇರುವ ಮನುಷ್ಯನಿಗೆ ಈ ಚಿಕಿತ್ಸೆ ಮಾಡಿದರೆ, ಅವನು ಸಾಯುವುದು ಖಚಿತ ಎಂದು ಎಲ್ಲರೂ ಹಿಂಜರಿದರು. ಆದರೆ, ಸ್ವಾಮಿಯವರು ಪದೇ ಪದೇ ಗಟ್ಟಿಯಾಗಿ ಹೇಳಿ ಚಿಕಿತ್ಸೆ ಮಾಡಿಸಿದರು. ಗುಂಡಿಯಿಂದ ಅವನನ್ನ ಆಚೆ ತೆಗೆದ ತಕ್ಷಣದಿಂದ ಅವನ ವ್ಯಾಧಿ ಸಂಪೂರ್ಣವಾಗಿ ಗುಣ ಮುಖನಾಗಿ, ಸಾಮಾನ್ಯವಾದ ಆಹಾರವನ್ನೂ ಸೇವಿಸಿದನು. ಶ್ರಿ ಸ್ವಾಮಿಯವರು ಮಾಡಿದ ಈ ವಿಚಿತ್ರ ಚಿಕಿತ್ಸೆಯ ಲೀಲೆ, ಶ್ರೀ ಗುರು ಚರಿತ್ರೆಯಲ್ಲೂ, ಶ್ರೀ ಸಾಯಿಬಾಬ ಚರಿತ್ರೆಯಲ್ಲೂ, ಮತ್ತು ಶ್ರೀ ಅಕ್ಕಲಕೋಟ ಸ್ವಾಮಿಯವರ ಚರಿತ್ರೆಗಳಲ್ಲಿ ನೋಡ ಬೊಹುದು. ಅವಧೂತರಿಗೆಲ್ಲರಿಗೂ ಮೂಲವಾದ ಶ್ರೀ ದತ್ತಾತ್ರೇಯಸ್ವಾಮಿಯವರ ಲೀಲೆಗಳಲ್ಲಿ ಇದು ಪ್ರಧಾನವಾದದ್ದು.

ಮುದಿಗೇಡಿನ ಗ್ರಾಮಸ್ಥರು, ಸ್ವಾಮಿಯವರ ದಿವ್ಯ ಮಹಿಮೆಯ ವಿಚಾರ ಕೇಳಿದ್ದರು. ಆ ಗ್ರಾಮದವರ ಪ್ರಾರ್ಥನೆಯನ್ನು ಮನ್ನಿಸಿ ಸ್ವಾಮಿಯವರು ಮೊದಲನೇ ಬಾರಿ ಮುದಿಗೇಡು ಗ್ರಾಮಕ್ಕೆ ಬಂದರು. ಆ ಗ್ರಾಮದಲ್ಲಿ ಅಗಸನಾದ ರೋಶಯ್ಯ ಬಹಳ ಸಮಯದಿಂದ ಕೆನ್ನೆಯ ಹುಣ್ಣಿನಿಂದ ಬಳಲುತ್ತಿದ್ದ. ಅವನಿಗೆ ಒಂದು ಕೆನ್ನೆಯಿಂದ ಇನ್ನೊಂದು ಕೆನ್ನೆಯವರೆಗೆ ದೊಡ್ಡ ರಂಧ್ರವಿತ್ತು. ಯಾವಾಗಲೂ ಅವನ ಕೆನ್ನೆಯಿಂದ ಕೀವು(puss) ಸೋರುತ್ತಿತ್ತು, ಆದ್ದರಿಂದ ದುರ್ವಾಸನೆ ಬರುತ್ತಿತ್ತು. ದ್ರವಾಹಾರ ಬಿಟ್ಟು ಇನ್ನೇನೂ ತಿನ್ನಲು ಸಾಧ್ಯವಾಗಿರಲಿಲ್ಲ. ಆ ರಂಧ್ರದಲ್ಲಿ ಇಟ್ಟಿದ್ದ ಹತ್ತಿ ತೆಗೆದರೆ ತುಂಬಾ ಕೀವು (puss) ಸುರಿಯುತ್ತಿತ್ತು. ಯಾವ ವೈದ್ಯರಿಗಾಗಲಿ ಅಥವ ನಾಟಿ ವೈದ್ಯರಿಗಾಗಲಿ ಅವನ ಕೆನ್ನೆಗಳನ್ನು ಗುಣ ಪಡಿಸಲಾಗಲಿಲ್ಲ.

ಅವನ ದಯನೀಯ ಸ್ಥಿತಿಯನ್ನು ತಿಳಿದು ಶ್ರೀ ಸ್ವಾಮಿಯವರು ತಮ್ಮ ಎಡಗಾಲಿನ ಹೆಬ್ಬೇಟ್ಟಿನಿಂದ ಭೂಮಿಯಲ್ಲಿನ ಮಣ್ಣನ್ನು ತೆಗೆದು ಒಂದು ಬಟ್ಟೆಯಲ್ಲಿ ಮೂಟೆ ಕಟ್ಟಿ ಕೊಟ್ಟು, "ಆ ಮಟ್ಟಿ ನೂರಿ ರಂಧ್ರಾನಿಕಿ ಪೆಟ್ಟಿ ಕಟ್ಟು. ಮಣಿ ಕಟ್ಟು ಲಾವು ಚೇತೆಡು ಪೊಡವು

ವುಂಡೇ ಮೂಡು ಚಿಟಿ ಕೇಸರಿ ಕೊಮ್ಮಲು ತೆಚ್ಚಿ ವಾಮುಲ ದೊಡ್ಡಿ ಕಂಪ ಬಡೀಗಾ ನಾಟಿ ನೀಳ್ಳು ಪೋಯ್ಯಯ್ಯಾ! ನೀ ಕುರುಪು ಮಾನುತುಂದಿ" (ಆ ಮಣ್ಣನ್ನು ಅರೆದು ತೂತಿನೊಳಗೆ ಇಟ್ಟಿ ಕಟ್ಟು. ಮಣಿಕಟ್ಟಿನ ಗಾತ್ರ, ಒಂದು ಕಯ್ಯಿನಷ್ಟು ಎತ್ತರವಿರುವ 3 ಕೇಸರಿ ಕೊಂಬೆಗಳನ್ನ ತಂದು ದನದ ಕೊಟ್ಟಿಗೆಯಲ್ಲಿ (ದೊಡ್ಡಿ cowshed) ಹುಲ್ಲಿನ ಬಣವೆಯ ಹತ್ತಿರ ಒಂದರ ಪಕ್ಕ ಒಂದು ನೆಟ್ಟಿ ನೀರು ಹಾಕಯ್ಯಾ, ನಿನ್ನ ಕೆನ್ನೆ ಗುಣ ಆಗುತ್ತದೆ) ಎಂದು ಹೇಳಿದರು. ಒಂದು ವಾರದಲ್ಲೇ ಆ ಕೊಂಬೆಗಳಲ್ಲಿ ಹೊಸ ಚಿಗುರು ಬಂದಿತು ಬಂದಿತು, ಹೀಗಾಗಿ ಅವನ ಕೆನ್ನೆಗಳು ಪೂರ್ತಿಯಾಗಿ ಗುಣವಾದವು. ಸ್ವಾಮಿಯವರ ಈ ದಿವ್ಯ ಲೀಲೆ ನೋಡಿ ಮುದಿಗೇಡಿನ ಗ್ರಾಮಸ್ಥರ ಮನಸ್ಸಿನಲ್ಲಿ ಸ್ವಾಮಿಯವರಮೇಲಿದ್ದ ಭಕ್ತಿ ಶ್ರದ್ಧೆ ಇನ್ನೂ ಹೆಚ್ಚಿತು. ಅನೇಕ ಗ್ರಾಮಸ್ಥರು ಭಜನೆ ಮಾಡುತ್ತ, ಸ್ವಾಮಿಯವರಿಗೆ ಗೌರವದಿಂದ ಅವರ ಸೇವೆ ಮತ್ತು ಆತಿಥ್ಯವನ್ನು ಸಲ್ಲಿಸಿದರು.

ಕೊಲ್ಲಾ ಜಯರಾಮರಾಜು ಅವರು ಮೈ ಕೆರತ ಮತ್ತು ಛಳಿ ಜ್ವರದಿಂದಲೂ ಬಲಳುತ್ತಿದ್ದರು. ಈ ವಿಷಯ ಸ್ವಾಮಿಯವರಿಗೆ ಹೆಳಿಕೊಂ ಡಾಗ, 1 ಸೇರು ಕಡಲೇಕಾಯಿ ಬೀಜ ಬಲವಂತವಾಗಿ ತಿನ್ನಿಸಿ, ಮಜ್ಜಿಗೆ ಕುಡಿಸಿ, ನದಿಯಲ್ಲಿ ಮುಳುಗಿ ಬರಲು ಆಜ್ಞಾಪಿಸಿದರು. ಅವನು ಹಾಗೇ ಮಾಡಿದನು. ಅವನ ಕಡಿಯುವ(itching) ವ್ಯಾಧಿ ಮತ್ತು ಛಳಿ ಜ್ವರ ಪೂರ್ತಿಯಾಗಿ ಕಮ್ಮಿ ಆಗಿ, ಸ್ವಾಮಿಯವರ ಮೇಲೆ ಭಕ್ತಿ ಮತ್ತು ಗೌರವ ಹೆಚ್ಚಿದವು.

ಟೈಫಾಯಿಡ್ ಜ್ವರ ಬಂದ ಒಬ್ಬ ವ್ಯಕ್ತಿಗೆ ಸಾಯಿಬಾಬ ಹಾಲಿ ನಲ್ಲಿ ಬೆಯಿಸಿದ ಪಿಸ್ತ ಬೀಜವನ್ನು ತಿನ್ನಿಸಿ, ಇನ್ನೊಬ್ಬ ಭಕ್ತ ವಿರೋಚನದಿಂದ ಬಳಲುತ್ತಿದ್ದಾಗ, ಆ ಭಕ್ತನಿಗೆ ಕಡಲೇಕಾಯಿ ಬೀಜ ತಿನ್ನಿಸಿ, ನೀರು ಕುಡಿಸಿ ಅವರ ರೋಗಗಳನ್ನ ಗುಣಪಡಿಸಿದ ವಿಧಾನ ಮೇಲಿನ ಶ್ರೀ ಸ್ವಾಮಿಯವರ ವೈದ್ಯ ವಿಧಾನದೊಂದಿಗೆ ಹೊಂದಿಕೆಯಾಗುತ್ತದೆ. ನಿಷಿದ್ಧವಾದ ಆಹಾರದಿಂದ ರೋಗಗಳನ್ನು ಗುಣಪಡಿಸುವುದು ಅವಧೂತರಿಗೆಲ್ಲಾ ಮೂಲಪುರುಷರಾದ ಶ್ರಿ ದತ್ತಾತ್ರೇಯಸ್ವಾಮಿಯವರ ಲೀಲೆ. ಆದ್ದರಿಂದಲೇ, ಅವಧೂತರೆಲ್ಲರೂ ದತ್ತಾತ್ರೇಯರ ರೂಪ ಎಂದು ಶ್ರೀ ದತ್ತಭಾಗವತ ಹೇಳುತ್ತದೆ.

ಒಮ್ಮೆ 5 ವರ್ಷದ ಮಗುವಿಗೆ ಹೊಟ್ಟೆಯಲ್ಲಿ ಗೆಡ್ಡೆ ಬಂದು, ಹೊಟ್ಟೆ ವಿಪರೀತವಾಗಿ ಊದಿಕೊಂಡು ಎಷ್ಟು ಚಿಕಿತ್ಸೆ ಮಾಡಿಸಿದರೂ ಗುಣವಾಗಲಿಲ್ಲ. ಆ ಮಗುವನ್ನು ಸ್ವಾಮಿಯವರ ಹತ್ತಿರ

ಕರೆದುಕೊಂಡು ಬಂದರು. ಸ್ವಾಮಿಯವರು ಆ ಮಗುವನ್ನು ತಮ್ಮ ಕೈಗಳ ಮೇಲೆ ಬೋರಲಾಗಿ ಮಲಗಿಸಿಕೊಂಡು, ಇಳಿಯುವ ಭಾವಿಯ ಹತ್ತಿರ ಹೋದರು. ಆ ಮಗುವನ್ನು ಆ ಭಾವಿಯಲ್ಲಿ 1 ಮೀಟರ್ ಎತ್ತರದಿಂದ ನೀರಿನಮೇಲೆ ಬೋರ್ಲಾಗಿ ಎತ್ತಿ ಹಾಕಿದರು. ತಕ್ಷಣವೇ ಮಗುವನ್ನು ಮೇಲಕ್ಕೆ ಕರೆದು ಕೊಂಡುಬಂದು, ಅದರ ಹೊಟ್ಟೆಯ ಮೇಲೆ ಕಾಲಿನಿಂದ ಮೃದುವಾಗಿ ತುಳಿದರು. ಆಗ ಮಗುವಿನ ಬಾಯಿ ಮತ್ತು ಆಸನ ಪ್ರದೇಶದಿಂದ ಕೀವು(puss) ಮತ್ತು ರಕ್ತವು ಸುರಿದು ಹೋಯಿತು. ಕೆಲವೇ ದಿನಗಳಲ್ಲಿ, ಯಾವುದೇ ಔಷಧಿಗಳನ್ನು ಬಳಸದೆ ಮಗು ಸಂಪೂರ್ಣವಾಗಿ ಆರೋಗ್ಯ ಹೊಂದಿತು.

1975 ರಲ್ಲಿ ಶ್ರೀ ಸ್ವಾಮಿಯವರು ತಾಟಿಪತ್ರಿಯಲ್ಲಿರುವಾಗ ಒಬ್ಬ ಹುಚ್ಚು ಹಿಡಿದ ಯುವಕನನ್ನು ಹಗ್ಗದಿಂದ ಕಟ್ಟಿ ಸ್ವಾಮಿಯವರ ಬಳಿ ತಂದರು. ಆ ಯುವಕನಿಗೆ ಧುನಿಯಿಂದ ಹೊಗೆ ಅವನ ಮೇಲೆ ಬರುವ ಹಾಗೆ ನಿಲ್ಲಿಸಿ ಎಂದು ಆಜ್ಞಾಪಿಸಿದರು. 4 ಜನ ಆ ಯುವಕನನ್ನು ಬಲವಂತವಾಗಿ ಒಂದುವರ (1 1/2) ಘಂಟೆಯ ಸಮಯ ಆ ಹೊಗೆ ತಾಕುವ ಹಾಗೆ ನಿಲ್ಲಿಸಿದರು. ಬೆಳಗಾಗಲು ಮೊದಲು ಕ್ರಮೇಣ ಹುಚ್ಚು ಕಡಿಮೆಯಾಗಿ, 1 ವಾರದ ಹೊತ್ತಿಗೆ ಆ ಯುವಕ ಸಂಪೂರ್ಣವಾಗಿ ಸ್ವಸ್ಥನಾದನು.

ಒಮ್ಮೆ ಸ್ವಾಮಿಯವರು ವೇಲೂರು ರಾಮಾನಾಯುಡುಗೆ 15 ದಿನಗಳ ಕಾಲ ತಿರುವಳ್ಳೂರು ಮತ್ತು ಇತರ ಪವಿತ್ರ ಸ್ಥಳಗಳಿಗೆ ತೀರ್ಥಯಾತ್ರೆಗೆ ಹೋಗು ಎಂದು ಹೇಳಿದರು. ನಾಯುಡುರವರು ಒಪ್ಪಿಕೊಂಡು ಹೊರಟಾಗ, ಸ್ವಾಮಿಯವರು ಅವರನ್ನು ಕರೆದು ಎರಡು ವಿಷಯಗಳ ಬಗ್ಗೆ ಹೇಳಿ "ಇವಿ ಕೊನಿ ಮೀ ಮೊಲತ್ರಾಟಿಲೋ ಕಟ್ಟುಕೋ! ನೀಕು ಕನಿಪಿಂಚಿನ ಜಬ್ಬುಲು ನೀವು ಪೊಮ್ಮಂಟೇ ಪೋತಾಯಿ" (ಇವನ್ನ ಖರೀದಿಸಿ ನಿನ್ನ ಉಡಿದಾರದಲ್ಲಿ ಕಟ್ಟಿಕೊ. ನಿನಗೆ ಕಾಣಿಸಿದ ರೋಗಗಳು ನೀನು ಹೋಗು ಎಂದರೆ ಹೋಗುತ್ತವೆ) ಎಂದು ಅಭಯ ಕೊಟ್ಟರು. ಅವರು ಸ್ವಾಮಿಯವರು ಹೇಳಿದಂತೆ ಮಾಡಿದರು. ರೈಲಿ ನಲ್ಲಿ, ಛಳಿ ಜ್ವರದಿಂದ ಬಳಲುತ್ತಿದ್ದ ಒಬ್ಬ ಭಿಕ್ಷುಕಿಯನ್ನು ನೋಡಿ ನಾಯುಡುರವರು, ಆ ಜ್ವರವನ್ನು "ಹೋಗು" ಎಂದರು. ತಕ್ಷಣ ಆಕೆ ಸ್ವಸ್ಥರಾದರು. ಅದನ್ನ ನೋಡಿ ಅವರು ಬಹಳ ಆಶ್ಚರ್ಯ ಪಟ್ಟರು. ಅದೇ ವಿಧವಾಗಿ ಅನೇಕರಿಗೆ ಮಾತಿನಲ್ಲೇ ರೋಗಗಳನ್ನು ಗುಣಪಡಿಸಿ ಸ್ವಾಮಿಯವರು ಹೇಳಿದಂತೆ, 15 ದಿನಗಳು ಆದಮೇಲೆ ಮನೆ ಸೇರಿ, ಸ್ವಾಮಿಯವರ ದರ್ಶನ ಮಾಡಿದರು. ಸ್ವಾಮಿಯನ್ನು ಭೇಟಿ ಮಾಡಿದ 1/2 ಗಂಟೆಯ ನಂತರ ಒಬ್ಬ ವ್ಯಕ್ತಿ ಸಾಯುವ ಸ್ಥಿತಿಯಲ್ಲಿರುವ ತನ್ನ ಅನಾರೋಗ್ಯವಾದ ಎತ್ತನ್ನು ತಂದನು. ರಾಮಾ ನಾಯುಡು ಆ ಎತ್ತಿನ ಬಳಿ ಬಂದು "ರೋಗ ಹೋಗು" ಎಂದು ಹಿಂದೆ ಹೇಗೆ ಮಾಡುತ್ತಿದ್ದರೋ ಹಾಗೆ ಆಜ್ಞಾಪಿಸಿದರು. ಆದರೆ ಆ ಎತ್ತು ಸಾವನ್ನಪ್ಪಿತು. ಇಷ್ಟು ದಿನಗಳ ಕಾಲ ಕೇವಲ ಅವರ ಮಾತಿನಿಂದ ಗುಣಮಾಡಿಸಿದ ಶಕ್ತಿ ಈಗ ಏಕೆ ವ್ಯರ್ಥ ಆಯಿತೆಂದು ಅರ್ಥ ಆಗಲಿಲ್ಲ. ತಕ್ಷಣವೇ ಸ್ವಾಮಿಯವರನ್ನು ದರ್ಶನ ಮಾಡಿ ನಡೆದ ವಿಷಯವನ್ನು ಹೇಳಿದರು. ಆಗ ಸ್ವಾಮಿಯವರು "ಇಕ ಆ ವಸ್ತುವುಲು ನೀ ಮಾಟಕು ಪನಿಚೇಯವು" (ಇನ್ನು ಆ ವಸ್ತುಗಳು ನಿನ್ನ ಮಾತು ಕೇಳುವುದಿಲ್ಲ) ಎಂದು ಹೇಳಿದರು. ಯಾತ್ರೆ ಇಂದ ಹಿಂತಿರುಗಿದ ಮೇಲೆ, ತಮಗೆ ಪ್ರಸಾದಿಸಿದ ವಸ್ತು ಕೆಲಸ ಮಾಡಲಿಲ್ಲ ಎಂದರೆ, ಅದರ ದಿವ್ಯ ಶಕ್ತಿ ಮಾಯ ಆಯಿತೆಂದು ತಿಳಿದರು ನಾಯುಡುರವರು. ಎಲ್ಲರ ರೋಗಗಳು ಗುಣಮಾಡಿದ್ದು ಸ್ವಾಮಿಯವರ ಮಾತಿನ ಶಕ್ತಿಯೇ ಹೊರತು ಆ ವಸ್ತುಗಳಲ್ಲ ಎಂದು ನಾವು ಗುರ್ತಿಸಬೇಕು.

ಒಂದು ದಿನ, ಸ್ವಾಮಿಯವರು ತಮ್ಮ ಸೇವಕನಿಗೆ ಮಂತ್ರಿಸಿದ ಬಟ್ಟೆ ಕೊಟ್ಟು, ಇಂದಿನಿಂದ, ನೀನು ಯಾರನ್ನಾದರೂ ಸಂಕಟದಲ್ಲಿ ನೋಡಿದರೆ ಮಂತ್ರಹಾಕು ಎಂದರು. ಚೇಳು, ಹಾವು ಕಚ್ಚಿದ 13 ಜನರಿಗೆ, ಮಂತ್ರ ಹಾಕಿದ ತಕ್ಷಣ ಅವರು ಗುಣಮುಖರಾದರು. ಅನಂತರ ಮಂತ್ರ ಹಾಕಿಸಿಕೊಂಡವರು, ನೋವನ್ನು ಸ್ವಲ್ಪ ಸಮಯ ಅನುಭವಿಸಿದಮೇಲೆ,

ಗುಣಮುಖರಾದರು. ಆಗ, ಸೇವಕ ಸ್ವಾಮಿಯವರನ್ನ 'ಏಕೆ ಸ್ವಾಮಿ ಮೊದಲಿನ ಹಾಗೆ ಏಕೆ ತಕ್ಷಣ ಗುಣವಾಗುತ್ತಿಲ್ಲ' ಎಂದು ಕೇಳಿದಾಗ, ಸ್ವಾಮಿಯವರು "ಅಯ್ಯಾ! ಲಕ್ಷ ಪಾಪಾಲಕು ಒಕಸಾರಿ ತೇಲು ಕುಡುತುಂದಿ. ಆ ಪಾಪಫಲಂ ಕೊಂತೈನಾ ಅನುಭವಿಂಚಕುಂಡಾ ವೆಂಟನೇ ತಗ್ಗಿಸ್ತೇ ಪೈವಾಳ್ಳು ನೀವುಲೇನಿ ಸಮಯಂಲೋ ಮರಲಾ ಕುಟ್ಟಿಸ್ತಾರು. ಅಪ್ಪುಡು ಪೂರ್ತಿಗಾ ಅನುಭವಿಂಚಾಲ್ಸಿ ವಸ್ತುಂದಿ. ಇಪ್ಪುಡೇ ಕೊದ್ದಿಗಾ ಅನುಭವಿಸ್ತೇ ಸರಿಪೋತುಂದಿ ಗದಾ!" **(ಅಯ್ಯಾ! ಲಕ್ಷ ಪಾಪ ಮಾಡಿದ ಮೇಲೆ ಒಮ್ಮೆ ಚೇಳು ಕುಟುಕುತ್ತೆ. ಆ ಪಾಪದ ಫಲ ಸ್ವಲ್ಪವಾದರು ಅನುಭವಿಸದೇ ತಕ್ಷಣ ಗುಣಮಾಡಿದರೇ, ಮೇಲಿನವರು ನೀನಿಲ್ಲದ ಸಮಯದಲ್ಲಿ ಮತ್ತೆ ಕುಟುಕಿಸುತ್ತಾರೆ. ಆಗ, ಪೂರ್ತಿಯಾಗಿ**
34 **ಅನುಭವಿಸಬೇಕಾಗುತ್ತದೆ. ಈಗಲೇ ಸ್ವಲ್ಪ ಅನುಭವಿಸಿದರೇ ಸರಿಹೋಗುತ್ತದೆ ಅಲ್ಲವೆ?) ಎಂದರು ಸ್ವಾಮಿಯವರು. ಕರ್ಮ ಫಲ ಹೇಗೆ ಕೆಲಸ ಮಾಡುತ್ತದೆ ಮತ್ತು ಸದ್ಗುರುಗಳು ನಮಗೆ ಆ ತೊಂದರೆಗಳಿಂದ ಹೇಗೆ ತಪ್ಪಿಸುತ್ತರೋ ನೋಡಿ!**

ಸ್ವಾಮಿಯವರು ಜೀವಂತರಾಗಿದ್ದಾಗಲಿಂದ 1986 ವರೆಗೆ ಮಲ್ಲಿಕ್ ವೆಂಕಯ್ಯ ಪ್ರತಿ ನಿತ್ಯ ಸ್ವಾಮಿಯವರ ಧುನಿಗೆ ಜಡೆಕಳ್ಳಿಯ ಗಿಡವನ್ನು ಕಡಿದು ತರುತ್ತಿದ್ದನು. ಈ ಗಿಡ ತುಂಬಾ ಅಪಾಯಕರವಾದದ್ದು. ಈ ಗಿಡದ ಹಾಲು ನಮ್ಮ ಶರೀರದ ಮೇಲೆ ಬಿದ್ದರೆ, ಬಿದ್ದ ಜಾಗವೆಲ್ಲ ಬೊಬ್ಬೆ ಎದ್ದು ಹುಣ್ಣಾಗುತ್ತವೆ. ಪಶುಗಳು ಈ ಗಿಡಕ್ಕೆ ತಮ್ಮ ಶರೀರ ಉಜ್ಜಿದಾಗ, ಆ ಗಿಡದ ಹಾಲು ಸೋಕಿದರೇ, ಹಾಲು ಸೋಕಿದ ಜಾಗದಲ್ಲಿ ಚರ್ಮ ಸುಲಿದು ಹುಣ್ಣಾಗುತ್ತುದೆ. ಆದರೇ ವೆಂಕಯ್ಯ ಆ ಗಿಡವನ್ನು ಕಡಿಯುತ್ತಿದ್ದಾಗಲೀ, ಅಥವ ಗಾಡಿಯಲ್ಲಿ ಸಾಗಿಸುವಾಗ ಜಡೆಕಳ್ಳಿಯ ಹಾಲು ಅವನ ಶರೀರದ ಮೇಲೆಲ್ಲಾ ಬಿದ್ದರೂ ಬೊಬ್ಬೆ ಏಳುತ್ತಿರಲಿಲ್ಲ. ಎಷ್ಟೋ ಬಾರಿ ಆ ಹಾಲು ವೆಂಕಯ್ಯನ ಕಣ್ಣಿನ ಒಳಗೆ ಬೀಳುತ್ತಿತ್ತು. ಕಣ್ಣುಗಳು ಕೆಂಪಾಗಿ ಊದಿ ಬಿಡುತ್ತಿದ್ದವು. ಪೆನ್ಸಿಲಿನ್ (Penicillin) ಮತ್ತು ಕಣ್ಣಿನ ಔಷಧಿ ಹಾಕಿದರೆ, ಎರಡನೇ ದಿನಕ್ಕೆ ಕಣ್ಣುಗಳು ಮಾಮೂಲು ಸ್ಥಿತಿಗೆ ಬರುತ್ತಿತ್ತು. ನಿಜವಾಗಿ ಜಡೆಕಳ್ಳಿಯ ಹಾಲು ಕಣ್ಣೊಳಗೆ ಬಿದ್ದರೆ ದೃಷ್ಟಿ ಹೋಗುತ್ತದೆ ಎಂದು ನಂಬಿಕೆ.

ಒಮ್ಮೆ ಶ್ರೀ ಸ್ವಾಮಿಯವರು ರಾವೂರು ತಾಲ್ಲೂಕಿನ ಮುದಿಗೇಡು ಗ್ರಾಮದಲ್ಲಿ ಬೀಡದೆ ಮಾಡಿಕೊಂಡಿದ್ದರು. ಆ ಸಂದರ್ಭದಲ್ಲಿ ಒಂದು ಮಹಿಳೆ ಅತಿ ತೀವ್ರವಾದ ಮಹಿಳೆಯರ ಆರೋಗ್ಯ ಸಮಸ್ಯೆಯಿಂದ (Leukorrhea - ಬಿಳಿ ವಿಸರ್ಜನೆ) ಬಳಲುತ್ತಿದ್ದಳು. ಅವಳನ್ನು, ಸ್ವಾಮಿಯವರ ಹತ್ತಿರ ಕರೆದುಕೊಂಡು ಬಂದರು. ಸ್ವಾಮಿಯವರ ಹತ್ತಿರ ಬರುವುದಕ್ಕಿಂತ ಮುಂಚೆ, ಎಷ್ಟೋ ವೈದ್ಯರನ್ನು ನೋಡಿ, ಪ್ರಯೋಜನ ಇಲ್ಲವಾದಾಗ, ಸ್ವಾಮಿಯವರ ಹತ್ತಿರ ಬಂದರು. 2-3 ದಿನಗಳು ಕಳೆದವು ಆದರೂ ಸ್ವಾಮಿಯವರು ಏನೂ ಹೇಳಲಿಲ್ಲ. ಮೂರನೇ ರಾತ್ರಿ, ಎಲ್ಲಾ ಮಲಗಿದ ಮೇಲೆ, ಈ ರೋಗವನ್ನು ಅನುಭವಿಸುವುದಕ್ಕಿಂತ, ಸ್ವಾಮಿಯ ಸನ್ನಿಧಿಯಲ್ಲಿ ಸಾಯುವುದು ಮೇಲು ಎಂದು ಆ ಮಹಿಳೆ ಧುನಿಯಲ್ಲಿ ಧುಮುಕಿದಳು. ಆದರೆ, ಆಕೆಯ ಶರೀರ ಆಗಲಿ,

ಬಟ್ಟೆಗಳಾಗಲಿ ಸುಡಲಿಲ್ಲ. ಆದರೆ, ಅಂದಿನಿಂದ ಆಕೆಯ ರೋಗ ಶಾಶ್ವತವಾಗಿ ಗುಣವಾಯಿತು.

ಥೈರಾಯಿಡ್ ಕಾನ್ಸರ್ ಇಂದ ಬಳಲುತ್ತಿದ್ದ ಪಾಲಕೊಲ್ಲು ಸುಬ್ಬಮ್ಮನವರಿಗೆ ರಾಯವೇಲೂರಿನಲ್ಲಿ ಶಸ್ತ್ರಚಿಕಿತ್ಸೆ (Operation) ಮಾಡಿಸಿದರು. ಸುಬ್ಬಮ್ಮನಿಗೆ ಶಸ್ತ್ರಚಿಕಿತ್ಸೆಯ ಭಯ ಇದ್ದುದರಿಂದ ಸ್ವಾಮಿಯವರನ್ನು ಬಹಳ ಸ್ಮರಣೆ ಮಾಡಿದರು. ಶಸ್ತ್ರಚಿಕಿತ್ಸೆ ಪೂರ್ಣಗೊಳ್ಳುವ ತನಕ, ಸ್ವಾಮಿಯವರು ತನ್ನ ಪಕ್ಕದಲ್ಲಿಯೇ ಕುಳಿತಿರುವ ಹಾಗೆ ಸುಬ್ಬಮ್ಮನಿಗೆ ದರ್ಶನ ಕೊಟ್ಟರು. ಸ್ವಾಮಿಯವರು ತನ್ನ ಪಕ್ಕದಲ್ಲೇ ಇದ್ದಾರೆಂಬ ಧೈರ್ಯದಿಂದ, ಆಕೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು. ಶ್ರೀ ಸ್ವಾಮಿಯವರ ಕೃಪೆಯಿಂದ ಆಕೆ 13 ವರ್ಷಗಳ ಕಾಲ ಬದುಕಿದ್ದರು.

ಬಾಲ್ಯದಿಂದ 5 ವರ್ಷದವರೆಗೆ ನಾಗುಲವೆಲ್ಲಟ್ಟುರು ನಿವಾಸಿಯಾಗಿದ್ದ ಕೂಚಿ ಪಟ್ಟಭಿ ರಾಮಯ್ಯ ಛಳಿ ಜ್ವರ, ವಿರೋಚನದಿಂದ ಬಳಲುತ್ತಿದ್ದರು. ಅವರ ತಂದೆ ತಾಯಿ ಎಲ್ಲಾ ಚಿಕಿತ್ಸೆಗಳು, ಮಂತ್ರ, ತಂತ್ರ ಮಾಡಿಸಿದರೂ ಮಗುವಿಗೆ ಉಪಯೋಗ ಆಗಲಿಲ್ಲ. ಮಗು ಬದುಕುವುದಿಲ್ಲ ಎನ್ನುವ ನಿರ್ಣಯಕ್ಕೆ ಬಂದು, ಕೊನೇ ಪ್ರಯತ್ನ ಎಂದು ಸ್ವಾಮಿಯವರು ಬದ್ವೇಲಿನಲ್ಲಿ ಬಿಟ್ಟಿದ ಮೇಲಿದ್ದಾಗ ಮಗುವನ್ನು ಕರೆದುಕೊಂಡು ಬಂದರು. ಆಗ ಸ್ವಾಮಿಯವರು "ಅಬ್ಬೋ ಆಯನಕೇಮಯ್ಯಾ, ಮಿದ್ದೆ ಮೀದ ಮಿದ್ದೆ ಕಡುತಾಡು. ಬಾಗುಂಟಾಡುಲೇ" (ಅಬ್ಬೋ, ಇವನಿಗೇನಯ್ಯಾ, ಇವನು ಹಲವಾರು ತಾರಸಿ ಮನೆಗಳನ್ನು ನಿರ್ಮಿಸುತ್ತಾನೆ) ಎಂದು ಹೇಳಿ ಹಸೀ ಕಡಲೇ ಬೀಜ ತಿನ್ನಿಸಿ, ಬಟ್ಟೆಯಿಂದ ಮಂತ್ರಿಸಿದರು. ಅಂದಿನಿಂದ ಆ ಹುಡುಗ ಸಂಪೂರ್ಣವಾಗಿ ಆರೋಗ್ಯವಂತನಾದನು.

ಶ್ರೀ ಸ್ವಾಮಿಯವರ ಮಾತಿನ ಮೇಲೆ ಪಟ್ಟಾಭಿ ರಾಮಯ್ಯನಿಗೆ ಎಷ್ಟು ವಿಶ್ವಾಸವಿತ್ತೆಂದು ಈ ಸನ್ನಿವೇಶದಿಂದ ತಿಳಿಯುತ್ತದೆ. ಸ್ವಾಮಿಯವರ ಸಲಹೆ ಕೇಳದೆ 1971 ರಲ್ಲಿ ಒಂದು ತಾರಸೀ ಮನೆ ಕಟ್ಟಲು ಆರಂಭಿಸಿದರು. ಗೋಡೆಗಳು ನಿರ್ಮಿಸಿ ಎಂಟು ತಿಂಗಳು ಪೂರ್ತಿ ಆದರೂ, ಚಪ್ಪಡಿ (Slab) ಹಾಕುವುದಕ್ಕೆ ಪರಿಸ್ಥಿತಿಗಳು ಸಹಕರಿಸಲಿಲ್ಲ. ಕೊನೆಗೆ ತನ್ನ ತಪ್ಪನು ಗ್ರಹಿಸಿ, ಸ್ವಾಮಿಯವರೊಂದಿಗೆ ಬೇಡಿಕೊಂಡನು. ಆಗ ಸ್ವಾಮಿಯವರು "ಅಯ್ಯಾ, ಅದಿ ಪೀನುಗುಲಮಟ್ಟು, ಆ ಸ್ಥಲಂ ವದಲಿ ನಾಲುಗು ಮೂರಲು ದಕ್ಷಿಣಂ ಪಡಮರ ಜರಿಗಿ ಕಟ್ಟುಕೋ ಅಂತಾ ಬಾಗುಂಟುಂದಿ" (ಅಪ್ಪಾ, ಇದು ಮೃತ ದೇಹಗಳ ಸಮಾಧಿ ಮಾಡಿರುವ ಜಾಗ, ಆ ಸ್ಥಳ ಬಿಟ್ಟು ನಾಲಕ್ಕು ಮೊಳ ದಕ್ಷಿಣ - ಪಶ್ಚಿಮಕ್ಕೆ ಜರುಗಿ ಅಲ್ಲಿ ಕಟ್ಟು, ಎಲ್ಲಾ ಚೆನ್ನಾಗಿರುತ್ತದೆ) ಎಂದರು. ತಕ್ಷಣ, ಪಟ್ಟಾಭಿ ರಾಮಯ್ಯನವರು, ಹತ್ತು ಸಾವಿರ ಖರ್ಚು ಮಾಡಿ ಕಟ್ಟಿಸಿದ ಗೋಡೆಗಳನ್ನು ತೆಗೆದು, ಸ್ವಾಮಿಯವರು ಹೇಳಿದಂತೆ ನಿರ್ಮಾಣ ಕಾರ್ಯ ಪ್ರಾರಂಭಿಸಿ, ಪೂರ್ತಿ ಮಾಡಿದರು. ಈಗ, ಮಕ್ಕಳು ಮರಿಗಳೊಡನೆ ಸುಖವಾಗಿದ್ದಾರೆ.

ನೂತೇಟಿ ಶ್ರೀ ರಾಮಯ್ಯನವರ ನಿಂಬೇ ಗಿಡಗಳಲ್ಲಿ ಎಷ್ಟು ಕಾಲ ಆದರೂ ಹಣ್ಣು ಬಂದಿರಲಿಲ್ಲ. ಆಗ ಅವರು ಸ್ವಾಮಿಯವರನ್ನು ಕೇಳಿಕೊಂಡರು. "ಚೆರುವು ದಗ್ಗರ ವಾಗುಲೋ ನೀಳ್ಳು ತೆಚ್ಚಿ ಆ ನೀಳ್ಳು ಕ್ರಿಂದ ಪಡಕುಂಡಾ ಪ್ರತಿ ಚೆಟ್ಟು ಪೈನ ಒಕ ಉಗ್ಗಿನ್ನೆಡು

ಪೋಯಂಡಿ. ಚೆಟ್ಟು ಬಾಗ ಕಾಪು ಕಾಸ್ತಾಯಿ" (ಕೆರೆಯ ಹತ್ತಿರ ಇರುವ ಕಾಲುವೆಯ ನೀರನ್ನು ಕೆಳಗೆ ಚಲ್ಲದೇ, ಪ್ರತಿ ಗಿಡದ ಮೇಲೆ ಚುಮುಕಿಸಿ. ಗಿಡಗಳ್ಳಲ್ಲಿ ಕಾಯಿಗಳು ಚೆನ್ನಾಗಿ ಬರುತ್ತವೆ) ಎಂದು ಸ್ವಾಮಿಯವರು ಹೇಳಿದರು. ಅವರು ಹಾಗೆ ಮಾಡಿ, ಮಿಕ್ಕ ನೀರನ್ನು ಭಾವಿಯಲ್ಲಿ ಹಾಕಿದರು. ಈ ನಿಂಬೆಯ ಗಿಡಗಳಲ್ಲದೆ, ಭಾವಿಯ ನೀರು ಹರಿದ ಬೇರೆ ಗಿಡಗಳಿಂದಲೂ ಚೆನ್ನಾಗಿ ಫಸಲು ಬಂದಿತು.

ಪಸುಪುಲೇಟಿ ಲಕ್ಷ್ಮಮ್ಮನವರಿಗೆ ಸಂತಾನ ಇರಲಿಲ್ಲ, ಹುಟ್ಟಿದ ಮಕ್ಕಳೆಲ್ಲಾ ಮರಣಿಸಿದರು. ಆಗಾಗ ಸ್ವಾಮಿಯವರ ದರ್ಶನ ಮಾಡುತ್ತಿದ್ದರು. ಯಾವಾಗ ಹೋದರೂ ಸ್ವಾಮಿಯವರು ಅವರನ್ನು ತಮ್ಮ ಹತ್ತಿರವೇ ಸ್ವಲ್ಪ ಕಾಲ ಇರುವುದಕ್ಕೆ ಹೇಳುತ್ತಿದ್ದರು. ಹಾಗೆ ಮಾಡುವುದರಿಂದ ಅವರಿಗೆ ಕೋಟ್ಯಾಂತರ ಲಾಭ ಆಗುತ್ತದೆ ಎಂದು ಹೇಳುತ್ತಿದ್ದರು. ಒಮ್ಮೆ ಸ್ವಾಮಿಯವರು ಲಕ್ಷಮ್ಮನಿಗೆ ಒಂದು ತಿಂಗಳು ಎರಡು ದಿನಗಳು ಭಜನೆ ಮಾಡಿದರೆ, ದೇವರ ಲೆಖ್ಖಕ್ಕೆ ಬರುತ್ತೀಯ ಎಂದು ಸ್ವಪ್ನ ದಲ್ಲಿ ದರ್ಶನ ಕೊಟ್ಟು ಹೇಳಿದರು. ಅವರು ಸ್ವಾಮಿಯವರು ಹೇಳಿದಂತೆ ಸ್ವಾಮಿಯವರ ಆಶ್ರಮಕ್ಕೆ ಬಂದು ಭಜನೆ ಮಾಡಿದರು. ಸ್ವಾಮಿಯವರು ಹೇಳಿದಷ್ಟು ದಿನಗಳು ಕಳೆದರೂ ಆಕೆಯನ್ನು ಮನೆಗೆ ಹೋಗುವುದಕ್ಕೆ ಅಪ್ಪಣೆ ಕೊಡಲಿಲ್ಲ. ಮಂಚಹಿಡಿದು ಮಲಗಿರುವ ತನ್ನ ತಾಯಿಯ ಸೇವೆ ಮಾಡಲು ಹೋಗಬೇಕೆಂದು ಅನುಮತಿ ಕೇಳಿದರೆ, ಸ್ವಾಮಿಯವರು ಒಪ್ಪಿಕೊಳ್ಳದೆ, "ಎವರಿಕೈನಾ ಅರ್ಧರೂಪಾಯಿ ಇಚ್ಚಿ ಸೇವ ಚೇಯಿಂಚಮನು. ನೀಕು ಇಚ್ಚಟಿ ಲಕ್ಷಲು ಲಾಭಂ ವಸ್ತುಂದಿ" (ಯಾರಿಗಾದರು ಅರ್ಧ ರೂಪಾಯಿ ಕೊಟ್ಟು ಸೇವೇ ಮಾಡಿಸು, ನಿನಗೆ ಇಲ್ಲಿ ಲಕ್ಷ ಲಾಭ ಬರುತ್ತದೆ) ಎಂದರು. ಆಕೆಯ ಅಣ್ಣ ಬಂದರೂ ಅದೇ ಮಾತು ಹೇಳಿ ಕಳುಹಿಸಿದರು. ಆಕೆಯ ಅಣ್ಣ ಹೊರಟು ಹೋದ ಮೇಲೆ ಮತ್ತೆ ಸ್ವಾಮಿಯವರ ಸೇವಕರ ಮೂಲಕ ಹೇಳಿಸಿದರು. ಅದಕ್ಕೆ ಸ್ವಾಮಿಯವರು "ಆಮೆ ಕಾಳ್ಳಕು ಕುರುಪುಲು ಲೇಚಿ ಆಡ ಪಡುಂದನಿ ವಾಳ್ಳಕು ಚೆಪ್ಪಿ ಪಂಪು" (ಅಕೇಯ ಕಾಲಿನಲ್ಲಿ ಒಂದು ಹುಣ್ಣಾಗಿ ಬಹಳ ಬಳಲುತ್ತಿದ್ದಾಳೆ ಎಂದು ಹೇಳಿ ಕಳುಹಿಸು) ಎಂದರು. ಆದರೆ ನಿಜವಾಗಿಯೂ, ಆಕೆಗೆ ಯಾವ ಹುಣ್ಣೂ ಇರಲಿಲ್ಲ.

ಆಶ್ಚರ್ಯಕರವಾಗಿ ಬೆಳಗಾಗುವ ಹೊತ್ತಿಗೆ ಅವಳ ಪಾದದ ಕೀಲಿನ ಮೇಲೆ (Ankle) ನಿಂಬೇಕಾಯಿನ ಗಾತ್ರ ಹುಣ್ಣುಗಳಾದವು. ಈ ವಿಷಯ ಸ್ವಾಮಿಯವರಿಗೆ ತಿಳಿಸಿದಾಗ ಅವರು, "ಚೂಡವಯ್ಯಾ! ಭಜನ ಚೇಸುಕುಂಟೂ ಈಡ ಪಡುಂಡಮಂಟೇ ದುರ್ಬುದ್ಧಿ ಮಾಟಲು ಮಾಟ್ಲಾಡುತುಂದಿ" (ನೋಡಪ್ಪಾ! ಭಜನೇ ಮಾಡುತ್ತಾ ಇಲ್ಲೇ ಇರು ಎಂದರೆ ದುರ್ಬುದ್ಧಿ ಮಾತುಗಳನ್ನು ಆಡುತ್ತಿದ್ದಾಳೆ) ಎಂದರು. ಸ್ವಾಮಿಯವರ ಮಾತು ಕೇಳದೆ ಮನೆಗೆ ಹೋಗಬೇಕು ಎಂದು ಯೋಚನೇ ಮಾಡಿದ್ದಕ್ಕೆ ತಕ್ಕ ಶಸ್ತಿ ಆಯಿತೆಂದು ಪಶ್ಚಾತ್ತಾಪ ಪಟ್ಟಳು. ಆದಿನ ಸಾಯಂಕಾಲದ ವೇಳೆಗೆ, ಸ್ವಾಮಿಯವರು ಆಕೆಯನ್ನು ಪ್ರೀತಿಯಿಂದ ಮಾತನಾಡಿಸುತ್ತಾ, "ಏಮಮ್ಮಾ ಕುರುಪುಲು ಲೇಚಾಯಾ? ಪೋತಾಯಿಲೇ!" (ಏನಮ್ಮಾ! ಹುಣ್ಣಾಯಿತೇ? ಹೋಗತ್ತೆ ಬಿಡು) ಎಂದು ತಮ್ಮ ಅಮೃತ ಹಸ್ತಗಳಿಂದ ಸ್ಪರ್ಷಿಸಿದರು. ಎರಡು ದಿನಗಳಲ್ಲಿ ಯಾವ ಔಷಧಿಯೂ ಬಳಸದೇ ಹುಣ್ಣು

ಮಾಯವಾದವು. ಅವತ್ತಿನಿಂದ ಲಕ್ಷ್ಮಮ್ಮನವರು ಅನೇಕ ಬಾರಿ ಸ್ವಾಮಿಯವರನ್ನು ದರ್ಶನ ಮಾಡಿ ಸೇವೆ ಮಾಡಿದರು.

ತಲಪೂರಿನ ಕರಣಿಕರು ಜಿ.ವಿ. ರಮಣಯ್ಯನವರು ತಮಗಾಗಿದ ಸ್ವಾಮಿಯವರ ಅನುಭವ ಹೀಗೆ ತಿಳಿಸಿದರು- "ಕಳೆದ 20 ವರ್ಷಗಳಿಂದ ಹೊಟ್ಟೆಯ ನೋವಿನ ಕಾರಣದಿಂದ ಎಷ್ಟೋ ಡಾಕ್ಟರುಗಳಿಗೆ, ನಾಟಿ ವೈದ್ಯರಿಗೆ ತೋರಿಸಿದೆ. ಆದರೆ ಯಾವುದರಿಂದಲೂ ಪ್ರಯೋಜನ ಆಗಲಿಲ್ಲ. ಒಂದು ದಿನ ಯಾವುದೋ ವಿಷಯವಾಗಿ ಸ್ವಾಮಿಯವರನ್ನು ಪ್ರಶ್ನೆ ಕೇಳಬೇಕೆಂದು ಬಾಳೆಹಣ್ಣು ತಾಂಬೂಲ ಮತ್ತು ದಕ್ಷಿಣೆ ತೆಗೆದುಕೊಂಡು ಹೋದೆ. ಸ್ವಾಮಿಯವರು ನಾನು ಎಷ್ಟು ಕೇಳಿಕೊಂಡರೂ ಬಾಳೇಹಣ್ಣನ್ನು ಸ್ವೀಕರಿಸದೇ, ಅದನ್ನ ಅಗ್ನಿಕುಂಡಕ್ಕೆ ಹಾಕಿಸಿದರು. ಆಶ್ಚರ್ಯವೇನೆಂದರೆ, ನಾನು ಕೇಳಬೇಕೆಂದುಕೊಂಡ ಪ್ರಶ್ನೆ ಬಿಟ್ಟು ನನ್ನ ಹೊಟ್ಟೆ ನೋವಿನ ವಿಚಾರ ಕೇಳಿದೆ.

ಆಗ ಸ್ವಾಮಿಯವರು, "ಊರಿಕಿ ಉತ್ತರಂಗಾ ನುಂಡು ಒಕರಿಂಟ್ಲೋ ರಾತ್ರಿ ಝಾಮು ಪೊದ್ದುಪೋಯಾಕ (9.30) ಭೊಜನಾನಿಕಿ ವಸ್ತಾನನಿ ಮುಂದುಗಾ ಚೆಪ್ಪಕುಂಡಾ ವೆಳ್ಳಿ ಭೋಂಚೇಯಿ, ನೀ ಕಡುಪುನೊಪ್ಪಿ ಪೋತುಂದಿ" (ಊರಿಗೆ ಉತ್ತರದಲ್ಲಿರುವ ಒಬ್ಬರ ಮನೆಯಲ್ಲಿ ಕತ್ತಲೆ ಆದಮೇಲೆ ರಾತ್ರಿ 9:30 ಗೆ ಊಟಕ್ಕೆ ಬರುತ್ತೇನೆ ಎಂದು ಹೇಳದೆ ಹೋಗಿ ಊಟ ಮಾಡಿ ಬಾ. ನಿನ್ನ ಹೊಟ್ಟೆ ನೋವು ನಿವಾರಣೆ ಆಗುತ್ತದೆ) ಎಂದರು. ಇದು ಅವಧೂತ ವೈದ್ಯ ವಿಧಾನ ಎಂದು ತಿಳಿಯದೇ, ಸ್ವಾಮಿಯವರು ಏನೋ ಹೇಳಿದರೆಂದು ಅವರ ಮಾತನ್ನು ನಿರ್ಲಕ್ಷ್ಯ ಮಾಡಿದೆ. ಆ ಹೊಟ್ಟೆ ನೋವು ನನ್ನನು ಬಿಡಲಿಲ್ಲ. ಕೊನೆಗೆ ಸ್ವಾಮಿಯವರು ತಮ್ಮ ಮಾತು ಹೇಗೆ ವ್ಯರ್ಥ ಆಗುವುದಕ್ಕೆ ಬಿಡುತ್ತಾರೆ? ಒಂದು ದಿನ ಮನೆಯಲ್ಲಿ ಯಾರು ಇರಲಿಲ್ಲ. ರಾತ್ರಿ 9:30 ಗಂಟೆಗೆ ಇದ್ದಿಲು ವಲೆ (ಚಾರ್ಕೋಲ್) ಹಚ್ಚುತ್ತಿದ್ದೆ. ಆಗ ನಮ್ಮ ಗ್ರಾಮದ ಉತ್ತರ ಭಾಗದಲ್ಲಿದ್ದ ಪೂಜಾರಿ ನಮ್ಮ ಮನೆಗೆ ಬಂದು ನಾನು ಅಡಿಗೆ ಮಾಡುತ್ತಿರುವುದನ್ನು ನೋಡಿ, ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋಗಿ ಊಟ ಭಡೆಸಿದರು. ಅಲ್ಲಿ ಊಟ ಮಾಡಿದ್ದು ಬರೀ ಒಂದು ಚಟ್ನಿ ಮತ್ತು ಮಜ್ಜಿಗೆ ಅನ್ನ ಅಷ್ಟೆ! ಆದರೇ ಅವತ್ತಿನಿಂದ ನನ್ನ ಹೊಟ್ಟೆ ನೋವು ಅದೃಷ್ಯವಾಗಿ ನಾನು ಏನೇ ತಿಂದರೂ ಜೀರ್ಣಿಸುಕೊಂಡು ಅರೋಗ್ಯವಂತನಾಗಿದ್ದೆನೆ. ಅವರ ದಿವ್ಯವಾಕ್ಕು ಮತ್ತು ಅವರ ಅನುಗ್ರಹಬಲ ನಾನು ಹೇಗೆ ವರ್ಣಿಸಬಲ್ಲೆ?

ಓಂ ನಾರಾಯಣ - ಆದಿ ನಾರಾಯಣ

ಅವಧೂತ ಲೀಲ

ಅಧ್ಯಯ - 12

ಸಜ್ಜನ ವಂದಿತರು.

ಜ್ಞಾನಿಯನ್ನು ಜ್ಞಾನಿಯೇ ಗುರ್ತಿಸಬಲ್ಲರು ಎಂದು ರಮಣಮಹರ್ಷಿಯವರ ವಾಕ್ಯ. ವಜ್ರದ ಮೌಲ್ಯ ಒಬ್ಬ ಅಧಿಕೃತ ವಜ್ರದ ವ್ಯಾಪಾರಿಗೇ ಗೊತ್ತಿರತ್ತಾಗಲಿ ಬದಿನೇಕಾಯಿ ಮಾರುವವನಿಗೇನು ಗೊತ್ತು? ಶ್ರೀ ಸ್ವಾಮಿಯವರು ಬಹಳ ಚೆನ್ನಾಗಿ ಪ್ರಶ್ನೆಗಳಿಗೆ ಸಮಾಧಾನ ಕೊಡುತ್ತಿದ್ದರು. ಆ ಕಾಲದಲ್ಲಿ, ಋಷೀಕೇಶ್ ನಿಂದ ಶ್ರೀ ಚಿದಾನಂದ ಸ್ವಾಮಿಯವರು, ಶ್ರೀ ದೇವಾನಂದ ಸ್ವಾಮಿಯವರು ಬಂದು ಶ್ರೀ ಸ್ವಾಮಿಯವರನ್ನು ಪರಬ್ರಹ್ಮ ಸ್ವರೂಪಿಗಳೆಂದು ಗುರ್ತಿಸಿ, ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಹಾಗೆ ಆಚಾರ್ಯ ಶ್ರೀ ಭರದ್ವಾಜರವರು, ಸ್ವಾಮಿಯವರನ್ನು ದರ್ಶನ ಮಾಡಿದ ಮೊದಲನಯ ದಿನದಿಂದಲೇ ತಮ್ಮ ಪರಿಚಯದವರೆಲ್ಲರಿಗೂ ಸ್ವಾಮಿಯವರ ದರ್ಶನ ಮಾಡಿ ಎಂದು ಹೇಳಿ, ಶ್ರೀ ಸ್ವಾಮಿಯವರು ಭೂಮಿಯಮೇಲೆ ಆವಿರ್ಭವಿಸಿದ ದೈವ ಸ್ವರೂಪರೆಂದು, ಕೀರ್ತಿಸುತ್ತಿದ್ದರು. ಇದೇ ರೀತಿ ಅನೇಕ ಅವಧೂತರೂ ಬಂದು ಸ್ವಾಮಿಯವರ ದರ್ಶನ ಮತ್ತು ಅವರ ಆಶಿರ್ವಾದಗಳನ್ನು ಪಡೆದು ಹೋಗುತ್ತಿದ್ದರೆಂದು ಸ್ವಾಮಿಯವರ ಸೇವಕರು ಹೇಳಿದರು. ಆದರೆ ಆ ಅವಧೂತರ ಹೆಸರಾಗಲಿ, ವಿಳಾಸ ಆಗಲಿ, ಅಥವ ಅವರ ಸಂಭಾಷಣೆಗಳನ್ನು ಲಿಖಿತವಾಗಿ ದಾಖಲಿಸಲಿಲ್ಲ.

ಗೋಪಾರಂನಲ್ಲಿ ವಾಸಿಸುತ್ತಿದ್ದ ಪಾಲಕೊಂಡ ಸುಬ್ಬಾರೆಡ್ಡಿಯವರು ಹೀಗೆ ಹೇಳಿದರು. "ಆ ದಿನಗಳಲ್ಲಿ ಶ್ರೀ ಸ್ವಾಮಿಯವರ ದರ್ಶನಕ್ಕೆ ಹೆಚ್ಚು ಜನ ಬರುತ್ತಿರಲಿಲ್ಲ. ಅವರ ಧುನಿ, ಗೋಣೀ ಚೀಲಗಳು, ತಾಟಿಯ ಎಲೆ ನೋಡಿ ಇವರೊಬ್ಬ ಹುಚ್ಚ ಎಂದು ಭಾವಿಸುತ್ತಿದ್ದರು. ಸ್ವಾಮಿಯವರ ದೈವತ್ವದ ಅನುಭವ ಇದ್ದ ಕೆಲವು ಜನಗಳು ಮಾತ್ರ ಸ್ವಾಮಿಯವರ ದರ್ಶನಕ್ಕೆ ಬರುತ್ತಿದ್ದರು.

ಒಮ್ಮೆ, ಋಷೀಕೇಶ್ ನಿಂದ ಯತಿಗಳಾದ ಚಿದಾನಂದ ಸ್ವಾಮಿ, ದೇವಾನಂದ ಸ್ವಾಮಿ, ಮಾಧವಾನಂದ ಸ್ವಾಮಿಗಳು ಶ್ರೀ ವೆಂಕಯ್ಯಸ್ವಾಮಿಯವರ ದರ್ಶನಕೆ ಬರುತ್ತಿದ್ದಾರೆಂದು ತಿಳಿದ ಜನಗಳು, ತಂಡೋಪತಂಡವಾಗಿ ಬಂದಿದ್ದರು. ಸಂಜೆ 4:30 ಆದರೂ ಆ ಯತಿಗಳು ಬರಲಿಲ್ಲ ಎಂದು ಜನಗಳೆಲ್ಲಾ ನಿರುತ್ಸಾಹ ಪಟ್ಟರು. ಅದನ್ನು ನೋಡಿ ವೆಂಕಯ್ಯಸ್ವಾಮಿ, "ವಸ್ತುನ್ನಾರಯ್ಯಾ! ಇಂಕಾ ಗಂಟಲು ಕಾಲೇದು" (ಬರುತ್ತಾರಯ್ಯಾ! ಇನ್ನೂ ಸಮಯ ಆಗಿಲ್ಲ) ಎಂದರು. ಸ್ವಾಮಿಯವರು ಹೇಳಿದಂತೆ

ಕೆಲವೇ ನಿಮಿಷಗಳಲ್ಲಿ ಶ್ರಿ ಚಿದಾನಂದ ಸ್ವಾಮಿ ಮುಂತಾದವರು ಕಾರಿನಲ್ಲಿ ಬಂದರು. ಬಂದತಕ್ಷಣವೇ ನಾರಾಯಣ ನಾಮಸ್ಮರಣೆ ಮಾಡುತ್ತಾ ಶ್ರಿ ಸ್ವಾಮಿಯವರ ಪಾದಗಳಿಗೆ ನಮಸ್ಕರಿಸಿದರು. ಇದನ್ನು ನೋಡಿದ ಜನರೆಲ್ಲಾ ಭಗವನ್ನಾಮಸ್ಮರಣೆ ಮಾಡುತ್ತಾ ಆ ಪ್ರದೇಶವೆಲ್ಲಾ ಪ್ರತಿಧ್ವನಿಸುವಂತೆ ಮಾಡಿದರು. “ಬಂದ ಸ್ವಾಮಿಗಳಿಗಿಂತ ನಮ್ಮ ಸ್ವಾಮಿಯೇ ಶ್ರೇಷ್ಠ” ಎಂದು ಅಂದುಕೊಂಡರು. ಯಾವುದೋ ಸಿಹಿ ಪದಾರ್ಥವನ್ನು ಸ್ವಾಮಿಯವರಿಗೆ ಕೊಟ್ಟು ತಿನ್ನಿ ಎಂದು ಆ ಮೂರು ಸ್ವಾಮಿಗಳು ಪ್ರಾರ್ಥಿಸಿದರು. ಆಗ, "ಅಯ್ಯಾ! ದಾನ್ನಿ ತಿನಡಂ ವಿಷಂ ತಿನ್ನಟ್ಲೇ ಗದಾ! ಇಂತಮಂದಿ ಇಕ್ಕಡುನ್ನಾರು. ವೀರಂದರಿಕೀ ಪೆಡಿತೇ ನಾಕು ಪೆಟ್ಟಿನಟ್ಲೇ! (ಅಯ್ಯಾ! ಇದನ್ನು ತಿಂದರೆ ವಿಷ ತಿಂದಹಾಗೆ ಅಲ್ಲವೇ? ಇಷ್ಟು ಜನ ಇಲ್ಲಿ ಇದ್ದಾರೆ, ಇವರಿಗೆಲ್ಲಾ ಕೊಟ್ಟರೇ ನನಗೆ ಕೊಟ್ಟಹಾಗೆ) ಎಂದರು ಸ್ವಾಮಿಯವರು. ಆ ಮಾತು ಕೇಳಿದ ತಕ್ಷಣ ಶ್ರೀ ಚಿದಾನಂದಸ್ವಾಮಿಯವರು ಕೆನ್ನೆಗೆ ಹೊಡದುಕೊಂಡರು (ತಪ್ಪಾಯಿತು ಎನ್ನುವಂತೆ). ಆಗ ಸ್ವಾಮಿಯವರು ಅವರಿಗೆ ಆಶೀರ್ವದಿಸಿ, "ತ್ವರಲೋ ಸಮುದ್ರಂ ದಾಟಿಪೋತಾವು" (ಬೇಗಲೇ ಸಮುದ್ರವನ್ನು ದಾಟಿ ಹೋಗುತ್ತೀಯ) ಎಂದು ಹೇಳಿದರು. ಅದೇ ರೀತಿ ಶ್ರೀ ಚಿದಾನಂದ ಸ್ವಾಮಿಯವರು, ಅವರ ಆಶ್ರಮ ಸೇರುವಹೊತ್ತಿಗೆ ಅವರಿಗಾಗಿ ಅಮೇರಿಕದಿಂದ ಆಹ್ವಾನ ಒಂದು ಕಾದಿತ್ತು!

ನಂದ್ಯಾಲ ಪ್ರಾಂತದಿಂದ ಬಂದ ಒಬ್ಬ ಭಕ್ತ ಹಾಗು ಅವರೊಡನೆ ಬಂದ ಸುಬ್ಬಣ್ಣ (ಸುಬ್ಬನ್ನ) ಎಂಬ ಒಬ್ಬ ಸಾಧು ಶ್ರೀ ಸ್ವಾಮಿಯವರನ್ನು ತಲಪೂರು ನಾರಾಯಣ ದಾಸರ ಆಶ್ರಮದಲ್ಲಿ ದರ್ಶನ ಮಾಡಿದರು. ಆ ಸಾಧು ಬಹಳ ಸಿದ್ಧಿಗಳನ್ನು ಪಡೆದಿದ್ದರು. ಉದಾ: ಅವರು ಊಟಕ್ಕೆ ಕುಳಿತಾಗ ಹತ್ತು ಜನಕ್ಕಾಗುವಷ್ಟು ಅಥವ ಇಪ್ಪತ್ತು ಜನಕ್ಕಾಗುವಷ್ಟು ಊಟ ಬಡಿಸಿದರೂ ಬೇಡ ಅನ್ನದೇ ತಿನ್ನಬಲ್ಲರು. ಎಷ್ಟು ಬಡಿಸಿದರೂ ಅಷ್ಟೂ ತಿನ್ನಬಿಡುವ ಶಕ್ತಿ ಇತ್ತು. ’ಸಾಕು ಸುಬ್ಬನ್ನ! ಮಿಕ್ಕವರಿಗೆ ಬಡಿಸ ಬೇಕಲ್ಲವೇ ಇನ್ನು ಸಾಕು’ ಎಂದಾಗ, “ಆ! ಸಾಕುಬಿಡಿ” ಎನ್ನುತ್ತಾ ಅವರ ಏಳುತ್ತಿದ್ದರು. ನಾವಾಗೆ ಕರೆದು ಊಟ ಬಡಿಸಿದರೇ ಊಟ ಮಾಡುತ್ತಿದ್ದರು, ಇಲ್ಲದಿದ್ದರೆ, ಎಷ್ಟು ದಿನಗಳಾದರೂ ಊಟ ಬಡಿಸಿ ಎಂದು ಕೇಳುತ್ತಿರಲಿಲ್ಲ. ದೇವಾಲಯಗಳು, ಗ್ರಾಮದ ಚಾವಡಿ, ಪಾಳು ಬಿದ್ದ ಮನೆಗಳೆ ಇವರ ನಿವಾಸ. ಒಂದು ಕ್ಷಣವೂ ನಿಲ್ಲದೇ ಅವರು ನಡೆಯುತ್ತಲೇ ಇರುತ್ತಿದ್ದರು. ಅವರು ನಡಿಯುವ ರೀತಿ ವಿಚಿತ್ರವಾಗಿರುತ್ತಿತ್ತು. ಎಡಗಾಲಿನ ಹೆಬ್ಬೆಟ್ಟಿಗೆ ಅವರ ಬಲಗಾಲಿನ ಹಿಮ್ಮಡಿ ತಗುಲುವ ಹಾಗೆ ಹೆಜ್ಜೆ ಹಾಕಿ ಮುಂದೆ ಸಾಗುತ್ತ, ಏನೇನೋ ಗೊಣಗುತ್ತಾ, ಹೆಜ್ಜೆಗಳನ್ನು ಲೆಕ್ಕ ಹಾಕುತ್ತಾ, ವಿರಾಮ ವಿಲ್ಲದೇ ನಡೆದ ಜಾಗದಲ್ಲೇ ನಡೆಯುತ್ತಿದ್ದರು.

ಇವರು ಶ್ರೀ ಸ್ವಾಮಿಯವರ ವಿಚಾರ ಬೇರೆ ಭಕ್ತರೊಂದಿಗೆ ಹೇಳಿದ ಮಾತುಗಳನ್ನು ಗಮನಿಸ ಬೇಕಾದದ್ದು. “ಸ್ವಾಮಿಯವರ (ದೇವರ ಸಮಾನರು) ಹಾಗೇ ಇದ್ದಾರೆ, ಜಾಗೃತರಾಗಿರಿ” ಎಂದು ಹೇಳಿದರು. ಸ್ವಾಮಿಯವರನ್ನು ಕೇಳಿ ಏನಾದರೂ ಚೀಟಿ ಬರೆಸಿಕೊಳ್ಳಿ ಎಂದು ಸ್ವಾಮಿಯವರ ಸೇವಕರು ಹೇಳಿದರೆ, “ಬರುತ್ತಿದ್ದಾಗಲೇ ದಾರಿಯಲ್ಲಿ ನಾವಿಬ್ಬರೂ ಮಾತಾಡಿಕೊಂಡೆವು, ಇನ್ನೇನೂ ಕೇಳ ಬೇಕಾಗಿಲ್ಲ” ಎಂದು ಹೇಳುತ್ತಿದ್ದರು.

ಶ್ರಿ ಸ್ವಾಮಿಯವರು ಸೋಮಶಿಲದ ಹತ್ತಿರ ಬಂದಾಗ, ಒಬ್ಬ ದಿಗಂಬರ ಯೋಗಿ ಶ್ರೀ ಸ್ವಾಮಿಯವರ ದರ್ಶನಕ್ಕೆ ಬಂದರು. ಸ್ವಾಮಿಯವರು, "ಅಯ್ಯಾ! ಆಯನಕು ಕೊಂಚೆಂ ಗೋಚಿ ಪೆಟ್ಟಂಡಯ್ಯಾ" (ಅಪ್ಪಾ! ಅವರಿಗೆ ಒಂದು ಕೌಪೀನ ಕಟ್ಟಿರಯ್ಯಾ!) ಎಂದರು. ಆಗ ದಿಗಂಬರಯೋಗಿ "ಹುಡುಗ ದೊಡ್ಡವನಾಗಿದ್ದಾನೆ, ಆಗಲಿ, ಹುಡುಗುಬುದ್ಧಿ ಹೋಗಿಲ್ಲವೇ) ಅಂದರು. ಇವರಿಬ್ಬರ ಪರಸ್ಪರ ಸಂಭಾಷಣೆಯ ಒಳಾರ್ಥ ಇವರಿಬ್ಬರಿಗೇ ಗೊತ್ತು. ಇದೇ ರೀತಿಯಲ್ಲಿ ಅನೇಕ ಸಾಧುಗಳು, ಯೋಗಿಗಳು, ಸಾಧಕರು ಶ್ರೀ ಸ್ವಾಮಿಯವರ ದರ್ಶನ ಮತ್ತು ಆಶೀರ್ವಾದ ಪಡೆಯಲು ಬಂದು ಅವರವರ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದರು.

ಶ್ರೀ ಸ್ವಾಮಿಯವರ ಮಹತ್ತರ ಸಂಕಲ್ಪವೇ ಇಂತಹ ಸಂಘಟನೆಗಳು ಮತ್ತು ಸಂಭಾಷಣೆಗಳನ್ನು ಗ್ರಂಥ ರೂಪದಲ್ಲಿ ಸಂಗ್ರಹಿಸಲು ಬಿಡಲಿಲ್ಲ. ಇದು ನಮ್ಮ ದುರದೃಷ್ಟ. ಇಂದಿಗೂ, ಸ್ವಾಮಿಯವರು ಆಧ್ಯಾತ್ಮಿಕ ಭಿಕ್ಷೆ ಬೇಡಿದವರಿಗೆ ಪರಿವರ್ತನೆ ತಂದು, ಅವಶ್ಯಕವಾದಾಗ, ಪೀ. ಮಾಧವರಾವ್ ಮತ್ತು ನಂದಗಿರಿ ಸುಂದರರಾವ್ ಅವರಿಗೆ ಭೌತಿಕ ದರ್ಶನವೂ ನೀಡಿ, ಆತ್ಮಪಥದಲ್ಲಿ ಅವರ ಕೈಹಿಡಿದು ನಡೆಸುತ್ತಿದ್ದಾರೆ."

ಒಮ್ಮೆ ಪ್ರಸಿದ್ಧ ಮಾಂತ್ರಿಕರಿಬ್ಬರು ಸ್ವಾಮಿಯವರ ಹತ್ತಿರ ಬಂದರು. ಗೊಲಗಮೂಡಿ ಆಶ್ರಮದಲ್ಲಿರುವ ಹೂವರಾಸಿ ಮರದ (Thespesia populnea) ಕೆಳಗೆ ಕುಳಿತುಕೊಂಡರು. ಅವರುಗಳು ಬೆಳಗ್ಗಿನಿಂದ ಮಧ್ಯಾಹ್ನ 4 ಗಂಟೆಯವರೆಗೆ ಮೌನವಾಗಿ ಇದ್ದು, ಅಲ್ಲಿಂದ ಚಲಿಸದೇ, ಒಂದೇ ಜಾಗದಲ್ಲಿ ಕುಳಿತಿದ್ದರು. ಆ ದಿನ, ಸ್ವಾಮಿಯವರು ಧುನಿಯಲ್ಲಿ ಅಧಿಕವಾಗಿ ಉರಿಯನ್ನು ಹಾಕುತ್ತಿದ್ದರು. 4 ಗಂಟೆಯ ಪ್ರಾಂತದಲ್ಲಿ ಆ ಮಾಂತ್ರಿಕರಿಗೆ ಸ್ವಾಮಿಯವರು ಊಟ ಹಾಕಿಸಿದರು. "ವೀಳ್ಳು ಚಾಲ ಅಲಸಿಪೋಯಾರು, ಚೆರಿ ರೆಂಡು ರೂಪಾಯಲಿವ್ವಂಡಿ" (ಇವರು ಬಹಳ ಆಯಾಸಗೊಂಡಿದ್ದಾರೆ, ಇವರಿಗೆ ತಲ 2 ರೂಪಾಯಿ ಕೊಡಿ) ಎಂದು ಹೇಳಿದರು. ಭಕ್ತರು ಹಾಗೆ ಮಾಡಿದರು.

ಆ ಮಾಂತ್ರಿಕರು ಹೊರಡುವಾಗ ಬೇರೆ ಭಕ್ತರೊಂದಿಗೆ ಹೀಗೆ ತಿಳಿಸಿದರು, "ಶ್ರಿ ಸ್ವಾಮಿಯವರ ಮಹತ್ವವನ್ನು ತಿಳಿದು, ಅಸೂಯೆಯಿಂದ ಅವರ ಮೇಲೆ ಮಂತ್ರ ಪ್ರಯೋಗ ಮಾಡಲು ಬಂದವು. ಆದರೆ, ಅದೇನು ವಿಚಿತ್ರವೋ ತಿಳಿಯಲಿಲ್ಲ, ಇಲ್ಲಿ ಬಂದ ಕ್ಷಣದಿಂದ ಆ ಮಾತೇ ಮರೆತು ಹೋಗಿ ಈ ಮರದ ಕೆಳಗೆ ಸುಮ್ಮನೆ ಕುಳಿತುಬಿಟ್ಟೆವು. ಇದು ಸ್ವಾಮಿಯವರ ಮಹಿಮೆ. ನಾವು ದುರ್ಬುದ್ಧಿಯಿಂದ ಬಂದರೂ ಸ್ವಾಮಿಯವರು ನಮ್ಮನ್ನ ಇಷ್ಟು ಆದರದಿಂದ ನೋಡಿದರು. ಶ್ರೀ ಸ್ವಾಮಿಯವರ ಕೃಪೆಗೆ ನಾವು ಅರ್ಹರಲ್ಲ" ಎಂದು ಹೇಳಿ, ಸ್ವಾಮಿಯವರಿಗೆ ಮನಃಪೂರ್ವಕವಾಗಿ ನಮಸ್ಕಾರ ಮಾಡಿದರು.

ಓಂ ನಾರಾಯಣ ಆದಿ ನಾರಾಯಣ

ಅವಧೂತ ಲೀಲೆ

ಅಧ್ಯಾಯ - 13

ದಕ್ಷಿಣೆ

ದೇವರು, ಗುರುಗಳು ಮತ್ತು ಸತ್ಪುರುಷರ ಬಗ್ಗೆ ನಮ್ಮಲ್ಲಿ ಇರುವ ಪೂಜ್ಯಭಾವನೆ, ಪ್ರೀತಿ ಹಾಗೂ ಶ್ರದ್ಧೆಯನ್ನು ವ್ಯಕ್ತಪಡಿಸಲು ನಾವು ಸಮರ್ಪಿಸುವ ಕಾಣಿಕೆಯೇ ದಕ್ಷಿಣೆ. ಸಂಸ್ಕೃತದಲ್ಲಿ 'ದಕ್ಷ' ಎಂದರೆ ಶ್ರದ್ಧೆ ಎಂದು ಅರ್ಥ. ನಮ್ಮ ಹೃದಯದಲ್ಲಿ ಅಂತಹ

ಪೂಜ್ಯಭಾವನೆ ಇಲ್ಲದೆ ಬಾಹ್ಯ ಪ್ರದರ್ಶನಕ್ಕಾಗಿ ನೀಡಿದ ದಕ್ಷಿಣೆ ಎಷ್ಟು ದೊಡ್ಡದಾದರೂ ಅದು ಅರ್ಥಹೀನವಾಗುತ್ತದೆ. ಆದರೆ, ನಮ್ಮ ಹೃದಯದಲ್ಲಿ ಪ್ರೀತಿ ಮತ್ತು ಭಕ್ತಿಯು ತುಂಬಿದಾಗ, ನಾವು ನೀಡುವ ಕಾಣಿಕೆ ಚಿಕ್ಕದಾದರೂ, ಸ್ವೀಕರಿಸುವವರಿಗೆ ಅದು ಬಹಳ ಅಮೂಲ್ಯ ಮತ್ತು ದೊಡ್ಡ ಕಾಣಿಕೆ ಆಗುತ್ತದೆ.

ಅದಕ್ಕೇ ಭಗವದ್ಗೀತೆಯಲ್ಲಿ "ಭಕ್ತಿಯಿಂದ ಸಮರ್ಪಿಸಿದ, ಪತ್ರ, ಪುಷ್ಪ, ಫಲ, ನೀರು....ನಾನು ಪ್ರೀತಿಯಿಂದ ಸ್ವೀಕರಿಸುತ್ತೇನೆ" ಎಂದು ಶ್ರಿ ಕೃಷ್ಣಪರಮಾತ್ಮ ಹೇಳಿರುತ್ತಾರೆ.

ಸರ್ವವನ್ನೂ ನಡಿಸುವುದು ಆ ಭಗವಂತನೇ. ಭಕ್ತ ಪಾಲನೆಗೋಸ್ಕರ, ಪ್ರಜೆಗಳಿಗೆ ಧರ್ಮ ಬೋಧನೆ ಮಾಡುವುದಕ್ಕೆ ವಿವಿಧ ಮಹಾತ್ಮರ ರೂಪದಲ್ಲಿ ಭೂಮಿಯ ಮೇಲೆ ಅವತರಿಸುತ್ತಾರೆಂದು ಗುರ್ತಿಸುವುದೇ ಶ್ರದ್ಧಾಪೂರಿತವಾದ ಭಕ್ತಿ. ಈ ಸತ್ಯವನ್ನು ತಿಳಿಸುವುದಕ್ಕೇ ಶ್ರೀ ವೆಂಕಯ್ಯಸ್ವಾಮಿಯವರು ಅವರ ಭಕ್ತರಿಂದ ದಕ್ಷಿಣೆ ಕೇಳಿ ತೆಗೆದುಕೊಳ್ಳುತ್ತಿದ್ದರು. ಅವರು ಕೇಳುತ್ತಿದ್ದ ದಕ್ಷಿಣೆಯ ಪ್ರಮಾಣ ಭಕ್ತನ ಪರಿಸ್ಥಿತಿಯ ಅನುಸಾರವಾಗಿ, ವಿಭಿನ್ನ ಭಕ್ತರಿಂದ ವಿಭಿನ್ನ ರೂಪದಲ್ಲಿ ಕೇಳುತ್ತಿದ್ದರು. ಆ ದಕ್ಷಿಣೆಗೆ ವಿಶಿಷ್ಠ ಅರ್ಥ ಇರುತ್ತಿತ್ತು.

ಜನವರಿ 1980 ರಲ್ಲಿ, ಸ್ವಾಮಿಯವರು ತುಳಸವ್ವನಿಗೆ 11 ದುಪ್ಪಟಿಗಳನ್ನು ದಕ್ಷಿಣೆಯಾಗಿ ಕೊಡುವಂತೆ ಕೇಳಿದರು. ಶ್ರೀ ಸಾಯಿನಾಥರು ಕೂಡ, ಆಧ್ಯಾತ್ಮಿಕ ಸತ್ಯಗಳನ್ನು ಬೋಧಿಸಲು ಇಚ್ಛಿಸಿದಾಗ, ದಕ್ಷಿಣೆಯ ಮೂಲಕ ಅವರು ಬಿಡಬೇಕಾದ ದುರ್ಗುಣಗಳ ಸಂಖ್ಯೆ ತಿಳಿಸುತ್ತಿದ್ದರು. ಆತ್ಮವನ್ನು ಶುದ್ಧಗೊಳಿಸಲು ಮಾರ್ಗದರ್ಶನ ನೀಡುತ್ತಿದ್ದರು. ಸ್ವಾಮಿಯವರು ತುಳಸವ್ವನಿಂದ ಕೇಳಿದವು, 5 ಜ್ಞಾನೇಂದ್ರಿಯಗಳು, 5 ಕರ್ಮೇಂದ್ರಿಯಗಳು ಮತ್ತು 1 ಮನಸ್ಸು — ಒಟ್ಟು 11. ಆತ್ಮಜ್ಞಾನವನ್ನು ಆವರಿಸಿರುವ ಮತ್ತು ಬ್ರಹ್ಮನಿಂದ ನಮ್ಮನ್ನು ಮಿತಿಗೊಳಿಸುವ ಈ 11 ಆವರಣಗಳನ್ನು (ದುಪ್ಪಟಿಗಳನ್ನು)

ತನಗೆ ಸಮರ್ಪಿಸಿ, ಬ್ರಹ್ಮನೊಂದಿಗೆ ಐಕ್ಯತೆಯನ್ನು ಸಾಧಿಸು ಎಂದು ಸ್ವಾಮಿಯವರು ಹೇಳಿರ ಬಹುದು.

ಸ್ವಾಮಿಯವರು :- "ನಾ ತೊಮ್ಮಿದಿ ದುಪ್ಪಟ್ಲು ನಾಕಿವ್ವಂಡಯ್ಯಾ" (ನನ್ನ 9 ದುಪ್ಪಟಿಗಳನ್ನ ನನಗೆ ಕೊಡಿರಪ್ಪಾ)

ಬಿ.ನಾಗಯ್ಯ:- ಸ್ವಾಮೀ! ತಮಗಿರುವುದು 6 ದುಪ್ಪಟಿಗಳೇ ಅಲ್ಲವೇ? 9 ಎಲ್ಲಿಂದ ಬಂತು? ಇದು 6 ತೆಗೆದುಕೊಳ್ಳಿ.

ಸ್ವಾಮಿಯವರು :- "ಆಹಾ! ಆ ತೊಮ್ಮಿದಿ ದುಪ್ಪಟ್ಲು ನಾಕಿವ್ವಂಡಿ" (ಆಹಾ! ಆ 9 ದುಪ್ಪಟಿಗಳು ನನಗೆ ಕೊಡಿ)

ನಾಗಯ್ಯ: ಆ 6 ದುಪ್ಪಟಿಗಳಿಗೆ ಇನ್ನು 3 ಟವಲ್ಸ್ ಸೇರಿಸಿ ಲೆಖಕ್ಕೆ 6 ಮಾಡಿ ಕೊಟ್ಟನು.

ಸ್ವಾಮಿಯವರು :- "ಇದೇಂದಯ್ಯಾ! ಗೋಚೀ ಗುಡ್ಡಲಿಚ್ಚಾವು? ನಾಯಿ ಪೆದ್ದ ದುಪ್ಪಟ್ಲು ಕದಾ" (ಇದೇನಪ್ಪಾ ಗೋಚೀ ಕೊಟ್ಟಿದ್ದೀಯ, ನನ್ನದು ದೊಡ್ಡ ದುಪ್ಪಟಿಗಳಲ್ಲವೇ?)

ನಾಗಯ್ಯರವರ ದುಪ್ಪಟಿ, ರೋಶಿರೆರೆಡ್ಡಿಯವರ ದುಪ್ಪಟಿ ಮತ್ತು ಗುರವಯ್ಯನವರ ದುಪ್ಪಟಿ ಸೇರಿಸಿ ಒಟ್ಟು 9 ಕೊಟ್ಟರು.

ಸ್ವಾಮಿಯವರು:- "ಆ..ಅದ್ದಿ! ಸರಿಪೋಯಿಂದಿ. ಅಂತೇ! ಅಂತೇ! (ಆ.ಅದ್ದು! ಸರಿಹೋಯಿತು. ಅಷ್ಟೇ! ಅಷ್ಟೇ!) ಎಂದರು.

36 **ನಮ್ಮ ಮನಸ್ಸು, ಬುದ್ಧಿ, ಅಹಂಕಾರ ಹಾಗೂ ಪಂಚಭೂತಗಳಿಂದ ಕೂಡಿದ ಈ ದೇಹ, ಎಲ್ಲಾ ಒಟ್ಟುಕೋಡಿದ್ದೇ ಅಷ್ಟವಿಧ ಪ್ರಕೃತಿಗಳು, ಇವಕ್ಕೆ ಮೂಲಭೂತ ಪರಮಾತ್ಮನ ತತ್ವ್ಸ. ಈ ಒಂಬತ್ತು ಪ್ರಕೃತಿಗಳು ಒಳಗೊಂಡಿರುವುದೇ ಭಗವಂತನ ಸ್ವರೂಪ.** ಆ ಭಗವಂತನ ಸ್ವರೂಪವಾದ ವೆಂಕಯ್ಯ ಸ್ವಾಮಿಯವರನ್ನು ನಾವು ನಿರಂತರವಾಗಿ ನಮ್ಮ ಮನಸ್ಸಿನಲ್ಲಿ ತುಂಬಿ, ಈ ಸೃಷ್ಟಿಯೆಲ್ಲವೂ ಅವರ ಸ್ವರೂಪವೇ ಎಂದು ನಿರಂತರವಾಗಿ ಗುರುತಿಸುತ್ತಿರುವುದೇ, 9 ದುಪ್ಪಟಿಗಳನ್ನು ಅವರಿಗೆ ಸಮರ್ಪಿಸುವುದು ಎಂಬ ಅವರ ಭಾವನೆ ಇರಬಹುದು.

37 **ಇನ್ನೊಮ್ಮೆ ತುಳಸವ್ವನವರನ್ನು ಉದ್ದೇಶಿಸಿ ಸ್ವಾಮಿಯವರು "ಆರು ದುಪ್ಪಟ್ಲು ಗುಂಡಮುಲೋ ವೇಯಮ್ಮಾ" (ಆರು ದುಪ್ಪಟಿಗಳನ್ನು ಧುನಿಯಲ್ಲಿ ಹಾಕಮ್ಮಾ!) ಎಂದು ಪದೇ ಪದೇ ಹೇಳುತ್ತಿದ್ದರು. ಅರಿಷಡ್ವರ್ಗಗಳೆಂಬ ಆರು ದುಪ್ಪಟಿಗಳನ್ನು ಸುಟ್ಟಿಹಾಕು ಎಂದು ಹೇಳಿರಬಹುದು.**

38 **ನಿಜವಾದ ಭಕ್ತಿ ಪ್ರೇಮಕ್ಕೆ ಮಾತ್ರ ಸ್ವಾಮಿಯವರು ಬೆಲೆ ಕೊಡುತ್ತಿದ್ದರಾಗಲಿ, ನಾವು ಸಮರ್ಪಿಸುವ ವಸ್ತುಗಳಿಗಲ್ಲ. ಭಕ್ತಿ ಮತ್ತು ಪ್ರೇಮವಿಲ್ಲದೇ, ಲೋಕದಲ್ಲಿ ಹಾಗೂ ತಮ್ಮ ಜೊತೆಯವರಲ್ಲಿ ದೊಡ್ಡಸ್ತಿಗೆ ಗಳಿಸಲು, ತಮ್ಮ ಅಂತಸ್ತನ್ನು ಪ್ರದರ್ಶಿಸಲು ಎಷ್ಟು ಬೆಲೆ ಬಾಳುವ ವಸ್ತು ಕೊಟ್ಟರೂ ಸ್ವಾಮಿಯವರಿಗೆ ಅದು ಕಾಗೆಯ ಹಿಕ್ಕೆಯಂತೆ**

ಸ್ವಾಮಿಯವರು ನನ್ನನ್ನು (ಈ ಪುಸ್ತಕದ ಲೇಖಕ) ಆಸ್ತಮಾ ಬಾಧೆಯಿಂದ ಮುಕ್ತಗೊಳಿಸಿದ್ದರಿಂದ ಕೃತಜ್ಞತೆಯೊಂದಿಗೆ ತಲಪೂರಿನಿಂದ 4 ಇಡ್ಲಿ ಖರೀದಿಸಿ ಸ್ವಾಮಿಗೆ ಅರ್ಪಿಸುತ್ತಿದ್ದೆ. ದಾರಿಯಲ್ಲಿ ನಾನು ಷಿರಿಡೀ ಸಾಯಿಬಾಬಾರವರ ನಾಮಸ್ಮರಣೆಯನ್ನು ನಿರಂತರವಾಗಿ ಜಪಿಸುತ್ತಿದ್ದೆ. ಒಂದು ದಿನ, ನನ್ನ ಜೇಬಿನಲ್ಲಿ ಕೇವಲ 15 ಪೈಸಗಳೆ ಇದ್ದವು. ಆ ಹಣದಿಂದ ಕೇವಲ 1 ಇಡ್ಲಿ ಕೊಳ್ಳಬಹುದು, 4 ಇಡ್ಲಿ ಕೊಳ್ಳಲು ಸಾಲ ಮಾಡಲೇ ಎಂದು ದಾರಿ ಉದ್ದಕ್ಕೂ ಯೊಚಿಸುತ್ತಿದ್ದೆ. ನಾನು 1 ಇಡ್ಲಿ ತಂದು ಸಮರ್ಪಿಸಿದರೆ ಅದು ಅಗ್ಗವಾಗಿ ಕಾಣುತ್ತದೆ ಎಂದು ಯೋಚಿಸಿ, ಸಾಲ ಮಾಡಿ 4 ಇಡ್ಲಿಗಳನ್ನು ತಂದು ಸ್ವಾಮಿಯವರಿಗೆ ಸಮರ್ಪಿಸಿದೆ. ಎಷ್ಟು ಬೇಡಿಕೊಂಡರೂ ಸ್ವಾಮಿಯವರು ಮುಟ್ಟಲಿಲ್ಲ. ನಾಮಸ್ಮರಣೆ ನಿಂತುಹೋಗಿದ್ದೂ ಅಲ್ಲದೆ, 1 ಇಡ್ಲಿ ಸಮರ್ಪಿಸುವುದು ಸಣ್ಣತನವೆಂದು ಸಾಲ ಮಾಡಿದ್ದು ಸ್ವಾಮಿಯವರಿಗೆ ಒಪ್ಪಿಗೆ ಆಗಲಿಲ್ಲ. ಆದ್ದರಿಂದಲೆ ಅವರು ಮುಟ್ಟಲಿಲ್ಲ.

ಶ್ರೀ ಶಿರಿಡೀ ಸಾಯಿಬಾಬಾ ತಮ್ಮ ಭಕ್ತರಿಗೆ ಯಾವುದೇ ಹಬ್ಬವನ್ನು ಆಚರಿಸಲು, ತೀರ್ಥಯಾತ್ರೆಗೆ ಹೋಗಲು ಅಥವಾ ಯಾವುದೇ ಪವಿತ್ರ ಕಾರ್ಯಗಳನ್ನು ಮಾಡಿಸಲು ಹಣವನ್ನು ಸಾಲ ಮಾಡುವುದು ಬೇಡ ಎಂದು ಬೋಧಿಸಿದರು.

ಒಮ್ಮೆ, ಕಲಿಚೇಡಿಗೆ ಸೇರಿದ ಹಿಂದೀ ಪಂಡಿತರು ಮಸ್ತಾನ್ ಸಾಹೆಬ್ ಸ್ವಾಮಿಯವರಿಗೆ ಎರಡು ರೂಪಾಯಿಗಳನ್ನು ಸಮರ್ಪಿಸಿ ನಮಸ್ಕರಿಸಿದರು. "ಈಯನಕು 26 ರೂಪಾಯಲು ರಾವಲೆನನಿ ವ್ರಾಸಿ ಇಯ್ಯಯ್ಯಾ!" (ಈತನಿಗೆ 26 ರೂಪಾಯಿಗಳು ಬರಬೇಕೆಂದು ಬರೆದುಕೊಡಿರಯ್ಯಾ) ಎಂದರು ಸ್ವಾಮಿಯವರು. ಮೂರು ತಿಂಗಳ ನಂತರ, ಸರ್ಕಾರವು ದೀರ್ಘಾವಧಿಯಿಂದ ಬಾಕಿಯಿದ್ದ 26 ರೂಪಾಯಿಗಳ ಹೆಚ್ಚುವರಿ ಹೆಚ್ಚಳವನ್ನು (additional increment) ಅನುಮೋದಿಸಿತು. ಸ್ವಾಮಿಯವರಿಗೆ ದಕ್ಷಿಣೆ ಸಮರ್ಪಿಸಿದ ತಿಂಗಳಿಂದಲೇ ಇಂಕ್ರಿಮೆಂಟ್ ಬಂದಿದ್ದು ಆಶ್ಚರ್ಯಕರವಾದದ್ದು.

ಶ್ರೀ ಸ್ವಾಮಿಯವರು ಕೆಲವರಿಂದ, ಇಷ್ಟು ಹಣ ಕೊಟ್ಟರೇ ಮಾತು ಬರುತ್ತದೆ ಎನ್ನುತ್ತಿದ್ದರು. ಹಣದ ಆಸೆ ಇರುವವರು, ಲೋಭಿಗಳು, ಸ್ವಾಮಿಯವರಿಗೆ ಹಣದ ಹುಚ್ಚು ಅಂದುಕೊಳ್ಳುತ್ತಿದ್ದರು. ಪರಿಶುದ್ಧವಾದ, ವೈರಾಗ್ಯ ಜೀವನ ವಿಧಾನ ತಿಳಿದವರಿಗೆ, ಸ್ವಾಮಿಯವರಿಗೆ ದುಡ್ಡು ಎಂದರೆ ಒಂದು ಧಾನ್ಯದ ಬೆಲೆಯೂ ಇಲ್ಲ ಎಂದು ತಿಳಿದಿತ್ತು. ಸ್ವಾಮಿಯವರಿಗೆ ಹಣ ಮುಚ್ಚಿಟ್ಟುಕೊಳ್ಳುವುದು ತಿಳಿದಿರಲಿಲ್ಲ. ಸಾಯಂಕಾಲದ ಹೊತ್ತಿಗೆ, ತಮ್ಮ ಸೇವಕರಿಗೆ ಅವರ ಕಷ್ಟಕ್ಕೆ ಅನುಸಾರವಾಗಿ ಹಂಚಿ ಬಿಡುತ್ತಿದ್ದರು. ಇನ್ನು ಕೆಲವರು ದಕ್ಷಿಣೆ ಕೊಟ್ಟರೂ ಸ್ವಾಮಿಯವರು ಸ್ವೀಕರಿಸುತ್ತಿರಲಿಲ್ಲ.

ಕೆಲವು ಕಾರಣಗಳಿಂದ ಶ್ರೀ ರಾಮಯ್ಯ ನೆರೆಯ ಬೆಳೆಗಿಂತ ಆಲಸ್ಯವಾಗಿ ರಾಗಿ ಬೆಳೆ ನೆಟ್ಟಿದರು. ನೆಲದಲ್ಲಿ ತೇವ ಇಲ್ಲದಿದ್ದರಿಂದ, ಪೈರು ಸರಿಯಾಗಿ ಬರುವುದಿಲ್ಲವೆಂದು ಭಯದಿಂದ, ರಾಗಿ ಫಸಲು ಚೆನ್ನಾಗಿ ಬಂದರೆ ಒಂದು ಪುಟ್ಟಿಗೆ ಒಂದು ತೂಕ ರಾಗಿ ಲೆಕ್ಕದಲ್ಲಿ ಸ್ವಾಮಿಯವರಿಗೆ ಸಮರ್ಪಿಸುತ್ತೇನೆ ಎಂದು ಹರಸಿಕೊಂಡನು. ಫಸಲು ಅಂದುಕೊಂಡಿದ್ದಿಕ್ಕಿಂತ ಹೆಚ್ಚಾಗಿಯೇ ಬಂತು. ತಾನು ಹರಕೆ ಮಾಡಿಕೊಂಡಂತೆ ರಾಗಿ ಪೂರ್ತಿ ಸಮರ್ಪಿಸದೆ, ಸ್ವಾಲ್ಪ ಸಮರ್ಪಿಸಿದರು. ಅದರ ವಿಚಾರ ಮರೆತು ಹೋಗಿ ಎರಡು

ವರ್ಷಗಳಾದವು. ಯಾವಾಗಲೋ ನೆನಪು ಬಂದಾಗ ಮಾತ್ರ ಬೇಸರಿಸಿಕೊಳ್ಳುತ್ತಿದ್ದರು. ಒಂದು ದಿನ ಸ್ವಾಮಿಯವರನ್ನು ಭೆಟಿ ಮಾಡಿ ನಮಸ್ಕರಿಸಿದರು. ಆಗ, ಸ್ವಾಮಿಯವರು, ತಮ್ಮಲ್ಲೆ ತಾವು, "ಆ ರಾಗುಲು ಅಟ್ಲಾಗೇ ಪೋಯಾಯಿ!" (ಆ ರಾಗಿ ಹಾಗೇ ಹೋಯಿತು) ಎಂದು ಜೋರಾಗಿ ಎರಡು, ಮೂರು ಬಾರಿ ಅಂದುಕೊಂಡರು. ಆ ಮಾತುಗಳು ತನ್ನ ಹರಿಕೆಯ ಬಗ್ಗೆ ಎಂದು ಗುರಿತಿಸಿ, ತಕ್ಷಣವೇ ಪರಿಹಾರ ಸೇರಿಸಿ, ಆ ರಾಗಿಯ ಬೆಲೆಯನ್ನು ಸಮರ್ಪಿಸಿದರು.

ಶ್ರೀ ಸಾಯಿನಾಥರ ಹಾಗೆ, ಸ್ವಾಮಿಯವರು ತಮಗೆ ಬರಬೇಕಾದ ಹರಿಕೆಯ ಬಾಕಿಗಳನ್ನು ಕೇಳಿ ತೆಗೆದುಕೊಳ್ಳುತ್ತಿದ್ದರು. ಕೆಲವೊಮ್ಮೆ ದಕ್ಷಿಣೆಯ ಹಣ ಚಿಕ್ಕ ಚಿಕ್ಕ ಪ್ರಮಾಣದಲ್ಲಿ ಅನೇಕ ಬಾರಿ ಕೇಳಿ, ಬರಬೇಕಾದ ಹಣ ಪೂರ್ತಿ ತೆಗೆದುಕೊಂಡ ಮೇಲೆ ಒಂದು ಪೈಸಾನೂ ಜಾಸ್ತಿ ತೆಗೆದುಕೊಳ್ಳುತ್ತಿರಲಿಲ್ಲ.

ಒಮ್ಮೆ ದಕ್ಷಿಣದಿಕ್ಕಿನಿಂದ ಬಂದ ಒಬ್ಬ ರೈತ 2 ರೂ ಇಟ್ಟು ಏನೋ ಪ್ರಶ್ನೆ ಕೇಳಿದನು. ಸ್ವಾಮಿಯವರು ಒಂದು ಮಾತು ಹೇಳಿ "ಇಕ ಮಾಟರಾದು, ಮರಲಾ ದಕ್ಷಿಣ ಪೆಟ್ಟು" (ಇನ್ನು ಮಾತು ಬರಲ್ಲ ಮತ್ತೆ ದಕ್ಷಿಣೆ ಇಡು) ಎಂದರು. ಹೀಗೇ ಅನೇಕ ಬಾರಿ ದಕ್ಷಿಣೆ ಕೇಳಿ ಅವನ ಹತ್ತಿರ ಇದ್ದ ಹಣವೆಲ್ಲಾ ಕೇಳಿ, ಆ ರೈತನ ಬಳಿ ಛಾರ್ಜಿಗೆ ಕೂಡ ಹಣ ಇರಲಿಲ್ಲ. ಕೊನೆಗೆ ಅವನಿಗೆ ಚೀಟೀ ಬರೆಸಿ ಕೊಟ್ಟರು. ನಂತರ, ಅವನಿಗೆ ಛಾರ್ಜಿಗೆ ಕೂಡ ಹಣ ಇಲ್ಲವೆಂದು ತಿಳಿದು, 6 ರೂ ಕೊಟ್ಟು ಕಳುಹಿಸಿದರು.

ಕಡಪ ಜಿಲ್ಲೆಯಿಂದ ಒಬ್ಬ ಭಕ್ತ ಸ್ವಾಮಿಯವರ ದರ್ಶನ ಮಾಡಲು ಬಂದ ತಕ್ಷಣ ಸ್ವಾಮಿಯವರು ಅವರ ಹತ್ತಿರ ಒಂದು ಕಾಸು ಇಲ್ಲದಂತೆ ಅನೇಕ ಬಾರಿ ದಕ್ಷಿಣೆ ಕೇಳಿದರು. ಇದೆಲ್ಲಾ ತನ್ನ ಒಳ್ಳೆಯದಕ್ಕೇ ಎಂದು ಭಾವಿಸಿ, ಆ ಭಕ್ತ ಬಹಳ ಸಂತೋಷದಿಂದ ತನ್ನ ಜೋಬು ಖಾಲಿ ಮಾಡಿದರು. ಅಲ್ಲೇ ಆಶ್ರಮದಲ್ಲಿ ಊಟ ಮಾಡಿ ಸ್ವಾಮಿಯವರ ಅಪ್ಪಣೆ ತೆಗೆದುಕೊಂಡು ತನ್ನ ಗ್ರಾಮಕ್ಕೆ ಹಿಂತಿರುಗಿದರು. ಕೈಯ್ಯಲ್ಲಿ ಒಂದು ಕಾಸು ಇಲ್ಲ. ಬಸ್ಸಿನ ಛಾರ್ಜಿಗೆ ಸ್ವಾಮಿಯವರು ತನಗೆ ಹೇಗೋ ಒಂದು ರೀತಿಯಲ್ಲಿ ಸಹಾಯ ನೀಡುತ್ತಾರೆ ಎಂದು ನಂಬಿದರು. ವಿಚಿತ್ರ ಏನೆಂದರೆ, ಅವರು 3 ಬಸ್ಸು ಮತ್ತು 1 ದೋಣಿಯಲ್ಲಿ ಪ್ರಯಾಣ ಮಾಡಿದರೂ ಯಾರೂ ಅವರನ್ನು ಹಣ ಕೇಳಲಿಲ್ಲ. ಈ ವಿಷಯವನ್ನು ಅವರು ತನ್ನ ಸ್ನೇಹಿತರಿಗೆ ಆಶ್ಚರ್ಯದಿಂದ ಹೇಳಿ ಕೊಂಡು ಸಂತೋಷಪಟ್ಟರು.

ಅವಧೂತ ಲೀಲೆ

ಅಧ್ಯಾಯ - 14

ಸಾಧು ದೂಷಣೆ

ಕೋಟಿತೀರ್ಥಂ ಅನ್ನುವ ಜಾಗದ ಹತ್ತಿರ ಪೆನ್ನಾ ನದಿಯಲ್ಲಿ ಒಂದು ದೊಡ್ಡ ಮರದ ದಿಮ್ಮಿ (Tree Trunk) ಪ್ರವಾಹದಲ್ಲಿ ತೇಲಿಕೊಂಡು ಬಂತು. ತುಂಬಾ ಜನ ಅದನ್ನು ಬಂಡಿಯ ಮೇಲೆ ಹಾಕಿಕೊಂಡು ತರಬೇಕೆಂದು ನೋಡಿದರು. ಅದು ತುಂಬಾ ಭಾರವಾಗಿದ್ದರಿಂದ, ಆ ದಿಮ್ಮಿಯನ್ನು ಎತ್ತಲಾಗದೇ, ಜನಗಳು ಎಲ್ಲ ಹೊರಟುಹೋದರು. ಆ ರಾತ್ರಿ, ಸ್ವಾಮಿಯವರು ಒಬ್ಬರೇ ಆ ದಿಮ್ಮಿಯನ್ನು ತಮ್ಮ ಭುಜದ ಮೆಲೆ ಹೊತ್ತುಕೊಂಡು ಬಂದು ಅವರ ಧುನಿಯೊಳಗೆ ಹಾಕಿದರು. ಬೆಳಿಗ್ಗೆ ಅದನ್ನು ನೋಡಿ ರೈತರು, "ಓ ಹುಚ್ಚು ವೆಂಕಯ್ಯ! ಬಂಗಾರದಂತಹ ದಿಮ್ಮಿಯನ್ನು ಈ ರೀತಿಯಲ್ಲಿ ಉರಿಸುತ್ತಿದ್ದೀಯಾ? ನಿನಗೋಸ್ಕರ ನಾವು ಅದನ್ನು ಅಲ್ಲಿ ಬಿಟ್ಟೆವಾ?" ಎಂದು ಅವಹೇಳನೆ ಮಾಡಿದರು. ಅದರಲ್ಲಿ ಒಬ್ಬ ಮೋಸಗಾರ, 'ನೀನಿಂತಹ ಹುಚ್ಚು ಕೆಲಸ ಮಾಡಬೇಡ' ಎಂದು ಸ್ವಾಮಿಯವರ ಕೆನ್ನೆಯ ಮೇಲೆ ಒಂದು ಏಟು ಕೂಡ ಹಾಕಿದನಂತೆ. ಆ ಮೋಸಗಾರ ಅವನ ಮನೆಗೆ ಹೋಗುವ ಹೊತ್ತಿಗೆ, ಅವನ ಮನೆ ಬೆಂಕಿ ಹತ್ತಿ ಉರಿಯುತ್ತಿತ್ತು. ಅಲ್ಲಿ ಹತ್ತಿರದಲ್ಲಿರುವ ಜನರೆಲ್ಲಾ ತಮ್ಮನ್ನ ರಕ್ಷಿಸಲು ಸ್ವಾಮಿಯವರನ್ನು ಬೇಡಿಕೊಂಡರು. ಆಗ ಸ್ವಾಮಿಯವರು, "ಪಾಪಂವುನ್ನಂತ ವರಕು ಪೋತುಂದಿ ಮಿಗಿಲಿನದಿ ನಿಲಬಡುತುಂದಿ" (ಪಾಪ ಇದ್ದಷ್ಟು ಹೋಗುತ್ತೆ, ಮಿಕ್ಕಿದು ಉಳಿಯುತ್ತದೆ) ಎಂದು ಹೇಳಿದರು. ಅದರಂತೆಯೇ, ಸ್ವಾಮಿಯವರನ್ನು ಹೊಡೆದವನ ಮನೆ ಉರಿದು ಹೋಯಿತು ಮಿಕ್ಕವರ ಮನೆಯೆಲ್ಲಾ ಒಂದು ಚೂರು ಹಾಳಾಗದೆ ಹಾಗೆ ಇತ್ತು. ಬೆಳಗ್ಗೆ ಆ ಮೋಸಗಾರ ಸ್ವಾಮಿಯವರ ಪಾದ ಹಿಡಿದುಕೊಂಡನು.

ಒಂದು ದಿನ ಸ್ವಾಮಿಯವರು ಮುದಿಗೇಡು ಎನ್ನುವ ಊರಿನಲ್ಲಿ ಒಬ್ಬರ ಮನೆಗೆ ಹೋಗಿ "ಅಮ್ಮಾ" ಎಂದು ಕರೆದರು. ಆ ಗೃಹಿಣಿ ಮನೆ ಒಳಗೆ ಕೆಲಸ ಮಾಡುತ್ತಾ, "ಯಾರದು?" ಎಂದು ಜೋರಾಗಿ ಕೇಳಿದಳು. ಆಗ ಸ್ವಾಮಿಯವರು ಅವರ ತಲೆ ಗೀರುಕೊಳ್ಳುತ್ತಾ "ಪಿಚ್ಚೋಣ್ಣಮ್ಮಾ" (ಹುಚ್ಚನಮ್ಮ) ಅಂದರು. ಆಕೆ, "ಆದರೆ ಏನು?" ಎಂದಳು. ಸ್ವಾಮಿಯವರು, "ಅಂತ ಮುದ್ದ ಪೆಡತಾವನೀ?" (ಸ್ವಲ್ಪ ಊಟ ಹಾಕುತ್ತೀಯೇನೋ ಅಂತ) ಅಂದರು. ಆ ಗೃಹಿಣಿ ಇಲ್ಲ ಎನ್ನುತ್ತಾ ಒಂದು ರಾಗಿ ಮುದ್ದೆ ಸ್ವಾಮಿಯವರ ಬಟ್ಟೆಯೊಳಗೆ ಹಾಕಿದಳು. ಸ್ವಾಮಿಯವರು, "ನಾಲಿಕ್ಕಡ್ಡಮೇಮೈನ ಅಂತ

ವೆಯ್ಯಮ್ಮಾ" ಎಂದರು, (ಅಂದರೆ ಉಪ್ಪಿನಕಾಯಾಗಲಿ, ಅಥವ ಪಲ್ಯವಾಗಲಿ ಎಂದು ಅವರ ಭಾವನೆ). ಆಕೆ ಇಲ್ಲ ಎಂದು ಸಿಡುಕುತ್ತಾ ಸ್ವಲ್ಪ ಉಪ್ಪಿನಕಾಯಿ ಹಾಕಿದಳು. ಸ್ವಾಮಿಯವರು, "ಅಂತ ಧಾರವೇಯಮ್ಮಾ" (ಅಂದರೆ ತುಪ್ಪ ಹಾಕು) ಎಂದರು. ಆಗ, ಅವಳು ತುಂಬ ಕಠೋರವಾಗಿ ಸಿಡುಕಿದಳು. ಆಗ ಸ್ವಾಮಿಯವರು 'ಉಟ್ಟಿಪ್ಪೈನ ದುತ್ತಲೋ ವುಂದಿ ವೆಯ್ಯಮ್ಮಾ' (ಉಟ್ಟಿಯಮೇಲೆ ಸಣ್ಣ ಮಡಿಕೆಯಲ್ಲಿ ಇದೆ ಹಾಕಮ್ಮಾ) ಎಂದರು. ಆಗ, ಅವಳು ಸಿಡುಕಿದಳು. ತಕ್ಷಣ ಆ ಉಟ್ಟಿಯ ಹಗ್ಗ ಮುರಿದು ತುಪ್ಪ ಇದ್ದ ಮಡಿಕೆ ಕೆಳಗೆ ಬಿದ್ದು ತುಪ್ಪ ಎಲ್ಲ ನೆಲದ ಪಾಲಾಯಿತು. ಶ್ರೀ ಸ್ವಾಮಿಯವರು ನಗುತ್ತಾ ಹೊರಟುಹೋದರು. ಇದಕ್ಕೆ ಇರಬಹುದು, ಸಾಯಿಬಾಬಾರವರು ಭಿಕ್ಷೆ ಕೊಡದಿದ್ದರೂ ಪರವಾಗಿಲ್ಲ ಆದರೆ ಭಿಕ್ಷುಕರನ್ನು ಅವಹೇಳನೆ ಮಾಡಬಾರದೆಂದು ಹೇಳುತ್ತಾರೆ.

ಹಾಗೆಯೇ ಹಿರಿಯರು, "ಕಾಲು ಜಾರಿದರೂ ಪರವಾಗಿಲ್ಲ ಬಾಯಿ/ಮಾತು ಜಾರಿದರೆ ಪ್ರಮಾದ" ಎಂದು ಹೇಳುತ್ತಾರೆ. ಇದನ್ನೇ ಸ್ವಾಮಿಯವರು "ನೋರು ವಿಪ್ಪಕೂಡದಯ್ಯಾ" (ಬಾಯಿ ಬಿಡಬಾರದಯ್ಯ) ಎಂದು ಹೇಳಿದರು.

ಓಂ ನಾರಾಯಣ - ಆದಿ ನಾರಾಯಣ

ಅವಧೂತ ಲೀಲೆ

ಅಧ್ಯಾಯ - 15

ಭಿಕ್ಷಾನ್ನ

ಎಷ್ಟೋ ಧನವಂತರು ಬಂದು ಧನ ರಾಶಿಗಳನ್ನು ಸ್ವಾಮಿಯವರ ಪಾದಕ್ಕೆ ಅರ್ಪಿಸಿ ಪ್ರಶ್ನೆ ಕೇಳಿದರೆ, ಅವರ ಪ್ರಶ್ನೆಗಳಿಗೆ ಸಮಾಧಾನ ಕೊಡುತ್ತಿರಲಿಲ್ಲ. ಮೇಲಿನವರು ಒಪ್ಪಿಕೊಳ್ಳಲಿಲ್ಲ ಎಂದೋ ಅಥವಾ ಮಾತು ಬರುತ್ತಿಲ್ಲ ಎಂದೋ ಹೇಳಿ ತಿರುಗಿ ಕಳುಹಿಸುತ್ತಿದ್ದರು. ಭಕ್ತಿ, ಶ್ರದ್ಧೆ ಇದ್ದವರಿಗೆ ಹಣ ಕೊಡದಿದ್ದರೂ ಅವರುಗಳು ಕೇಳುವ ಮೊದಲೇ ತಮ್ಮ ಆಶೀರ್ವಾದ ಪತ್ರ ಬರೆಸಿ, ಅಭಯ ಮುದ್ರೆ ಹಾಕಿಸಿ ಕೊಡುತ್ತಿದ್ದರು. ಸ್ವಾಮಿಯವರು ಯಾವಾಗಲೂ ಭಿಕ್ಷಾನ್ನವನ್ನು ಆಧರಿಸುತ್ತಿದ್ದರು. ತಮ್ಮ ಕೋರಿಕೆಗಳು ತೀರಿದ ಭಕ್ತರು ಸ್ವಾಮಿಯವರ ಬಿಡದಿಯಲ್ಲಿ ಸಂತರ್ಪಣೆ ಮಾಡಿಸಿದರೂ, ಹಬ್ಬದ ದಿನ ಹಬ್ಬದ ಅಡಿಗೆಮಾಡಿಸಿದರೂ, ಸ್ವಾಮಿಯವರು ಭಿಕ್ಷಾನ್ನ ತರುವುದಕ್ಕೆ ಹೋಗುತ್ತಿದ್ದರು. ಸ್ವಾಮಿಯವರು "ಅಯ್ಯಾ! ಈ ರೋಜು ವೀಳ್ಳು ಪೆಟ್ಟಾರನಿ, ಮನಂ ಭಿಕ್ಷಕು ಪೋಕುಂಟೆ ರೇಪು ಪೆಟ್ಟರಯ್ಯಾ!" (ಅಯ್ಯಾ! ಈ ದಿನ ಇವರುಗಳು ಊಟ ಕೊಟ್ಟರೆಂದು ಭಿಕ್ಷಕ್ಕೆ ಹೋಗ ದಿದ್ದರೆ, ನಾಳೆ ಅವರುಗಳು ಭಿಕ್ಷೆ ಕೊಡುವುದಿಲ್ಲ) ಎನ್ನುತ್ತಿದ್ದರು.

ದಶಯ್ಯ:- "ಸ್ವಾಮಿ! ಆಶ್ರಮವನ್ನು ನೋಡಿಕೊಳ್ಳುತ್ತಾ ನಾವು ಇಪ್ಪತ್ತು(20) ಜನ ಇದ್ದೇವೆ, ನಾವೆಲ್ಲಾ ಬದುಕುವುದು ಹೇಗೇ?"

ಸ್ವಾಮಿ:- "ಈ ಪಂಡೇದಂತಾ ಎವರಿದನುಕುನ್ನಾವಯ್ಯಾ?" (ಈ ಬೆಳೆ ಎಲ್ಲಾ ಯಾರದ್ದು ಅಂದುಕೊಂಡೆ?)

ದೇವರೇ ಎಲ್ಲರಿಗೂ ಹಸಿವು ಕೊಟ್ಟು ಅದಕ್ಕೆ ತಕ್ಕ ಆಹಾರವನ್ನು ಬೆಳಸುವಂತೆ ಮಾಡುತ್ತಿದ್ದಾನೆ. ನಮ್ಮ ಹೊಲದಲ್ಲಿ ನಾವು ಬೆಳಸಿದ ಬೆಳೆ ಎಂದು ನಾವೇ ತಿನ್ನಬೇಕು ಎನ್ನುವ ಸ್ವಾರ್ಥ ಬುದ್ಧಿ ಬಿಟ್ಟು ಬೆಳೆಯನ್ನು ಕೊಟ್ಟ ದೇವರಿಗೆ ಕೃತಜ್ಞತೆಯಿಂದ ದೇವರ ಹೆಸರಿನಲ್ಲಿ ದಾನ ಧರ್ಮ ಮಾಡಬೇಕು, ಎಂದು ಶ್ರೀ ಸ್ವಾಮಿಯವರು ಬೋಧಿಸಿದರು.

ಶ್ರೀ ಸ್ವಾಮಿಯವರಿಗೆ ಭಿಕ್ಷೆ, ನೈವೇದ್ಯ ಅಥವ ದಾನ ಸಮರ್ಪಿಸುವಾಗ ಮೇಲೆ ಹೇಳಿರುವ ಕೃತಜ್ಞತೆಯ ಭಾವನೆಯೊಂದಿಗೆ ಸಮರ್ಪಿಸಿದರೇ ಅದು ಮಹತ್ತರವಾದ ಮಹತ್ತರವಾದ ಫಲ ದೊರೆಯುತ್ತದೆ. ಆದರೆ, ಭಿಕ್ಷುಕರು ಎಂಬ ಭಾವನೆಯಿಂದ ಕೊಟ್ಟರೆ, ಆ ಭಾವನೆಗೆ ತಕ್ಕಷ್ಟು ಫಲವೇ ಸಿಗುತ್ತದೆ. ತಮ್ಮ ಮಹಾಸಮಾಧಿ ಆದ ನಂತರವೂ, ತಮ್ಮ

ಸೇವಕರ ಹೃದಯದಲ್ಲಿ ತಕ್ಕ ವಿಧದಿಂದ ಪ್ರೇರೇಪಿಸಿ ನಿರಂತರ ಭಿಕ್ಷಾ ಸಂಪ್ರದಾಯವನ್ನು ಮುಂದುವರಿಸುತ್ತಿದ್ದಾರೆ.

ಶ್ರೀ ಸ್ವಾಮಿಯವರ ಆಜ್ಞೆಯ ಪ್ರಕಾರ, ರೋಶಿ ರೆಡ್ಡಿ ಅನ್ನ ತಿನ್ನುವುದನ್ನು ಬಿಟ್ಟು, ಅವಲಕ್ಕಿ ಮತ್ತು ಸಕ್ಕರೆ ನೀರಿನಿಂದ ಬದುಕುತ್ತಿರುವುದಾಗಿ ಹೀಗೆ ಹೇಳಿದರು: 'ನನಗೆ ವೃದ್ಧಾಪ್ಯದ ಕಾರಣ ಕಣ್ಣು ಪೂರ್ತಿಯಾಗಿ ಕಾಣುತ್ತಿಲ್ಲ. ಅದರಲ್ಲೂ ದ್ರವಾಹಾರ ತೆಗೆದುಕೊಳ್ಳುತ್ತಿರುವುದರಿಂದ, ನಾನು ತುಂಬಾ ಬಲಹೀನನಾಗಿದ್ದೇನೆ. ಆದರೆ, ಭಿಕ್ಷೆ ತರುವ ಸಮಯ ಬಂದರೆ, ಬೆಟ್ಟದಷ್ಟು ಶಕ್ತಿಯು ಬರುತ್ತದೆ ಮತ್ತು ಮಲಗಬೇಕು ಎಂದು ಆಲೋಚನೆ ಬರುವುದಿಲ್ಲ. ಭಿಕ್ಷೆಯ ಪಾತ್ರೆ ತೆಗೆದುಕೊಂಡು ಹೊರಟರೆ, ಸ್ವಾಮಿಯವರ ದಯದಿಂದ, ದಾರಿಯಲ್ಲಿ ಒಂದು ಬಿಳೀ ದಾರ ರಸ್ತೆಯಮೇಲೆ ಹಾಕಿದಂತೆ ದಾರಿ ಸ್ಪಷ್ಟ ಕಂಡು ಬರುತ್ತದೆ. ಹಾಗೆ ಹೋಗುತ್ತಿದ್ದಾಗ, ಒಂದು ದಿನವಾದರೂ ಮುಳ್ಳಾಗಲಿ, ಕಲ್ಲಾಗಲಿ ಚುಚ್ಚಿದ್ದು ನೆನಪಿಲ್ಲ. 2.5 ಕಿಲೋ ಅಷ್ಟು ಆಹಾರದ ಟಿಫಿನ್, ಮಜ್ಜಿಗೆ ಹಾಗೂ ಭಕ್ತರು ಕೊಡುವ ಇತರ ವಸ್ತುಗಳನ್ನು ಎಲ್ಲೂ ಕೆಳಗಿಡದೇ ಆಶ್ರಮಕ್ಕೆ ಸೇರಿಸುವವರೆಗೆ, ಚೆನ್ನಾಗಿ ಇರುತ್ತೇನೆ. ಬಂದು ಸ್ನಾನಮಾಡಿ ಸ್ವಾಮಿಯವರಿಗೆ ನಮಸ್ಕಾರ ಮಾಡಿದ ನಂತರ, ಬಲಹೀನತೆಯಿಂದ ಹಾಸಿಗೆ ಮೇಲೆ ಮಲಗುತ್ತೇನೆ. ಮತ್ತೆ ಮರುದಿನ ಭಿಕ್ಷೆ ತರುವ ಸಮಯಕ್ಕೇ ಎಲ್ಲಿಲ್ಲದ ಶಕ್ತಿ ಬರುತ್ತದೆ. ಇದು ಕೇವಲ ಸ್ವಾಮಿಯವರ ಕೃಪೆ. ಶ್ರೀ ಸ್ವಾಮಿಯವರು ನನಗೆ ಕೊಟ್ಟ ಈ ಸೇವೆ ಕೊನೆಯ ಶ್ವಾಸ ಇರುವವರೆಗೆ ಮಾಡುವುದೇ ನನ್ನ ಪರಮ ಕರ್ತವ್ಯ ಎಂದುಕೊಳ್ಳುತ್ತೇನೆ.

ರೋಶಿ ರೆಡ್ಡಿಯವರು ಮೇ 1986 ರಲ್ಲಿ ಪರಮಪದವನ್ನು ಹೊಂದಿದ ನಂತರ, ಈ ಸೇವೆಯನ್ನು ಶ್ರೀ ರಾಮಯ್ಯ ಮತ್ತು ಇತರ ಸೇವಕರು ಮಾಡುತ್ತಿದ್ದರು. ಒಮ್ಮೆ ಅನಿವಾರ್ಯ ಕಾರಣಗಳಿಂದ, ಭಿಕ್ಷಾನ್ನಕ್ಕಾಗಿ ಗಂಡಸರು ಯಾರು ಇರಲಿಲ್ಲ. ಆಂತಹ ಪರಿಸ್ಥಿತಿಯಲ್ಲಿ ಕೂಡಾ, ಈ ಕಾರ್ಯಕ್ರಮ ನಿರಂತರವಾಗಿ ಸಾಗಲು, ಸ್ವಾಮಿಯವರು ಒಂದು ಲೀಲೆಯನ್ನು ಪ್ರದರ್ಶಿಸಿದರು.

ಚಿಕ್ಕತನದಲ್ಲೇ ತನ್ನ ಪತಿ ತೀರಿಕೊಂಡಿದ್ದರಿಂದ, ತುಂಬಾ ದುಃಖಿತರಾಗಿ, ಹಸಿವಿಲ್ಲದೆ ತುಂಬಾ ಬಡತನದಿಂದ ಬಳಲುತ್ತಾ, ಹಾಸಿಗೆ ಹಿಡಿದು, ಸಾಯುವ ಹಂತದಲ್ಲಿದ್ದ ಕೋಡೂರು ವೆಂಕಮ್ಮನವರು, ಶ್ರೀ ಸ್ವಾಮಿಯವರ ಕೃಪೆಯಿಂದ ಸ್ವಸ್ಥರಾಗಿ ಪ್ರಸ್ತುತ ಆಶ್ರಮದಲ್ಲಿರುತ್ತಾರೆ. ಈಕೆ, ಯಾವತ್ತೂ ಆಶ್ರಮ ಬಿಟ್ಟು ಗ್ರಾಮದೊಳಗೆ ಹೋಗಿರಲಿಲ್ಲ. ಇವರಿಗೆ ಸ್ವಾಮಿಯವರು ಎಂತಹ ಪ್ರೇರಣೆ ಕೊಟ್ಟರೋ, ಈ ನಿರಂತರ ಭಿಕ್ಷೆ ನಿಲ್ಲಬಾರದೆಂದು, ಆ ದಿನ, ಅವರೇ ಹೊರಟರು. ಈ ರೀತಿಯಲ್ಲಿ ಸುಮಾರು 1 ವರ್ಷದಕಾಲ ಸ್ವಾಮಿಯವರಿಗೆ ಭಿಕ್ಷೆ ತರುವ ಸೇವೆ ಮಾಡಿದರು. ಇವತ್ತಿಗೂ ಸ್ವಾಮಿಯವರ ಕೃಪೆಯಿಂದ ಈ ಕಾರ್ಯಕ್ರಮ ನಿಲ್ಲದೇ ನಡೆಯುತ್ತಲೇ ಇದೆ. ಸ್ವಾಮಿಯ ಕೃಪೆಯಿಂದ ಊಟದ ಸಮಯದಲ್ಲಿ ಆಶ್ರಮಕ್ಕೆ ಬರುವ ಎಲ್ಲಾ ಅತಿಥಿಗಳಿಗೆ ಉಚಿತ ಊಟದ ವಸತಿ ಒದಗಿಸಲಾಗಿದೆ.

ಭಿಕ್ಷಾನ್ನದ ಕುರಿತು ರೋಶಿ ರೆಡ್ಡಿಯವರು ಹೇಳಿದ ಮಾತುಗಳು

ಗಮನಿಸಬೇಕಾದದ್ದು. "ಆಶ್ರಮದಲ್ಲಿ ಹೆಚ್ಚು ಜನ ಅತಿಥಿಗಳು ಬಂದ ದಿನ ಹೆಚ್ಚು ಅನ್ನ ದೊರೆಯುತ್ತದೆ, ಕಡಿಮೆ ಅತಿಥಿಗಳು ಬಂದ ದಿನ ಕಡಿಮೆ ದೊರೆಯುತ್ತದೆ. ಇಂದಿನ ದಿನ ಅರೋಗ್ಯ ಸರಿ ಇಲ್ಲದೇ ಊರೆಲ್ಲಾ ಹೇಗೆ ತಿರುಗುತ್ತೇನೆ, ಯಾವಾಗ ಹೋಗುತ್ತೇನೋ ಎಂದು ಯೋಚಿಸುತ್ತಿದ್ದಾಗ, ಎರಡು ಪಾತ್ರೆಗಳು ಕ್ಷಣದಲ್ಲಿ ತುಂಬಿರುತ್ತಿದ್ದವು. ಶ್ರೀ ಸ್ವಾಮಿಯವರ ಮಹತ್ವ ಹೇಳುವುದಕ್ಕೆ ಸಾಧ್ಯವಿಲ್ಲ. ಅದು ಅವರಿಗವರೇ ಅನುಭವಿಸಿ ತಿಳಿದು ಕೊಳ್ಳಬೇಕಾದ್ದು" ಎಂದು ರೋಶಿ ರೆಡ್ಡಿಯವರು ಹೇಳಿದರು.

ಇದೇ ರೀತಿ, ಯಾವತ್ತಾದರೂ ಯಾವುದೇ ವಸ್ತುಗಳು ಆಶ್ರಮದಲ್ಲಿ ಇಲ್ಲದಿದ್ದರೆ, ಆ ವಸ್ತುವಿನ ಅವಶ್ಯಕತೆ ತಕ್ಕಂತೆ ಯಾರೋ ಒಬ್ಬರು ತಂದು ಕೊಡುತ್ತಾರೆ. "ನೇನು ಚಾಟುಕು ಪೋಯಾಕ ಕೂಡಾ ನೇನುನ್ನಪ್ಪುಡು ಜರಿಗಿನಟ್ಲೇ ಜರುಗುತುಂದಿ" (ನಾನು ಮರೆಯಾದಮೇಲೆ ಕೂಡ ನಾನು ಇದ್ದಾಗ ಹೇಗೆ ನಡೆಯುತ್ತಿತ್ತೋ ಹಾಗೆಯೇ ಎಲ್ಲಾ ನಡೆಯುತ್ತದೆ) ಎಂದು ಸ್ವಾಮಿಯವರು ಕೊಟ್ಟ ಅಭಯ ಇಂದಿಗೂ ಅಕ್ಷರಶಃ ನಿಜವಾಗಿದೆ.

ಅವಧೂತ ಲೀಲೆ

ಅಧ್ಯಾಯ - 16

ಜನ್ಮಜನ್ಮದ ಅನುಬಂಧ

39

ಪರಮಾತ್ಮಸ್ವರೂಪವಾದ ಮಾನವನು ಅಜ್ಞಾನದಿಂದ ರಾಗದ್ವೇಷಗಳು, ಇಷ್ಟಾನಿಷ್ಟಗಳು ಮತ್ತು ಸುಕೃತ ದುಷ್ಕೃತ್ಯಗಳಿಂದ ಕೂಡಿದನು. ಇದರಿಂದ ಅವನು ಕರ್ಮಫಲವನ್ನು ಅನುಭವಿಸಲು ಅನೇಕ ಜನ್ಮಗಳನ್ನು ಅನುಭವಿಸುತ್ತಾನೆ. "ಮನುಷ್ಯಾಣಾಂ ಸಹಸ್ರೇಷು" ಎಂಬುದನ್ನು ಅನುಸರಿಸಿ, ಒಬ್ಬ ಮಹಾತ್ಮನ ಕೃಪೆಯಿಂದ ಅವನು ತನ್ನ ಅಜ್ಞಾನವನ್ನು ತೊರೆದ ಮೇಲೆ ಜ್ಞಾನವನ್ನು ಆನಂದಿಸುತ್ತಾನೆ. ಅಂತಹ ವ್ಯಕ್ತಿಗಳು ಜೀವಿಗಳ ಪೂರ್ವಜನ್ಮ ಮತ್ತು ಕರ್ಮಫಲದ ವಿಷಯವನ್ನು ಸ್ಪಷ್ಟವಾಗಿ ಅರಿತಿರುತ್ತಾರೆ. ಇಂತಹ ಸಂದರ್ಭಗಳು ಮಹನೀಯರ ಚರಿತ್ರೆಗಳಲ್ಲಿ ಕಂಡುಬರುತ್ತವೆ. ಶ್ರೀ ಸ್ವಾಮಿಯವರು ಕೂಡ ತಮ್ಮ ಅನುಬಂಧ ಮತ್ತು ಪೂರ್ವಜನ್ಮದ ಕುರಿತು ಅನೇಕ ಜನರಿಗೆ ಪತ್ರಗಳ ಮೂಲಕ ವಿವರಿಸುವ ಮೂಲಕ, ಅವರಿಗೆ ಧೈರ್ಯ ಮತ್ತು ಜ್ಞಾನವನ್ನು ನೀಡುತ್ತಿದ್ದವರು. ಈ ವಿಚಾರಗಳನ್ನು ಅರಿತವರು ಸ್ವಾಮಿಯವರನ್ನು ಕೃತಜ್ಞತೆಯೊಂದಿಗೆ ಸೇವಿಸುತ್ತಿದ್ದರು.

ಒಮ್ಮೆ ಗುರವಯ್ಯನವರ ಬಗ್ಗೆ ಸ್ವಾಮಿಯವರು ಹೀಗೆ ಹೇಳಿದರು - "ಈಯನ ಬೆಂಗುಳೂರು ದಕ್ಷಿಣಂ ವೀಧಿಲೋ ಕಂಸಾಲಿಂಟ ಪುಟ್ಟಾಡು. ಮರಲಾ ಕೋಮಟಿಂಟ ಪುಟ್ಟಾಡು. ಆ ತರುವಾತ ನೇನು ವೆಂಕಟಗಿರಿ ರಾಜಾಗಾರಿಂಟ್ಲೋನೂ ಗುರವಯ್ಯ ರಾಜಾಗಾರಿ ಮಾಮಗಾರಿಂಟ್ಲೋನೂ ಪುಟ್ಟಾಮು". (ಗುರವಯ್ಯನವರು ಬೆಂಗುಳೂರು ದಕ್ಷಿಣ ಬೀದಿ ಯಲ್ಲಿ ಅಕ್ಕಸಾಲಿಯಮನೆಯಲ್ಲಿ ಹುಟ್ಟಿದ, ಆಮೇಲೆ ಕೋಮಟಿಯವರ ಮನೆಯಲ್ಲಿ ಹುಟ್ಟಿದ. ಆಮೇಲೆ ನಾನು ವೆಂಕಟಗಿರಿ ರಾಜರ ಮನೆಯಲ್ಲಿ ಗುರವಯ್ಯ ರಾಜರ ಮಾವನವರ ಮನೆಯಲ್ಲಿ ಹುಟ್ಟಿದೆವು).

ಒಮ್ಮೆ ಸ್ವಾಮಿಯವರು ಚಲಮನಾಯುಡುರವರಿಗೆ ಹೇಳಿದರು, "ಚಲಮಾನಾಯುಡಾ! ಪೋಯಿನ ಜನ್ಮಲೋ ವೆಂಕಟಗಿರಿ ರಾಜಾಗಾರಿಂಟಿಲೋ ನೇನು ಗವರ್ನರು ಕೋರ್ಸು, ನೀವು ಜಡ್ಜಿಕೋರ್ಸೂ ಚದಿವಾಮು. ನಗಳ್ಳಲೋ ನಿವಸಿಂಚಾಮು. ಮನಿದ್ದರಿಕೀ ಪೆಂಡ್ಲಿ ಲೇದು. ಇಪ್ಪುಡು ಪೋರಿಂಟ್ಲೋ ವುನ್ನಾಮು. ಎಲ್ಲಪ್ಪುಡೂ ಮೆಡಲು ವಸ್ತಾಯಾ? ಆ ತರುವಾತ ಪಿಠಾಪುರಂ ರಾಜಾಗಾರಿಂಟ್ಲೋ ವುಂಡಿ ಇಪ್ಪುಡು ನಾಗಲೇಟೂರು ವಚ್ಚಾನು" (ಚಲಮಾನಾಯುಡಾ! ಕಳೆದ

ಜನ್ಮದಲ್ಲಿ ವೆಂಕಟಗಿರಿ ರಾಜರ ಮನೆಯಲ್ಲಿ ನಾನು ಗವರ್ನರ್ ಕೋರ್ಸ್, ನೀನು ಜಡ್ಜಿ ಕೋರ್ಸನ್ನು ಓದಿದೆವು. ನಗರದಲ್ಲಿ ನಾವಿಬ್ಬರೂ ವಾಸಿಸಿದ್ದೆವು. ನಮ್ಮಿಬ್ಬರಿಗೆ ಮದುವೆ ಆಗಿರಲಿಲ್ಲ. ಈಗ ನಾವು ಗುಡಿಸಲಿನಲ್ಲಿ ವಾಸಿಸುತ್ತಿದ್ದೇವೆ. ಯಾವಾಗಲೂ ಮಹಡಿಗಳು ಇರುತ್ತದೆಯೆ? ಆಮೇಲೆ ಪಿಠಾಪುರದ ರಾಜರ ಮನೆಯಲ್ಲಿದ್ದು ಈಗ ನಾಗಲೇಟುರಿಗೆ ಬಂದೆನು) ಎಂದರು.

ಅನಿಕೇಪಲ್ಲಿಯ ಮಲ್ಲಿಕ್ ವೆಂಕಯ್ಯ ಅವರು 25 ವರ್ಷದ ವಯಸ್ಸಿನಲ್ಲಿ ಸ್ವಾಮಿಯವರ ಹತ್ತಿರ ಬಂದರು. ಬಳಿಕದ 22 ವರ್ಷಗಳ ಕಾಲ ಅವರು ಕಟ್ಟಿಗೆ ಹೊತ್ತೊಯ್ಯುವ ಕೆಲಸವನ್ನು ಮಾಡಿ, ಸ್ವಾಮಿಯವರ ಧುನಿಗೆ (ಅಗ್ನಿಕುಂಡಕ್ಕೆ) ಕಟ್ಟಿಗೆ ತಂದುಕೊಡುತ್ತಿದ್ದರು.

ಒಮ್ಮೆ ಸ್ವಾಮಿಯವರು ವೆಂಕಯ್ಯನನ್ನು ನೋಡಿ, "ನಾ ದಗ್ಗರಕು ವಚ್ಚೇಯ್" (ನನ್ನ ಹತ್ತಿರ ಬಂದಬಿಡು) ಎಂದು ಕರೆದರು. ಆಗ ವೆಂಕಯ್ಯ, "ಸ್ವಾಮೀ! ನಾನು ಬರುವುದಿಲ್ಲ, ಬಂದರೆ ಭಿಕ್ಷಾನ್ನ ತರಲು ಹೋಗಬೇಕು, ಅದು ನನಗೆ ಸಾಧ್ಯವಾಗುವುದಿಲ್ಲ" ಎಂದನು. ಆಗ ಸ್ವಾಮಿಯವರು, "ಅಬ್ಬೇ ಅದೇಮೀಲೇದು....ರಾಮೆಶ್ವರಂಲೋ ನೇನು ಮೇನೇಜರ್, ನೀವು ಪೆದ್ದ ಗುಮಾಸ್ತಾಗಾನು ವುಂಡಿನಾಮು. ಈ ಪ್ರಾಂತಂಲೋ ನೀ ಬಾಕೀಲನ್ನೀ ತೀರಿಪೋಯಾಯಿ. ನಾ ದಗ್ಗರಕೊಚ್ಚೇಯ್" (ಅಬ್ಬಾ ಅದೇನೂ ಇಲ್ಲ....ರಾಮೇಶ್ವರದಲ್ಲಿ ನಾನು ಮೇನೇಜರ್, ನೀನು ಒಬ್ಬ ದೊಡ್ಡ ಗುಮಾಸ್ತನಾಗಿ ಇದ್ದೆ. ಈ ಪ್ರಾಂತದಲ್ಲಿ ನಿನ್ನ ಬಾಕಿ ಎಲ್ಲಾ ತೀರಿಹೋಗಿದೆ. ನನ್ನ ಹತ್ತಿರ ಬಂದುಬಿಡು) ಎಂದು ಸ್ವಾಮಿಯವರು ಹೇಳಿದರು. **"ಸ್ವಾಮೀ ನನಗೆ ದಯ್ಯಗಳನ್ನು ಓಡಿಸುವ ಮಂತ್ರ, ಗಾಲಿಕುಂಟು ವ್ಯಾಧಿಗೆ ಮಂತ್ರ, ಪೋಲೆರಮ್ಮ ಮಂತ್ರ ಹೇಳಿಕೊಟ್ಟರೇನೆ ನಿಮ್ಮ ಹತ್ತಿರ ಬರುತ್ತೇನೆ"** ಎಂದನು ವೆಂಕಯ್ಯ. "ಅಟ್ಲಾಗೇ ಚೆಪುತಾನು" (ಹಾಗೆ ಹೇಳಿಕೊಡುತ್ತೇನೆ ಬಾ) ಎಂದರು ಸ್ವಾಮಿಯವರು. **24** **40**

"ನೀವು ಮಾ ಮುಠಾಲೋ ಮೇಸ್ತ್ರೀಗ ವುಂಡಿ ಕಟ್ಟಿಲು ಕೊಡುತುಂಡು. ನೀ ವೆನಕಾಲೇ ವೀಳ್ಳಂದರೂ ವಸ್ತುಂಟಾರು" (ನೀನು ನಮ್ಮ ಗುಂಪಿನಲ್ಲಿ ಮೇಸ್ತ್ರಿಯಾಗಿ ಸೆರಿ, ಕಟ್ಟಿಗೆಗಳನ್ನು ಹೊಡೆಯುತ್ತಿರು (chopping). ನಿನ್ನ ಹಿಂದೇನೆ ಇವರೆಲ್ಲರೂ ಬರುತ್ತಿರುತ್ತಾರೆ) ಎಂದು ಒಂದು ಚೀಟಿ ಸ್ವಾಮಿಯವರು ಬರೆಸಿದರು. ವೆಂಕಯ್ಯ ಬಯಸಿದಂತಯೇ ಸ್ವಾಮಿಯವರು ಆಯಾ ಮಂತ್ರಗಳು ಹೇಳಿಕೊಟ್ಟಿದ್ದಲ್ಲದೇ ಅದನ್ನ ಉಚ್ಚರಿಸುವ ರೀತಿ, ನಿಯಮ ನಿಷ್ಠೆ ಮುಂತಾದುವುಗಳನ್ನು ಕೂಡಾ ಹೇಳಿಕೊಟ್ಟರು. (ಅಹಂಕಾರ ಎಷ್ಟು ಕೆಳ ಮಟ್ಟಕ್ಕೆ ಇಳಿಸುತ್ತದೆ ನೋಡಿ. ಮನುಷ್ಯನ ಯಾವ ಬಾಧೆಯಾದರು ನಾನು ಹೋಗು ಎಂದರೆ ಹೋಗುವ ವರವನ್ನು ಕೊಟ್ಟರೆ ಬರುತ್ತೇನೆ ಎಂದು ಕೇಳಿದ್ದರೆ, ಈ ನಿಯಮನಿಷ್ಠೆಗಳು ಮತ್ತು ಮಂತ್ರ ಜಪಗಳು ಇರುತ್ತಿರಲಿಲ್ಲ ಅಲ್ಲವೆ? ಅವಧೂತ ವೈದ್ಯ, ಅಧ್ಯಾಯ 11 ರಲ್ಲಿ ನಿಮಗೆ ನೆನಪಿದ್ದರೆ, ಸ್ವಾಮಿಯವರು ವೇಲೂರು ರಾಮನಾಯಡುರವರಿಗೆ ಒಂದು ವಸ್ತುವನ್ನು ಕೊಟ್ಟು ಅದನ್ನ ಉಡದಾರಕ್ಕೆ ಕಟ್ಟುಕೊ ಎಂದು ಹೇಳಿ ಒಂದು ವರವನ್ನು ನೀಡಿದ ಘಟನೆಯನ್ನು ಉಲ್ಲೇಖಿಸಲಾಗಿದೆ, ಅಲ್ಲಿ ಅವರು “ಹೊರಹೋಗು” ಎಂದು ಹೇಳುವ ಮೂಲಕ ಯಾವುದೇ ರೋಗವನ್ನಾದರೂ

ಗುಣಪಡಿಸುವ ಶಕ್ತಿ ಪಡೆದಿದ್ದರು)

ಕೋಡೂರು ವೆಂಕಮ್ಮನವರು ಸ್ವಾಮಿಯವರನ್ನು ಸೇವಿಸುತ್ತಿದ್ದರು. ಆಕೆಯ ವಿಚಾರ ಹೀಗೆ ಹೇಳಿದರು. "ಪೂರ್ವಂ ಜೆಂಡಾಲವಾರಿ ಕೋಡಲವ್ಯೆ ಪುಟ್ಟಿ, ಅಂತಸ್ಥುಲಲೋ ವುಂಡಿ ವಂಟಿನಿಂಡಾ ಬಂಗಾರು ನಗಲು ಧರಿಂಚಿ ಕ್ರಿಂದಿ ಚೂಪು ಲೇಕುಂಡಾ ಪೈ ಚೂಪುತೋ ವುನ್ನಾವು. ಒಕ ರೋಜು ನೀ ಕಾಲು ಜೆಂಡಾಕು ತಗಿಲಿ ಜೆಂಡಾ ವರಿಗಿಂದಿ. ನೀವು ಬೋರ್ಲಾ ಪಡ್ಡಾವು. 'ನೀವು ಭೂಮಿ ಮೀದ ಪುಟ್ಟಿ ಸಾಮಾನ್ಯ ವಿಧವರಾಲುಗಾ ವುಂಟಾವು ಪೋ!' ಅನಿ ಆ ಜೆಂಡಾ ಶಪಿಂಚಿಂದಿ. ಆ ಶಾಪಂ ಲೇಕುಂಟೇ ನೀಕು ಪೆಂಡ್ಲೇ ಲೇದು. ಕಾನಿ ಶಾಪಂ ವಲನ ಪೆಂಡ್ಲಿ ಜರಿಗಿ ಬಾಲ್ಯಂ ಲೋನೇ ಭರ್ತ ಪೋಯಾಡು. ಕಾನಿ ಮೇಮು ನಿನ್ನು ವದಲಿ ಪೆಟ್ಟಮು" (ಹಿಂದೆ ಜೆಂಡಾಲ** ಶ್ರೀಮಂತ ಮನೆಯವರ ಸೊಸೆಯಾಗಿ ಮಹಡಿಗಳಿರುವ ಮನೆಯಲ್ಲಿ ಇರುತ್ತಾ ಮೈತುಂಬಾ ಬಂಗಾರದ ಒಡವೆಗಳನ್ನ ಧರಿಸುತ್ತಾ, ಕೆಳಗೆ ನೋಡದೇ ಯಾವಾಗಲೂ ಮೇಲೆ ನೋಡುತ್ತಿದ್ದೆ (ಗರ್ವದಿಂದಿರುವುದು). ಒಂದು ದಿನ, ನಿನ್ನ ಕಾಲು ಬಾವುಟಕ್ಕೆ ತಾಕಿ, ಬಾವುಟ ವಾಲಿತು, ನೀನು ಬೋರ್ಲಾಗಿ ಬಿದ್ದೆ. 'ನೀನು ಭೂಮಿಯ ಮೇಲೆ ಹುಟ್ಟಿ ಸಾಮಾನ್ಯ ವಿಧವೆಯಾಗಿ ಇರು ಹೋಗು' ಎಂದು ಆ ಬಾವುಟ ಶಾಪ ಕೊಟ್ಟಿತು. ಆ ಶಾಪವಿಲ್ಲದಿದ್ದರೆ ಈ ಜನ್ಮದಲ್ಲಿ ನಿನಗೆ ಮದುವೆ ಇರುತ್ತಿರಲಿಲ್ಲ. ಆದರೆ ಆ ಶಾಪದಿಂದ ನಿನಗೆ ಮದುವೆಯಾಗಿ ಬಾಲ್ಯದಲ್ಲೇ ಪತಿವಿಯೋಗವಾಯಿತು. ಆದರೆ ನಾವು ನಿನ್ನನ್ನು ಬಿಡುವುದಿಲ್ಲ) ಎಂದು ಸ್ವಾಮಿಯವರು ಹೇಳಿದರು.

ಜಂಡಾ (ಧ್ವಜ, ಬಾವುಟ) ಇಲ್ಲಿ ಧ್ವಜವು ಉನ್ನತ-ಜೀವನದ ಪ್ರತಿನಿಧಿಯಾಗಿರಬಹುದು. ಇದು ನನ್ನ ವ್ಯಾಖ್ಯಾನ ಮಾತ್ರ ಎಂದು ದಯವಿಟ್ಟು ಗಮನಿಸಿ. ಇದನ್ನು ಲೇಖಕರು ಬರೆದಿಲ್ಲ.

ಇನುಕುರ್ತಿಯಲ್ಲಿ ಒಬ್ಬ ಶಿಕ್ಷಕರಿದ್ದರು. ಅವರ ಮಗನಿಗೆ ಬುದ್ಧಿಹೀನತೆ, ಕಾಲು ಕೈಗಳಲ್ಲಿ ಸ್ವಾಧೀನತೆ ಇರಲಿಲ್ಲ. ಯಾವ ವೈದ್ಯರಿಂದಲು ಈ ಹುಡುಗನನ್ನು ಗುಣಪಡಿಸಲು ಸಾಧ್ಯವಾಗಲಿಲ್ಲವಾದ್ದರಿಂದ, ಸ್ವಾಮಿಯವರ ಹತ್ತಿರ ಕರೆದುಕೊಂಡು ಬಂದರು. ಸ್ವಾಮಿಯವರು "ಏಮಿ ಚೇಸ್ತಾಮಯ್ಯಾ? ಗುಜ್ಜಾಲನು ಕೊಟ್ಟಿನ ಪಾಪಂ, ಪೂರ್ವಜನ್ಮಲೋ ಪಂದೆಪು ಗುಜ್ಜಾಲು ತೋಲೇ ವಾಡು. ಅನುಭವಿಂಚಾಲಿ ಗದ?" (ಏನು ಮಾಡುವುದಯ್ಯಾ? ಕುದುರೆಗಳನ್ನು ಹೊಡೆದ ಪಾಪ. ಪೂರ್ವ ಜನ್ಮದಲ್ಲಿ ಕುದುರೆಗಳನ್ನು ಪಂದ್ಯಕ್ಕೆ ಕಳುಹಿಸುತ್ತಿದ್ದ. ಆ ಪಾಪ ಅನುಭವಿಸಲೇಬೇಕಲ್ಲವೆ?) ಎಂದರು.

ಹಾಗೆಯೇ ಸ್ವಾಮಿಯವರ ಹತ್ತಿರ ಮೂರ್ಛೆವ್ಯಾಧಿ ಇದ್ದ ಒಬ್ಬ ಸನ್ಯಾಸಿ ಬಂದರು. "ಏನು ಸ್ವಾಮೀ! ಇಂತಹ ಪವಿತ್ರ ಜೀವನ ನಡುಸುವವರಿಗೆ ಈ ವ್ಯಾಧಿ?" ಎಂದು ಭಕ್ತರು ಕೇಳಿದರು. **"ಪೂರ್ವಂ ಇತಡು ಪಕ್ಷುಲ ವೇಟಗಾಡು. ಸಂಬರಾನಿಕಿ ವೇಟಾಡೇವಾಡು. ಅನುಭವಿಂಚವದ್ದಾ?** (ಆಕಲಿಚೇ ಬಾಧಿಂಚಬಡಿ ಮಾಂಸಂ ತಿನಡಂ ಕಾದು. ಸಂಬರಾನಿಕಿ ವೇಟ ಆಡಿತೇ ಇಲಾ ವುಂಟುಂದಿ. ಅನ್ನಿ ವಿಷಯಾಲು ಅಂತೇ) " (ಪೂರ್ವಜನ್ಮದಲ್ಲಿ ಅವನು ಪಕ್ಷಿಗಳ ಬೇಟೆಗಾರನಾಗಿದ್ದು, ತನ್ನ ಖುಷಿಗೋಸ್ಕರ ಬೇಟೆ

ಆಡುತ್ತಿದ್ದನು. "ಅನುಭವಿಸಬೇಕೆ? ಹಸಿವಿನಿಂದ ಬಾಧೆಪಟ್ಟು ಮಾಂಸ ತಿನ್ನುವುದು ಅಲ್ಲ ಖುಷಿಗಾಗಿ ಬೇಟೆ ಆಡುವುದೇ ಇಂತಹ ಫಲಗಳನ್ನು ತರಿಸುತ್ತದೆ. ಎಲ್ಲಾ ವಿಷಯಗಳು ಇಂಥದ್ದೇ") ಎಂದರು ಸ್ವಾಮಿಯವರು.

ಆ ಸನ್ಯಸಿ ಮೂರ್ಛೆ ಬಂದು ಮೇಲಿನಿಂದ ಗಿರಗಿರನೆ ತಿರುಗಿ, ಕೆಳಗೆ ಬೀಳುವ ಪಕ್ಷಿಯಂತೆ ಬೀಳುತ್ತಿದ್ದನು. ಸ್ವಾಮೀಯವರು ಕರ್ಮಸೂತ್ರದ ಪ್ರಭಾವವನ್ನು ವಿವರಿಸಿದರು.

ನಾಗುಲವೆಲ್ಲಟೂರು ಎಂಬ ಗ್ರಾಮದಲ್ಲಿ ಒಬ್ಬ ಹುಡುಗನಿಗೆ ಎರಡು ಹೆಬ್ಬೆಟ್ಟುಗಳಲ್ಲಿ ಸ್ಪರ್ಶವಿರಲಿಲ್ಲ. ಸ್ವಾಮಿಯವರ ಬಳಿ ಕರೆದುಕೊಂಡು ಬಂದರು. ಸ್ವಾಮಿಯವರು ಗಂಭೀರ ಸ್ವರದಲ್ಲಿ "ಕಾಟ್ಟುಲ್ಲುತೋ ತಮಾಷಾಕು ಪಿಟ್ಟಲ್ನಿ ಕೊಟ್ಟೇವಾಡು. ಅನುಭವಿಂಚವದ್ದಾ?" (ಕ್ಯಾಟ್ಟುಲ್ಲ್ ನಿಂದ ತನ್ನ ಮನೋರಂಜನಕ್ಕಾಗಿ ಗುಬಚ್ಚಿಗಳನ್ನು ಹೊಡೆಯುತ್ತಿದ್ದ. ಅನುಭವಿಸಬೇಕೆಲ್ಲವೇ?) ಎಂದರು.

ಒಮ್ಮೆ ಸ್ವಾಮಿಯವರು ರೋಶಿ ರೆಡ್ಡಿಯವರನ್ನು ಕರೆದು, "ಅಯ್ಯಾ ಪೋಯಿನ್ನ ಜನ್ಮಲೋ ನೀವು ಸುಬ್ಬಯ್ಯ ಅನೇ ಬ್ರಾಹ್ಮಣುಡವು. ನೀವು ನಾಕು ಚದುವು ಚೆಪ್ಪಿನ ಗುರುಡವು. ಈ ಪಂಚೆಲ ಜತ 10/- ರೂ ಗುರುದಕ್ಷಿಣಗಾ ತೀಸುಕೋ" (ಅಯ್ಯಾ! ಹಿಂದಿನ ಜನ್ಮದಲ್ಲಿ ನೀನು ಸುಬ್ಬಯ್ಯ ಎಂಬ ಬ್ರಾಹ್ಮಣನಾಗಿದ್ದೆ. ನೀನು ನನಗೆ ಓದು ಹೇಳಿಕೊಟ್ಟ ಗುರು ಆಗಿದ್ದೆ. ಈ ಜೊತೆ ಪಂಚೆ ಮತ್ತು 10/- ರೂ ಗುರುದಕ್ಷಿಣೆ ತೆಗೆದುಕೋ) ಎಂದರು.

1979 ರಲ್ಲಿ ಸ್ವಾಮಿಯವರು ಇನುಕುರ್ತಿ ಎಂಬ ಗ್ರಾಮದಲ್ಲಿದ್ದಾಗ ಒಬ್ಬ ಯಾನಾದಿ ಜಾತಿಗೆ ಸೇರಿದ ಮಹಿಳೆ ಹಸಿವಿನಿಂದ ಬಳಲುತ್ತಾ ಅವಳ 3 ಜನ ಹೆಣ್ಣು ಮಕ್ಕಳೊಂದಿಗೆ ಬಂದಳು. ಅವರಿಗೆ ಸ್ವಾಮಿಯವರು ಊಟವನ್ನು ಕೊಡಿಸಿದರು. ಊಟದ ಎಲೆಯ ಮೇಲಿನ ಅನ್ನ ತಾಯಿಗಿಂತ ಮುಂಚೆ ಆ ಮೂರು ಮಕ್ಕಳು ತಿಂದು ಬಿಟ್ಟರು. ಮತ್ತೆ ಅನ್ನ ಬಡಿಸಿ ಎಲ್ಲರಿಗೂ ತೃಪ್ತಿ ಪಡಿಸಿದರು. "ವೀಳ್ಲೇ ಕಾದಯ್ಯಾ! ಈಮೆಕು ಇಂಟಿ ದಗ್ಗರ ಇಂಕಾ ನಲುಗುರು(4) ಬಿಡ್ಡಲುನ್ನಾರು. ಪೂರ್ವಂ ಈಮೆ ರಾಜುಗಾರಿ ಪಟ್ಟಮಹಿಷಿ. ಊಯಲಲೋ ವೂಗುತೂ ತನ ಏಡುಗುರು ದಾಸೀಲಕು ಪೆಟ್ಟುಕುಂಡಾ ಈಮೆ ಹಾಯಿಗಾ ಫಲಹಾರಂ ಭೋಂಚೇಸೇದಿ. ಆ ಏಡುಗುರು ದಾಸೀಲು ಇಪ್ಪುಡಾಮೆ ಬಿಡ್ಡಲುಗಾ ಪುಟ್ಟಿ ಈಮೆನು ತಿನನಿವ್ವಕುಂಡಾ ಬಾಧಿಸ್ತುನ್ನಾರು" (ಇವರೇ ಅಲ್ಲಪ್ಪಾ! ಈಕೆಗೆ ಇನ್ನೂ ಮನೆಯಲ್ಲಿ ನಾಲ್ಕು (4) ಜನ ಹೆಣ್ಣು ಮಕ್ಕಳ್ಳಿದ್ದಾರೆ. ಪೂರ್ವಜನ್ಮದಲ್ಲಿ ಈಕೆ ಒಬ್ಬ ರಾಜನ ಪಟ್ಟದ ರಾಣಿಯಾಗಿದ್ದಳು. ಉಯ್ಯಾಲೆಯಲ್ಲಿ ತೂಗುತ್ತಾ ತನ್ನ 7 ಜನ ದಾಸಿಯರಿಗೆ ಕೊಡದೇ, ಇವಳೇ ಫಲಹಾರ ತಿಂದಳು. ಆ 7 ಜನ ದಾಸಿಯರು ಈಗ ಈಕೆಯ ಹೆಣ್ಣುಮಕ್ಕಳಾಗಿ ಹುಟ್ಟಿ ಈಕೆಯನ್ನು ತಿನ್ನುವುದಕ್ಕೆ ಬಿಡದೇ ತೊಂದರೆ ಕೊಡುತ್ತಿದ್ದಾರೆ) ಎಂದು ಹೇಳಿದರು ಸ್ವಾಮಿಯವರು. ಆಕೆ ತೃಪ್ತಿಯಾಗಿ ಊಟಮಾಡಿದ ಮೇಲೆ, ಆಕೆಗೆ 10 ರೂಪಾಯಿಗಳು, ಒಂದು ಸೀರೆ ಕೊಟ್ಟು ಕಳುಹಿಸಿದರು. ಕರ್ಮಫಲ ಹೇಗಿರುತ್ತದೆ ಎಂದು ಗಮನಿಸಿ ನಾವು ಸನ್ಮಾರ್ಗ ದಲ್ಲಿ ನಡೆದು ಕೊಳ್ಳಬೇಕು.

ಸುಮಾರು 1969 ರಲ್ಲಿ ಗೊಲಗಮೂಡಿ ಆಶ್ರಮಕ್ಕೆ ಒಬ್ಬ ಗಿರಿಜನ ಹುಡುಗಿ

ಭಿಕ್ಷಾನ್ನಕ್ಕೆ ಬರುತ್ತಿದ್ದಳು. ತುಲಶಮ್ಮನವರು ಆ ಹುಡುಗಿಗೆ ಭಿಕ್ಷಾನ್ನ ಕೊಟ್ಟು ಕಳುಹಿಸುತ್ತಿದ್ದರು. ಒಂದು ದಿನ ಆ ಹುಡುಗಿ ಬಂದ ಕೂಡಲೆ, ವರಾಂಡದಲ್ಲಿ ಬೆರಳಿನ ಮುದ್ರೆ ಹಾಕುತ್ತಿದ್ದ ಸ್ವಾಮಿಯವರು "ಆಮೆ ವಚ್ಚಿಂದಮ್ಮಾ!" (ಅವಳು ಬಂದಳಮ್ಮಾ) ಎಂದು ಒಳಗಿದ್ದ ತುಲಶಮ್ಮನವರನ್ನು ಕರೆದರು. ಅಮ್ಮ ಕೊಟ್ಟ ಅನ್ನವನ್ನು ತೆಗೆದುಕೊಂಡು ಆ ಹುಡುಗಿ ಹೊರಟು ಹೋದಳು. ಸ್ವಾಮಿಯವರು "ರಾಜಾಗಾರಿ ಕುಟುಂಬಮುಲೋ ನುಂಡಿ ಬ್ರಾಹ್ಮಣ ಕುಟುಂಬಮುಲೋಕಿ ಅಕ್ಕಡ ನುಂಡಿ ಪ್ರಸ್ತುತಂ ಯಾನಾದಿ ಕುಟುಂಬಮುಲೋಕಿ ವಚ್ಚಿಂದಿ. ಏಂ ಸೃಷ್ಟಿಯೋ ಇದಿ! (ಈ ಹುಡುಗಿ, ರಾಜರ ಮನೆಯಲ್ಲಿ ಹುಟ್ಟಿ, ನಂತರ, ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ, ಈಗ ಗಿರಿಜನರ ಕುಟುಂಬದಲ್ಲಿ ಹುಟ್ಟಿದ್ದಾಳೆ. ಏನು ಸೃಷ್ಟಿಯೋ ಇದು) ಎನ್ನುತ್ತಾ ಪಕಪಕ ನಕ್ಕರು. ಮಾನವ ಔದಾರ್ಯದಲ್ಲಿ ಕುಸಿಯಲು ಆರಂಭವಾದಾಗ, ಭವನದಿಂದ ಹಂಚುಮನೆ, ಅಲ್ಲಿಂದ ಗುಡಿಸಲಿಗೆ ಬರಬೇಕಾಗತ್ತದೆ ಎಂದು ಸ್ವಾಮಿಯವರ ಭಾವನೆ.

ವೇಲೂರು ಸುಬ್ರಹ್ಮಣ್ಯಂರವರು ಅವರ ಧರ್ಮಪತ್ನಿ ಬಹು ಕಾಲದಿಂದ ಮೊಣಕಾಲು ನೋವಿನಿಂದ ಬಾಧೆ ಪಡುತ್ತಿದ್ದ ವಿಚಾರ ಸ್ವಾಮಿಯವರಿಗೆ ಹೇಳಿಕೊಂಡರು. ಆಗ, "ಅಯ್ಯಾ! ಈಮೆ ಪೂರ್ವಜನ್ಮಲೋ ಕಡಿವೇಡು ಗ್ರಾಮಂಲೋ ಮಗವಾಡುಗಾ ವುಂಡಿ ತನ ಇಂಟ್ಲೋ ವಡ್ಲು ತಿಂಟುನ್ನ ಆವುನು ರೋಕಲಿ ಬಂಡತೋ ಕೊಟ್ಟಿಂದಿ. ಆ ಖರ್ಮ ಇದಿ. ಗ್ರಾಮದೇವತ ಬಂಗಾರಮ್ಮ ವೀರರಾಘವಸ್ವಾಮಿ ತಗ್ಗಿಸ್ತಾರು. ಕಾನೀ ಪೂರ್ತಿಗಾ ನೊಪ್ಪಿಪೋದು" (ಅಯ್ಯಾ! ಈಕೆ, ಪೂರ್ವಜನ್ಮದಲ್ಲಿ ಕಡಿವೇಡು ಎಂಬ ಗ್ರಾಮದಲ್ಲಿ ಪುರುಷನಾಗಿ ತನ್ನ ಮನೆಯಲ್ಲಿ ಭತ್ತ ತಿನ್ನುತ್ತಿದ್ದ ಹಸುವನ್ನು ಒರಳುಕಲ್ಲಿನ ಬಂಡೆಯಿಂದ ಹೊಡೆದಿದ್ದನು. ಆ ಕರ್ಮ ಇದು. ಗ್ರಾಮ ದೇವತೆ ಬಂಗಾರಮ್ಮ ಮತ್ತು ವೀರ ರಾಘವಸ್ವಾಮಿ ಕಡಿಮೆ ಮಾಡುತ್ತಾರೆ ಆದರೆ ಪೂರ್ತಿಯಾಗಿ ಗುಣವಾಗುವುದಿಲ್ಲ) ಎಂದು ಹೇಳಿದರು ಸ್ವಾಮಿಯವರು. ಸ್ವಾಮಿಯವರು ಹೇಳಿದಂತೆಯೇ ನಡೆಯಿತಂತೆ.

ಅವಧೂತ ಳೀಲೆ

ಅಧ್ಯಯ - 17

ದಿವ್ಯಾನುಭವಗಳು

ರಾಕ್ಷಸ ಸಂಹಾರದಿಂದ ಭೂಮಿಯ ಭಾರವನ್ನು ಕಡಿಮೆ ಮಾಡುವುದಕ್ಕೆ ಮತ್ತು ಋಷಿಗಳನ್ನು ಅನುಗ್ರಹಿಸುವುದಕ್ಕೆ ಶ್ರೀ ರಾಮ ಅವತಾರವೆತ್ತಿದನು. ಹಾಗೆಯೇ, ಮಹಾಭಾರತ ಯುದ್ಧದ ಮೂಲಕ ಭೂಮಿಯ ಭಾರವನ್ನು ಕಡಿಮೆ ಮಾಡುವುದಕ್ಕೆ, ಅರ್ಜುನ, ಉದ್ಧವ, ಯಶೋದೆ, ಗೋಪ ಗೋಪಿಕೆಯರನ್ನು ಅನುಗ್ರಹಿಸಲು ಶ್ರೀ ಕೃಷ್ಣ ಅವತಾರವೆತ್ತಿದನು.

ಇದೇ ರೀತಿ ಇತಿಹಾಸದಾದ್ಯಾಂತ, ಮುಮುಕ್ಷುಗಳಿಗೆ ಆಧ್ಯಾತ್ಮಿಕ ಬೋಧನೆಗಳನ್ನು ನೀಡುವ ಮೂಲಕ, ದಿವ್ಯ ಅನುಭವಗಳ ಮೂಲಕ ಅವರನ್ನು ಪ್ರೋತ್ಸಾಹಿಸಿ, ದೀನರ ಉದ್ಧಾರಕ್ಕೆ ಪರಮಾತ್ಮ ಮಹನೀಯರ ರೂಪದಲ್ಲಿ ಈ ಭೂಮಿಯ ಮೇಲೆ ಅವತರಿಸುತ್ತಾರೆ. ಅಂತಹ ಮಹನೀಯರನ್ನು ಮುಮುಕ್ಷುಗಳು ಆಶ್ರಯಿಸಬೇಕೆಂದು ಉಪನಿಷತ್ತು ಮತ್ತು ಭಗವದ್ಗೀತೆಯಲ್ಲಿ ಹೇಳಿದೆ. ಅರ್ಜುನ ಮತ್ತು ಉದ್ಧವ ಶ್ರೀ ಕೃಷ್ಣನನ್ನು, ಶ್ರೀ ಕೃಷ್ಣ ಸಾಂದೀಪ ಮಹರ್ಷಿಯನ್ನು, ಶ್ರೀ ರಾಮ ವಶಿಷ್ಠರನ್ನು ಆಶ್ರಯಿಸಿದರಿಂದಲೇ ಈ ರಹಸ್ಯ ನಮಗೆ ತಿಳಿದುಬಂದಿದೆ. ತಿಳಿಯುತ್ತೇವೆ. ಕಾರಣ ಏನೆಂದರೆ, ಮಹನೀಯರು ಸಕಲ ಶಾಸ್ತ್ರಗಳ ಸಾರವನ್ನು ಬೋಧಿಸುವುದಲ್ಲದೆ, ನಾವು ವಿಶ್ವಾಸ ಮಾಡಲಾರದ ವಿಷಯಗಳನ್ನು ಪ್ರತ್ಯಕ್ಷ ಅನುಭವಗಳ ಮೂಲಕ ಪರಿಚಯಿಸಬಲ್ಲರು. ವಿಶ್ವರೂಪದ ಸಾಕ್ಷಾತ್ಕಾರದಿಂದ ಶ್ರೀ ಕೃಷ್ಣನು ಅರ್ಜುನನಿಗೆ ಮಾಡಿದ ಉಪದೇಶವೇ ಇದಾಗಿದೆ

ಇಂತಹ ಅನುಭವಗಳನ್ನೇ ದತ್ತಾತ್ರೇಯ ಸ್ವರೂಪರಾದ ಶ್ರೀ ಶಿರಿಡಿ ಸಾಯಿಬಾಬಾ, ಅಕ್ಕಲಕೋಟ ಸ್ವಾಮಿ ಅಂತಹ ಮಹನೀಯರು ತಮ್ಮ ಭಕ್ತರನ್ನ ಅನುಗ್ರಹಿಸಿದರೆಂದು ಅವರ ಚರಿತ್ರೆಯಲ್ಲಿ ಕಾಣಬಹುದು. ಶ್ರೀ ದತ್ತಾತ್ರೇಯ ಸ್ವಾಮಿಯವರ ವಿಶೇಷಗಳನ್ನು "ಶ್ರೀ ಗುರುಚರಿತ್ರೆ" ಯಿಂದ ತಿಳಿಯುತ್ತದೆ. ಇಂತಹ ಮಹನೀಯರಲ್ಲಿ ಇತ್ತೀಚಿನವರೆಗೂ ನಮ್ಮೊಂದಿಗೆ ಇದ್ದ ಅವಧೂತ ಶ್ರೀ ವೆಂಕಯ್ಯ ಸ್ವಾಮಿಯವರು ಒಬ್ಬರು. ನಿಜಕ್ಕೂ ಮಿಕ್ಕ ದತ್ತಾವತಾರ ಪುರುಷರ ಚರಿತ್ರೆ ಶ್ರದ್ಧೆಯಿಂದ ತನಿಖೆ ಮಾಡದಿದ್ದರೆ ಶ್ರೀ ವೆಂಕಯ್ಯಸ್ವಾಮಿಯವರ ಮಹಿಮೆ ನಮಗೆ ಪೂರ್ತಿಯಾಗಿ ಅರ್ಥವಾಗುವುದಿಲ್ಲ. ಮೇಲಿನ ಸಾಲುಗಳ ಸಾರವನ್ನು ನಾವು ಅರ್ಥಮಾಡಿಕೊಳ್ಳಲು

ವಿಫಲವಾದರೆ, ನಾವು ವೆಂಕಯ್ಯ ಸ್ವಾಮಿಯನ್ನು ಕೇವಲ ಒಬ್ಬ ಮೂರ್ಖ ಎಂದು ಅಥವಾ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಬದುಕುವ ಸಾಮಾನ್ಯ ಸಾಧು ಎಂದು ಪರಿಗಣಿಸುವ ಸಾಧ್ಯತೆ ಇದೆ. ಮಿಕ್ಕ ದತ್ತಾವತಾರ ಪುರುಷರಂತೆ, ಅವಧೂತ ಶ್ರೀ ವೆಂಕಯ್ಯಸ್ವಾಮಿಯವರು ಭಕ್ತರನ್ನು ಅನುಗ್ರಹಿಸಿದ ದಿವ್ಯ ಅನುಭವಗಳ ವಿವರ ಈ ಅಧ್ಯಾಯದಲ್ಲಿ ನೋಡುತ್ತೇವೆ.

ಮುದಿಗೇಡು ಗ್ರಾಮದ ನಿವಾಸಿ ಅಕ್ಕಿಂ ವೆಂಕಟ್ರಾಮಿ ರೆಡ್ಡಿಯವರು ಹೀಗೆ ಹೇಳುತ್ತಾರೆ: "ಒಮ್ಮೆ ಸ್ವಾಮಿಯವರು ಮುದಿಗೇಡಿಗೆ ಬಂದರು. ಸ್ವಾಮಿಯವರು, ಏಕೋ ಗೊತ್ತಿಲ್ಲ, ನನ್ನ ಹೆಸರು ಬದಲಾಯಿಸಿ "ಸುಬ್ಬರಾಮಯ್ಯಾ! ನೀವು ನಾಕು ತಲಪೂರುಕು ತ್ರೋವ ಚೂಪಿಸ್ತುವು ರಾವಯ್ಯಾ! (ಸುಬ್ಬರಾಮಯ್ಯ! ನೀನು ನನಗೆ ತಲಪೂರಿಗೆ ಹೋಗುವ ರಸ್ತೆ ತೋರಿಸು ಬಾರಯ್ಯಾ) ಎಂದು ನನ್ನನ್ನು ಹೊರಡಿಸಿದರು. ಮಿಕ್ಕವರೆಲ್ಲರೂ ನಿದ್ರೆ ಮಾಡುತ್ತಿದ್ದರು. ನಾವು ಸ್ವಲ್ಪ ದೂರ ಹೋಗಿ "ಕೊಕ್ಕೆರಾಳ್ಳ" ಎಂಬ ಒಂದು ಗುಡ್ಡದ ಹತ್ತಿರ ಬಂದೆವು. ಸ್ವಾಮಿಯವರು ನನ್ನನ್ನು ಅಲ್ಲೇ ಕುಳಿತುಕೋ ಎಂದು ಹೇಳಿ ಆ ಗುಡ್ಡವನ್ನು ತುಳಿದರೆ ಮೆತ್ತಿಗಾಗುತ್ತದೆ ಅಂತ ಅವರು ಆ ಕೆಲಸ ಮಾಡಿ ಬರುತ್ತೇನೆಂದು ಹೇಳಿ ಹೊರಟರು. ಅವರು ಏನು ಮಾಡುತ್ತಿದ್ದಾರೊ ನೋಡಬೇಕೆಂಬ ಕುತೂಹಲದಿಂದ, ನಾನು ಸ್ವಲ್ಪ ಸಮಯದ ನಂತರ, ನಿಧಾನವಾಗಿ ಅವರ ಹತ್ತಿರ ಹೋಗಿ ಒಂದು ಪಕ್ಕಕ್ಕೆ ಅಡಗಿಕೊಂಡೆ. ಅವರು ಆ ಗುಡ್ಡ ಹತ್ತಿ ಒಂದು ದೊಡ್ಡ ಬಂಡೆಯ ಮೇಲೆ ಮಲಗಿ, ಕಾಲು ಮೇಲೆ ಕಾಲು ಹಾಕಿ ತೂಗಾಡುತ್ತಾ ಹಾಡನ್ನು ಹಾಡುತ್ತಿದ್ದರು. ನಾನು ಅವರ ಹಾಡುತ್ತಿದ್ದ ಹಾಡು ಕೇಳಬೇಕೆಂದು ನಿಧಾನವಾಗಿ ಸ್ವಾಮಿಯವರು ಇರುವ ಬಂಡೆಯ ಕೆಳಗೆ ಕುಳಿತುಕೊಂಡೆ. ಅವರು ತಕ್ಷಣ ನಾನು ಬಂದಿದ್ದನ್ನು ಗ್ರಹಿಸಿ, "ಪೆನು ಭೂತಾಲು ತಿರಿಗೇ ಈ ಝಾಮುನ ನೀವಿಲಾ ರಾವಚ್ಚಯ್ಯಾ?" (ರಾಕ್ಷಸರು ತಿರುಗುವ ವೇಳೆ ಇದು, ನೀನು ಬರಬಹುದೇ? ಎಂದು ಕೇಳಿದರು ಸ್ವಾಮಿಯವರು. ನಾನು ಅಪರಾಧ ಮಾಡಿದೆನೆಂದು ಭಯ ಆಯಿತು. ತಕ್ಷಣ ಸ್ವಾಮಿಯವರು "ಅಘೋರಿಂಚಾವುಲೇ, ಪಡಮರಗಾನುನ್ನ ಆವುಲ ಮಂದನು ಚೂಡು" (ಆಂದೋಲಿಸಬೇಡ! ಪಶ್ಚಿಮ ದಿಕ್ಕಿನಲ್ಲಿ ದನಗಳ ಹಿಂಡನ್ನು ನೋಡು) ಎಂದರು. ನಾನು ನೋಡಿದಾಗ ಸುಮಾರು ಮೂರು ಮೈಲಿ ವಿಸ್ತೀರ್ಣದಲ್ಲಿ ಒಂದು ಚೂರು ಸಂದಿ ಇಲ್ಲದಂತೆ ಹಸುಗಳ ಹಿಂಡು ಕಂಡು ಬಂತು. ಹಗಲಿನ ಬೆಳಕು ಆವರಿಸಿದಂತಾಯಿತು. ಪುರುಷರು ಸ್ವಲ್ಪ ಜನ ಹಸುಗಳಿಂದ ಹಾಲು ಕರೆಯುತ್ತಿದ್ದರೆ, ಬಹಳ ಜನ ಗೋಪಿಕೆಯರು ಹಾಲನ್ನು ತಲೆಯ ಮೇಲಿಟ್ಟಿಕೊಂಡು ಹೋಗುತ್ತಿದ್ದರು. ಆ ದೃಶ್ಯವನ್ನು ನೋಡುತ್ತಿದ್ದರೆ, ನನಗೆ ದೇವಲೋಕದಲ್ಲಿ ವಿಹರಿಸುತ್ತಿರುವಂತೆ ಎನ್ನಿಸಿತು. ನಾನೂ ಒಂದು ಹಾಲಿನ ಕೊಡ ತೆಗೆದುಕೊಂಡು ಹೋಗಿ ಅವರಿಗೆ ಕೊಟ್ಟು ಬರುತ್ತೇನೆ ಎಂದು ಹೇಳಿದಾಗ ಸ್ವಾಮಿಯವರು "ಓಯಬ್ಬೋ! ವಾಳ್ಳು ರೇಪಲ್ಲೆವಾಡಕೆತ್ತುಕುಪೋತುಂಟೇ, ಮರೋವಂಕ ಪ್ರೊದ್ದು ಮೊಲಿಚಿ ವಸ್ತುಂಟೇ ನೀವೆಕ್ಕಡಿಕಯ್ಯಾ ಪೋಯೇದಿ?" (ಅಬ್ಬಾ! ಅವರೆಲ್ಲಾ ರೇಪಲ್ಲೆ** ಗೆ ಹಾಲಿನ ಕೊಡ ಎತ್ತುಕೊಂಡು ಹೋಗುತ್ತಿದ್ದರೆ, ಇನ್ನೊಂದು ಪಕ್ಕ ಸಂಜೆ ಆಗುತ್ತಿದೆ, ನೀನೆಲ್ಲಿಗೆ

ಹೋಗುತ್ತೀಯಪ್ಪಾ?) ಎಂದರು ಸ್ವಾಮಿಯವರು. ಆಗ ನಾನು ಪೂರ್ವ - ಪಶ್ಚಿಮ ದಿಕ್ಕುಗಳಲ್ಲಿ ನೋಡಿದರೆ ಸಂಪೂರ್ಣ ಕತ್ತಲಾಗಿತ್ತು. ನಾನು ಹಿಂದೆ ನೋಡಿದ ದೃಶ್ಯ ಮಾಯವಾಗಿತ್ತು. ಸ್ವಾಮಿಯವರು, "ಪೋದಾಮು ಪದಯ್ಯ! ತಲಪೂರುಕು ಪೋಯಿ ಗುರ್ತುಲೇಸುಕೋವಾಲಿ" (ಹೋಗೋಣ ನಡಿಯಪ್ಪಾ! ತಲಪೂರಿಗೆ ಹೋಗಿ ಗುರ್ತುಗಳು (markings) ಹಾಕಬೇಕು) ಎಂದು ಹೊರಡಿಸಿದರು.

**ರೇಪಲ್ಲೇ - ಭಾಗವತ ಪುರಾಣದ ಪ್ರಕಾರ ಶ್ರೀಕೃಷ್ಣನ ಬಾಲ್ಯವು ಆಂಧ್ರಪ್ರದೇಶದ ಕೃಷ್ಣಾ ನದಿಯ ಸಮೀಪವಿರುವ ರೇಪಲ್ಲೆ ಎಂಬ ದೂರದ ಹಳ್ಳಿಯಲ್ಲಿ ಕಳೆದಿದೆ ಎಂದು ನಂಬಲಾಗಿದೆ.

ಸ್ವಾಮಿಯವರು ನನ್ನನ್ನು ಸಂಜೆಯವರೆಗೂ ತಲಪೂರಿನಲ್ಲಿ ಅವರ ಜೊತೆಯಲ್ಲೇ ಇಟ್ಟುಕೊಂಡರು. ಊಟ ನೀರು ಇಲ್ಲದೇ ಇಬ್ಬರೂ ಹಾಗೆ ಅಲ್ಲಿದ್ದೆವು. ಆಮೇಲೆ ನನ್ನನ್ನು ಊರಿಗೆ ಹೋಗು ಎಂದರು.

ಒಮ್ಮೆ ತಲಪೂರು ಗ್ರಾಮದಲ್ಲಿ ಈಶ್ವರ ನಾಯುಡು ಅವರ ಮನೆಯಲ್ಲಿ ಶ್ರೀ ಸ್ವಾಮಿಯವರು ಬಂದರು, ಅದು ವರ್ಷ ಋತು. ಸ್ವಾಮಿಯವರು ಅರ್ಧರಾತ್ರಿಯವರೆಗೂ ಕಾಗದಗಳಮೇಲೆ ತಮ್ಮ ಬೆರಳು ಮುದ್ರೆ ಹಾಕುತ್ತಿದ್ದರು. ಆಗ ಆ ಗೃಹಸ್ಥನಾದ ಈಶ್ವರ ನಾಯುಡು, "ಹೊತ್ತಾಗಿದೆ! ಊಟಕ್ಕೆ ಏಳಿ" ಎಂದು ನನಗೆ ಮತ್ತು ಸ್ವಾಮಿಯವರಿಗೆ ಹೇಳಿದರು. ಆಗ ಸ್ವಾಮಿಯವರು "ಅಯ್ಯೋ, **ಮಂಡಲಾಲು ತಗ್ಗಿ ವಚ್ಚಾಯಿ. ಕೊಮ್ಮು ಕಟ್ಟದು**: ನೀವು ನೀ ಊರಿಕಿ ಪೋಯ್ಯಾ!" ನೀನು ಊರಿಗೆ ಹೋಗಯ್ಯಾ ಎಂದು ವೆಂಕಟ್ರಾಮಿ ರೆಡ್ಡಿಗೆ ಆಜ್ಞಾಪಿಸಿದರು. ಆದರೆ ಅಲ್ಲಿದ್ದ ಚಲಮಾ ನಾಯುಡು, ಸ್ವಾಮಿಯವರೊಡನೆ, ಅವನಿಗಿದ್ದ ಸಲಿಗೆಯಿಂದ, 'ಈ ಅರ್ಧರಾತ್ರಿ, ಇಷ್ಟು ಮಳೆಯಲ್ಲಿ ಅವನನ್ನು ಊರಿಗೆ ಹೋಗೆನ್ನುತ್ತೀರಾ? ಏಕೆ? ಅವರು ಮಳೆಯಲ್ಲಿ ಹೇಗೆ ಹೋಗುತ್ತಾರೆ? ಎಂದು ಗದರಿಸಿ, ಒಂದು ಮೊಂಡು ಕೊಡಲಿ ತೆಗೆದುಕೊಂಡು ಸ್ವಾಮಿಯವರ ಮೇಲಕ್ಕೆ ಓಡಿ ಬಂದನು. ಆಗ ಸ್ವಾಮಿಯವರು, "ಅಬ್ಬೋ! ಆಯನ ಇಕ್ಕಡ ಉಂಡ ಕೂಡದಯ್ಯಾ!" (ಅಬ್ಬಾ`! ಅವರು ಇಲ್ಲಿ ಇರ ಬಾರದಯ್ಯಾ) ಎಂದರು. ಮಿಕ್ಕಿದ ವಿವರವನ್ನು ಅಕ್ಕಿಂ ವೆಂಕಟ ರಾಮಿರೆಡ್ಡಿ ಹೇಳುತ್ತಾರೆ.

** (ಸ್ವಾಮಿಯವರ ಈ ವಾಕ್ಯವು ಬಹಳ ರಹಸ್ಯವಾದ ಅರ್ಥವನ್ನು ಹೊಂದಿದೆ. ಸಾರವನ್ನು ಗ್ರಹಿಸಲು ಮತ್ತು ವಿವರಿಸಲು ನನಗೆ ಸಾಧ್ಯವಾಗುತ್ತಿಲ್ಲ. ಸ್ವಾಮಿಯವರು ತಮ್ಮ ದಿವ್ಯದೃಷ್ಟಿ ಯಿಂದ ಭವಿಷ್ಯವನ್ನು ನೋಡಿದಾಗ ಅವರ ಅನುಯಾಯಿಗಳನ್ನು ಎಚ್ಚರಿಸುತ್ತಾರೆ ಎಂದು ಗಮನಿಸಬೇಕು. ಮೇಲಿನ ವಾಕ್ಯದ ಮೂಲಕ ಸ್ವಾಮಿಯವರು ಅದೇ ಮಾಡಿದರು).

"ಶ್ರೀ ಸ್ವಾಮಿಯವರ ಮಾತು ಎಂದೂ ಮೀರಿದವನಲ್ಲ. ನಾನು ಮಳೆಯಲ್ಲೇ ತಲೆಯ ಮೇಲೆ ಒಂದು ಬಟ್ಟೆಯನ್ನು ಹಾಕಿಕೊಂಡು ಅರ್ಧರಾತ್ರಿಯಲ್ಲಿ ನಮ್ಮ ಊರಿಗೆ ಹೊರಟೆ. ತಲಪೂರು ಗ್ರಾಮದ ಹೊರ ವಲಯಕ್ಕೆ ಬರುವವರೆಗೆ ನನಗೆಲ್ಲಾ ಗೊತ್ತಾಗುತ್ತಿತ್ತು, ಆದರೆ ನಂತರ, ನಾನು ಎಲ್ಲಿದ್ದೇನೋ, ಏನು ಮಾಡುತ್ತಿದ್ದೆನೋ ಎಂದು ನನಗೆ

ಅರಿವಿರಲಿಲ್ಲ. ಯಾವ ದಾರಿಯಲ್ಲಿ ಬಂದೆನೋ, ಕೆರೆಯಲ್ಲಿ ನೀರು ಎಷ್ಟು ಆಳವಿತ್ತೋ ಯಾವುದರ ಬಗ್ಗೆಯೂ ಅರಿವಿರಲಿಲ್ಲ. ನಾನು ನನ್ನ ಮನೆಯ ಹತ್ತಿರ ಬರುವಹೊತ್ತಿಗೆ, ಮನೆಯ ಬಾಗಿಲಲ್ಲಿ ನಮ್ಮ ಊರಿನ ಗೂಳಿ ಗರ್ಜಿಸಿದಾಗ ನಾನು ಎಚ್ಚರವಾಯಿತು. ಆಗ, ನಾನು ನನ್ನ ಊರನ್ನು ತಲುಪಿದ್ದೇನೆ, ಅದು ನನ್ನ ಮನೆಯ ಬಾಗಿಲಿನ ಹೊಸಲು, ಗರ್ಜಿಸಿದ ಗೂಳಿ ನಮ್ಮ ಊರಿನದು ಎಂದು ಅರಿವಾಯಿತು. ಅದೊಂದು ವಿಚಿತ್ರವಾದ ಅನುಭವ. ಮಳೆ ಕಾಲದಲ್ಲಿ ತುಂಬಿ ಪ್ರವಹಿಸುತ್ತಾ 15 ಅಡಿ ಆಳವಾದ ಕೆರೆಯನ್ನು ನನಗೆ ಅರಿವಿಲ್ಲದ ಸ್ಥಿತಿಯಲ್ಲಿ ದಾಟಿಸಿ ಮನೆ ಸೇರಿಸಿದ್ದು ಸ್ವಾಮಿಯವರೆ! ಆ ಮಹನೀಯರ ದಿವ್ಯಶಕ್ತಿಯನ್ನು ಹೊಗಳಲು ಸಾವಿರ ಹೆಡೆ ಇರುವ ಆದಿಶೇಷನಿಗೂ ಸಾಧ್ಯವಿಲ್ಲ.”

"ಇನ್ನೊಮ್ಮೆ ’ಕೊಂಡ ಚುಟ್ಟೂ ತ್ರೊಕ್ಕಿ ರಾವಾಲಯ್ಯಾ’ (ಬೆಟ್ಟದ ಸುತ್ತಲೂ ತುಳಿದು ಬರಬೇಕಯ್ಯಾ) ಎಂದು ಹೇಳಿ ಸ್ವಾಮಿಯವರು ನಾವು 7 ಜನರನ್ನು, ನಡೆಸಿಕೊಂಡು ಪೆಂಚಲಕೋನ ಎಂಬ ಜಾಗಕ್ಕೆ ಕರೆದುಕೊಂಡು ಹೋದರು. ಅಲ್ಲಿ ನಮ್ಮಲ್ಲಿ ಸ್ವಲ್ಪ ಜನ ಅಡಿಗೆ ಮತ್ತು ಅಗ್ನಿಕುಂಡ ಏರ್ಪಡಿಸುತ್ತಿರುವಾಗ, ಸ್ವಾಮಿಯವರು ’ಅಯ್ಯಾ! ಮನ ವಾಳ್ಳು ಪನುಲು ಚೇಸ್ತುಂಟಾರು, ಮನಂ ಮಲ್ಲೆಂಕೊಂಡಕು ಪೋಯಿ ವಸ್ತಾಂ ರಾ!’ (ಅಯ್ಯಾ! ನಮ್ಮಕಡೆಯವರು ಎಲ್ಲಾ ಕೆಲಸಗಳನ್ನು ಮಾಡುತ್ತಿರುತ್ತಾರೆ, ನಾವಿಬ್ಬರು ಮಲ್ಲೆಂಕೊಂಡಕ್ಕೆ ಹೋಗಿ ಬರೋಣ ಬಾ) ಎಂದು ನನ್ನನ್ನು ಕರೆದರು. ನೀವೆಲ್ಲಿಗೆ ಬಾ ಎಂದರೆ ಅಲ್ಲಿಗೆ ಬರುತ್ತೇನೆ ಎಂದು ಸ್ವಾಮಿಯವರೊಂದಿಗೆ ಹೊರಟೆ. ಸುಮಾರು 3 ಮೈಲಿಯ ದೂರದಲ್ಲಿದ್ದ ಮಲ್ಲೆಂಕೊಂಡ ಸೇರಿದವು. ಅಲ್ಲಿ ಮಲ್ಲೀಶ್ವರನೆಂಬುವ ಲಿಂಗದ ಆಕಾರ ಇತ್ತು. ಶ್ರಿ ಸ್ವಾಮಿಯವರು ಅದರ ಹತ್ತಿರ ಹೋಗಿ ನನಗೆ ಅರ್ಥವಾಗದಿದ್ದ ವಿಚಿತ್ರ ಭಾಷೆಯಲ್ಲಿ ಆ ಲಿಂಗಾಕಾರದೊಂದಿಗೆ ಮಾತನಾಡಿದರು. ಅಲ್ಲಿಂದ ಸುಮಾರು 1 ಮೈಲಿಯ ದೂರದಲ್ಲಿದ್ದ ಮಾಮಿಳ್ಳ ಕೋನ ಎಂಬ ಜಾಗಕ್ಕೆ ಹೊದೆವು. ಅಲ್ಲಿ ಸ್ವಾಮಿಯವರು ಒಂದು ಗುಹೆಯೊಳಗೆ ಇಳಿಯುತ್ತಿದ್ದರು. ನಾನು ಅವರನ್ನು ಹಿಂಬಾಲಿಸಿದೆ. ಆ ಗುಹೆಯೊಳಗೆ ಎಲ್ಲಿ ನೋಡಿದರೂ ದಟ್ಟವಾದ ಮಾವಿನ ಮರದ ವನ ಇತ್ತು. ಒಂದು ಮರದ ಹತ್ತಿರ ನೆಲದಮೇಲೆ ಮಾವಿನ ಹಣ್ಣುಗಳು ಬಿದ್ದಿದ್ದವು. ಮರದಲ್ಲಿ ಕೂಡಾ ಹಣ್ಣುಗಳ ಗೊಂಚಲು ಇದ್ದವು. ನಾವು ನೆಲದ ಮೇಲೆ ಬಿದ್ದ ಮಾವಿನ ಹಣ್ಣನ್ನು ತುಳಿಯುತ್ತಾ 3 ಮೈಲಿ ಪ್ರಯಾಣ ಮಾಡಿದೆವು. ನಾವು ಆ ಗುಹೆಯ ಕೊನೇಭಾಗಕ್ಕೆ ಬರುತ್ತಿರುವಾಗ ಒಂದು ದೊಡ್ಡ ಕರಡಿ ಗರ್ಜಿಸುತ್ತಾ ಮೇಲೆ ಎದ್ದು ನಿಂತಿತು. ಅದರ ದಂತಗಳು ಸುಮಾರು 3 ಅಂಗುಲ ಇತ್ತು. ಅದು ನಮ್ಮನ್ನು ನುಂಗಿಬಿಡುವಂತೆ ಬಾಯಿ ತೆರೆದು ನಮ್ಮ ಕಡೆಗೆ ಬರುತ್ತಿತ್ತು. ಸ್ವಾಮಿಯವರು ಮುಂದೆ, ನಾನು ಅವರ ಹಿಂದೆ ನಡೆಯುತ್ತಿದ್ದೆವು. ನಾನು ಭಯ ಪಟ್ಟು ಒಂದು ಮಾವಿನ ಮರದ ಹಿಂದೆ ಬಚ್ಚಿಟ್ಟುಕೊಂಡು ನೋಡುತ್ತಿದ್ದೆ. ಶ್ರೀ ಸ್ವಾಮಿಯವರು ಚಿಟುಕೆ ಹಾಕುತ್ತಾ, ನಾಯಿಯನ್ನು ಕರೆಯುವಂತೆ ಶಬ್ದಮಾಡುತ್ತಾ ಅದರ ಹತ್ತಿರ ಹೋಗಿ, ತಮ್ಮ ಬಲಗೈಯ್ಯನ್ನು ಅದರ ತಲೆಯಿಂದ ಹಿಡಿದು, ಬೆನ್ನಿನ ಮೇಲಿಂದ ಅದರ ಬಾಲದವರಗೆ ಮೂರು ಬಾರಿ ಸವರಿದರು. ತಕ್ಷಣ, ಆ ಕರಡಿ ಕೆಳಗೆ ಬಗ್ಗಿ ಸ್ವಾಮಿಯವರ ಪಾದಗಳಮೇಲೆ ತನ್ನ ತಲೆಯಿಟ್ಟು ಆಮೇಲೆ ಎದ್ದು

ಬೆಟ್ಟದೊಳಗೆ ಹೊರಟು ಹೋಯಿತು. ನಾನು ತಕ್ಷಣ ಸ್ವಾಮಿಯವರ ಬಳಿ ಬಂದೆ.

"ಅಲ್ಲಿ ಒಂದು ರಸ್ತೆ, ಒಂದು ಈಶ್ವರ ಲಿಂಗ, 2 ಸ್ತ್ರೀ ವಿಗ್ರಹಗಳು ಇದ್ದವು. ಬೆಟ್ಟದ ಮೇಲಿನಿಂದ ಆ ಮೂರು ಶಿಲೆಗಳಮೇಲೆ ಮೂರು ನೀರಿನ ಧಾರೆ ಬೀಳುತ್ತಿತ್ತು. ಯಾರೋ ಅರಿಸಿನ ಕುಂಕುಮ ಪತ್ರೆ ಗಳಿಂದ ಆ ಶಿಲೆಗಳಿಗೆ ಪೂಜೆ ಮಾಡಿದಂತೆ ಆ ಪ್ರಾಂತವೆಲ್ಲಾ ಸುವಾಸನೆಯಿಂದ ತುಂಬಿ ಹೋಗಿತ್ತು. ಸ್ವಾಮಿಯವರು ಅವರ ಎಡಗೈಯಲ್ಲಿ ಕೋಲು ಹಿಡಿದು, ಆ ವಿಗ್ರಹಗಳ ಜೊತೆ ಯಾವುದೋ ವಿಚಿತ್ರ ಭಾಷೆಯಲ್ಲಿ ಮಾತಾಡಿದರು. ಇಷ್ಟರಲ್ಲಿ ಮೂರು ಮಾರು ದೂರದಲ್ಲಿ ಆಗ್ನೇಯ ದಲ್ಲಿದ್ದ ನೀರಿನ ಕೊಡದ ಹತ್ತಿರ ಹೋದೆ. ಆ ಕೊಡದ ಉತ್ತರ ದಕ್ಷಿಣದಲ್ಲಿ ಎರಡು ಮಾವಿನ ಮರಗಳಿದ್ದವು. ದಟ್ಟವಾಗಿರುವ ಆ ಮರದ ಕೊಂಬೆಗಳು ಕೆಳಕ್ಕೆ ಬಗ್ಗಿತ್ತು. ನಾನು ಉತ್ತರದಲ್ಲಿದ್ದ ಮರವನ್ನು ಹಿಡಿದು ನಾನು ಆ ಕೊಡದೊಳಗೆ ಬಗ್ಗಿ ನೋಡಿದೆ. ಅದರೊಳಗಿನ ನೀರು ಹೇಳಲಾರದಷ್ಟು ಆಳ ಇತ್ತು. ಅದರೊಳಗೆ ಬೆಳ್ಳಿ, ಬಂಗಾರದ ನಾಣ್ಯಗಳು ರಾಶಿಗಟ್ಟಿ ಇದ್ದವು. ನಾನು ಹಾಗೆ ನೋಡುತ್ತಿರುವಾಗ ಪಶ್ಚಿಮದಿಂದ ಒಂದು ದೊಡ್ಡ ಮೀನಿನ ತಲೆ ಆ ಕೊಡದೊಳಗೆ ಪ್ರವೇಶಿಸಿತು. ಅದರ ತುಟಿಗಳು ಮತ್ತು ಕಿವಿಗಳ ಮೇಲೆ ಚಿನ್ನದ ಓಲೆಗಳು ಹಾಕಿದಂತೆ ಕಂಡಿತು. ಆ ಮೀನಿನ ತಲೆ ಆನೆಯ ತಲೆ ಗಾತ್ರ ಇತ್ತು. ಅದರ ಕಿವಿಗಳು ಬಾಗಿಲಷ್ಟು ದೊಡ್ಡಕ್ಕಿದ್ದವು. ಆ ಮೀನು ತನ್ನ ಕಿವಿಗಳನ್ನು ಅಲ್ಲಾಡಿಸಿದಾಗ, ನೀರು ಪರಪರ ಅಂತ ನೊರೆಸುರಿಸುತ್ತಾ ಉಕ್ಕಿಬಂತು. ನಾನು ಭಯದಿಂದ ಸ್ವಾಮಿಯವರ ಹತ್ತಿರ ಬಂದು, "ಸ್ವಾಮಿ ಅದರಲ್ಲಿ ನೀರು ಉಕ್ಕುತ್ತಿದೆ, ನಾವು ಹೊರಗೆ ಹೇಗೆ ಹೋಗುವುದು" ಎಂದು ಕೇಳಿದೆ.

ಆಗ ಸ್ವಾಮಿಯವರು, "ಅದೆಂತಲೇಯ್ಯಾ! ಅಡ್ಡೇಲು (ವೇಳು ವೆಡಲ್ಪಂತ) ಲೋತೇಲೇ!" (ಅಯ್ಯಾ! ಒಂದು ಬೆರಳಿನಷ್ಟೇ ಆಳವಿರುವುದು) ಎಂದರು. ಅಲ್ಲಿಂದ ನಾವು ಮೂರು ಮೈಲಿ ಆ ಕೊಡದೊಳಗಿನಿಂದ ಸುರಿಯುತ್ತಿರುವ ಬೆರಳಷ್ಟು ಆಳದ ನೀರಿನಲ್ಲಿ ನಡೆದು ಹೊರಕ್ಕೆ ಬಂದೆವು. ಅಲ್ಲಿ ಬೆಟ್ಟದ ಮೇಲಿನ ಕಲ್ಲು ಬಂಡೆಗಳು, ಮರಗಳು ಯಥಾ ಸ್ಥಿತಿಯಲ್ಲಿ ಇದ್ದವು. ನಾವು ಪೆಂಚಲಕೋನ ಸೇರಿದೆವು. ಸ್ವಾಮಿಯವರು ನಮೆಲ್ಲರನ್ನು, "ಮೀರು ತೆಗಚರ್ಲ ಮೀದುಗಾ ಕುಲ್ಲೂರು ರಂಡಿ, ನೇನು ಸಾಧುವಯ್ಯ ಗಾರಿನಿ ಕಲುಸುಕೊನಿ ವಸ್ತಾನು" (ನೀವುಗಳು ತೆಗಚರ್ಲ ಮಾರ್ಗವಾಗಿ ಕುಲ್ಲೂರಿಗೆ ಬನ್ನಿ. ನಾನು ಸಾಧುವಯ್ಯನವರನ್ನು ಭೇಟಿ ಮಾಡಿ ಬರುತ್ತೇನೆ) ಎಂದು ಬೆಟ್ಟದ ಕಡೆ ಹೊರಟು ಹೋದರು. ಕುಲ್ಲೂರು ತಲುಪುವ ಮಾರ್ಗ ಅತ್ಯಂತ ಕಡಿಮೆಯಾಗಿದ್ದರೂ, ಸ್ವಾಮಿಯವರು ನಮಗಿಂತ ಮೊದಲೇ ತಲುಪಿ, ಅವರ ಭಕ್ತನಾದ ಪೆದ್ದಯ್ಯನವರ ಮನೆಯ ಮುಂದೆ ಅಗ್ನಿ ಕುಂಡದ ಬಳಿ ಕುಳಿತು ತಮ್ಮ ಬೆರಳಚ್ಚುಗಳನ್ನು ಹಾಕುತ್ತಿದ್ದರು. ಶ್ರೀ ಸ್ವಾಮಿಯವರು ನನ್ನನ್ನು ಕರೆದು, "ನೀ ಪೇರು ಮಾರಿಪೋಯಿಂದಿ. ನೀಕು ನಿಂದಲು ವಚ್ಚಾಯಿ. ವೆಂಟನೇ ಇಂಟಿಕಿಪೋ!" (ನಿನ್ನ ಹೆಸರು ಬದಲಾಗಿದೆ, ನಿನ್ನ ಮೇಲೆ ಆರೋಪಣೆ ಮಾಡಲಾಗಿದೆ, ತಕ್ಷಣೆವೇ ಮನೆಗೆ ಹೋಗು" ಎಂದರು.

"ನನಗೆ, ತುಲಶಮ್ಮನವರು ನನ್ನ ಖರ್ಚಿಗೆ 2 ರೂ ಕೊಟ್ಟರು. ನಾನು ಮನೆ ಸೇರುವ

ಹೊತ್ತಿಗೆ, ಅಲ್ಲಿ ಊರಿನ ಜನವೆಲ್ಲಾ ಗುಂಪುಕೂಡಿದರು. ಅವರೆಲ್ಲಾ ನನ್ನನ್ನು ಆಶ್ಚರ್ಯದಿಂದ ನೋಡಿದರು. ನಾನು ವಿಚಾರಿಸಿದಾಗ, ದನ ಕಾಯುವ ಮಕ್ಕಳು ನನ್ನನ್ನು ಕೊಂದು ಚಾಪೆಯಲ್ಲಿ ಸುತ್ತಿ ಈಚಲ ಮರದಲ್ಲಿ ಬಚ್ಚಿಟ್ಟಿದ್ದಾರೆ ಎಂಬ ವದಂತಿ ಇದೆ ಎಂದು ನನಗೆ ತಿಳಿಸಿದರು. ನನ್ನ ಮೃತ ದೇಹವನ್ನು ತರಲು ಎಲ್ಲರೂ ಇಲ್ಲಿ ಗುಂಪು ಕೂಡಿದರೆಂದು ತಿಳಿಯಿತು. ಎಲ್ಲರೂ ಈಚಲ ಮರದ ಹತ್ತಿರ ಹೋಗಿ ನೋಡಿದರೆ, ಅಲ್ಲಿ ಹಳೆಯ ಚಾಪೆ ಮಾತ್ರವಿತ್ತು. ಆಗ ನನಗೆ ಸ್ವಾಮಿಯವರ ಮಾತು ಅರ್ಥವಾಯಿತು.

"ಒಮ್ಮೆ ಗೊಲಗಮೂಡಿಯಲ್ಲಿ ನಾನು ಸ್ವಾಮಿಯವರ ಬಳಿ ಕೆಲವು ದಿನ ಇದ್ದೆ. ಒಂದು ರಾತ್ರಿ ಸುಮಾರು ಹನ್ನೆರಡು (12.00) ಗಂಟೆಯ ಸಮಯ, ಸ್ವಾಮಿಯವರು ಎಲ್ಲಿಗೋ ಒಬ್ಬರೇ ಹೊರಟರು. ನಾನೂ ಎಂದಿನಂತೆ ಅವರಿಗೆ ಗೊತ್ತಾಗದೆ, ಗುಟ್ಟಾಗಿ ಅವರನ್ನ ಹಿಂಬಾಲಿಸಿದೆ. ಸ್ವಾಮಿಯವರು "ನಾಗುಲವರಂ" ಎಂಬ ಕಾಡಿಗೆ ಹೋಗಿ ಅಲ್ಲಿ "ಪೆಗಡ್ರಾಜುಗುಂಟ" ಎಂಬ ಜಾಗದಲ್ಲಿ ನಿಂತರು. ನಾನು ಸಮೀಪದಲ್ಲಿದ್ದ ವಿಡವಲಿ (ತುಂಗ) ಪೊದೆಯ ಹಿಂದೆ ಅಡಗಿ ಕೊಂಡೆ. ಸ್ವಾಮಿಯವರು ಒಂದು ಹಳ್ಳದ ಹತ್ತಿರ ಸ್ವಲ್ಪ ಹೊತ್ತು ನಿಂತು, ನಾನು ಅಡಗಿಕೊಂಡಿದ್ದ ಜಾಗಕ್ಕೆ ಬಂದು, "ನೇನು ಎನ್ನಿಸಾರ್ಲು ಚೆಪ್ಪಿನಾ ನೀವು ಚಾಟುಗಾ ವಸ್ತೂನೇ ವುಂಟಾವು. ಇದಿ ಎಟುವಂಟಿ ಗಂಡ್ರಕತ್ತೆರ ಕಾಲಮನುಕುನ್ನಾವ್? (ನಾನು ಎಷ್ಟು ಹೇಳಿದರೂ ನೀನು ಗುಟ್ಟಾಗಿ ಹಿಂಬಾಲಿಸುತ್ತಲೇ ಇದ್ದೀಯ. ಈ ಸಮಯ ಎಷ್ಟು ಅಪಾಯಕಾರಿ ಎಂದು ನಿನಗೆ ತಿಳಿದಿದೆಯೇ? ಎಂದು ಕೇಳಿ, ಒಂದು ದಿಕ್ಕಿನಲ್ಲಿ ನೋಡು ಎಂದರು. ಅಲ್ಲಿ ಒಂದು ದೊಡ್ಡ ಹುಣಸೇ ಮರದ ತೊಲೆಯ (Tree Trunk) ಗಾತ್ರದ ದೊಡ್ಡ ಹಾವು ಒಂದು ತುಂಡು ತುಂಡಾಗಿ ಸತ್ತು ಬಿದ್ದಿತ್ತು. "ಪೈವಾಳ್ಳು ದಾನಿನಲಾ ಚೇಯಕಪೋತೇ ನಿನ್ನೂ, ನನ್ನೂ ಅದಿಯೇಮಿ ಚೇಸಿಯುಂಡುನೋ? ನೀವಿಲಾ ಎಪ್ಪುಡೂ ರಾಕೂಡದು" (ಮೇಲಿನವರು ಅದನ್ನು ಹೀಗೆ ಮಾಡದೇ ಇದ್ದಿದ್ದರೆ, ಅದು ನಿನ್ನ ಮತ್ತು ನನ್ನನ್ನು ಏನು ಮಾಡುತ್ತಿತ್ತೋ? ನೀನು ಹೀಗೆ ಯಾವತ್ತೂ ಬರಬಾರದು) ಎಂದು ಹೇಳಿ ನನ್ನನ್ನು ಹಿಂದೆ ಕಳುಹಿಸಿ ಬಿಟ್ಟರು. ನಾನು ಊರಿನೊಳಗೆ ಬಂದು ಬಿಟ್ಟೆ. ಬೆಳಿಗ್ಗೆ 7 ಗಂಟೆಗೆ ಸ್ವಾಮಿಯವರು, ಸ್ವಲ್ಪ ಕಟ್ಟಿಗೆಗಳು, ನಾಗಜೆಮುಡು (ಪಾಪಾಸು ಕಳ್ಳಿ – Prickly pear cactus) ಕಟ್ಟಿ ತಂದರು.

"ಶ್ರಿ ಸ್ವಾಮಿಯವರು ಅರ್ಧರಾತ್ರಿಯಲ್ಲಿ ಹೊರಟು, ಯಥೇಚ್ಛವಾಗಿ ಸಂಚರಿಸುತ್ತಿದ್ದರು. ಒಮ್ಮೆ ಮಳೆಗಾಲದಲ್ಲಿ ಗುಡುಗು ಮಿಂಚು ಸಹಿತ ಭಾರೀ ಮಳೆ ಬೀಳುತ್ತಿತ್ತು. ಆ ಕಗ್ಗತ್ತಲಿನಲ್ಲಿ ಸ್ವಾಮಿಯವರು ಒಂದು ಈಚಲ ಗರಿಯನ್ನು ತಮ್ಮ ತಲೆಯ ಮೇಲಿಟ್ಟುಕೊಂಡು ಧುನಿಯ ಹತ್ತಿರದಿಂದ ಹೊರಟರು. ಅವರು ಎಲ್ಲಿಗೆ ಹೋಗುತ್ತಾರೋ, ಏನು ಮಾಡುತ್ತಾರೋ, ತಿಳಿಯುವುದಕ್ಕೆ ನಾನು ಅವರಿಗೆ ಕಾಣದಹಾಗೆ, ಅವರನ್ನು ಹಿಂಬಾಲಿಸಿದೆ. ಮುದಿಗೇಡು (ಒಂದು ಊರು) ಹತ್ತಿರವಿದ್ದ ಕಳ್ಳೇರು ನದಿಯ ದಡದಲ್ಲಿ ಅಗಸರ ಕಟ್ಟೆ ಹತ್ತಿರ ಬಂದು, ಸ್ವಾಮಿಯವರು ಅವರ ಬಟ್ಟೆ ಬಿಚ್ಚಿ ದಡದಲ್ಲಿಟ್ಟರು. ಕಳ್ಳೇರು ನದಿಯ ದಡದವರೆಗೆ ಜೋರಾಗಿ ಪ್ರವಾಹಿಸುತ್ತಿದ್ದ ಆ ನೀರಿನಲ್ಲಿ ಸ್ವಾಮಿಯವರು ಚಿಕ್ಕ ಮಗುವಂತೆ, ನೀರನ್ನು ಚಿಮುಕಿಸುತ್ತಾ, ಯಾರಿಗೂ ಅರ್ಥವಾಗದ ಭಾಷೆಯಲ್ಲಿ

ಮಾತನಾಡುತ್ತಾ, ಒಂದು ದಡದಿಂದ ಇನ್ನೊಂದು ದಡಕ್ಕೆ ತಿರುಗುತ್ತಿದ್ದರು. ಸ್ವಲ್ಪ ಹೊತ್ತಾದನಂತರ, ಬಟ್ಟೆ ಹಾಕಿಕೊಂಡು ನಾನಿದ್ದ ಈಚಲಮರದ ಜಾಗಕ್ಕೆ ಬಂದು ತಮ್ಮ ಕೈನಲ್ಲಿದ್ದ ಕೋಲಿನಿಂದ ನನ್ನನ್ನು ಚುಚ್ಚಿ, "ರಾಕ್ಷಸ ಲಗ್ನಂಲೋ ನೀವಿಲಾ ರಾವಚ್ಚಾ?" (ರಾಕ್ಷಸ ಲಗ್ನದಲ್ಲಿ ನೀನು ಹೇಗೆ ಬರಬಹುದಾ?" ಎಂದು ಕೇಳಿ, ಆ ಕೋಲನ್ನು ನನ್ನ ಕತ್ತಿನ ಮೇಲಿಟ್ಟು ನೂಕುತ್ತಾ ನನ್ನನ್ನು ಮನೆಗೆ ಕರೆದುಕೊಂಡು ಬಂದರು. ನಾವು ಮನೆ ಸೇರಿದ ಮೇಲೆ, ಏನೂ ತಿಳಿಯದವರಹಾಗೆ ಧುನಿಯ ಬಳಿ ಕುಳಿತರು. ನಾನು ನೇರವಾಗಿ ಹೋಗಿ ಮಲಗಿದೆ.

"ನಾನು ಮುದಿಗೇಡಿನಲ್ಲಿ ಇದ್ದಾಗ, ಒಂದು ಗುಡಿಸಲಿನಲ್ಲಿದ್ದೆ. ನನಗೆ ಮನೆ ಕಟ್ಟುವ ಶಕ್ತಿ ಇರಲಿಲ್ಲ. ಒಂದು ದಿನ ಸ್ವಾಮಿಯವರು ನನ್ನನ್ನು ಮನೆ ಕಟ್ಟಿಕೋ ಎಂದು ಹೇಳಿ, ಅವರ ಸ್ವಹಸ್ತದಿಂದ ಶಂಖುಸ್ಥಾಪನೆ ಮಾಡಿದರು. ಆಮೇಲೆ ಕೆಲಸ ಹೇಗೆ ಮಾಡಬೇಕೆಂದು ನಾನು ಸಂದೇಹದಲ್ಲಿದ್ದಾಗ, "ನೀವು ನೇರುಗಾ ಈ ದಿಕ್ಕುಗಾ ರೋಡ್ಡು ಮೀದ ಪೋತುಂಟೇ, ನೀ ಪನುಲನ್ನೀ ನೆರವೇರುತಾಯಿ" (ನೀನು ನೇರವಾಗಿ ಈ ದಿಕ್ಕಿನಲ್ಲಿ ಹೋದರೆ ನಿನ್ನ ಕೆಲಸಗಳೆಲ್ಲಾ ನೆರವೇರುತ್ತದೆ) ಎಂದು ಹೇಳಿದರು. ನಾನು ಆ ದಿಕ್ಕಿನಲ್ಲಿ ಹೋಗುತ್ತಿದ್ದರೆ, ಕಮ್ಮಾರರು, ಇಟ್ಟಿಗೆ ಮಾಡುವವರು, ಇವುಗಳನ್ನು ಸಾಗಿಸುವ ಗಾಡಿಯವರು ದಾರಿಯಲ್ಲಿ ಕಂಡು, "ಎಲ್ಲಿಗೆ ಹೋಗುತ್ತಿದ್ದೀಯ" ಎಂದು ಕೇಳಿ, "ನಾವೇ ಬಂದು ಆ ಕೆಲಸ ಮಾಡುತ್ತೇವೆ" ಎಂದು ಹೇಳಿ, ನನ್ನ ಕೆಲಸ ಪೂರ್ತಿ ಮಾಡಿ ಹೋದರು. ನನ್ನ ಸ್ನೇಹಿತರು ನಾನು ಕೇಳದೆ ನನಗೆ ಪೈಕವನ್ನು ಮನೆಗೇ ತಂದು ಕೊಟ್ಟು, ನನ್ನ ಕೆಲಸ ಪೂರ್ತಿ ಮಾಡಿಸಿದರು. ಈ ಎಲ್ಲಾ ಕೆಲಸಗಳು ನನ್ನ ಪ್ರಮೇಯವೇನು ಇಲ್ಲದೆ ಮನೆ ಪೂರ್ತಿ ಆಯಿತು. ಸ್ವಲ್ಪಕಾಲದ ಮೇಲೆ ಸ್ವಾಮಿಯವರು ನಮ್ಮ ಮನೆಗೆ ಬಂದು ಮುಗುಳ್ನಗೆ ನಗುತ್ತಾ ಮನೆಯೊಳಗೆ ಧುನಿ ಹಾಕಿದರು. ನನ್ನ ಮನೆ ಎಲ್ಲರ ಮನೆಗಳಿಗಿಂತ ಚೆನ್ನಾಗಿ ಕಾಣುತ್ತದೆ ಎಂದು ನನ್ನ ಹಳ್ಳಿಯ ಜನರು ಹೇಳಿದರು. ಇದು ಎಲ್ಲಾ ಸ್ವಾಮಿಯವರ ದಯ! (ಇದರ ಪೂರ್ತಿ ವಿವರಗಳನ್ನು "ಸ್ವಾಮಿಸನ್ನಿಧಿ" ಅಧ್ಯಾಯದಲ್ಲಿ ಕಾಣ ಬಹುದು).

ಒಮ್ಮೆ ಕಾಶಿಗೆ ತೀರ್ಥಯಾತ್ರೆಗೆ ಹೋಗಲು ಕೆಲವು ಭಕ್ತರು ಬಯಸಿದರು. ಅವರು ತಮ್ಮ ಸ್ನೇಹಿತೆ ತುಲಸಮ್ಮನನ್ನು ತಮ್ಮ ಜೊತೆಯಲ್ಲಿ ಬರಲು ಕರೆದರು. ಆಕೆ, ಸ್ವಾಮಿಯವರನ್ನು ತಮ್ಮೊಂದಿಗೆ ಬನ್ನಿ ಎಂದು ಪ್ರಾರ್ಥಿಸಿದರು. ಸ್ವಾಮಿಯವರು, "ವಾಳ್ಳನು ಪೋನೀಯಮ್ಮಾ! ಮನಂ ರೇಪು ಪೋದಾಮು" (ಅವರು ಹೋಗಲಿ ಬಿಡಮ್ಮ ನಾವು ನಾಳೆ ಹೋಗೋಣ) ಎಂದು 4 ದಿನಗಳು ಹಾಗೇಯೇ ಕಳೆದರು. ಸ್ವಾಮಿಯವರು ಬರ್ತೀನಿ ಎಂದ ಮಾತುಗಳು ಬರೀ ಮಾತುಗಳೇ ಎಂದು ತುಲಸಮ್ಮ ಬೇಸರದಿಂದ ರಾತ್ರಿ ಊಟ ಮಾಡದೇ ಮಲಗಿ ಬಿಟ್ಟರು. ಬೆಳಗ್ಗೆ 8 ಗಂಟೆಯಾದರೂ ಆಕೆ ಏಳಲಿಲ್ಲ. ಭಕ್ತರು ಆಕೆಯನ್ನು ತಟ್ಟಿ ಎಬ್ಬಿಸಿದರು."ನಾನು ಏನು ಇಲ್ಲಿದ್ದೀನಿ?" ಎನ್ನುತ್ತಾ ಅವರು ಎದ್ದರು. ರಾತ್ರಿಯೆಲ್ಲಾ ಆಕೆ ಕಾಶೀ ಯಾತ್ರೆ ಮಾಡಿದ ಹಾಗೆ ಸ್ವಪ್ನದಲ್ಲಿ ದರ್ಶನ ಆಯಿತು ಎಂದು ಆಕೆ ವಿವರಿಸಿದರು. ಸಾಕ್ಷಾತ್ತು ಸ್ವಾಮಿಯವರೇ ಯಾತ್ರೆ ಮಾಡಿಸಿದರೆಂದು ಆಕೆ ಅಂದುಕೊಂಡಳು. ಇದು ಕೇವಲ ಕಾಕತಾಳೀಯ ಕನಸು, ಕನಸು ಹೇಗೆ ನಿಜವಾಗುತ್ತದೆ

ಎಂದು ಇತರ ಭಕ್ತರು ಭಾವಿಸಿದರು? ಒಂದು ತಿಂಗಳಾದಮೇಲೆ, ಯಾತ್ರೆಗೆ ಹೋಗಿ ಬಂದ ಭಕ್ತರಿಗೆ ಎಲ್ಲೆಲ್ಲಿ ಏನೇನು ಇದೆ ಎನ್ನುವುದು ತುಲಸಮ್ಮನವರು ವಿವರಿಸಿದರು. ಅದನ್ನು ಕೇಳಿ ಸ್ವಾಮಿಯವರೇ ಆಕೆಗೆ ನಿಜವಾದ ಕಾಶೀಯಾತ್ರೆ ಮಾಡಿಸಿದರೆಂದು ಗುರ್ತಿಸಿ ಆಶ್ಚರ್ಯ ಪಟ್ಟರು. ಈ ಲೀಲೆ ಅಂತರಾರ್ಥ ಪೂರ್ತಿಯಾಗಿ ತಿಳಿಯಬೇಕೆಂದರೆ, "ಗುರುಚರಿತ್ರೆಯಲ್ಲಿ" ಕೆಲವು ಲೀಲೆಗಳನ್ನು ಓದ ಬೇಕು.

ಶ್ರೀ ಸ್ವಾಮಿಯವರು ಹೋಮ ಕುಂಡಕ್ಕೆ ಬಹಳ ಸಮೀಪವಾಗಿ ಮಲಗುತ್ತಿದ್ದರು. ಗೊಲಗಮೂಡಿ ಆಶ್ರಮದಲ್ಲಿ ಹುಣಸೇ ಮರದ ಕೆಳಗೆ ಗುರವಯ್ಯನವರು, ಶ್ರೀ ಸ್ವಾಮಿಯವರ ಹತ್ತಿರ ಮಲಗಿದ್ದರು. ಎಲ್ಲರೂ ಮಲಗಿದ್ದರು. ಸ್ವಲ್ಪ ಜನ ದಿಗಂಬರ ಋಷಿಗಳು ಬಂದು ಸ್ವಾಮಿಯವರ ಸುತ್ತಲೂ ಕುಳಿತುಕೊಂಡು ಮಾತಾಡುತ್ತಿದ್ದರು. ಗುರವಯ್ಯನಿಗೆ ಎಚ್ಚರವಾಗಿ ಹೋಮಕುಂಡ ಸರಿಮಾಡಲು ಹೋದರು. "ಏಮಯ್ಯಾ! ಇಪ್ಪುಡು ಲೇಚಾವು?" (ಏನಪ್ಪಾ! ಈಗ ಎದ್ದೆ?) ಎಂದರು ಸ್ವಾಮಿಯವರು. ಆಗ, ಗುರವಯ್ಯ ಪ್ರಜ್ಞೆ ತಪ್ಪಿ ಬಿದ್ದುಬಿಟ್ಟರು, ಋಷಿಗಳು ಹೋಗುವವರೆಗೂ ಎಚ್ಚರ ಆಗಲಿಲ್ಲ.

ಒಮ್ಮೆ ಸ್ವಾಮಿಯವರು ಮತ್ತು ಜಯರಾಮಯ್ಯ ಒಟ್ಟಿಗೆ ಬೆಟ್ಟದ ಮೂಲಕ ಬದ್ವೇಲು ಗ್ರಾಮಕ್ಕೆ ಹೋದರು. "ಆಕಾಶಂಲೋ ವೆಳುತುನ್ನ ವಾರಿನಿ ಚೂಡಂಡಯ್ಯಾ!" (ಆಕಾಶದಲ್ಲಿ ಹೋಗುತ್ತಿರುವವರನ್ನು ನೋಡಿರಯ್ಯಾ) ಎಂದು ಸ್ವಾಮಿಯವರು ಹೇಳಿದರು. ಯಾರೂ ಕಾಣಿಸಲಿಲ್ಲ ಎಂದರು ಜಯರಾಮಯ್ಯನವರು. ಆಗ ಸ್ವಾಮಿ ಜಯರಾಮಯ್ಯನ ಕಣ್ಣುಗಳನ್ನು ಮುಟ್ಟಿ ಮತ್ತೆ ನೋಡಲು ಹೇಳಿದರು. ಅವರಿಗೆ ತುಂಬಾ ಎತ್ತರವಾದ ಮನುಷ್ಯರು ಆಕಾಶದಲ್ಲಿ ನಡೆಯುವುದು ಕಂಡರು. ಪುನಃ ಸ್ವಾಮಿಯವರು ಅವರ ಕಣ್ಣು ಮುಟ್ಟಿದಾಗ ಅವರಿಗೆ ಆ ದೃಶ್ಯ ಮಾಯವಾಗಿ, ಅವರು ತನ್ನ ಸುತ್ತಮುತ್ತಲಿನ ಪರಿಸರ ಅರಿತುಕೊಂಡರು.

ಒಮ್ಮೆ ವಕ್ಕೆಮ್ಮ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಹೋದಾಗ, ಅಲ್ಲಿ ದೇವರುಗಳೆಲ್ಲರೂ ಸಭೆ ನಡೆಸುತ್ತಿದ್ದಂತೆ ದರ್ಶನವಾಯಿತು. ಆ ದೃಶ್ಯ ನೋಡಿದ ನಂತರ ಆಕೆ ಆ ವೈಭವವನ್ನು ವರ್ಣಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಬ್ರಹ್ಮ ಗೊಂಬೆಗಳು ಮಾಡಿ ಅದರ ಹಣೆಯ ಮೇಲೆ ಬರೆಯುತ್ತಿದ್ದಹಾಗೆ, ಒಬ್ಬ ಸ್ತ್ರೀಮೂರ್ತಿ, ಆ ಗೊಂಬೆಗಳಲ್ಲಿದ್ದ ಲೋಪ/ದೋಷಗಳನ್ನು ಮಣ್ಣು ಮೆತ್ತಿ ಸರಿ ಮಾಡುತ್ತಿರುವಹಾಗೆ ದರ್ಶನ ಆಯಿತೆಂದು ಹೇಳಿದರು. ಇಂತಹ ದರ್ಶನ ಕೇವಲ ಭ್ರಾಂತಿ ಎನ್ನುವುದಕ್ಕೆ ಸಾಧ್ಯವಿಲ್ಲ. ವಿಶಾಖಪಟ್ಟಣದಲ್ಲಿ ಯಾಸೀನ್ ಬಾಬಾ ಎಂಬ ಮುಸ್ಲಿಂ ಮಹಾತ್ಮ ಸೋಮಯ್ಯ ಎಂಬ ಭಕ್ತನಿಗೆ ಈ ರೀತಿಯ ದರ್ಶನ ಮಾಡಿಸಿದರಂತೆ.

ವಕ್ಕೆಮ್ಮ ಒಂದು ದಿನ ಸ್ವಾಮಿಯವರಿಗೆ ಸ್ವಲ್ಪ ದೂರದಲ್ಲಿ ನಿಂತುಕೊಂಡಿದ್ದರು. ಸ್ವಾಮಿಯವರು ಆಕೆಯನ್ನು ಪ್ರೀತಿಯಿಂದ ಹತ್ತಿರಕ್ಕೆ ಕರೆದರು. ಹತ್ತಿರ ಬಂದಾಗ, ಅಲ್ಲಿ ಶ್ರಿ ಸ್ವಾಮಿಯ ಸ್ಥಾನದಲ್ಲಿ ಬಳ್ಳಿಯ ಮೇಲೆ ಕೊಳಲು ಊದುತ್ತಾ ಶ್ರೀ ಕೃಷ್ಣ ನೃತ್ಯ ಮಾಡುತ್ತಿದಂತೆ ಕಂಡಿತು. ಅವರು ತನ್ಮಯರಾಗಿ ಕೆಲವು ನಿಮಿಷಗಳ ಕಾಲ ಆನಂದ ಭಾಷ್ಪ ಸುರಿಸುತ್ತಾ ನೋಡಿದರು. ಆಮೇಲೆ, ಆ ಸ್ಥಾನದಲ್ಲಿ ಶ್ರೀ ಸ್ವಾಮಿಯವರು ಎಂದಿನಂತೆ ದರ್ಶನ

ಕೊಟ್ಟರು. ಇನ್ನೊಮ್ಮೆ ವಕ್ಕೆಮ್ಮ ಗೊಲಗಮೂಡಿಯಲ್ಲಿದ್ದ ಆಂಜನೇಯಸ್ವಾಮಿಯ ಗುಡಿಗೆ ಹೋದರು. ಆಂಜನೇಯಸ್ವಾಮಿ ಅವರ ಪಕ್ಕದಲ್ಲಿ ನಿಂತು "ಹೂವಿನ ಹಾರಹಾಕಿ ಪೂಜೆ ಮಾಡು" ಎಂದು ಸ್ಪಷ್ಟವಾಗಿ ಹೇಳಿದರು.

ಸದ್ಗುರುಗಳ ಅನುಗ್ರಹಕ್ಕೆ ಪಾತ್ರರಾದವರಿಗೆ ದೇವತೆಗಳು ಕೂಡ, ಅವರೇ ಸಾಕ್ಷಾತ್ಕರಿಸುತ್ತಾರೆ ಎಂದು ಶ್ರೀ ಗುರುಚರಿತ್ರೆಯಲ್ಲಿ ಹೇಳಿದೆ. 42

ಒಮ್ಮೆ ಮಹಾಭಕ್ತಳಾದ ವಕ್ಕೆಮ್ಮ ಶ್ರೀ ಸ್ವಾಮಿಯವರ ಮಹಿಮೆ ನೋಡಲು ಬಯಸಿದರು. ಒಂದು ದಿನ ಆಶ್ರಮದಲ್ಲಿ ಸ್ವಾಮಿಯವರ ಎದುರು 30 ಅಡಿ ದೂರದಲ್ಲಿ ನೆಲದ ಮೇಲೆ ಎಚ್ಚರವಾಗಿ ಮಲಗಿದ್ದರು. ಆಕೆಗೆ 20 ಅಡಿ ದೂರದಲ್ಲಿ ರಾಮ ಲಕ್ಷ್ಮಣರು ನಿಂತುಕೊಂಡು ದರ್ಶನ ಕೊಟ್ಟರು. ಅವರು ಅದೃಶ್ಯವಾಗಿ ಅದೇ ಸ್ಥಾನದಲ್ಲಿ ಶ್ರೀ ಕೃಷ್ಣ ದರ್ಶನ ಕೊಟ್ಟರು. ತಾನು ಬಯಸಿದ ಹಾಗೆ ದರ್ಶನ ಮಾಡಿಸಿದರೆಂದು ಭಕ್ತಿಯಿಂದ ನಮಸ್ಕರಿಸಿದರು. ವಕ್ಕೆಮ್ಮನವರಿಗೆ ಈ ರೀತಿಯ ಅದ್ಭುತಗಳು ನಡೆದಾಗ, ಇತರ ಭಕ್ತರಿಗೆ ಹೇಳಲು ಸ್ವಾಮಿಯವರು ಅನುಮತಿ ಕೊಡದೆ ಗುಪ್ತವಾಗಿ ಇಡು ಎಂದು ಸ್ವಾಮಿಯವರು ಎಚ್ಚರಿಕೆ ಕೊಟ್ಟರು. ಆದುದರಿಂದಲೇ ಸ್ವಾಮಿ ಸಮಾಧಿ ಆಗುವ ವರೆಗೂ ಅವಳು ಯಾರಿಗೂ ಹೇಳಲಿಲ್ಲ. ಹಾಗೆಯೇ ಇನ್ನೊಮ್ಮೆ ನೆಲ್ಲೂರು ಜಿಲ್ಲೆಯಲ್ಲಿ "ಗುರುವುಲ ದಿಬ್ಬ" ಎಂಬ ಜಾಗದ ಹತ್ತಿರ ಸೂರ್ಯ ನಮಸ್ಕಾರ ಮಾಡುತ್ತಿದ್ದರು. ಆಗ, ಅವರಿಗೆ ತಾವು ಕಣ್ಣು ಮಿಟುಕಿಸುವುದರಲ್ಲಿ ಅಂತರಿಕ್ಷದಲ್ಲಿ ಬೇರೆ ಒಂದು ಗ್ರಹವನ್ನು ಸೇರಿದ ಅನುಭವ ಆಯಿತು. ಅಲ್ಲಿ ಕೂಡ ಭೂಮಿಯಂತೆಯೇ ಕಲ್ಲುಗಳು, ಬಂಡೆಗಳು ಕಂಡವು.

ಒಂದು ದಿನ ವಕ್ಕೆಮ್ಮನಿಗೆ ಒಂದು ಸ್ವಪ್ನ ಬಂದಿತಂತೆ. ಆ ಸ್ವಪ್ನದಲ್ಲಿ ಸ್ವಾಮಿಯವರು ಮಲಗಿದ್ದು, ಒಂದೇ ಏಟಿನಲ್ಲಿ 4 ಮೈಲಿ ಜಾರಿ ಹೋಗುತ್ತಿದ್ದ ಹಾಗೆ ಕಂಡಿತು. ಹೀಗೆ 3 ಬಾರಿ ಮುಂದಕ್ಕೆ ಹಿಂದಕ್ಕೆ ಜಾರುತ್ತಾ ವಕ್ಕೆಮ್ಮನವರ ಹತ್ತಿರ ಬಂದು ಬಾಯಿ ತೆರೆದು ವಿಶ್ವರೂಪ ತೋರಿಸುತ್ತಿದ್ದರು. ಇಷ್ಟರಲ್ಲಿ ತುಲಸಮ್ಮ "ಅಬ್ಬಾ! ಭಲೇ ತೋರಿಸುತ್ತಿದ್ದಾರೇ ಆ! ಅಬ್ಬಾ! ಅನ್ನುತ್ತಾ ತನ್ನ ಕಾಲಿನ ಹಿಮ್ಮಡಿ ಸ್ವಾಮಿಯವರ ಬಾಯಿಗೆ ಅಡ್ಡ ಹಾಕಿದರು. ವಕ್ಕೆಮ್ಮ ಕೋಪದಿಂದ ತುಲಸಮ್ಮನನ್ನು ಪಕ್ಕಕ್ಕೆ ತಳ್ಳಿದರು. ಅಷ್ಟರಲ್ಲಿ ವಿಶ್ವರೂಪ ದರ್ಶನ ಮಧ್ಯದಲ್ಲೇ ನಿಂತು ಹೋಯಿತು. **ತುಲಸಮ್ಮ ಕಾಲು ಅಡ್ಡ ಹಾಕಿದರು ಎಂದರೆ ಪ್ರಕೃತಿ ಅಡ್ಡ ಹಾಕಿದಂತೆ ಅದು ಒಂದು ಸಂಕೇತ ಇರಬಹುದು.** 43

ಒಮ್ಮೆ ರೋಶಿರೆಡ್ಡಿ ಗೊಲಗಮೂಡಿಯಲ್ಲಿ ಹಗಲೇ ತೂಕಡಿಸುತ್ತಿದ್ದರು. ಅವರ
44 ಕಣ್ಣುಗಳು ಮುಚ್ಚಿಕೊಂಡಾಗ, ಸುಮಾರು 90 ಕಿ.ಮೀ ದೂರದಲ್ಲಿದ್ದ ಅವರ ಗ್ರಾಮ ಕಂಡಿತಂತೆ. ಅವರ ಕುಟುಂಬದವರೆಲ್ಲರೂ ಮಳೆಯಲ್ಲಿ ತೊಂದರೆ ಅನುಭವಿಸುತ್ತಾ ಎಳ್ಳಿನ ಕಟಾವು ಮಾಡುತ್ತಿದ್ದರು. ಅವರ ಮನೆ ಒಳಗೆ ನಿಂಬೇಕಾಯಿ ಕತ್ತರಿಸಿ ರಾಶಿ ಹಾಕಿದ್ದರು. ಸ್ವಲ್ಪ ಹೊತ್ತಿಗೆ ಆ ದೃಶ್ಯ ಮಾಯವಾಗಿ ಎಚ್ಚರವಾಯಿತು. ಮೂರುದಿನಗಳಾದ ನಂತರ, ರೋಶಿ ರೆಡ್ಡಿಯವರನ್ನು ನೋಡಬೇಕೆಂದು ಅವರ ಚಿಕ್ಕಮಗ ಗೊಲಗಮೂಡಿಗೆ ಬಂದನು. ಮನೆಯ ಹತ್ತಿರ ನಡೆದ ಎಳ್ಳಿನ ಮತ್ತು ನಿಂಬೆ ಕೊಯ್ಲು ವಿಚಾರ ರೆಡ್ಡಿಯವರು ವಿವರಿಸುತ್ತಾ ಪ್ರಶ್ನೆ ಹಾಕಿದರೆ, **"ಈ ವಿಷಯಗಳು ನಿಮಗೆ ಹೇಗೆ ಗೊತ್ತಾಯಿತು?" ಎಂದು**

ಆಶ್ಚರ್ಯಗೊಂಡ ಅವರ ಮಗ. ಸದ್ಗುರುಗಳ ಮಹಿಮೆ ಏನು ಎನ್ನುವುದು ಆ ಹುಡುಗನಿಗೆ ಸ್ವಲ್ಪವಾದರೂ ಅರ್ಥವಾಯಿತೊ ಇಲ್ಲವೋ?

ಒಮ್ಮೆ ರೋಶಿರೆಡ್ಡಿಯವರ ಕೈಗೆ ಸ್ವಾಮಿಯವರು ಒಂದು ಮರದ ಹಲಗೆ ಕೊಟ್ಟು ಅದರ ಮೇಲೆ ಏನಿದೆಯೋ ನೋಡು ಎಂದರು. ಅವರು ನೋಡಿ, "ಏನೂ ಇಲ್ಲ ಸ್ವಾಮಿ" ಅಂದರು. "ಬಾಗಾ ಚೂಡಯ್ಯಾ!" (ಚೆನ್ನಾಗಿ ನೋಡಯ್ಯಾ) ಅಂದರು ಸ್ವಾಮಿಯವರು. ಮತ್ತೆ ನೋಡಿದಾಗ ರೋಶಿರೆಡ್ಡಿಯ ಇಷ್ಟ ದೇವರಾದ ವೇಂಕಟೇಶ್ವರಸ್ವಾಮಿ, ಲಕ್ಷ್ಮೀದೇವಿ, ಗಣಪತಿ ವಿಗ್ರಹಗಳು ಮರದ ಹಲಗೆಯ ಮೇಲೆ ಬಹಳ ಸ್ಪಷ್ಟವಾಗಿ ಕಂಡಿತು. ಸ್ವಲ್ಪ ಹೊತ್ತಾದ ಮೇಲೆ ಕಣ್ಮರೆ ಆಯಿತು.

ನಾಗುಲವೆಲ್ಲಟುರು ನಿವಾಸಿಯಾದ ವೇಲೂರು ರಾಮನಾಯುಡೂರವರು ಮತ್ತು ಅವರ ಕುಟುಂಬದವರು ಆಗಾಗ್ಗೆ ಭಕ್ತಿಯಿಂದ ಸ್ವಾಮಿಯ ದರ್ಶನ ಮಾಡುತ್ತಿದ್ದರು. ಒಮ್ಮೆ ಒಂದು ರಾತ್ರಿ ತಾಯಿ ಮಕ್ಕಳು ಮಂಚದಮೇಲೆ ಎಚ್ಚರವಾಗಿದ್ದರು. ಸ್ವಾಮಿಯವರು ಕಿರೀಟ ಮತ್ತು ಭುಜಕೀರ್ತಿಗಳನ್ನು ಧರಿಸಿ ವಿಷ್ಣುಮೂರ್ತಿಯಾಗಿ ಅಗ್ನಿಕುಂಡದಲ್ಲಿ ಕೂತಿರುವಂತೆ ಮಗನಿಗೆ ದರ್ಶನ ಕೊಟ್ಟರು. ಅವನು ಆಶ್ಚರ್ಯದಿಂದ ಪಕ್ಕದಲ್ಲೇ ಇದ್ದ ಅವನ ತಾಯಿಗೆ ಅವನಿಗಾದ ಅನುಭವ ಹೇಳಿ ನೋಡಲು ಹೇಳಿದನು. ಆದರೆ ಆ ತಾಯಿಗೆ ಏನೂ ಕಾಣಲಿಲ್ಲ. ಶ್ರೀ ಸ್ವಾಮಿಯವರು ಆ ಸಮಯದಲ್ಲಿ ಅದೇ ಗ್ರಾಮದಲ್ಲಿದ್ದರು. ಮಾರನೇ ದಿವಸ ಆ ತಾಯಿ ಸ್ವಾಮಿಯವರ ದರ್ಶನ ಮಾಡಿದರು. ಆಗ, ಸ್ವಾಮಿಯವರು "ಅಮ್ಮೋ! ಪೈ ವಾಳ್ಳು ವಚ್ಚಿ ರಾತ್ರಿ ಗುಂಡಂಲೋ ವಿಡಿದಿ ಚೇಸಿ ಪೋಯಾರು" (ಅಮ್ಮೋ! ಮೇಲಿನವರು ಬಂದು ರಾತ್ರಿ ಕುಂಡದಲ್ಲಿ ಬಿಡದಿ ಮಾಡಿ ಹೋದರು) ಎಂದು ಮುಗ್ಧವಾಗಿ ಹೇಳಿದರು. ರಾತ್ರಿ ತನ್ನ ಮಗನಿಗೆ ಅನುಗ್ರಹಿಸಿ ದರ್ಶನ ಕೊಟ್ಟದ್ದು ನಿಜವೇ ಎಂದು ಆ ತಾಯಿಗೆ, ಕಳೆದ ರಾತ್ರಿ ಅವನಿಗೆ ಲಭಿಸಿದ ದರ್ಶನ ಭ್ರಾಂತಿ ಅಥವ ಊಹೆ ಅಲ್ಲವೆಂದು ಅದು ಕೇವಲ ಸ್ವಾಮಿಯವರ ಅನುಗ್ರಹದಿಂದಲೇ ಅವನಿಗೆ ದರ್ಶನ ಸಿಕ್ಕಿತೆಂದು ಆ ಹುಡುಗನಿಗೆ ತಿಳಿಯಿತು.

ಅನಂತಸಾಗರಂ ಎಂಬ ಒಂದು ಗ್ರಾಮ, ಅದರಲ್ಲಿ ಚಡ್ಡಾ ವೆಂಕಟರೆಡ್ಡಿಯವರು ನಿವಾಸಿಸುತ್ತಿದ್ದರು. ಶ್ರೀ ಸ್ವಾಮಿಯವರು ನಿರಂತರ ಅವರ ಮನೆಗೆ ಹೋಗುತ್ತಿದ್ದರು. ರೆಡ್ಡಿಯವರು ಸ್ವಾಮಿಯವರಿಗೆ ಬಹಳ ಭಕ್ತಿಯಿಂದ ಆತಿಥ್ಯ ನೀಡುತ್ತಿದ್ದರು. ಆ ಗ್ರಾಮಸ್ಥರು ಮತ್ತು ಅಕ್ಕಪಕ್ಕದ ಗ್ರಾಮಸ್ಥರು ಬಂದು ಸ್ವಾಮಿಯವರ ದರ್ಶನ ಮಾಡಿ ಅವರ ಆಶೀರ್ವಾದವನ್ನು ಪಡೆಯುತ್ತಿದ್ದರು. ಬಹಳಷ್ಟು ಜನರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡು, ಸ್ವಾಮಿಯವರು ಪ್ರಸಾದಿಸಿದ ದಾರ ಮತ್ತು ಅವರ ಬೆರಳಿನ ಮುದ್ರೆಯ ಕಾಗದವನ್ನು ತೆಗೆದುಕೊಂಡು ಹೋಗಿ ಅವರ ಮನೆಯಲ್ಲಿ ಪವಿತ್ರ ಸ್ಥಳದಲ್ಲಿ ಇಟ್ಟು ಪೂಜಿಸುತ್ತಿದ್ದರು.

ಒಮ್ಮೆ ರೆಡ್ಡಿಯವರು, "ಸ್ವಾಮಿ, ನೀವು ದೊಡ್ಡ ಮಹಾತ್ಮರು ಎಂದು ಎಲ್ಲರೂ ಹೇಳುತ್ತಾರೆ, ನನಗೊಂದು ನಿದರ್ಶನವನ್ನು ತೋರಿಸಿ" ಎಂದು ವಿನಯವಾಗಿ ಪ್ರಾರ್ಥಿಸಿದರು. ಆಗ ಸ್ವಾಮಿಯವರು "ಅಯ್ಯಾ ನಿದರ್ಶನಂ ಚೂಸ್ತಾವಾ? ಸರೇ ಕಳ್ಳು

ಮೂಸುಕೋ" (ಅಯ್ಯಾ ನಿದರ್ಶನೆಯನ್ನು ನೋಡಲು ಬಯಸುತ್ತೀಯಾ? ಸರಿ, ಕಣ್ಣು ಮುಚ್ಚಿಕೋ!) ಎಂದು ಸ್ವಾಮಿಯವರು, ರೆಡ್ಡಿಯವರ ತಲೆಯ ಮೇಲೆ ತಮ್ಮ ಕೈಯನ್ನಿಟ್ಟು ಕಣ್ಣು ಬಿಡು ಎಂದರು. ಕಣ್ಣು ಬಿಟ್ಟಾಗ, ಅವನ ಸುತ್ತಲೂ ಯಾವಪ್ರಪಂಚವೂ ಇರಲಿಲ್ಲ. ಗಿಡ, ಮರ, ಮನೆಗಳು ಮಾಯವಾಗಿದ್ದವು. ಅವನ ಸುತ್ತ ಪಕ್ಕದಲ್ಲಿ ಎಷ್ಟು ದೂರ ನೋಡಿದರೂ ಅಸಂಖ್ಯ ಹಳ್ಳಗಳು ನೀರಿಂದ ತುಂಬಿ, ತುಂಬಿದ ಪ್ರತಿಯೊಂದು ಹಳ್ಳದಲ್ಲಿ ಸ್ವಾಮಿಯವರು ಅವರ ಕುತ್ತಿಗೆಯವರೆಗು ಮುಳುಗಿ ಅವರ ತಲೆ ಮಾತ್ರ ಮೇಲೆ ಇದ್ದಹಾಗೆ ಕಂಡಿತು. ಸ್ವಲ್ಪ ಸಮಯ ಆ ದೃಶ್ಯವನ್ನು ನೋಡಿದ ನಂತರ, ಅದನ್ನು ನೋಡಲಾರದೆ, "ಸ್ವಾಮೀ ತಾವು ದೈವ ಸ್ವರೂಪರು, ನಿಮಗೆ ಆದಿ ಅಂತ್ಯಗಳಿಲ್ಲ. ನೀವು ಅನಂತರು. ದಯವಿಟ್ಟು ನನಗೆ ಮಾಮೂಲು ದೃಷ್ಟಿ ಪ್ರಸಾದಿಸಿ" ಎಂದು ಕೈಮುಗಿದು ಮಹಾಭಾರತದಲ್ಲಿ ವಿಶ್ವರೂಪ ನೋಡಿದ ಅರ್ಜುನನ ಹಾಗೆ ಪ್ರಾರ್ಥಿಸಿದರು. ಸ್ವಾಮಿಯವರು ಮತ್ತೆ ಅವರ ತಲೆ ಮುಟ್ಟಿದ ತಕ್ಷಣ ಸಾಮಾನ್ಯ ಪ್ರಪಂಚ ಗೋಚರಿಸಿತು.

ಅವಧೂತ ಳೀಲೆ

ಅಧ್ಯಾಯ - 18

ಲೋಕೋತ್ತರ ಆಸೆಗೆ ಬಿದ್ದವರು ಅವುಗಳ ಹಿಂದೆ ಸೆರೆಹಾಕಿಕೊಳ್ಳುತ್ತಾರೆ

45 "ಸ್ವಾಮಿ! ಮನುಷ್ಯ ಮರಣಾನಂತರ ಏನಾಗುತ್ತಾನೆ? ಮತ್ತೆ ಮನುಷ್ಯನಾಗಿ ಹುಟ್ಟಿ ಪಾಪ-ಪುಣ್ಯಗಳನ್ನು ಅನುಭವಿಸುತ್ತಾನೆಯೇ?" ಎಂದು ಕೇಳಿದವರಿಗೆ ಸ್ವಾಮಿಯವರು ಸಂಕ್ಷಿಪ್ತವಾಗಿ **"ದೇಂತೋ ಪೀಕುಲಾಡೇ ವಾಳ್ಳು ದಾಂಟ್ಲೋಕಿ ಪೋತುಂಡ್ಲಾಯ್ಯಾ?"** (ಯಾವ ಚಿಂತೆಯಲ್ಲಿ ಮುಳುಗಿರುತ್ತಾರೋ ಅದರೊಳಗೇ ಹೋಗುತ್ತಾರೆ) ಎಂದು ಹೇಳುತ್ತಿದ್ದರು.

ಕಡೇ ಕ್ಷಣದಲ್ಲಿ ಮನುಷ್ಯರು ಏನನ್ನು ಸ್ಮರಿಸುತ್ತಾರೆಯೋ ಅದನ್ನೇ ಹೊಂದುತ್ತಾರೆಂದು ಭಗವದ್ಗೀತೆ ಮುಂತಾದ ಶಾಸ್ತ್ರಗಳು ಹೇಳುತ್ತವೆ. ಜೀವನಪೂರ್ತಿ ಲೌಕಿಕ ವ್ಯವಹಾರದಲ್ಲಿ ಮುಳುಗಿರುವ ಸಾಮಾನ್ಯ ಮನುಷ್ಯನಿಗೆ ಅವನ ಕೊನೆಯ ಘಳಿಗೆಯಲ್ಲಿ ಅಂತಹ ಸ್ಮೃತಿಗಳೇ ಮನಸ್ಸಿನಲ್ಲಿ ಬರುತ್ತವೆ. ಆದರೆ ಪೂರ್ವ ಪುಣ್ಯಗಳ ಕಾರಣದಿಂದ ಮಹನೀಯರನ್ನು ಆಶ್ರಯಿಸಿದವರು ನಿರಂತರ ಅವರ ಸ್ಮರಣೆ, ಸೇವೆ ಮಾಡುತ್ತ ತಮ್ಮ ಜೀವನವನ್ನು ಕಳೆಯುತ್ತಾರೆ. ಅಂತಹವರಿಗೆ ಕಡೇ ಘಳಿಗೆಯಲ್ಲಿ ಅಂತಹ ಒಳ್ಳೆ ಸ್ಮೃತಿಯೇ ಮನಸ್ಸಿನಲ್ಲಿ ಬರುತ್ತವೆ.

ನಮ್ಮ ಶಾಸ್ತ್ರ ಮತ್ತು ವಿದ್ಯೆಯನ್ನು ಪರವಿದ್ಯೆ ಮತ್ತು ಅಪರವಿದ್ಯೆ ಎಂದು ವಿಭಜಿಸಲಾಗಿದೆ. ಮೋಕ್ಷವನ್ನು ಕೊಡುವ ವಿದ್ಯೆಯನ್ನು ಪರವಿದ್ಯೆ ಎಂದು ಹೇಳಲಾಗಿದ್ದು, ಅದನ್ನು ಬಯಸುವವರು ಪರವಿದ್ಯೆಯನ್ನು ಅನುಸರಿಸಬೇಕು. ಜ್ಯೋತಿಷ್ಯ, ವ್ಯಾಕರಣ ಮುಂತಾದವುಗಳನ್ನು ಅಪರವಿದ್ಯೆ ಎಂದು ಪರಿಗಣಿಸಲಾಗಿದೆ. ಈ ವಿದ್ಯೆಗಳು
46 **ಬಹಿರ್ಮುಖ ಮತ್ತು ಐಹಿಕವಾದ್ದರಿಂದ ಮೋಕ್ಷಕ್ಕೆ ಪ್ರಧಾನವಲ್ಲ ಎಂದು ಹೇಳಲಾಗಿದೆ. ಈ ವಿದ್ಯೆಯು, ಮನುಷ್ಯನಿಗೆ ಭ್ರಮೆಯನ್ನು ಉಂಟುಮಾಡಿ ಅವನ ಅವನತಿಗೆ ಕಾರಣವಾಗುತ್ತದೆ ಎಂದು ಹೇಳಲಾಗಿದೆ. ಆದ್ದರಿಂದಲೇ, ಮೋಕ್ಷವನ್ನು ಬಯಸುವವರು ಈ ವಿಷಯಗಳನ್ನು ನಿರ್ಲಕ್ಷಿಸಿ ಸದ್ಗುರುವಿನ ಮೇಲೆ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಬೇಕೆಂದು ಹೇಳಲಾಗಿದೆ. ಇದಕ್ಕೆ ತಕ್ಕ ಉದಾಹರಣೆ ಸ್ವಾಮಿಯವರ ಚರಿತ್ರೆಯಲ್ಲಿ ಕಾಣ ಬಹುದು.**

ನಾಗುಲವೆಲ್ಲಟೂರು ನಿವಾಸಿಯಾದ ಸೋಂಪಲ್ಲಿ ರಾಮಾನಾಯುಡುರವರು

ಜ್ಯೋತಿಷ್ಯ ಶಾಸ್ತ್ರವನ್ನು ಅಧ್ಯಯನ ಮಾಡಿ ಸ್ವಾಮಿಯವರೊಂದಿಗೆ ಸಾಕಷ್ಟು ಸಮಯ ಕಳೆಯುತ್ತಿದ್ದರು. ಅವರು ಆ ವಿದ್ಯೆಯಲ್ಲಿ ಪ್ರಾವೀಣ್ಯತೆ ಹೊಂದಬೇಕೆಂದು ಸ್ವಾಮಿಯವರ ಬಳಿ ಇದ್ದಿರಬಹುದು, ಸ್ವಲ್ಪ ಕಾಲದನಂತರ ಜ್ಯೋತಿಷ್ಯವನ್ನು ಚೆನ್ನಾಗಿ ಹೇಳಲು ಆರಂಭಿಸಿದರು. ಒಮ್ಮೆ ಒಬ್ಬರ ಒಡವೆ ಕಳೆದು ಹೋಗಿತ್ತು. ರಾಮಾನಾಯುಡುರವರು ಲೆಕ್ಕಹಾಕಿ, ಅವರ ಮನೆಯ ತಟ್ಟಿ (ಈಚಲ ಎಲೆಯನ್ನು ಹೆಣೆದು ಮಾಡಿರುವ ಗೋಡೆ) ಒಳಗೆ ಬಚ್ಚಿಟ್ಟಿದ್ದಾರೆಂದು ಹೇಳಿದರು. ತಟ್ಟಿ ಬಿಚ್ಚಿ ನೋಡಿದರೆ, ಆ ಒಡವೆ ಕೆಳಗೆ ಬಿತ್ತು. ತಪ್ಪಿಹೋದ ಎಮ್ಮೆಯ ವಿಚಾರ ಕೇಳಿದಾಗ, " ನಿಮ್ಮ ಊರಿನ ಉತ್ತರ ದಿಕ್ಕಲ್ಲಿ 3 ಮೈಲಿ ದೂರದಲ್ಲಿರುವ ಗ್ರಾಮಕ್ಕೆ ನಾಡಿದ್ದು ಸೂರ್ಯೋದಯದ ಹೊತ್ತಿಗೆ ಹೋದರೆ ಸಿಗುತ್ತದೆ" ಎಂದು ಹೇಳಿದರು. ಸರಿಯಾಗಿ ಅದೇ ಸಮಯಕ್ಕೆ ಆ ಗ್ರಾಮಕ್ಕೆ ಹುಡುಕಲು ಹೋದ ವ್ಯಕ್ತಿಗೆ ಎದುರಿಗಿದ್ದ ಒಂದು ಮನೆಯಿಂದ ಆ ಎಮ್ಮೆ ಹೊರಗೆ ಬಂದಿತು.

ಒಮ್ಮೆ ಸ್ವಾಮಿ ಬೇರೆ ಊರಿಗೆ ಹೋಗುತ್ತಿದ್ದಾಗ ರಾಮನಾಯುಡು "ಸ್ವಾಮಿ ನನಗೆ ಹುಷಾರಿಲ್ಲ. ಇಲ್ಲೇ ಇರುತ್ತೇನೆ" ಎಂದರು. ಸ್ವಾಮಿ ಹೊರಟು ಹೋದರು. ಎರಡು ದಿನಗಳ ನಂತರ ರಾಮಾನಾಯುಡು ಆಶ್ರಮದಲ್ಲಿ ನಿಧನರಾದರು. ಆ ವಿಷಯವನ್ನು ಸ್ವಾಮಿಯವರಿಗೆ ಹೇಳಿದಾಗ, ಅವರ ದೇಹವನ್ನು ಆಶ್ರಮದಲ್ಲೇ ಸಮಾಧಿ ಮಾಡಿ ಎಂದು ಹೇಳಿಕಳುಹಿಸಿದರು. ಆಶ್ರಮದಲ್ಲಿದ್ದವರು ಸ್ವಾಮಿಯ ಸೂಚನೆಯಂತೆ ಮಾಡಿದರು. ಆ ಸಮಾಧಿಯ ಪಕ್ಕದಲ್ಲಿಯೇ ಶ್ರೀ ಸ್ವಾಮಿಯ ಭಕ್ತನಾದ ಪೋಲಿರೆಡ್ಡಿಯವರ ಸಮಾಧಿಯೂ ಇದೆ.

ಪೋಲಿರೆಡ್ಡಿ ಯಾವಾಗಲೂ ಸ್ವಾಮಿಯವರನ್ನು ಅನುಸರಿಸಿ ಸೇವೆ ಮಾಡುತ್ತಿದ್ದರು. ಸ್ವಾಮಿಯವರು ಎಲ್ಲಿ ಬಿಡದಿ ಮಾಡಿದರೂ ತಕ್ಷಣವೇ ಪೋಲಿರೆಡ್ಡಿಯವರು ಆ ಜಾಗದಲ್ಲಿ ಸೊಪ್ಪುಗಳನ್ನು ಹುಡುಕಿ ತಂದು, ಸ್ವಾಮಿಯವರಿಗೆ ಅಡುಗೆ ಮಾಡಿ, ಬಡಿಸುತ್ತಿದ್ದರು. ಏಕೆಂದರೆ, ಸ್ವಾಮಿಯವರು ಸೊಪ್ಪಿನ ತರಕಾರಿಯನ್ನು ಬಹಳ ಇಷ್ಟಪಟ್ಟು ತಿನ್ನುತ್ತಿದ್ದರು. ಪೋಲಿರೆಡ್ಡಿಯವರಿಗೆ ಸ್ವಾಮಿಯ ಸೇವೆ ಮಾಡುವುದುಬಿಟ್ಟರೆ ಬೇರೇ ಏನು ಕೇಳಿದ್ದಾಗಲಿ, ಅಥವಾ ಪಡೆದಿದ್ದಾಗಲಿ ಏನನ್ನೂ ನಾವು ಕಾಣೆವು. ಪೋಲಿರೆಡ್ಡಿಯವರು ಅವರ ನಿಧನದ 40 ದಿನಗಳ ಮುಂಚಿತವಾಗಿ, ಸ್ವಾಮಿಯವರು ತಮ್ಮ ಭಕ್ತರಿಗೆ, "ನೇಟಿಕಿ ನಲಭೈರೋಜುಲಕು ಭಗವಂತುಡು ವಿಚಾರಣಕು ವಸ್ತಾಡು. ಮನಮಂದರಮೂ ಆ ರೋಜು ಗಂಗೈನಾ ಮುಟ್ಟಕೂಡದು" (ಇಂದಿನಿಂದ 40 ನೇ ದಿನ ದೇವರು ವಿಚಾರಣೆ ನಡೆಸುತ್ತಾನೆ, ನಾವು ಒಂದು ಹನಿ ನೀರು ಕೂಡ ಮುಟ್ಟ ಬಾರದು) ಎಂದು ಹೇಳಿದರು. ಸ್ವಾಮಿಯವರ ಮಾತಿನ ಭಾವ ಯಾರಿಗೂ ಅರ್ಥವಾಗಲಿಲ್ಲ. ಸರಿಯಾಗಿ ಆ ನಲವತ್ತನೇ ದಿನ ಮೈಪಾಡು ಎನ್ನುವ ಗ್ರಾಮದಲ್ಲಿದ್ದ ಸ್ವಾಮಿಯವರು. "ಅಯ್ಯಾ, ಮನಂ ಆಶ್ರಮಂ ಚೇರಿನದಾಕ ನೇನೇಗಾದು, ಮೀರು ಕೂಡ ಗಂಗನು ಮುಟ್ಟಕೂಡದು. ಮನಂ ವೆಂಟನೇ ಗೊಲಗಮೂಡಿ ಚೇರಾಲಿ. ಪದಂಡಿ" (ಅಯ್ಯಾ, ನಾವು ಆಶ್ರಮ ಸೇರುವವರೆಗೆ, ನಾವೆಲ್ಲರೂ ಗಂಗೆಯನ್ನು ಮುಟ್ಟುಕೂಡದು (ನೀರನ್ನು ಕುಡಿಯಬಾರದು ಎನ್ನುವ ಭಾವ) ನಾವು ತಕ್ಷಣವೇ ಗೊಲಗಮೂಡಿ

ಸೇರಬೇಕು ಹೊರಡಿ) ಎಂದರು. ದಾರಿಯಲ್ಲಿ ಜೋರಾಗಿ ಮಳೆ ಇದ್ದರಿಂದ ಪ್ರಯಾಣ ಬಹಳ ಕಠಿಣವಾಗಿತ್ತು ಆದರೂ ಸ್ವಾಮಿಯವರು ಅವರ ಸೇವಕರನ್ನ ಆತುರಪಡಿಸಿ, ಕಾಲು ನಡಿಗೆಯಲ್ಲಿ ನೆಲ್ಲೂರಿಗೆ ಹೋಗಿ ಅಲ್ಲಿಂದ ಕಾರಿನಲ್ಲಿ ಗೊಲಗಮೂಡಿ ಸೇರಿದರು. ಆ ದಿನ ಮುಂಜಾನೆ ಪೋಲಿರೆಡ್ಡಿಯವರು ನಿಧನ ಹೊಂದಿದರು. ಅವರ ಅಂತ್ಯಕ್ರಿಯೆ ಎಲ್ಲಿ, ಹೇಗೆ ಮಾಡಬೇಕೆಂದು ಮಿಕ್ಕ ಭಕ್ತರು ಯೋಚಿಸುತ್ತಿದ್ದರು. ಸ್ವಾಮಿಯವರನ್ನ ವಿಚಾರಿಸುವುದಕ್ಕೆ ಅವರು ಎಲ್ಲಿದ್ದಾರೆಂದು ಯಾರಿಗೂ ಗೊತ್ತಿರಲಿಲ್ಲ. ಆದರೆ ಸ್ವಾಮಿಯವರಿಗೆ ತಿಳಿಯದಿರುವುದು ಏನಿದೆ? ಪೋಲಿರೆಡ್ಡಿಯವರ ಸಾವಾದ ಸಮಯಕ್ಕೆ ಸ್ವಾಮಿಯವರು ತಮ್ಮ ಸೇವಕರೊಂದಿಗೆ ಆಶ್ರಮಕ್ಕೆ ಹೊರಟಿದ್ದರು. ನಂತರ, ಆಶ್ರಮದಲ್ಲೇ ಪೋಲಿರೆಡ್ಡಿ ಅವರ ದೇಹವನ್ನು ಸ್ವಾಮಿಯವರೇ ಸಮಾಧಿ ಮಾಡಿದರು.

ಭಕ್ತರಿಗೆಲ್ಲರಿಗೂ ಇಂದಿನ ವರೆಗೂ ಕಾಡುತ್ತಿರುವ ಒಂದು ಪ್ರಶ್ನೆ ಏನೆಂದರೆ - ಪೋಲಿರೆಡ್ಡಿಯವರ ಅಂತ್ಯಕ್ರಿಯೆ ಬಗ್ಗೆ ಸ್ವಾಮಿಯವರು ಎಷ್ಟು ಶ್ರದ್ಧೆ ವಹಿಸಿ ಆಶ್ರಮಕ್ಕೆ ತಿರುಗಿ ಬಂದರು ಆದರೆ, ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರಾವೀಣ್ಯತೆ ಹೊಂದಿದ ರಾಮಾನಾಯುಡುರವರು ಮೃತ್ಯು ಹೊಂದಿದಾಗ ಆಶ್ರಮಕ್ಕೆ ಏಕೆ ಬರಲಿಲ್ಲ? ಸ್ವಾಮಿಯವರ ಸೇವೆ ಬಿಟ್ಟರೆ ಬೇರೇನನ್ನೂ ಬಯಸದೆ, ಸ್ವಾಮಿಯವರ ಮೇಲೆ ಅನನ್ಯ ಗುರುಭಕ್ತಿ ಇದ್ದವರು ಪೋಲಿರೆಡ್ಡಿಯವರು. ಸ್ವತಃ ಸ್ವಾಮಿಯವರೇ ಅವರ ದೇಹವನ್ನು ಸಮಾಧಿ ಮಾಡಿ, ಪೋಲಿರೆಡ್ಡಿಯವರಿಗೆ ಖಂಡಿತವಾಗಿ ಸದ್ಗತಿಯನ್ನು ಪ್ರಸಾದಿಸಿದರೆನ್ನುವುದಕ್ಕೆ ಇದೇ ನಿದರ್ಶನ. ರಾಮನಾಯುಡು ಸ್ವಾಮಿಯಿಂದ ಜ್ಯೋತಿಷ್ಯ ವಿದ್ಯೆಯನ್ನು ಆಶಿಸಿದ ಸ್ವಾರ್ಥಿ. ಆದರೂ ಅವರ ಹಿಂದಿನ ಪುಣ್ಯದಿಂದಾಗಿ ಸ್ವಾಮಿಯವರು, ತಮ್ಮ ಭಕ್ತರಿಗೆ, ರಾಮಾನಾಯುಡುರವರ ದೇಹವನ್ನು ಅತ್ಯಂತ ಪವಿತ್ರವಾದ ಸ್ವಾಮಿಯವರ ಆಶ್ರಮದಲ್ಲಿ ಸಮಾಧಿ ಮಾಡಲು ಹೇಳಿದರು. ಶ್ರಿ ಸಾಯಿ ಚರಿತ್ರೆಯಲ್ಲಿ ಕೂಡಾ, ಅವರಿಂದ ಏನನ್ನೂ ಬಯಸದೇ ಅನನ್ಯವಾಗಿ ಸೇವೆ ಮಾಡಿದ ಮೇಘ ಎಂಬ ಒಬ್ಬ ಭಕ್ತನ ಕುರಿತು ಸಾಯಿ ಹೇಳಿದ ಮಾತುಗಳು, " ಇವನೇ ನನ್ನ ನಿಜವಾದ ಭಕ್ತ" ಎಂದು ಪ್ರಶಂಸೆ ಮಾಡಿ, ಅವನ ಮರಣಾನಂತರ, ಅವನ ಅಂತ್ಯಕ್ರಿಯೆಯ ಸಂದರ್ಭದಲ್ಲಿ, ಸಾಯಿ ಬಾಬಾರವರು, ಸ್ಮಶಾನದ ದಿಕ್ಕಿನಲ್ಲಿ ಸ್ವಲ್ಪ ದೂರ ನಡೆದು ಹೊಗಿ, ತಾವೆ ಭಕ್ತರಿಗೆಲ್ಲಾ ಸಂತರ್ಪಣೆಯನ್ನು ಮಾಡಿಸಿದರು. ಯಾವುದಕ್ಕೂ ಆಶೆಯನ್ನು ಹೊಂದದೆ ಮಾಡುವ ಸೇವೆಯೇ ಭಕ್ತಿ ಎಂದು ಪರಿಗಣಿಸಲಾಗುತ್ತದೆ.

ನೆಲ್ಲೂರು ನಿವಾಸಿಯಾಗಿದ್ದ ಒಬ್ಬ ಇನ್ಕಮ್ ಟ್ಯಾಕ್ಸ್ ಅಧಿಕಾರಿಯೊಬ್ಬರು ಒಂದು ನಾಯಿಯನ್ನು ಬಹಳ ಪ್ರೀತಿಯಿಂದ ಸಾಕಿದ್ದರು. ಆ ನಾಯಿಮರಿ ಅನಾರೋಗ್ಯದಿಂದ ಬಳಲುತ್ತಿತ್ತು. ವೈದ್ಯರಿಂದ ಅದನ್ನು ಗುಣಪಡಸಲಾಗಲಿಲ್ಲವಾದ್ದರಿಂದ, ಶ್ರೀ ಸ್ವಾಮಿಯವರ ಬಳಿ ಕಾರಿನಲ್ಲಿ ತಂದರು. ನಾಯಿ ಮತ್ತು ಸ್ವಾಮಿಯವರು ಒಬ್ಬರನ್ನೊಬ್ಬರು ನೋಡಿದರು. ಆ ನಾಯಿ ಮರಿ ಸ್ವಾಮಿಯವರನ್ನು ನೋಡುತ್ತಾ,

ಅದರ ಪ್ರಾಣವನ್ನು ಬಿಟ್ಟಿತು. ಶ್ರಿ ಸ್ವಾಮಿಯವರ ಸನ್ನಿಧಿಯಲ್ಲಿ ಅದು ಪ್ರಾಣವನ್ನು ಬಿಟ್ಟಿದ್ದರಿಂದ ಅದಕ್ಕೆ ಸದ್ಗತಿ ಖಂಡಿತವಾಗಲೂ ಸಿಗುತ್ತದೆ. ಸಾಯಿನಾಥರ ಚಾರಿತ್ರೆ ಯಲ್ಲಿ

ಹುಲಿಯೊಂದು ಸಾಯಿನಾಥರ ಸನ್ನಿಧಿಯಲ್ಲಿ ಪ್ರಾಣ ಬಿಟ್ಟಂತಹ ಸನ್ನಿವೇಶ ಕಾಣಬಹುದು.

ಗೊಲಗಮೂಡಿಯ ನಿವಾಸಿ ಕೊಜ್ಜಕೂಟಿ ನರಸಿಂಹುಲು ನಾಯುಡುರವರು, ಮತ್ತು ಅವರ ಧರ್ಮಪತ್ನಿ ಬಹಳ ವರ್ಷಗಳಿಂದ ಸ್ವಾಮಿಯ ಭಕ್ತರಾಗಿದ್ದರು. ಅವರಿಗೆ ಸ್ವಾಮಿಯವರ ಮಾತಿನ ಮೇಲೆ ಅಚಲ ವಿಶ್ವಾಸ ಇಟ್ಟುಕೊಂಡಿದ್ದರು. ಒಮ್ಮೆ ಸ್ವಾಮಿಯವರು ಈ ದಂಪತಿಗಳನ್ನು ಒಂದು ವರ್ಷದಕಾಲ ಗೊಲಗಮೂಡಿ ಬಿಟ್ಟು ಪಶ್ಚಿಮ ದಿಕ್ಕಲ್ಲಿರುವ ಊರಿಗೆ ಹೋಗಿ ಎಂದು ಆಜ್ಞಾಪಿಸಿದರು. ಆಗ, ಅವರುಗಳು ಗೊಲಗಮೂಡಿಯಲ್ಲಿದ್ದ ತಮ್ಮ ಮನೆಯನ್ನು ಬಿಟ್ಟು ತಲುಪೂರು ಎಂಬ ಗ್ರಾಮಕ್ಕೆ ಹೋಗಿ ಒಂದು ಗುಡಿಸಲು ಕಟ್ಟಿಕೊಂಡು ಸ್ವಾಮಿಯವರು ಹಿಂತಿರುಗಿ ಬಾ ಎಂದು ಹೇಳುವವರೆಗೂ ಅಲ್ಲೇ ಸಂತೋಷವಾಗಿದ್ದರು.

1983 ರಲ್ಲಿ ನಾಯುಡುರವರ ಪತ್ನಿಗೆ ಕ್ಯಾನ್ಸರ್ ಇರುವುದು ಪತ್ತೆಯಾಯಿತು. ಅವರು ಆಕೆಯನ್ನು ವೈದ್ಯರ ಬಳಿಗೆ ಕರೆದುಕೊಂಡು ಹೋದಾಗ, ಆ ವೈದ್ಯರು ಭರವಸೆಯನ್ನು ಬಿಟ್ಟುಬಿಟ್ಟರು. ಅವರು ಸ್ವಾಮಿಯ ಬಳಿಗೆ ಬಂದು ಅವರನ್ನು ಆಶ್ರಯಿಸಿ, ವಿಭೂತಿಯನ್ನು ಬಳಸಲು ಪ್ರಾರಂಭಿಸಿದರು. ಶ್ರೀ ಸ್ವಾಮಿಯವರ ಇನ್ನೊಬ್ಬ ಭಕ್ತ ಬುಜ್ಜನ್ನರವರು, ಸ್ವಾಮಿಯವರ ಸಮಾಧಿಗೆ ಮುಟ್ಟಿಸಿ ಕೊಟ್ಟ ಒಂದು ದಾರವನ್ನು ಈಕೆ ಕಟ್ಟಿಕೊಂಡು, ಸಾಂಬ್ರಾಣಿ ಹಾಕಿದ ಹೊಗೆ ಮತ್ತು ವಿಭೂತಿಯ ನೀರನ್ನು ಸೇವಿಸುತ್ತಾ ಸ್ವಾಮಿಯವರನ್ನು ಪ್ರಾರ್ಥಿಸಿದರು.

ಅಂದಿನ ರಾತ್ರಿ ಬುಜ್ಜಯ್ಯನವರು ಸ್ವಪ್ನದಲ್ಲಿ ಈಕೆಯನ್ನು ಸುಂದರವಾದ ಚಟ್ಟದ ಮೇಲೆ ಇಟ್ಟು, ಅವರನ್ನು ಅಲಂಕರಿಸಿ, ದೊಡ್ಡ ಹೂವಿನ ಹಾರ ಹಾಕಿ ಅವರ ಮುಖದಲ್ಲಿ ಬೆಜವಾಡ(ವಿಜಯವಾಡ) ಕನಕದುರ್ಗಮ್ಮನವರಂತೆ ಬೆಳಗುತ್ತಿದ್ದಹಾಗೆ ಕಂಡಿತು. ಮರುದಿನ ಬೆಳಗ್ಗೆ ಆಕೆ ಮರಣಿಸಿದರು. ಸ್ವಾಮಿಯವರು ಆಕೆಯನ್ನು ರಕ್ಷಿಸಲಿಲ್ಲ ಎಂದು ಬುಜ್ಜನ್ನ ಮತ್ತು ಇತರ ಭಕ್ತರು ಯೋಚಿಸುತ್ತಾರೆಂದು, ಸ್ವಾಮಿಯವರು, ಬುಜ್ಜನ್ನನಿಗೆ ಕನಸಿನ ಮೂಲಕ, ಆಕೆಯ ಆಯಸ್ಸು ತೀರಿತೆಂದು, ಏನೂ ಮಾಡಲು ಸಾಧ್ಯವಿರಲಿಲ್ಲವೆಂದು ತಿಳಿಸಿದರು. ಆ ಸ್ವಪ್ನದಲ್ಲಿ ಆಕೆಗೆ ಮೃತ್ಯು ಕಳೆ ಇಲ್ಲದೇ ದೈವಕಳೆ ಇದ್ದಂತೆ ಕಂಡಿದ್ದರಿಂದ, ಸ್ವಾಮಿಯವರು ಅವರಿಗೆ ಸದ್ಗತಿಯನ್ನು ಪ್ರಸಾದಿಸಿದರೆಂದು ಸೂಚನೆ.

ಕಲ್ಲೂರುಪಲ್ಲಿ ಎಂಬ ಊರಿನ ನಿವಾಸಿ ಪಾಬೋಲು ಸುಬ್ಬಮ್ಮನವರು ಬಹಳ ದಯಾ ಹೃದಯದವರು. ಆಕೆ ಸಕಲ ಜೀವರಾಶಿಗಳನ್ನು ಪರಮಾತ್ಮನ ಸ್ವರೂಪ ಎಂದು ಕಾಣುವ ಸ್ವಭಾವ ಇದ್ದವರು. ಒಮ್ಮೆ ಆ ಗ್ರಾಮದಲ್ಲಿರುವ ಜನರು, ಒಬ್ಬ ಕಳ್ಳನನ್ನು ಹಿಡಿದು ಸುಬ್ಬಮ್ಮನವರ ಮನೆಯ ಮುಂದೆ ಒಂದು ಗಾಡಿಗೆ ಕಟ್ಟಿ ಹಾಕಿಬಿಟ್ಟರು. ಆಕೆ ಗುಟ್ಟಾಗಿ ಆ ಕಳ್ಳನಿಗೆ ಮೊಸರನ್ನ ಕೊಟ್ಟು, ಅವನ ಕಟ್ಟು ತೆಗೆದು ಕಳುಹಿಸಿಬಿಟ್ಟ ಸ್ವಭಾವದವರು. ಕಲಿಚೇಡು ಎಂಬ ಒಂದು ಗ್ರಾಮದಲ್ಲಿ ಇವರು ವೃದ್ಧಾಪ್ಯದಲ್ಲಿ ಮಂಚ ಹಿಡಿದು ಹಗಲು ರಾತ್ರಿ ಶಿರಿಡಿ ಸಾಯಿಬಾಬಾರವರ ನಾಮಸ್ಮರಣೆ ಮಾಡುತ್ತಿದ್ದರು. ಈಕೆಯ ಮೊಮ್ಮಗ

ಪಿ.ಸುಬ್ಬರಾಮಯ್ಯ ಒಮ್ಮೆ ಸಿದ್ದಲಯ್ಯ ಬೆಟ್ಟದ ಹತ್ತಿರ ಶ್ರೀ ಸ್ವಾಮಿಯವರನ್ನು ದರ್ಶಿಸಿದರು. ಅಂದಿಗೆ 2 ದಿನಗಳಿಂದ ಮೌನವಾಗಿದ್ದ ಶ್ರಿ ಸ್ವಾಮಿಯವರು, ಸುಬ್ಬರಾಮಯ್ಯನನ್ನು ನೋಡಿದ ತಕ್ಷಣ ಎದ್ದು ಒಂದು ಪತ್ರ ಬರೆಸಿ, ಅದರ ಮೇಲೆ ಅಭಯಮುದ್ರೆ ಹಾಕಿ, ಆಶೀರ್ವದಿಸಿ ಕೊಟ್ಟರು. ಸ್ವಾಮಿಯವರು ಮತ್ತೆ ಮೌನ ವಹಿಸಿ ಕುಳಿತು ಕೊಂಡರು. ಗಂಜಿಯನ್ನು ಕುಡಿಯಿರಿ ಎಂದು ಭಕ್ತರು ಹೇಳಿದರೂ ಕುಡಿಯಲಿಲ್ಲ. ಮರುಕ್ಷಣದಲ್ಲಿ ಸುಬ್ಬ ರಾಮಯ್ಯನವರನ್ನು ಹುಡುಕುತ್ತಾ ಒಬ್ಬ ವ್ಯಕ್ತಿ ಬಂದನು. ಅದು ಗೊತ್ತಾಗಿಯೇ ಮೌನವಾಗಿದ್ದ ಸ್ವಾಮಿಯವರು, ಸುಬ್ಬಮ್ಮನವರಿಗೆ ಸದ್ಗತಿ ದೊರೆಯಲೆಂದು ತಮ್ಮ ಆಶೀರ್ವಾದದ ಪತ್ರ ಬರೆಸಿ ಕೊಟ್ಟರು. ಸುಬ್ಬರಾಮಯ್ಯನವರು ಮನೆಗೆ ಹೋದರು, ಆ ಸಮಯದವರೆಗೂ ಏನು ಕೊಟ್ಟರೂ ಬೇಡ ಎನ್ನುತ್ತಿದ್ದ ಅವರ ಅಜ್ಜಿ ಬಾಬಾ ವಿಭೂತಿ, ಸ್ವಾಮಿಯವರ ತೀರ್ಥ ಹಾಕುತ್ತೇನೆ ಎಂದರೆ ಬಾಯಿ ತೆರೆದರು. ಅದನ್ನು ಸ್ವೀಕರಿಸಿದ ತಕ್ಷಣ ಅವರು ತಮ್ಮ ಪ್ರಾಣವನ್ನು ಬಿಟ್ಟರು. ನಿಜವಾಗಿ ಹೇಳಬೇಕೆಂದರೆ, ಶ್ರೀ ವೆಂಕಯ್ಯಸ್ವಾಮಿಯ ರೂಪದಲ್ಲಿರುವ ಶ್ರೀ ಸಾಯಿಬಾಬಾ ಅವರಿಗೆ ಸದ್ಗತಿಯನ್ನು ನೀಡಿದರು, ಅದರಲ್ಲೂ ಪವಿತ್ರವಾದ ಧನುರ್ಮಾಸದಲ್ಲಿ ಸದ್ಗತಿ ಕೊಡಿಸಿದರು ಶ್ರೀ ಸ್ವಾಮಿಯವರು.

ವಲ್ಲಪುರೆಡ್ಡಿ ಆದಿನಾರಾಯಣರೆಡ್ಡಿಯವರು ತಮ್ಮ ತಾಯಿಯವರಿಗೆ ಸಿಕ್ಕಿದ ಸದ್ಗತಿಯ ವಿಚಾರ ಹೀಗೆ ಹೇಳಿದರು - "ನಮ್ಮ ತಾಯಿ ತುಳಸಮ್ಮನವರು ಶ್ರೀ ಸ್ವಾಮಿಯವರ ಸೇವೆಗೆ ಅಂಕಿತವಾಗುವ ಹಲವು ವರ್ಷಗಳ ಮುಂಚಿನಿಂದ ಶ್ರಿ ಸ್ವಾಮಿಯವರು ತಮ್ಮ ಮಿಕ್ಕ ಭಕ್ತರಿಗೆ ಹೀಗೆ ಹೇಳುತ್ತಿದ್ದರು – “ತೂರ್ಪುನ ಮನ ಅಮ್ಮ ವುಂದಿ ಆಮೆ ಮನಕು ಗತ ಐದು ಜನ್ಮಲ ನುಂಡಿ ಅನ್ನಂ ಪೆಡುತುಂದಿ. ಇಕ ಮೀದಟ ಮನಮಂತಾ ಆಮೆ ಅನ್ನಂ ತಿನಾಲಿ” (ಪೂರ್ವದಿಕ್ಕಿನಲ್ಲಿ ನಮ್ಮ ಅಮ್ಮ ಇರುತ್ತಾಳೆ. ಅವಳೆ ಹಿಂದಿನ ಐದು ಜನ್ಮಗಳಿಂದ ನಮಗೆ ಊಟ ಕೊಡುತ್ತಿದ್ದಾಳೆ. ಇಲ್ಲಿಂದ ಮುಂದೆ ನಾವೆಲ್ಲರೂ ಅಮ್ಮ ಕೊಟ್ಟಿದ್ದನ್ನೇ ತಿನ್ನಬೇಕು). ಆಗ ಮಿಕ್ಕ ಭಕ್ತರು, ಯಾರು ಸ್ವಾಮಿ ಅವರು? ಎಲ್ಲಿ ಇರುತ್ತಾರೆ ಎಂದು ಕೇಳಿದಾಗ ಸ್ವಾಮಿ ಉತ್ತರ ಕೊಡುತ್ತಿರಲಿಲ್ಲ. ಕಾಲಾಂತರದಲ್ಲಿ ತುಳಸಮ್ಮ ಸ್ವಾಮಿಯವರ ಸೇವೆಗೆ ಅಂಕಿತರಾದಮೇಲೆ, ಮಿಕ್ಕ ಭಕ್ತರಿಗೆ, ಸ್ವಾಮಿಯವರು ಹೇಳಿದ "ಅಮ್ಮ" ಯಾರು ಎನ್ನುವುದು ಅರ್ಥವಾಯಿತು. ತುಳಸಮ್ಮ ತಮ್ಮ ಮನೆ, ಬಾಗಿಲು, ಬಿಟ್ಟು ತನ್ನ ಸರ್ವಸ್ವವೂ ಸ್ವಾಮಿಯವರೆ ಎಂದು ಸುಮಾರು 25 ವರ್ಷಗಳಕಾಲ ನಿರಂತರ ಸ್ವಾಮಿಯ ಸೇವೆಯಲ್ಲಿದ್ದು ತನ್ನ ಜೀವನವನ್ನು ನಡೆಸಿದ ಧನ್ಯ ಜೀವಿ. ಸ್ವಾಮಿಯವರು ಯಾವಾಗಲೂ ಇವರನ್ನು ’ಅಮ್ಮಾ, ಅಮ್ಮಾ’ ಎಂದು ಎಷ್ಟೋ ಆಪ್ಯಾಯವಾಗಿ ಕರೆಯುತ್ತಿದ್ದರು. ತಮ್ಮ ವೃಂದದಲ್ಲಿ ಇತರ ಸ್ತ್ರೀಯರನ್ನು ಹಾಗೆ ಕರೆಯುತ್ತಿರಲಿಲ್ಲ. ಇವರ ಅನನ್ಯ ಸೇವೆಗೆ ಪ್ರತಿಫಲವಾಗಿ ಸ್ವಾಮಿಯವರು ಇವರಿಗೆ ಸದ್ಗತಿ ಕೊಟ್ಟರು:

1. ಇವರ ಅಂತ್ಯಕ್ರಿಯ ಮಾಡಿದಾಗ ಶ್ರಿಗಂಧದ ಚೆಕ್ಕೆ ಮುಂತಾದ ಸುಗಂಧ ದ್ರವ್ಯ ಉಪಯೋಗಿಸದಿದ್ದರೂ, ಅವರ ಶರೀರದಿಂದ ಕವುರು ವಾಸನೆ ಬರಲಿಲ್ಲ.

2. ತುಳಸಮ್ಮನವರ ಪರಮಪದ ಹೊಂದುವ 2 ತಿಂಗಳ ಮುಂಚಿನಿಂದ

ನಿರಂತರ ಇವರ ಧ್ಯಾನಸ್ಥಿತಿಯಲ್ಲಿ ಇರುವಹಾಗೆ ಮಾಡಿದರು ಸ್ವಾಮಿಯವರು.

3. ವಿಚಿತ್ರವಾದ ಪ್ರೇರಣೆ ಎನ್ನುವಂತೆ, ವೆಂಕಯ್ಯ, ವೆಂಕಮ್ಮ ಎಂಬ ಇಬ್ಬರು ಭಕ್ತರನ್ನು ಇವರ ಸೇವೆ ಮಾಡಲು ನಿಯಮಿಸಿದರು. ಇವರಿಬ್ಬರೂ, ಇವರನ್ನು ತಮ್ಮ ತಾಯಿಗಿಂತ ಹೆಚ್ಚು ಪ್ರೀತಿಯಿಂದ ನೋಡಿಕೊಂಡರು. ಇವರನ್ನು ಸಾಕ್ಷಾತ್ ವೆಂಕಯ್ಯಸ್ವಾಮಿಯವರೇ ಎಂದು ಭಾವಿಸಿ ಸೇವೆ ಮಾಡುವಹಾಗೆ ಮಾಡಿದರು ಸ್ವಾಮಿಯವರು.

ಅವಧೂತ ಲೀಲೆ

ಅಧ್ಯಾಯ - 19

ಸ್ವಾಮಿಯವರ ಅಭಯ

ಸ್ವಾಮಿಯವರ ಸೇವೆಯಲ್ಲಿ ತಮ್ಮ ಜೀವನವನ್ನು ಸಮರ್ಪಣೆಮಾಡಿ, ಸ್ವಾಮಿಯವರೇ ತಮ್ಮ ಮಾರ್ಗದರ್ಶಕ, ದೇವರು, ತಾಯಿ, ತಂದೆ, ಸಹೋದರ ಮತ್ತು ಸರ್ವಸ್ವ ಎಂಬ ಭಾವನೆಯೊಂದಿಗೆ ನಿರಂತರ ಸೇವೆ ಮಾಡುವ ಸೇವಕರಿಗೆ ಸ್ವಾಮಿಯವರಿಂದ ದೂರ ಹೋಗಬೇಕೆನ್ನುವ ಆಲೋಚನೆ ಅವರ ಹೃದಯ ಹಿಂಡಿಹಾಕಿದಂತಾಗುತ್ತದೆ. ಸ್ವಾಮಿಯವರು ಮಹಾಸಮಾಧಿ ಆದರೆ ಇವರುಗಳ ಗತಿಯೇನು ಎನ್ನುವ ಸಂದೇಹ ಬಂದ ಸೇವಕರು ಸ್ವಾಮಿಯವರನ್ನು ಬಹಳ ದುಃಖದಿಂದ ಕೇಳಿದಾಗ, ಸ್ವಾಮಿಯವರು ಸಮಾಧಾನ ಮಾಡುತ್ತಾ ಭರವಸೆ ಕೊಟ್ಟು, ಈ ಸೇವಕರು ಸ್ವಾಮಿಯವರೊಂದಿಗೆ ಅನೇಕ ಜನ್ಮಗಳಿಂದ ಯಾವುದೋ ಒಂದು ರೀತಿಯಲ್ಲಿ ಅನುಬಂಧವಿದ್ದು ಇವರಿಗೆ ಮಾತ್ರ ಅಲ್ಲದೇ ನಮ್ಮೆಲ್ಲರಿಗೂ ಅವರ ಭರವಸೆ ದೊಡ್ಡ ಬೆಂಬಲವಾಗಿ ನಿಂತಿದೆ. ಸ್ವಾಮಿಯವರು ನೀಡಿದ ಆದರ್ಶಗಳ ಪ್ರಕಾರ ನಾವುಗಳು ನಡೆದುಕೊಂಡರೆ, ಅವರ ದಿವ್ಯ ಸನ್ನಿಧಿ, ರಕ್ಷಣೆಗೆ ಏನೂ ಕೊರತೇ ಇರುವುದಿಲ್ಲ. ಒಂದು ವೇಳೆ ನಾವು ನಿರ್ಲಕ್ಷಿಸಿದ ಸಮಯದಲ್ಲಿ ಕೂಡಾ, ಕರುಣಾ ಸ್ವರೂಪರಾದ ಸ್ವಾಮಿಯವರು ನಮ್ಮ ಹಿಂದೆ ನಿಂತು ಕಾಪಾಡುತ್ತಾರೆ ಎನ್ನುವುದು, ಅವರ ಮಹಾಸಮಾಧಿ ಆದ ನಂತರವೂ ಅವರ ಲೀಲೆಗಳು ನಿರೂಪಿಸುತ್ತವೆ. ಸ್ವಾಮಿಯವರು ಕೊಟ್ಟ ಅಭಯಗಳನ್ನು (ಆದರ್ಶಗಳು) ನಾವು ಸ್ಮರಣೆ ಮಾಡೋಣ.

ವಲ್ಲಪುರೆಡ್ಡಿ ನಾರಾಯಣರೆಡ್ಡಿ ಮದ್ರಾಸಿನಲ್ಲಿ ಕಾರು ಖರೀದಿಸಿದ್ದರು. ಆದರೆ "ಸಿ.ಬುಕ್" ವಿಷಯದಲ್ಲಿ ಕೆಲವು ಸಮಸ್ಯೆಗಳಿದ್ದವು. ಎಷ್ಟು ಬಾರಿ ತಿರುಗಿದರೂ ಅವರ ಕೆಲಸವಾಗಲಿಲ್ಲ. ಈ ಸಮಯದಲ್ಲಿ, ಒಂದು ದಿನ, ಪೆನವರ್ತಿಯಲ್ಲಿರುವ ಅವರ ಮನೆಯಲ್ಲಿ ಅವರು ಸ್ವಾಮಿಯ ಚಿತ್ರವನ್ನು ನೋಡುತ್ತಾ, "ಸ್ವಾಮಿ ನಾನು ಹಲವಾರು ಬಾರಿ ಪ್ರಯತ್ನಿಸಿದೆ, ಆದರೆ ನನ್ನ ಕಾರಿನ ವಿಷಯ ಇನ್ನೂ ಬಾಕಿ ಉಳಿದಿದೆ. ನಾನು ಮೂರು ದಿನಗಳಲ್ಲಿ ಮದ್ರಾಸ್‌ಗೆ ಹೋಗುತ್ತೇನೆ, ಈ ಬಾರಿಯಾದರೂ ನನ್ನ ಕೆಲಸ ಆಗುವಹಾಗೆ ದಯೆತೋರಿಸಿ" ಎಂದು ಪ್ರಾರ್ಥಿಸಿದರು. ಮೂರನೇ ದಿನ ಮದ್ರಾಸಿಗೆ ಹೋಗುತ್ತಾ ಸ್ವಾಮಿಯವರನ್ನು ಗೊಲಗಮೂಡಿಯಲ್ಲಿ ದರ್ಶನ ಮಾಡಿ ತಮ್ಮ ಕೆಲಸದ ವಿಚಾರ ಹೇಳಿ ಕೊಂಡರು. ಆಗ ಸ್ವಾಮಿಯವರು, "ಮೂಡು ರೋಜುಲನಾಡೇ ನೀ ಪನಿ ಪೂರ್ತಿಚೇಸಿಳ್ಳಾಯ್ಯಾ" (ಮೂರು ದಿನಗಳ ಹಿಂದೆಯೇ ನಿನ್ನ ಕೆಲಸ ಆಗಿಹೋಗಿದೆ)

ಎಂದರು. ಅಂದರೆ ಮೂರು ದಿನಗಳ ಹಿಂದೆ ಸ್ವಾಮಿಯವರ ಚಿತ್ರದ ಮುಂದೆ ಪ್ರಾರ್ಥಿಸಿಕೊಂಡಾಗಲೇ ಸ್ವಾಮಿಯವರು ಕೆಲಸ ಮಾಡಿಸಿದರು ಎಂದು ಅರ್ಥ. ಸ್ವಾಮಿಯವರು ಯಾವಾಗಲೂ ಹೇಳುವ ಮಾತುಗಳು, **"ವಾಳ್ಳುಂಡೇದಾನಿಬಟ್ಟಿ ಗದಯ್ಯಾ ಮನಮುಂಡೇದಿ" ** (ಅವರಿದ್ದಂತೆಯೇ ನಾವು ಇರುವುದು) ಎಂದು. **ಶ್ರೀ ಸ್ವಾಮಿಯವರ ಚಿತ್ರಪಟವನ್ನು ಕೇವಲ ಒಂದು ಚಿತ್ರ ಪಟವೆಂದು ಭಾವಿಸದೆ, ಆ**
47 **ಮಹಾತ್ಮ ನಮ್ಮ ಮೇಲೆ ಕರುಣೆತೋರಿ ಆ ಚಿತ್ರಪಟದ ರೂಪದಲ್ಲಿ ನಮ್ಮೊಂದಿಗೆ ಇದ್ದಾರೆಂದು, ಭಕ್ತಿ ಶ್ರದ್ದೆಯೊಂದಿಗೆ ಆ ಪಟವನ್ನೇ ಸೇವಿಸಿದರೆ, ಅದು ಅವರಿಗೆ ಪ್ರತ್ಯಕ್ಷವಾಗಿ ಸೇವೆ ಮಾಡಿದಂತೆ ಎಂದು ನಮಗೆ ಸ್ವಾಮಿಯವರು ಅಭಯವನ್ನು ನೀಡಿದರು.**

**ಸ್ವಾಮಿ ಹೇಳಿದ ಮಾತಿನ ಆಳವಾದ ಅರ್ಥವು "ಗುರುವು ನಮ್ಮನ್ನು ಕನ್ನಡಿಯಂತೆ ಪ್ರತಿಬಿಂಬಿಸುತ್ತಾರೆ" **

ಸ್ವಾಮಿಯವರು ಸಮಾಧಿ ಆಗುವ ಎರಡು ವರ್ಷಗಳ ಹಿಂದೆ, "ಅನ್ನಿ ಜೀವುಲಲೋ ವೆಂಕಯ್ಯ ವುನ್ನಾರನಿ ವ್ರಾಸುಕೋಯ್ಯಾ" (ಎಲ್ಲಾ ಜೀವಗಳ್ಳಲ್ಲಿ ವೆಂಕಯ್ಯ ಇದ್ದಾರೆಂದು ಬರೆದುಕೊಳ್ಳಿ) ಎಂದು ಹೇಳಿದರು. **ಅದಕ್ಕೇ ನಾವು ಯಾವುದೇ ಜೀವಿಯನ್ನು ಆದರಿಸಿದರೂ ಅಥವಾ ಬಾಧಿಸಿದರೂ ಅದು ಸ್ವಾಮಿಯವರಿಗೇ**
48 **ಸೇರುತ್ತದೆ ಎಂಬ ಸ್ಪೃಹೆಯೊಂದಿಗೆ ನಿತ್ಯ ನಡೆದುಕೊಳ್ಳುವುದೇ ಸ್ವಾಮಿಯವರಿಗೆ ನಾವು ಸಲ್ಲಿಸುವ ನಿಜವಾದ ನಿತ್ಯಪೂಜೆ ಎಂದು ಗುರ್ತಿಸಬೇಕು. ಸ್ವಾಮಿಯವರಿಗೆ ಪ್ರತಿ ಜೀವಿಗಳೆಂದರೆ ಬಹಳ ಪ್ರೀತಿ.** ಸ್ವಾಮಿಯವರಿಗೆ ಹೆಚ್ಚು ಪ್ರೀತಿ ಇಲ್ಲದಿದ್ದರೆ, ಅವರು ಪ್ರತಿನಿತ್ಯ ಭೂತಬಲಿ ಎಂದು ಸ್ವಲ್ಪ ಅನ್ನವನ್ನು ಏಕೆ ಕೊಡುತ್ತಿದ್ದರು? ಅನ್ನ ರಾಗಿ ಮುಂತಾದಗಳು ಇರುವೆಗಳಿಗೆ ಏಕೆ ಹಾಕುತ್ತಿದ್ದರು? ಭಕ್ತರ ತಡೆಯಲಾರದ ರೋಗಗಳನ್ನು ತಮ್ಮ ಶರೀರದ ಮೇಲೆ ತೆಗೆದುಕೊಂಡು ಏಕೆ ಅನುಭವಿಸುತ್ತಿದ್ದರು?

ಒಮ್ಮೆ ಶ್ರಿ ಸ್ವಾಮಿಯವರು ತಮ್ಮನ್ನು ಸಿದ್ದಲಯ್ಯಬೆಟ್ಟದ ಶಿಖರದ ಮೇಲೆ ಕರೆದುಕೊಂದು ಹೋಗಿ ಎಂದು ಸೇವಕರನ್ನು ಕೇಳಿದರು. ಆಗ ಸ್ವಾಮಿಯವರು ನಡೆಯುತ್ತಿರಲಿಲ್ಲ. ಡೋಲಿಯಲ್ಲಿ ಕರೆದುಕೊಂಡು ಹೋಗಲು ಅದು ಸರಿಯಾದ ದಾರಿ ಅಲ್ಲ. ಒಬ್ಬ ಭಕ್ತ ಸ್ವಾಮಿಯವರನ್ನು ತನ್ನ ಬೆನ್ನಿನ ಮೇಲೆ ಹತ್ತಿಸಿಕೊಂಡು ಬೆಟ್ಟದ ಮೇಲೆ ಕರೆದು ಕೊಂಡು ಹೋದ. ಆಗ ಸ್ವಾಮಿಯವರು, "ಮೊರಕು ಮೂಡುವೇಲು ವ್ರಾಸುಕೋಯ್ಯಾ!" (ಒಂದು ಮಾರಿಗೆ ಮೂರು ಸಾವಿರ ಬರೆದುಕೋ ಅಪ್ಪಾ) ಎಂದರು. ಆ ಭಕ್ತ ಸ್ವಾಮಿಯವರನ್ನು ಬೆನ್ನಿನ ಮೇಲೆ ಹೊತ್ತುಕೊಂಡು ಹೋಗಿದ್ದರಿಂದ, ಪ್ರತಿ ಒಂದು ಮಾರಿನ ದೂರಕ್ಕೆ ಅಪಾರವಾದ ಪುಣ್ಯ ಅವನ ಹೆಸರಿಗೆ ಜಮವಾಗಿದೆ ಎಂದು ಅವರ ಭಾವನೆ. ಕೆಲವು ಸೇವಕರು, "ಸ್ವಾಮಿ ನೀವು ಸಮಾಧಿಯಾದರೆ ನಾವು ನಮ್ಮ ಮನೆಗೆ ಹೋಗದೇ ಭಿಕ್ಷೆ ಬೇಡಿ, ನಿಮ್ಮ ಸಮಾಧಿಯ ಬಳಿ ಇರುತ್ತೇವೆ" ಎಂದಾಗ, ಸ್ವಾಮಿಯವರು, "ಅಟ್ಲಾಪನಿಲೇದಯ್ಯಾ! ಮೀರು ಅಡವಿಲೋ ಕೂರ್ಚುನ್ನಾ ಅನ್ನಂ ವಚ್ಚೇಟಟ್ಲು ವ್ರಾಸುಕೋಂಡಿ" (ಹಾಗೆ ಬೇಕಾಗಿಲ್ಲ ನೀವು ಕಾಡಿನಲ್ಲಿದ್ದರೂ ನಿಮಗೆ ಅನ್ನ ಸಿಗುತ್ತದೆ

ಎಂದು ಬರೆದುಕೊಳ್ಳಿ) ಅಂದರು. ಸ್ವಾಮಿಯವರು ತಮ್ಮ ಭಕ್ತರಿಗೆ ಭುಕ್ತಿ ಮತ್ತು ಮುಕ್ತಿ ಎರಡು ಅನುಗ್ರಹಿಸಿದರು.

ಇನ್ನೊಮ್ಮೆ ಗುರವಯ್ಯ (ಸ್ವಾಮಿಯ ಭಕ್ತ), "ಸ್ವಾಮೀ, ನೀವು ಸಮಾಧಿ ಆದಾಗ, ನಾವು ಏನು ಮಾಡಬೇಕು? ನಾವು ಎಲ್ಲಿ ಹೋಗ ಬೇಕು?" ಎಂದು ಕೇಳಿದಾಗ, ಸ್ವಾಮಿಯವರು, "ಎಕ್ಕಡಕೂ ಪೋನಕ್ಕಲ್ಲೇದಯ್ಯಾ! ನಾ ಸಮಾಧಿ ದಗ್ಗರ ಕೂರ್ಚುನ್ನಾ ಅಂತಾ ನೇನುನ್ನಟ್ಲೇ ಜರುಗುತುಂದಿ" (ಎಲ್ಲಿಗೂ ಹೋಗ ಬೇಕಾಗಿಲ್ಲ! ನನ್ನ ಸಮಾಧಿಯ ಬಳಿ ಕುಳಿತುಕೊಂಡರೂ ಸಾಕು ಎಲ್ಲಾ ನಾನಿದ್ದಂತೆಯೇ ನಡೆಯುತ್ತದೆ" ಎಂದು ಅಭಯ ನೀಡಿದರು. ಶ್ರೀ ಸ್ವಾಮಿಯವರ ಅಭಯಗಳು, ಶಿರಿಡಿ ಸಾಯಿಬಾಬಾ ಹೇಳಿದ ಈ ಮಾತುಗಳು, "ನನ್ನ ಭಕ್ತರೊಡನೆ ನನ್ನ ಸಮಾಧಿಯು ಮಾತು ಆಡುತ್ತದೆ. ನನ್ನ ಮಣ್ಣು ಸಮಾಧಾನ ಹೇಳುತ್ತದೆ. ನನ್ನ ನಾಮ ಜಪ ನಡೆಯುತ್ತದೆ" ಬಹಳ ಹೋಲಿಕೆ ಕಾಣುತ್ತದೆ.

ಒಮ್ಮೊಮ್ಮೆ ಬೇಸಿಗೆ ಕಾಲದಲ್ಲಿ ಮಧ್ಯಾಹ್ನ 12 ಗಂಟೆಗೆ, "ನೇರುಗಾ ಫಲಾನಾ ಕೊಂಡ ದಗ್ಗರಕು ಪೋವಾಲಿ" (ನೇರವಾಗಿ ಇಂತಹ ಬೆಟ್ಟದ ಹತ್ತಿರ ಹೋಗಬೇಕು) ಎಂದು ಸ್ವಾಮಿಯವರು ಹೇಳುತ್ತಿದ್ದರು. ಸರಿಯಾದ ರಸ್ತೆಯಲ್ಲಿ ಹೋಗೋಣವೆಂದರೆ ಒಪ್ಪತ್ತಿರಲಿಲ್ಲ. ಮುಳ್ಳುಗಳು, ಬಂಡೆಗಳು ಮತ್ತು ಗುಡ್ಡಗಳಿದ್ದರೂ ನಾವು ಅವರು ತೋರಿಸಿದ ದಿಕ್ಕಿನಲ್ಲಿ ನೇರವಾಗಿ ಹೋಗಬೇಕಾಗಿತ್ತು. ಸ್ವಾಮಿಯವರ ಡೋಲಿ ಹೋರುತ್ತಿರುವ ಭಕ್ತರು ಪಾದರಕ್ಷೆಗಳನ್ನು ಧರಿಸುತ್ತಿರಲಿಲ್ಲ.

ಬಿ. ನಾಗಯ್ಯನವರು ಹೀಗೆ ಹೇಳುತ್ತಾರೆ, "ಸ್ವಾಮಿಯವರ ಮುಳ್ಳುಗಳಮೇಲೆ ಹೋಗಿ ಎಂದು ಹೇಳಿದಾಗ "ಓಂಕಾರ" ಮಾಡುತ್ತಾ ಮುಳ್ಳಿನಮೇಲೆ ನಡೆದಾಗ ಸ್ವಾಮಿಯವರ ಕೃಪೆಯಿಂದ ಒಂದು ಮುಳ್ಳು ಚುಚ್ಚುತ್ತಿರಲಿಲ್ಲ. ನೇರವಾಗಿ ಸ್ವಾಮಿಯವರು ತೋರಿಸಿದ ದಿಕ್ಕಿನಲ್ಲೇ ನಡೆಯುತ್ತಿದ್ದೆವು. ಅಷ್ಟು ಬಿಸಿಲಿನಲ್ಲಿ ಮಧ್ಯಾಹ್ನ 12 ಗಂಟೆಗೆ ಹೊರಟು, ಮೂರು ಗಂಟೆಗಳು ವಿರಾಮವಿಲ್ಲದೇ ಸ್ವಾಮಿಯವರು ಹೇಳಿದ ಜಾಗಕ್ಕೆ ಸೇರಿದಾಗ, ಸ್ವಲ್ಪವೂ ಆಯಾಸವಿರುತ್ತಿರಲಿಲ್ಲ. ಸ್ವಾಮಿಯವರು, "ಅಯ್ಯಾ ಮೀರು ಮೋಸಿನಂದುಕು ಮುಪ್ಪಯಿ ಕೋಟ್ಲು ರಶಿದು ತೀಸುಕುಪೋಯಾರು!" (ಅಯ್ಯಾ! ನೀವು ನನ್ನನ್ನು ಹೊತ್ತಿದ್ದಕ್ಕೆ, 30 ಕೋಟಿ ರಸೀದಿ ತೆಗೆದುಕೊಂಡಿದ್ದೀರಿ) ಎಂದು ಹೇಳುತ್ತಿದ್ದರು".

ಒಮ್ಮೆ ಸ್ವಾಮಿಯವರು ಅವರ ಧುನಿಯನ್ನು ಉದ್ದೇಶಿಸಿ, **"ಕೋಟಿ ಲಿಂಗಾಲ**
49 **ಪೂಜ ಕದಯ್ಯಾ ಇಕ್ಕಡ ಜರಿಗೇದಿ!"** (ಕೋಟಿ ಲಿಂಗಗಳ ಪೂಜೆ ಅಲ್ಲವೇ ಇಲ್ಲಿ ನಡೆಯುತ್ತಿರುವುದು?) ಎಂದರು.

ತಿರುಪತಿಯಲ್ಲಿ ನಡೆದ ಒಂದು ಹೋಮದ ವಿಚಾರವನ್ನು ಸ್ವಾಮಿಯವರಿಗೆ
50 **ಹೇಳಿದಾಗ, ಸ್ವಾಮಿಯವರು "ಅಯ್ಯಾ ಅಕ್ಕಡ 40 ರೋಜುಲಲೋ ವಚ್ಚೇ ಫಲಿತಂ ಇಕ್ಕಡ 4 ಗಂಟಲಲೋ ವಸ್ತುಂಡ್ಲಾ?" (ಅಲ್ಲಿ 40 ದಿನಗಳಲ್ಲಿ ಬರುವ ಫಲಿತ ಇಲ್ಲಿ 4 ಗಂಟೆಗಳಲ್ಲಿ ಬರುತ್ತಿಲ್ಲವೇ?) ಎಂದು ಹೇಳಿದರು.**

ಇನ್ನೊಮ್ಮೆ "ಬಾಲಯೋಗಿ ಆಯನ ಪನಿ ಆಯನ ಚೂಚುಕೊನಿ

ಪೋಯೇವಾಡೇನಯ್ಯಾ ಮನಂ ಅಂದರಿನೀ ಚೂಸ್ತುಂಡ್ಲಾ?" (ಬಾಲಯೋಗಿ ಅವರ ಕೆಲಸ ಅವರು ನೋಡಿಕೊಂಡು ಹೊರಟು ಹೋಗುತ್ತಾರೆ. ನಾನು ಎಲ್ಲರನ್ನೂ ನೋಡಿ ಕೊಳ್ಳುತ್ತಿಲ್ಲವೆ?

ಒಂದು ದಿನ ಸ್ವಾಮಿಯವರು ಗುರವಯ್ಯನೊಂದಿಗೆ "ಅಯ್ಯಾ ವೀರಬ್ರಹ್ಮಂಗಾರಿಲಾಗ ಗುಂಟ ತ್ರವ್ವಿಂಚುಕೊನಿ ಚಾಟುನ ಕೂರ್ಚೋನು. ಅಂದರಿಕೀ ಅನ್ನಿ ಏರ್ಪಾಟ್ಲು ಚೇಸಿ ಪೋತಾನು" (ಅಯ್ಯಾ ವೀರಬ್ರಹ್ಮಂರವರ ಹಾಗೆ ಗುಂಡಿ ತೋಡಿಸಿ ಮರೆಯಲ್ಲಿ ಕೂರುವುದಿಲ್ಲ. ಎಲ್ಲರಿಗೂ ಎಲ್ಲಾ ಏರ್ಪಾಡು ಮಾಡಿ ಹೋಗುತ್ತೇನೆ) ಎಂದು ಹೇಳಿದರು. ಹಾಗೆಯೇ ಮಾಡುತ್ತಿದ್ದಾರೆ ಆ ಪ್ರೇಮ ಮೂರ್ತಿ.

ಒಮ್ಮೆ ರೋಶಿ ರೆಡ್ಡಿಯವರೊಂದಿಗೆ ಸ್ವಾಮಿಯವರು, **"ಅಯ್ಯಾ, ಅಂದರಿಕೀ ಪಂಟ ಪಂಡಿಂಚಾನು. ದೊಂಗಲು ಪಡ ಕುಂಡಾ ಕಾಪಲಾ ಕಾಚುಕೋಂಡಿ"** (ಅಯ್ಯಾ! ಎಲ್ಲರಿಗೂ ಬೆಳೆ ಬೆಳೆಸಿ ಕೊಟ್ಟಿದ್ದೇನೆ. ಕಳ್ಳರು ಬರದಂತೆ ಕಾಪಾಡಿ) ಎಂದರು. ಇದರ ಒಳಾರ್ಥ ಏನೆಂದರೆ, **' ಆಧ್ಯಾತ್ಮಿಕ ವಾಗಿ ಎಲ್ಲರನ್ನೂ ಸಂಪೂರ್ಣವಾಗಿ**
52 **ಅನುಗ್ರಹಿಸಿದ್ದೇನೆ. ನಿಮ್ಮೊಳಗಿನ ಪ್ರಕೃತಿ ಸಿದ್ಧವಾದ ದುಷ್ಟ ಸಂಸ್ಕಾರ ಎಂಬ ಕಳ್ಳರು ಆ ಕೃಪೆಯನ್ನು ದೋಚಿಕೊಳ್ಳದ ಹಾಗೆ ನೋಡಿಕೊಳ್ಳಿ"** ಎಂದು ಸ್ವಾಮಿಯವರ ಭಾವವಿರಬಹುದು. ಕೆಲವರು "ಶ್ರಿ ಸ್ವಾಮಿಯವರನ್ನು ನಂಬಿದ್ದೇವೆ, ಎಲ್ಲಾ ಅವರೇ ನೋಡಿಕೊಳ್ಳುತ್ತಾರೆ ಎಂದು ತಪ್ಪುಗಳನ್ನು ಮಾಡುತ್ತಾ ಇರುತ್ತಾರೆ. ಅದು ಸರಿಯಾದ ಪದ್ಧತಿ ಅಲ್ಲ. ನಮ್ಮಲ್ಲಿರುವ ಕೆಟ್ಟ ಗುಣಗಳೆನ್ನುವ ಕಳ್ಳರನ್ನು ದೂರ ಮಾಡಿಕೊಂಡಾಗಲೆ ಸ್ವಾಮಿಯವರ ಕೃಪೆ ನಮಗೆ ಅನುಭವವಾಗುತ್ತದೆ. "ನೀವು ಹೊರಟು ಹೋದರೆ ನಮಗೆ ಯಾರು ದಿಕ್ಕು ಸ್ವಾಮಿ" ಎಂದು ಕೇಳಿದಾಗ, "ಪೊಯ್ಯೇ ದೆಕ್ಕಡಿಕಯ್ಯಾ! ಸೂರ್ಯಚಂದ್ರುಲು ಉನ್ನಂತ ವರಕೂ ಉಂಡೇದೇಗದಾ" (ನಾನು ಎಲ್ಲಿಗೆ ಹೋಗುತ್ತಿದ್ದೇನೆ? ಸೂರ್ಯ ಮತ್ತು ಚಂದ್ರ ಇರುವವರೆಗೂ ನಾನು ಇಲ್ಲೇ ಇರುತ್ತೇನೆ) ಎಂದರು ಆ ಮಹಾತ್ಮರು. ಸ್ವಾಮಿಯವರ ಮಾತು ಸತ್ಯ ಎಂದು ಅವರು ಮಹಾ ಸಮಾಧಿ ಆದ ನಂತರ ನಡೆಯುತ್ತಿರುವ ಅವರ ಲೀಲೆಗಳೇ ಅದಕ್ಕೆ ಸಾಕ್ಷಿ. "ವೆಂಕಯ್ಯ ಪೇರು ಮೀದ ಪಿಡಿಕೆಡು ಮೆತುಕುಲು ಪೆಟ್ಟಿನ ವಾರಿಕಿ ತೆಚ್ಚಿನವಾರಿಕಿ, ವಾರಿ ಮಂಚಿ ಚೆಡ್ಡಲನ್ನೀ ಮನಮೇ ಚೂಡೋದ್ದಯ್ಯಾ" (ವೆಂಕಯ್ಯನ ಹೆಸರು ಹೇಳಿ ಒಂದು ಮುಷ್ಟಿ ಅನ್ನ ಕೊಟ್ಟವರನ್ನು, ಅಥವ ತಂದವರನ್ನು ಅವರ ಯೋಗಕ್ಷೇಮವನ್ನು ನಾವೇ ನೋಡಬೇಕಲ್ಲಯ್ಯಾ) ಎಂದರು ಸ್ವಾಮಿಯವರು.

ಒಮ್ಮೆ ಸ್ವಾಮಿಯವರು "ಇಪ್ಪುಡೆವರು ಏ ಏ ಪನಿ ಚೇಸುಕುಂಟುನ್ನಾರೋ ಇಕ ಮುಂದು ಕೂಡಾ ಆ ಪನುಲೇ ಚೇಸುಕೋಂಡಿ. ಆ ಪನುಲಲೋ ನೇನೇ ಉನ್ನಾನು" (ಈಗ ಯಾರು ಯಾರು, ಯಾವ ಯಾವ ಕೆಲಸ ಮಾಡುತ್ತಿದ್ದೀರೋ, ಇನ್ನು ಮುಂದೆ ಆ ಕೆಲಸಗಳನ್ನೇ ಮಾಡಿ. ಆ ಕೆಲಸಗಳಲ್ಲಿ ನಾನೇ ಇದ್ದೇನೆ) ಎಂದರು.

ಕೆಲವು ಜನರನ್ನು ಚೇಳು ಕುಟುಕಿದಾಗ ಸ್ವಾಮಿಯವರ ಬಳಿ ಬಂದ ತಕ್ಷಣವೇ ಅವರ ಬಾಧೆ ಕಡಿಮೆ ಆಗುತ್ತಿತ್ತು. ಇನ್ನು ಕೆಲವರಿಗೆ, ಪ್ರದಕ್ಷಿಣೆ ಮಾಡಿದಾಗ ಕಡಿಮೆ

ಆಗುತ್ತಿತ್ತು.. ಇನ್ನು ಕೆಲವರಿಗೆ, ಚೇಳು ಕುಟಿಕಿದ ತಕ್ಷಣವೇ ಸ್ವಾಮಿಯವರನ್ನು ಕೇವಲ ನೆನಪಿಸಿ ಕೊಂಡರೆ ಕಡಿಮೆ ಆಗುತ್ತದೆ. "ಈ ಭೇದವೇತಕ್ಕೆ ಸ್ವಾಮಿ?" ಎಂದು ಕೇಳಿದಾಗ, ಸ್ವಾಮಿಯವರು "ವಾಳ್ಳುಂಡೇ ದಾನ್ನಿ ಬಟ್ಟೀ ಗದಯ್ಯಾ ಮನಮುಂಡೇದಿ!" (ಅವರು ಹೇಗೆ ಇರುತ್ತಾರೋ ಅದರಂತೆ ಅಲ್ಲವಾ ನಾವಿರುವುದು) ಎಂದರು. ಅವರವರ ವಿಶ್ವಾಸದ ಪ್ರಕಾರ ರಕ್ಷಣೆ ಹೊಂದುತ್ತಾರೆ ಎನ್ನುವವರು. ಇನ್ನೊಮ್ಮೆ ಸ್ವಾಮಿಯವರೇ ಹೇಳಿದ ಮಾತು, "ಚಚ್ಚೇದೇಮುಂದಿ, ಬ್ರತಿಕೇದೇಮುಂದಿ? ಚಚ್ಚಿ ಬೂಡಿದ್ಯೆನಾ ರಮ್ಮಂಟೇ ರವಲಸಿಂದೇಗದಾ" (ಸಾಯುವುದೇನು, ಬದುಕುವುದೇನು? ಸತ್ತು ಬೂದಿ ಆದರೂ, ಬಾ ಎಂದರೆ ಬರಬೇಕಲ್ಲವೇ?) ಎಂದರು.

ಆಗಾಗ, ಸ್ವಾಮಿಯವರು ರೋಶಿ ರೆಡ್ಡಿಯವರೊಂದಿಗೆ, "ಅಯ್ಯಾ ಊರ್ಲೋಕಿ ಪೋಯಿ ಎವರಿನನ್ನಾ ಅಡಿಗಿ ಪಾತ ಗುಡ್ಡಲು ತೀಸುಕುರಾಯ್ಯಾ? ಮನಕು ಪನಿಕಿ ವಸ್ತಾಯಿ. ಇಚ್ಚಿನ ವಾಳ್ಳಕು ಜಬ್ಬುಲು ಪೋತಾಯಿ" (ಅಯ್ಯಾ! ಊರೊಳಗೆ ಹೋಗಿ ಯಾರನ್ನಾದರು ಕೇಳಿ ಹಳೆ ತುಂಡು ಬಟ್ಟೆಗಳನ್ನು ತೆಗೆದುಕೊಂಡು ಬಾರಯ್ಯಾ! ನಮಗೆ ಕೆಲಸಕ್ಕೆ ಬರುತ್ತದೆ. ಕೊಟ್ಟವರಿಗೆ ರೋಗಗಳು ಹೋಗುತ್ತವೆ) ಎನ್ನುತ್ತಿದ್ದರು.

"ಯಾವ ಕೆಲಸವನ್ನಾದರೂ ಪ್ರಾರಂಭಿಸುವುದಕ್ಕೆ ಯಾವ ವಾರ ಒಳ್ಳೆಯದು ಸ್ವಾಮಿ" ಎಂದು ಒಬ್ಬ ಭಕ್ತ ಕೇಳಿದಾಗ ಸ್ವಾಮಿಯವರು, "ಮಂದಲ ಕನುಕ್ಕುಂಟೇ ಮಂಗಳವಾರಂ ಮಂಚಿದಿ ಗದಯ್ಯಾ!" (ಮಂದಲ ತಿಳಿದುಕೊಂಡರೇ ಮಂಗಳವಾರ ಒಳ್ಳೆಯದೇ ಅಲ್ಲವೇ) ಎಂದರು. "ಮಂದಲ ತಿಳಿದುಕೊಳ್ಳುವುದು" ಎಂಬುದರ ಅರ್ಥ ಏನೆಂದರೆ, ನಾವು ಯಾವುದೇ ಕೆಲಸ ಮಾಡಿದರೂ ಅದು ನಿಷ್ಕಾಮ ಕರ್ಮವಾಗಿ, ಗುರುಸೇವೆ ಎಂದು ಭಾವಿಸಿ ಮಾಡಿದರೆ ಯಾವುದೇ ವಾರವಾದರೂ ಪರವಾಗಿಲ್ಲ ಎಲ್ಲಾ ದಿನಗಳು ಒಳ್ಳೆಯದಿನಗಳೇ. ಸಾಮಾನ್ಯವಾಗಿ ಕೆಟ್ಟದೆನ್ನುವ ಮಂಗಳವಾರವೂ ಒಳ್ಳೆಯದು ಎಂದು ಸ್ವಾಮಿಯವರ ಭಾವನೆ.

ಒಬ್ಬ ಭಕ್ತ ಸ್ವಾಮಿಯವರೊಡನೆ ಹೀಗೆ ಹೇಳಿದ, "ಸ್ವಾಮಿ! ನೀವು ನಿರಂತರ ಪ್ರಯಾಣ ಮಾಡುತ್ತಿದ್ದರೆ, ನಮಗೆ ನಿಮ್ಮನ್ನು ದರ್ಶನ ಮಾಡುವ ಭಾಗ್ಯ ಕಷ್ಟವಾಗುತ್ತದೆ ಸ್ವಾಮಿ". ಆಗ ಸ್ವಾಮಿಯವರು, "ಎಕ್ಕಡ ತಲ್ಚುಕುಂಟೇ ಅಕ್ಕಡನೇ ಉಂಡ್ಲಾಯ್ಯಾ ನೇನು?" (ನೀವು ಎಲ್ಲಿ ನನ್ನನ್ನು ನೆನಪಿಸಿಕೊಳ್ಳುತ್ತೀರೋ, ನಾನು ಅಲ್ಲಿಯೇ ಇದ್ದೇನೆ ಅಲ್ಲವೇ?) ಎಂದರು. ಇದು ನಿಜವೆಂದು ಭಕ್ತರ ಅನುಭವಗಳು ಹೇಳುತ್ತವೆ. ಒಮ್ಮೆ ಶ್ರೀ ಸ್ವಾಮಿಯವರು ಹೇಳಿದ ಮಾತು: "ಇಪ್ಪುಡೇಮುಂದಯ್ಯಾ - ವೆಂಕಯ್ಯ ಚಾಟುಕುಪೋಯಿನ ತರುವಾತ ಮೂಡೇಂಡ್ಲಕು ಗದಾ ಉಂಡೇದಿ? ಇಕ್ಕಡ ನೆಲ್ಲೂರು ರಂಗನಾಯಕುಲಸ್ವಾಮಿ ಗರುಡಸೇವ ಜರಿಗಿನಟ್ಲು ಜರುಗುತುಂದಿ. ಪೂರ್ತಿ ವಿಶ್ವಾಸಂತೋ ಇಕ್ಕಡಿಕೊಚ್ಚಿ ಏಮನುಕುಂಟೇ ಅದಿ ಅಯ್ಯೇದೇಗದಯ್ಯಾ!" (ಈಗೇನಿದೆ - ವೆಂಕಯ್ಯ ಕಣ್ಮರೆಯಾದ ಮೇಲೆ ಮೂರು ವರ್ಷಗಳ ನಂತರ ಅಲ್ಲವೇ ಗೊತ್ತಾಗುವುದು? ಇಲ್ಲಿ ನೆಲ್ಲೂರು ರಂಗನಾಯಕಸ್ವಾಮಿ ಗರುಡಸೇವೆ ನಡೆದಂತೆಯೇ ನಡೆಯುತ್ತದೆ. ಪೂರ್ತಿ ವಿಶ್ವಾಸದಿಂದ ಇಲ್ಲಿ ಬಂದು ಏನನ್ನು ಕೇಳಿಕೊಂಡರೂ ಅದು ಖಂಡಿತವಾಗಿ ಆಗುತ್ತದೆ

ಅಲ್ಲವೇ)

ಈ ಮಾತು ಇವತ್ತಿಗೂ ಅಕ್ಷರಶಃ ಸತ್ಯವಾಗಿದೆ. "ವಾಳ್ಳುಂಡೇದಾನ್ನಿಬಟ್ಟೆ ಗದಯ್ಯಾ ಮನಮುಂಡೇದಿ" (ಅವರು ಹೇಗೆ ಇರುತ್ತಾರೋ ಅದರ ಪ್ರಕಾರ ನಾವಿರುವುದು) ಎಂದು ಸ್ವಾಮಿಯವರ ಹೇಳಿದ ಮಾತುಗಳು ಅಕ್ಷರಶಃ ನಿಜವೆಂದು ವಕ್ಕೆಮ್ಮನವರ ಅನುಭವವೇ ಸಾಕ್ಷಿ. ಒಂದು ದಿನ, ಚಲಮಾನಾಯುಡು ಮತ್ತು ವಕ್ಕೆಮ್ಮನವರು ಸ್ವಾಮಿಯವರ ದರ್ಶನ ಮಾಡಲು ಕೆರೆ ದಾಟುತ್ತಿದ್ದರು. ಮುಂದೆ ನಡೆಯುತ್ತಿದ್ದ ಚಲಮಾನಾಯುಡುಗೆ, ಅವರ ಸೊಂಟದವರೆಗೂ ನೀರು ಇದ್ದರಿಂದ ಬಟ್ಟೆ ಒದ್ದೆಯಾಗಿ ಬಿಟ್ಟಿತು. ಅವರ ಹಿಂದೆ ಬರುತ್ತಿದ್ದ ಮುಗ್ದ ವಕ್ಕೆಮ್ಮನವರಿಗೆ ಮಾತ್ರ ಮೊಣಕಾಲಿನ ಮಟ್ಟದವರಗೇ ನೀರು ಇದ್ದರಿಂದ, ಅವರ ಬಟ್ಟೆ ಒದ್ದೆ ಆಗಲಿಲ್ಲ.

ಅವಧೂತ ಲೀಲೆ

ಅಧ್ಯಾಯ – 20

ಧರ್ಮಾಚರಣ

ಪ್ರತಿಯೊಬ್ಬ ಮನುಷ್ಯನು ಶಾಂತಿ, ಸಂತೋಷ ಮತ್ತು ಸಂತೃಪ್ತಿಯಿಂದ ಬದುಕಲು ಬಯಸುತ್ತಾನೆ. ಅನೇಕ ಶಾಸ್ತ್ರಗಳು ಮತ್ತು ಮಹಾತ್ಮರು ತೋರಿಸಿದ ಮಾರ್ಗ ಗಮನಿಸಿದರೆ, ಮನುಷ್ಯ ಧಾರ್ಮಿಕವಾದ ನಡವಳಿಕೆಯಿಂದಲೇ ಈ ಸಂತೋಷ, ಶಾಂತಿ,
52 **ತೃಪ್ತಿಯನ್ನು ಪಡೆಯಬಹುದು. ಆದರೆ ಆಶಾವಾದಿಯಾದ ಮನುಷ್ಯನಿಗೆ ಧರ್ಮಾಚರಣೆಯನ್ನು ನಿತ್ಯ ಜೀವನದಲ್ಲಿ ಆಚರಿಸುವುದು ಅಸಾಧ್ಯ. ನಿಯಮಿತವಾದ ಧಾರ್ಮಿಕ ಜೀವನವನ್ನು ನಡೆಸುವುದು ಮತ್ತು ಅದನ್ನು ಸಾಮಾನ್ಯಗೊಳಿಸುವುದು, ನಿರಂತರ ಮಹಾತ್ಮರ ಸಾಂಗತ್ಯದಲ್ಲಿರುವುದೇ ಏಕೈಕ ಮಾರ್ಗ ಎಂದು ಭಗವದ್ಗೀತೆ ಮುಂತಾದ ಗ್ರಂಥಗಳಲ್ಲಿ ಹೇಳಲಾಗಿದೆ.** ಅಂತಹ ಮಹಾತ್ಮರ ಪ್ರತ್ಯಕ್ಷ ಸಾಂಗತ್ಯವು ಸಾಧ್ಯವಾಗದಿದ್ದಾಗ, ಅವರ ಜೀವನ ಚರಿತ್ರೆಗಳನ್ನು ಓದುವುದೂ ಅವರ ಪ್ರತ್ಯಕ್ಷ ಸಾಂಗತ್ಯಕ್ಕೆ ಸಮಾನವಾಗಿರುತ್ತದೆ ಎಂದು ಅನೇಕ ಭಕ್ತರ ಅನುಭವಗಳು ಸಾಬೀತುಪಡಿಸುತ್ತವೆ. ಮಹಾತ್ಮರ ಜೀವನ ಚರಿತ್ರೆಯ ಪಾರಾಯಣವನ್ನು ಮಾಡುವುದರ ಮೂಲಕ ಅನೇಕ ಭಕ್ತರಲ್ಲಿ ನಡೆದ ಆಂತರಿಕ ಪರಿವರ್ತನೆಯೇ ಇದಕ್ಕೆ ನಿದರ್ಶನ. ಅಂತಹ ಧರ್ಮಾಚರಣೆಯ ಕುರಿತು ಸ್ವಾಮಿಯವರು ಎಂದೂ ದೊಡ್ಡದಾಗಿ ಉಪನ್ಯಾಸ ನೀಡದಿದ್ದರೂ ಅವರ ನಿತ್ಯಜೀವನದಲ್ಲಿ ನಡೆದಿರುವ ಘಟನೆಗಳಿಂದ ಧರ್ಮಬೋಧನೆ ಕೇಳಬಲ್ಲವರಿಗೆ ಪ್ರತಿಕ್ಷಣವೂ ಕೇಳಿಸುತ್ತಲೇ ಇರುತ್ತದೆ.

ಕೊಜ್ಜಕೂಟಿ ಬುಜ್ಜಯ್ಯನವರು ಪ್ರತಿನಿತ್ಯ ಸ್ವಾಮಿಯವರ ಸನ್ನಿಧಿಯಲ್ಲಿ ಸಮಯ ಕಳೆಯುತ್ತಿದ್ದರು. ಒಮ್ಮೆ ಕಾರಣ ಗೊತ್ತಿಲ್ಲ, ಆದರೆ ಅವರು 10 ದಿನಗಳ ಕಾಲ ಗ್ರಾಮದಲ್ಲಿದ್ದರೂ ಸ್ವಾಮಿಯ ದರ್ಶನ ಮಾಡದೇ, ಒಂದು ಹಲಗೆಯ ಮೇಲೆ ಕುಳಿತು ಮಾತನಾಡುತ್ತಾ ಸಮಯ ಕಳೆದರು. ಹನ್ನೊಂದನೇ ದಿನ ಸ್ವಾಮಿಯ ದರ್ಶನಕ್ಕೆ ಬಂದಾಗ ಸ್ವಾಮಿಯವರು ಅವರ ಕಡೆ ಬೆರಳು ತೋರಿಸಿ **"ಏ ವೂರಯ್ಯಾ ಆಯನದಿ?" (ಯಾವೂರಪ್ಪ ಅವರದ್ದು) ಎಂದು ಕೇಳಿದರು. ತನ್ನ ಪ್ರವರ್ತನೆಗೆ ಬುಜ್ಜಯ್ಯನವರು**
53 **ಬಹಳ ಪಶ್ಚಾತ್ತಾಪ ಪಟ್ಟರು. ಗುರುವನ್ನು ಹದಿನೈದು ದಿನಗಳಿಗೆ, ಒಂದು ತಿಂಗಳಿಗೆ ಅಥವಾ ಕನಿಷ್ಠ ಆರು ತಿಂಗಳವರೆಗೆ ಒಮ್ಮೆ ದರ್ಶನ ಮಾಡಬೇಕೆಂದು ಶಾಸ್ತ್ರದಲ್ಲಿ ಹೇಳಿದೆ. ಅದು ಸ್ವಾಮಿಯವರ ಮಹಾಸಮಾಧಿ ಆದನಂತರವೂ ವರ್ತಿಸುತ್ತದೆ.** ಸದ್ಗುರು

ಜನನ ಮರಣಗಳಿಗೆ ಅತೀತರು. ಅದರಿಂದಲೇ ಅವರ ಮತ್ತು ಅವರ ಭಕ್ತರ ಅನುಬಂಧ ಮಹಾಸಮಾಧಿಯ ನಂತರವೂ ಅದು ಮುಂದುವರಿಯುತ್ತದೆ ಎಂದು ಶ್ರೀ ರಮಣಮಹರ್ಷಿಗಳು ಹೇಳಿದ್ದರು. ಸೂರ್ಯಚಂದ್ರರಿರುವರಗೆ ತಾವು ಎಲ್ಲಿಗೂ ಹೋಗುವುದಿಲ್ಲವೆಂದು ಸ್ವಾಮಿಯವರು ನಮಗೆ ವಾಗ್ದಾನ ಮಾಡಿದ್ದರಿಂದ, ಸ್ವಾಮಿಯವರ ಸಮಾಧಿಯ ದರ್ಶನ ಮಾಡಿ, ಸಮಾಧಿಯ ಬಳಿ ಸಾಧ್ಯವಾದಷ್ಟು ಸಮಯ ಕಳೆಯುವುದು ಬಹಳ ಶ್ರೇಯಸ್ಕರ.

ನಾಗುಲವೆಲ್ಲಟ್ಟುರು ಟ ಮಂಗಮ್ಮನವರು ಒಮ್ಮೆ ಉಪವಾಸವಿದ್ದರು. ಆ ದಿನ, ಸ್ವಾಮಿಯವರು ಅವರಿಗೆ, "ಅಂದರಿಕೀ ಅನ್ನಂ ಪೆಟ್ಟಿ ನೀವು ತಿನಿ ರಾಮ್ಮಾ" (ಎಲ್ಲರಿಗೂ ಊಟ ಬಡಿಸಿ ನೀನೂ ತಿಂದು ಬಾರಮ್ಮಾ) ಎಂದರು.

ಆಗ ಮಂಗಮ್ಮ "ಇವತ್ತು ಶಿವರಾತ್ರಿ ಸ್ವಾಮಿ! ನಾನು ಉಪವಾಸ ಮಾಡುತ್ತಿದ್ದೇನೆ" ಅಂದರು. ಆಗ ಸ್ವಾಮಿಯವರು, "ಅಬ್ಬೇ ಅನ್ನಂ ಚೂಸ್ತೂ ವುಳ್ಳಾಮ್ಮಾ? ತಿನೇಸಿರಾ" (ಅಬ್ಬಾ! ಅನ್ನವನ್ನು ನೋಡುತ್ತಾ ಇರುತ್ತೀಯಾ? ತಿಂದು ಬಾ) ಎಂದರು. ಅಂದರೆ, ಅನ್ನ ತಿನ್ನಬೇಕು ಎಂಬ ಕೋರಿಕೆ ಬಂದಾಗ ಅಥವ ಹಸಿವು ಇದ್ದಾಗ, ಊಟ ಮಾಡುವುದೇ ಒಳ್ಳೆಯದು ಎಂದು ಸ್ವಾಮಿಯವರ ಭಾವನೆ. ಮಂಗಮ್ಮ ಸ್ವಾಮಿಯವರು ಹೇಳಿದಂತೆಯೆ ಊಟ ಮಾಡಿ ಬಂದರು. ಎಲ್ಲಿಯವರೆಗೆ ಮನಸ್ಸು ಆಹಾರದ ಆಲೋಚನೆಗಳಿಂದ ಸಂಪೂರ್ಣವಾಗಿ ಮುಕ್ತವಾಗಿರುತ್ತದೆಯೋ ಅಲ್ಲಿಯವರೆಗೆ ಉಪವಾಸ ಮಾಡಬೇಕು. ಇಲ್ಲದಿದ್ದರೆ, ಹಸಿವಿನಿಂದ ವಿಲಿವಿಲಿ ವದ್ದಾಡುತ್ತಾ, ಯಾವಾಗ ಉಪವಾಸವನ್ನು ಬಿಟ್ಟು, ಊಟ ಮಾಡುತ್ತೇನೋ ಎಂದು ಮನಸ್ಸಿನಲ್ಲಿ ಆಲೋಚನೆ ಬಂದರೆ, ಊಟ ಮಾಡದಿದ್ದರೂ, ಅದು ಊಟ ಮಾಡಿದ ಲೆಖ್ಖವೇ ಆಗುತ್ತೆ. ಇದನ್ನೇ ಭಗವದ್ಗೀತೆಯಲ್ಲಿ ಮಿಥ್ಯಾಚಾರ ಎಂದು ಹೇಳಿದೆ. ಆದ್ದರಿಂದಲೇ ಸ್ವಾಮಿಯವರು ಮಂಗಮ್ಮನವರ ಸಂಸ್ಕಾರಕ್ಕೆ ಉಪವಾಸ ಮಾಡುವುದು ತಕ್ಕದ್ದಲ್ಲ ಎಂದು ಊಟ ಮಾಡಲು ಹೇಳಿದರು. ಆದರೆ, ಕೆಲವರಿಗೆ, ಸ್ವಾಮಿಯವರು ಉಪವಾಸ ಮಾಡಲು ಪ್ರೋತ್ಸಾಹಿಸುತ್ತಿದ್ದರು. ಉದಾಹರಣೆಗೆ: ರೋಶಿ ರೆಡ್ಡಿಯವರನ್ನು ಸ್ವಾಮಿಯವರು 5 ದಿನಗಳು ಉಪವಾಸ ಮಾಡಲು ಹೇಳಿದರು. ಅದು ಆತನ ಸಂಸ್ಕಾರಕ್ಕೆ ಒಳ್ಳೆಯದೆಂದು ಹಾಗೆ ಹೇಳಿದರು.

ಸಾಮಾನ್ಯವಾಗಿ ಸ್ವಾಮಿ ಯಾರ ಮನೆಗೂ ಹೋಗುತ್ತಿರಲಿಲ್ಲ. ಆದರೆ 1978 ರಲ್ಲಿ ಅವರು ಕಲಿಚೇಡು ಪಟ್ಟಣದಲ್ಲಿ ವಾಸಿಸುತ್ತಿದ್ದ ನರಸಾರೆಡ್ಡಿಯವರ ಮನೆಗೆ ಹೋಗಿ ಮೂರು ರಾತ್ರಿ ಅಲ್ಲಿಯೇ ಇದ್ದರು. ಒಂದು ದಿನ, ಅವರು ಮನೆಯ ಮಧ್ಯದಲ್ಲಿ ಧುನಿಯನ್ನೂ ಪ್ರಾರಂಭಿಸಿ ಅಲ್ಲೇ ಕುಳಿತುಕೊಂಡರು, ಇದು ಬಹಳ ವಿಶೇಷಕರವಾದ ವಿಷಯ. ನಾಲ್ಕನೇ ದಿನ ಬೆಳಿಗ್ಗೆ ಸ್ವಾಮಿಯವರು, "ಸಿದ್ದಲಯ್ಯ ಕೊಂಡಕು ವೆಳ್ಳಾಲಿ ಬಂಡಿ ತೀಸುಕು ರಾ" (ನಾವು ಸಿದ್ದಲಯ್ಯ ಬೆಟ್ಟಕ್ಕೆ ಹೋಗಬೇಕು, ಗಾಡಿ ತೆಗೆದುಕೊಂಡು ಬ) ಎಂದರು. ಗಾಡಿ ಬಂದು ಸಾಮಾನೆಲ್ಲಾ ಅದರೊಳಗೆ ಇಟ್ಟಮೇಲೆ ಸ್ವಾಮಿಯವರನ್ನು ಹೊರಡಿ ಎಂದು ಹೇಳಿದಾಗ, ಅವರು, "ಇಪ್ಪುಡು ಪೋವಡಾನಿಕಿ ಲೇದು, ಬಂಡಿ ವಾನಿಕಿ ರೂ.6/- ಇಚ್ಚಿ ಪಂಪಂಡಿ" (ಈಗ ಹೊರಡಕ್ಕೆ ಸಾಧ್ಯವಾಗಲ್ಲ, ಗಾಡಿ ಕಟ್ಟಿದವನಿಗೆ ರೂ.6/-

ಕೊಟ್ಟು ಕಳುಹಿಸಿ) ಎಂದು 4-5 ಬಾರಿ ಹೇಳಿದರು. ಗಾಡಿಯವನಿಗೆ ಅಷ್ಟು ದುಡ್ಡು ಯಾಕೆ ಕೊಡಬೇಕು ಎನ್ನುವುದು ಯಾರಿಗೂ ಅರ್ಥ ಆಗಲಿಲ್ಲ. ಆದರೆ ಗಾಡಿಯವನು, ದಿನಾ ಗಣಿಯಲ್ಲಿ ಕೂಲಿ ಕೆಲಸ ಮಾಡಿ, ಆ ದಿನದ ಬಾಡಿಗೆ ಸಂಪಾದಿಸುತ್ತಿದ್ದನು. ಈ ದಿನ ಅವನು ಗಾಡಿ ಕಟ್ಟಿದ್ದರಿಂದ ಅವನಿಗೆ ದಿನದ ಕೂಲಿ ತಪ್ಪಿಹೋಯಿತು. ಆದ್ದರಿಂದ ಆ ಕೂಲಿಯನ್ನು ಕೊಡಬೇಕೆಂಬುದು ಸ್ವಾಮಿಯವರ ಭಾವನೆ. ಸಾಯಿನಾಥರೂ ಹೇಳಿದಂತೆ, "ಯಾರ ಸೇವೆಯನ್ನೂ ಉಚಿತವಾಗಿ ಪಡೆಯ ಬಾರದು. ಯಾವ ಸೇವೆಗಾದರೂ ಉದಾರವಾಗಿ ಪ್ರತಿಫಲ ಕೊಡಬೇಕು". ಈ ಧರ್ಮವನ್ನು ಸ್ವಾಮಿಯವರೂ ಎಷ್ಟು ಚೆನ್ನಾಗಿ ನಿರ್ವಹಿಸಿದರೋ ನೋಡಿ. ಸ್ವಾಮಿಯವರು, ಗಾಡಿಯವನಿಗೆ ರೂ.6/- ಕೊಡುವವರೆಗೂ ತಮ್ಮ ಸೇವಕರನ್ನು ಬಿಡಲಿಲ್ಲ. ಮುಗ್ಧ ಸೇವಕರು, ಗಾಡಿಯವನಿಗೆ, ನಾಳೆ ಸ್ವಾಮಿಯವರನ್ನು ಕರೆದುಕೊಂಡು ಹೋಗು ಎಂದು ಹೇಳಿದರು. ಆದರೆ, ಮರುದಿನವೂ ಸ್ವಾಮಿಯವರು ರೂ.6/- ಕೊಡದೇ ಗಾಡಿಯಲ್ಲಿ ಹೋಗುವುದಕ್ಕೆ ಒಪ್ಪಿಕೊಳ್ಳುತ್ತಾರೆಯೇ?

ಶ್ರೀ ಸ್ವಾಮಿಯವರ ತಂಗಿ ಮಂಗಮ್ಮ, ಸ್ವಾಮಿಯವರನ್ನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಸ್ವಾಮಿಯವರು ಆಚೆಕಡೆ ಎಲ್ಲಾ ತಿರುಗಿ ಮನೆಗೆ ಬರುವ ಹೊತ್ತಿಗೆ, ಮಂಗಮ್ಮನವರು, ತಮಗೆ ಎಷ್ಟೇ ಹಸಿವೆಯಾದರೂ ಊಟ ಮಾಡದೆ, ಸ್ವಾಮಿಯವರಿಗೋಸ್ಕರ ಊಟ ಮುಚ್ಚಿಟ್ಟು, ಅವರು ಬಂದಾಗ ಕೊಡುತ್ತಿದ್ದರು. ಅದಕ್ಕೇ ಸ್ವಾಮಿಯವರು ತಮ್ಮ ಕುಟುಂಬದಿಂದ ಬರುವ ತಮ್ಮ ಪಾಲಿನ ಆಸ್ತಿ ಮಂಗಮ್ಮನಿಗೆ ಕೊಡು ಎಂದು ತಮ್ಮ ಸೋದರರಿಗೆ ಆಜ್ಞಾಪಿಸಿದರು. ಅವರುಗಳು ಹಾಗೆಯೇ ಮಾಡಿದರು. ಕೃತಜ್ಞತೆಯ ಭಾವನೆ ಅಂದರೆ ಹೇಗೆ ಇರಬೇಕು ಎನ್ನುವುದು ಸ್ವಾಮಿಯವರು ನಡೆದು ತೋರಿಸಿದರು.

ಒಮ್ಮೆ ಸ್ವಾಮಿಯವರು ಕೊಜ್ಜಿಕೋಟೆ ಬುಜ್ಜಯ್ಯನಿಗೆ ಒಂದು ಮಾತು ಹೇಳಿದರು,"ಅಯ್ಯಾ! ನನ್ನು ಕನಿಪೆಟ್ಟುಕೊನಿ ಉಂಡೇ ವಾಳ್ಳನು ಕನಿಪೆಟ್ಟುಕೊನಿ ಉಂಡು" (ಅಯ್ಯಾ, ನನ್ನನ್ನು ನೋಡಿಕೊಂಡವರನ್ನು ನೋಡಿಕೊಳ್ಳುತ್ತಾ ಇರು) ಎಂದು. ಆದುದರಿಂದಲೇ ಸ್ವಾಮಿಯವರು ಸಮಾಧಿಯಾದ ನಂತರವೂ ಬುಜ್ಜಯ್ಯನು ಸ್ವಾಮಿಯವರನ್ನು ನೋಡಿಕೊಂಡವರನ್ನು ಗೌರವಿಸಿ ನೋಡಿಕೊಳ್ಳುತ್ತಾ ಸೇವಿಸಿದರು. **ನಿಜವಾದ ಸದ್ಗುರುವಿನ ಸೇವೆ ಅವರ ಮಹಾ ಸಮಾಧಿಯಾದ ಬಳಿಕವೂ ನಡೆಯುತ್ತದೆ. ಅದಕ್ಕೆ ನಮ್ಮ ಪ್ರಾಚೀನ ಶಾಸ್ತ್ರಗಳು, ನೈತಿಕ ಬ್ರಹ್ಮಚಾರಿ (ಆಜೀವ ಬ್ರಹ್ಮಚರ್ಯ**
54 **ಪಾಲಿಸುವವರು) ಯಾವಾಗಲೂ ಗುರುವಿನ ಜೊತೆಯೇ ಇರಬೇಕೆಂದು, ಗುರು ಪರಮ ಪದ ಹೊಂದಿದನಂತರ ಅವರ ಅಗ್ನಿಹೋತ್ರವನ್ನು ಗುರುವಿನ ಪ್ರತ್ಯಕ್ಷರೂಪವೆಂದು ಭಾವಿಸಿ, ಜೀವನಪೂರ್ತಿ ಸೇವಿಸುತ್ತಾ ಇರಬೇಕೆಂದು ಹೇಳುತ್ತದೆ.** ಶ್ರೀ ಸಾಯಿನಾಥರೂ ಈ ನಿಯಮವನ್ನು ಪಾಟಿಸಿದರು. ಶ್ರಿ ಸ್ವಾಮಿಯವರು ಕೂಡ ನಿರಂತರ ಅಗ್ನಿಹೋತ್ರವನ್ನು (ಧುನಿಯ ರೂಪದಲ್ಲಿ) ನಡೆಸುತ್ತ ಅದೇ ನಿಯಮವನ್ನು ಪಾಲಿಸಿದರು. ಸ್ವಾಮಿಯವರು ಸಾಯಿ ಬಾಬರವರನ್ನು ತಮ್ಮ ಸೋದರರೆಂದು ವ್ಯವಹರಿಸುತ್ತಿದ್ದರು. ಹಾಗೆಯೇ ಸಹ-ಶಿಷ್ಯರು ತಮ್ಮ ಗುರುಬಂಧುಗಳನ್ನು ಸೋದರ ಭಾವನೆಯೊಂದಿಗೆ ವ್ಯವಹರಿಸಬೇಕು.

"ಬ್ರೇವ್ ಮನಿ ತ್ರೇಂಪೇ ವಾಡಿಕಿ ಕಾದಯ್ಯಾ, ಆಕಲೈ ಕೊಂಗುಪಟ್ಟೇವಾರಿಕಿ ಅನ್ನಂ ಪೆಟ್ಟಾಲಯ್ಯಾ" (ಹೊಟ್ಟೇ ತುಂಬಿ ಜೋರಾಗಿ ತೇಗುವವನಿಗಲ್ಲದೇ, ಹಸಿವಿನಿಂದ ಬಳಲುತ್ತಾ ಸೆರಗನ್ನು ಹಿಡಿಯುವವರಿಗೆ ಅನ್ನ ಕೊಡಬೇಕಯ್ಯಾ) ಎಂದು ಹೇಳಿದರು ಸ್ವಾಮಿಯವರು. "ಸೆರಗನ್ನು ಹಿಡಿಯುವವರಿಗೆ" ಎಂದರೆ ಭಿಕ್ಷೆ ಬೇಡುವವರಿಗೆ ಎಂದು ಅರ್ಥ. 55

ಶ್ರೀ ಸ್ವಾಮಿಯವರು ಎರಡು ಮೂರು ದಿನಗಳು ಆಹಾರ ಇಲ್ಲದೇ ಇದ್ದಾಗಕೂಡ ಊಟ ಮಾಡುವ ಹೊತ್ತಿಗೆ ತಮ್ಮ ವ್ಯಂದದವರಿಗಲ್ಲದೆ, **ಅವರ ದರ್ಶನಮಾಡುವುದಕ್ಕಾಗಿ ಬಂದವರೆಲ್ಲರ ಊಟ ಪೂರ್ತಿ ಆದಮೇಲೆ ಸ್ವಾಮಿಯವರು ಗಂಜಿ ಕುಡಿಯುತ್ತಿದ್ದರು. ತಮ್ಮವರೆಲ್ಲಾ ಭುಜಿಸಿದ ಮೇಲೆ ಯಜಮಾನ ಊಟ ಮಾಡಬೇಕೆನ್ನುದು ಧರ್ಮಶಾಸ್ತ್ರದಲ್ಲಿ ಹೇಳಿದೆ.** 56

ಶ್ರೀ ಸ್ವಾಮಿಯವರು ಅನ್ನದ ಜೊತೆ ಕೇವಲ ಅಚ್ಚಕಾರದ ಪುಡಿ ತಿನ್ನುತ್ತಿದ್ದರು. ಮಜ್ಜಿಗೆ ಕೊಟ್ಟರೆ ಕುಡಿಯುತ್ತಿದ್ದರು ಇಲ್ಲದಿದ್ದರೆ ಇಲ್ಲ. ರುಚಿಯ ವಿಚಕ್ಷಣೆ, ಬೆಂದಿದೆಯಾ, ಇಲ್ಲವಾ ಎನ್ನುವುದಕ್ಕೆ ಅವರು ಗಮನ ಕೊಡುತ್ತಿರಲಿಲ್ಲ. ಒಮ್ಮೆ ಭಕ್ತರು ಸಜ್ಜೆಯ ಮುದ್ದೆ ಮಾಡುತ್ತಿದ್ದರು. ಅದು ಅರ್ದವೇ ಬೆಂದಿತ್ತು. "ಉಡಕಕಪೋಯಿನಾ ಪರವಾಲೇದು ಪೆಟ್ಟು" (ಬೇಯದಿದ್ದರೂ ಪರವಾಗಿಲ್ಲ) ಕೊಡಿ ಅಂದರು ಸ್ವಾಮಿಯವರು. ಅದರ ಜೊತೆ ಪಲ್ಯ ಇಲ್ಲ ಎಂದಾಗ, ಪಲ್ಯಕ್ಕೆ ಹಾಕುವ ಕಾರದಪುಡಿ ಹಾಕಿ ಕೊಡಿ ಎಂದರು. ಆ ಭಕ್ತರು **ಉಪ್ಪಿಲ್ಲದ ಕಾರದಪುಡಿ ಬಡೆಸಿದಾಗ, ಬಿಸಿ ಬಿಸಿಯಾಗಿದ್ದ ಮುದ್ದೆಯನ್ನು ಆ ಕಾರದಪುಡಿಯ ಜೊತೆ ತಿಂದರು ಶ್ರೀ ಸ್ವಾಮಿಯವರು. ಆಹಾರ ಹಸಿವಿಗೆ ಮಾತ್ರ ರುಚಿಗೋಸ್ಕರ ಅಲ್ಲ, ಇದು ವೈದ್ಯ ಶಾಸ್ತ್ರ ಮತ್ತು ಸಾಧನೆಯ ಪ್ರಧಾನ ಸೂತ್ರ.** 57

ತಮ್ಮ ಗಡ್ಡವನ್ನು ತೆಗೆದ ಕ್ಷೌರಿಕನಿಗೆ ಸ್ವಾಮಿಯವರು 2 ರೂಪಾಯಿ ಕೊಡುತ್ತಿದ್ದರು. ಮಿಕ್ಕವರು 50 ಪೈಸೆ ಮಾತ್ರ ಕೊಡುತ್ತಿದ್ದರು. ಇದೇ ರೀತಿಯಲ್ಲಿ ಅಗಸನಿಗೆ ಎಲ್ಲರೂ ಕೊಡುವುದಕ್ಕಿಂತ 2 ಪಟ್ಟು ಹೆಚ್ಚಾಗಿ ಕೊಡಿಸುತ್ತಿದ್ದರು. ಭಕ್ತರಿಗೆ, 'ಎಲಾಂಟಿ ಸೇವಕೈನಾ ಉದಾರಂಗಾ ಪ್ರತಿಫಲಮಿವ್ವಾಲಿ' (ಯಾವುದೇ ಸೇವೆಗಾಗಲಿ ಉದಾರವಾಗಿ ಪ್ರತಿಫಲ ಕೊಡಬೇಕು) ಎಂದರು ಸಾಯಿಬಾಬಾರವರು. ಮಹಾತ್ಮರೆಲ್ಲರ ಆಚರಣೆ ಒಂದೇ ರೀತಿಯಲ್ಲಿ ಇರುತ್ತದೆ.

ಒಮ್ಮೆ ವಲ್ಲಪುರೆಡ್ಡಿ ಆದಿನಾರಾಯಣರೆಡ್ಡಿಯವರು ಶ್ರೀ ಸ್ವಾಮಿಯವರನ್ನು ನೆಲ್ಲೂರಿನಿಂದ ಪೆನುವರ್ತಿಯಲ್ಲಿರುವ ತಮ್ಮ ಮನೆಗೆ ಕಾರಲ್ಲಿ ಬನ್ನಿ ಎಂದು ಹೇಳಿದರು. ಅದಕ್ಕೆ ಶ್ರೀ ಸ್ವಾಮಿಯವರು, 'ಪೈವಾಳ್ಳು ಒಪ್ಪುಕೋರು' (ಮೇಲಿನವರು ಒಪ್ಪಲ್ಲ) ಎಂದರು. ಆಗ ರೆಡ್ಡಿಯವರು ಸ್ವಲ್ಪ ಆಲೋಚನೆ ಮಾಡಿ, 'ಸ್ವಾಮೀ! ನಮ್ಮವರೆಲ್ಲರನ್ನೂ ಬಸ್ಸಲ್ಲಿ ಕರೆದುಕೊಂಡು ಬರುತ್ತೇನೆ. ನೀವು ಕಾರಿನಲ್ಲಿ ಬನ್ನಿ' ಎಂದು ಪ್ರಾರ್ಥಿಸಿದರು. ಆಗ ಸ್ವಾಮಿಯವರು, 'ಅಟ್ಲಾಗೈತೇ ಪದಯ್ಯಾ' (ಹಾಗಾದರೆ ಹೋಗೋಣ ಬಾರಯ್ಯಾ) ಎಂದು ಹೊರಟರು. ಮಿಕ್ಕವರನ್ನ ರೆಡ್ಡಿಯವರು ಬಸ್ಸಿನಲ್ಲಿ ಪೆನುವರ್ತಿಗೆ ಕರೆದುಕೊಂಡು ಹೋದರು.

ಸ್ವಾಮಿಯವರು ತಾವೊಬ್ಬರೇ ಕಾರಿನಲ್ಲಿ ಪ್ರಯಾಣ ಮಾಡಬೇಕೆಂದು ಮೊದಲು ಒಪ್ಪಲಿಲ್ಲ ಅದು ಧರ್ಮವಿರುದ್ಧ ಎಂದು. ಆದರೆ, ರೆಡ್ಡಿಯವರು ಯಾವಾಗ ಮಿಕ್ಕವರನ್ನು ಬಸ್ಸಿನಲ್ಲಿ ಕರೆದುಕೊಂಡು ಬರುತ್ತೇನೆ ಅಂದಾಗ ಅವರು ಕಾರು ಪ್ರಯಾಣಕ್ಕೆ ಒಪ್ಪಿದರು. ಒಂದು ವೇಳೆ ಸ್ವಾಮಿಯವರ ಕಾಲು ಸರಿಯಾಗಿದ್ದು ಅವರಿಗೆ ನಡೆಯಲು ಸಾಧ್ಯವಾಗಿದ್ದರೆ ಎಲ್ಲರಿಗೂ (ಭೇದವಿಲ್ಲದೇ) ಒಂದೇ ತರಹದ ವಾಹನವಿದ್ದರೇನೆ ಅವರು ಅಲ್ಲಿಂದ ಹೊರಡುತ್ತಿದ್ದರು.

ಒಮ್ಮೆ ಸ್ವಾಮಿಯವರು ಊಟ ಮಾಡುವ ಎಲೆಗೆ ನಾಯಿ ಬಂದು ಮೂತಿ ಹಾಕಿತು. ಸ್ವಾಮಿಯವರು ಅದನ್ನು ಏನೂ ಅನ್ನದೇ ಪಕ್ಕಕ್ಕೆ ಬಂದು ಬಿಟ್ಟರು. ನಾಯಿ ತೃಪ್ತಿಯಾಗಿ ತಿಂದು ಹೊರಟು ಹೋಯಿತು. ಶ್ರೀ ಸ್ವಾಮಿಯವರು, ನಾಯಿಗಳಿಗೆ ಅನ್ನ ಹಾಕಿದಾಗ, ಅವುಗಳು ತಮ್ಮ ಜಾತಿ ವೈರವನ್ನು ಬಿಟ್ಟು ಎಲ್ಲಾ ನಾಯಿಗಳು ಒಟ್ಟಾಗಿ ಸಾಮರಸ್ಯದಿಂದ ಊಟ ಮಾಡುತ್ತಿದ್ದವು. ಇದೇ ರೀತಿಯಲ್ಲಿ ಸ್ವಾಮಿಯವರ ಭಕ್ತೆ ತುಲಸಮ್ಮ ಅನ್ನ ಹಾಕಿದರೆ, ನಾಯಿಗಳು, ಬೆಕ್ಕುಗಳು ಸಾಮರಸ್ಯದಿಂದ ಊಟ ಮಾಡುತ್ತಿದ್ದವು.

ಒಂದು ದಿನ ಶ್ರಿ ಸ್ವಾಮಿಯವರು, ನಿದ್ದೆಯಿಂದ ಎದ್ದ ಕೂಡಲೇ, "ಈ ರೋಜು ಎವ್ವರೂ ನೋರು ವಿಪ್ಪಕೂಡದಯ್ಯಾ" (ಇವತ್ತು ಯಾರೂ ಬಾಯಿ ಬಿಡಕೂಡದಯ್ಯಾ) ಎಲ್ಲರೂ ಮೌನವಾಗಿ ಇರಬೇಕೆಂದು ಪದೇ ಪದೇ ಹೇಳುತ್ತಿದ್ದರು. ಅದು ಏಕೆ ಎನ್ನುವುದು ಯಾರಿಗೂ ಅರ್ಥವಾಗಲಿಲ್ಲ. ಸ್ವಲ್ಪ ಹೊತ್ತಾದ ನಂತರ, ಆಶ್ರಮದಲ್ಲಿ ಐದು ಧೋತಿಗಳನ್ನು ಸೇರಿಸಿ ತಯಾರಿಸಿದ ಮಂತ್ರ ಹಾಕುವ ಬಟ್ಟೆಯನ್ನು ಯಾರೋ ಕಳ್ಳರು ಕದ್ದು ತೆಗೆದುಕೊಂಡು ಹೋದರೆಂದು, ಆದ್ದರಿಂದ ತಮ್ಮ ಭಕ್ತರು ಆ ಕಳ್ಳರನ್ನು ದೂಷಿಸುತ್ತಾರೆಂದು ಸ್ವಾಮಿಯವರು ಹಾಗೆ "ಮೌನ ವಹಿಸಿ" ಎಂದು ಹೇಳಿದರೆಂದು ಸೇವಕರು ಅರಿತುಕೊಂಡರು.

ಇನ್ನೊಮ್ಮೆ ಆಶ್ರಮದಲ್ಲಿ ನೀರು ಕಾಯಿಸುವ ದೊಡ್ಡ ಹಂಡೆಯನ್ನು ಕಳ್ಳರು ಎತ್ತಿಕೊಂಡು ಹೋದರು. ಶ್ರಿ ಸ್ವಾಮಿಯವರಿಗೆ ಆ ವಿಚಾರ ಹೇಳಿದಾಗ, 'ವಾಳ್ಳಕು ಲೇಕೇ ಗದಯ್ಯಾ ಎತ್ತುಕುಪೋಯಾರು. ವಾಳ್ಳನು ಮನಮೇಮೀ ಅನಕೂಡದೇ!' (ಅವರ ಹತ್ತಿರ ಇಲ್ಲದಿದ್ದಕ್ಕೇ ಅಲ್ಲವೇ ಅವರು ಅದನ್ನು ತೆಗೆದುಕೊಂಡು ಹೋದದ್ದು. ಅವರನ್ನು ಏನೂ ಅನ್ನಬೇಡಿ) ಎಂದು ಹೇಳಿದರು ಸ್ವಾಮಿಯವರು. "ಉದಾಸೀನೋಗತವ್ಯಥಃ" (ಉದಾಸೀನವೇ ವ್ಯಥೆಯನ್ನು ಕಡಿಮೆ ಮಾಡುತ್ತದೆ) ಎನ್ನುತದೆ ಶಾಸ್ತ್ರ.

ಅವಧೂತ ಲೀಲೆ

ಅಧ್ಯಾಯ - 21

ಶ್ರೀ ಸ್ವಾಮಿಯವರ ದಿವ್ಯ ಬೋಧನೆಗಳು

ಶ್ರೀ ಸ್ವಾಮಿಯವರನ್ನು "ನಮಗೇನಾದರೂ ಬೋಧನೆ ಮಾಡಿ" ಎಂದು ಅನೇಕ ಜನರು ಕೇಳಿದಾಗ, ಸ್ವಾಮಿಯವರು, "ಚೂಚಿ ನೇರ್ಚುಕೊಂಡಯ್ಯಾ"(ನೋಡಿ ಕಲಿತುಕೊಳ್ಳಿರಯ್ಯಾ) ಎಂದು ಕ್ಲುಪ್ತವಾಗಿ ಬೋಧಿಸುತ್ತಿದ್ದರು. ಅವರು ಯಾವಾಗಲೂ ಪ್ರತ್ಯೇಕವಾಗಿ ಬೋಧನೆ ಎಂದು ಹೇಳುತ್ತಿರಲಿಲ್ಲ. ಅವರ ಜೀವಿತಾವಧಿಯಲ್ಲಿ ಭಕ್ತರನ್ನು ಕುರಿತು ಆಡಿದ ಮಾತುಗಳೇ ನಮಗೆ ಅವು ದಿವ್ಯ ಬೋಧನೆಗಳು. ಬೋಧನೆಗಳನ್ನು ಮಾತಿನ ಮೂಲಕ ಬೋಧಿಸುವ ಬದಲು ಅವರ ಜೀವನಶೈಲಿ, ನಿತ್ಯ ಸತ್ಯವನ್ನು ನಿರೂಪಿಸುತ್ತಾ ಒಂದು ಎರಡು ಮಾತುಗಳನ್ನಾಡಿದರೂ ಆ ಮಾತುಗಳೇ ವೇದದ ಸಾರಾಂಶ ಆಗುವುದು ಎಂದು ನಾವು ಗಮನಿಸಬೇಕಾದದ್ದು. ಅಂತಹ ದಿವ್ಯವಾದ ಬೋಧನೆಗಳನ್ನು ಈ ಕೆಳಗಿನ ಅನುಭವಗಳು ತಿಳಿಸುತ್ತವೆ. 58

ನಮ್ಮಂತಹ ಅಜ್ಞಾನಿಗಳು ಹಿರಿಯರು ಹೇಳಿದ ಕೆಲವು ವಿಷಯಗಳನ್ನು ಮೂಢನಂಬಿಕೆಯೆಂದು ನಿರ್ಲಕ್ಷಿಸುತ್ತೇವೆ. ಆದರೆ, ಇಂತಹ ವಿಷಯಗಳಲ್ಲಿ ಶ್ರೀ ಸ್ವಾಮಿಯವರಂತಹ ಮಹನೀಯರ ಮಾತುಗಳು ಎಲ್ಲರಿಗೂ ಶಿರೋಧಾರ್ಯವಾಗುತ್ತದೆ. 59

ಕಾರಿ ರಾಮಸ್ವಾಮಿಯವರು ತಮಗೆ ನಡೆದ ಅನುಭವವನ್ನು ಹೀಗೆ ಹೇಳಿದರು. "ಪೊದಲಕೂರಿನಲ್ಲಿ ಎರಡು ಎತ್ತಿನ ಗಾಡಿಯನ್ನು ಖರೀದಿಸಲು ಮುಂಗಡ (advance cash) ಹಣ ಕೊಟ್ಟು ಸ್ವಾಮಿಯವರಿಗೆ ತಿಳಿಸಿದಾಗ, “ಅಯ್ಯಾ ಆ ಬಂಡಿ ಇಂಟಿಕೊಸ್ತೇ ಮಂಚಿದಿಕಾದು. ದಾನಿ ಇರುಸುಲೋ ಕೋಡಿಪುಂಜುಲು ಪೋಟ್ಲಾಡುತುನ್ನಾಯಿ. ಅದಿವದ್ದು” (ಅಯ್ಯಾ! ಆ ಗಾಡಿ ಮನೆಗೆ ಬಂದರೆ ಒಳ್ಳೆಯದಲ್ಲ. ಆ ಗಾಡಿಯ ಅಚ್ಚಿನಲ್ಲಿ (Axle) ಹುಂಜಗಳು ಜಗಳವಾಡುತ್ತಿವೆ. ಅದು ಬೇಡ) ಎಂದು ಹೇಳಿದರು. ಚೆರ್ಲೊಪಲ್ಲಿಯಲ್ಲಿ ಇನ್ನೊಂದು ಗಾಡಿಯ ಮಾತುಕತೆ ನಡೆಸಿ, ಬಂದು ಸ್ವಾಮಿಯವರಿಗೆ ಹೇಳಿದೆ. ಆಗ ಸ್ವಾಮಿಯವರು, 'ಅಯ್ಯಾ ಆ ಬಂಡಿ ವಸ್ತೆ ಆಡವಾಳ್ಳಕು ಜಬ್ಬುಲು ಕಲುಗುತಾಯಿ, ಅದಿ ವದ್ದು' (ಅಯ್ಯಾ! ಆ ಗಾಡಿ ಬಂದರೆ, ಹೆಂಗಸರಿಗೆ ರೋಗ ಬರುತ್ತದೆ, ಅದು ಬೇಡ) ಎಂದರು. ಮತ್ತೆ, ತುರಿಮೆರ್ಲ ಎನ್ನುವ ಒಂದು ಊರಿನಲ್ಲಿ ಇನ್ನೊಂದು ಗಾಡಿಯನ್ನು ನೋಡಿ ಬಂದು ಸ್ವಾಮಿಯವರಿಗೆ ಹೇಳಿದಾಗ, 'ಅಯ್ಯಾ! ಆ ಬಂಡಿ ವಸ್ತೇ

ಪಿಲ್ಲಕಾಯಲಕು ಜಬ್ಬು ಚೇಸ್ತುಂದಿ ಅದಿ ವದ್ದು' (ಅಯ್ಯಾ! ಆ ಗಾಡಿ ಬಂದರೆ ಮಕ್ಕಳಿಗೆ ರೋಗಬರುತ್ತದೆ, ಅದು ಬೇಡ) ಎಂದರು. ಕೊನೆಗೆ ಒಂದು ವಾರದ ನಂತರ, ಯಾವ ಗ್ರಾಮಕ್ಕೆ ಹೋಗಲು ಹೇಳುತ್ತಾರೋ ಕೇಳುವುದಕ್ಕೆ ಸ್ವಾಮಿಯವರ ಬಳಿ ಹೋದ ತಕ್ಷಣ, ನಾನು ಕೇಳುವುದಕ್ಕೆ ಮುಂಚೆಯೇ ಸ್ವಾಮಿಯವರೇ, 'ಅಯ್ಯಾ! ರಾಜುಪಾಳೆಂಲೋ ನಾಲುಗು ವಂದಲ ರೂಪಾಯಲಕು ಕ್ರೊತ್ತ ಬಂಡಿ ಇಸ್ತಾರು. ತೋಲುಕೊಚ್ಚುಕೋ' (ಅಯ್ಯಾ! ರಾಜುಪಾಳೆಂ ಎಂಬ ಗ್ರಾಮದಲ್ಲಿ 400 ರೂಪಾಯಿಗೆ ಹೊಸ ಗಾಡಿ ಕೊಡುತ್ತಾರೆ, ಅದನ್ನು ತೊಗೊಂಡು ಬಾ) ಎಂದರು. ಯಾವ ದಿನ ಆ ಗಾಡಿಯನ್ನು ತರುವುದು ಎಂದು ಕೇಳಿದಾಗ, 'ಅಯ್ಯಾ ಸೋಮವಾರಂ ಉದಯಾನ್ನೇ ಸೂರ್ಯೋದಯಾನಿಕಿ ಪೂರ್ವಮೇ ನೀವು ಬಂಡಿ ಕೊನ್ನ ಗ್ರಾಮಂ ವದಲಿ ಬಂಡಿ ತೋಲುಕೊನಿ ವಚ್ಚೇಯಾಲಿ. ಮೀ ಗ್ರಾಮಂಲೋ ರಾಮುಲವಾರಿ ದೇವಾಲಯಂ ವದ್ದ ಮೂಡು ನಿದ್ರಲು ಚೇಯಿಂಚಿ, ಮೀ ಪಿಲಕಾಯಲಂದರಿನಿ ಬಂಡಿಲೋ ಎಕ್ಕಿಂಚಿ ಊರಂತಾ ತ್ರಿಪ್ಪುಚೂ, ಶೆನಗಲು, ಬೊರುಗುಲು, ಬೆಲ್ಲಂ, ಪಂಚದಾರ ಪೆಡುತೂ ಬಂಡಿನಿ ಇಂಟಿಕಿ ತೋಲುಕುರಾ' (ಅಯ್ಯಾ! ಸೋಮವಾರ ಬೆಳಿಗ್ಗೆ ಸೂರ್ಯೋದಯಕ್ಕೆ ಮುಂಚಿತವಾಗಿ, ನೀನು ಗಾಡಿಯನ್ನು ಖರೀದಿಸಿದ ಪಟ್ಟಣದಿಂದ ಬಿಟ್ಟು, ಗಾಡಿಯನ್ನು ಹೊರಡಿಸಿಕೊಂಡು ತರಬೇಕು. ನಿಮ್ಮ ಊರಿನಲ್ಲಿರುವ ರಾಮ ಮಂದಿರದಲ್ಲಿ ಮೂರು ರಾತ್ರಿ ನಿದ್ರಿಸಿ, ನಿಮ್ಮ ಮಕ್ಕಳನ್ನು ಗಾಡಿಯಲ್ಲಿ ಊರು ಸುತ್ತಿಸುತ್ತಾ, ಕಡಲೆ ಬೀಜ, ಮಂಡಕ್ಕಿಪುರಿ, ಬೆಲ್ಲ, ಸಕ್ಕರೆ ಹಂಚುತ್ತಾ, ಗಾಡಿಯನ್ನು ಮನೆಗೆ ತರಬೇಕು) ಎಂದು ಸ್ವಾಮಿಯವರು ಹೇಳಿದರು. ನಾನು ಸ್ವಾಮಿಯವರು ಹೇಳಿದಂತೆಯೇ ಮಾಡಿದೆ. ಆ ಗಾಡಿ ಕಳೆದ 25 ವರ್ಷಗಳಿಂದ ಕೆಲಸ ಮಾಡುತ್ತಲೇ ಇದೆ, ಯಾವ ತರಹದ ಅಪಘಾತವೂ ಆಗಿಲ್ಲ. ಆ ಗಾಡಿ ಬಂದಮೇಲೆ ನಮಗೆ ಭೂಸ್ಥಿತಿ (the terrian) ಹೆಚ್ಚಾಗಿದೆ. ಇಂದಿಗೂ ಆ ಗಾಡಿ ಗುರುವಿನ ಪ್ರಸಾದವೆಂದು ಪರಮ ಪವಿತ್ರವಾಗಿ ಉಪಯೋಗಿಸಿಕೊಳ್ಳುತ್ತಿದ್ದೇವೆ."

(ಗಾಡಿಯ ಅಚ್ಚಿನಲ್ಲಿ ಕೋಳಿಜಗಳವಾಡುವುದೆಂದರೇನು? ಕಟ್ಟಿಗೆಯ ಗಾಡಿ ಮನೆಗೆ ಬರುವುದರಿಂದ ಹೆಂಗಸರು, ಮಕ್ಕಳು ಅನಾರೋಗ್ಯ ಆಗುವೆದೆಂದರೇನು? ಇಂತಹ ಮಾತುಗಳನ್ನು ಕೇಳಿದಾಗ ಅಜ್ಞಾನಿಗಳಾದ ನಮಗೆ ಮೂಢ ನಂಬಿಕೆ ಎಂದು ಅನ್ನಿಸುತ್ತದೆ. ಆದರೆ ಇಂತಹ ವಿಷಯಗಳಲ್ಲಿ ಸರ್ವಜ್ಞರಾದ ಸ್ವಾಮಿಯವರ ಮಾತೇ ನಮಗೆ ಶಿರೋಧಾರ್ಯ ಆಗಬೇಕು).

60 **ಶ್ರೀ ಸ್ವಾಮಿಯವರ ವ್ಯಂಅದದಲ್ಲಿ ಯಾರಾದರೂ ಒರಟಾಗಿ ಮಾತಾಡಿದ ಎಂದು ಹೇಳಿದಾಗ "ಆಯನಲೋ ಬೊಮ್ಮಲೇಚಿಂದಿಲೇಯ್ಯಾ! ಆಯನೇಂ ಚೇಸ್ತಾಡು" (ಅವನೊಳಗೆ ಗೊಂಬೆ ಹುಟ್ಟಿದೆ ಬಿಡಯ್ಯಾ! ಅವನೇನು ಮಾಡುತ್ತಾನೆ) ಎನ್ನುತ್ತಿದ್ದರು.**

ಒಮ್ಮೆ ಮಾತಿನ ಸಂದರ್ಭದಲ್ಲಿ ಸ್ವಾಮಿಯವರು, ಬರಿಗೆಲ ನಾಗಯ್ಯನವರೊಡನೆ, "ಬೊಮ್ಮಲ ಕತ್ತರಿಂಪು ಮನದಗ್ಗರುಂಡ್ಲಾಯ್ಯಾ" (ಗೊಂಬೆಗಳನ್ನು ಕತ್ತರಿಸುವ ಕತ್ತರಿ ನಮ್ಮ ಹತ್ತಿರ ಇಲ್ಲವೇನಯ್ಯಾ?) ಎಂದು ಕೇಳಿದರು. ಸ್ವಾಮಿಯವರ ಭಾಷೆಯಲ್ಲಿ ಗೊಂಬೆಗಳು

ಎಂದರೆ ನಮ್ಮಲಿರುವ ದುರ್ಗುಣಗಳು ಎಂದು ತಿಳಿದುಕೊಳ್ಳಬೇಕು. ಸ್ವಾಮಿಯವರಿಗೆ ನಮ್ಮ ಮೇಲೆ ದಯೆ ಬಂದಾಗ ಕತ್ತರಿಯನ್ನು ಪ್ರಯೋಗಿಸಿ ಆ ದುರ್ಗುಣಗಳನ್ನು ಬುಡದ ಸಮೇತ ನಿರ್ಮೂಲಿಸಬಲ್ಲರು.

ಒಬ್ಬ ವ್ಯಕ್ತಿಯಿಂದ ಅನೇಕರಿಗೆ ಅಸೌಕರ್ಯ, ಪ್ರಮಾದ ಇರುತ್ತದೆಯೆಂದು ಸ್ವಾಮಿಯವರಿಗೆ ಅನ್ನಿಸಿದರೆ - ಬುದ್ದಿವಾದ, ಅಥವಾ ಯಾವ ಮಾತೂ ಇಲ್ಲದೇ ಆ ವ್ಯಕ್ತಿ ತಾನಾಗಿ ತಾನೇ ಆ ಪ್ರದೇಶವನ್ನು ಬಿಟ್ಟುಹೋಗುವಹಾಗೆ ಸ್ವಾಮಿಯವರು ಆ ವ್ಯಕ್ತಿಯನ್ನು ಪ್ರೇರೇಪಿಸುತ್ತಾರೆ. 61

ಉದಾ: ಒಬ್ಬ ಭಕ್ತ ಶ್ರೀ ಸ್ವಾಮಿಯವರ ನಿತ್ಯಪೂಜೆಗೆ ಅರ್ಧ ಗಂಟೆ ಆಲಸ್ಯವಾದರೂ ಅವನು ಬರುವವರೆಗೆ ಪೂಜೆ ನಿಲ್ಲಿಸಬೇಕೆಂದು, ಅವನು ಇದ್ದಾಗ ಅವನೇ ಸ್ವಾಮಿಯವರ ಸಮಾಧಿಯ ಪೂಜೆ ಮಾಡಬೇಕೆಂದು ಆಗಾಗ ಆಜ್ಞಾಪಿಸುತ್ತಿದ್ದನು. ನಿತ್ಯಪೂಜೆ ಆ ರೀತಿಯಲ್ಲಿ ಆಲಸ್ಯ ಮಾಡುವುದು ಧರ್ಮವಲ್ಲ ಎಂದು ಯೋಚಿಸಲಿಲ್ಲ ಅವನು.

ಸ್ವಾಮಿಯವರು ಆ ಭಕ್ತನ ಮನಸ್ಸಿನಲ್ಲಿ ಏನು ವಿಚಿತ್ರವಾದ ಪ್ರೇರಣೆ ಮಾಡಿದರೋ ಗೊತ್ತಿಲ್ಲ ಆಗಲಿ, ಅವನು ತನಗೆ ತಾನೆ ದೂರ ಇರುವುದಕ್ಕೆ ಪ್ರಾರಂಭಿಸಿ, ಆ ಸೇವೆಯನ್ನು ಮಾಡಲು ನಿಲ್ಲಿಸಿ ಬಿಟ್ಟನು. **ಧರ್ಮ ಮತ್ತು ಅಧರ್ಮದ ನಡುವೆ ವ್ಯತ್ಯಾಸವನ್ನು ಯೋಚಿಸದೇ ನಾವು ಪ್ರವರ್ತಿಸಿದರೆ, ಸ್ವಾಮಿಯವರು ತಮ್ಮ ಕತ್ತರಿಯನ್ನು ನಮ್ಮಮೇಲೂ ಪ್ರಯೋಗ ಮಾಡುತ್ತಾರೆಂದು ನಾವು ಪ್ರತಿನಿತ್ಯವೂ ನೆನಪಿನಲ್ಲಿಟ್ಟುಕೊಳ್ಳಬೇಕು.** 62

ಒಮ್ಮೆ ಸ್ವಾಮಿಯವರ ಇಬ್ಬರು ಭಕ್ತರ ನಡುವೆ ಕಲಹ ಬಂದು ಅವರು ಹೋರಾಡಿದರು. ಒಬ್ಬ ಭಕ್ತನು ಕೊಡಲಿಯನ್ನು ತೆಗೆದುಕೊಂಡನು, ಎರಡನೆಯ ಭಕ್ತ ಕೊಡಲಿಯನ್ನು ಕಿತ್ತುಕೊಂಡು ಅವನ ಕುತ್ತಿಗೆಯನ್ನು ಕಚ್ಚಿದನು. ಅವನಿಗೆ ರಕ್ತಸ್ರಾವವಾಗಿ, ಅವನು ಗ್ರಾಮದ ಹಿರಿಯರಿಗೆ ದೂರಿದನು. ಗ್ರಾಮದ ಹಿರಿಯರು ರಕ್ತವನ್ನು ನೋಡಿ, ಅದಕ್ಕೆ ಕಾರಣವಾದ ಭಕ್ತನನ್ನು ಆಶ್ರಮದಿಂದ ಓಡಿಸಲು ಸ್ವಾಮಿಯವರಿಗೆ ವಿನಂತಿಸಿದರು. ಆಗ ಸ್ವಾಮಿಯವರು, **"ಅಯ್ಯಾ ಒಕರಿನಿ ಪೊಮ್ಮನೇ ಕಂಟೇ ಮನಮೇ ಪೋತೇ ಮಂಚಿದಿ ಕದಾ?" (ಅಯ್ಯಾ! ಒಬ್ಬರನ್ನು ಹೋಗು ಅನ್ನುವುದಕ್ಕಿಂತ, ನಾವೇ ಹೋದರೆ ಒಳ್ಳೇದಲ್ಲವೇ? ಅಂದರು. ಈ ಧರ್ಮತೀರ್ಪಿನಿಂದ ಯಾರೂ ಕಿಮ್ಮಕ್ಕನ್ನದೇ ಸುಮ್ಮನಿದ್ದರು.** 63

1980 ರಲ್ಲಿ ಸ್ವಾಮಿಯವರು ಅನಾರೋಗ್ಯಕ್ಕೆ ಒಳಗಾದರು. ಅವರು ತಮ್ಮ ಕೈಗಳನ್ನು ಮತ್ತು ತಲೆಯನ್ನು ಎಗರಿಸುತ್ತಿದ್ದರು. ಒಬ್ಬ ಸೇವಕ, ಸ್ವಾಮಿಯವರಿಗೆ ಇಂಜೆಕ್ಷನ್ ಕೊಡಿಸಲು ವೈದ್ಯರನ್ನು ಕರೆತಂದರು.

ಸೇವಕ : ಸ್ವಾಮೀ!

ಸ್ವಾಮಿ : ವಚ್ಚಾಡಯ್ಯಾ? (ಬಂದನೇನಯ್ಯಾ)

ಸೇವಕ : ಇಂಜೆಕ್ಷನ್ ಮಾಡುತ್ತಾನೆ ಸ್ವಾಮೀ!

ಸ್ವಾಮಿ : ಎವರಿಕಿ? (ಯಾರಿಗೆ?)

ಸೇವಕ : ನಿಮಗೇ ಸ್ವಾಮೀ!

ಸ್ವಾಮಿ : ಎಂದುಕು? (ಏಕೆ?)

ಸೇವಕ : ಅನಾರೋಗ್ಯ ಗುಣವಾಗಲು

ಸ್ವಾಮಿ : ತಗ್ಗುತುಂದಾಯ್ಯಾ? (ಕಡಿಮೆ ಆಗುತ್ತದೆಯೇ?)

ಸೇವಕ : ಕಡಿಮೆ ಆಗುತ್ತದೆ ಸ್ವಾಮಿ

ಸ್ವಾಮಿ : ಚೇಸುಕೋಮನು (ಮಾಡಿಕೋ ಎಂದು ಹೇಳು)

ವೈದ್ಯರು ಇಂಜೆಕ್ಷನ್ ಕೊಟ್ಟರು. ಸ್ವಾಮಿಯವರು ತನ್ನ ಕೈಯನ್ನು ಚಲಿಸಲಿಲ್ಲ, ಅವರು ನೋವಿನ ಯಾವುದೇ ಲಕ್ಷಣಗಳನ್ನು ತೋರಿಸಲಿಲ್ಲ. ಮೂರು ದಿನಗಳ ನಂತರ ಶ್ರೀ ಸ್ವಾಮಿಯವರು ಮತ್ತೆ ಅಂದರು.

ಸ್ವಾಮಿ : ಅಯ್ಯಾ, ಸೂದೇಶಾರೇ, ತಗ್ಗಿಂದಾ ಅಯ್ಯಾ? (ಸೂಜಿ(ಇಂಜೆಕ್ಷನ್) ಕೊಟ್ಟರಲ್ಲ ಕಡಿಮೇ ಆಯಿತೇ?)

ನಾಗಯ್ಯ : ಕಡಿಮೇ ಆಗಲಿಲ್ಲ ಸ್ವಾಮಿ, ನೀವು ಆಜ್ಞಾಪಿಸಿದರೆ ಗುಣವಾಗುತ್ತದೆ

ಸ್ವಾಮಿ : ಅದಿ ಎಟ್ಲಾ ತಗ್ಗುತುಂದಯ್ಯಾ? (ಅದು ಹೇಗೆ ಗುಣವಾಗುತ್ತದೆ ಅಯ್ಯಾ?)

ನಾಗಯ್ಯ : ಕಡಿಮೆ ಆಗುತ್ತೆ ಸ್ವಾಮೀ, ನೀವು ಹೇಳಿ.

ಸ್ವಾಮಿ : ನುವ್ವು ಭಲೇ ಮಾಟ್ಲಾಡುತಾವಯ್ಯಾ! (ಒಳ್ಳೆ ಚೆನ್ನಾಗಿ ಹೇಳುತ್ತೀಯ ನೀನು)

ಶ್ರೀ ಸಾಯಿನಾಥರ ಹಾಗೆ ಸ್ವಾಮಿಯವರು ಕೂಡಾ ತಮ್ಮ ರೋಗಗಳಿಗೆ ಔಷಧಿಗಳನ್ನು ಬಳಸದೆ ತಾಳ್ಮೆಯಿಂದ ಅನುಭವಿಸುತ್ತಿದ್ದರು. **ಸೇವಕರಿಗೆ ಕೂಡ, "ನೊಪ್ಪಿ ಎಂತ ಅನುಭವಿಸ್ತೇ ಅಂತ ಮಂಚಿದಿ" (ನೋವನ್ನು ಏಷ್ಟು ಅನುಭವಿಸಿದರೆ ಅಷ್ಟು ಒಳ್ಳೆಯದು) ಎಂದು ಹೇಳುತ್ತಿದ್ದರು**. ಕೆಲವೊಮ್ಮೆ ಬೇಯಿಸಿದ ಈರುಳ್ಳಿ, ಕರಿಬೇವು, ಕೊತ್ತಂಬರಿ ಬೀಜಗಳ ಪುಡಿ ಇತ್ಯಾದಿ ಗಳನ್ನು ತಮ್ಮ ರೋಗಗಳಿಗೆ ಬಳಸುತ್ತಿದ್ದರು. ಕೆಲವರ ರೋಗಗಳಿಗೆ ಎಲೆಗಳು ಮತ್ತು ಬೇರುಗಳನ್ನು ತಿನ್ನಲು ಹೇಳುತ್ತಿದ್ದರು.

64

ರೋಶಿರೆಡ್ಡಿ : ಸ್ವಾಮೀ! ನೀವು ಯಾವಾಗಲೂ ಮೌನವಹಿಸಿದರೆ, ಒಳ್ಳೆಯದು ಮತ್ತು ಕೆಟ್ಟದ್ದನ್ನು ನಮಗೆ ಹೇಗೆ ತಿಳಿಯುತ್ತದೆ?

ಸ್ವಾಮಿ : ಮೂಡು ವಂದಲಿಸ್ತೇ ಸಾದಯ್ಯ ಚೆಪುತಾಡು. (300 ಕೊಟ್ಟರೇ, ಸಾದಯ್ಯ ಬಂದು ಹೇಳುತ್ತಾನೆ)

ಸ್ವಾಮಿ : ಇನ್ನೊಂದು ದಿನ, "ರೋಶಿ ರೆಡ್ಡಿ! ಪೆದ್ದವಾಡಿವಿಗದಾ!

ಎವರಿಕೈನಾ ಹೆಚ್ಚು ತಗ್ಗುಲುಂಟೆ ಚೆಪ್ಪವಯ್ಯಾ! (ರೋಶಿ ರೆಡ್ಡಿ! ನೀನು ಹಿರಿಯವನಲ್ಲವೇ? ಯಾರಿಗಾದರು ಹೆಚ್ಚು ತಗ್ಗುಗಳಿದ್ದರೆ ಹೇಳಪ್ಪಾ!)

ಗುರವಯ್ಯ : ಸ್ವಾಮೀ! ದೇವರು ಹೇಗೆ ಕಾಣಿಸುತ್ತಾರೆ?

ಸ್ವಾಮಿ : ಅಂದರಿನೀ ಸಮಾನದೃಷ್ಟಿತೋ ಚೂಚುಕುಂಟೇ ದೇವುಡು ಕನಬಡುತಾಡು. (ಎಲ್ಲರನ್ನು ಸಮಾನದೃಷ್ಟಿಯಿಂದ ನೋಡಿದರೇ ದೇವರು ಕಾಣುತ್ತಾರೆ)

ಗುರವಯ್ಯ ಇನ್ನೊಂದು ದಿನ ಇದೇ ಪ್ರಶ್ನೆ ಕೇಳಿದಾಗ ಸ್ವಾಮಿಯವರು "ವೀರಬ್ರಹ್ಮಂಗಾರಿ ಚರಿತ್ರ ಚದುವು ಅನುಭವಮೌತುಂದಿ" (ವೀರಬ್ರಹ್ಮಂರವರ ಚರಿತ್ರೆ ಓದಿದರೆ ಅನುಭವವಾಗುತ್ತದೆ) ಎಂದರು. ಶ್ರೀ ಸ್ವಾಮಿಯವರು ತಮ್ಮ ಭಕ್ತರಿಗೆ ಅನೇಕ ಮಹನೀಯರ ಚರಿತ್ರೆಗಳನ್ನು ಶ್ರದ್ಧೆಯಿಂದ ಪಠಣ ಮಾಡಲು ಆದೇಶಿಸುತ್ತಿದ್ದರೆಂದು ನಾವು ಗಮನಿಸಬೇಕು. ಇಲ್ಲದಿದ್ದರೆ, ಅವರನ್ನೇ ಗುರುವೆಂದು ನಂಬಿ ಸೇವೆ ಸಲ್ಲಿಸುತ್ತಿರುವ ಸೇವಕನಿಗೆ ಬೇರೆ ಮಹನೀಯರ ಚರಿತ್ರೆ ಓದಲು ಏಕೆ ಹೇಳುತ್ತಾರೆ? ಅವಧೂತರೆಲ್ಲರಿಗೂ ಮೂಲ ಪುರುಷರಾದ ಶ್ರೀ ದತ್ತಾತ್ರೇಯಸ್ವಾಮಿಯೇ, ಶ್ರೀ ವೆಂಕಯ್ಯಸ್ವಾಮಿಯವರ ರೂಪದಲ್ಲಿ ನಮ್ಮನ್ನು ಅನುಗ್ರಹಿಸಿ, ಆದೇಶಿಸುತ್ತಿದಾರೆ.

ಗುರವಯ್ಯ "ಏನಾದರೂ ಹೇಳಿ" ಎಂದು ಕೇಳಿದಾಗ, "ಸಂಪನ್ನತ್ವಂ ಕಲ್ಗಿ ಸಾಧಾರಣಂಗಾ ನಡಚುಕೋ. ಸತ್ಯಂ ಧರ್ಮಂ ತಪ್ಪಕುಂಡಾ ಉಂಡು" (ಶ್ರೀಮಂತನಾಗು ಆದರೆ, ಸಾಧಾರಣವಾಗಿ ಜೀವಿಸು, ಸತ್ಯ ಮತ್ತು ಧರ್ಮವನ್ನು ತಪ್ಪಬೇಡ) ಎಂದು ಹೇಳಿದರು. 'ಸಂಪನ್ನತ್ವಂ' (ಶ್ರೀಮಂತಿಗೆ) ಎಂದರೆ ಸತ್ವ ಗುಣ ಪ್ರಧಾನವಾದ ದೈವ ಸಂಪತ್ತಿನ ಲಕ್ಷಣಗಳು, 'ಸಾಧಾರಣತ್ವಂ' ಎಂದರೆ 'ನನಗೆ ಉತ್ತಮ ಗುಣಗಳು ಇವೆ' ಎನ್ನುವ ಅಹಂಭಾವ ಇಲ್ಲದೇ ಶ್ರೀ ಸ್ವಾಮಿಯವರ ಹಾಗೆ ಸಾಧಾರಣ ಮನುಷ್ಯನಾಗಿ ವರ್ತಿಸು ಎಂದು ಸ್ವಾಮಿಯವರ ಆಜ್ಞೆ. ನಿಜಕ್ಕೂ ಈ ಎರಡು ಗುಣಗಳನ್ನು ಸ್ವಾಮಿಯವರು ಆಚರಣೆಯ ರೂಪದಲ್ಲಿ ನಮಗೆ ತೋರಿಸಿದರು.

'ಕೋಪ ಹೇಗೆ ಹೋಗುತ್ತದೆ ಸ್ವಾಮೀ?' ಎಂದು ಕೇಳಿದಾಗ, "ಪ್ರೊದ್ದು ಪೊಡಿಚೇದಿ, ಕ್ರುಂಕೇದಿ ತೆಲಿಯಕುಂಡಾಪೋತೇ ಪೋತುಂದಿ" (ಸೂರ್ಯೋದಯ ಅಥವಾ ಸೂರ್ಯಾಸ್ತದ ಅರಿವಾಗದಿದ್ದಾಗ ಹೋಗುತ್ತದೆ) ಎಂದರು ಸ್ವಾಮಿಯವರು. ಮತ್ತೊಮ್ಮೆ ಅದೇ ಪ್ರಶ್ನೆ ಕೇಳಿದಾಗ, "ಸೂರ್ಯಚಂದ್ರುಲಕು ಅರ್ಜಿ ಪೆಡಿತೇ ಪೋತುಂದಿ" (ಸೂರ್ಯಚಂದ್ರರಿಗೆ ಅರ್ಜಿ ಇಟ್ಟರೆ ಹೋಗುತ್ತದೆ) ಎಂದು ಹೇಳಿದರಂತೆ.

ಒಮ್ಮೆ ಮೋಪೂರು ದಶಯ್ಯ ಕಣಗಲೆ ಹೂವನ್ನು (ಕರವೀರ ಪುಷ್ಪ) ಕೀಳುತ್ತಿದ್ದರು. ಶ್ರೀ ಸ್ವಾಮಿಯವರು ಅವರನ್ನು ಕರೆದು, "ಒಕ್ಕ ಪುವ್ವೇ ಗದಯ್ಯಾ" (ಒಂದು ಹೂವೇ ಅಲ್ಲವೇ) ಎಂದು, ಕೇಳಿದರು, ಮತ್ತೆ ಆಮೇಲೆ ಮಾತನಾಡಲಿಲ್ಲ. ಮನಸ್ಸು ಎನ್ನುವ ಒಂದು ಹೂವನ್ನೇ ಅಲ್ಲವೇ ಭಗವಂತ ಕೇಳುವುದು ಎಂದು ಸ್ವಾಮಿಯವರು

ಸೂಚಿಸಿದರೆಂದು ದಶಯ್ಯ ಗುರ್ತಿಸಿದ. ಭಕ್ತ ಮನಸ್ಸನ್ನಾಗಲಿ, ಹೃದಯವಾಗಲಿ ಸದ್ಗುರು ಅಥವಾ ಭಗವಂತನಿಗೆ ಒಮ್ಮೆ ಮಾತ್ರ ಸಮರ್ಪಿಸುವುದು ಸಾಧ್ಯವಾಗುತ್ತದೆ. ಅದಕ್ಕೆ ಸಂಕೇತವಾಗಿ ಒಂದು ಹೂವು ಸಾಕು ಎಂದು ಶ್ರೀ ಸ್ವಾಮಿಯವರ ಭಾವನೆ. ಇದೇ ವಿಷಯವನ್ನು ರಮಣಮಹರ್ಷಿ, ಪೂಜೆಗಾಗಿ ತುಳಸಿ ಕೀಳುತ್ತಿದ್ದ ಒಬ್ಬ ಭಕ್ತೆಗೆ ಬಹಳ ಚಮತ್ಕಾರವಾಗಿ ವಿವರಿಸಿದರು. ಹಾಗೆಯೇ, ಶ್ರೀ ಸಾಯಿಬಾಬಾ ಕೂಡ ಮತ್ತೆ ಮತ್ತೆ ನಮಸ್ಕಾರ ಮಾಡಲು ಹೋಗುತ್ತಿದ್ದ ಒಬ್ಬ ಭಕ್ತನಿಗೆ "ನೀನು ಹೃದಯಪೂರ್ವಕವಾಗಿ ಮಾಡಿದ ಒಂದು ನಮಸ್ಕಾರ ಸಾಕು" ಎಂದು ಹೇಳಿದರು.

ಒಬ್ಬ ಭಕ್ತೆ ಪ್ರಜೆಗಳಿಗೆ ಧಾನ್ಯವನ್ನು ಸಾಲವಾಗಿ ಕೊಟ್ಟು, ಅವಳು ನಾಮು (ಬಡ್ಡಿ) ಹೆಸರಿನಲ್ಲಿ ಹೆಚ್ಚಿನ ಲಾಭವನ್ನು ಸಂಗ್ರಹಿಸುತ್ತಿದ್ದಳು. ಒಮ್ಮೆ ಆವಳ ಮನೆ ಬೆಂಕಿಯಪಾಲಾಯಿತು. ಆ ಪ್ರಮಾದದಲ್ಲಿ ಬಹಳ ಧಾನ್ಯ ಕೂಡ ನಷ್ಟ ಆಯಿತು. ಆದರೆ, ಪಕ್ಕದವರ ಸಹಾಯದಿಂದ ಸ್ವಲ್ಪ ಧಾನ್ಯಗಳನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಆದರೂ, ನಷ್ಟವಾದ ಧಾನ್ಯಕ್ಕಾಗಿ ತುಂಬಾ ಬೇಸರಿಸುಕೊಳ್ಳುತ್ತಿದ್ದಳು. ಒಮ್ಮೆ ಅವಳು ಸ್ವಾಮಿಯವರನ್ನ ದರ್ಶಿಸಿ 'ಸ್ವಾಮೀ, ಮನೆ ಸುಟ್ಟು ಹೋಗಿ ಸರ್ವನಾಶ ಆಯಿತು' ಎಂದು ಕೊರಗಿದಳು. ಆಗ ಸ್ವಾಮಿಯವರು, "ಅಮ್ಮಾ! ಲಾಭ ಮಾತ್ರಾನೆ ಹೋಗಿದ್ದು ಅಸಲು ದಕ್ಕಿತಲ್ಲವೇ?) ಎಂದರು. ನಿಜಕ್ಕೂ, ಆ ಗ್ರಾಮಸ್ಥರು, 8 (ಪುಟ್ಟ) ಬುಟ್ಟಿಗಳ ಬೀಜಗಳನ್ನು ಆ ಅಗ್ನಿಪ್ರಮಾದದಿಂದ ತಪ್ಪಿಸಿ ಆಚೆ ಹಾಕಿದರು ಎಂದು ಅವಳು ಒಪ್ಪಿಕೊಂಡಳು. ಅನ್ಯಾಯವಾಗಿ ಅರ್ಜಿಸಿದ ಧಾನ್ಯ ಅಗ್ನಿಪಾಲಾಯಿತು. ಅದಕ್ಕೇ ಸ್ವಾಮಿಯವರು, 'ವಡ್ಡೀ ವಿಷಯಂಲೋ ಕೂಡಾ ಧರ್ಮಂಗಾ ವುಂಡಾಲಯ್ಯಾ' (ಬಡ್ಡಿಯ ವಿಷಯದಲ್ಲಿ ಕೂಡಾ ಧರ್ಮವಾಗಿ ಇರಬೇಕಯ್ಯಾ) ಎಂದು ಹೇಳುತ್ತಿದ್ದರು.

ಕೋಡೂರು ವೆಂಕಮ್ಮ ಪತಿಯು ನಿಧನರಾದ ಕಾರಣ ದುಃಖದಿಂದ ಹಾಸಿಗೆ ಹಿಡಿದಿದ್ದರು. ಶ್ರೀ ಸ್ವಾಮಿಯವರು ತಮ್ಮ ವಿಶಿಷ್ಟವಾದ ರೀತಿಯಲ್ಲಿ ಅವರ ದುಃಖವನ್ನು ನಿವಾರಿಸಿದರು. "ಅಮ್ಮಾ! ಒಕ ಮಾಮಿಡಿ ಪಂಡುಕು ಪುಂಡು ಪಡಿತೇ ಅದಿ ಎಂತ ಫಲಿಂಪು ಅವುತುಂದಮ್ಮಾ? ವರುಟುಬಾರಿ, ಕುಳ್ಳಿ ಎಂದುಕೂ ಪನಿಕಿ ರಾಕುಂಡಾ ಪೋತುಂದಿ. ಆ ಪಂಡು ಧೈರ್ಯಂಗಾ ಉಂಡಿ ಆ ಪುಂಡುನು ಲೆಕ್ಕ ಚೇಯಕುಂಟೇ ಆ ಪುಂಡು ದಾನ್ನೇಮೀ ಚೇಯಲೇದು. ಪಂಡು ಮಧುರಂಗಾ ತಯಾರೈ ಎನ್ನೋ ಕಾಯಲ್ನಿಸ್ತುಂದಿ. ಅದಿ ಎನ್ನೋಸಾರ್ಲು ಇಲಾಂಟಿ ಚೆಟ್ಲು ಅಯಿನ ತರುವಾತ ಮನಿಷವುತುಂದಿ. ಇಲಾ ಮನಿಷಿಗಾ ಎನ್ನೋಸಾರ್ಲು ಜನ್ಮಿಂಚಾಕ ಕಾಸ್ತ ಬುದ್ಧಿಗಲವಾಡೌತಾಡು. ಅಲಾಂಟಿ ಬುದ್ಧಿಗಲವಾಡುಗಾ ಎನ್ನೋಸಾರ್ಲು ಜನ್ಮಿಂಚಾಕ ಒಕ ಜನ್ಮಲೋ ಭಕ್ತುಡವುತಾಡು. ತರ್ವಾತ ಅಲಂಟಿ ಜನ್ಮಲೆನ್ನೋ ಅಯ್ಯಾಕ ಒಕ ಜನ್ಮಲೋ ಧರ್ಮಂಗಾ ಪರಿಪಾಲಿಂಚೇ ರಾಜವುತಾಡು. ಅಟ್ಲಾಂಟಿ ರಾಜುಗಾ ಎನ್ನೋ ಜನ್ಮಲೆತ್ತಿನ ತರ್ವಾತ ದೇವುನಿ ಕೊರಕು ಪಾಟು ಪಡತಾಡು. ಅಲಾಂಟಿ ಮುಮುಕ್ಷು ಜನ್ಮಲು ಎನ್ನೋ ಗಡಿಚಾಕ ದೇವುನಿ ಸನ್ನಿಧಿಲೋ ಉಂಟಾಡು. ಅಪ್ಪುಡು ದೇವುಡು ತನ ಕನ್ನು ಕೊದ್ದಿಗಾ ತೆರಚಿ ಭಕ್ತುನಿ ಚೂಸ್ತಾಡು. ಆಯನ ತನ ಬೊಟನ ವ್ರೇಲು ಕ್ರಿಂದ ಉಂಡೇ ಅಲ್ಲೆತಾಡು

ತ್ರೊಕ್ಕಿತೇ ಪ್ರಪಂಚಂಲೋ ಉಂಡೇ ಬೊಮ್ಮಲಾಟಂತಾ ಅತಡಿಕಿ ಕನ್ಪಿಸ್ತುಂದಿ. ಅಪ್ಪುಡು ದೇವುಡು ಅತನಿನಿ ತನಲೋ ಚೇರ್ಚುಕುಂಟಾಡು." (ಅಮ್ಮಾ! ಒಂದು ಮಾವಿನ ಹಣ್ಣಿಗೆ ಹುಣ್ಣು ಬಂದರೇ ಅದು ಎಷ್ಟು ಫಲ ಕೊಡುತ್ತದೆಯಮ್ಮಾ? ಆ ಹಣ್ಣು ಒರಟಾಗಿ, ಕೊಳೆತುಹೋಗಿ ಯಾತಕ್ಕೂ ಕೆಲಸಕ್ಕೆ ಬಾರದಂತಾಗುತ್ತದೆ. ಅದೇ ಆ ಹಣ್ಣು ಧೈರ್ಯವಾಗಿದ್ದು, ಆ ಹುಣ್ಣನ್ನು ಲೆಕ್ಕ ಮಾಡದಿದ್ದರೇ, ಆ ಹುಣ್ಣು ಅದರ ಪಾಡಿಗೆ ಅದು ಗುಣವಾಗುತ್ತದೆ. ಆ ಹಣ್ಣು ಮಧುರವಾಗಿ ಇನ್ನೂ ಎಷ್ಟೋ ಕಾಯಿಗಳನ್ನು ಕೊಡುತ್ತದೆ. ಆ ಹಣ್ಣಿನಿಂದ ಎಷ್ಟೊ ಮರಗಳು ಜನಿಸುತ್ತವೆ. ಎಷ್ಟೊ ಜನ್ಮಗಳ ನಂತರ, ಮನುಷ್ಯನ ಜನ್ಮ ಬರುತ್ತೆ. ಹೀಗೆ ಮನುಷ್ಯನಾಗಿ ಎಷ್ಟೋ ಜನ್ಮವೆತ್ತಿದಮೇಲೆ, ಸ್ವಲ್ಪ ಬುದ್ದಿವಂತನಾಗಿ ಹುಟ್ಟುತ್ತಾನೆ. ಹೀಗೆ ಎಷ್ಟೋ ಜನ್ಮಗಳು ಬುದ್ದಿವಂತನಾಗಿ ಹುಟ್ಟಿದಮೇಲೆ ಒಂದು ಜನ್ಮದಲ್ಲಿ ಭಕ್ತನಾಗಿ ಹುಟ್ಟುತ್ತಾನೆ. ಹೀಗೆ ಅನೇಕ ಜನ್ಮಗಳನಂತರ, ಧರ್ಮದಿಂದ ಪರಿಪಾಲಿಸುವ ರಾಜನಾಗುತ್ತಾನೆ. ಹೀಗೆ ಅನೇಕ ಜನ್ಮಗಳಾದಮೇಲೆ ದೇವರಿಗೋಸ್ಕರ ಪರದಾಡುತ್ತಾನೆ. ಅಂತಹ ಎಷ್ಟೊ ಮುಮುಕ್ಷುವಿನ ಜನ್ಮಗಳಾದನಂತರ ದೇವರ ಸನ್ನಿಧಿಯಲ್ಲಿ ಇರುತ್ತಾನೆ. ಆಗ, ದೇವರು, ತನ್ನ ಕಣ್ಣು ಸ್ವಲ್ಪ ತೆರೆದು ಆ ಭಕ್ತನನ್ನು ನೋಡುತ್ತಾನೆ. ದೇವರು, ತನ್ನ ಹೆಬ್ಬೆಟ್ಟಿನ ಕೆಳಗಿರುವ ಬಿಲ್ಲಿನ ಹೆದೆಯನ್ನು ತುಳಿದರೆ, ಪ್ರಪಂಚದಲ್ಲಿ ಇರುವ ಗೊಂಬೆ ಆಟವೆಲ್ಲಾ ಕಾಣಿಸುತ್ತದೆ. ಆಗ ದೇವರು ಆ ಮನುಷ್ಯನನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತಾನೆ). ಈ ವಿವರಣೆ ಕೇಳಿ ವೆಂಕಮ್ಮ "ಇಲ್ಲಿಯವರೆಗೆ ಇಷ್ಟು ಜನ್ಮಗಳು ಎತ್ತಿ ಎಷ್ಟೋ ಕಷ್ಟಗಳನ್ನು ಅನುಭವಿಸಿದ್ದೇನೆ. ಈ ಕೊಂಚ ಕಷ್ಟ ಒಂದು ಲೆಕ್ಖವೇ?" ಧೈರ್ಯವಾಗಿ ಮಾವಿನ ಹಣ್ಣಂತೆ ಇರಬೇಕೆಂದುಕೊಂಡು ಅಳುವುದನ್ನು ನಿಲ್ಲಿಸಿದರು.

ಕೆಲಸ ಮಾಡದಿದ್ದರೇ ಉದ್ಯೋಗ ನಷ್ಟ. ಕೆಲಸ ಮಾಡದಿದ್ದರೂ, ಸಂಬಳ ಬರಬಹುದು. ಆದರೇ ಅದು ದಕ್ಕುವುದಿಲ್ಲ. ಕಷ್ಟ ಪಡುತ್ತಲಾದರೂ ಇರು, ದೇವರ ಧ್ಯಾನವನ್ನು ಮಾಡುತ್ತಲಾದರೂ ಇರು, ರೋಗದಿಂದ ನರಳುತ್ತಲಾದರೂ ಇರು, ಬಡತನದಿಂದ ಬಾಧೆ ಪಡುತ್ತಲಾದರೂ ಇರು. (ಈ ನಾಲ್ಕು ದೆಶೆಯಲ್ಲಿ ಮನುಷ್ಯನಿಗೆ ನಿರಂತರ ದೇವರನ್ನು ನೆನಪಿಸಿಕೊಳ್ಳುತ್ತಾನೆಂದು ಸ್ವಾಮಿಯವರು ಹಾಗೆ ಹೇಳಿರಬಹುದು). ಆಷ್ಟೇ ಅಲ್ಲದೇ, ಕಷ್ಟ ಪಡುತ್ತಿದ್ದರೂ, ರೋಗಗಳಿಂದ ನರಳುತ್ತಿದ್ದರೂ, ಬಡತನದಲ್ಲಿ ಬದುಕುತ್ತಿದ್ದರೂ, ತಮ್ಮ ಕರ್ಮಗಳು ಕಡಿಮೆ ಆಗುತ್ತಾ ಹೋಗುತ್ತದೆ. ಇದರ ಜೊತೆ ಧ್ಯಾನ ಮಾಡಿದರೆ, ಹೊಸ ಕರ್ಮ ಬರುವುದಿಲ್ಲ. 65

ಒಬ್ಬ ಭಕ್ತನು ಆಗಾಗ ಸ್ವಾಮಿಯವರ ದರ್ಶನವನ್ನು ಮಾಡುತ್ತಿದ್ದನು. ತನಗೆ ಸ್ವಾಮಿಯವರ ರಕ್ಷಣೆಯಿದೆಯೆಂಬ ಅಹಂಕಾರದಿಂದ ಅವನು ತನ್ನ ಕಛೇರಿಯ ಕೆಲಸವನ್ನು ನಿರ್ಲಕ್ಷಿಸಿದನು. ಅವನು ತನ್ನ ಮೇಲ್ವಿಚಾರಕನನ್ನು ಗೌರವಿಸಲಿಲ್ಲ. ಒಮ್ಮೆ ಸ್ವಾಮಿಯವರು ಅವನ ಸ್ವಪ್ನದಲ್ಲಿ ಕಂಡು, "what do you mean by negligence of duty, bloody idiot"

"ಬುದ್ಧಿ ಲೇನಿ ವಾಡಾ! ವಿದ್ಯುಕ್ತ ಧರ್ಮಾನ್ನಿ ಅಶ್ರದ್ಧ ಚೇಯಡಮಂಟೇ ಏಮನುಕುಂತುನ್ನಾವ್" (ವಿದ್ಯುಕ್ತ ಧರ್ಮವನ್ನು ನಿರ್ಲಕ್ಷಿಸುವುದರ ಅರ್ಥವೇನು,

66

ಬುದ್ಧಿಹೀನ!) ಎಂದು ತೀವ್ರ ಸ್ವರದಿಂದ ಎಚ್ಚರಿಸಿದರು. ಆ ಭಕ್ತ, "ಸ್ವಾಮೀ, ನಿಮಗೆ ಇಂಗ್ಲೀಷು ಕೂಡಾ ಬರುತ್ತಾ" ಎಂದು ಕೇಳಿದ. "ಇಂಗ್ಲೀಷೇಮಿಟಿ ಪ್ರಪಂಚ ಭಾಷಲನ್ನೀ ವಚ್ಚು" (ಇಂಗ್ಲೀಷೇನು? ಪ್ರಪಂಚದ ಎಲ್ಲಾ ಭಾಷೆಗಳು ಬರುತ್ತದೆ) ಎಂದು ಛೀಮಾರಿ ಹಾಕಿದರು ಸ್ವಾಮಿಯವರು. ತಮ್ಮ ಭಕ್ತರನ್ನು ಪಾಪದ ಹೊರೆಯಿಂದ ಹೇಗೆ ಕಾಪಾಡುತ್ತಾರೋ ನೋಡಿ)

ನಿರಂತರ ತಮ್ಮ ಸೇವೆಯಲ್ಲಿರುವ ಗುರವಯ್ಯನವರೊಡನೆ ಸ್ವಾಮಿಯವರು ಹೀಗೆ ಹೇಳಿದರು, "ಮಾಲ, ಮಾದಿಗ, ಜೋಗಿ, ಜಂಗಂವಾಳ್ಳು ಚೇರಕುಂಡಾ, ಚೂಚುಕೋ. ಸತ್ಯಂ, ಧರ್ಮಂ, ಸಾಧಾರಣತ್ವಂ, ಸದ್ಗುರು ಸೇವ ಸಾಧಿಂಚು." (ಮಾದಿಗ, ಮಾಲ, ಜೋಗಿ, ಜಂಗಮರನ್ನ ಹತ್ತಿರ ಬರದಂತೆ ನೋಡಿಕೊ. ಸತ್ಯ, ಧರ್ಮ, ಸಾಧಾರಣತ್ವ, ಸದ್ಗುರುಸೇವೆಯನ್ನು ಸಾಧಿಸುಕೊ." ಇಲ್ಲೊಂದು ಮುಖ್ಯ ಗಮನಿಕೆ: ಮಾಲ, ಮಾದಿಗ, ಜೋಗಿ, ಜಂಗಮ ಎಂದರೆ ನಮ್ಮಲ್ಲಿರುವ ದುರ್ಗುಣಗಳು ಎಂದು ಸ್ವಾಮಿಯವರ ಭಾವನೆ, ಕುಲ ಅಥವ ಜಾತಿಯ ವಿಚಾರ ಅಲ್ಲ. "ನಮ್ಮಲ್ಲಿ" ಹೀನ ಜಾತಿಯವನೊಬ್ಬ ಇದ್ದಾನೆ, ಅವನನ್ನು ಓಡಿಸಬೇಕು" ಎಂದು ಶ್ರೀ ಸಾಯಿನಾಥರು ಆದೇಶಿದಂತಿದೆ.

ಮತ್ತೊಮ್ಮೆ ಸ್ವಾಮಿಯವರು ಗುರವಯ್ಯನವರೊಂದಿಗೆ, "ತಪ್ಪು ಚೇಸ್ತೇ ವದ್ದಿದೊಂಡ ಪುರುಗುಲು ಪಡುತಾಯಿ. ಮಾದಿಗ ಇಂಡ್ಲೋ ಪುಡತಾರು" (ತಪ್ಪು ಮಾಡಿದರೆ ಹುಳಗಳು ಬೀಳುತ್ತವೆ, ಮಾದಿಗನ ಮನೆಯಲ್ಲಿ ಹುಟ್ಟುತ್ತಾರೆ) ಎಂದರು. ಇಲ್ಲಿ ಮಾದಿಗ ಎಂದರೆ, ಈ ಕಾಲದ ವರ್ಣಾವ್ಯವಸ್ಥೆಯಲ್ಲಿ ಜನ್ಮಿಸಿದರಿಂದ ಬರುವ ವರ್ಣವಿಶೇಷ ಅಲ್ಲ ಎಂದು ನಾವು ತಿಳಿಯಬೇಕು. ಸ್ವಾಮಿಯವರು "ಮರಲಾ ಎನ್ನೋ ಜನ್ಮಲಕು ಕೂಡಾ ನಾ ದಗ್ಗರಕು ರಾಲೇರು" (ಮತ್ತೆ ಎಷ್ಟೋ ಜನ್ಮಗಳಿಗೂ ನನ್ನ ಹತ್ತಿರ ಬರಲಾರರು) ಎಂದು ಕೂಡಾ ಹೇಳುತ್ತಿದ್ದರು.

ದಶಯ್ಯ : ಹೇಗೆ ಕೃತಜ್ಞರಾಗಿರಬೇಕು ಸ್ವಾಮಿ?

67 ಸ್ವಾಮಿ : **ಆಶಪೋತೇ ಅಂತಾ ಪೋತುಂಡ್ಲಾಯ್ಯಾ!** (ಆಸೆ ಹೋದರೇ ಎಲ್ಲಾ ಹೋಗುತ್ತಯ್ಯಾ)

ಅಮ್ಮ : ಸ್ವಾಮೀ! ನಿಮ್ಮನ್ನು ತಿಳಿಯುವುದು ಹೇಗೆ?

ಸ್ವಾಮಿ : ಅಮ್ಮಾ! "ಭದ್ರಾಚಲಂ ಪೋಯಿ ಗರ್ಭಗುಡಿ ತೆರಿಚಿ ಚೂಡು ತೆಲುಸ್ತುಂದಿ". (ಭದ್ರಾಚಲಕ್ಕೆ ಹೋಗಿ ಗರ್ಭಗುಡಿ ತೆಗೆದು ನೋಡು ಗೊತ್ತಾಗುತ್ತೆ.

ಆದರೆ, ಆ ತಾಯಿ ಹಾಗೆ ಮಾಡಿದರೋ ಇಲ್ಲವೋ ನಮಗೆ ಗೊತ್ತಿಲ್ಲ. ಹೀಗೆ, ಚಲ್ಲಾ 68
ಸುಬ್ಬಮ್ಮನವರೊಂದಿಗೆ ಕೋಟಿ ತೀರ್ಥದ ದೇವಾಲಯದ ಮೇಲೆ ನೋಡು ಎಂದರು. ಅವರು ಹಾಗೆಯೇ ನೋಡಿದಾಗ, **ಅಲ್ಲಿ ಅನಂತವಾದ ಬೆಳಕಿನ ದರ್ಶನ ಆಯಿತು. ಪಾರ್ವತಿ ದೇವಿ ಪ್ರಕೃತಿ ಮಾತೆಯಲ್ಲವೇ? 'ಪರಬ್ರಹ್ಮ ಸ್ವರೂಪನಾದ ನಾನೇ ಈ ದೃಶ್ಯ ಜಗತ್ತಾಗಿ ಪ್ರಕಟಿಸುತ್ತಿದ್ದೇನೆ. ಎಲ್ಲದರಲ್ಲೂ, ಎಲ್ಲಾಕಡೆ ನನ್ನನ್ನೇ ಭಾವನೆ ಮಾಡಿ ಎಂದು**

ಬೋಧಿಸಿದರು.

ಒಮ್ಮೆ ಮೋಪೂರು ದಶಯ್ಯ, "ಸ್ವಾಮೀ, ನಿಮಗೆ ಕಾಡಿನಲ್ಲಿ ಯಾರೋ ಒಬ್ಬ ಋಷಿ ಕಂಡು ನಿಮ್ಮ ನಾಲಿಗೆಯಮೇಲೆ ಬೀಜಾಕ್ಷರ ಬರೆದರೆಂದು ಹೇಳುತ್ತಾರೆ, ನಿಜವೇ? ಎಂದು ಕೇಳಿದರು. ಆಗ ಸ್ವಾಮಿಯವರು, **"ಮೈಸೂರು ಮಹಾರಾಜು ತ್ರೋವನ ಪೋತುಂಟೇ ಮನಂ ಚೂಸ್ತೇ ಮನಕೇಮಿ ವಸ್ತುಂದಿ? ಮನಂ ಚೇಸುಕುನ್ನದೇ ಗದಾ ಮನಕು?"** (ಮೈಸೂರು ಮಹಾರಾಜರು ದಾರಿಯಲ್ಲಿ ಹೋಗುತ್ತಿದ್ದರೆ ನಾವು ಅವರನ್ನು ನೋಡಿದರೆ ನಮಗೇನು ಸಿಕ್ಕುತ್ತದೆ? ನಾವು ಮಾಡಿಕೊಂಡಿದ್ದೇ ಅಲ್ಲವೇ ನಮಗೆ) ಎಂದರು. ಇದರ ಅರ್ಥ ಏನೆಂದರೆ, ನಮಗೆ ಅವಕಾಶ ಇರುವವರೆಗೆ, **ನಾವು ಜಪ, ಧ್ಯಾನ, ಧರ್ಮಾಚರಣೆ, ಸದ್ಗುರು ಸೇವೆ ಮಾಡದಿದ್ದರೆ, ಮಹಾರಾಜನಂತಹ ಮಹಾತ್ಮರ ಅನುಗ್ರಹ ನಮಗೆ ಲಭ್ಯವಿಲ್ಲ. ನಾವು ಸಾಧನೆ ಕರಗತ ಮಾಡಿಕೊಂಡಾಗ ಅಂತಹ ಪ್ರತಿಭಾವಂತರನ್ನು ಮಹಾರಾಜರು ತಮ್ಮ ಆಸ್ಥಾನದಲ್ಲಿ ಪಂಡಿತರನ್ನಾಗಿ ನಿಯಮಿಸುವಂತೆ, ಯಾರೋ ಒಬ್ಬ ಮಹನೀಯರು ನಮ್ಮನ್ನು ಅನುಗ್ರಹಿಸುತ್ತಾರೆ ಎಂದು ಸ್ವಾಮಿಯವರ ಭಾವನೆ.** 69 70

ರಾಜ ಎಷ್ಟೇ ಶಕ್ತಿವಂತನಾಗಲಿ ಅಥವ ಸರ್ವ ಸ್ವತಂತ್ರನಾಗಲಿ, ಕಷ್ಟಪಟ್ಟು ಪ್ರತಿಭೆಯನ್ನು ಸಂಪಾದಿಸಿದವರನ್ನೇ ಸತ್ಕರಿಸುತ್ತಾನೆ, ಉಳಿದವರನ್ನು (ಅಂದರೆ ಕಷ್ಟಪಡದವರನ್ನು) ತನ್ನ ಹತ್ತಿರ ಸೇರಿಸುವುದಿಲ್ಲ. ಹಾಗೆಯೇ, ಶ್ರಮಪಟ್ಟು ಸಾಧನೆ ಮಾಡಿದವರಿಗೇ, ಸ್ವಾಮಿಯವರು ತಮ್ಮ ಕೃಪೆ ತೋರಿಸುತ್ತಾರೆಂದು ನಾವು ಗುರ್ತಿಸಬೇಕು.

ವೆಂಕಯ್ಯನ (ಸ್ವಾಮಿಯವರ ಸೇವಕ) ಮೂಲಕ ಒಬ್ಬರು ಸ್ವಾಮಿಯವರ ಧುನಿಗಾಗಿ ಕಟ್ಟಿಗೆ ತಂದಿದ್ದಕ್ಕೆ, ಗಾಡಿಯ ಬಾಡಿಗೆ 4 ರೂ ತೆಗೆದುಕೊಂಡು, ಮತ್ತೆ ವೆಂಕಯ್ಯನಿಂದ ಭತ್ತದ ರಾಶಿ ಹಾಕುವ ಕೆಲಸ ಉಚಿತವಾಗಿ ಮಾಡಿಸಿಕೊಂಡನು. ಆ ಗಾಡಿಯವನು ಸ್ವಾಮಿಯವರ ಹತ್ತಿರ ಬಂದಾಗ ಯಾರೂ ಏನೂ ಹೇಳದೆ, ಸ್ವಾಮಿಯವರು, "ಅಯ್ಯಾ! ಈಯನ ಬಂಡಾಯನಾ? ಈಯನ ಮನಕು 150 ರೂ ಬಾಕೀ ತೇಲಿನಾಡು. ಅಂದುಕು ಅಪರಾಧಂಗಾ ತಿರುಪತಿ ಪೋಯಿರಾವಾಲಿ" (ಅಯ್ಯಾ! ಇವನು ಗಾಡಿಯವನಾ? ಇವನು ನಮಗೆ 150 ರೂ ಬಾಕೀ ಇದ್ದಾನೆ, ಈ ಅಪರಾಧ ಮಾಡಿದ್ದರಿಂದ, ಇವನು ತಿರುಪತಿಗೆ ಹೋಗಿ ಬರಬೇಕು) ಎಂದು ಬರೆಸಿ ಕೊಟ್ಟರು. ಅವನು ಸ್ವಾಮಿ ಹೇಳಿದಂತೆ ತಿರುಪತಿಗೆ ಹೋದನು. ಅಲ್ಲಿ ಅವನ ಹಣ ಕಳ್ಳತನವಾಯಿತು. ಗಾಡಿಯವನ ಅಪರಾಧ, ಸ್ವಾಮಿಯವರ ಹಣವನ್ನು ಕದ್ದಿದ್ದೇ. **ಶ್ರೀ ಸ್ವಾಮಿಯವರ ಸೇವಕರು, ಸಾಕ್ಷಾತ್ತು ಭಗವಂತನ ಸ್ವತ್ತು. ಅವರು ಋಣ ಭಗವಂತನಿಗಾಗಲಿ, ಗುರುವಿಗಾಗಲಿ ಅಥವ ಆ ಸೇವಕನಿಗಾಗಲಿ ಸಲ್ಲಿಸದಿದ್ದರೆ ಆ ಧನ ನಷ್ಟವಾಗಿಯೇ ತೀರುತ್ತದೆ.** 71

ವೃದ್ಧರಾದ ರೋಶಿ ರೆಡ್ಡಿ ಬಹಳ ಕಾಲದಿಂದ ಸ್ವಾಮಿಯವರ ಸೇವೆಯಲ್ಲಿದ್ದರು. ಒಮ್ಮೆ ಯಾರೋ ಏನೋ ಅಂದರೆಂದು ಮನೆಗೆ ಹೋಗಬೇಕೆಂದುಕೊಂಡರು. ಆಗ, ಸ್ವಾಮಿಯವರು ಅವರನ್ನು ಏಕಂತದಲ್ಲಿ ಕರೆದು, **"ಪಂಟ ಚೇನು ವದಿಲಿ ಪರಿಗ ಏರುಕುಂಟಾವ?" (ಉತ್ತಮವಾದ ಬೇಳೇಯನ್ನು ಬೀಟ್ಟು ಹುಲ್ಲನ್ನು** 72

ಆರಿಸುಕೊಳ್ಳುತ್ತೀಯ?) ಎಂದು ಎಚ್ಚರಿಸಿದರು. ಆಗ ರೋಶಿ ರೆಡ್ಡಿ ತನ್ನ ಸಂಕಲ್ಪವನ್ನು ಬಿಟ್ಟರು. ಸದ್ಗುರುವಿನ ಸಾಂಗತ್ಯ ಉತ್ತಮವಾದ ಬೆಳೆಯ ಸಮಾನ, ಸದ್ಗುರುವಿನ ಸಾಂಗತ್ಯ ಇಲ್ಲದೇ, ಸಾಮಾನ್ಯ ಜೀವನ ನಡೆಸುತ್ತಾ, ಇತರ ಸಾಧನೆಗಳು ಮಾಡುವುದು ಹುಲ್ಲಿನ ಸಮಾನ ಎಂಬುದನ್ನು ರೋಶಿ ರೆಡ್ಡಿಯವರು ಗುರ್ತಿಸಿ, ತಮ್ಮ ಕೊನೆಯ ಶ್ವಾಸದವರೆಗೆ ಭಿಕ್ಷಾನ್ನ ತಂದು ಗುರುವಿನ ಸೇವೆ ಮಾಡುತ್ತಾ ತನ್ನ ಜೀವನವನ್ನು ಧನ್ಯ ಮಾಡಿಕೊಂಡರು.

1. **ರೋಶಿ ರೆಡ್ಡಿಯವರ ನಿಸ್ವಾರ್ಥ ಗುರುಸೇವೆಯ ಪರಿಣಾಮವಾಗಿ ಅವರಿಗೆ,**
73 **ಆಶಾಪಾಶ, ಬಂಧು ಪ್ರೀತಿ, ಮಾಯಾಮೋಹಗಳಿಲ್ಲದೇ ಕೊನೆಗೆ ತನ್ನ ಶರೀರದ ಮೇಲೆ ಕೂಡ ಮಮಕಾರವಿಲ್ಲದಂತೆ ಮಾಡಿದರು ಶ್ರೀ ಸ್ವಾಮಿಯವರು. ಸ್ವಯಂಕೃಷಿಯಿಂದ ಈ ಸ್ಥಿತಿಯನ್ನು ಹೊಂದುವುದು ಸಾಧ್ಯವಿಲ್ಲ ಎಂದು ಸಾಧಕರ ಅನುಭವ.**

2. ಹೃದಯಾಂತರಾಳದ ಪ್ರೀತಿಯ ಭಾವನೆಯಿಂದ ಗುರುವನ್ನು ಸೇವಿಸಿದ್ದರಿಂದ ಪ್ರಾರಬ್ಧ ಕರ್ಮ ಸಂಬಂಧಿತ ವೃದ್ಧಾಪ್ಯದ ರೋಗಗಳು ಇಲ್ಲದಂತೆ ಮಾಡಿದರು ಸ್ವಾಮಿಯವರು.

3. ಅತ್ಯಂತ ಅಗತ್ಯವಿರುವ ವಿಷಯಗಳಲ್ಲಿ ಯಾವ ವ್ಯಕ್ತಿ ಎಂತಹವನು ಎನ್ನುವ ವಿಷಯ, ಮತ್ತು ಎಲ್ಲಿ ಏನು ನಡೆಯುತ್ತಿದೆ ಎನ್ನುವುದು ಸ್ವಾಮಿಯವರು ಅವರಿಗೆ ದೃಶ್ಯ ಸಂಕೇತಗಳಿಂದ ತೋರಿಸುತ್ತಿದ್ದರು.

ಉದಾ: ಒಂದು ದಿನ, ರೋಶಿ ರೆಡ್ಡಿಯವರಿಗೆ ತಮ್ಮ ಮನೆಯವರು ಗಾಳಿಮಳೆಯಿಂದ ಸಜ್ಜೆ ಕುಯ್ಲಿಗೆ ಕಷ್ಟ ಪಡುತ್ತಿದ್ದರು. ಹಣದ ಅವಶ್ಯಕತೆ ಇದ್ದುದರಿಂದ, ಚೆನ್ನಾಗಿರುವ ಸಣ್ಣ ನಿಂಬೇಕಾಯಿಗಳನ್ನು ಕುಯ್ದು ರಾಶಿ ಹಾಕಿದ್ದಹಾಗೆ ಸ್ವಾಮಿಯವರ ಸನ್ನಿಧಿಯಲ್ಲಿದ್ದ ರೋಶಿ ರೆಡ್ಡಿಯವರಿಗೆ ದೃಶ್ಯವಾಗಿ ಕಂಡಿತು. ಮೂರನೇ ದಿನ ಇವರ ಮಗ ಆಶ್ರಮಕ್ಕೆ ಬಂದಾಗ ವಿಚಾರಿಸಿದರೇ ಈ ಎರಡು ವಿಷಯಗಳು ನಿಜವೆಂದು ತಿಳಿಯಿತು.

ಶ್ರೀ ಭರದ್ವಾಜ ಮೇಷ್ಟರನ್ನು ಎಲ್ಲರೂ ದೇವರು ಮತ್ತು ಗುರುವಾಗಿ ಪೂಜಿಸುತ್ತಿದ್ದರು. ಇವರ ನಿಜಸ್ಥಿತಿ ಏನಿರಬಹುದು ಎಂದು ಮನಸ್ಸಿನಲ್ಲೇ ಯೋಚಿಸುತ್ತಿದ್ದ ರೋಶಿ ರೆಡ್ಡಿಗೆ ಒಂದು ದೃಶ್ಯ ಗೋಚರಿಸಿತು. ಮೇಷ್ಟರು ಒಂದು ಮರುಭೂಮಿಯಲ್ಲಿ ನಿಂತಿದ್ದರು. ಇದ್ದಕ್ಕಿದ್ದಂತೆ ಅವರು ಶಂಖ ಚಕ್ರ ಧರಿಸಿ ಮಹಾವಿಷ್ಣು ಆದರು. ಅವರ ಪಾದಗಳ ಸುತ್ತಲೂ ಮಿಂಚುತ್ತಿದ್ದ ಹಸಿರು ಹುಲ್ಲು ಇತ್ತು. ರೋಶಿ ರೆಡ್ಡಿಯವರು ಒಂದು ಎಮ್ಮೆಯಾಗಿ ಹುಲ್ಲು ಮೇಯುತ್ತಿದ್ದಹಾಗೆ ದೃಶ್ಯ ಗೋಚರಿಸಿತು. ಇದೇ ರೀತಿಯಲ್ಲಿ ಇನ್ನೊಬ್ಬ ವ್ಯಕ್ತಿಯ ವಿಚಾರ ಯೋಚಿಸುತ್ತಿದ್ದಾಗ, ಆ ವ್ಯಕ್ತಿ ಮುರಿದ ಬೀಗಗಳನ್ನು ಸರಿಪಡಿಸುತ್ತಿದ್ದಹಾಗೆ ಸ್ವಾಮಿಯವರು ತೋರಿಸಿದರು. ಅಂದರೆ, ಪ್ರತಿ ಒಬ್ಬರಲ್ಲಿರುವ ಲೋಪಗಳನ್ನು ಸರಿ ಪಡಿಸುವ ಸಮರ್ಥರು ಎಂದು ಸ್ವಾಮಿಯವರು ರೋಶಿ ರೆಡ್ಡಿಯವರಿಗೆ ಬೋಧಿಸಿದರು.

ಒಂದು ದಿನ ರೋಶಿ ರೆಡ್ಡಿಯವರ ಅಳಿಯ ಮತ್ತು ಮಗ ಇಬ್ಬರೂ, ಆತನನ್ನು ಹತ್ತು ದಿನಗಳ ಕಾಲ ತಮ್ಮ ಮನೆಗೆ ಕರೆದುಕೊಂಡು ಹೋಗಲು ಸ್ವಾಮಿಯವರ ಆಶ್ರಮಕ್ಕೆ ಬರುತ್ತಿದ್ದರು. ಆ ಸಮಯದಲ್ಲಿ, ಸ್ವಾಮಿಯವರು ಮತ್ತು ರೋಶಿ ರೆಡ್ಡಿಯವರು, ನೆಲ್ಲೂರಿನಲ್ಲಿ ಬಿಡದಿ ಮಾಡಿದ್ದರು. ಆ ಕಾಲದಲ್ಲಿ ರೋಶಿ ರೆಡ್ಡಿಯವರಿಗೆ ದೃಷ್ಟಿ

ಬಲಹೀನವಾಗಿದ್ದುದರಿಂದ, ಅವರು ಒಬ್ಬಂಟಿಯಾಗಿ ಎಲ್ಲೂ ಪ್ರಯಾಣಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ, ಸ್ವಾಮಿಯವರು ಅವರಿಗೆ, "ತ್ರೋವ ಪಟ್ಟುಕೊನಿ ನೇರುಗಾಪೋ!" (ನೇರವಾಗಿ ದಾರಿ ಹಿಡಿದು ಹೋಗು) ಎಂದು ಆಜ್ಞಾಪಿಸಿದರು. ಗುರುಗಳ ಆಜ್ಞೆ ಎಂದರೆ ಅಚಲ ಗೌರವ ಮತ್ತು ವಿಶ್ವಾಸವಿದ್ದ ರೋಶಿ ರೆಡ್ಡಿ ತಮಗೆ ಕಣ್ಣು ಕಾಣದಿರುವುದನ್ನು ಲೆಕ್ಕ ಮಾಡದೇ ನೆಲ್ಲೂರಿನಿಂದ ಗೊಲಗಮೂಡಿಗೆ ನಡೆಯುತ್ತಾ ಎಂಟು ಕಿಲೋಮೀಟರ್ ಒಬ್ಬರೇ ಬಂದರು. ಅಳಿಯ, ಮಗ ಬಸ್ಸಿನಲ್ಲಿ ಅವರಿಗಿಂತ ಮೊದಲೇ ಗೊಲಗಮೂಡಿಗೆ ಬಂದು, ರೋಶಿ ರೆಡ್ಡಿಯ ಬಗ್ಗೆ ವಿಚಾರಿಸಿದರು. ರೋಶಿ ರೆಡ್ಡಿಯವರು ನಡೆಯುತ್ತಾ ಬರುತ್ತಿದ್ದರಿಂದ, ಆಶ್ರಮದಲ್ಲಿ ಇರಲಿಲ್ಲ ಅವರು ಮಾರ್ಗಮಧ್ಯದಲ್ಲೇ ಇದ್ದರು.

ಒಬ್ಬರನ್ನೊಬ್ಬರು ಭೇಟಿಯಾಗುವುದನ್ನು ತಪ್ಪಿದ್ದರಿಂದ, ಅವರನ್ನು ಭೇಟಿ ಆಗುವುದು ಸಾಧ್ಯವಿಲ್ಲವೆಂದು, ಅವರ ಅಳಿಯ ಮತ್ತು ಮಗ ಹಿಂತಿರುಗಿ ತಮ್ಮ ಮನೆಗೆ ಹೋದರು. ಸರ್ವಜ್ಞರಾದ ಸ್ವಾಮಿಯವರು ರೋಶಿ ರೆಡ್ಡಿಯವರಿಗೆ "ನೇರವಾಗಿ ಹೋಗು" ಎಂದು ಆದೇಶಿಸದಿದ್ದರೆ, ಇವರು ತಮ್ಮ ಮಗ, ಮತ್ತು ಅಳಿಯನ ಮಾತು ಕೇಳಿ ಮನೆಗೆ ಪ್ರಯಾಣ ಮಾಡಿ, ಅವರು ಸಂಸಾರದ ಜಾಲದಲ್ಲಿ ಇರುತ್ತಾ, ಹೊಲ ಗದ್ದೆಯಲ್ಲಿ ಹುಲ್ಲಾರಿಸುತ್ತ ಇರುತ್ತಿದ್ದರು. ಹಾಗೆ ಆಗುವುದಕ್ಕೆ ಬಿಡಲಿಲ್ಲ , ಸ್ವಾಮಿಯವರು. **ರೋಶಿ ರೆಡ್ಡಿಗೆ ಆಜ್ಞಾಪಿಸಿದ ಮೇಲಿನ ವಾಕ್ಯ "ನೇರವಾಗಿ ದಾರಿ ಹಿಡಿದು ಹೋಗು' - ಈ ವಾಕ್ಯದ**
74 **ಅರ್ಥ "ಗುರುಸೇವೆಯಲ್ಲಿ ಸಮಯವನ್ನು ಕಳೆಯುವುದೇ - ದಾರಿ ಹಿಡಿದು ಹೋಗುವುದೆಂದು" ಅರ್ಥ.**

*ಇಲ್ಲಿ ನಾವು ಗಮನಿಸಬೇಕಾದ ಒಂದು ವಿಷಯವಿದೆ. ಸ್ವಾಮಿಯವರು ರೋಶಿ ರೆಡ್ಡಿಯವರಿಗೆ ಕೇವಲ ಸೂಚನೆ ನೀಡಿದರು. ಪರಸ್ಪರವಾಗಿ, ರೋಶಿ ರೆಡ್ಡಿಯವರು, ಅವಿದ್ಯಾವಂತನಾಗಿದ್ದರೂ, ಅವರ ಜನ್ಮತಃ ಬಂದ ಸಂಸ್ಕಾರಬಲದಿಂದ, ಸ್ವಾಮಿಯವರ ಸೂಚನೆಯನ್ನು ಗ್ರಹಿಸುವ ಸಾಮರ್ಥ್ಯವನ್ನು ಹೊಂದಿದ್ದರು.

ಇನ್ನೊಮ್ಮೆ, ಬೇರೊಬ್ಬ ಭಕ್ತ, "ಸ್ವಾಮಿ ನೆರವೇರಿಕೆಯನ್ನು (fulfillment) ಹೇಗೆ ಪಡೆಯುವುದು"? ಎಂದು ಕೇಳಿದಾಗ, ಸ್ವಾಮಿಯವರು, "ಏಮುಂದಯ್ಯಾ! ನೇರುಗಾ ತ್ರೋವ ಚೂಚುಕುಂಟೂ ಪೋಯೇದೇ ಗದಯ್ಯಾ! (ಏನಿದೆಯಪ್ಪಾ! ನೇರವಾಗಿ ದಾರಿ ನೋಡುತ್ತಾ ಹೋಗುವುದೇ ಅಲ್ಲವೇ?) ಎಂದರು - ನಮ್ಮ ಚಂಚಲ ಮನಸ್ಸನ್ನು ಒಂದೇ ದಿಕ್ಕಿನಲ್ಲಿ ಕೇಂದ್ರೀಕರಿಸಿ ನಿಯಂತ್ರಿಸುವ ಮೂಲಕ ನಾವು ನೆರವೇರಿಕೆಯನ್ನು ಹೊಂದಬಹುದು ಎಂದು ಅರ್ಥ.

ಮೇಲೆ ಹೇಳಿದ ಪ್ರಕಾರ, ರೋಶಿ ರೆಡ್ಡಿಯವರಿಗೆ, ಸ್ವಾಮಿಯವರ
75 (ಗುರು) ಮಾತಿನ ಮೇಲೆ ಅಚಲ ವಿಶ್ವಾಸವಿಟ್ಟು, ಗುರು ಸೇವೆಯನ್ನು ತಮ್ಮ ಜೀವನ ಧ್ಯೇಯವನ್ನಾಗಿ ಮಾಡಿಕೊಂಡಿದ್ದರಿಂದಲೇ, **ಅವರ ಅಂತ್ಯದೆಸೆಯಲ್ಲಿ ಹಾಸಿಗೆ ಹಿಡಿಯದೇ, ಇತರರಿಂದ ಸೇವೆ ಮಾಡಿಸಿಕೊಳ್ಳದ ಹಾಗೆ ಸ್ವಾಮಿಯವರು ಮಾಡಿದರು. ಇವರು ಪರಮಪದ ಹೊಂದಿದಾಗ, ಇವರ ಮುಖದಲ್ಲಿದ್ದ ಕಳೆ, ಶರೀರದಲ್ಲಿದ್ದ ಕಾಂತಿ**

ಯಿದ, ಇವರು ತಪ್ಪದೇ ಕೈವಲ್ಯವನ್ನು ಪಡೆದರೆಂದು ತಿಳಿಯುತ್ತದೆ. ಗುರು ಸೇವೆಯ ಪ್ರಭಾವ ಎಷ್ಟು ಅದ್ಭುತವಾದದ್ದು ಅಲ್ಲವೇ?

ಒಂದು ದಿನ ಸ್ವಾಮಿಯವರು, "ವೆಂಟನೇ ಮಜಿಲೀ ಮಾರ್ಚಾಲಿ ಪದಂಡಿ" (ತಕ್ಷಣವೇ ಜಾಗ ಬದಲಾಯಿಸಬೇಕು ಹೊರಡಿ) ಎಂದರು. ಸೇವಕರು, "ಈಗ ಅಲ್ಲ ಸಂಜೆ ಆಗಲಿ ಅಥವಾ ರಾತ್ರಿ ಊಟ ಆದ ಮೇಲಾಗಲಿ ಹೋಗೋಣ" ಎನ್ನುತ್ತಾ ಒಬ್ಬೊಬ್ಬರು ಒಂದೊಂದು ದಿಕ್ಕಿನಲ್ಲಿ ಹೋದರು. ಶ್ರೀ ಸ್ವಾಮಿಯವರ ಸಮೀಪದಲ್ಲಿದ್ದ ಬರಿಗೆಲ ನಾಗಯ್ಯನವರು, ಆ ಸೇವಕರಮಾತುಗಳನ್ನು ಕೇಳಿ ತಮ್ಮ ಮನಸ್ಸಿನಲ್ಲಿ "ಇವರುಗಳು ಸ್ವಾಮಿಯವರ ಹತ್ತಿರ ಬಂದದ್ದೇಕೇ? ಸ್ವಾಮಿಯವರ ಮಾತು ಕೇಳದೇ ಇವರುಗಳು ಒಬ್ಬಬ್ಬರು ಒಂದೊಂದು ದಿಕ್ಕಿನಲ್ಲಿ ಹೋಗುತ್ತಿದ್ದಾರೆ, ಆದರೆ, ಸ್ವಾಮಿಯವರು ಏಕೆ ಗದರಿಸುತ್ತಿಲ್ಲಾ" ಎಂದು ಯೋಚಿಸುತ್ತಿದ್ದರು.

ಮಹಾತ್ಮರು, "ಹೀಗೆ ಮಾಡಿ ಎಂದು ಸಲಹೆ ನೀಡುತ್ತಾರೆ ಹೊರತು" ನಿರ್ಬಂಧಿಸುವುದಿಲ್ಲ. ಮಹಾತ್ಮರ ಮಾತು ಕೇಳದಿದ್ದರೆ ನಮ್ಮ ಕರ್ಮಕ್ಕೆ ನಮ್ಮನ್ನು ಬಿಟ್ಟು ಬಿಡುತ್ತಾರೆ. **ನಾವುಗಳು ತಪ್ಪು ಮಾಡುತ್ತಾ "ಎಲ್ಲಾ ಸ್ವಾಮಿಯವರೇ**
76 ನೋಡಿಕೊಳ್ಳುತ್ತಾರೆ" ಎನ್ನುವುದು ಅವಿವೇಕ. ನಿಜಕ್ಕೂ ಎಲ್ಲಾ ಅವರೇ ನೋಡಿಕೊಳ್ಳುತ್ತಾರೆ. ಯಾರು ಏನೇ ಮಾಡಿದರೂ ಅದರ ಫಲವನ್ನು ನಿಷ್ಪಕ್ಷಪಾತಿಯಾಗಿ ಬೇಡವೆಂದರೂ ಕೊಡುತ್ತಾರೆ. ಒಳ್ಳೆಯ ಕರ್ಮಕ್ಕೆ ಒಳ್ಳೆಯ ಫಲ, ಕೆಟ್ಟ ಕರ್ಮಕ್ಕೆ ಕೆಟ್ಟ ಫಲ ಪ್ರಸಾದಿಸುತ್ತಾರೆ!

ನೆಲ್ಲೂರು ನಿವಾಸಿ ತಾಳ್ಳೂರಿ ಶ್ರೀನಿವಾಸುಲು ಅವರು ಮೇಳ ವಾದ್ಯವನ್ನು ನುಡಿಸುತ್ತಿದ್ದರು. ಸ್ವಾಮಿಯವರ ಮಹಾಸಮಾಧಿ ಹೊಂದಿದಾಗ, ಆಟೋ ರಿಕ್ಷಾಗೆ 25 ರೂ ಮಾತಾಡಿಕೊಂಡು ಮೇಳ ವಾದ್ಯವನ್ನು ನುಡಿಸಲು ಗೊಲಗಮೂಡಿಗೆ ಬಂದರು. ಆಟೋ ಡ್ರೈವರ್ ಆಶ್ರಮದವರಿಗೆ ಸುಳ್ಳು ಹೇಳಿ 5 ರೂ ಹೆಚ್ಚಾಗಿ ತೆಗೆದುಕೊಂಡನು. ಈ ವಿಚಾರ ಶ್ರೀನಿವಾಸುಲುಗೆ ತಿಳಿಯಿತು. ಅವರು ಹಿಂದಿರುಗುವ ಪ್ರಯಾಣದಲ್ಲಿ ಆಟೋರಿಕ್ಷಾ ಒಂದು ಫರ್ಲಾಂಗ್ ಹೋಗಿ, ವಿನಾಕಾರಣ ನಿಂತು ಹೋಯಿತು. ಎಷ್ಟು ಪ್ರಯತ್ನಮಾಡಿದರೂ ಅದು ಮುಂದೆ ಹೋಗಲಿಲ್ಲ. ಆಗ, ಶ್ರೀನಿವಾಸುಲು ಡ್ರೈವರೊಂದಿಗೆ, "ನೀನು ಸುಳ್ಳು ಹೇಳಿ ಶ್ರೀ ಸ್ವಾಮಿಯವರ ಹಣವನ್ನು 5 ರೂ ಹೆಚ್ಚಾಗಿ ತೆಗೆದುಕೊಂಡಿದ್ದರ ಫಲ ಇದು. ಇನ್ನು ಮುಂದೆ ಇಂತಹ ತಪ್ಪು ಮಾಡಲ್ಲ ಎಂದು ಕ್ಷಮಾಪಣೆಯನ್ನು ಕೇಳಿದರೆ ಆಟೋ ಹೊರಡತ್ತೆ" ಎಂದು ಹೇಳಿದರು. ಆಟೋ ಅವನು ಹಾಗೆ ಕ್ಷಮೆ ಕೇಳಿ ಕೆನ್ನೆಗೆ ಹಾಕಿಕೊಂಡಮೇಲೆ ಆಟೊ ಹೊರಡಿತು!

ಶ್ರೀ ಸ್ವಾಮಿಯವರು ತಮಗೆ ಸನ್ನಿಹಿತವಾಗಿ ಇದ್ದು ಸೇವೆ ಮಾಡುವ ಶ್ರದ್ಧಾವಂತ ಭಕ್ತರನ್ನು, ಸಾಧ್ಯವಾದಷ್ಟು, ಪ್ರಾಪಂಚಿಕ ಜನರೊಂದಿಗೆ ಬೆರೆಯುವುದು ಸೂಕ್ತವಲ್ಲ ಎಂದು ಎಚ್ಚರಿಕೆ ನೀಡುತ್ತಿದ್ದರು. ಉದಾಹರಣೆ:

ಒಬ್ಬ ಭಕ್ತ, ಸ್ವಲ್ಪಕಾಲ ಸ್ವಾಮಿಯವರನ್ನು ತುಂಬಾ ಸನ್ನಿಹಿತವಾಗಿ ಸೇವಿಸಿ ಸ್ವಲ್ಪ ಕಾಲದ ನಂತರ, ಅತಿ ಸಲಿಗೆಯ ಕಾರಣದಿಂದ ಅವರ ಮೇಲೆ ಶ್ರದ್ಧೆ ಕಡಿಮೆ ಆಗಿ,

ಅವಕಾಶ ಸಿಕ್ಕಾಗಲೆಲ್ಲ ಪ್ರಾಪಂಚಿಕ ಜನರೊಂದಿಗೆ ತಿರುಗಾಡಲು ಪ್ರಾರಂಭಿಸಿದನು. ಇದಕ್ಕೆ ಮೊದಲು, ಇವನು ಭೋಜನವನ್ನು ಕೊಟ್ಟರೆ ಮಾತ್ರ ಊಟ ಮಾಡುತ್ತಿದ್ದ ಸ್ವಾಮಿಯವರು, ಆಮೇಲೆ ಅವನು ಊಟ ಕೊಟ್ಟರೇ, "ಆಯನ ಮನುಷುಲ್ಲೋಕಿ ಪೋಯಾಡಯ್ಯೋ! ಆಯನೊದ್ದು ನುವ್ವು ಪೆಟ್ಟು" (ಆವನು ಪ್ರಾಪಂಚಿಕ ಮನುಷ್ಯರಜೊತೆ ಸೇರಿದ್ದಾನೆ, ಅವನು ಬೇಡ, ನೀನು ಕೊಡು" ಎಂದು ಬೇರೊಬ್ಬ ಸೇವಕನನ್ನು ಕೇಳಲು ಪ್ರಾರಂಭಿಸಿದರು. ಗುರವಯ್ಯನವರು ಸ್ವಾಮಿಯವರಿಗೆ ಬಹಳ ಸನ್ನಿಹಿತರಾದ ಸೇವಕರು. ಮೊದಲು, ಅವರಿಗೆ ಗೊತ್ತಿಲ್ಲದೆ, ಯಾವಾಗಲಾದರು ಸ್ವಾಮಿಯವರ ಸನ್ನಿಧಿಯನ್ನು ಬಿಟ್ಟು ದೂರವಿದ್ದಾಗ, ಸ್ವಾಮಿಯವರು, "ನುವ್ವು ಕೋಡಾ ಮನುಷುಲ್ಲೋಕಿ ಪೋತುಂಡ್ಲಾಯ್ಯಾ?" (ನೀನುಕೂಡಾ ಮನುಷ್ಯರ ಜೊತೆ ಹೋಗುತ್ತಿದ್ದೀಯಾ) ಎಂದು ಕಠಿಣವಾಗಿ ಕೇಳುತ್ತಿದ್ದರು.

"ಮನುಷ್ಯರ" ಸಾಂಗತ್ಯ ಮುಮುಕ್ಷುಗಳಿಗೆ ಸೂಕ್ತವಲ್ಲ ಎಂದು ಅವರ ಎಚ್ಚರಿಕೆ ಕೊಡುತ್ತಿದ್ದರು. ಮನುಷ್ಯ ಅರಿಷಡ್ವರ್ಗಯುಕ್ತ, ಮತ್ತು ವೈಯಕ್ತಿಕನಾದವನಾದ್ದರಿಂದ 77
ಅವನು ಪರಮ ಲೌಕಿಕ ಎಂದು ಸ್ವಾಮಿಯವರ ಭಾವನೆ.

ನಾವುಗಳು ದೀಕ್ಷೆಯ ಸಮಯ ಅಥವಾ ಇತರ ಸಮಯದಲ್ಲಾಗಲಿ ಯಾವ ರೀತಿಯಲ್ಲಿ ಶ್ರೀ ಸ್ವಾಮಿಯವರ ಸೇವೆ ಮಾಡಿದರೆ ಅವರು ಸಂತೃಪ್ತರಾಗುತ್ತಾರೆ ಎನ್ನುವುದನ್ನು ಗುರ್ತಿಸಬೇಕು. ಇತರ ಜನಗಳನ್ನು ದೂಷಿಸುವುದು, ಪ್ರಯೋಜನವಿಲ್ಲದ 78
ರಾಜಕೀಯವನ್ನು ಚರ್ಚಿಸುವುದು, ಎಲ್ಲೋ, ಯಾವಾಗಲೋ ನಡೆದ ವಿಷಯಗಳನ್ನು ಪದೇ ಪದೇ ಮನನ ಮಾಡುವುದು ಇತ್ಯಾದಿಗಳು ಶ್ರೀ ಸ್ವಾಮಿಯವರ ದೃಷ್ಟಿಯಲ್ಲಿ ನಮಗೆ ಅಂಟಿಕೊಳ್ಳುವ ಮಲಿನಗಳು. ಈ ಮಲಿನಗಳು ಅಂಟಿದ ಮೇಲೆ ಎಷ್ಟೇ ಬಾರಿ ಸ್ನಾನ ಮಾಡಿದರೂ ಆ ಮಲಿನ ನಮ್ಮುಗಳನ್ನ ಬಿಡುವುದಿಲ್ಲ ಎಂದು ಶ್ರೀ ಸ್ವಾಮಿಯವರು ತಮ್ಮ ಆಚರಣೆಯ ಮೂಲಕ ತೋರಿಸಿ ಬೋಧಿಸಿದರು.

ಪೆನುಬರ್ತಿಯಲ್ಲಿ ವಾಸಿಸುವ ಮೋಪೂರು ದಶಯ್ಯ: "ಸ್ವಾಮೀ, ನೀವು ಕಾಡು ಮತ್ತು ಬೆಟ್ಟಗಳಲ್ಲಿ ತಿರುಗುತ್ತಿದ್ದರೆ, ನಾವು ನಿಮ್ಮನು ನೋಡುವುದು ಹೇಗೆ?" ಎಂದು ಕೇಳಿದರು. ಆಗ ಸ್ವಾಮಿಯವರು, "ಅಬ್ಬೇ ಅದೇಮುಂದಯ್ಯಾ? ಕೊಂಡಮೀದ ಎಕ್ಕಿ ಬೋಟುರಾಯಿ ಮೀದ ಅದ್ದಂಪೆಟ್ಟಿ, ನೇರುಗಾ ಚೂಸ್ತೇ ಮೀಕು ಮಾಕು ದೂರಂ ಬೆತ್ತೆಡೇ ಗದಯ್ಯಾ?" (ಅಬ್ಬಾ ಅದರಲ್ಲೇನಿದೆ ಅಯ್ಯಾ! ಬೆಟ್ಟಹತ್ತಿ ಒಂದು ಕಲ್ಲಿನ ಮೇಲೆ ಕನ್ನಡಿ ಇಟ್ಟು ನೇರವಾಗಿ ನೋಡಿದರೇ ನಿಮ್ಮ ಮತ್ತು ನಮ್ಮ ನಡುವಿನ ಅಂತರವು ಕೇವಲ ಒಂದು ಕೈ-ಅಗಲ ಅಲ್ಲವೇನಪ್ಪಾ?) ಎಂದರು.

ಸ್ವಾಮಿಯವರ ಮಾತಿನಲ್ಲಿ ತುಂಬಾ ಆಳವಾದ ಅರ್ಥ ಅಡಗಿದೆ. ಇದನ್ನು ಕೆಳಗೆ ವಿಶ್ಲೇಷಿಸಲಾಗಿದೆ. "ಬೆಟ್ಟ" ಅಂದರೆ ಶರೀರದ ಮೇಲಿನ ಭಾಗವಾದ "ಮೆದುಳು" (ಬೋಟುರಾಯಿ) ಕಲ್ಲಿನ ಮೇಲೆ ಕನ್ನಡಿ ಇಟ್ಟು ನೇರವಾಗಿ ನೋಡುವುದು ಎಂದರೆ, ಲೌಕಿಕ ವ್ಯವಹಾರದಲ್ಲಿ ಸಿಕ್ಕಿಕೊಂಡು ಒದ್ದಾಡುವ ಮನಸ್ಸನ್ನು, ಕನ್ನಡಿಯಂತೆ, ಶುಭ್ರವಾಗಿ, ನಿಶ್ಚಲವಾಗಿ ನಿಲ್ಲಿಸಿದರೆ, ಸ್ವಾಮಿಯವರು ಎಲ್ಲಿದ್ದರೂ ನಮ್ಮ ಮನೋ ನೇತ್ರಗಳಿಂದ

ನೋಡ ಬಹುದೆಂದು ಸ್ವಾಮಿಯವರ ಭಾವನೆ. ನಮ್ಮ ಶರೀರದಲ್ಲಿ ನಮ್ಮ ಮೆದುಳನ್ನು "ಬೋಟು ರಾಯಿ(ಕಲ್ಲಿನ)" ಜೊತೆ ಹೋಲಿಸಿದ್ದಾರೆ. ಅದರಮೇಲೆ ಸಹಸ್ರಾರ ಎನ್ನುವ ಯೋಗ ಕೇಂದ್ರ ಇರುತ್ತದೆ, **ಅದರಲ್ಲೇ ಗುರುಚರಣಗಳಿರುತ್ತವೆ ಎನ್ನುವುದು ಶಾಸ್ತ್ರ. ಅದಕ್ಕೇ ಸ್ವಾಮಿಯವರು,"ಮೀಕು ಮಾಕು ದೂರಂ ಬೆತ್ತೆಡೇ ಗದಯ್ಯಾ" (ನಿಮ್ಮ ಮತ್ತು ನಮ್ಮ ನಡುವಿನ ಅಂತರವು ಕೇವಲ ಒಂದು ಕೈ-ಅಗಲ ಅಲ್ಲವೇನಪ್ಪಾ) ಎಂದರು. ಶ್ರೀ**
79 **ಸ್ವಾಮಿಯವರು ತಾವು ಸದ್ಗುರು ಎಂದು ತಿಳಿಸಿದಂತಿದೆ.**

ಇನ್ನೊಮ್ಮೆ ಸ್ವಾಮಿಯವರು **"ಮೀರು ಮಮ್ಮುಲನು ಚೂಸ್ತೇ ಮೇಮು ಮಿಮ್ಮುಲನು ಚೂಸ್ತೂಂಳ್ಳಾಯ್ಯಾ".** (ನೀವುಗಳು ನಮ್ಮನ್ನ ನೋಡಿದರೆ ನಾವುನಿಮ್ಮನ್ನ
80 ನೋಡುತ್ತೀವಲ್ಲವೇ?) ಸದ್ಗುರುಗಳನ್ನು ಭಕ್ತರು ಎಷ್ಟು ಶ್ರದ್ಧಾ ಭಕ್ತಿಗಳಿಂದ ನೋಡುತ್ತಾರೆಯೋ, ಅಷ್ಟರ ಮಟ್ಟಿಗೆ ಸದ್ಗುರುಗಳ ಕೃಪೆ ಭಕ್ತರಿಗೆ ಲಭಿಸುತ್ತದೆ. ಶ್ರೀ ಸಾಯಿ ಬಾಬಾ,"ನೀನು ನಿನ್ನ ದೃಷ್ಟಿ ನನ್ನ ಮೇಲೆ ನಿಲ್ಲಿಸು, ನಾನು ನನ್ನ ದೃಷ್ಟಿ ನಿನ್ನ ಮೇಲೆ ನಿಲ್ಲಿಸುತ್ತೇನೆ" ಅಂದರು.

ಒಮ್ಮೆ ಸ್ವಾಮಿಯವರು ತಮ್ಮ ಸೇವಕರನ್ನು ಉಲ್ಲೇಖಿಸುತ್ತಾ, "ಮೀರು ಮಾಲೋಳ್ಳು ನೀನು ಮಾದಿಗವಾಣ್ಣಿ" (ನೀವುಗಳು ಹೊಲೆಯರು, ನಾನು ಮಾದಿಗ) ಎಂದರು.

ಶ್ರೀ ಅಕ್ಕಲಕೋಟೆ ಸ್ವಾಮಿಯವರು ಕೂಡ ಒಂದು ಕಡೆ ತಾವು ಕಾಶ್ಯಪ ಗೋತ್ರಕ್ಕೆ ಸೇರಿದ ಯಜುರ್ವೇದ ಬ್ರಾಹ್ಮಣರೆಂದು ಒಬ್ಬರೊಡನೆ ಹೇಳಿ, ಇನ್ನೊಬ್ಬರೊಡನೆ ತಾವು ಹೊಲೆಯರೆಂದು, ತಮ್ಮ ವೃತ್ತಿ ಚರ್ಮೋದ್ಯಮ ಎಂದು ಹೇಳಿದ್ದು ಅವರ ಚರಿತ್ರೆ ತಿಳಿಸುತ್ತದೆ. ಇಂದಿನ ದಿನಗಳಲ್ಲಿ ಪ್ರಜೆಗಳು ಕುರುಡಾಗಿ ಜಾತಿ ಪದ್ಧತಿ ಅನುಸರಿಸುತ್ತಿರುವುದು ಅರ್ಥಹೀನ ಎಂಬುದನ್ನು ತಿಳಿಸುವುದು ಮಹನೀಯರ ಮುಖ್ಯ ಲಕ್ಷ್ಯ.

ಒಮ್ಮೆ ಸ್ವಾಮಿಯವರು ಗುರುಗಳ ಆಜ್ಞೆಯನ್ನು ಪಾಲಿಸದ, ಸಾಧನೆ ಮಾಡದೆ, ಹೊಡೆದಾಟ ಮಾಡುತ್ತಿರುವ ತನ್ನ ಸೇವಕರನ್ನು ಉಲ್ಲೇಖಿಸುತ್ತಾ ಹೀಗೆ ಹೇಳಿದರು,"ಇವರು ನಿರ್ಭಾಗ್ಯರು, ವೇಶ್ಯೆಯರು, ಸೋಮಾರಿಗಳು. *ಬರೀ ಸಾಲ ಮಾಡಿ, ಬಾಕೀ ಹೆಚ್ಚು ಮಾಡಿಕೊಳ್ಳುತ್ತಿದ್ದಾರೆ, ಅರ್ಧಆಣೆಯಾದರೂ ಸಂ ಪಾದಿಸುತ್ತಿದ್ದಾರಾ*?"
81 **ಸಕಲ ಸೃಷ್ಟಿಗೆ, ಪ್ರತೀ ಜೀವಿಗೆ ಆಧಾರ ಮತ್ತು ಆತ್ಮಸ್ವರೂಪರಾದ ಸದ್ಗುರುವನ್ನು ಮರೆತು ಇತರ ಭಾವನೆಗಳಿಗೆ ದಾರಿ ಮಾಡಿಕೊಟ್ಟರೆ, ಅದು ಪಾತಿವ್ರತ್ಯ ಭಂಗ ಮಾಡಿದ ಸಮಾನ ಎಂದು ಸ್ವಾಮಿಯವರು ಸೂಚಿಸಿದರು.**

*ಸ್ವಾಮಿಯವರು ಹೇಳಿದ ಈ ವಾಕ್ಯ "ಬರೀ ಸಾಲ ಮಾಡಿ, ಬಾಕೀ ಹೆಚ್ಚು ಮಾಡಿಕೊಳ್ಳುತ್ತಿದ್ದಾರೆ, ಅರ್ಧ ಆಣೆಯಾದರು ಸಂಪಾದಿಸುತ್ತಿದ್ದಾರಾ?" ವಿವರವಾಗಿ ನಾವು ವಿಶ್ಲೇಷಿಸಿ ನೋಡಿದರೆ. ಬರೀ ಸಾಲ ಮಾಡಿ ಬಾಕಿ ಹೆಚ್ಚು ಮಾಡಿಕೊಳ್ಳುತ್ತಿದ್ದಾರೆ ಎಂದರೆ ಇವರುಗಳು ತಮ್ಮ ಕೆಟ್ಟ ಕರ್ಮಗಳನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದಾರೆ, ಈ ನಕಾರಾತ್ಮಕ ಕರ್ಮಗಳಿಂದ ಉಪಶಮನ ಹೊಂದುವುದಕ್ಕೆ ಮುಂದೆ ಹಲವಾರು ಜನ್ಮಗಳೆತ್ತ

ಬೇಕಾಗುತ್ತದೆ. ಅರ್ಧ ಆಣೆ ಅಂದರೆ, ಅರ್ಧ ಆಣೆಯಷ್ಟು ಪುಣ್ಯ ಸಂಪಾದಿಸುತ್ತಿಲ್ಲವೆಂದು ನಾವು ಅರ್ಥ ಮಾಡಿಕೊಳ್ಳಬೇಕು.*

ಒಮ್ಮೆ ಕಳ್ಳತನದ ಬಗ್ಗೆ ಪ್ರಸ್ತಾಪನ ಬಂದಾಗ ಶ್ರೀ ಸ್ವಾಮಿಯವರು, "ಪಾವಲಾಕು ಪದಿರೂಪಾಯಲು ಪೋತುಂಡ್ಲಾಯ್ಯಾ" (4 ಆಣೆಗೆ 10 ರೂಪಾಯಿಗಳು ಹೋಗುತ್ತಿಲ್ಲವೇ?) ಎಂದರು - ಒಂದಕ್ಕೆ ನಲವತ್ತರಷ್ಟು ನಷ್ಟ ಹೋಗುತ್ತಿರುವುದು ಎಂದು ಅರ್ಥ. ಅದೇ " **ದೇವರಿಗೆ ಭಕ್ತಿಯಿಂದ ಸಮರ್ಪಿಸುವ ನಾಲ್ಕಾಣೆಗೆ ಇನ್ನೆಷ್ಟು ಒಳ್ಳೆಯದು ಸಂಭವಿಸುತ್ತದೆ ಎಂದು ನಾವೇ ಊಹಿಸಬೊಹುದು.** ಸ್ವಾಮಿಯವರಿಗೆ ಸಮರ್ಪಿಸಿದ ಪ್ರತಿ ಸಣ್ಣ ಸೇವೆಗೂ ಅನಂತವಾದ ಪುಣ್ಯ ಫಲವನ್ನು ಪ್ರಸಾದಿಸುತ್ತಾರೆಂದು ಈ ಕೆಳಗಿನ ಘಟನೆಯಿಂದ ತಿಳಿಯುತ್ತದೆ. 82

ಒಬ್ಬ ರೈತ ತಾನು ಹೊಸದಾಗಿ ಕೊಂಡ ಎತ್ತಿಗೆ ಒಂದು ನೊಗ ಕಟ್ಟಿ ಹೊಲದ ಉಳುಮೆ ಮಾಡಲು ಕಲಿಸುತ್ತಿದ್ದ. ಆದರೆ ಅದು ಹೆದರಿ ಬಹಳ ತೊಂದರೆ ಕೊಡುತ್ತಿತ್ತು. ಶ್ರೀ ಸ್ವಾಮಿಯವರು ಆ ಮಾರ್ಗದಲ್ಲಿ ಹೋಗುತ್ತಾ, "ಅಯ್ಯಾ! ಬಂಡಿ ಕಟ್ಟಿ ನನ್ನಾಯೇರು ದಾಟಿಂಚು" (ಅಪ್ಪಾ! ಗಾಡಿ ಕಟ್ಟಿ ನನ್ನನ್ನು ಆ ಕೆರೆ ದಾಟಿಸು) ಎಂದು ಕೇಳಿದರು. ಆಗ ಆ ರೈತ, "ಸ್ವಾಮೀ ಎತ್ತು ಈಗಷ್ಟೇ ಬಂದಿರುವುದರಿಂದ ಇನ್ನೂ ಸಹಕರಿಸುತ್ತಿಲ್ಲ, ನನಗೆ ಇದು ಬಿಟ್ಟರೇ ಬೇರೆ ಎತ್ತು ಇಲ್ಲ" ಎಂದು ಹೇಳಿದ. "ಅದಿ ಬಾಗಾ ಲಾಗುತುಂದಯ್ಯಾ! ನೀಕೆಂದುಕು? ಬಂಡಿ ಕಟ್ಟು ಚೂಸ್ತಾಂ" (ಅದು ಚೆನ್ನಾಗಿ ಎಳೆಯುತ್ತಯ್ಯಾ! ನಿನಗೇಕೆ? ಗಾಡಿ ಕಟ್ಟು ನೋಡೋಣ) ಎಂದರು ಸ್ವಾಮಿಯವರು. ಸ್ವಾಮಿಯವರ ಮೇಲೆ ಭಾರಹಾಕಿ ಗಾಡಿಗೆ ಕಟ್ಟಿದರೆ, ಮೊಣಕಾಲುದ್ದ ಇದ್ದ ಕೆಸರಿನಲ್ಲಿ, ಏನೂ ಕಷ್ಟ ಪಡದೇ, ಬಹಳ ಸುಲಭವಾಗಿ ಗಾಡಿಯನ್ನು ಎಳೆದು ಕೊಂಡು ಹೋಗಿದ್ದಲ್ಲದೆ, ತುಂಬಾದಿನದಿಂದ ಅನುಭವವಿರುವ ಎತ್ತಿನಹಾಗೆ ಊಳಿಗೆಯ ಕೆಲಸವನ್ನೆಲ್ಲಾ ಮಾಡಿತು. **ಸ್ವಾಮಿಯವರ ಕಾರ್ಯಕ್ಕಾಗಿ ಶ್ರಮ ಪಟ್ಟ ರೈತನಿಗೆ ಶ್ರಮ, ಮತ್ತು ಆ ಎತ್ತಿಗೆ ಏಟುಗಳು ತಿಪ್ಪಿದವು. ಆ ಸಣ್ಣ ಸೇವೆಗೆ ಆ ರೈತನನ್ನು ಅವನ ಜೀವನ ಪೂರ್ತಿ ಕಾಪಾಡುತ್ತಾರೆ ಸ್ವಾಮಿಯವರು.** 83

ಮಂತ್ರೋಪದೇಶವನ್ನು ಕೋರಿದ ಒಬ್ಬ ಭಕ್ತನಿಗೆ ಶ್ರೀ ಸ್ವಾಮಿಯವರು "ಮಂತ್ರಮೆಕ್ಕಡುಂದಿ, ತಂತ್ರಮೆಕ್ಕಡುಂದಯ್ಯಾ? ಚೂಚುಕುಂಟೂ ಪೋಯೇದೇಗದಾ?" (ಮಂತ್ರವೆಲ್ಲಿದೆ? ತಂತ್ರವೆಲ್ಲಿದೆ? ನೋಡಿಕೊಳ್ಳುತ್ತಾ ಹೋಗುವುದೇ ಅಲ್ಲವೇ) ಎಂದರು. ಜ್ಞಾನ ಪೂರ್ಣರಾದ ಸದ್ಗುರುಗಳು ಯಾರೇ ಆಗಲಿ ಮಂತ್ರೋಪದೇಶ ಮಾಡಲಿಲ್ಲ. ಇದಕ್ಕೆ ಸಾಯಿ ಬಾಬಾ ಮತ್ತು ರಮಣ ಮಹರ್ಷಿಗಳೇ ಉದಾಹರಣೆ. ಏಕೆಂದರೆ, **ನಿರಂತರವಾದ ಸದ್ಗುರು ಮೇಲಿನ ಭಕ್ತಿ ಸಕಲ ಸಾಧನೆಗಳಿಗೂ ಅತೀತವಾದದ್ದು, ತಿರುಗಿಲ್ಲದ್ದು.** 84

ವಸದ್ದಿ ಚೇಸುಕುಂಟೇ ರೆಂಡಕ್ಷರಾಲು ಚಾಲಯ್ಯಾ" ("ವಸತಿ" ಮಾಡಿಕೊಂಡರೆ ಎರಡು ಅಕ್ಷರ ಸಾಕು). "ವಸದ್ದಿ (ವಸತಿ) ಮಾಡುವುದು ಎಂದರೆ ಸಾಧನೆಯ ಮೂಲಕ ನಮ್ಮಲ್ಲಿರುವ ರಾಗದ್ವೇಷಗಳನ್ನು, ರಾಜಸ, ತಾಮಸ ಗುಣಗಳನ್ನು, ನಿರ್ಮೂಲಿಸಿಕೊಂಡು, ದೈವ ಸಂಪದೆಯಲ್ಲಿ ನಾವಿದ್ದರೆ, ಆಗ ಯಾವುದೇ ಮಂತ್ರದಿಂದಾಗಲಿ ನೆರವೇರಿಕೆಯನ್ನು ಸಾಧಿಸಬಹುದು ಎಂದು ಸ್ವಾಮಿಯವರ ಭವನೆ. 85

ಶ್ರೀ ಸ್ವಾಮಿಯವರು ಸಮಾಧಿ ಹೊಂದುವುದಕ್ಕೆ 6 ತಿಂಗಳ ಮುಂಚೆಯಿಂದ, "ಸತ್ಯಂ, ಧರ್ಮಂ, ಸಂಪನ್ನತ್ವಂ, ಸಾಧಾರಣತ್ವಂ, ಸದ್ಗುರುಸೇವ" (ಸತ್ಯ, ಧರ್ಮ, ಸಂಪನ್ನತ್ವ (ದೈವಿಕ ಗುಣಗಳ ಸಂಪತ್ತು), ಬಹಳ ಸರಳವಾಗಿ ಇರುವುದು) ಎಂದು ಹಲವು ದಿನಗಳು ಜೋರಾಗಿ ಚೀರುತ್ತಿದ್ದರು. ಆದ್ದರಿಂದ, ಇದು ಅವರ

86 **ಸಂಪ್ರದಾಯವೆಂದೂ, ಅವರ ಕೊನೆಯ ಉಪದೇಶವೆಂದು ನಾವು ಗುರ್ತಿಸಬೇಕು.**

ಒಮ್ಮೆ "ಅಯ್ಯಾ ಈ ಕನಬಡೇದಂತಾ ನಿಜಮನುಕುಂಟುನ್ನಾರಾ?" (ಅಯ್ಯಾ! ಇಲ್ಲಿ ಕಾಣುವುದೆಲ್ಲವೂ ನಿಜವೆಂದುಕೊಳ್ಳುತ್ತಿದ್ದೀರಾ?) ಎಂದರು. ನಾಮರೂಪಗಳ ಭೇದಭಾವಗಳನ್ನು ಬಿಟ್ಟು, ಎಲ್ಲದರಲ್ಲೂ ಇರುವ ಭಗವತ್ ತತ್ತ್ವವನ್ನು ಗುರ್ತಿಸಿ ಎಂದು

87 **ಸ್ವಾಮಿಯವರು ಎಚ್ಚರಿಸುತ್ತಿದ್ದರು.**

ಒಮ್ಮೆ ನೆಲ್ಲೂರಿನ ರೆಡ್ಡಿ ಎನ್ನುವರೊಬ್ಬರು ಅನಾರೋಗ್ಯದಿಂದ ಬಳಲುತ್ತಾ ಆಶ್ರಮಕ್ಕೆ ಬಂದರು. ಅವರು ವೈದ್ಯರಿಗೆ ಹಣವನ್ನು ಕೊಟ್ಟು ಕಳೆದುಕೊಂಡರೇ ಹೊರತು ಅವರ ರೋಗವನ್ನು ವೈದ್ಯರು ಗುಣಪಡಿಸಲಾಗಲಿಲ್ಲ. ಶ್ರೀ ಸ್ವಾಮಿಯವರು ಏನೂ ಮಾತನಾಡಲಿಲ್ಲ. ಆ ರೋಗಿ, ಸೇವಕರೊಡನೆ, "ನನ್ನ ರೋಗ ಗುಣಪಡಿಸಿದರೆ, ತುಂಬಾ ಹಣ ಕೊಡುತ್ತೇನೆ" ಎಂದರು. ಆಗ ಸ್ವಾಮಿಯವರು, **"ಏಮಿಟಯ್ಯಾ ಆಯನನೇದಿ? ಅಂದರಿಕೀ ಮನಮಿಸ್ತುಂಟೇ ಆಯನೇಂದಿ ಮನಕಿಚ್ಚೇದಿ?" (ಏನಯ್ಯಾ, ಆತ ಹೇಳುತ್ತಿರುವುದು? ಎಲ್ಲರಿಗೂ ನಾವು ಕೊಡುತ್ತಿದ್ದರೇ, ಆತ ನಮಗೇನು ಕೊಡುತ್ತಾರೆ?) ಎಂದರು. ನಿಜಕ್ಕೂ ಎಲ್ಲರಿಗೂ ಕೊಡುವುದು ಆ ಭಗವಂತನೇ ಅಲ್ಲವೇ!**

88 ಒಮ್ಮೆ ಸ್ವಾಮಿಯವರು ಹೀಗೆಂದರು, "ಆರು ನಾಗಳ್ಳು ಗೊಱ್ಱುಕಟ್ಟಿ ನೇನೂ, ಜಯರಾಮರಾಜು ದುನ್ನುತುನ್ನಾಮು. ಜಯರಾಮರಾಜು ಗೊಱ್ಱು ಉದಯಗಿರಿ ಕೊಂಡಕು ತಗಿಲಿ ಆಗಿ ಪೋಯಿಂದಿ. ನಾ ಗೊಱ್ಱು ಮಾತ್ರಂ ಆಗಕುಂಡಾ ಸಾಗಿಂದಿ. ಉತ್ತರ ಸಮುದ್ರಂ ನೀಳ್ಳು ದಕ್ಷಿಣ ಸಮುದ್ರಾನಿಕಿ ಪಾರಾಯಿ." (ಆರು ನೇಗಿಲು, ಕೊಱಡು ಕಟ್ಟಿ ನಾನು ಮತ್ತು ಜಯರಾಮರಾಜು ಹೊಲ ಉಳುತ್ತಿದ್ದೆವು. ಜಯರಾಮರಾಜುವಿನ ಕೊಱಡು ಉದಯಗಿರಿಯ ಬೆಟ್ಟಕ್ಕೆ ತಗುಲಿ, ನಿಂತುಹೋಯಿತು. ನನ್ನ ಕೊಱಡು ಮಾತ್ರ ನಿಲ್ಲದೇ ಸಾಗಿತು. ಉತ್ತರ ಸಮುದ್ರದ ನೀರು ದಕ್ಷಿಣ ಸಮುದ್ರಕ್ಕೆ ಪ್ರವಹಿಸಿತು). ಆರು ನೇಗಿಲ ಕೆಲಸ ಎಂದರೆ ನಮ್ಮ ಅರಿಷಡ್ವರ್ಗಗಳನ್ನು ತಡೆಯುವ ಸಾಧನೆ. ಸಮುದ್ರಗಳ ನೀರು ಒಂದಾಗುವುದೆಂದರೆ, ಪರಬ್ರಹ್ಮದೊಂದಿಗೆ ಏಕತ್ವವನ್ನು ಅನುಭವಿಸುವುದು.

89 **ಜಯರಾಮರಜು ತನ್ನ ಸಾಧನೆಯನ್ನು ನಿಲ್ಲಿಸಿ ಲೌಕಿಕ ಜೀವನದಲ್ಲಿ ಸಿಕ್ಕಿಕೊಂಡಿರುವುದೇ ಆತನ " ಕೊಱಡು ನಿಂತು ಹೋಯಿತು" ಎನ್ನುವ ಭಾವನೆ ಇರಬಹುದು.**

ಶ್ರೀ ಸ್ವಾಮಿಯವರು, "ಶ್ರದ್ಧಾ ಭಕ್ತಿಯುಳ್ಳವರು, ಇಲ್ಲವಾದವರು ಎನ್ನುವ ಭೇದ

90 **ತೋರಿಸುತ್ತಿದ್ದರಾಗಲಿ, ಧನಿಕರು - ಬಡವರು ಎಂದು ಭೇದ ಎಂದಿಗೂ ತೋರಿಸುತ್ತಿರಲಿಲ್ಲ. ಭಕ್ತಿ ಇದ್ದ ಜಾಗಕ್ಕೆ ತಮ್ಮನ್ನು ಆಹ್ವಾನಿಸದಿದ್ದರೂ, ಬಡವರಾದರೂ ಅವರ ಹತ್ತಿರ ಹೋಗುತ್ತಿದ್ದರು. ಹಣದ ವ್ಯಾಮೋಹಿಗಳು, ಭಕ್ತಿ ಇಲ್ಲದೇ ಬಂಗಾರ ಕೊಡುತ್ತೇವೆ ಎಂದರೂ ಶ್ರೀ ಸ್ವಾಮಿಯವರು ಆ ಜಾಗಕ್ಕೆ ಹೋಗುತ್ತಿರಲಿಲ್ಲ.**

ಶ್ರೀ ಸ್ವಾಮಿಯವರ ಸೇವೆ ನಿರಂತರ ಮಾಡುತ್ತಿದ್ದ ಶಿಷ್ಯರು, ತಾವು ಗಮನಿಸಿದ ವಿಶೇಷಗಳನ್ನು ಹೀಗೆ ತಿಳಿಸಿದರು.

ಶ್ರೀ ಸ್ವಾಮಿಯವರು ತಮಗೆ ಸೇವೆ ಮಾಡುತ್ತಿದ್ದ ಸೇವಕರಲ್ಲಿ ಯಾವ ದುರಭಿಪ್ರಾಯವಿದ್ದರೂ, ಬೇರೆ ಚಿಂತನೆಗಳು, ಇತರರನ್ನು ನಿಂದಿಸುವುದು, ಕೋಪ ಇದ್ದರೂ ಅವರ ಸೇವೆಯನ್ನು ಅಂಗೀಕರಿಸುತ್ತಿರಲಿಲ್ಲ. ಪ್ರತಿದಿನ ಹೊಗೆಸೊಪ್ಪು ಅವರುಗಳ ಹತ್ತಿರ ತೆಗೆದುಕೊಳ್ಳುತ್ತಿದ್ದವರು, ಅಂತಹ ಸಮಯಗಳಲ್ಲಿ, ಬೇರೆಯವರ ಹತ್ತಿರ ಕೇಳಿ ತೆಗೆದುಕೊಳ್ಳುತ್ತಿದ್ದರು. 91

ಪ್ರತಿದಿನವೂ ಸ್ವಾಮಿಯವರಿಗೆ ಗಂಜಿ ಕೊಡುತ್ತಿದ್ದ ಭಕ್ತ ಕೆರೆಗೆ ಸ್ನಾನವನ್ನು ಮಾಡಲು ಹೋಗಿ, ಸಹ ಭಕ್ತರ ವಿಷಯವಾಗಿ ದುರ್ವಿಮರ್ಷೆ ಕೇಳಿ ಬಂದನು. ಸ್ವಾಮಿಯವರಿಗೆ ಗಂಜಿ ಕೊಡಲು ಹೋದಾಗ, **"ಚೆಪ್ಪುಡು ಮಾಟಲು ವಿನಿ ವಚ್ಚಾವು. ನೀವು ಪೋಸೇ ಜಾವ ವದ್ದು" (ಹೇಳಿಕೆಯ ಮಾತು ಕೇಳಿ ಬಂದಿದ್ದೀಯ. ನೀನು ಕೊಡುವ ಗಂಜಿ ಬೇಡ) ಎಂದು ಸ್ವಾಮಿಯವರು ನಿರಾಕರಿಸಿದರು. ಶ್ರೀ ಸ್ವಾಮಿಯವರ ಸಮಾಧಿ ದರ್ಶನ ಮಾಡಲು ಬಂದು ಅವರ ಸೇವೆ ಮಾಡುವ ಭಕ್ತರು ಹೇಗೆ ಸೇವೆ ಮಾಡಬೇಕು ಎಂಬುದನ್ನು ಇಲ್ಲಿ ಗಮನಿಸಬೇಕೆಂದು ಪ್ರಾರ್ಥನೆ.** 92

1975 ವರ್ಷದ ವರಗೆ, ಯಾವತ್ತೂ ಭಕ್ತರು ಸಮರ್ಪಿಸಿದ ಹೊಸ ಬಟ್ಟೆಗಳನ್ನು ಸ್ವಾಮಿಯವರು ಸ್ವೀಕರಿಸುತ್ತಿರಲಿಲ್ಲ. ಹಳೆಯ ಬಟ್ಟೆಗಳು, ಹರಿದ ಹಳೆಯ ಹೊದಿಕೆಗಳು ಮಾತ್ರ ಸ್ವೀಕರಿಸುತ್ತಿದ್ದರು. ಅವರ ಸೇವಕರು ಸ್ವೀಕರಿಸಿದರೂ ಒಪ್ಪಿಕೊಳ್ಳುತ್ತಿರಲಿಲ್ಲ. ಒಮ್ಮೆ ಒಬ್ಬ ಶ್ರೀಮಂತನು ದುಬಾರಿ ಹೊದಿಕೆಯನ್ನು ಬಲವಂತವಾಗಿ ಸ್ವಾಮಿಯವರ ಬಳಿ ಇಟ್ಟು ಹೊರಟುಹೋದನು. ಸ್ವಾಮಿಯವರ ಸೇವಕರು ಅದನ್ನು ತೆಗೆದಿಟ್ಟುಕೊಂಡರು. ಸಿದ್ದಲಯ್ಯ ಬೆಟ್ಟದ ಹತ್ತಿರ ಸ್ವಾಮಿಯವರು ತಮಗೇನೂ ತಿಳಿಯವದರಂತೆ "ಅಯ್ಯಾ! ಒಕ ಕ್ರೊತ್ತ ದುಪ್ಪಟಿ ಕಾವಾಲಿ" (ಅಯ್ಯಾ ಒಂದು ಹೊಸ ಹೊದಿಕೆ ಬೇಕು) ಎಂದು ಕೇಳಿದರು. **ಸೇವಕರು, ಆ ಹೊಸಾ ಹೊದಿಕೆ ತಂದು ಕೊಟ್ಟರೆ, ಅದನ್ನು ಹರಿದು ತುಂಡು ಮಾಡುವ ವರೆಗೂ ಒಪ್ಪಲಿಲ್ಲ. "ಅಯ್ಯಾ! ಈ ಪೇಲಿಕಲು ಜಬ್ಬುಲವಾಳ್ಳಕಿವ್ವಂಡಿ ಜಬ್ಬುಲು ಪೋತಾಯಿ" (ಅಯ್ಯಾ! ಈ ತುಂಡುಗಳನ್ನು ರೋಗಿಗಳಿಗೆ ಕೊಡಿ ರೋಗ ಗುಣವಾಗುತ್ತದೆ" ಎಂದರು.** 93

ಗೋಣಿ ಚೀಲ, ತಾಟಿ ಎಲೆಗಳ ದೊನ್ನೆಗಳು, ತಾಟಿ ಎಲೆಯ ಚಾಪೆಗಳು, ಮಣ್ಣಿನ ಪಾತ್ರೆಗಳು, ಅಲ್ಯುಮಿನಿಯಮ್ ಡಬರಿಗಳು ಮಾತ್ರ ಸ್ವಾಮಿಯವರು ಉಪಯೋಗಿಸುತ್ತಿದ್ದರು. ಯಾವುದೇ ಬೆಲೆಬಾಳುವ ವಸ್ತುಗಳನ್ನು ಇಡಲು ಅವರು ಒಪ್ಪಿಕೊಳ್ಳುತ್ತಿರಲಿಲ್ಲ. ಒಮ್ಮೆ ಒಬ್ಬ ಶ್ರೀಮಂತನು, ಸ್ವಾಮಿಯ ಬಳಿ ಬಹಳ ಅಮೂಲ್ಯವಾದ ಒಂದು ಚೀಲವನ್ನು ಸ್ವಾಮಿಯವರು ಎಷ್ಟೇ ನಿರಾಕರಿಸಿದರೂ ಬಿಟ್ಟು ಹೊರಟುಹೋದನು. **ಆ ಚೀಲದಲ್ಲಿ ಉಳಿದ ಸೇವಕರು, ತಮ್ಮ ಬಟ್ಟೆಗಳನ್ನು ಇಟ್ಟುಕೊಂಡರು. ಅರ್ಧರಾತ್ರಿಯ ವೇಳೆ, ಎಲ್ಲರೂ ಮಲಗಿದ್ದ ಸಮಯದಲ್ಲಿ,** 94

ಸ್ವಾಮಿಯವರು, ತಿರುಗಾಡುತ್ತಿದ್ದಾಗ, ಆ ಹೊಸ ಚೀಲವನ್ನು ಪವಿತ್ರ ಧುನಿಯಲ್ಲಿ ಹಾಕಿಬಿಟ್ಟರು. (ವೈರಾಗ್ಯ)

ಒಮ್ಮೆ ಜೋರಾಗಿ ಮಳೆ ಬರುತ್ತಿತ್ತು. ಶ್ರೀ ಸ್ವಾಮಿಯವರು ಮರದ ಕೆಳಗೆ ಕುಳಿತು ಕೊಂಡು ಅಗ್ನಿಯನ್ನು ಆರದಂತೆ ಸಂರಕ್ಷಿಸುತ್ತಿದ್ದರು. ಎಲೆಗಳ ಮೇಲಿನಿಂದ ಮಳೆಯ ಹನಿಗಳು ಕೆಳಗೆ ಬೀಳುತ್ತಿದ್ದರಿಂದ, ಒಂದು ಪಕ್ಕದಲ್ಲಿ ಉರಿಯು ಆರಿ ಹೋಗುತ್ತಿತ್ತು. ಆದರೆ ಸ್ವಾಮಿಯವರು ಬಹಳ ತಾಳ್ಮೆಯಿಂದ ಇನ್ನೊಂದು ಕಡೆಯಿಂದ ಉರಿಯುತ್ತಿರುವ ಬೆಂಕಿಯನ್ನು ಹೆಚ್ಚಿಸಲು ಮರದ ತುಂಡುಗಳನ್ನು ಹಾಕುತ್ತಿದ್ದರು. ಸ್ವಾಮಿಯವರ ಈ ಅವಸ್ಥೆಯನ್ನು ನೋಡಿದ ಭಕ್ತರು, "ಸ್ವಾಮೀ, ಏತಕ್ಕೆ ಹೀಗೆ ಕಷ್ಟ ಪಡುತ್ತಿದ್ದೀರಿ? ನೀವು ದೇವಾಲಯದ ಪ್ರಾಂಗಣದಲ್ಲಿ ಧುನಿಯನ್ನು ಹಾಕಿಕೊಂಡರೆ ಸರಿಹೋಗುತ್ತದೆ ಅಲ್ಲವೆ?" ಎಂದರು. "ಅಯ್ಯಾ! ಬೊಕ್ಕ ಪಡುತುಂದಿಗಾ" (ಅಯ್ಯಾ! ರಂದ್ರವಾಗುತ್ತದೆ) ಎಂದು ಸಂಕ್ಷಿಪ್ತವಾಗಿ ಸಮಾಧಾನಕೊಟ್ಟರು. ಭಕ್ತರಿಗೆ ಸ್ವಾಮಿಯವರ ಮಾತಿನ ಅರ್ಥ ಗೊತ್ತಾಗಲಿಲ್ಲ. ಸ್ವಾಮಿ, ಅವರ ಶ್ರಮಕ್ಕೆ ವಿರುದ್ಧವಾಗಿ ತಮ್ಮ ನಿಯಮಗಳನ್ನು ಉಲ್ಲಂಘಿಸಿದರೇ ಸ್ವಧರ್ಮ ಎನ್ನುವ ದೇವಾಲಯದಲ್ಲಿ ಒಂದು ಕಪ್ಪು ಗುರುತು(ರಂದ್ರ) ಬಿದ್ದ ಹಾಗೆ. ನಿರಂತರ ಅಗ್ನಿಯಂತೆ ಪ್ರಜ್ವಲಿಸುತ್ತಿರುವ ಅವರ ಧರ್ಮನಿಷ್ಠೆ, ಬೆಂಕಿಯು ಮಳೆಯಿಂದ ತಣ್ಣಗಾದ ಹಾಗೆ ಎಂದು ಸ್ವಾಮಿಯವರ ಭಾವನೆ. ಒಂದು ವೇಳೆ ಈ ಮಳೆಯ ಚಿನುಕುಗಳಿಂದ ತಮ್ಮ ಅಗ್ನಿ ಸೇವನೆಗೆ ವಿಷಮ ಪರೀಕ್ಷೆ ಎಂದು ದೈವನಿರ್ಣಯ ವಾಗಿದ್ದರೆ, ದೇವಾಲಯದ ಪ್ರಾಂಗಣಕ್ಕೆ ಅವರು ಹೋಗಿ ಅಲ್ಲಿ ಧುನಿಹಾಕಿದರೂ, ಛತ್ತಿನಲ್ಲಿ ರಂಧ್ರಗಳಾಗಿ ಅದೇ ತೊಂದರೆ ಬಂದೇ ತೀರುತ್ತದೆ ಎಂದು ಸ್ವಾಮಿಯವರು ಭಾವಿಸಿರಬಹುದು. **ಕಾರ್ಯದೀಕ್ಷೆಯೆಂದರೆ ಹೇಗೆ ಇರಬೇಕೋ,**
95 **ದೈವನಿರ್ಣಯದ ಮೇಲೆ ನಮ್ಮ ವಿಶ್ವಾಸ ಹೇಗೆ ಇರಬೇಕೋ ಶ್ರೀ ಸ್ವಾಮಿಯವರು ನಮಗೆ ಈ ಸನ್ನಿವೇಶದ ಮೂಲಕ ಬೋಧಿಸುತ್ತಿದ್ದಾರೆ.**

ಒಮ್ಮೆ ಸ್ವಾಮಿಯವರ ಸೇವಕರು ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದರು, "ಎಲ್ಲರೂ ಕಳ್ಳಸಾಧುಗಳೇ – ಹೊಟ್ಟೆ ಹೊರೆಯುವುದಕ್ಕೋಸ್ಕರ ಇರುವ ಕಳ್ಳ ಸ್ವಾಮಿಗಳು" ಎಂದು ತುಂಟರು ಟೀಕೆ ಮಾಡಿದರು. ಆ ತುಂಟರಲ್ಲಿ ಪ್ರಮುಖನಾದ ಒಬ್ಬ ರೈತನ ಮೇಲೆ ಒಬ್ಬ ಭಕ್ತ ಕೋಪಿಸಿಕೊಂಡು ಜಗಳ ಮಾಡಲು ಹೊರಟಾಗ, ಸ್ವಾಮಿಯವರು ಅವನನ್ನು ತಡೆದು, **"ಏಂದಯ್ಯೋ! ವಾಳ್ಳಂಟುಂಟೇ ಓರ್ಚುಕುಂಟೇಗದಯ್ಯಾ ನಿಜಂಗಾ ಮನಂ**
96 **ಸಾಧುವುಲಂ!** ನೀಕು ಓರ್ಪು ಲೇದು ಗನುಕ ನೀವು ನಿಜಂಗಾ ದೊಂಗ ಸಾಧುವುವೇ" (ಏನಪ್ಪಾ! ಅವರು ಅನ್ನುತ್ತಿದ್ದರೆ ನಾವು ಸಹನೆಯಿಂದ ಇದ್ದರಲ್ಲವೇ ನಾವು ನಿಜವಾದ ಸಾಧುಗಳು? ನಿನಗೆ ಸಹನೆ ಇಲ್ಲ ಆದ್ದರಿಂದ ನೀನು ಕಳ್ಳಸಾಧು) ಎಂದು ಮೆಲ್ಲಗೆ ಆ ಭಕ್ತನಿಗೆ ಪಾಠವನ್ನು ಕಲಿಸಿದರು. ಇದು ನಮ್ಮೆಲ್ಲರಿಗೂ ಗುಣಪಾಠವೇ.

ಒಮ್ಮೆ ದಕ್ಷಾದಿ ರಮಣಯ್ಯ ಮತ್ತು ಪೋಲು ಮಸ್ತಾನಯ್ಯ ಸ್ವಾಮಿಯವರ ಸನ್ನಿಧಿಯಲ್ಲಿದ್ದರು. ರಮಣಯ್ಯ, ಮಸ್ತಾನಯ್ಯನನ್ನು (ಒರೇಯ್ ಮಸ್ತಾನಯ್ಯ) ಎಂದು ಏಕ ವಚನದಲ್ಲಿ ಸಂಬೋಧಿಸುತ್ತಾ, ತನ್ನ ಬಳಿ ಕರೆದನು. ಮಸ್ತಾನಯ್ಯ ಉತ್ತರ ಕೊಡಲಿಲ್ಲ.

ರಮಣಯ್ಯ, ಮಸ್ತಾನಯ್ಯನನ್ನು ತನ್ನ ಬಳಿಗೆ ಬರಲು ಹಲವಾರು ಬಾರಿ ಏಕವಚನದಲ್ಲಿ ಕರೆದನು. ಮಸ್ತಾನಯ್ಯ, ತನ್ನನ್ನು ಏಕವಚನದಲ್ಲಿ ಸಂಬೋಧಿಸಿದ ಕಾರಣ ಅವನು ನೊಂದುಕೊಂಡು, "ನೀನು ಆಶ್ರಮದ ಆಚೆ ಬಂದಾಗ ನಿನಗೆ ಬುದ್ದಿ ಕಲಿಸುತ್ತೇನೆ" ಎಂದು ಮನಸ್ಸಿನಲ್ಲೇ ನಿರ್ಧಾರ ಮಾಡಿಕೊಂಡನು. ತಕ್ಷಣ ಸ್ವಾಮಿಯವರು, "ಅಯ್ಯಾ! ಒರೇಯ್ ಅನೇದೆವರು?" (ಅಯ್ಯಾ! ಒರೇಯ್ ಎಂದು ಯಾರನ್ನುತ್ತಿದ್ದಾರೆ?)

ಮಸ್ತಾನಯ್ಯ : ರಮಣಯ್ಯ ಅನ್ನುತ್ತಿದ್ದಾನೆ ಸ್ವಾಮೀ!

ಸ್ವಾಮಿ : “ಅತಡಿಕಿ ಪಾಪಂ ಮೂಡು ವಂದಲು ಲೆಕ್ಕ ವ್ರಾಶಾರಯ್ಯಾ”! (ಅವನ ಪಾಪ 300 ಲೆಖ್ಖ ಬರೆದರಯ್ಯಾ) ಎಂದು ಹೇಳಿದರು.

ರಮಣಯ್ಯ : ಸ್ವಾಮೀ! ಆ ಲೆಖ್ಖ ಹೇಗೆ ಹೋಗುತ್ತದೆ?

ಸ್ವಾಮಿ : "ಅನುಭವಿಸ್ತೇ ಪೋತುಂದಿ". (ಅನುಭವಿಸದರೆ ಹೋಗುತ್ತೆ)

ಮಸ್ತಾನಯ್ಯ : "ನನ್ನನ್ನು ಅಗೌರವವಾಗಿ ನೋಡಿದ್ದರಿಂದ ಅನುಭವಿಸುತ್ತಾನೆ" ಎಂದು ಶಾಂತನಾದನು.

ನಾವು ಸ್ವಲ್ಪಮಟ್ಟದ್ದು ಎಂದು ಭಾವಿಸಿ ಮಾಡುವ ಪಾಪಗಳು ನಿಜಕ್ಕೂ ಚಿಕ್ಕ ಪಾಪಗಳಲ್ಲ. ಹುಲ್ಲು ಕಡ್ಡಿ ಎಷ್ಟು ಬಲಹೀನವಾಗಿ ಕಂಡರೂ, ಅದನ್ನೆಲ್ಲಾ ಒಟ್ಟುಗೂಡಿಸಿ ಹೊಸೆದರೆ, ಒಂದು ಬಲವಾದ ಹಗ್ಗವಾಗಿ ಮದದಿಂದ ಇರುವ ಆನೆಯನ್ನು ಕೂಡ ಬಂಧಿಸುತ್ತದೆ. ಹಾಗೆಯೇ ಕರ್ಮಬಂಧಕ್ಕೆ ನಮ್ಮ ಸಣ್ಣ ಮಟ್ಟದ ಪಾಪಗಳು ಕೂಡ ಕಾರಣವಾಗುತ್ತದೆ. ಸಾಯಿಬಾಬಾ ಕೂಡ "ಇತರರನ್ನು ಅವಮಾನಿಸುವುದು ಹಂದಿ ಮಲವನ್ನು ತಿನ್ನುವುದಕ್ಕೆ ಸಮಾನ" ಎಂದಿದ್ದಾರೆ. **"ಬುದ್ಧಿಹೀನ!" ಎಂದು ಇತರರನ್ನು ಕರೆದರೂ ನರಕಕ್ಕೇ ಹೋಗುತ್ತೇವೆಂದು ಏಸುಕ್ರಿಸ್ತು ಹೇಳಿದರು. ನಾವು ಅತ್ಯಂತ ಎಚ್ಚರಿಕೆಯಿಂದ ಇರಬೇಕು! ಋಷಿಗಳು ಇದನ್ನೇ ವಾಕ್ಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು, ಮಾತಿನಲ್ಲಿ ಸರಳತೆ ಇರಬೇಕೆಂದು ಹೇಳುತ್ತಾರೆ. ಶ್ರೀ** 97
ಸಾಯಿಬಾಬಾರವರ ಸಮಕಾಲೀನರಾದ ಶ್ರೀ ತಾಜುದ್ದೀನ್ ಬಾಬಾರವರು ಹೀಗೆ ಹೇಳಿದ್ದಾರೆ, "ನೀವು ಕಾಬಾವನ್ನು ಸುಡಬಹುದು, ಪವಿತ್ರ ಕುರಾನನ್ನು ಸುಡಬಹುದು, ಮದ್ಯಪಾನ ಮಾಡಬಹುದು, ವಿಗ್ರಹಾರಾಧನೆ ಮಾಡುವ ದೇವಸ್ಥಾನದಲ್ಲಿ ಮಲಗಬಹುದು, ಆದರೆ ನೀವು ಎಂದಿಗೂ ಮನುಷ್ಯನ ಹೃದಯವನ್ನು ನೋಯಿಸಬಾರದು. ಕಾರಣ, ಭಗವಂತನ ವಾಸ ಸ್ಥಾನವಾದ 7 ನೇ ಸ್ವರ್ಗ, ಮಾನವ ಹೃದಯಲ್ಲಿ ಅಡಗಿದೆ".

98 ಒಮ್ಮೆ ಶ್ರೀ ಸ್ವಾಮಿಯವರು 15 ದಿನಗಳ ಕಾಲ ವಿರೋಚನೆಯಿಂದ ಬಹಳ ಬಲಹೀನರಾದರು. **"ಔಷಧಿ ತೆಗೆದುಕೊಳ್ಳಿ, ಸ್ವಾಮೀ" ಎಂದರೆ, "ದೇವುಡಿಚ್ಚಿಂದಿ ಅನುಭವಿಂಚೊದ್ದಾಯ್ಯಾ?" (ದೇವರು ಕೊಟ್ಟಿದ್ದು ಅನುಭವಿಸಬೇಕಲ್ಲವೇನಯ್ಯಾ?" ಎಂದರು.**

"ಕಾ! ಕಾ!" ಎಂದು ಕೂಗುತ್ತಿದ್ದ ಕಾಗೆಯನ್ನು ಕಲ್ಲೆಸೆದು ಓಡಿಸಲು ಹೋದಾಗ, ಸ್ವಾಮಿಯವರು, ಗುರವಯ್ಯನನ್ನು ತಪ್ಪಿಸಿದರು. ಸ್ವಾಮಿಯವರು ನೋಡುತ್ತಿದ್ದಾಗ "ನಾಯಿಯನ್ನು ಕೂಡ ಹೊಡೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ" ಎಂದು ಗುರವಯ್ಯ ಹೇಳಿದರು.

98A **ಧರ್ಮಶಾಸ್ತ್ರದಲ್ಲಿ ಹೇಳಿರುವ ಧರ್ಮಸೂಕ್ಷ್ಮಗಳನ್ನು ಸರ್ವಧರ್ಮಜ್ಞ ಜನರು, ಬ್ರಹ್ಮಾನ್ವೇಷಕರಾದ ಮಹನೀಯರಿಂದ ತಿಳಿದುಕೊಳ್ಳಬೇಕೆಂದು ಧರ್ಮಶಾಸ್ತ್ರಗಳೇ ಹೇಳುತ್ತವೆ. ಹಾಗೆ ಮಾಡದಿರುವುದರಿಂದ ನಮ್ಮ ಸಮಾಜದಲ್ಲಿ ವರ್ಣವ್ಯವಸ್ಥೆ ತಾರುಮಾರಾಗಿ, ಪ್ರಜರ ಶ್ರೇಯಸ್ಸಿಗೆ ಉಪಕಾರವಾಗದೇ ದೇಶಕ್ಕೆ ದೌರ್ಭಾಗ್ಯವಾಗಿ ಪರಿಣಮಿಸಿದೆ. ಇಂದಿನ ಸಮಾಜದಲ್ಲಿ ವರ್ಣಭೇದ ಹುಟ್ಟಿನಿಂದಲೇ ಬರುತ್ತದೆ ಎಂದು ಭಾವಿಸಲಾಗಿದೆ. ಆದರೆ, ವಾಸ್ತವದಲ್ಲಿ, ಭಗವದ್ಗೀತೆಯಲ್ಲಿ ಹೇಳಿರುವಂತೆ ಒಬ್ಬರ ಗುಣಗಳಿಂದ ವರ್ಣಭೇದ ಉಂಟಾಗುತ್ತದೆ (4:13). ಆದರೂ, ಕೆಲವು ಪಂಡಿತರು, ಭಗವದ್ಗೀತೆಯ ಬೋಧನೆಯನ್ನು ವಕ್ರವಾಗಿ ವ್ಯಾಖ್ಯಾನ ಮಾಡಿದರೆಂದು ಬ್ರಹ್ಮಾನ್ವೇಷಕರ ಬೋಧನೆಗಳಿಂದ ತಿಳಿಯುತ್ತದೆ.**

ಉದಾಹರಣೆಗೆ ಶಿರಿಡೀ ಸಾಯಿಬಾಬಾ, "ಪ್ರತಿಒಬ್ಬರಲ್ಲೂ ಒಬ್ಬ ಅಂತ್ಯಜನಿರುತ್ತಾನೆ. ಅವನನ್ನು ಓಡಿಸಬೇಕು" ಎಂದರು. ಇಲ್ಲಿ "ಅಂತ್ಯಜ" ಎಂದರೆ ಅರಿಷಡ್ವರ್ಗಗಳಿಗೆ ಪ್ರೇರಕವಾದ ಅಜ್ಞಾನ, ಅಜ್ಞಾನದ ಪ್ರತ್ಯಕ್ಷರೂಪವೇ ಅಹಂಕಾರ ಎಂದು ನಾವು ಗುರ್ತಿಸಬೇಕು. ಈ ವಿಷಯವನ್ನೇ ಬಾಬಾ ಇನ್ನೊಮ್ಮೆ "ವಸತಿ ಗೃಹದಲ್ಲಿ ಕಳ್ಳರನ್ನು ಪತ್ತೆ ಮಾಡಿ" ಎಂದು ಹೇಳಿದರು. ಎಂದರೇ, ಜನ್ಮ ಜನ್ಮಕ್ಕೂ ಬದಲಾಯಿಸುವ ಈ ಅಶಾಶ್ವತ ಶರೀರವೇ ವಸತಿಗೃಹ/ಛತ್ರ ಎಂದು ತಿಳಿಯಬೇಕು. ಅದು ಯಾರಿಗೂ ಸ್ಥಿರನಿವಾಸ ಆಗಲಾರದು.

ಶ್ರೀ ಸಾಯಿಬಾಬಾರವರ ಮತ್ತೊಬ್ಬ ಸಮಕಾಲೀನರಾದ ಅಕ್ಕಲಕೋಟಸ್ವಾಮಿಯವರು ಕೂಡ ಇದೇ ಭಾವನೆಯನ್ನು ಸೂಚಿಸಿದ್ದಾರೆ. ಒಮ್ಮೆ ಶ್ರಿ ಅಕ್ಕಲಕೋಟೆ ಸ್ವಾಮಿಯವರ ಆಶ್ರಮದಲ್ಲಿ ನಡೆದ ಈ ತುಂಬಾ ಮುಖ್ಯ ಘಟನೆ ಒಂದನ್ನು ಇಲ್ಲಿ ಹೇಳಲಾಗಿದೆ.

ಅಕ್ಕಲಕೋಟೆ ಸ್ವಾಮಿಯವರ ದರ್ಶನ ಮಾಡಲು ಬಂದ ಒಬ್ಬ ಸದ್ಬ್ರಾಹ್ಮಣ, ವಿಧಿಯಿಲ್ಲದೇ, ಒಬ್ಬ ಹರಿಜನರ ಮನೆಯಬಳಿ, ಮಡಿಕೆಯೊಳಗಿನ ನೀರಿನಿಂದ ಸ್ನಾನ, ಸಂಧ್ಯಾವಂದನೆ ಪೂರ್ತಿಮಾಡಿಕೊಂಡು, ಸ್ವಾಮಿಯವರನ್ನು ದರ್ಶನ ಮಾಡಿದನು. ನಂತರ, ಬ್ರಾಹ್ಮಣ ಪಂಕ್ತಿಯಲ್ಲಿ ಊಟ ಮಾಡಲು ಕುಳಿತುಕೊಂಡನು. ಅದನ್ನು ಗಮನಿಸಿದ ಒಬ್ಬ ಸೇವಕ, ಆ ಬ್ರಾಹ್ಮಣ ಮಾಡಿದ್ದನ್ನು ತೀವ್ರವಾಗಿ ವಿಮರ್ಶನೆ ಮಾಡಿ, ಆ ಪಂಕ್ತಿಯಿಂದ ಎಬ್ಬಿಸಿ ಆಚೆ ಕಳುಹಿಸಿದನು. ಆ ಬ್ರಾಹ್ಮಣ ಬಹಳ ನೊಂದುಕೊಂಡನು. ಆ ಸೇವಕ, ಸ್ವಾಮಿಯವರಿಗೆ ಯಥಾ ವಿಧಿಯಾಗಿ ಭಿಕ್ಷೆ ಕೊಡಲು ಬಂದಾಗ, ಸ್ವಾಮಿಯವರು ಸ್ವೀಕರಿಸಲಿಲ್ಲ. ಆಗ ಆ ಸೇವಕ, "ನಾನು ಮಾಡಿದ ತಪ್ಪೇನು?" ಎಂದು ಕೇಳಿದಾಗ, ಸ್ವಾಮಿಯವರು, ಅವನನ್ನು ಆ ಹರಿಜನ ವ್ಯಕ್ತಿಯನ್ನು ಕರೆತರಲು ಕಳುಹಿಸಿದರು. ಆ

ಹರಿಜನ ವ್ಯಕ್ತಿ ಬಂದಮೇಲೆ, ಅವನ ಹಣೆಗೆ ವಿಭೂತಿಯನ್ನು ಇಟ್ಟು, ನೆಲದ ಮೇಲೆ 7 ಗೀಟುಗಳನ್ನು ಬರೆದು, ದಾಟು ಎಂದರು. ಒಂದೊಂದು ಗೀರು ದಾಟಿದಾಗ, ಪೂರ್ವಜನ್ಮದ ಸ್ಮರಣೆ ಅವನಿಗೆ ಬಂದಿತು. ಪ್ರತಿ ಜೀವಿತಾವಧಿಯಲ್ಲಿ ಅವನು ವಿವಿಧ ಜಾತಿಗಳಲ್ಲಿ ಜನಿಸಿದನು ಎಂದು ಹೇಳಿ, ಅವನು 7 ಜನ್ಮಗಳ ಹಿಂದಿನ ಜನ್ಮದಲ್ಲಿ ಒಬ್ಬ ಕರ್ಮಠ ಬ್ರಾಹ್ಮಣ ಎಂದು ಹೇಳಿದನು. ಸ್ವಾಮಿಯವರು ಪರೀಕ್ಷೆ ಮಾಡಿದಾಗ, ವೇದವೇದಾಂತಗಳಲ್ಲಿ ಪಾರಂಗತನಾಗಿದ್ದ ಎಂದೂ ನಿರೂಪಿಸಿದನು. ಆದರೆ, ಈ ಜನ್ಮದಲ್ಲಿ "ಈ ವರ್ಗದಲ್ಲೇಕೆ (ಹರಿಜನ ವರ್ಗದಲ್ಲಿ) ಹುಟ್ಟಿದೆ?" **ಎಂದು ಸ್ವಾಮಿಯವರು ಕೇಳಿದಾಗ, ತಾನು ಬ್ರಾಹ್ಮಣನಾಗಿದ್ದಾಗ, ಇತರ ವರ್ಣದವರನ್ನು ನೋಡಿ, ದ್ವೇಷಿಸುತ್ತಾ, ಅವರೆಲ್ಲರು ನಡೆದ ರಸ್ತೆಯಲ್ಲಿ, ಮಂತ್ರಿಸಿದ ನೀರನ್ನು ಚಿಮುಕಿಸುತ್ತಾ, ಅದರ ಮೇಲೆ ನಡೆಯುತ್ತಿದ್ದೆ. ಆದ್ದರಿಂದ ತಾನು ಈ ಜನ್ಮದಲ್ಲಿ ಈ ಕುಲದಲ್ಲಿ ಹುಟ್ಟಿದೆ" ಎಂದು ಆ ಹರಿಜನ ವ್ಯಕ್ತಿ ಹೇಳಿದನು. ವರ್ಣಭೇದ ಜನ್ಮದಿಂದ ಬರುತ್ತದೆ ಎಂದು ತಿಳಿದು, ಸಂಕುಚಿತವಾದ ಅಸಹನೆಯನ್ನು ಹೊಂದಿದವರಿಗೆ, ಜನ್ಮಾಂತರದಲ್ಲಿ, ಆಧ್ಯಾತ್ಮಿಕ ಜ್ಞಾನವಿಲ್ಲದ ಕುಟುಂಬದಲ್ಲಿ ಹುಟ್ಟಬೇಕಾಗುತ್ತದೆ ಎಂದು ಶ್ರೀ ಅಕ್ಕಲಕೋಟೆ ಸ್ವಾಮಿಯವರು ತಮ್ಮ ಸೇವಕನಿಗೆ ತಿಳಿಸಿದರು. ಶಾಸ್ತ್ರಗಳ ಅರ್ಥವನ್ನು, ಮಹನೀಯರಿಂದ ತಿಳಿದುಕೊಳ್ಳದೇ, ನಮಗೆ ತೋಚಿದ ತಪ್ಪು ಅರ್ಥಗಳನ್ನು ಅನುಸರಿಸಿ, ನಡೆದರೆ, ಆಗುವ ಅನರ್ಥವೇ ಇದು.**

ಅವರುಗಳ ಭಾವನೆಯನ್ನು ಇನ್ನೂ ಸ್ಪಷ್ಟಪಡಿಸಲು, ಶ್ರೀ ವೆಂಕಯ್ಯ ಸ್ವಾಮಿಯವರು ಆಗಾಗ್ಗೆ ತಮ್ಮ ಭಕ್ತರೊಡನೆ, "ಮಾಲವಾಳ್ಳು, ಮಾದಿಗೋಳ್ಳು ನೀಲೋ ಲೇಕುಂಡಾ ಚೂಚುಕೋ ಅಯ್ಯಾ" (ಹೊಲೆಯರು, ಮಾದಿಗರು, ನಿನ್ನಲ್ಲಿ ಇಲ್ಲದ ಹಾಗೆ ನೋಡಿಕೊಳ್ಳಿರಪ್ಪಾ) ಎನ್ನುತ್ತಿದ್ದರು. ಕೆಲವೊಮ್ಮೆ ಅನ್ಯ ವರ್ಣಸ್ಥರು ಸ್ವಾಮಿಯವರ ದರ್ಶನಕ್ಕೆ ಬಂದಾಗ, ಅವರನ್ನು "ಬ್ರಾಹ್ಮಣರು" ಎಂದನ್ನುತ್ತಿದ್ದರು. ಉದಾಹರಣೆಗೆ: ಜನ್ಮತಃ ವೈಶ್ಯ ಕುಲದವರಾದ ರಚಯಿತರನ್ನು (ಪೆಸಲ ಸುಬ್ಬರಾಮಯ್ಯನವರನ್ನ) ಬ್ರಾಹ್ಮಣರು ಎನ್ನುತ್ತಿದ್ದರು. ಹಾಗೆ ಅಲ್ಲು ಭಾಸ್ಕರ್ ಎನ್ನುವ ರೆಡ್ಡಿ ಕುಲದವರು ಸ್ವಾಮಿಯವರ ದರ್ಶನ ಮಾಡಲು ಬರುತ್ತಿದ್ದರೆ, "ಅದುಗೋ! ಒಕ ಬ್ರಾಹ್ಮಣುಡು ವಸ್ತುನ್ನಾಡು" (ಅಲ್ಲಿ ನೋಡು! ಒಬ್ಬ ಬ್ರಾಹ್ಮಣ ಬರುತ್ತಿದ್ದಾನೆ) ಎಂದರು. ಸ್ವಾಮಿಯವರ ದೃಷ್ಟಿಯಲ್ಲಿ ಮಹಾತ್ಮರಲ್ಲಿ ಗೌರವ ಭಾವನೆ, ಮೋಕ್ಷ ಅಥವ ಬ್ರಹ್ಮಜ್ಞಾನವನ್ನು ಬಯಸುವವರೇ ಬ್ರಾಹ್ಮಣರು. ವಜ್ರಸೂಚಿ ಉಪನಿಷತ್ತಿನಲ್ಲಿ ಬ್ರಾಹ್ಮಣತ್ವವು, ಇದೇ ವ್ಯಾಖ್ಯಾನವನ್ನು ಹೊಂದಿದೆ ಎಂಬುದನ್ನು ಗಮನಿಸಬೇಕು. ಇದಲ್ಲದೆ, ಜನ್ಮತಃ ಬ್ರಾಹ್ಮಣನಾದವನು ಕೂಡ ನಿಜವಾದ ಬ್ರಾಹ್ಮಣತತ್ವಕ್ಕೆ ಸರಿಯಾದ ಧರ್ಮಾಚರಣೆ ಮಾಡದಿದ್ದರೇ, ಅವನಿಗೆ ಶೂದ್ರತ್ವ, ಚಂಡಾಲತ್ವ ಪ್ರಾಪ್ತವಾಗಿ ಅವನು ಧರ್ಮಬಾಹಿರನಾಗುತ್ತಾನೆಂದು ಧರ್ಮಶಾಸ್ತ್ರದಲ್ಲಿ ಹೇಳಿದೆ. ಮುಮುಕ್ಷುವಿಗೆ ಇರಬೇಕಾದ ಗುಣಗಳಿದ್ದು ಅದರಂತೆಯೇ ಜೀವುಸುತ್ತಿದ್ದವನು ಬ್ರಾಹ್ಮಣನೆಂದೇ ಅರ್ಥ ಅಲ್ಲವೇ? ಅಂತಹ ವ್ಯಕ್ತಿಗೆ ಬ್ರಾಹ್ಮಣ ಸಂಸ್ಕಾರಗಳೆಲ್ಲಾ ಸಾರ್ಥಕವಾಗುತ್ತದೆ ಎಂದು ಶಾಸ್ತ್ರ ಹೇಳಿರುವುದು ಅಲ್ಲವೇ?

ಮಹಾತ್ಮರಲ್ಲಿ ಗೌರವ ಭಾವನೆ, ಮೋಕ್ಷ ಅಥವ ಬ್ರಹ್ಮಜ್ಞಾನವನ್ನು ಬಯಸುವ ಕೋರಿಕೆ, ಧರ್ಮಾಚರಣೆ, ಮಿತ ಭಾಷೆ, ಸಮನ್ವಯ ಭಾವ, ದೈವ ಭಕ್ತಿ ಮುಂತಾದ ಗುಣಗಳನ್ನು ದೈವೀಸಂಪದೆ , ಸತ್ವ ಗುಣ ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಅಂತಹ ಗುಣಗಳಿದ್ದ ಮುಮುಕ್ಷುಗಳು ಮಾಡುವ ಯಜ್ಞ, ದಾನ, ತಪಸ್ಸು, ಸತ್ಕರ್ಮಗಳು ಮಾತ್ರ ಮೋಕ್ಷದ ಸಾಫಲ್ಯತೆಯನ್ನು ಹೊಂದುತ್ತದೆಯೆಂದು ಭಗವದ್ಗೀತೆ ಶ್ರದ್ಧಾತ್ರಯವಿಭಾಗಯೋಗದಲ್ಲಿ ಸ್ಪಷ್ಟವಾಗಿ ತಿಳಿಸುತ್ತದೆ. ಇದನ್ನು ವೆಂಕಯ್ಯ ಸ್ವಾಮಿಯವರು, "ಸಂಪನ್ನತ್ವ, ಸಾಧಾರಣತ್ವನ್ನು ನಮ್ಮಲ್ಲಿಟ್ಟುಕೊಂಡು ಸದ್ಗುರುಸೇವೆ ಮಾಡಿ" ಎಂದರು. ಸಂಪನ್ನತ್ವ ಎಂದರೆ, ಮೇಲೆ ಹೇಳಿರುವ ದೈವೀಸಂಪದೆ ಹೊಂದಿರುವುದು ಎಂದು ಅರ್ಥ. ಸಾಧಾರಣತ್ವ ಎಂದರೆ, ದೈವೀಸಂಪದೆಯನ್ನು ಹೊಂದಿರುವವರು, (ತಾವೇ ಪವಿತ್ರರೆಂದು, ಮಿಕ್ಕವರನ್ನು ಹೀನವಾಗಿ ನೋಡದೆ), ಅಹಂಕಾರ ಇಲ್ಲದಿರುವವರು ಎಂದು ಅರ್ಥ. ಈ ಗುಣಗಳಿಗೆ ಸ್ವಾಮಿಯವರ ಜೀವನಶೈಲಿ ಉತ್ತಮ ಉದಾಹರಣೆಯಾಗಿದೆ. ಇಂತಹ ಮಹನೀಯರ ಆಚರಣೆ, ಬೋಧನೆಗಳನ್ನು ಪ್ರಮಾಣವಾಗಿ ಸ್ವೀಕರಿಸಬೇಕೆಂದು ಧರ್ಮಶಾಸ್ತ್ರಗಳಲ್ಲಿ ಹೇಳಿದೆ.

ಇದರಿಂದಲೇ, ಬೌಧ, ಜೈನ, ಪಾರ್ಸಿ, ಸಿಖ್, ಕ್ರೈಸ್ತ, ಇಸ್ಲಾಮ್ ಮತ್ತು ಇತರ ಮತಗಳಲ್ಲಿ ಅವರು ಸಮಾಜದ ವ್ಯಕ್ತಿಗಳನ್ನು, ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ. ಒಂದು ಪವಿತ್ರವಾದ ಆಧ್ಯಾತ್ಮಿಕ ಜೀವನಶೈಲಿ ಇರುವವರು, ಇನ್ನೊಂದು - ಅದು ಇಲ್ಲದಿರುವವರು. ಈ ವಿಷಯವನ್ನು ನಾವು ಗಮನಿಸಬೇಕು.

ಸ್ವಾಮಿಯವರು, ಕಷ್ಟಮಂಟೇ ಏಮಿಟೋ, ಸುಖಮಂಟೇ ಏಮಿಟೋ ನಾಕು
100 ತೆಲಿಯದಯ್ಯಾ" (ಕಷ್ಟವೆಂದರೆ ಏನೋ, ಸುಖವೆಂದರೆ ಏನೋ ನನಗೆ ಗೊತ್ತಿಲ್ಲಪ್ಪಾ) ಎಂದರು ರೋಶಿರೆಡ್ಡಿಯೊಂದಿಗೆ. (ಅಂದರೆ, ಇಷ್ಟಾನಿಷ್ಟಗಳನ್ನು ಸುಖೇಚ್ಛೆಗಳನ್ನು ಬಿಟ್ಟುಬಿಡು) ಎಂದು.

ಸಾಧನೆ ಮಾಡುತ್ತಾ ಇದ್ದರೆ, ದೈವ ಕೃಪೆ ಹೇಗೆ ಸಿಗುತ್ತದೆ' ಎಂದು ಕೇಳಿದ ಭಕ್ತನಿಗೆ,
"ಅಯ್ಯಾ! ಪೈ ಮಿದ್ದೇಸುಕುಂಟೇ ಬಾಗುಂಟುಂಡ್ಲಾ" (ಅಯ್ಯಾ! ಮೇಲೆ ಒಂದು
101 ತಾರ್ಸಿಮನೆ ಕಟ್ಟಿದರೆ ಒಳ್ಳೇದಲ್ಲವೇ) ಎಂದರು. ಇದರ ಒಳಾರ್ಥ ನಮಗೆ ಅಮರ ನಾರಾಯಣ ಶತಕದಲ್ಲಿ ಹೇಳಿರುವ ಪ್ರಕಾರ, ದೈವೀಸಂಪದೆಯನ್ನು ಸಾಧಿಸುವುದನ್ನೇ "ಪೈಮಿದ್ದೆ (ತಾರ್ಸಿ ಮನೆಯ)" ಜೊತೆ ಹೋಲಿಸಿ ಹೇಳಿದ್ದಾರೆ.

ಇನ್ನೊಬ್ಬ ಭಕ್ತ, "ಸ್ವಾಮೀ, ಸಾಧನೆ ಮಾಡುತ್ತಾ ಎಲ್ಲಿರಬೇಕು ಎನ್ನುತ್ತೀರ?" ಎಂದು ಕೇಳಿದನು. "ಎಕ್ಕಡ್ಯೆನ ಒಕ್ಕ ದೂಲಪು ಇಲ್ಲು ವೇಸುಕೊನಿ ಉಂಡವಚ್ಚು"(ಎಲ್ಲಾದರೂ ಒಂದು ಮರದ ಮನೆ ಹಾಕಿಕೊಂಡು ಇರಬಹುದು) ಎಂದರು. 'ಯಾವ ಊರಿನಲ್ಲಿ ಯಾವ ಆಶ್ರಮದಲ್ಲಿ ಇರು ಎನ್ನುತ್ತೀರಿ?' ಎಂದು ಪದೇ ಪದೇ ಕೇಳಿದರೂ, ಸ್ವಾಮಿಯವರು ಮಾತ್ರ, "ಒಂದು ಮರದ ಮನೆ ಹಾಕಿಕೊಂಡು ಎಲ್ಲಾದರೂ ಇರಬಹುದು" ಎಂದು ಹೇಳಿದರು. ಮನೆ ಎಂದರೆ ಶರೀರ, ಅದಕ್ಕೆ ಒಂದು 'ದೂಲಂ ಆಧಾರಂ' (ಮರದ ಆಧಾರ) ಎಂದರೆ ಒಬ್ಬ ದೇವರಿಗೆ ಶರಣಾಗತರಾಗಿ,

ಸರ್ವಸ್ವವನ್ನೂ ಅರ್ಪಿಸಿ ಜೀವಿಸುವುದು. ಮನುಷ್ಯರು ಧನ, ಕನಕ, ವಸ್ತು ವಾಹನಗಳನ್ನೇ ಜೀವನದ ಆಧಾರವೆಂದು ನಂಬುತ್ತಾರೆ. ಅವುಗಳು ಶಾಶ್ವತವಲ್ಲ. ದೇವರೇ ಆಧಾರ ಎಂದು ಜೀವಿಸುತ್ತ ಅದೇ ಅಂತಿಮ ಗುರಿ ಎಂದು ಭಾವಿಸಿದರೆ, ಎಲ್ಲಿದ್ದು ಸಾಧನೆ ಮಾಡಿದರೂ ಒಂದೇ. ಸಾಯಿಬಾಬಾ ಹೇಳಿದ, "ಸಬ್ಕಾ ಮಾಲಿಕ್ ಏಕ್ ಹೈ" ಎನ್ನುವ ಮಾತನ್ನು, ಶ್ರೀ ಸ್ವಾಮಿಯವರು ಹೀಗೆ ಹೇಳಿದರು. ಸರ್ವ ಶಾಸ್ತ್ರಗಳ ಸಾರವನ್ನು ಸರಳ ಭಾಷೆಯಲ್ಲಿ ಮನುಷ್ಯರಿಗೆ ಅರ್ಥ ಮಾಡಿಸುವ ಪಂಡಿತರು ಎಲ್ಲಿ ಸಿಕ್ಕುತ್ತಾರೆ?

ಸ್ವಾಮಿಯವರು, ತಮ್ಮ ಆಧ್ಯಾತ್ಮಿಕ ಸಂಪತ್ತಿನ ಬಗ್ಗೆ ಹೀಗೆ ಹೇಳಿದರು, "ಕೊಂಡಲು ಕೊಂಡಲುಗಾ ಡಬ್ಬುಲುವುನ್ನಾ, ಒಕ್ಕರು ಕೂಡಾ ಅಡುಗರೇಮಯ್ಯಾ? ಕೊಂಡಲು ಪೊರ್ಲಿ ಜಾರಿ ವಚ್ಚೇಸ್ತುನ್ನಾಯಯ್ಯಾ!" (ಬೆಟ್ಟಗಳಷ್ಟು ಹಣವಿದ್ದರೂ, ಒಬ್ಬರೂ ಕೇಳುತ್ತಿಲ್ಲವಲ್ಲಪ್ಪಾ? ಬೆಟ್ಟಗಳು ಕುಸಿದು ಜಾರುತ್ತಿವೆ). ಇನ್ನೊಮ್ಮೆ ಸ್ವಾಮಿಯವರು ಹೀಗೆ ಹೇಳಿದರು - "ಏಡುಕೊಂಡಲು ಯಾಲಾನಿಕಿ ವಚ್ಚಾಯಿ, ಪಾಟಪಾಡಿ ಕೊನೇವಾಳ್ಳುಂಟೇ ಕೊನವಚಯ್ಯಾ. ಕೊನೇವಾಡೇ ಲೇಡೇ?" (ಏಳು ಬೆಟ್ಟಗಳು ಹರಾಜಿಗೆ ಬಂದಿದೆ, ಕೊಳ್ಳುವವರು ಇದ್ದರೆ ಅದನ್ನು ಕೊಳ್ಳಬಹುದಯ್ಯಾ! ಯಾರೂ ಕೊಳ್ಳುವವರೇ ಇಲ್ಲವೇ?" ಎಂದರು. ಮತ್ತೊಮ್ಮೆ ಸ್ವಾಮಿಯವರು, "ನಲ್ಲಕೊಂಡಲು ಯಾಲಾನಿಕಿ ವಚ್ಚಾಯಿ. ಕೊನೇವಾಡೇ ಲೇಡೇ" (ಕರೀ ಬೆಟ್ಟಗಳು ಹರಾಜಿಗೆ ಬಂದಿದೆ, ಕೊಳ್ಳುವವರೇ ಇಲ್ಲವೇ!) ಎಂದರು. ಶ್ರೀ ಸಾಯಿಬಾಬಾರವರು, "ಜ್ಞಾನದ ಸಂಪತ್ತು ರಾಶಿಗಟ್ಟಿ ಇದ್ದರೂ ಯಾರೂ ಕೇಳುವ ನಾಥರೇ ಇಲ್ಲ" ಎಂದ ಹಾಗಿದೆ.

ಸ್ವಾಮಿಯವರು, "ದಕ್ಷಿಣಪು ಕೊಂಡ ತೇಲಿವಚ್ಚಿಂದಿ, ಎವರೈನಾ ಕೊನೇವಳ್ಳು ಉಂಟೇ ಕೊನಮನಿ ಅಂದರಿಕಿ ಚೆಪ್ಪಯ್ಯಾ" (ದಕ್ಷಿಣದ ಬೆಟ್ಟ ತೇಲಿ ಬಂದಿದೆ, ಕೊಳ್ಳುವವರಿದ್ದರೆ ಕೊಳ್ಳಕ್ಕೆ ಎಲ್ಲರಿಗೂ ಹೇಳಯ್ಯಾ) ಎಂದರು.

ಒಮ್ಮೆ ಶ್ರೀ ಸ್ವಾಮಿಯವರು, "ಬ್ರಾಹ್ಮಣುಲಲೋ ಮಾದಿಗವಾಳ್ಳು ಉನ್ನಾರು, ಮಾದಿಗವಾಳ್ಳಲೋ ಬ್ರಾಹ್ಮಣವಾಳ್ಳು ಉನ್ನಾರು. ಕೋಮಟಿ ವಾಳ್ಳಲೋ ಕಮ್ಮವಾಳ್ಳು, ಕಮ್ಮವಾಳ್ಳಲೋ ಕೋಮಟಿವಾಳ್ಳು ಉನ್ನಾರು. ಗೊಲ್ಲವಾಳ್ಳಲೋ ಮಾಲವಾಳ್ಳು, ಮಾಲವಾಳ್ಳಲೋ ಗೊಲ್ಲವಾರು ಉನ್ನಾರು. ಲೋಕಮಂತಾ ಈ ವಿಧಂಗಾ ಉಂದಯ್ಯಾ" (ಬ್ರಾಹ್ಮಣರಲ್ಲಿ ಮಾದಿಗ(ಹೊಲಯವರು) ಕುಲದವರು, ಮಾದಿಗರ ಕುಲದಲ್ಲಿ ಬ್ರಾಹ್ಮಣರು ಇದ್ದಾರೆ. ಕೋಮಟಿಯವರಲ್ಲಿ ಕಮ್ಮ ಕುಲದವರು, ಕಮ್ಮಕುಲದಲ್ಲಿ ಕೋಮಟಿಯವರು ಇದ್ದಾರೆ. ಗೊಲ್ಲರಲ್ಲಿ ಅಂತ್ಯಜ ಕುಲದವರು, ಅಂತ್ಯಜ ಕುಲದವರಲ್ಲಿ ಗೊಲ್ಲರು ಇದ್ದಾರೆ. ಲೋಕವೆಲ್ಲಾ ಈ ವಿಧವಾಗಿ ಇದೆ ಅಯ್ಯಾ!) ಎಂದರು.

"ಲಾಭಂಲೋ ಭಾಗಂ ತೀಸುಕುಂಟೇ ಪಾಪಂಲೋ ಕೂಡಾ ಬಾಗಮೊಸ್ತುಂದಯ್ಯಾ" (ಲಾಭದಲ್ಲಿ ಭಾಗ ತೆಗೆದುಕೊಂಡರೆ, ಪಾಪದಲ್ಲೂ ಭಾಗ ಬರುತ್ತದೆ ಅಯ್ಯಾ) ಎಂದರು. ಇನ್ನೊಂದು ದಿನ, ನಾವುಗಳು ಯಾರನ್ನು ಚಂದಾ ಕೇಳಬೇಕೋ ಯೋಚನೆಮಾಡಿ ಎಂದರು. 102

ಒಬ್ಬ ಭಕ್ತ, "ಸ್ವಾಲಮೀ! ಮನುಷ್ಯನಿಗೆ ಮರಣಿಸಿದ ಮೇಲೆ ಮತ್ತೆ ಜನ್ಮ ಇದೆಯಾ?

ಇದ್ದರೆ, ಮನುಷ್ಯನಾಗಿಯೇ ಹುಟ್ಟುತ್ತಾನಾ ಅಥವ ಪಶುಪಕ್ಷಿಗಳಾಗಿ ಹುಟ್ಟುತ್ತಾನಾ? ಸ್ವಾಮಿಯವರು, "ಮನಿಷೈ, ಪೋತೇ, ಮನಿಷಿಗಾನೇ ವಸ್ತುಳ್ಳಾಯ್ಯಾ" (ಮನುಷ್ಯನಾಗಿ ಹೋದರೆ, ಮನುಷ್ಯನಾಗಿಯೇ ಹುಟ್ಟುತ್ತಾನೆ) ಎಂದರು. ಅಪರೂಪವಾದ ಮಾನವ ಜನ್ಮ ಬಂದಿದೆ, ಅದನ್ನು ಸದ್ವಿನಿಯೋಗ ಮಾಡಿಕೋ, ಸದ್ಗುರುವನ್ನು ಹುಡುಕಿಕೊಂಡು ಅವರ ಸೇವೆ ಮಾಡಿ ಸಾಧನೆ ಮಾಡು ಎಂದು ಅರ್ಥ.

"ಮಾನವಲಕ್ಷಣಗಳನ್ನುಇಟ್ಟುಕೊಂಡು ಜೀವಿಸಿದರೆ ಮಾನವನಾಗೆಯೇ
103 ಹುಟ್ಟುತ್ತಾನೆ. ಇಂದ್ರಿಯಗಳಲ್ಲಿರುವ, ಪಶುಪಕ್ಷಿ ಲಕ್ಷಣಗಳಿಂದ ಜೀವಿಸಿದರೆ, ಹೀನ ಜನ್ಮ ಬರುತ್ತದೆ ಆದ್ದರಿಂದ, ಮಾನವ ಜನ್ಮ ಸಾರ್ಥಕವಾಗುವಂತೆ ಜೀವಿಸಿ" ಎಂದು ಸ್ವಾಮಿಯವರು ಹೇಳಿದರು."

ಪುನರ್ಜನ್ಮ ಇದೆಯೆಂದು ಹೇಳಿದ ಸ್ವಾಮಿಯವರು, ಅನೇಕ ಮಂದಿ ಭಕ್ತರಿಗೆ, ಅವರುಗಳು ಹಿಂದಿನ ಜನ್ಮದಲ್ಲಿ ಎಲ್ಲೆಲ್ಲಿ ಜನ್ಮಿಸಿದ್ದರೋ, ಏನೇನು ಮಾಡಿದರೋ ಕೂಡಾ ಸ್ವಾಮಿಯವರು ಹೇಳುತ್ತಿದ್ದರು.

ಇದೇ ಪ್ರಶ್ನೆ ಇನ್ನೊಬ್ಬ ಭಕ್ತ ಕೇಳಿದಾಗ, "ದೇಂತೋ ಪೀಕುಲಾಡುತೂಪೋತೇ ದಾನಿಲೋಕೇ ವಸ್ತುಂಡ್ಲಾಯ್ಯಾ" (ಜೀವನಪೂರ್ತಿ ಯಾವುದನ್ನು ಹೆಚ್ಚಾಗಿ ಪ್ರೀತಿಸುತ್ತೇವೋ, ಮನಸ್ಸಿನಲ್ಲಿ ಅದನ್ನೇ ತುಂಬಿಕೊಂಡಿರುತ್ತೇವೋ, ಕಡೇ ಕ್ಷಣದಲ್ಲಿ ಅದನ್ನೇ ಸ್ಮರಿಸುತ್ತಾ ಪ್ರಾಣವನ್ನು ಬಿಟ್ಟರೇ, ಅದೇವಿಧವಾಗಿ ಹುಟ್ಟುತ್ತೇವೇ. "ಅಂತ್ಯಕಾಲದಲ್ಲಿ ಯಾವುದನ್ನು ಸ್ಮರಣೆ ಮಾಡುತ್ತಾ ಪ್ರಾಣ ಬಿಡುತ್ತೇವೋ, ಹಾಗೆಯೇ ಜನ್ಮಿಸುತ್ತೇವೆಂದು" ಭಗವದ್ಗೀತೆಯಲ್ಲಿ ಹೇಳಿದ್ದನ್ನೇ ಸ್ವಾಮಿಯವರು ಈ ರೀತಿ ಹೇಳಿದರು.

ಇನ್ನೊಬ್ಬ ಭಕ್ತ "ಮುಕ್ತಿಮಾರ್ಗ" ವನ್ನು ಬೋಧಿಸಿ ಎಂದಾಗ, ಸ್ವಾಮಿಯವರು, "ಅಯ್ಯಾ! ಆಯನನು ಮೂಡು ಲಕ್ಷಲು ಕಟ್ಟಮನು" (ಆತನನ್ನ ಮೂರು ಲಕ್ಷ ಕಟ್ಟು ಎಂದು ಹೇಳು) ಎಂದರು. ಅಷ್ಟು ಹಣ ಇಲ್ಲ ಸ್ವಾಮಿ ಎಂದರೆ, "ಆರು ಲಕ್ಷ ಕಟ್ಟು ಎಂದು ಹೇಳು" ಎಂದರು, ನನ್ನ ಹತ್ತಿರ ಹಣವೇ ಇಲ್ಲ ಸ್ವಾಮೀ ಎಂದರೆ, "ಎಂಟು ಲಕ್ಷ ಕಟ್ಟು ಎಂದು ಹೇಳಯ್ಯಾ" ಎಂದರು.

ಮೂರು ಲಕ್ಷ ಅಂದರೆ ಈಶಾನ ತ್ರಯ (three attachments) ಆರು
104 ಲಕ್ಷ ಎಂದರೆ ಅರಿಷಡ್ವರ್ಗಗಳನ್ನು ಬಿಡು ಎಂದು, ಎಂಟು ಲಕ್ಷ ಎಂದರೆ ಎಂಟು ಮದಗಳಿಗೆ ಸಂಕೇತ (eight kinds of human pride) ಎಂದು ಹೇಳಿದರು ಸ್ವಾಮಿಯವರು.

ಒಮ್ಮೆ ದರೋಡೆಯ ಹುಡುಕಾಟದಲ್ಲಿದ್ದ ಪೊಲೀಸರು ಶ್ರೀ ಸ್ವಾಮಿಯವರನ್ನು ಅನುಮಾನಿಸಿ ಕಲುವಾಯಿ ಎನ್ನುವ ಗ್ರಾಮದಲ್ಲಿ ಪೋಲೀಸು ಠಾಣೆಯಲ್ಲಿ ಒಂದು ಕೋಣೆಯಲ್ಲಿ ಇಟ್ಟರು. ಸಂಜೆಯ ವೇಳೆಗೆ ಕಲುವಾಯಿ ಗ್ರಾಮದ ಜನಗಳಿಗೆ ಆ ವಿಷಯ ತಿಳಿದು ಸಬ್ ಇನ್ಸ್ಪೆಕ್ಟರ್ ಅನ್ನು ಗದರಿಸಿ, "ಅವರನ್ನು ಯಾರೆಂದುಕೊಂಡೆ, ಅವರನ್ನು ಕರೆದುಕೊಂಡು ಬಂದು ಠಾಣೆಯಲ್ಲಿ ಇಟ್ಟುಕೊಂಡೆಯಲ್ಲಾ? ನಿನಗೇನಾದರೂ ಬುದ್ಧಿ

ಇದೆಯೇ"? ಎಂದು ಸ್ವಾಮಿಯವರ ವಿಚಾರ ತಿಳಿಸಿದರು. ಆ ಇನ್ಸ್ಪೆಕ್ಟರ್ 'ಸ್ವಾಮೀ, ತಿಳಿಯದೇ ತಪ್ಪು ಮಾಡಿದೆ. ಕ್ಷಮಿಸಿ ಬಿಡಿ" ಎಂದು ಬೇಡಿಕೊಂಡು ಸ್ವಾಮಿಯವರನ್ನು ಬಿಟ್ಟರು. ಶ್ರೀ ಸ್ವಾಮಿಯವರು, ಆ ಗ್ರಾಮಸ್ಥರೊಂದಿಗೆ, "ಏಮಯ್ಯಾ ಇಕ್ಕಡ್ಡೈನಾ ಬಾಗಾನೇ ಉಂದಯ್ಯಾ" (ಏನಯ್ಯಾ, ಇಲ್ಲಿ ಎಲ್ಲಾ ಚೆನ್ನಾಗಿಯೇ ಇದೆ) ಎಂದು ಹೇಳಿದರು. ಹಾಗೆ ಹೇಳಿ, ಇನ್ನೂ ಆರು ಘಂಟೆ ಅಲ್ಲಿರಬೇಕೆಂದು ಅಲ್ಲಿ ಸ್ವಲ್ಪ ಹೊತ್ತು ಇದ್ದು ಬಂದರು. ಸ್ವಾಮಿಯವರಿಗೆ, ಸುಖದುಃಖ ಎಂಬುವ ದ್ವಂದ್ವಗಳು ಇರಲ್ಲಿಲ್ಲ.

ಒಬ್ಬ ಭಕ್ತ ಬಂದು, "ಸ್ವಾಮೀ! ಹಸ್ತ ಕಾರ್ತಿಯಲ್ಲಿ (related to time of cultivation in agriculture) ಜೋಳವನ್ನು ಹಾಕುತ್ತೇನೆ" ಎಂದು ಹೇಳಿದನು. ಅದಕ್ಕೆ ಸ್ವಾಮಿಯವರು, "ಊರ್ಲೋ ಜೊನ್ನಲನ್ನೀ ನೀವೇ ಗದಯ್ಯಾ" (ಊರಿನ ಜೋಳವೆಲ್ಲಾ ನಿನ್ನದೇ ಅಲ್ಲವೇ) ಎಂದರು. ಸ್ವಾಮಿಯವರ ಮಾತಿನ ಅರ್ಥ ಏನು ಎಂದು ವಿವರವಾಗಿ ತಿಳಿಯದೇ, "ಈ ವರ್ಷ ಗ್ರಾಮಸ್ಥರ ಬೆಳೆ ಬೆಳೆಯುವುದಿಲ್ಲ, ಪ್ರತಿಯೊಬ್ಬರ ಫಸಲು ನನ್ನದಾಗುವುದು" ಎಂದು ಸ್ವಾಮಿಯವರ ಮಾತನ್ನು ಹೀಗೆ ಅರ್ಥ ಮಾಡಿಕೊಂಡು ಹಸ್ತ ಕಾರ್ತಿಯಲ್ಲಿ ಜೋಳವನ್ನು ಬಿತ್ತಿದ. ಆದರೆ, ಆ ಭಕ್ತನ ಹೊಲದಲ್ಲಿ ಒಂದಾದರೂ ಬೀಜ ಬರಲಿಲ್ಲ. ಮಿಕ್ಕ ರೈತರು ಬಹಳ ಉತ್ತಮ ಫಸಲನ್ನು ಹೊಂದಿದರು. ಈ ಭಕ್ತ, ವರ್ಷವೆಲ್ಲಾ ಬೇರೆ ರೈತರ ಹತ್ತಿರ ಜೋಳ ತಂದುಕೊಂಡು ತಿಂದನು. ಈ ರೀತಿಯಲ್ಲಿ ಊರವರ ಜೋಳವೆಲ್ಲಾ ಇವನದ್ದೇ ಆಯಿತು. ಮನುಷ್ಯನಿಗೆ ಆಸೆ ಎನ್ನುವುದು ವಿಭಿನ್ನ ಅರ್ಥಗಳನ್ನು ಮತ್ತು ಭಾವನೆಗಳನ್ನು ಸೃಷ್ಟಿಸುತ್ತದೆ, ಇದನ್ನೇ ನಾವು ಮೇಲೆ ರೈತನ ವಿಷಯದಲ್ಲಿ ನೋಡಿದೆವು. ಈ ರೀತಿಯ ದುರಾಸೆಯನ್ನು ಬಿಡಿ ಎಂದು ಸ್ವಾಮಿಯವರು ಹೇಳುತ್ತಾರೆ.

ನೋತೇಟಿ ಶ್ರೀ ರಾಮುಲು ನಾಯುಡು ಅವರ ನಿಂಬೆ ತೋಟದಲ್ಲಿರುವ, ಅವರ ಗುಡಿಸಲಿನೊಳಗೆ, ಸ್ವಾಮಿಯವರ ಪಟಕ್ಕೆ ಪೂಜೆ ಮಾಡುತ್ತಿದ್ದರು. ಒಂದು ದಿನ, ನೈವೇದ್ಯಕ್ಕೆ ಏನೂ ಇಲ್ಲದೇ ಒಂದು ನಿಂಬೇಕಾಯನ್ನು ಅರ್ಧ ಮಾಡಿ ನೈವೇದ್ಯ ಮಾಡಿದರು. ಆದರೆ, ಅದನ್ನು ಅವರು ಪ್ರಸಾದವಾಗಿ ಸ್ವೀಕರಿಸಲಿಲ್ಲ. ಆ ಸಂಜೆ, ಅವರ ಮನೆಯಿಂದ ಹುರಿಟ್ಟು ತಂದರು. ಆ ಹುರಿಟ್ಟನ್ನು ಸ್ವಾಮಿಯವರಿಗೆ ನೈವೇದ್ಯ ಮಾಡಿ, ನಂತರ, ಅದನ್ನು ಪ್ರಸಾದವಾಗಿ ಬಾಯಿಗೆ ಹಾಕಿಕೊಂಡರು. ಅದು, ನಿಂಬೇರಸದಂತೆ ಹುಳಿಯಾಗಿದ್ದದ್ದು ಅವರಿಗೆ ಬಹಳ ಆಶ್ಚರ್ಯ ಆಯಿತು. **ನೈವೇದ್ಯ ಮಾಡದಿದ್ದ ಹುರಿಟ್ಟು ಸಿಹಿಯಾಗಿಯೇ ಇತ್ತು. ನಾವು ಇಷ್ಟಪಟ್ಟು ತಿನ್ನುವ ಪದಾರ್ಥಗಳನ್ನೇ ದೇವರಿಗೆ ನೈವೇದ್ಯ ಇಡಬೇಕು, ನಾವು ತಿನ್ನುವುದಕ್ಕೆ ಇಷ್ಟಪಡದ ಪದಾರ್ಥವನ್ನು ದೇವರಿಗೆ ಇಡಬಾರದೆಂದು ಶ್ರೀ ಸ್ವಾಮಿಯವರು ಈ ಲೀಲೆಯ ಮೂಲಕ ಬೋಧಿಸುತ್ತಿದ್ದಾರೆಂದು ಅವರು ತಿಳಿದುಕೊಂಡರು. ಇದು ನಮ್ಮಲ್ಲರಿಗೂ ತುಂಬಾ ಒಳ್ಳೆಯ ಉಪದೇಶ.**

105

ಕೆಲವರು, ಹಸುವಿನ ಗಂಜಲವನ್ನು ಪವಿತ್ರ ಎಂದು ಮನೆಯೊಳಗೆ ಸ್ವಲ್ಪ ಚಿಮುಕಿಸುವುದು, ಕೆಲವುರು ಅದನ್ನು ಕಣ್ಣಲ್ಲೂ ಹಾಕಿಕೊಳ್ಳುವ ಅಭ್ಯಾಸ ಇದೆ. ಒಮ್ಮೆ ಶ್ರೀ ರಾಮುಲನಾಯುಡು ಅವರು, **ಗಂಜಲವನ್ನು ತನ್ನ ಗುಡಿಸಲಿನೊಳಗೆ**

106

ಚಿಮುಕಿಸುತ್ತಿರುವಾಗ, ಶ್ರೀ ಸ್ವಾಮಿಯವರ ಭಾವ ಚಿತ್ರದಮೇಲೆ ಕೂಡಾ ಬಿದ್ದಿತು. ಹಾಗೆ ಬಿದ್ದರೆ ಒಳ್ಳೆಯದು ಎಂದುಕೊಂಡು ಆತ ಅದನ್ನು ಒರೆಸಲಿಲ್ಲ. ಆ ರಾತ್ರಿ ಅವರು ಕುಳಿತಿದ್ದಾಗ, ಅವರ ಮೇಲೆ ಏನೋ ಹನಿ ಬಿದ್ದಂತಾಯಿತು. ಅದು ಹಲ್ಲಿಯ ಮೂತ್ರವೆಂದು ಭಾವಿಸಿ, ಮೇಲೆ ನೋಡಿದರೆ, ಹಲ್ಲಿ ಇರಲಿಲ್ಲ. ಆ ಹನಿಯ ವಾಸನೆ ನೋಡಿದರೆ, ಅದು ಗಂಜಲದ ವಾಸನೆ. ಅವರಿಗೆ ಅದು ಅಸಹ್ಯವೆನಸಿತು. ತನ್ನ ಮೇಲೆ ಗಂಜಲ ಹೇಗೆ ಬಿತ್ತು ಎಂದು ಆಲೋಚಿಸಿದಾಗ, "ಪಂಚಿತಂ ನೀ ಪೈನ ಪಡಿತೇ ಅಸಹ್ಯಿಂಚುಕುಂಟಾವೇ, ಮರಿ ನಾಪೈ ಪಡಿತೇ ತುಡವಕುಂದಾ ವದಿಲೇಶಾವೇ" (ಗಂಜಲ ನಿನ್ನ ಮೇಲೆ ಬಿದ್ದರೆ ಅಸಹ್ಯಪಟ್ಟೆ, ಆದರೆ ನನ್ನ ಮೇಲೆ ಬಿದ್ದಾಗ, ಒರಸದೇ ಹೇಗೆ ಬಿಟ್ಟೆ?) ಎಂದು ಶ್ರಿ ಸ್ವಾಮಿಯವರು ಅವರಿಗೆ ಆತ್ಮ ಬೋಧನೆ ಮಾಡಿದರು. "ನನ್ನ ಪಟಕ್ಕೂ, ನನಗೂ ಭೇದ ಏನೂ ಇಲ್ಲ" ಎಂದು ಸ್ವಾಮಿಯವರು ಮತ್ತೊಮ್ಮೆ ನಿರೂಪಿಸಿದರು.

ಓಂ ನಾರಾಯಣ - ಆದಿ ನಾರಾಯಣ

ಅವಧೂತ ಲೀಲೆ

ಅಧ್ಯಾಯ - 22

ಶ್ರೀ ಸ್ವಾಮಿಯವರ ಸೂಕ್ತಿಗಳು

1. "ಬ್ರೇವ್ಮನಿ ತ್ರೇಪೇ ವಾಡಿಕಿ ಕಾದಯ್ಯಾ, ಆಕಲ್ಮೈ ಕೊಂಗುಪಟ್ಟೇವಾರಿಕಿ ಅನ್ನಂ ಪೆಟ್ಟಾಲಿ. (ಬ್ರೇವ್ ಎಂದು ತೇಗುವವರಿಗೆ ಅಲ್ಲಯ್ಯಾ ಊಟ ಕೊಡುವುದು, ಹಸಿವಿನಿಂದ ಬಳಲುತ್ತಿರುವವರಿಗೆ ಕೊಡಬೇಕು.
2. "ಸ್ವಾಮೀ! ಕೆಲವರು ನಿಮ್ಮನ್ನು ಸ್ಮರಿಸಿದ ತಕ್ಷಣವೇ ರಕ್ಷಣೆ ಹೊಂದುತ್ತಿದ್ದಾರೆ, ಕೆಲವರಿಗೆ ನಿಧಾನವಾಗುತ್ತದೆ, ಏಕೆ?" ಎಂದು ಕೇಳಿದಾಗ, "ವಾಳ್ಳುಂದೇದಾನ್ನಿ ಬಟ್ಟಿ ಕದಯ್ಯಾ ಮನಮುಂಡೇದಿ" (ಅವರುಗಳು ಹೇಗಿದ್ದರೆ, ನಾವು ಹಾಗಿರುತ್ತೇವಲ್ಲವೇ?" (ಜನರ ನಂಬಿಕೆಯನ್ನು ಅವಲಂಬಿಸಿ, ಅವರು ಸ್ವಾಮಿಯ ರಕ್ಷಣೆಯನ್ನು ಪಡೆಯುತ್ತಾರೆ)
3. "ಸಂಪೂರ್ಣ ವಿಶ್ವಾಸಂತೋ ಇಕ್ಕಡಕೊಚ್ಚಿ ಏದನುಕುಂಟೇ ಅದಿ ಅಯ್ಯೇದೇಗದಯ್ಯಾ" (ನೀವು ಪೂರ್ಣ ನಂಬಿಕೆಯಿಂದ ಇಲ್ಲಿಗೆ ಬಂದಾಗ, ನೀವು ಏನು ಬಯಸುತ್ತೀರೋ ಅದು ನಡೆಯುತ್ತದೆ ಅಲ್ಲವೇ)
4. "ಅನ್ನಿ ಜೀವುಲಲೋ ವೆಂಕಯ್ಯ ಸ್ವಾಮಿ ವುನ್ನಾಡನಿ ವ್ರಾಸುಕೋ" (ವೆಂಕಯ್ಯ ಸ್ವಾಮಿಯು ಎಲ್ಲ ಜೀವಿಗಳಲ್ಲೂ ಇದ್ದಾರೆ ಎಂದು ಬರೆದುಕೊ). ಇದನ್ನು ಪ್ರತಿ ನಿಮಿಷವೂ ಪ್ರತಿಯೊಬ್ಬರೂ ಈ ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಸದ್ಗುರು ವಿಶ್ವರೂಪದವರೆಂದೂ, ಎಲ್ಲಾ ಜೀವಿಗಳಲ್ಲಿ ನೆಲೆಸಿದ್ದಾರೆ, ಯಾವುದೇ ಜೀವಿಯನ್ನು ಆದರಿಸಿದರೂ ಅಥವಾ ಹಿಂಸಿಸಿದರೂ ಅದು ಸದ್ಗುರುವಿಗೇ ಸಲ್ಲುತ್ತೆಂದು, ನಾವು ಅನುಕ್ಷಣವೂ ನೆನಪಿನಲ್ಲಿಟ್ಟುಕೊಂಡು ಜೀವನವನ್ನು ನಡೆಸಿದರೆ, ಗುರುವಿನ ಕೃಪೆ ಸದಾ ಲಭಿಸುತ್ತದೆ.
5. "ಮೈಸೂರು ಮಹಾರಾಜು ಕನಿಪಿಸ್ತೇ ಮನಕೇಮೊಸ್ತುಂದಿ. ಮನಂ ಚೇಸುಕುನ್ನದೇ ಗದಾ ಮನಕು" ಮೈಸೂರು ಮಹಾರಾಜರು ಕಾಣಿಸಿಕೊಂಡರೆ ಅದರಲ್ಲಿ ನಿಮಗೇನು?. ನಮ್ಮ ಸತ್ಕರ್ಮದ ಫಲವೇ ನಮಗೆ ಮಿಗುವುದು ಅಲ್ಲವೇ? ಸದ್ಗುರು ಮಹಾರಾಜರಂತೆ. ಸದ್ಗುರು ಅವರ ಕೃಪೆ ತೋರಿದರೂ, ನಾವು ಸಾಧನೆ ಮಾಡಿ ಅರ್ಹತೆಯನ್ನು ಗಳಿಸದ ಹೊರತು ಅದನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ.

6. "ಅಂದರಿಕೀ ಪಂಟ ಪಂಡಿಂಚಾನು, ದಾನ್ನಿ ದೊಂಗಲು ಪಡಿ ದೋಚುಕೋಕುಂಡಾ ಚೂಚುಕೋಂಡಿ". ನಾನು ಎಲ್ಲರಿಗೂ ಬೆಳೆಯನ್ನು ಬೆಳಸಿ ಕೊಟ್ಟಿದ್ದೇನೆ, ಅದನ್ನು ಕಳ್ಳರು ಕದ್ದೊಯ್ಯದಂತೆ ನೋಡಿಕೊಳ್ಳಿ. ನಮ್ಮಲ್ಲಿರುವ ದುರ್ಗುಣಗಳೇ ಕಳ್ಳರು.
7. ನೀವು ನನ್ನನ್ನು ಬಿಟ್ಟರೂ, ನಾನು ನಿಮ್ಮನ್ನು ಬಿಡುವುದಿಲ್ಲ.
8. ಸಾವಿರ ಕುರಿಗಳ ಮಧ್ಯದಲ್ಲಿದ್ದರೂ, ನಮ್ಮ ಕುರಿಯನ್ನು ಕಾಲು ಹಿಡಿದು ಎಳೆದುಕೊಂಡು ಬರಬಹುದು.
9. ಎಲ್ಲರನ್ನೂ ಸಮಾನವಾಗಿ ನೋಡಿದರೆ ಭಗವಂತ ಕಾಣಿಸಿಕೊಳ್ಳುತ್ತಾನೆ.
10. ಒಮ್ಮೆ ಆಶ್ರಮದಲ್ಲಿ "ನನಗೆ ಹಸಿವಿಲ್ಲ, ಊಟ ಬೇಡ ಎಂದು ಹೇಳುವ ಒಬ್ಬ ಭಕ್ತನಿಗೆ, ಸ್ವಲ್ಪವಾದರೂ ತಿನ್ನು" ಎಂದು ಕೆಲವರು ಬಲವಂತ ಮಾಡುತ್ತಿದ್ದರು. ಸ್ವಾಮಿಯವರು ಅವರಿಗೆ ಹೀಗೆ ಹೇಳಿದರು, "ಮಂದಂ, ಬಂಧಂ" ನಾವು ನಮ್ಮ ದೇಹಕ್ಕೆ ಅಗತ್ಯಕ್ಕಿಂತ ಹೆಚ್ಚು ತಿಂದಾಗ ಅದು ಬಂಧಕ್ಕೆ ಕಾರಣವಾಗುತ್ತದೆ. ದೇವರು ನಮಗೆ ಆಹಾರವನ್ನು ತರಲು ಪ್ರಕೃತಿ ಶಕ್ತಿಗಳ ರೂಪದಲ್ಲಿ ಕೆಲಸ ಮಾಡುತ್ತಾನೆ. ನಾವು ಅತಿಯಾಗಿ ತಿಂದರೆ, ನಾವು ದೇವರಿಗೆ ಋಣಿಯಾಗುತ್ತೇವೆ.
11. "ವೆಂಕಯ್ಯ ಸ್ವಾಮಿಯವರ ಹೆಸರು ಹೇಳಿ ಒಂದು ಹಿಡಿ ಅನ್ನ ಕೊಟ್ಟವರಿಗೆ, ಮತ್ತು ತಂದವರಿಗೆ, ಸ್ವಾಮಿಯವರೇ ಅವರ ಯೋಗಕ್ಷೇಮವನ್ನು (ಅದು ಒಳ್ಳೆಯದಾಗಲಿ ಅಥವಾ ಕೆಟ್ಟದಾಗಲಿ) ನೋಡಿಕೊಳ್ಳ ಬೇಕಲ್ಲವೇ?"
12. "ನಮಗೇನಾದರೂ ಬೋಧಿಸಿ, ಸ್ವಾಮೀ" ಎಂದು ಕೇಳಿದವರಿಗೆ, "ಹೇಳುವುದೇನಿದೆ, ನೋಡಿ ಕಲಿತುಕೊಳ್ಳಿ" ಎಂದರು ಸ್ವಾಮಿಯವರು. ನಾವು ಅವರನ್ನು ನೋಡಿ ಕಲಿಯ ಬೇಕಾದುದನ್ನು "ಅವಧೂತ ಬೋಧಾಮೃತಂ" ನಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ.
13. "ಮಂತ್ರೋಪದೇಶ" ಮಾಡಿ ಎಂದು ಕೇಳಿದ ಭಕ್ತನಿಗೆ, "ಮಂತ್ರ ಎಲ್ಲಿದೆ, ತಂತ್ರ ಎಲ್ಲಿದೆ? ನೋಡುತ್ತಾ ಹೋಗುವುದೇ ಅಲ್ಲವೇ?" ಎಂದರು. ನಮ್ಮಲ್ಲಿ ದುರ್ಗುಣಗಳು ಸೇರದಂತೆ ನೋಡಿಕೊಳ್ಳುತ್ತಾ, ಸದ್ಗುರು ಆಚರಿಸಿ ತೋರಿಸಿದ ಮಾರ್ಗದಲ್ಲಿ ನಡೆಯುವುದೇ ನಮ್ಮ ಕರ್ತವ್ಯ.
14. "ಸನ್ಯಾಸಿಗಳು ಧರ್ಮದಿಂದಲ್ಲಿರುವುದರಲ್ಲಿ ಶ್ರೇಷ್ಠ ಏನಿದೆ? ಸಂಸಾರದಲ್ಲಿರುವವರು ಧರ್ಮದಲ್ಲಿ ಇರುವುದೇ ಶ್ರೇಷ್ಠ.
15. ಬಡ್ಡೀ ವಿಷಯದಲ್ಲಿ ಕೂಡ ನೀತಿವಂತರಾಗಿರಬೇಕು.

16. "ನಮಗೇನಾದರೂ ಬೋಧಿಸಿ ಸ್ವಾಮೀ" ಎಂದು ಕೇಳಿದವರಿಗೆ, "ಸತ್ಯ, ಧರ್ಮ, ಸಂಪನ್ನತ್ವ, ಸಾಧಾರಣತ್ವ, ಸದ್ಗುರುಸೇವೆಯನ್ನು ಸಾಧಿಸಿ" ಎಂದರು.

ಸಂಪನ್ನತ್ವ ಎಂದರೆ, ದೈವಿಕ ಸಂಪತ್ತಿನ ಲಕ್ಷಣಗಳು. ಸಧಾರಣತ್ವ ಎಂದರೆ
107 **ಎಲ್ಲಾ ರೀತಿಯ ಗರ್ವ ಮತ್ತು ಅಹಂಕಾರವಿಲ್ಲದೆ, "ಅಲ್ಲಾ ಮಾಲಿಕ್" ಎನ್ನುವ ಭಾವನೆಯನ್ನು ಆಚರಿಸುತ್ತಾ ಅದನ್ನು ಜೀರ್ಣಿಸಿಕೊಂಡು ಇರುವುದು. ಸದ್ಗುರು**

ಸೇವೆ ಎಂದರೆ, ಸದ್ಗುರು ವಿಶ್ವವ್ಯಾಪಿ ಎಂಬ ಭಾವನೆಯೊಂದಿಗೆ ಪ್ರತಿ ನಿಮಿಷವೂ ಬದುಕಬೇಕು. ಯಾವುದೇ ಜೀವಿಯನ್ನು ಪ್ರೀತಿಸಿದರೂ ಅಥವ ಹಿಂಸಿಸಿದರೂ ಅದು ಗುರುವಿಗೇ ಸೇರುತ್ತದೆ ಎಂಬ ಅರಿವಿನೊಂದಿಗೆ ಬದುಕಬೇಕು.

17. ಸದಾ ತಮ್ಮ ತಮ್ಮಲ್ಲೇ ಜಗಳವಾಡುತ್ತಿದ್ದ ಕೆಲವು ಸೇವಕರನ್ನು ಕರೆದು 'ಬಾಯಿ ಬಿಡಬೇಡಿ' ಎಂಬ ಒಂದೇ ಮಾತನ್ನು ಬೋಧಿಸುತ್ತಿದ್ದರು.
18. "ಅಲ್ಲಿ ನೋವು ಇದೆ, ಇಲ್ಲಿ ನೋವು ಇದೆ" ಎಂದು ನಿರಂತರವಾಗಿ ಹೇಳುತ್ತ, ಮತ್ತು ತಮ್ಮ ಆರೋಗ್ಯ ಸಮಸ್ಯೆಗಳ ಬಗ್ಗೆ ದೂರು ನೀಡುತ್ತಿದ್ದ ಸೇವಕರಿಗೆ "ಸಾಧ್ಯವಾದಷ್ಟು ನೋವನ್ನು ಅನುಭವಿಸುವುದು ಒಳ್ಳೆಯದು" ಎಂದು ಸ್ವಾಮಿಯವರು ಹೇಳುತ್ತಿದ್ದರು.
19. ನಾಕಾಣೆ ಕದ್ದರೆ, ಹತ್ತು ರುಪಾಯಿ ನಷ್ಟವಾಗುತ್ತದೆ ಎನ್ನುತ್ತಿದ್ದರು.
20. "ಮನುಷ್ಯನಾಗಿ ಮರಣಿಸಿದರೆ, ಮನುಷ್ಯನಾಗಿಯೇ ಬರುತ್ತಾನೆ", - "ಮನುಷ್ಯ ಜನ್ಮದಲ್ಲಿ ಸತ್ಕಾರ್ಯ ಮಾಡಿದರೆ, ಮನುಷ್ಯನಾಗಿಯೇ ಹುಟ್ಟುತ್ತಾನೆ" .
21. ತಪ್ಪು ಮಾಡಿದ ಸೇವಕರನ್ನು ಸ್ವಾಮಿಯವರು ಏನೂ ಅನ್ನಲಿಲ್ಲ ಎಂದು ಭಾವಿಸಿದವರಿಗೆ, "ಹೋಗುವವರನ್ನು ಹೋಗಲು ಬಿಡುವುದೇ ಅಲ್ಲವೇ?" ಎನ್ನುತ್ತಿದ್ದರು.
22. "ಮುಂದೆ ಮುಂದೆ ಬರುವ ದಿನಗಳಲ್ಲಿ ಜನರು ಮರದ ಸೌಟಿನ ಸ್ಪರ್ಶವಿಲ್ಲದೆ ಮಾಡಿದ ಅನ್ನವನ್ನು ತಿನ್ನುತ್ತಾರಯ್ಯೋ! " ಎಂದರು ಸ್ವಾಮಿಯವರು.
23. ಅತಿಯಾದ ದುರಾಸೆಯು, ಎಲ್ಲವನ್ನೂ ಕಳೆದುಕೊಳ್ಳಲು ಕಾರಣವಾಗುತ್ತದೆ. ಇದು ಸರ್ವಶಾಸ್ತ್ರಗಳ ಸಾರಾಂಶ.
24. "ದಾರ ಕಿತ್ತುಹೋಗದ ಹಾಗೆ ನೋಡಿಕೊಂಡರೆ ನಾನು ಯಾವಾಗಲೂ ನಿಮ್ಮ ಜೊತೆಯಲ್ಲಿಯೇ ಇರುತ್ತೇನೆ" ಎಂದರು.
25. "ಒಬ್ಬರನ್ನು ಆಚೆ ಹೋಗು ಎನ್ನುವುದಕ್ಕಿಂತ ನಾವೇ ಆಚೆ ಹೋಗುವುದು ಉತ್ತಮ" ಎಂದರು.

ಅವಧೂತ ಲೀಲೆ

ಅಧ್ಯಾಯ - 23

"ನಂಬಿದವರಿಗೆ ಐಶ್ವರ್ಯ – ಇಲ್ಲದಿದ್ದರೆ...."

108

ಭಗವಂತನು ಅನುಗ್ರಹಿಸಿದರೂ, ವಿಶ್ವಾಸವಿಲ್ಲದವರು, ಏನನ್ನೂ ಪಡೆಯುವುದಿಲ್ಲ. ಭಗವಂತನ ಮತ್ತು ಸದ್ಗುರುವಿನ ಮಾತುಗಳಲ್ಲಿ ಸಂಪೂರ್ಣ ವಿಶ್ವಾಸವಿಟ್ಟು, ಅವರು ಹೇಳಿದ ಹಾಗೆ ಚಾಚೂ ತಪ್ಪದೇ ಮಾಡಿದವರಿಗೆ ಮಾತ್ರವೇ, ಅವರ ಕೃಪೆ ಲಭ್ಯವಾಗುತ್ತದೆ. ಹಾಗೆ ಮಾಡದವರಿಗೆ ಕೃಪೆ ಕಾಡಿನಲ್ಲಿ ಬೆಳಕಿನಂತೆ.

ಇಲ್ಲಿಯವರೆಗೆ, ಶ್ರೀ ಸ್ವಾಮಿಯವರು ಹೇಳಿದ ಮಾತಿನ ಮೇಲೆ ವಿಶ್ವಾಸವಿಟ್ಟು ಸಫಲರಾದವರ ಅನುಭವಗಳನ್ನು ನೋಡಿದೆವು. ಹಾಗಲ್ಲದೆ, ಸ್ವಾಮಿಯವರ ಮಾತನ್ನು ಅನುಮಾನಿಸಿದವರ ಅನುಭವಗಳನ್ನು ಈಗ ನೋಡೋಣ.

ಗೊಲಗಮೂಡಿಯ ನಿವಾಸಿ ಗೊಡ್ಡಟಿ ಶೇಷಯ್ಯನವರು ಅನಾರೊಗ್ಯದಿಂದ ಬಳಲುತ್ತಾ, ಸ್ವಾಮಿಯವರು, ಗುಣಪಡಿಸುತ್ತಾರೆಂದು, ಸ್ವಾಮಿಯವರ ಬಳಿಗೆ ಬಂದು ಅವರ ಅಸ್ವಸ್ಥತೆಯ ವಿಚಾರ ತಿಳಿಸಿದರು. ಆಗ, ಶ್ರೀ ಸ್ವಾಮಿಯವರು, "ಗುಂಟ ಕಲಗರಾಕು, ವ್ರೇಳ್ಳಪೈನುನ್ನ ತಾಟ ನೂರಿ ಮೂಡು ಪೂಟಲಾ ಮ್ರಿಂಗು" (ಭೃಂಗರಾಜ ಗಿಡದ ಬೇರುಗಳ ಮೇಲಿನ ಸಿಪ್ಪೆ ಅರಿದು ದಿನಕ್ಕೆ ಮೂರು ಬಾರಿ ತೆಗೆದುಕೊ) ಎಂದರು. ಅವರು ಸ್ವಾಮಿಯವರು ಹೇಳಿದ ಹಾಗೇ ಮಾಡಿದರು ಆದರೆ, ಅವರಿಗೆ ಸಂದೇಹವಿತ್ತು. ಮರುದಿನ ಬೆಳಿಗ್ಗೆ, ಅವರು ಸ್ವಾಮಿಯವರ ಹತ್ತಿರ ಬಂದ ತಕ್ಷಣ, ಅವರು ಮಾತನಾಡುವ ಮೊದಲೇ ಸ್ವಾಮಿಯವರು, "ಅಯ್ಯಾ, ದಾನಿಕಿ ತಗ್ಗದು ಗಾನಿ, ಒಕ ಮನಿಷಿ ವಸ್ತಾಡು. ಆಯನ ದಗ್ಗರ ಮಂದು ತೀಸುಕೋ" (ಅಯ್ಯಾ! ಅದಕ್ಕೆ ಗುಣವಾಗುವುದಿಲ್ಲ ಆಗಲಿ, ಒಬ್ಬ ಮನುಷ್ಯ ಬರುತ್ತಾನೆ, ಅವನಿಂದ ಔಷಧಿ ತೆಗೆದುಕೊ" ಎಂದರು. ಸ್ವಾಮಿಯವರಿಗೆ ಶೇಷಯ್ಯನವರ ಮನಸ್ಸಿನಲ್ಲಿ ಬಂದ ಸಂದೇಹ ಗೊತ್ತಿಲ್ಲದೇ ಇರುತ್ತದೆಯೇ?

ವಿ. ರಾಮಮೂರ್ತಿ (ನೆಲ್ಲೂರಿನ ನಿವಾಸಿ) ಅವರ ಅಣ್ಣನ ಮಗನಿಗೆ, ಮೂರು ಹೆಣ್ಣು ಮಕ್ಕಳು ಜನಿಸಿದರು. ನಾಲ್ಕನೇ ಹೆರಿಗೆಗೂ ಮುನ್ನ ಸ್ವಾಮಿಯವರಿಗೆ ಗಂಡು ಮಗು ಜನಿಸುವಂತೆ ಆಶಿರ್ವಾದಿಸಲು ಪ್ರಾರ್ಥಿಸಿದರು. "ಅರ್ಧರಾತ್ರಿ ವೇಳ ಏ ದೇವಸ್ಥಾನಮುಲೋನೈನಾ ರೋಜುಕು ಮೂಡು ಪ್ರದಕ್ಷಿಣಲು ಚೊಪ್ಪುನ, ಮೂಡು ರೋಜುಲು ಚೇಸ್ತೇ ಮಗಸಂತತಿ ಕಲ್ಗುತುಂದಿ" (ಯಾವುದೇ ದೇವಸ್ಥಾನದಲ್ಲಾದರೂ ಮಧ್ಯರಾತ್ರಿ ಮೂರು ದಿನ ಮೂರು ಪ್ರದಕ್ಷಿಣೆ ಮಾಡಿದರೆ ಗಂಡು ಮಗುವಾಗುತ್ತದೆ) ಎಂದು ಹೇಳಿದರು. "ಗರ್ಭಿಣಿಗೆ ದಿನ ತುಂಬಿದೆಯಲ್ಲವೇ? ಅರ್ಧರಾತ್ರಿ ಪ್ರದಕ್ಷಿಣೆ ಮಾಡುವುದು

ಕಷ್ಟ ಜೊತೆಗೆ ಈಗ ಪ್ರದಕ್ಷಿಣೆ ಮಾಡಿದರೆ, ಮಗುವಿನ ಲೈಂಗಿಕತೆಯು ಹೇಗೆ ಬದಲಾಗುತ್ತದೆ" ಎಂದು ಸ್ವಾಮಿಯವರು ಹೇಳಿದ ಮಾತನ್ನು ನಿರ್ಲಕ್ಷಿಸಿದರು. **ಅವರಿಗೆ ಮತ್ತೆ ಹೆಣ್ಣು ಮಗುವೇ ಹುಟ್ಟಿತು. ಶ್ರದ್ಧೆ ಇಲ್ಲದವರಿಗೆ ಪರಮಾತ್ಮ ಕೃಪೆ ತೋರಿದರೂ ಪ್ರಯೋಜನ ಇಲ್ಲ!** 109

ಇಂದುಕೂರು ಪೇಟೆಯಲ್ಲಿದ್ದ ಆತ್ಮಕೂರು ವೆಂಕಯ್ಯ ಹೀಗೆ ಹೇಳಿದರು. **"ಅಯ್ಯಾ, ಎತ್ತಿಗೆ ಬಂಡಿಯಿಂದ ಗಂಡಾಂತರ ಇದೆ, ಅದನ್ನು ಮಾರಿಬಿಡು" ಎಂದರು ಸ್ವಾಮಿಯವರು. ಅವರು ಮಾರಾಟ ಮಾಡಲು ಯೋಚಿಸಿದ್ದರೂ, ಸೂಕ್ತವಾದ ಬೆಲೆ ಪಡೆಯಲು ಬಹಳ ಸಮಯ ತೆಗೆದುಕೊಂಡಿದ್ದರಿಂದ ಮಾರಾಟಕ್ಕೆ ಸ್ವಲ್ಪ ತಡವಾಯಿತು. ಒಂದು ರಾತ್ರಿ, ಆ ಎತ್ತು, ಬಂಡಿಯ ಚಕ್ರದ ಸಂದಿಯಲ್ಲಿ ತಲೆ ತೂರಿಸಿ, ಉಜ್ಜಿಕೊಳ್ಳಲು ಪ್ರಯತ್ನಿಸಿತು. ಅದರ ಕೊಂಬುಗಳು ಚಕ್ರಕ್ಕೆ ಸಿಕ್ಕಿ, ತೆಗೆಯಲಾರದೆ, ಬೆಳಗಾಗುವ ಹೊತ್ತಿಗೆ ಸಾವಪ್ಪಿತು.** 110

ರಾವೂರು ತಾಲ್ಲೂಕು, ಪೆನವರ್ತಿ ಗ್ರಾಮ ನಿವಾಸಿ ಶ್ರೀ ರಾಮುಲು ಶೆಟ್ಟಿಯವರಿಗೆ ಕುಷ್ಟವ್ಯಾಧಿ ಇತ್ತು. ಕೈ ಮತ್ತು ಕಾಲುಗಳು ಊದಿಕೊಂಡಿದ್ದವು, ಶರೀರದಮೇಲೆ ಮಚ್ಚೆಗಳು ಮತ್ತು ಕಾಲಿನ ಹೆಬ್ಬೆರಳಲ್ಲಿ ಹುಣ್ಣಾಗಿತ್ತು. ಆತ ಶ್ರೀ ಸ್ವಾಮಿಯವರನ್ನು ಆಶ್ರಯಿಸಿದರು. ಸ್ವಾಮಿಯವರು, ಶೆಟ್ಟಿಯವರ ಶರೀರಕ್ಕೆ, ಎಣ್ಣೆಯನ್ನು ಹಚ್ಚುತ್ತಿದ್ದರು. ಶೆಟ್ಟಿಯವರ ಮನೆಗೆ ಆಗಾಗ ಹೋಗಿ, ಅವರ ಆತಿಥ್ಯ ಸ್ವೀಕರಿಸುತ್ತಿದ್ದರು. ಸ್ವಾಮಿಯವರು ಎಲ್ಲಿದ್ದರೆ ಶೆಟ್ಟಿಯವರು ಅಲ್ಲಿ ಹೋಗಿ ದರ್ಶನ ಮಾಡುತ್ತಿದ್ದರು. ಸ್ವಲ್ಪ ಸಮಯದ ನಂತರ, ಅವರ ವ್ಯಾಧಿ ಗುಣವಾಯಿತು. ಆದರೆ, ಶೆಟ್ಟಿಯವರು, **ಸ್ವಾಮಿಯವರು ಹೇಳಿದ ಸ್ತ್ರೀ ಪಥ್ಯದ ನಿಯಮಗಳನ್ನು ಪಾಲಿಸಲಿಲ್ಲ. ಆದ್ದರಿಂದ ಅವರಿಗೆ ಆ ವ್ಯಾಧಿ ಮತ್ತೆ ಬಂದಿತು. (ಶ್ರೀ ಸ್ವಾಮಿಯವರಹಾಗೆ, ಆ ವ್ಯಾಧಿಯನ್ನು ನಾವು ಗುಣಪಡಿಸಲು ಸಾಧ್ಯ ಆಗುವುದಿಲ್ಲ, ಆದರೆ, ಆ ವ್ಯಾಧಿ ಇರುವವರನ್ನು ನೋಡಿ ಅಸಹನೆಯಿಂದ ಅಸಭ್ಯವಾಗಿ ವರ್ತಿಸದೆ ಭಿಕ್ಷೆ ಕೊಟ್ಟರೆ ಅದೂ ಸೇವೆಯೇ)** 111

ಒಮ್ಮೆ, ವೆಲೂರು ಸುಬ್ರಹ್ಮಣ್ಯಂ, ಸ್ವಾಮಿಯವರ ಜೊತೆ ತಿರುವಳ್ಳೂರಿಗೆ ಹೋದರು. ಸ್ವಾಮಿಯವರು ಒಂದು ಜಾಗದಲ್ಲಿ ನಿಂತು, ಬೆಟ್ಟದ ಕಲ್ಲನ್ನು ಪರೀಕ್ಷಿಸುತ್ತಿದ್ದರು. ಸ್ವಲ್ಪ ಸಮಯದ ನಂತರ, ಸ್ವಾಮಿಯವರು ಒಂದು ಸಣ್ಣ ಕಡ್ಡಿಯೊಂದಿಗೆ ನೆಲದ ಮೇಲಿದ್ದ ಒಂದು ರೂಪಾಯಿ ನಾಣ್ಯವನ್ನು ಜರುಗಿಸಿ, "ಈ ರೂಪಾಯಿನಿಂದ ಕರ್ಪೂರ ಕೊಂಡು ಭಗವಂತನಿಗೆ ಹಚ್ಚು" ಎಂದು ಆ ರೂಪಾಯಿ ನಾಣ್ಯವನ್ನು ತೋರಿಸಿದರು. ಸ್ವಾಮಿಯವರು ಎಂದೂ ಹಣವನ್ನು ಇಟ್ಟುಕೊಳ್ಳುತ್ತಿರಲಿಲ್ಲ. ಆದರೆ, ಆ ರೂಪಾಯಿ ನಾಣ್ಯ ಅಲ್ಲಿ ಹೇಗೆ ಬಂತು ಎಂದು ಸುಬ್ರಹ್ಮಣ್ಯಂ ಅವರಿಗೆ ಗೊತ್ತಾಗಲಿಲ್ಲ. ಸುಬ್ರಹ್ಮಣ್ಯಂ ಕರ್ಪೂರ ಹಚ್ಚುತ್ತೇನೆ ಎಂದು ಸ್ವಾಮಿಯವರಿಗೆ ಹೇಳಿದನೇ ಹೊರತು, ತಕ್ಷಣ ಮಾಡಲಿಲ್ಲ. ಆ ನಾಣ್ಯವನ್ನು ತನ್ನ ಜೇಬಿನಲ್ಲಿ ಹಾಕಿಕೊಂಡು ದೇವಾಲಯಕ್ಕೆ ಹೋದರು. ದೇವಾಲಯದಲ್ಲಿ ತುಲಸಮ್ಮನವರು, ಇವರಿಗೆ 10 ರೂ ಗೆ ಚಿಲ್ಲರೆ ತಂದುಕೊಡು ಎಂದು ಕೇಳಿದಾಗ, ಅವರ ಜೇಬಿನಲ್ಲಿದ್ದ ನಾಣ್ಯವನ್ನು ಕೊಟ್ಟು ಉಪಯೋಗಿಸಿಕೊಳ್ಳಿ ಎಂದು ಹೇಳಿದರು. ಆ ಸಂಜೆ,

ಸ್ವಾಮಿಯವರು "ಕರ್ಪೂರವನ್ನು ಹಚ್ಚಿದೆಯಾ" ಎಂದು ಕೇಳಿದಾಗ, "ಹಚ್ಚಿದೆ" ಎಂದು ಉತ್ತರಿಸಿದರು, ಆದರೆ ಅದು ನಿಜವಾಗಿ ಹಚ್ಚಿರಲಿಲ್ಲ. ತುಲಸಮ್ಮ ಆ ಹಣವನ್ನು ಖರ್ಚು ಮಾಡಿದ್ದು ಕಡ ದೇವರಿಗೇ ಅಲ್ಲವೇ ಎಂದು ಮನಸ್ಸಿನಲ್ಲಿ ಅಂದುಕೊಂಡರು. ಮೂರು ತಿಂಗಳು ಕಳೆಯಿತು.

ಒಂದು ರಾತ್ರಿ, ಅವನಿಗೆ ಸ್ವಪ್ನದಲ್ಲಿ ಒಂದು ದೊಡ್ಡ ಕರ್ಪೂರದ ಗೆಡ್ಡೆ ಉರಿಯುತ್ತಾ ಪ್ರಜ್ವಲಿಸುತ್ತಿದ್ದಹಾಗೆ ಕಂಡಿತು. ಅದನ್ನು ನೋಡಿ ಅವನಿಗೆ ಭಯದಿಂದ, ಎಚ್ಚರವಾಯಿತು. ಹೀಗೇಕೆ ಕನಸು ಬಿದ್ದಿತು ಎಂದು ಯೋಚಿಸಿದಾಗ, ಅವನಿಗೆ ಸ್ವಾಮಿಯವರು ಹೇಳಿದ ಮಾತು ನೆನಪಿಗೆ ಬಂದಿತು. ತಕ್ಷಣ ಎದ್ದು, ತಿರುವಳ್ಳೂರಿಗೆ ಹೋಗಿ, ಕರ್ಪೂರವನ್ನು ಹಚ್ಚಿ, ಕೆನ್ನೆಗೆ ಹೊಡೆದುಕೊಂಡು, ಕ್ಷಮಾಪಣೆಯನ್ನು ಕೇಳಿದನು. **ಸದ್ಗುರುವಿನ ಕೃಪೆ ಹೊಂದಿದರೂ, ಅವರ ಸೂಚಿಸಿದ ಸಲಹೆ ಮೇಲೆ ಪೂರ್ತಿ ವಿಶ್ವಾಸ ಇಲ್ಲದವರಿಗೆ ಪೂರ್ತಿ**
112 **ಫಲ ಪಡೆಯುವುದಿಲ್ಲ ಎಂದು ವೇಲೂರು ಸುಬ್ರಹ್ಮಣ್ಯಂರವರ ಅನುಭವಗಳು ನಮಗೆ ಸೂಚಿಸುತ್ತಿವೆ.**

ವೇಲೂರು ಸುಬ್ರಹ್ಮಣ್ಯಂ ಅವರು ತಮ್ಮ ಅನುಭವಗಳನ್ನು ಹೀಗೆ ಹೇಳಿದರು.

“1970 ರಲ್ಲಿ ನಾನು ಮತ್ತು ನನ್ನ ಹೆಂಡತಿ ಶ್ರೀ ಸ್ವಾಮಿಯವರ ಆಶೀರ್ವಾದವನ್ನು ಪಡೆದು ಗೊಲಗಮೂಡಿಯಿಂದ ಹೊರಟೆವು, ನಾವು ನಮ್ಮ ಮನೆಗೆ ಹೋಗಲು ಬಸ್ಸಿಗಾಗಿ ಕಾಯುತ್ತಿದ್ದೆವು. ಆಗ, ಕರುಣಾಮೂರ್ತಿಯಾದ ಸ್ವಾಮಿಯವರು ನಮ್ಮ ಹತ್ತಿರ ಬಂದು, "ನಿನಗೆ ಸುವರ್ಣ ಕಾಲ ಸಮೀಪಿಸುತ್ತಿದೆ. ನಾನು ನಿನಗೆ ಒಂದು ಚೀಟಿ ಬರೆಸಿ ಕೊಟ್ಟರೂ, ಆ ಸ್ಥಳದ ಗುರ್ತು ತಿಳಿಯುವುದಿಲ್ಲ. ನಾನು ನಿನಗೆ ಆ ಜಾಗವನ್ನು ತೋರಿಸಬೇಕಾಗಿದೆ. ಅದು ತಲಪೂರಿನಲ್ಲಿ ಎಗವರ ಎಂಬವರ ಮನೆಯ ಪಶ್ಚಿಮ ದಿಕ್ಕಿನಲ್ಲಿದೆ. ನಾನು ಆಜ್ಞಾಪಿಸಿದರೆ, ಆ ಮನೆ ಕೂಡ ಆ ಸ್ಥಳದೊಂದಿಗೆ, ನಿನ್ನ ಪರವಾಗುತ್ತದೆ. ನೀನು ಮತ್ತು ನಿನ್ನ ಹೆಂಡತಿ ಅಲ್ಲೇ ಇದ್ದು ಸಂಸಾರ ಮಾಡಿ" ಎಂದರು. ನನಗೆ ಈ ರೀತಿ ಜಾಗ ಬದಲಾಯಿಸುವುದು ಇಷ್ಟ ಇರಲಿಲ್ಲ. ಆದರೆ, ಸ್ವಾಮಿಯವರು ಹೇಳಿದರಿಂದ, ಆಗಲಿ, ಬನ್ನಿ ಸ್ವಾಮೀ, ಆ ಜಾಗ ತೋರಿಸಿ" ಎಂದನೇ ಹೊರತು, ನಾನು ಮನಸ್ಸಿನಲ್ಲಿ ಮಾತ್ರ ತಲಪೂರಿನಲ್ಲಿರುವ ನನ್ನ ಸಂಬಂಧಿಕರು ನಾನು ಈ ಹುಚ್ಚು ವೆಂಕಯ್ಯನ ಜೊತೆ ತಿರುಗುತ್ತಿದ್ದೇನೆ ಎಂದು ಆಡಿಕೊಳ್ಳುತ್ತಾರೆ ಎಂದು ಯೋಚಿಸುತ್ತಿದ್ದೆ. ತಕ್ಷಣ ಆ ಸರ್ವಜ್ಞಮೂರ್ತಿ ನನ್ನ ಮನಸ್ಸಿನಲ್ಲಿದ್ದ ಮಾತು ಗುರ್ತಿಸಿ, "ಅಯ್ಯಾ! ಪಿಚ್ಚಿ ವೆಂಕಯ್ಯ ಮೀದನೇ ಚೆಪ್ಪು. ನಾಕೇಮೀ ಪರವಾಲೇದು” (ಅಯ್ಯಾ! ಹುಚ್ಚು ವೆಂಕಯ್ಯನ ಮೇಲೆ ಹಾಕು, ನನಗೇನೂ ಪರವಾಗಿಲ್ಲ) ಎಂದು ನನ್ನ ಜೊತೆ ಬಸ್ಸಿನಲ್ಲಿ ನೆಲ್ಲೂರಿಗೆ ಬಂದರು. ನಾವುಗಳು ತಲಪೂರಿಗೆ ಹೋಗುವ ಬಸ್ಸು ಹತ್ತಿ ಕುಳಿತುಕೊಂಡೆವು. ಆದರೆ, ಸ್ವಲ್ಪ ಸಮಯದ ನಂತರ, ನನ್ನ ಬುದ್ದಿ ಬದಲಾಯಿಸಿತು. ತಲಪೂರಿಗೆ ಹೋಗಿ ನಗೆಪಾಟಲಿಗೀಡಾಗಲು ನನಗೆ ಇಷ್ಟವಿರಲಿಲ್ಲ, ಆದ್ದರಿಂದ, "ಸ್ವಾಮಿ ನೀವು ಮುದಿಗೇಡಿಗೆ ಹೋಗಿ, ನಾನು ನನ್ನ ಬಂಧುಗಳ ಮನೆಗೆ ಹೋಗಿ ಬರುತ್ತೇನೆ" ಎಂದು ಹೇಳಿ ಬಸ್ಸು ಇಳಿಯಲು ಹೋದೆ.

ತಕ್ಷಣ ಸ್ವಾಮಿಯವರ ಮುಖ ಒಂದು ಲಕ್ಷ ರೂಪಾಯಿ ಕಳೆದುಕೊಂಡವರಂತೆ ದುಃಖಿತರಾದರು. ಸ್ವಾಮಿಯವರು, "ಅಯ್ಯ! ನೇನು ನೀಕೋಸ್ಂ ವಸ್ತೇ, ನೀವು ನಾಮಾಟ ವಿನಕುಂಡಾ ಪೋತುನ್ನಾವೇ? ನೀಕು ಅನ್ನಂ ಚೇಸಿ ಪೆಟ್ಟೇ ಆಮೆಕು ಎಡಮ ಕಾಲುಕು ಗಡ್ಡ ವಚ್ಚೇಟಟ್ಲುಂದಿ. ಮದ್ರಾಸು ಆಸುಪತ್ರಿಕಿ ಪೋವಲಸಿ ವಸ್ತುಂದಿ. ನೀವು ನೆಲ್ಲೂರು ರಂಗನಾಯಕುಲ ದೇವಸ್ಥಾನಂಲೋ ಪಾವ್ಲಾ ಇಚ್ಚಿ ಪ್ರಸಾದಪು ಅನ್ನಂ ಕೊನಿ ಮೂಡು ಪೂಟಲು ಆಮೆಕು ಪೆಟ್ಟಿಂಚು. ಕೊಂತ ಜಬ್ಬು ತಗ್ಗಿಸ್ತಾರು"(ನಾನು ನಿನಗಾಗಿ ಬಂದೆ ಆದರೆ ನೀನು ನನ್ನ ಮಾತು ಕೇಳುತ್ತಿಲ್ಲವೇ! ನಿನಗೆ ಅಡುಗೆ ಮಾಡುವ ಮಹಿಳೆಗೆ, ಅವಳ ಎಡ ಕಾಲಿನ ಮೇಲೆ ದೊಡ್ಡ ಗೆಡ್ಡೆ ಬರುವಹಾಗಿದೆ. ನೀನು ಮದ್ರಾಸ್ ಆಸ್ಪತ್ರೆಗೆ ಹೋಗಬೇಕಾಗುತ್ತದೆ. ನೀನು ನೆಲ್ಲೂರು ರಂಗನಾಯಕನ ದೇವಸ್ಥಾನದಲ್ಲಿ ನಾಲ್ಕಾಣೆ ಕೊಟ್ಟು ಅನ್ನದ ಪ್ರಸಾದವನ್ನು, ಮೂರು ಹೊತ್ತು, ಅವರಿಗೆ ಕೊಡಿಸು, ರೋಗ ಸ್ವಲ್ಪ ಕಡಿಮೆಯಾಗುತ್ತದೆ" ಎಂದು ಹೇಳಿದರು. ಸ್ವಾಮಿಯವರು ಸಮಸ್ಯೆ ಸಂಭವಿಸುವ ಎರಡು ತಿಂಗಳ ಮೊದಲು ನಮಗೆ ಎಚ್ಚರಿಕೆ ಕೊಟ್ಟು, ಅದಕ್ಕೆ ಪರಿಹಾರವನ್ನು ಕೂಡ ತಿಳಿಸಿದರು.

ಶ್ರೀ ಸ್ವಾಮಿಯವರ ಮಾತಿನಲ್ಲಿ ಶ್ರದ್ಧೆ, ನಂಬಿಕೆ ಇಲ್ಲದ ನಾನು, ನನಗಾಗಿ ಅಡುಗೆ ಮಾಡುವ ಮಹಿಳೆಗೆ ಒಂದೇ ಹೊತ್ತಿನ ಪ್ರಸಾದ ಕೊಡಿಸಿ ನಾನು ಹೊರಟು ಹೋದೆ. ಸ್ವಾಮಿಯವರು ಹೇಳಿದ ಹಾಗೆ, ಎರಡು ತಿಂಗಳಾದ ಮೇಲೆ ಆಕೆಯ ತೊಡೆಯ ಮೇಲೆ ಒಂದು ಗೆಡ್ಡೆ ಬಂದಿತು. ನಾನು ಅವಳನ್ನು ಮದ್ರಾಸಿಗೆ ಕರೆದುಕೊಂಡು ಹೋಗಿ ಆಪರೇಷನ್ ಮಾಡಲು 500 ರೂ ಖರ್ಚು ಮಾಡಿದೆ. ನಾನು ಸ್ವಾಮಿಯವರ ಮಾತನ್ನು ಕೇಳದ ಕಾರಣ ನನಗೆ ತಕ್ಕ ಶಾಸ್ತಿ ಆಯಿತು. ಸ್ವಾಮಿಯವರು ಮಾತು ಕೇಳಿ ನಾನು ತಲಪೂರಿನಲ್ಲಿ ಸಂಸಾರ ಮಾಡಲು ಪ್ರಾರಂಬಿಸಿದ್ದರೆ, ನಾನು ಸಿರಿಸಂಪತ್ತಿನಿಂದ ಸಮೃದ್ಧಿಯಾಗಿ, ಸುಖವಾಗಿರುತ್ತಿದ್ದೆ. ಅವರ ಮಾತು ಕೇಳದಿದ್ದ ಕಾರಣವಾಗಿ ನಾನು ಹೀಗಿದ್ದೇನೆ.

ಈ ಭಕ್ತನೇ, ಒಂದು ದಿನ, ತನ್ನ ಹೊಲದಲ್ಲಿ ಎಲ್ಲಿ ಬಾವಿಯನ್ನು ತೋಡಿದರೆ ನೀರು ಬರುತ್ತದೆ ಅಲ್ಲಿ ತೋಡುತ್ತೇನೆ ಎಂದು ಸ್ವಾಮಿಯವರನ್ನು ಕೇಳಿದನು. ಶ್ರೀ ಸ್ವಾಮಿಯವರು, ಹೊಲದ ನಾಲಕ್ಕು ದಿಕ್ಕಿನಲ್ಲಿ ನೋಡಿ, **"ಅಯ್ಯಾ! ಈ ಚೇಲೋ ನೀಳ್ಳು** **113**
ಲೇವು ಈ ಪ್ರಕ್ಕನುನ್ನ ಅರ ಎಕರಾಲೋ ಎನಭೈ, ನಾಲುಗು ಎಕರಾಲಕು ಸರಿಪಡು ನೀರುನ್ನದಿ. ಈ ಅರ ಎಕರಾ ಕೊನಿ ಬಾವಿ ತ್ರವ್ವಿಂಚು. ಇಂದುಲೋ ಬಾವಿ ತ್ರವ್ವಿನವಾರು ಎಪ್ಪುಡೂ ನೀಡನ ಜೀವಿಸ್ತಾರು. (ಆಯ್ಯಾ ನಿನ್ನ ಹೊಲದಲ್ಲಿ ನೀರಿಲ್ಲ. ನಿನ್ನ ಹೊಲದ ಪಕ್ಕದಲ್ಲಿರುವ 1/2 ಎಕರೆ ಜಮೀನು, 84 ಎಕರೆ ಹೊಲಕ್ಕೆ ಒದಗಿಸುವಷ್ಟು ನೀರನ್ನು ಹೊಂದಿದೆ. ಅರ್ಧ ಎಕರೆ ಜಮೀನು ಖರೀದಿಸಿ ಆ ಜಾಗದಲ್ಲಿ ಬಾವಿ ತೋಡಿದರೆ, ನೀನು ಬಹಳ ನೆಮ್ಮದಿಯಿಂದ ಇರುತ್ತೀಯ) ಎಂದು ಹೇಳಿ, ಬಾವಿ ತೋಡ ಬೇಕಾದ ಜಾಗವನ್ನು ಗುರ್ತು ಕೂಡಾ ಹಾಕಿ ಕೊಟ್ಟರು. ಮತ್ತು, "ಈ ಪೊಲಂ ನೀವು ಎಟ್ಟಿಪರಿಸ್ಥಿತಿಲೋನು ಅಮ್ಮವದ್ದು" (ಈ ಹೊಲವನ್ನು ಯಾವುದೇ ಕಾರಣವಾಗಿ ಮಾರಬೇಡ) ಎಂದು ಕೂಡಾ ಹೇಳಿದರು. ಆದರೇ ಏನು ಲಾಭ, ನಾನು ಸ್ವಾಮಿಯವರ ಸಲಹೆಯನ್ನು ನಿರ್ಲಕ್ಷಿಸಿ

ಭೂಮಿಯನ್ನು ಮಾರಿದೆ. ಈಗ ಆ ಭೂಮಿಯಲ್ಲಿ ಬಾವಿ ತೋಡಿದವರು ಲಕ್ಷಾಧಿಕಾರಿಗಳಾಗಿದ್ದಾರೆ. ಸ್ವಾಮಿಯವರು ಹೇಳಿದ ಮಾತು ಈ ಸಂದರ್ಭಕ್ಕೆ ಹೊಂದುತ್ತದೆ - ನಂಬಿದವರಿಗೆ ಐಶ್ವರ್ಯ ಇಲ್ಲದಿದ್ದರೆ.....

ಸುಬ್ರಹ್ಮಣ್ಯಂ, ಸ್ವಾಮಿಯವರ ಮಾತು ನಂಬಿ ಆ ಅರ್ಧ ಎಕರೆ ಕೋಂಡಿದ್ದರೆ, ಲಕ್ಷಾಧಿಕಾರಿ ಆಗುತ್ತಿದ್ದನು, ಆದರೆ ಅವನು ನಿರ್ಲಕ್ಷಿಸಿದನು, ಅದರ ಫಲ ಏನು ಎಂಬುದು ಕಾಣುತ್ತಿದೆ ಅಲ್ಲವೇ?

ಕಾಲ್ಲೂರುಪಲ್ಲಿಯ ನಿವಾಸಿ ಕಾಟಂರೆಡ್ಡಿ ಸುಬ್ಬಾರೆಡ್ಡಿಯವರು ಹೀಗೆ ತಿಳಿಸಿದರು. "ನಮಗಿದ್ದ 22 ಎಕರೆ ಮಿಟ್ಟೆ ಭೂಮಿ, ಮಾರಬೇಕೆಂದುಕೊಂಡು, ಸ್ವಾಮಿಯವರನ್ನು ಕೇಳಿದೆ. ಆಗ, ಸ್ವಾಮಿಯವರು "ರಾಬೋಯೇ ರೋಜುಲಲೋ ಅದಿ ಲಕ್ಷಲು ವಿಲುವ ಚೇಸ್ತುಂದಿ. ನೀಕು ಏಮಿ ಶನಿ ಬಟ್ಟಿ ಅಮ್ಮುಚುನ್ನಾವಯ್ಯಾ?" (ಮುಂದಿನ ದಿನಗಳಲ್ಲಿ, ಈ ಜಮೀನು ಲಕ್ಷಗಟ್ಟಿಲೆ ಬೆಲೆ ಬಾಳಲಿದೆ. ನಿನಗೇನಾದರು ಶನಿ ಮಹರಾಯ ವಕ್ಕರಿಸಿ, ಮಾರಬೇಕೆಂದು ಕೊಂಡಿದ್ದೀಯಾ?) ಅಂದರು. ನಾನು ನನ್ನ ಅಪ್ಪನಿಗೆ ಸತ್ಯ ಹೇಳದೆ, ಎಕರೆಗೆ 500 ರೂಪಾಯಿಯ ಹಾಗೆ ಮಾರಿ ಬಿಟ್ಟೆ. ಈಗ ಆ ಜಮೀನಿನ ಬೆಲೆ ಒಂದು ಎಕರೆಗೆ ಒಂದು ಲಕ್ಷ ರೂಪಾಯಿ ಆಗಿದೆ.

ಮತ್ತೊಮ್ಮೆ ನನ್ನ ಹತ್ತಿರವಿದ್ದ ಫಲವತ್ತಾದ ಭೂಮಿಯನ್ನು ಬದಲಾಯಿಸುವುದಕ್ಕೆ ಸ್ವಾಮಿಯವರನ್ನು ಕೇಳಿದೆ. ಆಗ ಸ್ವಾಮಿಯವರು, "ಅಯ್ಯಾ! ಮಾಗಾಣಿ ಅಮ್ಮಿತೇ ನಾನಾ ಅಗಚಾಟ್ಲುಪಡುತಾಡನಿ ಚೆಪ್ಪಿನಾ ವಿನಡು. ಕರ್ಮಫಲಂ ಚಾಲಾ ಬಲಂಗಾ ವುಂದಿ. ಏಮಿ ಚೇಸ್ತಾಮು" (ಅಯ್ಯಾ! ನಿನ್ನ ಫಲವತ್ತಾದ(fertile) ಭೂಮಿಯನ್ನು ಮಾರಿದರೆ ಬಹಳ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ ಎಂದು ಹೇಳಿದರೂ ಕೇಳುವುದಿಲ್ಲ. ಕರ್ಮಫಲ ತುಂಬಾ ಬಲವಾಗಿದೆ, ನಾವು ಏನು ಮಾಡಲು ಸಾಧ್ಯ?) ಎಂದರು. (ಸ್ವಾಮಿಯವರಿಗೆ, ಇವನು ಮಾತು ಕೇಳುವುದಿಲ್ಲವೆಂದು ಕೂಡಾ ಗೊತ್ತಿತ್ತು). ಸ್ವಾಮಿಯವರ ಮಾತು ಕೇಳದೇ ಹೊಲವನ್ನು ಮಾರಿದೆ, ಆಮೇಲೆ ಮೂರು ವರ್ಷಗಳ ಕಾಲ ಬೆಳೆ ಇಲ್ಲದೇ, 20,000 ರೂ ಸಾಲವನ್ನು ಮಾಡಿದ್ದಲ್ಲದೇ, ನನ್ನ ಜೀವನದಲ್ಲಿ ಯಾವಾಗಲೂ ಅನುಭವಿಸದ, ಮಾನಸಿಕ ಬಾಧೆಯನ್ನು ಅನುಭವಿಸಿದೆ. ಶ್ರೀ ಸ್ವಾಮಿಯವರ ಕೃಪೆಯಿಂದ ಹತ್ತು ಸಾವಿರ ರೂಪಾಯಿ ಖರ್ಚುಮಾಡಿ ನನ್ನ ಹೊಲವನ್ನು ಬದಲಾಯಿಸಿದೆ. ಆ ಸಮಯದಿಂದ, ನನ್ನ ಆರ್ಥಿಕ, ಮಾನಸಿಕ ಪರಿಸ್ಥಿತಿ ಸುಧಾರಿಸಿ, ನಾನು ಸುಖವಾಗಿದ್ದೇನೆ. ಈ ಹೊಲದ ಬದಲಾವಣೆ ಶ್ರೀ ಸ್ವಾಮಿಯವರ ಕೃಪೆಯೇ ಹೊರತು, ನನ್ನ ಬುದ್ಧಿವಂತಿಕೆಯಿಂದಲ್ಲ. ನನ್ನ ತಂದೆಯವರ ಮೇಲಿನ ಪ್ರೀತಿಯಿಂದ ಶ್ರಿ ಸ್ವಾಮಿಯವರು, ನನ್ನ ಹೊಲ ನನಗೆ ಬರುವಹಾಗೆ ಮಾಡಿದರು.

ಅವಧೂತ ಲೀಲೆ

ಅಧ್ಯಾಯ - 24

ಶ್ರೀ ಸ್ವಾಮಿಯವರ ಅಭೇದಸ್ಥಿತಿ

ಪರಬ್ರಹ್ಮ ಸ್ವರೂಪವಾದ ಸದ್ಗುರುಗಳು ನಿರ್ಗುಣ ನಿರಾಕಾರಗಳು ಮಾತ್ರ ಅಲ್ಲದೆ, ಸಗುಣರಾಗಿ ಕೂಡ ಅವರ ಚೈತನ್ಯ ಪ್ರತಿ ಕ್ಷಣವೂ ಕೆಲಸ ಮಾಡುತ್ತದೆ. ಹಾಗೆ ಎರಡು ಸ್ಥಿತಿಗಳನ್ನು ಅನುಭವಿಸುವ ಶಕ್ತಿ ಇರುವವರು, ದೈವಾದೇಶವನ್ನು ಹೊಂದಿದ ಮಹನೀಯರೇ ಭಕ್ತ ಸಂರಕ್ಷಣೆ ಮಾಡಬಲ್ಲರು. ಈ ವಿಷಯದಲ್ಲಿ ಶ್ರೀ ಸ್ವಾಮಿಯವರಿಗೆ ಶಿರಡಿ ಸಾಯಿ ಬಾಬಾರವರ ಹೋಲಿಕೆ ಇದೆ ಮತ್ತು ಎಷ್ಟೋ ಸನ್ನಿಹಿತ ಸಂಬಂಧಗಳೂ ಇವೆ. ಇದು ಅವರ ಜೀವನವಿಧಾನದಲ್ಲಿ ಅಲ್ಲದೇ, ಅವರಿಬ್ಬರೂ ತಮ್ಮ ಭಕ್ತರಿಗೆ ಕೊಟ್ಟಿರುವ ದಿವ್ಯಾನುಭವಗಳಿಂದ ಕೂಡ ಪ್ರಕಟವಾಗುತ್ತದೆ. **114**

ಇಬ್ಬರೂ ಆಜನ್ಮ ಬ್ರಹ್ಮಚಾರಿಗಳು, ತಮ್ಮದೇ ಆದ ಒಂದು ನಿವಾಸವೂ ಇಲ್ಲದವರು (ಅನಿಕೇತರು). ಅವರು ಭಿಕ್ಷಾಟನೆಯಲ್ಲಿ ಬದುಕುತ್ತಿದ್ದರು. ಅವರು ಸಿದ್ಧರಾಗಿದ್ದರೂ, ಆದರ್ಶಪ್ರಾಯ ಸಂತರಂತೆ ಅವರು ಬದುಕಿದರು. ಇಬ್ಬರೂ ನಿರತಾಗ್ನಿಹೋತ್ರರು. ಅವರಿಬ್ಬರ ಲೀಲೆಗಳು ಮತ್ತು ಬೋಧನೆಗಳು ತುಂಬಾ ಹೋಲುತ್ತವೆ.

ಸಾಯಿನಾಥ ತಮ್ಮ ಭಕ್ತರನ್ನು ಸಂರಕ್ಷಿಸಿದಾಗ, ಭಕ್ತರು ಅವರನ್ನು ಪ್ರಶ್ನಿಸಿದಾಗ, ಅವರು ಏಕೆ ಮಾಡಿದರೆಂದು ಅವರಿಗೆ ತಿಳಿಸುತ್ತಿದ್ದರು. ಉದಾಹರಣೆಗೆ, ಒಂದು ಸಂದರ್ಭದಲ್ಲಿ ಬಾಬಾ ಹಠಾತ್ತನೆ ಧುನಿಯಲ್ಲಿ ಕೈ ಹಾಕಿದರು ಮತ್ತು ಅವರ ಕೈ ಸುಟ್ಟುಹೋಯಿತು. ಅವರ ಭಕ್ತರು ಅವರನ್ನು ಏಕೆ ಹಾಗೆ ಮಾಡಿದರೆಂದು ಕೇಳಿದಾಗ, ಬಾಬಾ ಹೀಗೆ ಹೇಳಿದರು, 'ಒಂದು ಮಗು ಆಕಸ್ಮಿಕವಾಗಿ ಬೆಂಕಿಯಲ್ಲಿ ಬೀಳುತ್ತಿತ್ತು, ಆದ್ದರಿಂದ ನಾನು ನನ್ನ ಕೈಯನ್ನು ಹಾಕಿ ರಕ್ಷಿಸಿದೆ.' ಆದರೆ, ಶ್ರೀ ಸ್ವಾಮಿಯವರು ತಮ್ಮ ಜೀವನಪೂರ್ತಿ ಅವರು ಮಾಡಿದ್ದನ್ನು ಗೋಪ್ಯವಾಗಿ ಇಡುತ್ತಿದ್ದರು.

ಸ್ವಾಮಿಯವರು, ಒಮ್ಮೆ ತಮ್ಮ ಭಕ್ತರೊಡನೆ "ಉತ್ತರದಿಕ್ಕಿನಲ್ಲಿ ತಮಗೆ ಒಬ್ಬ ಅಣ್ಣ ಇದ್ದಾರೆಂದು, ಅವರು ನಿರಂತರಾಗ್ನಿಯನ್ನು ಧುನಿಯಲ್ಲಿ ಉರಿಸುತ್ತಿದ್ದರು. ಇಬ್ಬರೂ ಸಂಕೇತ ಭಾಷೆಯಲ್ಲಿ ಮಾತನಾಡುತ್ತಿದ್ದರು. ಅವರು ನೇರವಾಗಿ ಏನನ್ನೂ ಹೇಳುತ್ತಿರಲಿಲ್ಲ

ಅವರು ಸೂಚಿಸುತ್ತಿದ್ದರು. ಇಬ್ಬರೂ ತಮ್ಮ ಮಹಾ ಸಮಾಧಿಯ ಬಗ್ಗೆ ಮೊದಲೇ ಸೂಚನೆ ಕೊಟ್ಟಿದ್ದೂ ಅಲ್ಲದೆ, ತಮ್ಮ ಭಕ್ತರನ್ನು ಸದಾಕಾಲ ಆಶೀರ್ವದಿಸುವುದಾಗಿ ಭರವಸೆ ನೀಡಿ ತಮ್ಮ ಭರವಸೆಯನ್ನು ಅದೇ ರೀತಿ ಈಡೇರಿಸುತ್ತಿದ್ದಾರೆ. ಈಗ ನಾವು ಇವರಿಬ್ಬರೂ ತಮ್ಮ ಭಕ್ತರಿಗೆ ಕೊಟ್ಟ ದಿವ್ಯವಾದ ಅನುಭವಗಳನ್ನು ಪರಿಶೀಲಿಸೋಣ.

ಪ್ರಸಿದ್ಧ ಸಾಯಿ ಭಕ್ತರು, ಆಚಾರ್ಯ ಎಕ್ಕಿರಾಲ ಭರದ್ವಾಜರವರು, ತಾವು ಸ್ವಾಮಿಯವರನ್ನೆ ಪ್ರಥಮ ಬಾರಿ ದರ್ಶನ ಮಾಡಿದ ವಿಚಾರವನ್ನು ಹೀಗೆ ತಿಳಿಸಿದರು. "1975 ರಲ್ಲಿ, ಶಿವರಾತ್ರಿಯ ದಿನ, ನಾನು ನನ್ನ ಪೂಜೆಯನ್ನು ಮುಗಿಸಿದ ನಂತರ, ಗೊಲಗಮೂಡಿಯಲ್ಲಿರುವ ಅವಧೂತ ಶ್ರೀ ವೆಂಕಯ್ಯ ಸ್ವಾಮಿಯವರನ್ನು ಭೇಟಿ ಮಾಡಬೇಕೆಂಬ ಅನ್ನಿಸಿತು. ನನ್ನ ಜೊತೆಯಲ್ಲಿ ಬರಲು ಶ್ರೀ ಸ್ವಾಮಿಯ ಭಕ್ತ ಚಿ||ರಾಮಕೃಷ್ಣ ರೆಡ್ಡಿಯವರನ್ನು ಕೇಳಿದೆ. ಆಗ, ಅವರು, "ಮೊದಲು ಸ್ವಾಮಿಯವರು ಗೊಲಗಮೂಡಿಯಲ್ಲಿ ಇದ್ದಾರೋ ಇಲ್ಲವೋ ಎಂದು ನಾನು ಕಂಡುಹಿಡಿಯಬೇಕು. ಅವರು ಇತರ ಹಳ್ಳಿಗಳಿಗೆ ಪ್ರಯಾಣಿಸುತ್ತಾರೆ" ಎಂದು ಹೇಳಿದನು. ಬೆಳಿಗ್ಗೆ 8.30 ಕ್ಕೆ ನಾನು ಸಾಯಿಗೆ ಅಗರಬತ್ತಿಯನ್ನು ಬೆಳಗಿಸಿ ಪ್ರಾರ್ಥಿಸಿದೆ, "ಸಾಯಿ, ನೀವು ಎಲ್ಲಾ ಸಂತರ ಸಾಕಾರಮೂರ್ತಿ, ಶ್ರೀ ವೆಂಕಯ್ಯ ಸ್ವಾಮಿಯ ರೂಪದಲ್ಲಿರುವ ನಿಮ್ಮನ್ನು ನಾನು ಭೇಟಿ ಮಾಡಲು ಹೊಗುತ್ತಿದ್ದೇನೆ. ದಯವಿಟ್ಟು ನನಗೆ ವಿಶೇಷವಾದ ಸನ್ನಿಧಿ ಮತ್ತು ಆಶೀರ್ವಾದ ಸಿಗುವಂತೆ ಆಶೀರ್ವದಿಸಿ" ಎಂದು ಪ್ರಾರ್ಥಿಸಿ, ನಾವಿಬ್ಬರೂ ಹೊರಟೆವು. ಬೆಳಗ್ಗೆ ಸುಮಾರು 10 ಘಂಟೆಯ ಹೊತ್ತಿಗೆ ಗೊಲಗಮೂಡಿಗೆ ಹೋಗುವ ಬಸ್ ಬಂದಿತು. ನಾವು ಬಸ್ ಹತ್ತಿದ ತಕ್ಷಣ ಸ್ವಾಮಿಯವರ ಏಕತಾರವನ್ನು ಇಟ್ಟುಕೊಂಡು ಕೂತಿರುವ ಒಬ್ಬ ಸಾಧುವನ್ನು ರಾಮಕೃಷ್ಣ ಗುರ್ತು ಹಿಡಿದು ಅವರನ್ನು ವೆಂಕಯ್ಯ ಸ್ವಾಮಿಯ ಬಗ್ಗೆ ವಿಚಾರಿಸಿದನು. ಆ ಸಾಧು, 4 ದಿನಗಳ ಹಿಂದೆ ಸ್ವಾಮಿಯವರು ನೆಲ್ಲೂರಿಗೆ ಬಂದು ದತ್ತಾತ್ರೇಯ ಮಠದಲ್ಲಿ ವಾಸವಾಗಿದ್ದರು. ಮೊದಲು, ಅವರು ಅಲ್ಲಿ ಹತ್ತು ದಿನಗಳು ಇರುತ್ತೇವೆ ಅಂದರು. ಆದುದರಿಂದ ಭಕ್ತರು ಸ್ವಾಮಿಯವರು ನಡೆಸುವ ನಿರಂತರ ಅಗ್ನಿಹೋತ್ರಕ್ಕೆ ಬೇಕಾದ ಸೌದೆ ಸಿದ್ಧಗೊಳಿಸಿದರು. ಆದರೆ ಇಂದು ಬೆಳಗ್ಗೆ 8.30, ತಾವು ತಕ್ಷಣವೇ ಗೊಲಗಮೂಡಿಗೆ ಹೊರಡಬೇಕೆಂದು ಹೇಳಿದರು. ಕೂಡಲೇ ಭಕ್ತರು ಕುದುರೆ ಗಾಡಿಯಲ್ಲಿ ಅವರನ್ನು ಅಲ್ಲಿಗೆ ಕಳುಹಿಸಿದರು. ಅವರು ಅರ್ಧ ಘಂಟೆಯ ಮುಂಚೆ ಗೊಲಗಮೂಡಿ ಸೇರಿರಬಹುದು" ಎಂದರು. ಕೆಲವೇ ನಿಮಿಷಗಳಲ್ಲಿ ಶ್ರೀ ಸ್ವಾಮಿಯವರ ಸನ್ನಿಧಿ ತಲುಪಿದೆವು. ಶ್ರೀ ಸ್ವಾಮಿಯವರು ಆಕಸ್ಮಿಕವಾಗಿ ಗೊಲಗಮೂಡಿ ಬಂದಿದ್ದರಿಂದ, ಸುಮಾರು 6 ಗಂಟೆಯ ಕಾಲ ಅವರ ಸನ್ನಿಧಿಯಲ್ಲಿ ಸಮಯ ಕಳೆದೆವು. ನಮ್ಮ ಇಬ್ಬರನ್ನೂ, ಮತ್ತು, ಗುರುವಾರದ ಭಜನೆ ಮಂಡಲಿಯವರನ್ನು ವಿಶೇಷವಾಗಿ ಆಶೀರ್ವದಿಸಿದರು. ಆ ದಿನ, ಶ್ರೀ ಸ್ವಾಮಿಯೇ ತಮ್ಮ ರೂಪವೆಂದು ಶ್ರೀ ಸಾಯಿ ನನಗೆ ಹೇಳಿದಂತೆ ಅನುಭವ ಆಯಿತು. ನಂತರ ನಾನು ಮತ್ತು ನಮ್ಮ ಸತ್ಸಂಗದ ಸದಸ್ಯರು ಸ್ವಾಮಿಯ ದರ್ಶನಕ್ಕೆ ಆಗಾಗ ಬರುತ್ತಿದ್ದೆವು."

ಒಮ್ಮೆ ಶ್ರೀ ಸ್ವಾಮಿಯವರು ಕಲಿಚೇಡಿನಿಂದ ಅವರ ತಾತ್ಕಾಲಿಕ ನಿವಾಸವನ್ನು ಬದಲಾಯಿಸಬೇಕೆಂದು ಸಾಮಾನುಗಳನ್ನು ಗಾಡಿಯಲ್ಲಿಡಿಸಿದರು. ಸ್ವಾಮಿಯವರನ್ನು

"ಗಾಡಿಹತ್ತಿ" ಎಂದರೆ, ಸ್ವಾಮಿಯವರು, ಈಗ ಹೋಗುವುದಕ್ಕೆ ಸಾಧ್ಯವಿಲ್ಲ ಸಾಮಾನುಗಳನ್ನು ಗಾಡಿಯಿಂದ ಇಳಿಸಿ, ಗಾಡಿಯವನಿಗೆ 6 ರೂ ಕೊಟ್ಟು ಕಳುಹಿಸಿ ಎಂದು ಹೇಳಿದರು. ಪ್ರಯಾಣ ಏತಕ್ಕೆ ನಿಲ್ಲಿಸುತ್ತಿದ್ದಾರೆ ಎಂದು ಯಾರಿಗೂ ಅರ್ಥವಾಗಲಿಲ್ಲ.

ಆದಿನ ಬೆಳಗ್ಗೆ 9 ಗಂಟೆಯ ಹೊತ್ತಿಗೆ ಶ್ರೀ ಶೇಷಾದ್ರಿಯವರು, ವಿದ್ಯಾನಗರದಿಂದ ಸ್ವಾಮಿಯವರ ದರ್ಶನಕ್ಕಾಗಿ ಬಂದರು. ಆಗ ಎಲ್ಲರಿಗೂ ಪ್ರಯಾಣ ಏಕೆ ನಿಂತಿತು ಎನ್ನುವುದು ಅರ್ಥವಾಯಿತು. ವಿದ್ಯಾನಗರದಿಂದ ಸ್ವಾಮಿಯವರ ದರ್ಶನಕ್ಕೆ ಹೊರಡುವಾಗ, ಶೇಷಾದ್ರಿಯವರು ಶ್ರೀ ಸಾಯಿನಾಥರನ್ನು ಸ್ವಾಮಿಯ ದರ್ಶನಕ್ಕಾಗಿ ಪ್ರಾರ್ಥಿಸುತ್ತಿರುವಾಗ, ಇಲ್ಲಿ ಸ್ವಾಮಿಯವರು ತಮ್ಮ ಪ್ರಯಾಣವನ್ನು ನಿಲ್ಲಿಸಿದರು. ಸಕಲ ಸಾಧುಸ್ವರೂಪರಾದ ಶ್ರೀ ಸಾಯಿ ಮತ್ತು ಶ್ರೀ ಸ್ವಾಮಿಯವರು ಬೇರೆಯಲ್ಲ ಅಲ್ಲವೇ!

1980ರಲ್ಲಿ, ಸಮಾಧಿ ಮಂದಿರ ನಿರ್ಮಾಣಕ್ಕಾಗಿ ಇಟ್ಟಿಗೆಗಳನ್ನು ಸಾಗಿಸುತ್ತಿದ್ದ ಲಾರಿಯೊಂದು ಆಶ್ರಮಕ್ಕೆ ಬಂದಿತು. ಆ ದಿನ ಸ್ವಾಮಿಯವರು, ಈಗಿನ ಸಮಾಧಿ ಮಂದಿರ ಇರುವ ಜಾಗದಲ್ಲಿ ಮಲಗಲು ಹೇಳಿದರು. "ಅಯ್ಯಾ! ಇಕ್ಕಡ ಪೆಂಚಲ ಕೊಂಡಂತ ಮಸೀದು ಪಡುತುಂದಯ್ಯಾ" (ಅಯ್ಯಾ! ಇಲ್ಲಿ ಪೆಂಚಲ ಬೆಟ್ಟದಷ್ಟು ಎತ್ತರದ ಮಸೀದು ಬರುತ್ತದೆ) ಎಂದು ಹೇಳಿದರು. ಹಾಗೆ ಹೇಳಿದ ಒಂದು ವರ್ಷದೊಳಗೆ ಸಮಾಧಿ ಮಂದಿರ ನಿರ್ಮಾಣವಾಯಿತು.

ಸ್ವಾಮಿಯವರು ತಮ್ಮ ಸಮಾಧಿ ಮಂದಿರವನ್ನು **"ಮಸೀದ್"** ಎಂದು ಏಕೆ ಅಂದರು ಎಂದು ಯೋಚಿಸಬೇಕಾದ ವಿಷಯ. ಶ್ರೀ ಸಾಯಿನಾಥರು, ಮಸೀದಿಯಲ್ಲಿ ಇರುತ್ತಾ, ಆ ಮಸೀದನ್ನು ದ್ವಾರಕಾಮಾಯಿ ಎಂದು ಕರೆಯುತ್ತಿದ್ದರು.ಇಲ್ಲಿ ಎಲ್ಲ ಧರ್ಮದವರೂ ತಮ್ಮ ಧರ್ಮಕ್ಕೆ ಅನುಗುಣವಾಗಿ ದೇವರನ್ನು ಯಾವುದೇ ಭೇದವಿಲ್ಲದೆ ಪೂಜಿಸುತ್ತಾರೆ. ಇದಲ್ಲದೆ, ಮಸೀದಿಯ ಹೆಸರಿನಲ್ಲಿ, ಹಿಂದೂ ದೇವಾಲಯದಂತೆ ಗಂಟೆಗಳನ್ನು ಹೊಡೆಯುಲಾಗುತ್ತದೆ ಮತ್ತು ತುಳಸಿಯನ್ನು ಪೂಜಿಸಲಾಗುತ್ತದೆ. ಈದು ಶಿರಿಡಿ ಬಿಟ್ಟು ಬೆರೆ ಎಲ್ಲೂ ಸಾಧ್ಯವಾಗುವುದಿಲ್ಲ. ಆದರೆ, **ಶಿರಿಡಿಯಂತೆ ಗೊಲಗಮೂಡಿಯಲ್ಲೂ ಸರ್ವಮತಸ್ತರು, ಶ್ರಿ ಸ್ವಾಮಿಯವರನ್ನು ಆರಾಧಿಸಿ ಅವರ ಕೃಪೆಯನ್ನು ಹೊಂದುತ್ತಿದ್ದಾರೆ**. ಆದ್ದರಿಂದ, ಸ್ವಾಮಿಯವರು, ತಮಗೂ, ಶ್ರೀ ಸಾಯಿ ಬಾಬಾರವರಿಗೂ ಯಾವ ಭೇದ ಇಲ್ಲವೆಂದು ತಿಳಿಸುತ್ತಿದ್ದಾರೆ.

1980ರಲ್ಲಿ ಸ್ವಾಮಿಯವರು, ತಲಪೂರು ಎಂಬ ಗ್ರಾಮದಲ್ಲಿ ನಾರಾಯಣ ದಾಸುರವರ ಆಶ್ರಮದಲ್ಲಿ ಬಿಡದಿ ಮಾಡಿದ್ದರು. ಸ್ವಾಮಿಯವರ ಸೇವಕರಾದ ಗುರವಯ್ಯನವರಿಗೆ, ನಾನು(ಪೆಸಲ ಸುಬ್ಬರಾಮಯ್ಯನವರು) ಶ್ರೀ ಸಾಯಿಲೀಲಾಮೃತ ಎಂಬ ಗ್ರಂಥವನ್ನು ಓದಿದ ಮೇಲೆ, ಅವರು ಆ ಗ್ರಂಥದ ಪಾರಾಯಣ ಮಾಡಲು ಪ್ರಾರಂಭಿಸಿದರು. ಒಮ್ಮೆ ನಾನು ಮತ್ತು ಗುರವಯ್ಯನವರು ಸ್ವಾಮಿಯವರ ಸನ್ನಿಧಿಯಲ್ಲಿ ಅಕ್ಕ ಪಕ್ಕದಲ್ಲಿ ಮಲಗಿದ್ದೆವು. ಮಧ್ಯರಾತ್ರಿ ಗುರವಯ್ಯನವರು 40 ಗಜ ದೂರದಿಂದ ನಡೆದು ಬರುತ್ತ, "ನಿಮಗೆ ನಿದ್ರೆಯ ಕಾರಣದಿಂದ ಎದ್ದೇಳಲು ಸಾಧ್ಯವಾಗಲಿಲ್ಲ. ಈಗಷ್ಟೇ ಸಾಯಿಬಾಬಾರವರು ಬಂದು ನನ್ನ ಪಕ್ಕದಲ್ಲಿ ನಿಂತಾಗ ನನಗೆ ಎಚ್ಚರವಾಯಿತು. ನಾನು

ಅವರ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಲು ಹೋದಾಗ, ಅವರು ಹೊರಟು ಹೋಗಲು ಪ್ರಾರಂಭಿಸಿದರು. ನಾನು ಅವರನ್ನು ಹಿಂಬಾಲಿಸಿ ಗೇಟಿನ ವರೆಗೆ ಹೋದಾಗ, ಅವರು ಅದೃಶ್ಯವಾದರು" ಎಂದು ಹೇಳಿದರು. ಅವರು ಮಾಯವಾಗುವವರೆಗೆ ನಾನು ಅವರನ್ನು ಹಿಂಬಾಲಿಸಿದೆ. ಅವರ ಉತ್ಸಾಹವನ್ನು ನೋಡಿದರೆ ನಿಜವಾಗಿಯೂ ಶ್ರೀ ಸಾಯಿಬಾಬಾರವರು ಭೌತಿಕ ದರ್ಶನ ಕೊಟ್ಟಿದ್ದಹಾಗೆ ಇತ್ತು. ಶ್ರೀ ಸ್ವಾಮಿಯವರ ಸನ್ನಿಧಿಯಲ್ಲಿ ಅವರ ಪ್ರಧಾನ ಸೇವಕನಿಗೆ ಶ್ರೀ ಸಾಯಿ ಬಾಬಾ ದರ್ಶನಕೊಟ್ಟು ಅನುಗ್ರಹಿಸಿದ್ದು ಸ್ವಾಮಿಯವರ ಮತ್ತು ಸಾಯಿಬಾಬಾರವರ ಸನ್ನಿಹಿತ ಸಂಬಂಧ ತಿಳಿಸುತ್ತದೆ.

ವೈದ್ಯುಲ ಸುಧಾಕರ್ ಅವರ ನಾದಿನಿ ಗೀತಾ ಭವಾನಿ ಹೀಗೆ ತಿಳಿಸಿದರು. "ನನ್ನ ತಂದೆ-ತಾಯಿ ನನ್ನನ್ನು ನನ್ನ ಸೋದರಮಾವನಾದ ವೈದ್ಯುಲ ಸುರೇಶ್ ಗೆ ಕೊಟ್ಟು ಮದುವೆ ಮಾಡಲು ಬಯಸಿದ್ದರು, ಆದರೆ ಅವರಿಗೆ ನನ್ನನ್ನು ಮದುವೆಯಾಗಲು ಇಷ್ಟವಿರಲಿಲ್ಲ. ಅವರನ್ನು ಮದುವೆಯಾಗಲು ನನಗೆ ಇಷ್ಟ ಇದ್ದರಿಂದ, "ನನ್ನ ಅವರ ಮದುವೆಯಾದರೆ, ನಾವು ಹೊಸ ದಂಪತಿಗಳಾಗಿ ಆಶ್ರಮಕ್ಕೆ ಬಂದು ಸ್ವಾಮಿಯವರ ದರ್ಶನ ಪಡೆದು ಅಲ್ಲಿ ಒಂದು ರಾತ್ರಿ ಮಲಗುತ್ತೇವೆ" ಎಂದು ಹರಸಿಕೊಂಡೆ. ಈ ವಿಷಯವನ್ನು ಹೇಳದೆ ನನ್ನ ಅಕ್ಕ, ಸ್ವಾಮಿಯವರು ಕೊಡುವ ದಾರವನ್ನು ನನ್ನ ಸೋದರಮಾವನಿಗೆ ಕಟ್ಟಿ, "ಇದರಿಂದ ಒಳ್ಳೆದಾಗುತ್ತೆ" ಎಂದು ಹೇಳಿದಳು. ಒಂದು ತಿಂಗಳು ಕೂಡ ಕಳೆಯದೇ, ನನ್ನ ಸೋದರಮಾವ ಮದುವೆಗೆ ಒಪ್ಪಿಕೊಂಡು ನಮ್ಮ ಮದುವೆ ಆಯಿತು. ನಾನು ಹರಸಿಕೊಂಡಿದ್ದಂತೆ ನಾವಿಬ್ಬರೂ ಆಶ್ರಮದಲ್ಲಿ ನಿದ್ರೆ ಮಾಡಿದೆವು. ರಾತ್ರಿ ಸ್ವಪ್ನದಲ್ಲಿ ಶಿರಿಡಿ ಸಾಯಿಬಾಬಾ ಕಂಡು, "ನಿನ್ನ ಮದುವೆ ಆಯಿತಲ್ಲವೆ? ನನಗೆ ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ ಮಾಡಿಸು" ಎಂದರು. "ಸ್ವಾಮಿ! ನನ್ನ ಮನೆ ಬಹಳ ಚಿಕ್ಕದು, ದೊಡ್ಡ ಮನೆ ಕಟ್ಟಿಸಿದರೆ, ಹಾಗೆ ಮಾಡುತ್ತೇನೆ" ಅಂದೆ, ಆಗ ಸಾಯಿ ಬಾಬಾ "ಈ ದಾರವನ್ನು ಧರಿಸು" ಎಂದು ಹೇಳಿ ಅದೃಶ್ಯವಾದರು. ಬೆಳಗ್ಗೆ ಎದ್ದಾಗ, ಶ್ರೀ ಸಾಯಿ ಬಾಬಾರವರು ಕೊಟ್ಟ ಸ್ವಾಮಿಯವರ ದಾರ ನಿಜವಾಗಿಯೂ ಇತ್ತು."

ಸಾಯಿ ಬಾಬಾರವರು ತಮ್ಮ ಭಕ್ತರಿಗೆ ವಿಭೂತಿಯನ್ನು ಮಾತ್ರವೇ ಪ್ರಸಾದಿಸುತ್ತಿದ್ದರು. ಶ್ರೀ ವೆಂಕಯ್ಯ ಸ್ವಾಮಿಯವರು, ತಮ್ಮ ಭಕ್ತರಿಗೆ ಆಶೀರ್ವಾದದ ಸಂಕೇತವಾಗಿ ವಿಭೂತಿ ಮತ್ತು ದಾರ ಕೂಡ ಕೊಡುತ್ತಿದ್ದರು. ಸ್ವಾಮಿಯವರ ಆಶ್ರಮದಲ್ಲಿ ಮೇಲೆ ಹೇಳಿದ ಗೀತಾ ಭವಾನಿಯವರಿಗೆ ಸಾಯಿ ಬಾಬಾ, ವೆಂಕಯ್ಯ ಸ್ವಾಮಿಯವರ ದಾರವನ್ನು ಪ್ರಸಾದಿಸಿದರೆಂದರೆ, ಸ್ವಾಮಿಯವರಿಗೂ ಮತ್ತು ಸಾಯಿ ಬಾಬಾರವರಿಗೂ ಭೇದವಿಲ್ಲ ಎಂದು ತಿಳಿಸಿದರು.

ಗುಂಟೂರು ನಿವಾಸಿ ಜೀ.ವಿ. ರಮಣ ಮೂರ್ತಿಯವರು, ತಮ್ಮ ಅನುಭವಗಳನ್ನು ಹೀಗೆ ಬರೆದು ತಿಳಿಸಿದರು, "ಶ್ರೀ ಶಿರಿಡಿ ಸಾಯಿಬಾಬಾ ಚರಿತ್ರೆ ಪಾರಾಯಣದಿಂದ ನನಗೆ ತುಂಬಾ ಅನುಭವಗಳಾಗಿವೆ. ಬಾಬಾಗೆ ಮತ್ತು ಶ್ರೀ ವೆಂಕಯ್ಯಸ್ವಾಮಿಯವರಿಗೆ ಭೇದವಿಲ್ಲ ಎಂದು ನಿರೂಪಿಸಿದರು. ನಾನು ಒಂದು ಸಮಸ್ಯೆಯಲ್ಲಿ ಸಿಕ್ಕಿ ಒದ್ದಾಡುತ್ತಿದ್ದಾಗ, ಶ್ರೀ

ವೆಂಕಯ್ಯಸ್ವಾಮಿಯವರ ಚರಿತ್ರ ಗ್ರಂಥ ಸಿಕ್ಕಿತು. ಆ ಗ್ರಂಥವನ್ನು ತೆರೆದ ತಕ್ಷಣ ನನ್ನ ಸಮಸ್ಯೆಗೆ ಬೇಕಾದ ಪರಿಹಾರ ಸಂದೇಶ ಸಿಕ್ಕಿತು. ಅದರಿಂದ, ನಾನು ಆ ಗ್ರಂಥವನ್ನು ಪೂರ್ತಿ ಪಾರಾಯಣ ಮಾಡಿದೆ. ಆ ದಿನಗಳಲ್ಲಿ ನನಗಿದ್ದ ಗ್ರಹ ಬಾಧೆಯನ್ನು ನಿವಾರಿಸಿಕೊಳ್ಳಲು ಶ್ರೀ ಜೊನ್ನವಾಡ ಕಾಮಕ್ಷಮ್ಮನವರ ಸನ್ನಿಧಿಗೆ ಬಂದು ಸೇರಿದೆ. ಅಂದಿನ ರಾತ್ರಿ ಸ್ವಪ್ನದಲ್ಲಿ ನನಗೆ ಕಾಮಾಕ್ಷಮ್ಮನವರು ಮತ್ತು ಮಲ್ಲಿಕಾರ್ಜುನ ಸ್ವಾಮಿ ಮಂತ್ರೋಪದೇಶ ಮಾಡಿ ಎಲ್ಲಾ ಸರಿಹೋಗುತ್ತದೆ ಎಂದು ಹೇಳಿದರು. ನನಗೆ ಎಚ್ಚರವಾಯಿತು, ಆದರೆ, ಕಣ್ಣು ಮುಚ್ಚಿಕೊಂಡಿದ್ದೆ. "ಅಯ್ಯಾ! ನೀನು ಮೂರು ದಿನಗಳು ನನ್ನ ಹತ್ತಿರ ಇರಬೇಕಯ್ಯಾ!" ಎಂದು ಮಾತು ನನಗೆ ಸ್ಪಷ್ಟವಾಗಿ ಕೇಳಿಸಿತು. ಆ ಮಾತು ವೆಂಕಯ್ಯ ಸ್ವಾಮಿಯವರು ಹೇಳಿದ ಹಾಗೆ ಇತ್ತು. ಮರುದಿನ ಬೆಳಗ್ಗೆ ಗೊಲಗಮೂಡಿಗೆ ಹೋದೆ. ಅಂದಿನ ರಾತ್ರಿ ನಾನು ಎಚ್ಚರವಾಗಿಯೇ ಮಲಗಿದ್ದೆ. ರಾತ್ರಿ ಹತ್ತುಗಂಟೆಯ ಸಮಯ, ಪಕ್ಕದಲ್ಲಿ ಭಜನೆ ನಡೆಯುತ್ತಿತ್ತು. ಕಾಲಿನ ಹತ್ತಿರ ಶ್ರಿ ಶಿರಿಡಿ ಸಾಯಿ ಮತ್ತು ಶ್ರೀ ವೆಂಕಯ್ಯ ಸ್ವಾಮಿಯವರಿಬ್ಬರೂ ಒಂದೊಂದು ಪಕ್ಕ ನಿಂತುಕೊಂಡಿದ್ದರು. ಕಣ್ಣು ಬಿಟ್ಟು ನೋಡಿದಾಗ ಸ್ಪಷ್ಟವಾಗಿ ಕಾಣುತ್ತಿತ್ತು. ತನ್ಮಯ ಸ್ಥಿತಿಯಲ್ಲಿದ್ದರಿಂದ, ಏಳಬೇಕೆಂದಾಗಲಿ, ಮಾತಾಡಬೇಕೆಂದಾಗಲಿ ಬಯಸಲಿಲ್ಲ. ಅವರಿಬ್ಬರೂ ನನ್ನಕಡೆಯೇ ನೋಡುತ್ತಾ "ಬಾ ಹೊರಗೆ" ಎಂದರು. ನನ್ನ ಶರೀರದೊಳಗಿನಿಂದ ಒಬ್ಬ ವಿಕಟರೂಪಿಯಾದ ಹೆಂಗಸು, ರವಿಕೆ ಇಲ್ಲದ ಹಸಿರು ಬಣ್ಣದ ಸೀರೆ ಧರಿಸಿ, ಆಚೆ ಬಂದು ನಿಂತಳು. "ಹೋಗು ಇಲ್ಲಿಂದ" ಎಂದು ಸ್ವಾಮಿಯವರು ಆಜ್ಞಾಪಿಸಿದರು. "ನಾನು ಇವರನ್ನೇ ನಂಬಿದ್ದೇನೆ. ಎಲ್ಲಿಗೆ ಹೋಗಬಲ್ಲೆ? ಬೇರೆ ಯಾರನ್ನಾದರೂ ತೋರಿಸಿ, ನಾನು ಹೋಗುತ್ತೇನೆ" ಎಂದಳು. ತಕ್ಷಣವೇ ಬಾಬಾ ಹಿಡಿದುಕೊಂಡಿದ್ದ ಸಟಕವನ್ನು ಸ್ವಾಮಿಯವರು ತೆಗೆದುಕೊಂಡು ಅವಳ(ವಿಕಟರೂಪಿಣಿಯ) ಕತ್ತಿನಮೆಲೆ ಇಟ್ಟು ಅದುಮಿದರು. ಅವಳಿಗೆ ವಿದ್ಯುದಾಘಾತ (electric shock) ಆದಂತೆ ಕಿರುಚಿ ಅಲ್ಲಿಂದ ಹೊರಟು ಹೋದಳು. ಅಂದಿನಿಂದ ನನಗಿದ್ದ ಗ್ರಹ ಬಾಧೆ ತೀರಿಹೋಯಿತು.

"ಗುಂಟೂರಿನಲ್ಲಿ ನಾನು ಬಾಡಿಗೆಗೆ ತೆಗೆದುಕೊಂಡಿದ್ದ ಒಂದು ಚಹಾ ಅಂಗಡಿ ಮಾರಬೇಕೆಂದುಕೊಂಡೆ. ಆ ರಾತ್ರಿ ನನಗೆ ಬಾಬಾ ಸ್ವಪ್ನದಲ್ಲಿ "ಮಾರಿಬಿಟ್ಟರೆ ಏನು ತಿನ್ನುತ್ತೀಯ (ಜೀವನವನ್ನು ಹೇಗೆ ನಡೆಸುತ್ತೀಯ?) ಎಂದರು. ಇನ್ನೊಬ್ಬ ಮಹಿಳೆ ನಿನಗೆ ಬೇರೆ ಜಾಗ ತೋರಿಸುತ್ತೇನೆ ಎಂದು ಹೇಳುತ್ತಿದ್ದಾಳೆ" ಎನ್ನುತ್ತಿದ್ದಾಗ, ಎಚ್ಚರವಾಯಿತು. ಆದರೆ, ಬಾಬಾರವರ ಮಾತನ್ನು ನಿರ್ಲಕ್ಷೆಮಾಡಿ ಅಂಗಡಿಯನ್ನು ಮಾರಿಬಿಟ್ಟೆ. ಅದೇ ಮೊದಲು, ಬಾಬಾ ಹೇಳಿದಂತೆಯೇ ಅನೇಕ ಕಷ್ಟಕ್ಕೆ ಗುರಿಯಾಗಿ ಅನ್ನಕ್ಕೂ ಕಷ್ಟ ಎದುರಿಸಬೇಕಾಯಿತು.

ಹೀಗೆಯೇ ಒಮ್ಮೆ ಬಾಬಾ ನನ್ನ ಸ್ವಪ್ನದಲ್ಲಿ ಕಂಡು "ನನ್ನಂತಹ ಮಗಳು ಹುಟ್ಟುತ್ತಾಳೆ" ಎಂದರು. ಆದರೆ, ನನಗೆ ಹೆಣ್ಣು ಮಗು ಬೇಡ ಎಂದು ತೆಗೆಸಿ ಹಾಕಿದೆ. ಕಷ್ಟಗಳೇನೂ ತಪ್ಪಲಿಲ್ಲ. ಮತ್ತೆ, ನನ್ನ ಹೆಂಡತಿ 7 ತಿಂಗಳ ಗರ್ಭಿಣಿಯಾಗಿದ್ದಾಗ, ಶ್ರೀ ವೆಂಕಯ್ಯ ಸ್ವಾಮಿಯವರು ನನಗೆ ಕನಸಿನಲ್ಲಿ ಕಂಡು" ಚಲ್ಲ ಅವುತುಂದಿ, ನಾದಗ್ಗರಕು

ರಾ!" (ಶೀತ ಆಗುತ್ತೆ ನನ್ನ ಹತ್ತಿರ ಬಾ) ಎಂದು ಹೇಳಿದರು. ಆ ಮಾತು ನನಗೆ ಅರ್ಥವಾಗದೆ, ನಾನು ಶ್ರಿ ಸ್ವಾಮಿಯವರ ಆದೇಶವನ್ನು ನಿರ್ಲಕ್ಷಿಸಿದೆ. ಅದರ ಫಲ, ನನ್ನ ಹೆಂಡತಿಯ ಗರ್ಭದಲ್ಲಿ ಇದ್ದ ಪಿಂಡ ಶೀತದಿಂದ ಮರಣಿಸಿತು. ಅದನ್ನು ಶಸ್ತ್ರಚಿಕಿತ್ಸೆ ಮಾಡಿ ತೆಗೆಯುವುದರಲ್ಲಿ ಆಕೆಗೆ ಪ್ರಾಣಾಪಾಯವಾಯಿತು. ಆದರೆ, ಬಾಬಾ ನನ್ನ ಪ್ರಾರ್ಥನೆ ಮನ್ನಿಸಿ, ಆಕೆಯ ಎದೆಯಮೇಲೆ ತಮ್ಮ ಹಸ್ತವನ್ನಿಟ್ಟಿದ್ದಂತೆ ದರ್ಶನ ಕೊಟ್ಟರು. ನಂತರ, ಅವಳು ಗಂಡಾಂತರದಿಂದ ದಾಟಿ ಬದುಕಿದಳು.

"ನನ್ನ ಸ್ವಪ್ನದಲ್ಲಿ ಬಾಬಾ ಕಂಡು ಊರಿನ ಹೊರವಲಯದಲ್ಲಿ ಜಾಗ ತೋರಿಸಿ ಅದನ್ನು ಖರೀದಿಸು" ಎಂದರು. ಆದರೆ ಅದು ವ್ಯಾಪಾರಕ್ಕೆ ಅನುಕೂಲವಾದ ಜಾಗ ಅಲ್ಲ. ಬಾಬಾ ಏಕೆ ಇಂತಹ ಜಾಗ ತೋರಿಸಿದರು ಎಂದು ನನಗೆ ದುಃಖವಾಗಿ, ಬಾಬಾ ಮತ್ತು ಸ್ವಾಮಿ ಇಬ್ಬರನ್ನೂ ಪ್ರಾರ್ಥಿಸುತ್ತಿದ್ದೆ. ಅದರ ನಂತರ, ಶ್ರೀ ವೆಂಕಯ್ಯಸ್ವಾಮಿ ನನ್ನ ಕನಸಿನಲ್ಲಿ ಕಾಣಿಸಿಕೊಂಡು, "ನಿನಗೆ ಆ ಜಾಗ ಬೇಡವೇ?" ಎಂದರು. ನಂತರ, ಶ್ರೀ ವೆಂಕಯ್ಯಸ್ವಾಮಿ ಅವರು ಮತ್ತು ಬಾಬಾ ಇಬ್ಬರೂ ಸ್ವಪ್ನದಲ್ಲಿ ಕಂಡು ಗುಂಟೂರು ಸೆಂಟರಲ್ಲಿ ಒಂದು ಜಾಗ ತೋರಿಸಿ ಅದನ್ನು ಖರೀದಿಸು ಎಂದು ಹೇಳಿದರು. ಆ ಜಾಗವನ್ನು ವಿಚಾರಿಸಿದರೆ, ಅದನ್ನು ಮಾರುವುದಿಲ್ಲ ಎಂದರು. ಹಿಂದೆ, ಬಾಬಾ ಮತ್ತು ಸ್ವಾಮಿಯವರ ಆದೇಶವನ್ನು ನಿರ್ಲಕ್ಷ್ಯಮಾಡಿ ಬಹಳ ಕಷ್ಟವನ್ನು ಅನುಭವಿಸಿದ್ದರಿಂದ, ಹೇಗಾದರೂ ಆ ಜಾಗ ದುಬಾರಿಯಾದರೂ ಕೊಳ್ಳಲೇ ಬೇಕೆಂದು ನಿರ್ಧರಿಸಿ ಪದೇ ಪದೆ ಪ್ರಯತ್ನಿಸಿದೆ. ಕೊನೆಗೆ 40,000 ರೂ ಮುಂಗಡವಾಗಿ ಕೊಟ್ಟು, ನಂತರ ಅನುಕೂಲವಾದಾಗ, ರೆಜಿಸ್ಟ್ರೇಷನ್ ಮಾಡಿಸುತ್ತೇನೆ ಎಂದು ಆ ಜಮೀನು ಮಾರಾಟಗಾರ ಒಪ್ಪಿಕೊಂಡನು. ಕೊನೆಗೆ 40,000 ರೂ ಸಾಲ ಮಾಡಿ ತಂದು ಅವನಿಗೆ ಕೊಟ್ಟೆ. ಜಾಗ ಮಾರಾಟ ಮಾಡಿದವನು ಮೋಸಗಾರ, "ನಿನ್ನ ಹಣ ಹೋಯಿತು" ಎಂದು ಎಲ್ಲರೂ ಹೇಳಿದರು. ಆದರೆ, ನಾನು ಉಭಯ ಗುರುಗಳ ಮೇಲೆ ಭಾರ ಹಾಕಿ ನಿಶ್ಚಿಂತೆಯಿಂದ ಇದ್ದೆ. ವಿಚಿತ್ರವಾಗಿ ಒಂದು ದಿನ ಬೆಳಗ್ಗೆ ಆ ಮಾರಾಟಗಾರ ಅವನಾಗೇ ಬಂದು ರೆಜಿಸ್ಟ್ರೇಷನ್ ಮಾಡಿಸಿ ಕೊಟ್ಟನು. ಈ ವಿಧವಾಗಿ, ಶ್ರಿ ಸಾಯಿನಾಥರು ಮತ್ತು ಶ್ರೀ ವೆಂಕಯ್ಯಸ್ವಾಮಿಯವರು ಭೇದಭಾವ ಇಲ್ಲದೇ ಭಕ್ತರ ರಕ್ಷಣೆ ಮಾಡುತ್ತಿದ್ದಾರೆ. ಇದು ನನ್ನ ಅದೃಷ್ಟ."

ವಲ್ಲಪುರೆಡ್ಡಿ ನಾರಾಯಣರೆಡ್ಡಿಯವರ ತಾಯಿಯವರಿಗೆ ಸ್ವಾಮಿಯವರು ಪ್ರಾಣಭಿಕ್ಷೆ ಕೊಟ್ಟ ವಿಷಯ ಭಕ್ತರಿಗೆ ತಿಳಿದಿದ್ದೇ. ಸ್ವಲ್ಪಕಾಲದ ನಂತರ, ರೆಡ್ಡಿಯವರು ಶಿರಿಡಿ ಸಾಯಿನಾಥನ ಚರಿತ್ರೆ ಪಠಣ ಮಾಡಿದರು, ಅವರಿಗೆ ಬಾಬಾ ಮೇಲೆ ಭಕ್ತಿ ಮತ್ತು ಶ್ರದ್ಧೆ ಬೆಳೆದು, ಅವರನ್ನೂ ಪ್ರಾರ್ಥನೆ ಮಾಡಲು ಪ್ರಾರಂಭಿಸಿದರು. ಒಂದು ದಿನ ವಿಷಮ ಪರಿಸ್ಥಿತಿಯಲ್ಲಿದ್ದು ಸ್ವಾಮಿಯವರನ್ನು ಮತ್ತು ಸಾಯಿನಾಥರನ್ನು ಪ್ರಾರ್ಥಿಸಿದರು. ಆ ರಾತ್ರಿ ಶ್ರೀ ಸ್ವಾಮಿಯವರು ಸಜೀವರಾಗಿದ್ದಾಗಿನ ಸ್ವರದಲ್ಲಿ, "ವಾರಿನಿ ಸ್ಮರಿಂಚಿನಾ ನನ್ನು ಸ್ಮರಿಂಚಿನಟ್ಲೇ" (ಅವರನ್ನು (ಸಾಯಿನಾಥರನ್ನು) ಸ್ಮರಣೆ ಮಾಡಿದರೂ ನನ್ನ ಸ್ಮರಣೆ ಮಾಡಿದಂತೆಯೇ) ಎಂದು ಸ್ಪಷ್ಟವಾಗಿ ಹೇಳಿದರು.

ಒಮ್ಮೆ, ಶ್ರೀ ಸ್ವಾಮಿಯವರ ದೈವತ್ವದ ವಿಚಾರವನ್ನು ತಿಳಿದು ಅವರನ್ನು ದರ್ಶನ ಮಾಡಬೇಕೆಂದು ಶ್ರೀ ಎಕ್ಕಿರಾಲ ಭರದ್ವಾಜರವರು, ಅವರ ಅತ್ತೆಯವರು, ಅವರ ನಾದಿನಿ ಮತ್ತು ಸ್ವಲ್ಪ ಜನರು ತಲಪೂರಿಗೆ ಬಂದರು. ಅದೇ ಸಮಯದಲ್ಲಿ ಸ್ವಾಮಿಯವರು ಗಾಡಿಯಲ್ಲಿ ಕಿರುದಾರಿ ಹಿಡಿದು ಪಕ್ಕದ ಗ್ರಾಮವಾದ ಕಲಿಚೇಡಿಗೆ ಬಂದರು. ಆ ವಿಷಯ ತಿಳಿದು, ಭರದ್ವಾಜರವರ ಅತ್ತೆಯವರು, ಬಸ್ಸಿಲ್ಲದ್ದರಿಂದ, 56 ವರ್ಷ ಪ್ರಾಯದಲ್ಲಿ, ತಮ್ಮ ವೃದ್ಧಾಪ್ಯ ಮತ್ತು ಬಲಹೀನತೆಯ ಬಗ್ಗೆ ನಿರ್ಲಕ್ಷಿಸಿ ಇತರರೊಂದಿಗೆ ಮಟ ಮಟ ಮಧ್ಯಾಹ್ನ ಮೂರು ಮೈಲು ನಡೆದು ಕಲಿಚೇಡು ತಲುಪಿ, ಸ್ವಾಮಿಯವರಿಗೆ ನಮಸ್ಕಾರ ಮಾಡಿದರು. ಆ ದಿನಗಳಲ್ಲಿ, ಸ್ವಾಮಿಯವರು, ಯಾವಾಗಲೂ ಮೌನವ್ರತದಲ್ಲಿ ಇರುತ್ತಿದ್ದರು. ಯಾರನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಕಾಗದ ಮೇಲೆ ತಮ್ಮ ಬೆರಳು ಮುದ್ರೆ ಹಾಕುತ್ತಾ ಭಕ್ತರಿಗೆ ಅದನ್ನು ಕೊಟ್ಟು, ಕಾಗದಗಳನ್ನು ಬೇಗಬೇಗ ತಮ್ಮ ಹೆಬ್ಬೆರಳಿನ ಕೆಳಗೆ ಇಡಲು ಅವರುಗಳನ್ನು ಪ್ರೋತ್ಸಾಹಿಸಿದರು. ಆ ಸಮಯದಲ್ಲಿ ಸ್ತ್ರೀಯರ ಕೈ ಸ್ವಾಮಿಯವರಿಗೆ ತಗಲುತ್ತಿದ್ದರೂ, ಸ್ವಾಮಿಯವರು ಅವರುಗಳನ್ನು ಅಡ್ಡಿ ಹೇಳಲಿಲ್ಲ. ಅವರುಗಳ ಭಕ್ತಿ ಶ್ರದ್ಧೆಯನ್ನು ನೋಡಿ ಈ ರೀತಿಯಾಗಿ ಅನುಗ್ರಹಿಸಿದರು. ಶ್ರೀ ಸ್ವಾಮಿಯವರ ದರ್ಶನ ಮತ್ತು ಅವರ ಸ್ಪರ್ಶ ತಮಗೆ ಶ್ರೀ ಸಾಯಿನಾಥರ ಅನುಗ್ರಹದಿಂದ ಸಿಕ್ಕಿತೆಂದು ಈ ಉಭಯ ಗುರುಗಳು ಒಂದೇ ಎಂದು ಶ್ರೀ ಭರದ್ವಾಜರು ಮತ್ತು ಅವರ ಕುಟುಂಬದವರುಗಳು ಸಂತೋಷ ಪಟ್ಟರು.

ಇನ್ನೊಬ್ಬ ಭಕ್ತೆ, ಪಾಬೋಲು ಸುಬ್ಬಮ್ಮನವರು, ತನ್ನ ಕಡೆಗಾಲದಲ್ಲಿ, ಶ್ರೀ ಸಾಯಿನಾಥರ ನಾಮಜಪ ನಿರಂತರ ಮಾಡಿದ ಪುಣ್ಯ ಜೀವಿ. ಶ್ರೀ ವೆಂಕಯ್ಯಸ್ವಾಮಿಯವರು ತಮ್ಮ ಆಶಿರ್ವಾದ, ಪಾದತೀರ್ಥವನ್ನು ಇವರ ಕಡೆಯ ಘಳಿಗೆಯಲ್ಲಿ ಕಳುಹಿಸಿದರು. ಶ್ರೀ ಸ್ವಾಮಿಯವರ ಪಾದತೀರ್ಥವನ್ನು ಸ್ವೀಕರಿಸಿ ತನ್ನ ಕೊನೆ ಶ್ವಾಸ ಬಿಟ್ಟಿದ ಪುಣ್ಯಜೀವಿ. ಇಲ್ಲಿ ಗಮನಿಸಬೇಕಾದ ವಿಷಯ, ಶ್ರೀ ಸಾಯಿ ನಾಥರ ನಾಮಜಪ ಮಾಡುತ್ತಿದ್ದ ಸುಬ್ಬಮ್ಮನವರಿಗೆ, ಶ್ರೀ ವೆಂಕಯ್ಯಸ್ವಾಮಿಯವರು ತಮ್ಮ ಪಾದತೀರ್ಥ ಕಳುಹಿಸಿದರೆಂದರೆ, ಅವರಿಬ್ಬರಿಗೂ ಏನೂ ಭೇದವಿಲ್ಲ ಎಂದು ಅಲ್ಲವೇ ಅದರ ಅರ್ಥ? **ರೂಪ ನಾಮಗಳಿಗೆ ಅತೀತರಾದವರೇ ಮಹಾತ್ಮರು. ಅಂತಹ ಮಹಾತ್ಮರು ಇಡೀ ಜಗತ್ತನ್ನು ಸಾಕಾರಗೊಳಿಸುತ್ತಾರೆ. ಇದು ಎಲ್ಲಾ ಕಡೆ ಇರುವ ತತ್ವ ಅಲ್ಲವೇ? ಅದೇ ನಮ್ಮ ಸ್ವಾಮಿಯವರು**.

ಶ್ರೀ ಸ್ವಾಮಿಯವರು ಯಾವಾಗಲೂ ಹೊಸ ಗ್ರಾಮ ಅಥವ ಪ್ರದೇಶಗಳಿಗೆ ಹೋಗುತ್ತಿರಲಿಲ್ಲ. ಅವರು ಆಗಾಗ್ಗೆ ಕೆಲವು ಗ್ರಾಮಗಳಿಗೆ ಹೋಗಿ ಅಲ್ಲಿ ಬಿಡದಿ ಮಾಡುತಿದ್ದರು. ಶ್ರೀ ಸ್ವಾಮಿಯವರನ್ನು ಭಕ್ತರು ಯಾವಾಗಲಾದರು ತುಂಬಾ ಬಲವಂತಪಡಿಸಿ ಹೊಸ ಗ್ರಾಮ/ಜಾಗಕ್ಕೆ ಕರೆದುಕೊಂಡು ಹೋದಾಗ, ಅವರು ಒಂದು ರಾತ್ರಿ ಕಳೆಯುವ ಹೊತ್ತಿಗೆ ಆಕಾಶ ಭೂಮಿ ಒಂದು ಮಾಡುತ್ತಿದ್ದರು. ಶ್ರೀ ಸ್ವಾಮಿಯವರು ತಕ್ಷಣ ಸ್ಥಳದಿಂದ ಹೊರಡುತ್ತಿದ್ದರು. ಅವರು ನೆಲ್ಲೂರಿನಲ್ಲಿರುವ ವಿದ್ಯಾನಗರ ಎಂಬ ಗ್ರಾಮಕ್ಕೆ ಯಾವಾಗಲೂ ಹೋಗಿರಲಿಲ್ಲ. ಆದರೆ ಒಂದು ದಿನ, ಯಾರ ಆಹ್ವಾನವಿಲ್ಲದೆ ವಿದ್ಯಾನಗರಕ್ಕೆ ಅವರ ವೃಂದದೊಡನೆ ಹೋಗಿ ಸೇರಿದರು. ವಿದ್ಯಾನಗರದಲ್ಲಿ, ಆಗಲೇ

ಹೊಸದಾಗಿ ಪ್ರಾರಂಭೋತ್ಸವ ಮಾಡಲು ಎಲ್ಲಾ ವ್ಯವಸ್ಥೆ ಮಾಡಿಕೊಂಡಿದ್ದ ಶ್ರೀ ಶಿರಿಡಿ ಸಾಯಿಬಾಬಾ ಮಂದಿರಕ್ಕೆ ಬಂದು, ಸಮಾಧಿಕಟ್ಟಲು ವ್ಯವಸ್ಥೆಮಾಡಿದ್ದ ಜಾಗದಲ್ಲಿ ಅಗ್ನಿಕುಂಡ ಇಟ್ಟು 5 ದಿನಗಳು ಅಲ್ಲಿದ್ದು ಆ ಜಾಗವನ್ನು ಪಾವನ ಮಾಡಿದರು.

ವಿದ್ಯಾನಗರಕ್ಕೆ ಬಂದ ಮರುದಿನ, ಸೇವಕರು "ಇನ್ನೊಂದು ಗ್ರಾಮಕ್ಕೆ ಹೋಗೋಣ ಸ್ವಾಮಿ" ಎಂದರೆ, ಸ್ವಾಮಿಯವರು, "ಪೊಯ್ಯೇಂದುಕು ದೋವ ಕನಬಟ್ಟಂಲೇದಯ್ಯ! ಇಚಟ ಇರವೈಒಕ್ಕ ಕೋಟ್ಲು ಜಮ ಕಟ್ಟವಲಸಿಯುನ್ನದಿ" (ಹೋಗುವುದಕ್ಕೆ ದಾರಿ ಕಾಣುತ್ತಿಲ್ಲಯ್ಯಾ! ಇಲ್ಲಿ 21 ಕೋಟಿ ಜಮ ಮಾಡಬೇಕಾಗಿದೆ) ಎಂದರು. ಆಚಾರ್ಯ ಎಕ್ಕಿರಾಲ ಭರದ್ವಾಜರವರು, ಶ್ರೀ ಸಾಯಿನಾಥರನ್ನು ಪೂಜೆ ಮಾಡುತ್ತಾ, "ಆಸನಂ ಸಮರ್ಪಯಾಮಿ" ಅಂದಾಗ, ವೆಂಕಯ್ಯಸ್ವಾಮಿಯವರು ಅಲ್ಲಿಯವರಗೂ ಮಲಗಿದ್ದವರು, ಎದ್ದು ಕುಳಿತುಕೊಂಡರು. "ನೈವೇದ್ಯಂ ಸಮರ್ಪಯಾಮಿ" ಅಂದಾಗ, ಸ್ವಾಮಿಯವರು ಗಂಜಿ ಬೇಕೆಂದು ಗಂಜಿ ಕುಡಿದರು. ಬಾಬಾಗೆ ಭಕ್ತರು ಆರತಿಯನ್ನು ಬೆಳಗುತ್ತಿದ್ದಾಗ, ಸ್ವಾಮಿಯವರು ಎಷ್ಟೋ ಶ್ರದ್ಧೆಯಿಂದ ಆರತಿ ಸ್ವೀಕರಿಸಿದರು. "ಈ ಮಂದಿರದಲ್ಲಿ ನಿಮಗೆ ಹೇಗಿದೆ ಸ್ವಾಮಿ?" ಎಂದು ಕೇಳಿದಾಗ, "ತುಂಬಾ ಚೆನ್ನಾಗಿದೆ" ಎಂದು ಹೇಳುತ್ತಾ ತಮ್ಮದೇ ಆದ ಪರಿಭಾಷೆಯಲ್ಲಿ ಮಂದಿರಕ್ಕೆ ಆಶೀರ್ವಾದ ಮಾಡಿದರು.

ಸ್ವಾಮಿಯವರು ಯಾವಾಗಲೂ ಹೂವಿನ ಹಾರವನ್ನು ಯಾರಿಂದಲೂ ಸ್ವೀಕರಿಸದವರು, ಶ್ರೀ ಭರದ್ವಾಜರವರು ಸ್ವಾಮಿಯವರ ಪಾದಗಳ ಮೇಲೆ ಸೇವಂತಿಗೆ ಹೂವನ್ನು ಇಟ್ಟಾಗ, ಮೌನಾವಾಗಿ ಸ್ವೀಕರಿಸಿ ಆಶೀರ್ವದಿಸಿದರು. ಒಬ್ಬ ಸೇವಕ (ಸ್ವಾಮಿ ಎಂದಿಗೂ ಹೂವುಗಳನ್ನು ಸ್ವೀಕರಿಸದ ಕಾರಣ), ಆ ಹೂವನ್ನು ತೆಗೆಯಲು ಹೋದರೆ, ಸ್ವಾಮಿಯವರು ತೆಗೆಯುವುದಕ್ಕೆ ಬಿಡದೇ, ಆ ಹೂವುಗಳನ್ನು ಅಲ್ಲಿಂದ ಕದಲಿಸಲಿಲ್ಲ. ಈ ರೀತಿ, ಸ್ವಾಮಿಯವರು, ಶ್ರೀ ಸಾಯಿನಾಥರೊಂದಿಗೆ, ಅಭೇದ ಸ್ಥಿತಿಯಲ್ಲಿದ್ದೇನೆಂದು ನಿರೂಪಿಸಿದರು.

ಮತ್ತೊಬ್ಬ ಭಕ್ತ ಪಿ. ಪೆಂಚಲಯ್ಯನವರು, ಪೊದಲಕೂರು ಎಂಬ ಗ್ರಾಮದ ನಿವಾಸಿ. ಅವರು ತಮ್ಮ ಅನುಭವವನ್ನು ಹೀಗೆ ತಿಳಿಸಿದರು. "ಶ್ರೀ ಸ್ವಾಮಿಯವರು ನಡೆಯುತ್ತಿರುವ ದಿನಗಳಲ್ಲಿ ನಾನು ಅವರನ್ನು ಸ್ವಲ್ಪ ಕಾಲ ಸೇವಿಸಿದೆನು. ಅದು ಮೊದಲು, ಅವರ ಪಟವನ್ನು ಪ್ರತಿ ನಿತ್ಯ ಪೂಜಿಸುತ್ತಾ ಇದ್ದೇನೆ. ಒಮ್ಮೆ 4 ವರ್ಷದ ನನ್ನ ಮಗಳು ಪದ್ಮಳನ್ನು ಸೈಕಲ್ ಮೇಲೆ ಹತ್ತಿಸಿಕೊಂಡು ಹೋಗುತ್ತಿದ್ದಾಗ, ಅಪಘಾತ ಆಗಿ ನನ್ನ ಮಗಳ ಕಾಲು ಮುರಿಯಿತು. "ನಾನು ನಿಮಿತ್ತವಾಗಿ ಕಟ್ಟುಕಟ್ಟಿಸುತ್ತೇನೆ. ಆದರೆ, ಅವಳ ಕಾಲು ಸರಿಪಡಿಸುವ ಜವಾಬ್ದಾರಿ ನಿಮ್ಮದು ಸ್ವಾಮಿ" ಎಂದು ಸ್ವಾಮಿಯವರನ್ನು ಪ್ರಾರ್ಥಿಸಿದೆ. ಅಂದಿನ ರಾತ್ರಿ ಸ್ವಪ್ನದಲ್ಲಿ, ಸ್ವಾಮಿಯವರ ಬದಲು, ಶ್ರಿ ಶಿರಿಡಿ ಸಾಯಿಬಾಬಾ ಕಂಡು, "ಅಪ್ಪಾ! ಮಗುವಿನ ಕಾಲು ಸರಿಹೋಗುತ್ತದೆ, ದುಃಖ ಪಡಬೇಡ" ಎಂದು ಮಗುವಿನ ಕಾಲಿಗೆ ರಸದ ಮಿಶ್ರಣ ಹಚ್ಚಿ ಕಟ್ಟು ಕಟ್ಟಿದರು. ಶ್ರೀ ಸಾಯಿನಾಥರು ಹೇಳಿದಂತೆಯೇ ಒಂದೇ ಒಂದು ಕಟ್ಟು ಕಟ್ಟಿಸಿದ ನಂತರ ಮಗುವಿನ ಕಾಲು ಸರಿಹೋಗಿ ನಡೆಯುವ

ಹಾಗಾಯಿತು. ಸ್ವಪ್ನ ದರ್ಶನ ಆದ ಮರು ದಿನ ನೆಲ್ಲೂರಿನಲ್ಲಿರುವ ಸಾಯಿಬಾಬಾ ಮಂದಿರಕ್ಕೆ ಹೋಗಿ, ಬಾಬಾಗೆ ಪೂಜೆ ಮಾಡಿಸಿ, ಒಂದು ಬಾಬಾ ಪಟವನ್ನು ತಂದು ಶ್ರೀ ಸ್ವಾಮಿಯವರ ಪಟದ ಪಕ್ಕದಲ್ಲಿಟ್ಟು, ಪ್ರತಿ ನಿತ್ಯ ಪೂಜಿಸುತ್ತಿದ್ದೇನೆ. ನನಗೆ ಅರ್ಥವಾಗದ ವಿಷಯವೆಂದರೆ, ನಾನು ಶ್ರೀ ಸ್ವಾಮಿಯನ್ನು ಆರಾಧಿಸುತ್ತಿದ್ದೆ ನನಗೆ ಬಾಬಾ ಯಾರೆಂದು ತಿಳಿದಿರಲಿಲ್ಲ, ಆದರೆ ನನ್ನ ಕನಸಿನಲ್ಲಿ ಬಾಬಾ ಕಾಣಿಸಿಕೊಂಡರೆಂದರೆ ಅದರ ಅರ್ಥ ಏನು? ಈ ಉಭಯಗುರುಗಳ ನಡುವೆ ಯಾವುದೇ ವ್ಯತ್ಯಾಸವಿಲ್ಲ.

ಆಗಸ್ಟ್ 1986 ರಲ್ಲಿ, ನನ್ನ ನಾದಿನಿಯನ್ನು ಗಂಭೀರ ಅನಾರೋಗ್ಯದ ಕಾರಣದಿಂದ ಮದ್ರಾಸಿನ ಆಸ್ಪತ್ರೆಗೆ ಕರೆದು ಕೊಂಡು ಹೋದರು. ಆಕೆಗೆ ಸ್ವಾಮಿಯವರ ಮೇಲೆ ಅಪಾರ ನಂಬಿಕೆ ಮತ್ತು ನನ್ನ ಮೇಲೆ ಪ್ರೀತಿ ಇತ್ತು. ನನಗೆ ಈ ಸುದ್ದಿ ತಿಳಿದನಂತರ, "ಏನು ಸ್ವಾಮಿ! ನಿಮ್ಮ ಮೇಲೆ ಇಷ್ಟು ಭಕ್ತಿ ಶ್ರದ್ಧೆ ಇಟ್ಟಿರುವ ನನ್ನ ನಾದಿನಿಯನ್ನು ನನಗೆ ಕಾಣದಷ್ಟು ದೂರ ಕಳುಹಿಸಿ ಬಿಟ್ಟಿರಿ. ದಯವಿಟ್ಟು, ಆಕೆಯ ಆರೋಗ್ಯ ಸರಿಪಡಿಸಿ ನಾನು ಮತ್ತೆ ಅವರನ್ನು ನೊಡುವಹಾಗೆ ಅನುಗ್ರಹಿಸಿ" ಎಂದು ಪ್ರಾರ್ಥಿಸಿದೆ. ತಕ್ಷಣವೇ ನನ್ನ ಕಣ್ಣುಗಳು ಮುಚ್ಚಿಕೊಂಡು ಒಂದು ದೃಶ್ಯ ಕಾಣಿಸಿತು. "ಸಾಯಿಬಾಬಾ ನನ್ನ ಬಳಿ ಬಂದು ನನ್ನ ನಾದಿನಿಯನ್ನು ತೋರಿಸುತ್ತೇನೆ" ಎಂದು ಕ್ಷಣದಲ್ಲಿ ಮದ್ರಾಸಿನಲ್ಲಿ ನನ್ನ ನಾದಿನಿಯ ಮಂಚದ ಬಳಿ ನಿಲ್ಲಿಸಿದರು. "ನೋಡಪ್ಪಾ! ಇವಳಿಗೆ ಖಂಡಿತ ಗುಣವಾಗುತ್ತದೆ. ಇಂಜೆಕ್ಷನ್ ಕೊಡುತ್ತೇನೆ" ಎಂದು ಇಂಜೆಕ್ಷನ್ ಕೊಟ್ಟರು. ನನ್ನ ನಾದಿನಿಗೆ ಎಚ್ಚರ ಆಯಿತು. ಅವಳಿಗೆ ನಾನು ಒಂದು ಪತ್ರ ಬರೆದು, ನನ್ನ ಅನುಭವವನ್ನು ತಿಳಿಸಿದಾಗ, ನನಗೆ ಆ ಅನುಭವ ಆದ ಸಮಯದಲ್ಲೇ, ಬಾಬಾ ಅವಳ ಸ್ವಪ್ನದಲ್ಲಿ ಕಂಡು ಇಂಜೆಕ್ಷನ್ ಕೊಟ್ಟು ಗುಣವಾಗುತ್ತದೆ ಎಂದು ಆಶೀರ್ವಾದ ಮಾಡಿದರೆಂದು ನನಗೆ ಉತ್ತರ ಬರೆದು ತಿಳಿಸಿದರು. ಸ್ವಲ್ಪ ಸಮಯದಲ್ಲೆ ಅವರು ಸಂಪೂರ್ಣವಾಗಿ ಆರೋಗ್ಯವಂತರಾದರು. ಶ್ರೀ ಸ್ವಾಮಿಯವರು ಮತ್ತು ಶ್ರೀ ಸಾಯಿನಾಥರಲ್ಲಿ ಏನೂ ವ್ಯತ್ಯಾಸವಿಲ್ಲ. ಇಬ್ಬರೂ ಒಂದೇ, ಅವರು ನಾಮರೂಪವನ್ನು ಮೀರಿದ ಸಂಪೂರ್ಣ ಗುರುತತ್ವ ಮಾತ್ರವೇ.

ಅವಧೂತ ಲೀಲೆ

ಅಧ್ಯಾಯ - 25

ಮಹಾಸಮಾಧಿ

ಶ್ರೀ ಸ್ವಾಮಿಯವರು, ತಮ್ಮ ಸಮಾಧಿಗೆ ಸುಮಾರು 2.5 ವರ್ಷದ ಮೊದಲಿನಿಂದ, ತಮ್ಮ ಪರ್ಯಟಣ ನಿಲ್ಲಿಸಿ ಗೊಲಗಮೂಡಿಯಲ್ಲೇ ಒಂದು ಗುಡಿಸಲಿನಲ್ಲಿ ಇರಲು ಪ್ರಾರಂಭಿಸಿದರು. ಸ್ವಾಮಿಯವರು ಹಗಲಿರುಳು ನಿರಂತರವಾಗಿ ಯಾರಿಗೂ ಅರ್ಥವಾಗದ ಭಾಷೆಯಲ್ಲಿ ಜೋರಾಗಿ ಮಾತನಾಡುತ್ತ, ಗುರವಯ್ಯನನ್ನು ಅದೇ ಮಾತುಗಳನ್ನು ಜೋರಾಗಿ ಹೇಳು ಎಂದು ಕೇಳುತ್ತಿದ್ದರು. ಆಯಾಸದಿಂದ ಗುರವಯ್ಯ ಸ್ವಾಮಿಯವರ ಮಾತನ್ನು ಹೇಳುವುದು ನಿಲ್ಲಿಸಿದಾಗ, ಸ್ವಾಮಿಯವರು ಮರುಕ್ಷಣವೇ "ಏನಾಯಿತು? ಏಕೆ ನಿಲ್ಲಿಸಿದೆ?" ಎಂದು ಆತುರ ಪಡಿಸುತ್ತಿದ್ದರು. ಗುರವಯ್ಯನವರು ಹಗಲಿರಳು ಸ್ವಾಮಿಯವರ ಮಾತುಗಳನ್ನು ಹೇಳುತ್ತಾ ಅವರ ಬಳಿಯೇ ಇರಬೇಕಾಗಿತ್ತು. ಅವರು ಊಟ ಮಾಡಲು ಹೋದಾಗ, ಬೇರೆಯವರು ಹೇಳಬೇಕಾಗುತ್ತಿತ್ತು.

ಮಹಾಸಮಾಧಿಗೆ ಕೆಲವು ದಿನಗಳ ಮುಂಚೆ, ಸ್ವಾಮಿಯವರು ಅವರ ಹೊದಿಕೆಗಳು, ಕೌಪೀನ ಬಟ್ಟೆಗಳು ಎಲ್ಲಾ ಲೆಕ್ಖಹಾಕಿ ಗುರವಯ್ಯನಿಗೆ ಕೊಟ್ಟು, "ಇವನ್ನೀ ಜಾಗ್ರತ್ತಗಾ ದಾಚಿ ಪೆಟ್ಟಯ್ಯ" (ಇವಲ್ಲ ಎಚ್ಚರಿಕೆಯಿಂದ ಇಡಯ್ಯಾ) ಎಂದು ಹೇಳಿದರು. **"ಸತ್ಯ, ಧರ್ಮ, ಸಂಪನ್ನತ್ವ, ಸಾಧಾರಣತ್ವ, ಸದ್ಗುರುಸೇವೇ"** ಎಂದು ಪದೇ ಪದೇ ಜೋರಾಗಿ ಹೇಳುತ್ತಿದ್ದರು.

ಮಹಾಸಮಾಧಿಗೆ ಒಂದು ವರ್ಷದ ಮುಂಚೆಯಿಂದ "ಚಪ್ಪಲಿ ಅಯ್ಯಾ! ಚಪ್ಪಲಿ" ಎಂದು ಪದೇ ಪದೆ ಕೇಳುತ್ತಿದ್ದರು. ಮರದ ಹಲಗೆ ಕೊಟ್ಟರೆ, "ಇವಿ ಕಾದಯ್ಯಾ, ಅಸಲು ಚೆಪ್ಪುಲು ಕಾವಾಲಯ್ಯಾ" (ಇದಲ್ಲಪ್ಪಾ! ನಿಜವಾದ ಚಪ್ಪಲಿ ಬೇಕಯ್ಯಾ) ಎಂದರು. ಗಂಧದ ಪಾದುಕೆಗಳು ಮಾಡಿಸಲು ಭಕ್ತರಿಗೆ ಸಾಧ್ಯವಾಗಲಿಲ್ಲ. ಒಂದು ದಿನ, ರೋಶಿ ರೆಡ್ಡಿಯವರ ಮಗ ಪಾದುಕೆಗಳನ್ನು ಮಾಡಿಸಿ, ಶ್ರೀ ಸ್ವಾಮಿಯವರಿಗೆ ಸಮರ್ಪಿಸಬೇಕೆಂದು ತರುತ್ತಿದ್ದರು. ಸ್ವಾಮಿಯವರು ಆಶ್ರಮದಲ್ಲಿ "ಚಪ್ಪಲಿ! ಚಪ್ಪಲಿ" ಎಂದು ಜೋರಾಗಿ ಕೂಗುತ್ತಿದ್ದರು. ರೋಶಿ ರೆಡ್ಡಿಯವರ ಮಗ ಪಾದುಕೆಗಳನ್ನು ಸ್ವಾಮಿಯವರಿಗೆ ಕೊಟ್ಟಾಗ, ಅವುಗಳನ್ನು ಗಟ್ಟಿಯಾಗಿ ತಬ್ಬಿಕೊಂಡು, ತಮ್ಮ ಎದೆಯಹತ್ತಿರ ಅದುಮಿ ಹಿಡಿದು ಕೊಂಡು ಬಹಳ ಸಮಯದವರೆಗೂ ಕೊಡಲಿಲ್ಲ. ಆ ಪವಿತ್ರ ಪಾದುಕಗಳೇ ಸ್ವಾಮಿಯವರು ನಿರ್ಯಾಣಿಸಿದ ಮೇಲೆ ಅವರು ಇದ್ದ ಗುಡಿಸಲಿನಲ್ಲಿ ಈಗ ಪ್ರತಿಷ್ಠಾಪನೆ ಆಗಿರುವುದು.

ಹಿಂದೆ ಶ್ರೀ ರಾಮ ತನ್ನ ಪ್ರತಿನಿಧಿಯಾಗಿ ತನ್ನ ಪಾದುಕೆಗಳನ್ನು ಭರತನಿಗೆ ಕೊಟ್ಟರು. ದತ್ತಕ್ಷೇತ್ರಗಳಾದ ಗಂಧರ್ವಪುರ, ನರಸೋಬಾವಾಡಿಯಲ್ಲಿ ನೃಸಿಂಹಸರಸ್ವತಿ ಯಂತಹ ಮಹನೀಯರು ತಮ್ಮ ಪ್ರತಿರೂಪವಾಗಿ ತಮ್ಮ ಪಾದುಕೆಗಳನ್ನು ಪ್ರತಿಷ್ಠಾಪಿಸಿದರು. ಅಕ್ಕಲಕೋಟೆ ಸ್ವಾಮಿಯವರು ತಮ್ಮ ಶಿಷ್ಯರಿಗೆ ತಮ್ಮ ಪಾದುಕೆಗಳನ್ನೇ ಪ್ರಸಾದಿಸಿದರು. ಅಂತಹ ಮಹನೀಯರ ಸಂಪ್ರದಾಯಕ್ಕೆ ಸೇರಿದ ಶ್ರೀ ವೆಂಕಯ್ಯಸ್ವಾಮಿಯವರು ಕೂಡಾ ತಮ್ಮ ದಿವ್ಯಶಕ್ತಿಯನ್ನು ಸಂಗ್ರಹಿಸಿ ಅವರ ಪಾದುಕೆಗಳನ್ನು ತಮ್ಮ ಪ್ರತಿರೂಪವಾಗಿ ನಮಗೆ ಕೊಟ್ಟರು. ಈ ಪಾದುಕೆಗಳನ್ನು ನಾವು ಭಕ್ತಿ ಮತ್ತು ಶ್ರದ್ಧೆಗಳಿಂದ ಪೂಜೆ ಮಾಡಿ ಅವರ ಅನುಗ್ರಹ ಪಡೆಯಬೇಕು.

1982 ರಲ್ಲಿ ಶ್ರೀ ರಾಮನವಮಿ ಯಂದು, ಗುರವಯ್ಯನವರು ಬಹಳ ಸ್ಪಷ್ಟವಾದ ದೃಶ್ಯವನ್ನು ಕಂಡರು, ಅದರಲ್ಲಿ ಸೀತಾರಾಮಲಕ್ಷ್ಮಣರು ಸ್ವಾಮಿಯವರ ಸಮೀಪದಲ್ಲಿ ನಿಂತು "ನಿನ್ನ ಸಮಯ ಮುಗಿದಿದೆ, ನಿನ್ನ ಶರೀರವನ್ನು ತ್ಯಜಿಸಿ ಬಂದು ಬಿಡು" ಎಂದು. ಶ್ರೀ ರಾಮನವಮಿಯ ದಿನ ಶ್ರಿ ಸ್ವಾಮಿಯವರಿಗೆ ಅತಿ ತೀವ್ರವಾಗಿ ಅನಾರೋಗ್ಯ ಆಯಿತು. ಆ ದಿನವೇ ಸ್ವಾಮಿಯವರ ಅವಸಾನ ಎಂದು ಭಕ್ತರು ಭಾವಿಸಿದರು. ಅವರು ಸಾಕಷ್ಟು ದೈಹಿಕ ಅಸ್ವಸ್ಥತೆಯಲ್ಲಿದ್ದರು, ಆದರೆ ಮರುದಿನಕ್ಕೆಲ್ಲಾ ಅವರು ಆರೋಗ್ಯವಂತರಾದರು.

ಸ್ವಾಮಿಯವರು ಮಹಾಸಮಾಧಿಗೆ ಎರಡು ತಿಂಗಳ ಮುಂಚೆ ತುಂಬಾ ಆಯಾಸದಿಂದ ಬಲಹೀನರಾಗಿದ್ದರು. ಒಂದು ದಿನ, "ನೇನು ವೆಳ್ಳಿಪೋತುನ್ನಾನು" (ನಾನು ಹೊರಟು ಹೋಗುತ್ತಿದ್ದೇನೆ) ಎಂದು ಪತ್ರ ಬರೆಸಿದರು. ಅವರು ಕೆಲವು ಗಂಟೆ ಗಳ ಕಾಲ ಪ್ರಜ್ಞಾಹೀನರಾಗಿದ್ದರು. ಸ್ವಾಮಿಯವರು ನಿಜವಾಗಿಯೂ ತಮ್ಮ ಶರೀರವನ್ನು ಬಿಡುತ್ತಿದ್ದಾರೆ ಎಂದು ಭಾವಿಸಿ ಎಲ್ಲರೂ ತುಂಬಾ ದುಃಖಿಸಿದರು. ಸ್ವಲ್ಪ ಹೊತ್ತಿನ ನಂತರ ಸ್ವಾಮಿಯವರು ಎದ್ದು ಕುಳಿತು, "ಪೈ ವಾಳ್ಳು ಒಪ್ಪುಕೋಲೇದು. ಇಂಕಾ ಕೊಂತ ಕಾಲಂ ಉಂಡಿ ರಮ್ಮನ್ನಾರಯ್ಯಾ!" (ಮೇಲಿನವರು ಒಪ್ಪಲಿಲ್ಲ. ಇನ್ನು ಸ್ವಲ್ಪ ಸಮಯ ಇದ್ದು ಬಾ ಎಂದರು" ಎಂದು ಹೇಳಿದರು.

ಸ್ವಾಮಿಯವರು ಮಹಾಸಮಾಧಿ ಹೊಂದುವ ಒಂದು ವಾರದ ಮುಂಚೆ ಅವರ ಮುಖದಲ್ಲಿ ದಿನಕ್ಕೊಂದು ಕಳೆ ಕಡಿಮೆಯಾಗುತ್ತಾ ಬಂದಿತು. ಗುರವಯ್ಯನಿಗೆ ಆಗಾಗ, ಸ್ವಾಮಿಯವರಲ್ಲಿ ಅದೃಶ್ಯವಾಗಿ ಕಾಣಿಸುತ್ತಿದ್ದ ಎಂಟು ಹೆಡೆಯ ನಾಗೇಂದ್ರ, ಮಹಾಸಮಾಧಿಯ ಹಿಂದಿನ ದಿನ (23-08-1982) ಸ್ವಾಮಿಯವರಿಂದ ಹೊರಗೆ ಬಂದಂತೆ ದರ್ಶನ ಆಯಿತೆಂದು ಗುರವಯ್ಯನವರು ಹೇಳಿದರು.

ಸ್ವಾಮಿಯವರ ಮಹಾಸಮಾಧಿಗೆ ನಾಲ್ಕುದಿನಗಳ ಮುಂಚೆ (20-08-1982) ಒಂದು ದಿವ್ಯವಾದ ರಥ ಬಂದು ಶ್ರೀ ಸ್ವಾಮಿಯವರನ್ನು ಹತ್ತಿಸಿ ಕೊಂಡಿತು. ಗುರವಯ್ಯನವರೂ ಕೂಡಾ ಹತ್ತಲು ಹೋದರೆ, "ನೀನು ಈಗಲ್ಲ ಇಳಿ" ಎಂದು ಬಲವಂತದಿಂದ ಇಳಿಸಿ, ಸ್ವಾಮಿಯವರನ್ನು ಮಾತ್ರ ರಥದಲ್ಲಿ ಆಕಾಶಕ್ಕೆ ಕರೆದುಕೊಂಡು ಹೋದ ಹಾಗೆ ಗುರವಯ್ಯನವರಿಗೆ ಸ್ವಪ್ನ ದರ್ಶನ ಆಯಿತು.

ಮಹಾಸಮಾಧಿಗೆ ಮೂರು ದಿನಗಳ ಮುಂಚೆ, ಪೂರ್ವ ನಿರ್ಮಿತ ಸಮಾಧಿ ಮಂದಿರದಲ್ಲಿ ನಿತ್ಯ ಪೂಜೆ ಸ್ವೀಕರಿಸುತ್ತಿರುವ ಸ್ವಾಮಿಯವರ ಪಟಚಿತ್ರ, ಶ್ರೀ ಸ್ವಾಮಿಯವರ ಹಿಂದೆ ಇದ್ದ ಶಿರಿಡಿ ಸಾಯಿ ಬಾಬಾರವರ ಪಟಚಿತ್ರ ಪಕ್ಕಕ್ಕೆ ಜರುಗಿ ನಿಂತಂತೆ ಗುರವಯ್ಯನವರಿಗೆ ಕಂಡಿತು. ಆಗ ಸ್ವಾಮಿ ತುಂಬಾ ದುರ್ಬಲರಾಗಿದ್ದರು. "ಶ್ರೀ ಸ್ವಾಮಿಯವರು ಕೂಡಾ ಬಾಬಾರವರ ಹಾಗೆ ಮರೆ ಆಗುತ್ತಿದ್ದಾರೆ, ಇನ್ನು ಅವರ ಚಿತ್ರಕ್ಕೇ ಪೂಜೆ ಮಾಡ ಬೇಕಾಗುತ್ತದೆ" ಎಂದು ಗುರವಯ್ಯನವರಿಗೆ ಅನ್ನಿಸಿತು. ಅದೇ ನಿಜ ಆಯಿತು.

ಸ್ವಾಮಿಯವರು, ಮಹಾಸಮಾಧಿಗೆ ಕೆಲವು ದಿನಗಳ ಮುಂಚೆ, "ಪ್ರೊದ್ದು ಗ್ರೊಕ್ಕುತುಂದಯ್ಯಾ!" (ಸೂರ್ಯ ಮುಳುಗುತ್ತಿದ್ದಾನೆ - ಅಂದರೆ ಸಮಯ ಮೀರುತ್ತಿದೆ) ಎಂದು ಪದೇ ಪದೇ ಜೋರಾಗಿ ಹೆಚ್ಚರಿಸುತ್ತಿದ್ದರು. ಒಂದು ಪಕ್ಕ ತಮ್ಮ ಅವತಾರ ಲೀಲೆ ಸಂಪೂರ್ಣವಾಗುತ್ತಿದೆ ಎಂದು, ಇನ್ನೊಂದು ಪಕ್ಕ ಭಕ್ತರ ಸಮಯವೂ ಸಮಾಪ್ತಿಯಾಗುತ್ತಿದ್ದರಿಂದ, ಅವರುಗಳು ಸಮಯ ವ್ಯರ್ಥ ಮಾಡದೇ ತಮ್ಮ ಸಮಯವನ್ನು ಸದುಪಯೋಗ ಪಡಿಸಿ ಕೊಳ್ಳಬೇಕು ಎಂಬುದು ಅವರ ಭಾವನೆ. ಇದೇ ದೃಶ್ಯ ರೋಶಿ ರೆಡ್ಡಿಯವರಿಗೆ "ಸೂರ್ಯ ಮುಳುಗಿದಂತೆ" ಕಂಡಿತು ಎಂದು ಹೇಳಿದರು.

ಸ್ವಾಮಿಯವರ ಮಹಾಸಮಾಧಿಗೆ ಕೆಲವು ದಿನಗಳ ಮೊದಲು, ಬುಜ್ಜಯ್ಯನವರು, ಗುಡಿಸಲಿನಲ್ಲಿದ್ದ ಪಟಗಳಿಗೆಲ್ಲಾ ಪೂಜೆ ಮಾಡಿ, ಸ್ವಾಮಿಯವರಿಗೆ ಆರತಿ ಬೆಳಗಿ, ಆಮೇಲೆ, ಆ ಪಟಗಳಿಗೆ ಆರತಿ ಬೆಳಗುವುದು ಅವರ ನಿತ್ಯ ಕ್ರಿಯೆ.. ಆಗಸ್ಟ್ 24, 1982 ರ ಮಧ್ಯಾಹ್ನ, ಸ್ವಾಮಿಯವರು ಮಲಗಿದ್ದಾಗ ಒಂದು ಕಡೆಗೆ ತಿರುಗಿದ್ದರು. ಬುಜ್ಜಯ್ಯರವರು ಆರತಿಯನ್ನು ಅರ್ಪಿಸುತ್ತಿದ್ದಾಗ ಸ್ವಾಮಿಯವರು ಇದ್ದಕ್ಕಿದ್ದಂತೆ ಬುಜ್ಜಯ್ಯನ ಕಡೆಗೆ ತಿರುಗಿ ಬಲಗೈಯಿಂದ ಅಭಯ ಹಸ್ತ ತೋರಿಸಿ, ಆಶೀರ್ವದಿಸಿ ಮಲಗಿದರು. ಶ್ರೀ ಸ್ವಾಮಿಯವರು ಜೀವಂತವಾಗಿದ್ದಾಗ, ಅವರಿಗೆ ಭಕ್ತರು ನೀಡಿದ ಅದೇ ಕೊನೆಯ ಆರತಿ ಆಯಿತು. ಸ್ವಲ್ಪ ಹೊತ್ತಿನ ನಂತರ, ಸ್ವಾಮಿಯವರು ತಮ್ಮ ಶರೀರವನ್ನು ಬಿಟ್ಟರು. ಅಂದಿನ ದಿನವೇ ಗುರವಯ್ಯನವರು ಓದುತ್ತಿದ್ದ "ಮಾಧವದಾಸರ ಚರಿತ್ರೆ" ಪೂರ್ತಿ ಆಯಿತು. ಆ ಚರಿತ್ರೆಯಲ್ಲಿ, ಒಂದು ವಿಮಾನ ಬಂದು ಮಾಧವದಾಸರನ್ನು ಊರ್ಧ್ವ ಲೋಕಕ್ಕೆ ಕರೆದುಕೊಂಡು ಹೋಯಿತು. ಅಂದಿನ ದಿನವೇ ಸ್ವಾಮಿಯವರು ಮಹಾಸಮಾಧಿಯನ್ನು ಪಡೆದರು. ಭಕ್ತರು, ಸೇವಕರು ದುಃಖ ಸಾಗರದಲ್ಲಿ ಮುಳುಗಿದ್ದರು. ಸ್ವಾಮಿಯವರ ಭೌತಿಕ ದೇಹವನ್ನು ಐದನೇ ದಿನ - 28-08-82 ರಂದು ಸಮಾಧಿ ಮಾಡಲಾಗುವುದು ಎಂದು, ಅಷ್ಟರಲ್ಲಿ, ಭಕ್ತರೆಲ್ಲರೂ ಬಂದು ಸ್ವಾಮಿಯವರ ದರ್ಶನವನ್ನು ಮಾಡಬಹುದು ಎಂದು ಆಂಧ್ರಪತ್ರಿಕೆ, ಆಂಧ್ರಜ್ಯೋತಿ ಮುಂತಾದ ದಿನಪತ್ರಿಕೆಗಳಲ್ಲಿ ಪ್ರಕಟಿಸಿದರು.

ಪ್ರತಿನಿತ್ಯ ತಂಡೋಪತಂಡವಾಗಿ ಜನರು ಬಂದು ಸ್ವಾಮಿಯವರ ಅಂತಿಮ ದರ್ಶನ ಪಡೆದರು. ಭಕ್ತರೆಲ್ಲಾ, "ಹರೇ ರಾಮ, ಹರೇ ರಾಮ ರಾಮ ರಾಮ ಹರೇ ಹರೇ, ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ" ಎಂದು ಕಣ್ಣೀರು ಹಾಕುತ್ತಾ ಭಜನೆ ಮಾಡಿದರು. ಶ್ರೀ ಸ್ವಾಮಿಯವರು ಯೋಗ ನಿದ್ರೆಯಲ್ಲಿದ್ದಾರೆ, ಮತ್ತೆ ಏಳುತ್ತಾರೆ ಎಂದು

ಭಕ್ತರು ಮತ್ತು ಸೇವಕರು ತುಂಬಾ ಆಸೆಯಿಂದ ಎದುರು ನೋಡುತ್ತಿದ್ದರು. ಹೀಗೆ ಮೂರು ದಿನಗಳು ಕಳೆದವು, ಶ್ರೀ ಸ್ವಾಮಿಯವರ ಶರೀರ ತುಂಬಾ ಊದಿತ್ತು. ಮೂರನೇ ದಿನ, ಸ್ವಾಮಿಯವರಿಗೆ ಬಹಳ ಸನ್ನಿಹಿತವಾಗಿ ಸೇವಿಸಿದ ಗುರವಯ್ಯನವರಿಗೆ ಒಂದು ರೀತಿಯ ದಿವ್ಯ ಆವೇಶ ಬಂದು, "ಸ್ವಾಮಿಯವರ ದೇಹವನ್ನು ಈ ದಿನವೇ ಸಮಾಧಿ ಮಾಡಬೇಕು ಎಂದು ಸ್ವಾಮಿಯವರು ಹೇಳುತ್ತಿದ್ದಾರೆ" ಎಂದು ಸ್ವಾಮಿಯವರ ದೇಹವನ್ನು ಎತ್ತಿಕೊಂಡು ಆವೇಶದಿಂದ ಹೊಸದಾಗಿ ನಿರ್ಮಾಣಿಸಿದ ಮಂದಿರದೊಳಕ್ಕೆ ಓಡಿ ಹೋದರು.

ಸ್ವಾಮಿಯವರ ಶರೀರವನ್ನು ಮೂರು ದಿನಗಳು ಇಟ್ಟಿದ್ದರಿಂದ, ಶರೀರವೆಲ್ಲಾ ಊದಿಹೋಗಿತ್ತು. ಪಲ್ಲಂರೆಡ್ಡಿ ಕೃಷ್ಣಾರೆಡ್ಡಿಯವರು ಇದನ್ನು ನೋಡಿ, "ಸ್ವಾಮಿಯವರು ಮಹಾತ್ಮರಲ್ಲವೇ, ಸಾಮಾನ್ಯ ಮನುಷ್ಯರ ಶರೀರದಂತೆ ಏಕೆ ಊದಿತು?" ಎಂದು ಯೋಚಿಸುತ್ತಿದ್ದರು. ಸ್ವಾಮಿಯವರ ಶರೀರಕ್ಕೆ ಸ್ನಾನ ಮಾಡಿಸುತ್ತಿದ್ದಾಗ, ಕೈ ತಾಕಿದ ಜಾಗದಲ್ಲೆಲ್ಲಾ ಮೇಲಿನ ಚರ್ಮ ಸುಲಿಯುತ್ತಿತ್ತು.

ಸ್ವಾಮಿಯವರಅಂಗಿ, ಬನೀನು ತೆಗೆದು ಕೃಷ್ಣಾರೆಡ್ಡಿಯವರು ಸಮಾಧಿಯ ಕುಳಿಯಲ್ಲಿ ಇಳಿದು, ಶರೀರವನ್ನು ಇಳಿಸಿ, ಆಚೆ ಬರುವಹೊತ್ತಿಗೆ, ಹೊಸದಾಗಿ ಸೋರಿದ ರಕ್ತ ಅವರ ಎದೆಯ ಮೇಲೆ ಅಂಟಿದ್ದು ನೋಡಿದವರೆಲ್ಲರೂ ಆಶ್ಚರ್ಯ ಪಟ್ಟರು. ಆ ರಕ್ತ ರೆಡ್ಡಿಯವರದ್ದಲ್ಲ. ಸ್ವಾಮಿಯವರ ಶರೀರವನ್ನು ಗುರವಯ್ಯ ನವರು ಎತ್ತಿ ಕೊಂಡು ಆಶ್ರಮದಿಂದ ಸಮಾಧಿ ಮಂದಿರಕ್ಕೆ ತರುತ್ತಿದ್ದಾಗ, ಸ್ವಾಮಿಯವರ ಭುಜಕ್ಕೆ ಮುಳ್ಳು ಚುಚ್ಚಿ ರಕ್ತ ಸುರಿದಿರಬೇಕೆಂದು ಎಲ್ಲರೂ ಗುರ್ತಿಸಿದರು. ಮೂರು ದಿನಗಳ ಹಿಂದೆ ಸಮಾಧಿ ಹೊಂದಿದ ಸ್ವಾಮಿಯವರ ಶರೀರದಿಂದ ಹೊಸ ರಕ್ತ ಬರುವುದೆಂದರೇ ಆಶ್ಚರ್ಯದ ವಿಷಯ. ಅದು ಕೇವಲ ಕೃಷ್ಣಾರೆಡ್ಡಿಯವರಿಗ ಬಂದ ಸಂದೇಹಕ್ಕೆ ಸ್ವಾಮಿಯವರು ಕೊಟ್ಟ ಸಮಾಧಾನ.

ಸ್ವಾಮಿಯವರು ಸ್ವಹಸ್ತದಿಂದ, ಶಂಕುಸ್ಥಾಪನೆ ಮಾಡಿ, ಅವರ ಆಶೀರ್ವಾದದಿಂದ ಮೊದಲೇ ನಿರ್ಮಿಸಲಾಗಿದ ಸಮಾಧಿ ಮಂದಿರದಲ್ಲಿ 4ಅಡಿ|| ಉದ್ದ 4 ಅಡಿ|| ಅಗಲ 6 ಅಡಿ|| ಆಳದ ಕುಳಿಯನ್ನು ಅಗೆದು, ಆ ಕುಳಿಯ ಪಕ್ಕದ ಗೋಡೆಗಳನ್ನು, ನೆಲಹಾಸು ಅಂಚುಗಳನ್ನು ಸಿಮೆಂಟ್ ಹಾಕಿ ಅಂಟಿಸಿ ಒಂದು ತೊಟ್ಟಿಯ ಹಾಗೆ ಮಾಡಿ ಅದರಲ್ಲಿ ಸ್ವಾಮಿಯವರ ಹಾಸಿಗೆಯನ್ನಿಟ್ಟು, ಸ್ವಾಮಿಯವರನ್ನು ಪೂರ್ವದಿಕ್ಕಿನಲ್ಲಿ ಕೂರಿಸಿ, ರೇಷ್ಮೆ ವಸ್ತ್ರವನ್ನು ಹೊದೆಸಿದರು. ತೊಟ್ಟಿಯೊಳಗಿನ ಖಾಲೀ ಪ್ರದೇಶವನ್ನು ಕರ್ಪೂರ, ಶ್ರೀ ಗಂಧದ ಪುಡಿ, ಉಪ್ಪು, ಹೂವಿನ ಮಾಲೆಗಳು ಸ್ವಾಮಿಯವರ ಕತ್ತಿನ ವರೆಗೂ ತುಂಬಿದರು. ಅದರ ಮೇಲೆ ಸ್ವಲ್ಪ ಮಣ್ಣನ್ನು ಹಾಕಿ ಅದರ ಮೇಲೆ ಪನ್ನೀರು, ಅತ್ತರು ಮುಂತಾದ ಸುಗಂಧ ದ್ರವ್ಯಗಳನ್ನು, ಹಾಕಿದರು. ಸ್ವಾಮಿಯವರ ಮುಖ ದಿವ್ಯ ಕಾಂತಿಯಿಂದ ಹೊಳೆಯುತ್ತಿದ್ದಾಗ, ತುಂಬಾ ದುಃಖದಿಂದ ಭಕ್ತರು ಆ ಸಮಾಧಿಯನ್ನು ಕಲ್ಲುಗಳಿಂದ ಮುಚ್ಚಿದರು. ಅದರ ಮೇಲೆ ಸ್ವಾಮಿಯವರು ಉಪಯೋಗಿಸುತ್ತಿದ್ದ ಹೊದಿಕೆ ಹಾಸಿ, ಸ್ವಾಮಿಯವರ ಮಡಿಕೆಯನ್ನು ಇಟ್ಟು, ಇಟ್ಟಿಗೆಗಳಿಂದ ಭೂಮಿಯ ಮೇಲೆ ಒಂದು ವೇದಿಕೆ ಕಟ್ಟಿಸಿ ಅದನ್ನು ಅಮೃತಶಿಲೆಯಿಂದ ಆ ಸಮಾಧಿಯನ್ನು ಪೂರ್ತಿ ಮಾಡಿದರು.

ಅನ್ನದಾನ, ಭಜನೆ ಕಾರ್ಯಕ್ರಮಗಳು 40 ನೇ ದಿನದ ಮಂಡಲಾರಾಧನೆಯ ವರೆಗೂ ಯಾವುದೇ ಅಡೆ ತಡೆ ಇಲ್ಲದೇ ಸುಸೂತ್ರವಾಗಿ ಜರುಗುತ್ತಿತ್ತು. ಮಂಡಲಾರಾಧನೆಗೆ ಸುಮಾರು 10,000 ಭಕ್ತರು ಬಂದು ಸ್ವಾಮಿಯವರಿಗೆ ತಮ್ಮ ಶ್ರದ್ಧಾಂಜಲಿ ಅರ್ಪಿಸಿದರು. ಅಂದಿನ ದಿನ, ಅನೇಕ ಗ್ರಾಮಗಳಿಂದ ಹರಿದಾಸರು, ಭಗವದ್ಗೀತ ಪ್ರವಚನಾಕಾರರು, ಭಜನೆ ಮಂಡಲಿಯವರು, ಪಂಡರಿ ಭಜನೆ ಮಂಡಲಿಯವರು ತಮ್ಮ ಪಾಡಿಗೆ ತಾವು ಕಾರ್ಯಕ್ರಮಗಳನ್ನು ನಿರ್ವಹಿಸಿದರು. ಅಲ್ಲಿಗೆ ಬಂದಿದ್ದ ಭಕ್ತಾದಿಗಳಿಗೆ ಸ್ವಾಮಿಯವರ ಕೃಪೆಯಿಂದ ರಸವತ್ತಾದ ಔತಣ, ಅನ್ನಸಂತರ್ಪಣೆ ಆಯಿತು. ಅಂದಿನಿಂದ ಮೊದಲು, ಪ್ರತಿ ನಿತ್ಯ ಬೆಳಗ್ಗೆ 4.00 ಗಂ|| ಮಧ್ಯಾಹ್ನ 11.00 ಗಂ|| ಸಂಜೆ 6.30 ಗಂ|| ಪೂಜೆ ಮತ್ತು ನೈವೇದ್ಯ, ರಾತ್ರಿ 9.00 ಗಂ ಭಜನೆ, ಪವಡಿಸುವ ಸೇವೆ, ಆರತಿ ನಿರ್ವಿಘ್ನವಾಗಿ ನಡೆಯುತ್ತಿದೆ. ಶ್ರೀ ಸ್ವಾಮಿಯವರು ಹೊತ್ತಿಸಿದ ಅಗ್ನಿಹೋತ್ರ ಅವರು ಅವರ ದೇಹವನ್ನು ತ್ಯಜಿಸಿದ ನಂತರವೂ ನಿರಂತರವಾಗಿ ಬೆಳಗುತ್ತಿದೆ. ಪ್ರತಿ ನಿತ್ಯ ಎರಡು ಹೊತ್ತೂ ಅನ್ನದಾನ ನಡೆಯುತ್ತಿದೆ.

ಅದ್ಭುತವಾದ ಶ್ರೀ ವೆಂಕಯ್ಯಸ್ವಾಮಿಯವರ ಜೀವನ ಹೀಗೆ ಅಂತ್ಯವಾದರೂ, ಆಮೆಲಿನ ಅಧ್ಯಾಯಗಳಲ್ಲಿ ನಾವು ಗಮನಿಸುವ ಅವರ ದಿವ್ಯಲೀಲೆಗಳು ಇವತ್ತಿಗೂ ನಿರಂತರವಾಗಿ ಸಾಗುತ್ತಿದೆ. ಅಷ್ಟೇ ಅಲ್ಲದೆ, ಸೂರ್ಯ ಚಂದ್ರರು ಇರುವವರೆಗೂ ಅವರ ಲೀಲೆಗಳು ಮುಂದುವರಿಯಲೇಬೇಕು ಎಂದು ಅವರು ಖಚಿತಪಡಿಸಿದ್ದಾರೆ. ಅದು ನಡೆಯಬೇಕೆಂದರೆ ಅವರ ನಿಜತತ್ವ ಹೇಗಿರಬೇಕು ಎನ್ನುವುದು ನಮ್ಮ ಊಹೆಗೆ ಮೀರಿದ್ದು. ಆದ್ದರಿಂದ ಅವರ ಮಾತಿನಲ್ಲೇ ಅವರ ತತ್ವವನ್ನು ಗಮನಿಸೋಣ.

ಒಮ್ಮೆ ಬಾಲ ಯೋಗಿಯವರ ವಿಚಾರ ಬಂದಾಗ ಶ್ರೀ ಸ್ವಾಮಿಯವರು ಹೀಗೆ ಅಂದರು. "ಆಯನ ತನ ಪನಿ ತಾನು ಚೂಚುಕೊನಿ ಪೊಯ್ಯೇವಾಡೇ ಗದಯ್ಯಾ! ಆಯನಕು ಲೋಕುಲ ಸಂಗತಿ ಪಟ್ಟದೇ! ಮನಮೋ! ಅಂದರಿ ಲೆಕ್ಕಲು ಸರಿಚೆಯ್ಯಾಲ ಗದಾ! (ಬಾಲಯೋಗಿಯವರು ತಮ್ಮ ಕೆಲಸ ತಾವು ಮಾಡಿಕೊಂಡು ಹೋಗುತ್ತಾರಲ್ಲವೇ. ಲೋಕದ ವಿಚಾರ ಅವರಿಗೆ ಬೇಕಿಲ್ಲ! ಆದರೇ ನಾವು! ಎಲ್ಲರ ಲೆಕ್ಕ ಗಳನ್ನು ಸರಿಪಡಿಸಬೇಕಲ್ಲವೇ?) ಅದಕ್ಕಾಗಿಯೇ ಸಮಾಧಿಯ ಎರಡು ವರ್ಷಗಳ ಹಿಂದಿನ ವರೆಗೆ ನಿರಂತರ ವಿವಿಧ ಗ್ರಾಮಗಳಿಗೆ ಹೋಗಿ, ಭಕ್ತರ ಲೌಕಿಕ, ಪಾರಲೌಕಿಕ ಅವಶ್ಯಕತೆಗಳು ಪೂರೈಸುತ್ತಿದ್ದರು. ಶ್ರೀ ಸ್ವಾಮಿಯವರು ಆ ಪ್ರಯಾಣಗಳಲ್ಲಿ ಎಷ್ಟು ದೈಹಿಕ ನೋವುಗಳನ್ನು ಅನುಭವಿಸಿದರೋ ಆ ದೇವರೇ ಬಲ್ಲ. ಆ ಕಾರುಣ್ಯ ಮೂರ್ತಿ ಅವರ ಆಶ್ರಮದಲ್ಲಿ ಎಷ್ಟು ಜನ ಅತಿಥಿಗಳು ಬಂದರೂ ಅನ್ನದಾನ ನಡೆಯುತ್ತಲೇ ಇದೆ. ಜನರಿಗೆ ಆವರು ತಮ್ಮ ಅಮೂಲ್ಯವಾದ ತಪೋಬಲದಿಂದ ಎಷ್ಟು ಒಳಿತನ್ನು ಮಾಡಿದರೋ ಅದು ಹೇಳಲು ಸಾಧ್ಯವಿಲ್ಲ. ಅನಾವೃಷ್ಟಿಯಿಂದ ಜನಗಳು, ಪಶುಗಳು ಬಳಲುತ್ತಿದ್ದಾಗ, ಎಷ್ಟು ಬಾರಿ ಮಳೆ ತರೆಸಿ, ಕೆರೆಗಳನ್ನು ತುಂಬಿಸಿದರೋ ಲೆಕ್ಕವಿಲ್ಲ.

ಒಮ್ಮೆ ಸ್ವಾಮಿಯವರು ತಮ್ಮ ಬಗ್ಗೆ ತಾವೇ ಹೀಗೆ ಹೇಳಿದರು, **"ರಾವಣುನಿ**
115 **ಚಂಪಿಂದಿ ದಶರಥ ಪುತ್ರುಡೈನ ರಾಮುಡು ಕಾದು, ನೇನೇ! ಅತಡು ಮೂಡು ದೆಬ್ಬಲಕು**

ಪಡಿ ಪೋಯಾಡು. ಪ್ರಹ್ಲಾದುನಿ ಪಾತ್ರ ಗಟ್ಟಿಂದಿ ನೇನೇ. ಅಂದರಿನೀ ಮಿಂಗಿಂದೀ ನೇನೇ". (ರಾವಣನನ್ನು ಕೊಂದಿದ್ದು ದಶರಥನ ಮಗ ರಾಮನಲ್ಲ ನಾನೇ! ಅವನು ಮೂರು ಹೊಡೆತಗಳಿಗೆ ಬಿದ್ದನು. ಪ್ರಹ್ಲಾದನ ಪಾತ್ರ ಮಾಡಿದ್ದೂ ನಾನೇ. ಎಲ್ಲರನ್ನೂ ನುಂಗಿದವನು ನಾನೇ). ಅವರೆಲ್ಲರ ರೂಪದಲ್ಲಿ ಆಯಾ ಲೋಕ ಕಲ್ಯಾಣ ಕಾರ್ಯಗಳನ್ನು ಯಾವಾಗಲೂ ಮಾಡುತ್ತಿದ್ದ ಪರಮಾತ್ಮನ ತತ್ವವೇ ತಾವು ಎನ್ನುವುದು ಅವರ ಭವನೆ. ಇದೇ ಅರ್ಥದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು "ಯಾರು ರಾಮ, ಯಾರು ಕೃಷ್ಣ ಅವರೇ ರಾಮಕೃಷ್ಣ" ಎಂದು ವಿವೇಕಾನಂದರಿಗೆ ಹೇಳಿದರು. ಶ್ರೀ ಸಾಯಿ ಬಾಬಾರವರು ಕೂಡಾ ಇದೇ ಅರ್ಥದಲ್ಲಿ ಎಲ್ಲಾ ಸಾಧು, ಸತ್ಪುರುಷರು, ದೇವತೆಗಳು, ತಾವೇ ಎಂದು ತಮ್ಮ ಭಕ್ತರಿಗೆ ಅನುಭವ ಪೂರ್ವಕವಾಗಿ ನಿರೂಪಿಸಿದರು. ಶ್ರೀ ರಾಮನಲ್ಲಿ ದಿವ್ಯಶಕ್ತಿ ಇಲ್ಲದಿದ್ದರೆ, ಅವರು ಸಾಮಾನ್ಯ ಮನುಷ್ಯರಾಗಿರುತ್ತಿದ್ದರು. ಆಗ ರಾವಣ ಸಂಹಾರ ಮಾಡಲು ಆಗುತ್ತಿರಲಿಲ್ಲ ಎಂದು ಸ್ವಾಮಿಯವರ ಭಾವನೆ.

ಇನ್ನೊಮ್ಮೆ ಸ್ವಾಮಿಯವರು ಹೀಗೆ ಹೇಳಿದರು. "ಅನ್ನಿ ಜೀವುಲಲೋ ವೆಂಕಯ್ಯ ಉನ್ನಾಡು ಅನಿ ವ್ಯಾಸುಕೋ" (ಎಲ್ಲಾ ಜೀವಿಗಳಲ್ಲೂ ವೆಂಕಯ್ಯ ಇದ್ದಾನೆಂದು ಬರೆದುಕೋ" ಎಂದು ಹೇಳಿ ಆ ಮಾತನ್ನು ಚೀಟೀಯಲ್ಲಿ ಕೂಡ ಬರೆಸಿದರು.

ಮಾಲೆಪಾಟಿ ಚೆಂಚಮ್ಮನವರು, ಸ್ವಾಮಿಯವರು ಮಹಾಸಮಾಧಿ ಆದಾಗ ಅವರ ದರ್ಶನ ಪಡೆಯಲಾಗಲಿಲ್ಲವೆಂದು ಬಹಳ ದುಃಖಿತರಾದರು. ಆ ರಾತ್ರಿ ಸ್ವಾಮಿಯವರು ಸ್ವಪ್ನ ದರ್ಶನ ಕೊಟ್ಟು "ನೇನೆಕ್ಕಡಿಕೀ ಪೋಲೇದು. ಇಕ್ಕಡೇ ಉನ್ನಾನು. ಸಾಧಿಂಚಾಲಂಟೇ ಚಾಲಾ ಟೈಂ ಪಡುತುಂದಿ" (ನಾನು ಎಲ್ಲೂ ಹೋಗಿಲ್ಲ. ಇಲ್ಲೇ ಇದ್ದೇನೆ. ಸಾಧಿಸಲು ಬಹಳ ಸಮಯ ತೆಗೆದುಕೊಳ್ಳುತ್ತದೆ) ಎಂದರು.

ಸ್ವಾಮಿಯವರಮಹಾಸಮಾಧಿಯಾದ ರಾತ್ರಿ, ಶ್ರೀ ರಾಮಯ್ಯನವರು, ನಾಗುಲವೆಲ್ಲಟುರಿನಲ್ಲಿ ತಮ್ಮ ಗುಡಿಸಲಲ್ಲಿ ಸ್ವಾಮಿಯವರ ಪಟಕ್ಕೆ ಪೂಜೆ ಮಾಡುತ್ತಿದ್ದರು. ಆಗ, ಶ್ರೀ ಸ್ವಾಮಿಯವರು ಒಂದು ದೊಡ್ಡ ಬೆಳಕಾಗಿ, ಗಾಳಿಯಲ್ಲಿ ಬಂದು ಇವರ ಗುಡಿಸಲ ಸುತ್ತ ತಿರುಗಿದ ಹಾಗೆ ಕಂಡಿತು. ಮರುದಿನ ಬೆಳಗ್ಗೆ ಸ್ವಾಮಿಯವರು ಸಮಾಧಿ ಹೊಂದಿದರೆಂದು ಸಮಾಚಾರ ರಾಮಯ್ಯನವರಿಗೆ ಸಿಕ್ಕಿತು.

ಸ್ವಾಮಿಯವರು ಸದಾ ಹೇಳುತ್ತಿದ್ದ ಒಂದು ಮಾತು "ವೆಯ್ಯಿ ಗೊಜ್ಜೆಲಲೋ ಮನ ಗೊಜ್ಜೆ ಎಕ್ಕಡುನ್ನಾ ನೇರುಗಾ ಕಾಲು ಪಟ್ಟಿ ಲಾಕ್ಕುರಾವಚ್ಚು ಗದಯ್ಯಾ" (ಸಾವಿರ ಕುರಿಗಳ ಮಧ್ಯ ನಮ್ಮ ಕುರಿಮರಿ ಎಲ್ಲಿದ್ದರೂ ನೇರವಾಗಿ ಅದರ ಕಾಲು ಹಿಡಿದು ನಮ್ಮ ಹತ್ತಿರ ತರಬಹುದು). **ಶ್ರೀ ಸಾಯಿಬಾಬಾರವರಂತೆ ತಮ್ಮ ಭಕ್ತರು ಎಲ್ಲಿದ್ದರೂ ತಮ್ಮ ಹತ್ತಿರ ಕರೆಸಿಕೊಳ್ಳ ಬಹುದು ಎಂದು ಅಭಯ ನೀಡಿದರು ಸ್ವಾಮಿಯವರು.** **116**

ವೇಲೂರು ರಾಮಾನಾಯುಡು ಅವರಿಗೆ ಶ್ರೀ ಸ್ವಾಮಿಯವರು ಹೀಗೆ ಹೇಳಿದರು, "ಅಯ್ಯಾ! ನೇನು ಅಂದರಿಲಾಗ ಪಿಚ್ಚಮ್ಮ ಪೆಂಚಲ ನಾಯುಡಿಕಿ ಕಲಿಗಾನನುಕೊಂಟುನ್ನಾವಾ? (ಅಯ್ಯಾ! ನಾನು ಎಲ್ಲರಂತೆ ಪಿಚ್ಚಮ್ಮ ಪೆಂಚಲನಾಯುಡು ಅವರಿಗೆ ಹುಟ್ಟಿದ ನೆಂದು ತಿಳಿದುಕೊಳ್ಳುತ್ತಿದ್ದೀಯಾ?) ಎಂದು. **117**

ಅವರು ಹುಟ್ಟಿದಾಗಲೆ ಜನನ ಮರಣ ರಹಿತರಾದ, ಆತ್ಮಜ್ಞಾನ ಅವರು ಪಡೆದಿದ್ದರೆಂದು ಈ ವಿಷಯ ಸೂಚಿಸುತ್ತಿದೆ.

ಒಮ್ಮೆ ಚಲಮಾನಾಯುಡು ಅವರು ಶ್ರೀ ಸ್ವಾಮಿಯವರೊಂದಿಗ, "ಸ್ವಾಮೀ! ಶ್ರೀ ರಾಮ, ಶ್ರೀ ಕೃಷ್ಣ ಇವರುಗಳಿಗೆಲ್ಲಾ ಗುರುಗಳಿದ್ದಾರೆ. ನಿಮಗೆ ಗುರು ಇಲ್ಲ ಏಕೆ ಸ್ವಾಮೀ?" ಎಂದು ಕೇಳಿದರು. ಸ್ವಾಮಿಯವರು, " ಚಲಮಾನಾಯುಡಾ! ಪಿಚ್ಚಾ ಏಮಿ ನೀಕು? ಇದಿ ಪದೋಚೂಪು ನೀವೆರುಗವುಲೇ, ನೀವು ಏಮನ್ನಾ ಕೋರುಕೋ! ವಾತಂತಟವೇ ವಸ್ತಾಯಿ. ನಾಕು ಗುವುವೆಂದುಕಯ್ಯಾ, ನಾ ನೆತ್ತಿನ ಮರಲಾ?" (ಚಲಮಾನಾಯುಡಾ! ನಿನಗೇನು ಹುಚ್ಚಾ? ಇದು 10 ನೇ ಒಳನೋಟ, ಇದು ಆಧ್ಯಾತ್ಮಿಕ ಪ್ರಜ್ಞೆಗೆ ಸಂಬಂಧಿಸಿದೆ, ನಿನಗೆ ಇದು ಗೊತ್ತಿಲ್ಲದ ವಿಷಯ. ನಿನಗೇನು ಬೇಕಾದರೂ ಕೇಳುಕೋ, ನಿನ್ನ ಕೋರಿಕೆ ತಾನಾಗಿಯೇ ನೆರವೇರುತ್ತದೆ. ನನಗೆ ಗುರು ಯಾಕೆ ಬೇಕಯ್ಯಾ ನನ್ನ ತಲೆ? ಎಂದರು.

ಅಂದಿನ ರಾತ್ರಿ ಚಲಮಾನಾಯುಡು ಅವರ ಪತ್ನಿಗೆ ಸ್ವಾಮಿಯವರು ದಿವ್ಯ ದರ್ಶನ ಕೊಟ್ಟರು, "ಬಂಗಾರದ ಶರೀರ, ಬಂಗಾರದ ಒಡವೆಗಳನ್ನು ಧರಿಸಿದ ಒಬ್ಬ ಮಹಿಳೆ, ಇನ್ನೊಬ್ಬ ಸಾಮಾನ್ಯ ಶರೀರ ಇದ್ದ ಮಹಿಳೆಗೆ ಸ್ವಾಮಿಯವರನ್ನು ತೋರಿಸುತ್ತಾ "ವೆಂಕಯ್ಯ ಸ್ವಾಮಿ ಇವರೇ" ಎಂದು ಹೇಳಿದರು. ಆ ದೃಶ್ಯವನ್ನು ನೋಡಿ ಚಲಮಾನಾಯುಡು ಅವರ ಪತ್ನಿ ನಿದ್ರೆಯಲ್ಲೇ, "ಈಕೆ ಬಂದಿದ್ದಾರೆ, ನಮಸ್ಕಾರ ಮಾಡಿ" ಎಂದು ಎರಡು ಬಾರಿ ಜೋರಾಗಿ ಕೂಗಿ ಹೇಳಿದರು. ಆಕೆಯನ್ನು ಎಬ್ಬಿಸಿ ವಿಚಾರ ತಿಳಿದಾಗ, ಚಲಮಾನಾಯುಡುಯವರಿಗೆ ಪಶ್ಚಾತ್ತಾಪ ಆಯಿತು. ಸ್ವಾಮಿಯವರಿಗೆ ಭಜನೆ ಮಾಡಿ ಎಂದು ಎಲ್ಲರನ್ನೂ ಉತ್ಸಾಹಪಡಿಸಿದರು. ಮೇಲೆ, ಸ್ವಾಮಿಯವರು, **"ನನಗೆ ಗುರು ಯಾಕೆ ಬೇಕಯ್ಯಾ ನನ್ನ ತಲೆ?" ಹೇಳಿದ ಮಾತನ್ನು ನಾವು ಗಮನಿಸಿದೆವು. ಇದರ ಅರ್ಥ**
118 **ಏನೆಂದರೆ, ತಮಗೆ ಗುರು ಇಲ್ಲ ಎಂದಲ್ಲ. ಅವರು ಇರುವ ಅದ್ವೈತಸ್ಥಿತಿಯಲ್ಲಿ ಮತ್ತೆ ತಮಗೊಬ್ಬ ಗುರುವಿನ ಅವಶ್ಯಕತೆ ಇಲ್ಲವೆಂದು ಅರ್ಥ ಮಾತ್ರವೇ.**

ಒಮ್ಮೆ ಪೆಂಚಲಕೋನೆಯಲ್ಲಿ "ಯಾರೋ ಋಷಿಗಳು ಸ್ವಾಮಿಯವರ ನಾಲಿಗೆಯ ಮೇಲೆ ಏನೋ ಬರೆದರಂತೆ" ಎಂದು ಒಬ್ಬ ಭಕ್ತ ಕೇಳಿದಾಗ, ಸ್ವಾಮಿಯವರು "ಮೈಸೂರಿನ ಮಹಾರಾಜರು ದಾರಿಯಲ್ಲಿ ಹೋಗುತ್ತಿರುವಾಗ, ನಾವು ನೋಡಿದರೆ ನಾವು ಏನು ಪಡೆಯುತ್ತೇವೆ? ನಾವು ಮಾಡಿಕೊಂಡಿದ್ದೇ ನಮಗುಳಿಯುವುದು" **ಎಂದು ಹೇಳಿದ್ದರು. ಅಂದರೆ, ಒಬ್ಬ ಮಹನೀಯರು ಅವರಿಗೆ ಭೇಟಿ ಆದರೆಂದು ಮೌನವಾಗಿ**
119 **ಅಂಗೀಕರಿಸಿದಂತೆಯೇ ಆಯಿತು. ಪೂರ್ವ ಪುಣ್ಯ, ಉತ್ತಮವಾದ ಪೂರ್ವಜನ್ಮದ ಸಂಸ್ಕಾರಗಳು ಇದ್ದಾಗಲೇ ಮಹಾರಾಜರಂತಹರ ಕುಟುಂಬದಲ್ಲಿ ಒಬ್ಬರು ಹೇಗೆ ಹುಟ್ಟುತ್ತಾರೋ, ಹಾಗೆಯೇ, ಈ ಸದ್ಗುರುವಿನ ಅನುಗ್ರಹವನ್ನು ಪಡೆಯ ಬಹುದು. ಪೂರ್ವಪುಣ್ಯ ಮತ್ತು ಉತ್ತಮವಾದ ಪೂರ್ವಜನ್ಮದ ಸಂಸ್ಕಾರಗಳು ಇಲ್ಲದಿದ್ದರೆ ನಾವು ಸದ್ಗುರು ಅನುಗ್ರಹವನ್ನು ಪಡೆಯಲಾರೆವು ಎಂದು ಅವರು ಹೆಚ್ಚರಿಸಿದರು.**

"ಭಗವದ್ಗೀತೆಯು 64 ನೇ ಒಳನೋಟ (insights*) ಅಥವಾ ಅದಕ್ಕಿಂತ

ಕಡಿಮೆ ಇರುವ ಜನರಿಗೆ. ಉನ್ನತ ಸ್ಥಾನದಲ್ಲಿರುವವರಿಗೆ ಇದು ಸಾಕಾಗುವುದಿಲ್ಲ" ಎಂದು ಸ್ವಾಮಿಯವರು ಹೇಳಿದರು.

*ಒಳನೋಟಗಳು ಆಧ್ಯಾತ್ಮಿಕ ಪ್ರಜ್ಞೆಯಲ್ಲಿನ ಅರಿವಿನ ಮಟ್ಟವನ್ನು ಸೂಚಿಸುವುದು.

ಒಮ್ಮೆ ಸ್ವಾಮಿಯವರು ಹೀಗೆ ತಿಳಿಸಿದರು, "ಒಂದು ಕಾಲದಲ್ಲಿ ಪೆಂಚಲ ಕೋನ ಕಾಡಿನಲ್ಲಿ 3 ದಿನಗಳು ಹಗಲು-ರಾತ್ರಿ ಕಳೆಯುತ್ತಿದ್ದ ನನಗೆ, ಪ್ರಪಂಚದ ಬಗ್ಗೆ ಆಗಲಿ, ಅನ್ನ ಮತ್ತು ನೀರಿನ ಬಗ್ಗೆ ಅರಿವೇ ಇರಲಿಲ್ಲ. ಪ್ರಜ್ಞೆ ಬಂದಾಗ, ನಾನು ಗೋನೆಪಲ್ಲಿಗೆ ಬಂದು, ಯಾರನ್ನಾದರೂ ನನಗೆ ಊಟ ಕೊಡಿ ಎಂದು ಕೇಳುತ್ತಿದ್ದೆ."

19,20ವರ್ಷ ವಯಸ್ಸಿನಲ್ಲಿ, ಹಾವು ನನ್ನ ಕಾಲನ್ನು ಕಚ್ಚಿ ಹೆಡೆ ಬಿಟ್ಟು ನಿಂತುಕೊಂಡಿತು. ಮುಳ್ಳಿದ್ದ ಕೋಲಿನಿಂದ ಅದನ್ನು ಹೊಡೆಯಲು ಹೋದೆ, ಆದರೆ ಅದು ಕಚ್ಚಿದ್ದರಿಂದ, ಇನ್ನು ಹೊಡೆದು ಪ್ರಯೋಜನವೇನು ಎಂದು ಹಾಗೇಬಿಟ್ಟು ಮನೆಗೆ ಹೋದೆ. ಆದರೆ ಅದರ ವಿಷ ಹರಡಲಿಲ್ಲ. ನಾನು ಯಥಾ ವಿಧಿಯಾಗಿ ಊಟ ಮಾಡಿ ಮಲಗಿದೆ' ಎಂದು ಸ್ವಾಮಿಯವರು ತಮ್ಮ ಸೇವಕರಿಗೆ ಹೇಳಿದರು. ಕೆಲವೊಮ್ಮೆ ಸ್ವಾಮಿಯವರು ಆಕಾಶದ ಕಡೆ ತೋರಿಸುತ್ತ, "ಅವರೆಲ್ಲರೂ ಋಷಿಗಳು. ಅವರನ್ನು ನೋಡಿ, ಎಷ್ಟು ಮಂದಿ ತಿರುಗುತ್ತಿದ್ದಾರೆ!" ಎಂದು ಹೇಳುತ್ತಿದ್ದರು, ಆದರೆ ಯಾರೂ ಕಾಣುತ್ತಿರಲಿಲ್ಲ

ಬಂದ ಭಕ್ತರಿಗೆ ಸ್ವಾಮಿಯವರು ತಮ್ಮ ಸಂದೇಶವನ್ನು ಅವರ ಕೈಯಲ್ಲಿ ಚೀಟಿಯಲ್ಲಿ ಬರೆಸಿ ಆಶೀರ್ವದಿಸಿ ಪ್ರಸಾದಿಸುತ್ತಿದ್ದರು. ಉದಾಹರಣೆಗೆ ಅವರು ಬರೆಸಿದ ಚೀಟಿ ಹೀಗೆ ಇರುತ್ತಿದ್ದವು.

ಕೋಟಿಗಳು, ಹೆಡೆಗಳು, ಮಣುಗುಲು (ಇದು ಪ್ರಾಚೀನ ತೆಲುಗು ಅಳತೆಯ ಪ್ರಮಾಣ), ರಾಶುಲು ಎಂದು ಬರೆಸುತ್ತಿದ್ದಾಗ, ಭಕ್ತರು, "ನಿಮ್ಮ ಭಾಷೆ ಅರ್ಥ ಆಗುತ್ತಿಲ್ಲ ಸ್ವಾಮೀ" ಎಂದು ಹೇಳಿದಾಗ, ಸ್ವಾಮಿಯವರು, "16 ಭಾಷೆ ಗಳಿಗೆ, ಮೇಲಿನ ಭಾಷೆ ದೇವನಾಗರ ಭಾಷೆ. ಇದು ಕಲಿಯುವುದು ದೇವರಗಳಿಗೇ ಅಭ್ಯಾಸ ಆಗಿಲ್ಲ, ನಿಮಗೇನು ಅರ್ಥ ಆಗತ್ತೆ. ಇದು ಮೇಲಿನ ಲೋಕದ ಲೆಕ್ಕಚಾರ" ಎಂದು ಹೇಳಿದರು. ಕೆಲವರಿಗೆ, "ಪದವ ಚೂಪು ಮನಿಷಿ, ಪದವಚೂಪುಲೋ ವ್ಯಾಸಿನದಿ" (10 ನೇ ಒಳನೋಟದ ವ್ಯಕ್ತಿ, ಹತ್ತನೇ ಒಳನೋಟದಲ್ಲಿ ಬರೆಯಲಾಗಿದೆ". ಅರ್ಥ ಏನು ಸ್ವಾಮೀ ಎಂದು ಕೇಳಿದಾಗ, "ಅದಿ ದೇವ ಚೂಪು, ಸಮುದ್ರಾಲ ಮೀದ ಆ ಚೂಪುಕು ಅಡ್ಡೇಲೇದು" (ಅದು ದೇವ ದೃಷ್ಟಿ, ಸಮುದ್ರವು ಸಹ ಆ ದೃಷ್ಟಿಗೆ ಅಡ್ಡಿಯಾಗುವುದಿಲ್ಲ**) ಮತ್ತೊಮ್ಮೆ "ಕಲಿಯುಗ ದೇವುಲ್ಲ ಚೂಪು ಆರುಲಕ್ಷಲ ಚೂಪು, ಮೇಮು ಕೂಡಾ ಆರು ಲಕ್ಷಲ ಚೂಪು ವರಕು ಪನಿಚೇಯಗಲಮು" (ಕಲಿಯುಗ ದೇವರ ದೃಷ್ಟಿ ಆರು ಲಕ್ಷದ ದೃಷ್ಟಿ, ನಾವುಕೂಡ ಆರು ಲಕ್ಷದ ದೃಷ್ಟಿಯ ವರೆಗೂ ಕೆಲಸ ಮಾಡಬಲ್ಲೆವು" ಎಂದು ಹೇಳಿದರು. ಮುಮ್ಮಡಿವರಂ ಬಾಲಯೋಗಿಯ ಭಕ್ತ ಒಬ್ಬ ಬಂದಾಗ, "ಬಾಲಯೋಗಿ 4 ಲಕ್ಷಲ ಚೂಪುಲೋ ವುನ್ನಾಡು" (ಬಾಲಯೋಗಿ ನಾಲಕ್ಕನೇ ದೃಷ್ಟಿ ಹೊಂದಿದ್ದಾನೆ) ಎಂದು ಹೇಳಿದರು.

** ಸ್ವಾಮಿಯವರು ಇದನ್ನು ಆಧ್ಯಾತ್ಮಿಕ ಪ್ರಜ್ಞೆಯಲ್ಲಿನ ಅರಿವಿನ ಮಟ್ಟ ಎಂದು ಹೇಳಿರಬಹುದು ಎಂದು ನಮ್ಮ ಊಹೆಯಾಗಿದೆ.

ಹೀಗೆಯೇ ಒಮ್ಮೆ ಸ್ವಾಮಿಯವರು ತಲುಪೂರು ಚೆರ್ಲೋಪಲ್ಲಿಯಲ್ಲಿ ಇದ್ದಾಗ, ನೆಲ್ಲೂರಿನಿಂದ ಬಂದ ರೆಡ್ಡಿಯವರಿಗೆ ಈ ರೀತಿಯ ಪರಿಭಾಷೆಯಲ್ಲಿ ತುಂಬಿದ ಪತ್ರವನ್ನು ಬರೆಸಿ ಕೊಟ್ಟರು. ಆಗ, ಅವರು, ಆ ಸಂದೇಶದ ಅಂತರಾರ್ಥ ಏನು ಎಂದು ನಮಗೆ ಅರ್ಥ ಆಗುವ ಮಾತಿನಲ್ಲಿ ಹೇಳಿ ಎಂದು ಬೇಡಿಕೊಂಡರು. ಆಗ, ಸ್ವಾಮಿಯವರು, ಅದು ದೇವ ಭಾಷೆ ಅದನ್ನು ಬಿಡಿಸಿ ಹೇಳಬಾರದೆಂದು ಎಷ್ಟು ಹೇಳಿದರೂ ಕೇಳದೆ, ತನ್ನ ಹಠವನ್ನು ಬಿಡದೇ, "ಸ್ವಾಮೀ ನೀವು ನಿಮ್ಮ ಮಾತನ್ನು ಬಿಡಿಸಿ ಹೇಳಿದರೆ, ನೀವು ಕೇಳಿದಷ್ಟು ದಕ್ಷಿಣೆ ಸಮರ್ಪಿಸುತ್ತೀನಿ" ಎಂದನು. ಆಗ ಸ್ವಾಮಿಯವರು, "ಐತೆ, ನಾಲುಗು ಲಕ್ಷಲು ಕಟ್ಟು ಚೆಪುತಾನು" (ಹಾಗಾದರೆ, ನಾಲ್ಕು ಲಕ್ಷ ಕಟ್ಟು ಹೇಳುತ್ತೇನೆ" ಎಂದರು. ಆಗ, ಆ ಭಕ್ತ, ತಿರುಗಿ ನೋಡದೇ ಹೊರಟು ಹೋದರು. ಈ ರೀತಿಯಾಗಿ ಅನೇಕ ಭಕ್ತರು ಸ್ವಾಮಿಯನ್ನು ವಿವರಿಸಲು ಕೇಳಿದರು. ಸ್ವಾಮಿಯವರು ಮತ್ತೆ, "ಇದು ದೇವ ಭಾಷೆಯಪ್ಪಾ! ಇದರ ಅರ್ಥ ಹೇಳಬೇಕೆಂದರೆ, ಮತ್ತೆ ಇನ್ನೊಬ್ಬರು ಇಳಿದು ಬರಬೇಕು" ಎಂದು ಹೇಳಿದರು.

ಆಗಿನ ಕಾಲದ ಜಮೀನುದಾರರಲ್ಲಿ ಒಬ್ಬರಾದ ವೆಂಕಟ್ರಾಮರಾಜುರವರು, ಒಂದು ಯಜ್ಞ ಮಾಡಬೇಕೆಂದು ಸಂಕಲ್ಪಿಸಿದರು. ಮಾಧವದಾಸುರವರಂತೆ ನಾಲಿಗೆ ಇಲ್ಲದ ಗಂಟೆಗಳನ್ನು ಬಾರಿಸಿ ಶಬ್ದ ಬರಿಸುವ ಸಾಮರ್ಥ್ಯವಿರುವ ಮಹಾತ್ಮರಿಗಾಗಿ ಹುಡುಕುತ್ತಿದ್ದರು. ಸ್ವಾಮಿಯವರ ವಿಚಾರತಿಳಿದು, ಅವರನ್ನು ಕರೆದುಕೊಂಡು ಬರಲು, ಮನುಷ್ಯನನ್ನು ಕಳುಹಿಸಿದರು. ವೆಂಕಟ್ರಾಮರಾಜುರವರ ಜನ್ಮವೃತ್ತಾಂತ, ಹುಟ್ಟಿದ ತಾರೀಖು ಮುಂತಾದ ವಿವರಗಳನ್ನು ಒಂದು ಚೀಟಿಯಲ್ಲಿ ಬರೆಯಿಸಿ, ಬಂದಿದ್ದ ಮನುಷ್ಯನ ಜೊತೆ ಕಳುಹಿಸಿದರು. ಅದನ್ನು ನೋಡಿ ವೆಂಕಟ್ರಾಮರಾಜುರವರಿಗೆ ಸ್ವಾಮಿಯವರ ಮೇಲೆ ಭಕ್ತಿ ಬಂದಿತು. ಅವರು ಅವರ ಪತ್ನಿಯೊಡನೆ ಸ್ವಾಮಿಯವರನ್ನು ಆಹ್ವಾನಿಸಲು ಸ್ವಾಮಿಯವರ ಸನ್ನಿಧಿಗೆ ಬಂದರು. ಆ ಸಮಯದಲ್ಲಿ ಸ್ವಾಮಿಯವರು ಕೆಸರಿನಲ್ಲಿ ಇಳಿದು, ತಲೆಗೆಲ್ಲಾ ಕೆಸರು ಬಳಿದುಕೊಂಡು ಹುಚ್ಚರಹಾಗೆ ಇದ್ದರಂತೆ. ರಾಜು ದಂಪತಿಗಳಿಬ್ಬರೂ ಆ ಕೆಸರಿನಲ್ಲಿಳಿದು ಸ್ವಾಮಿಯವರಿಗೆ ನಮಸ್ಕಾರ ಮಾಡಿ, ಯಜ್ಞಕ್ಕೆ ಬನ್ನಿ ಎಂದು ಪ್ರಾರ್ಥಿಸಿದರು. ಸ್ವಾಮಿಯವರು ಅವರ ಆಹ್ವಾನೆಯನ್ನು ಮನ್ನಿಸಿ, ಆ ಯಜ್ಞಕ್ಕೆ ಹೋಗಿ ನಾಲಿಗೆ ಇಲ್ಲದ ಗಂಟೆಯನ್ನು ಬಾರಿಸಿದರು.

ಅವಧೂತ ಲೀಲೆ

ಅಧ್ಯಾಯ - 26

ಸಾಧನೆ

ಸಾಧನೆ ಏನು ಎಂದು ಮಾತಾಜಿ ತುಳಸಮ್ಮ ನಂತಹ, ಗುರುಕೃಪೆ ಗೆಪಾತ್ರರಾದವರ ಜೀವನವನ್ನು ಸೂಕ್ಷ್ಮವಾಗಿ ಗಮನಿಸಿದರೆ, ನಮಗೆ ತಿಳಿಯುತ್ತದೆ. **ಪ್ರಥಮ ಸಾಧನೆಯಾದ ನಿಷ್ಕಾಮ ಕರ್ಮ ಸಫಲವಾದರೆ ಮಾತ್ರ, ಮುಮುಕ್ಷುಗಳಿಂದ ಮಾಡುವ ಜಪ, ಧ್ಯಾನ, ಭಜನೆ, ಪೂಜೆ ಮುಂತಾದವುಗಳು ಸಫಲವಾಗುತ್ತದೆ ಎಂದು ಶಾಸ್ತ್ರದಲ್ಲಿ ಹೇಳಿದೆ.** ಇದು ತುಳಸಮ್ಮನ ವಿಷಯದಲ್ಲಿ ಸಾರ್ಥಕ ಆಯಿತು. ಈ ಮಹಾತಾಯಿ, ಸ್ವಾಮಿಯವರ ಸೇವೆಗೆ ಅಂಕಿತರಾದಾಗಿನಿಂದ ಮೇಲೆ ಹೇಳಿದ ಜಪ ಮುಂತಾದವುಗಳು ಯಾವತ್ತೂ ಮಾಡಲಿಲ್ಲ. ಆದರೆ, ಸ್ವಾಮಿಯವರು, "ಅಮ್ಮ ಇನ್ನು ಬರುವುದಿಲ್ಲ" ಎಂದು ತುಲಸಮ್ಮನವರಿಗೆ ಆಶೀರ್ವಾದ ಪತ್ರ ಬರೆಸಿ ಪ್ರಸಾದಿಸಿದರು. ಅಷ್ಟೇ ಅಲ್ಲ, ಮಾತಾಜಿ ತುಲಸಮ್ಮ ಅವರು ಹೋದ 3 ತಿಂಗಳ ನಂತರ, ಸ್ವಾಮಿಯವರು ತಮಗೆ ಕೊಟ್ಟ ಪತ್ರ ನಿಜ ಎಂದು ಸಾಬೀತುಪಡಿಸಲು, ಅವರು, ತನ್ನ ಸೊಸೆಯ ಕನಸಿನಲ್ಲಿ ಕಾಣಿಸಿಕೊಂಡು, "ನಾನು ಮತ್ತೆ ಜನ್ಮಕ್ಕೆ ಬರುವುದಿಲ್ಲ, ಶ್ರೀ ಸ್ವಾಮಿಯವರು ಮತ್ತೆ ಜನ್ಮ ಎತ್ತುತ್ತಾರೆ" ಎಂದು ಹೇಳಿದರು. ಅವರ ಮಗ "ಸ್ವಾಮಿಯವರು ಮತ್ತೆ ಬರುತ್ತಾರಾ?" ಎಂದು ಕೇಳಿದಾಗ, "80 ವರ್ಷಗಳಾದ ಮೇಲೆ ಮತ್ತೆ ಬಂದು ಹೆಚ್ಚು ಕಡಿಮೆಗಳನ್ನು ನೋಡಿಕೊಂಡು ಹೋಗುತ್ತಾರೆಂದು ಎಲ್ಲರೂ ಮಾತನಾಡುತ್ತಿದ್ದಾರೆಂದು ತನಗೆ ಏನೂ ತಿಳಿಯದಂತೆ ಹೆಳಿದರು.

120

ಮಾತಾಜೀ ತುಲಸಮ್ಮನವರು ಈ ರೀತಿ ಜನ್ಮರಾಹಿತ್ಯವನ್ನು ತಲುಪಲು ಏನು ಸಾಧನೆ ಮಾಡಿದರು? ಅವರು ಮಾಡಿದ್ದು ಒಂದೇ ಒಂದು ಸಾಧನೆ. ಏನೆಂದರೆ, ಸದ್ಗುರು ಸ್ವಾಮಿಯವರ ಸೇವೆಯನ್ನು ತ್ರಿಕರಣ ಶುದ್ಧಿಯಾಗಿ, ಅಚಂಚಲ ವಿಶ್ವಾಸದಿಂದ, ದೀಕ್ಷೆಯೊಂದಿಗೆ ಸೇವಿಸಿದರು.

ಶರೀರಂ ಇಂದ್ರಿಯಂ ಪ್ರಾಣಂ ಅರ್ಥ ಸ್ವಜನ ಬಾಂಧವಾನ್,
ಆತ್ಮದಾರಾಧಿಕಂ ಸರ್ವಂ ಸದ್ಗುರುಭ್ಯೋ ನಿವೇದಯೇತ್.

ಈ ಗುರುಗೀತ ವಾಕ್ಯವನ್ನು ಇವರು ಸಂಪೂರ್ಣವಾಗಿ ಆಚರಿಸಿದರು. ತುಲಸಮ್ಮನವರು ಶ್ರೀ ಸ್ವಾಮಿಗೆ, ಅವರ ಅನುಯಾಯಿಗಳು ಮತ್ತು ಅವರ ದರ್ಶನಕ್ಕೆ ಬರುವ ಭಕ್ತರಿಗೆ ನಿರಂತರ ಅಡಿಗೆಮಾಡಿ ಬಡಿಸುವುದೇ ಅವರ ಸೇವೆ ಆಗಿತ್ತು. ಅವರಿಗೆ ಒಬ್ಬನೇ ಮಗ, ಅವನು ಮರಣಾವಸ್ಥೆಯಲ್ಲಿದ್ದಾನೆಂದು ತಿಳಿದರೂ, ಅವನನ್ನು

ನೋಡುವುದಕ್ಕಾಗಿ ಸ್ವಾಮಿಯವರ ಅಪ್ಪಣೆ ಪಡೆಯಲು ನಿರೀಕ್ಷಿಸಿದ ಆ ತ್ಯಾಗಶೀಲೆ. ಆಗ ಸ್ವಾಮಿಯವರು, "ನೀ ಬಿಡ್ಡನು ಚೂಚೇಂದುಕು ಪೋನಕ್ಕರ್ಲೇದು. ಆಯನ ಬಾಗುಂಟಾಡುಲೇ! (ನಿನ್ನ ಮಗನನ್ನು ನೋಡಲು ಹೋಗಬೇಕಾಗಿಲ್ಲ, ಅವನು ಸಂಪೂರ್ಣವಾಗಿ ಆರೋಗ್ಯವಂತನಾಗುತ್ತಾನೆ) ಎಂದು ಹೇಳಿದಾಗ, ಅವರು ಬಹಳ ಸಂತೋಷ ಪಟ್ಟು, ಸ್ವಾಮಿಯವರ ಸನ್ನಿಧಿಯನ್ನು ಬಿಡದಿದ್ದ ಭಾಗ್ಯಶಾಲಿ. ಅವರು ತನ್ನ ಪ್ರೀತಿಯನ್ನು ಜಯಿಸಲು ಯಾವುದೇ ಧರ್ಮ ಗ್ರಂಥಗಳನ್ನು ಓದಲಿಲ್ಲ ಅಥವಾ ಮನನ ಮಾಡಲಿಲ್ಲ. ಸ್ವಾಮಿಯವರಿಗೆ, ಪ್ರೀತಿಯಿಂದ ಸೇವೆ ಮಾಡುವುದಕ್ಕಾಗಿ ತಮ್ಮ ಆಸೆಗಳನ್ನು ತ್ಯಾಗ ಮಾಡಿದರು. ಸ್ವಾಮಿಯವರು ಒಂದು ಕ್ಷಣ ಕಾಣದಿದ್ದಾಗ ಪ್ರಾಣ ಕಳೆದುಕೊಂಡ ಹಾಗೆ ಭಾವಿಸುತ್ತಿದ್ದರು. ಅದಕ್ಕಾಗಿಯೇ ಸ್ವಾಮಿಯವರು ತಮ್ಮ ಕೃಪೆಯಿಂದ ತುಲಸಮ್ಮನಿಗೆ ಮಮಕಾರದ ಬಾಂಧವ್ಯ ಕಳಚಿ ಹೋಯಿತು.

ಜನ್ಮಜನ್ಮಗಳಿಂದ ಆಕೆ ಆರ್ಜಿಸಿದ ತ್ಯಾಗಮಯ ಸಂಸ್ಕಾರವೇ, ಆಕೆಯನ್ನು ಶ್ರೀ ಸ್ವಾಮಿಯವರ ಸನ್ನಿಧಿಗೆ ಸೇರಿಸಿತು. ಆಕೆ ಲಕ್ಷಾಧಿಕಾರಿಯಾಗಿ ಕೂಡ, ಎಲ್ಲರಂತೆ ನೂರಾರು ಸೀರೆಗಳನ್ನು ಪೆಟ್ಟಿಗೆಗಳಲ್ಲಿ ತುಂಬಿಡದೇ, ತನ್ನ ಪತಿಗೆ ಗೊತ್ತಿಲ್ಲದೇ ಎಲ್ಲಾ ಸೀರೆಗಳನ್ನು ಬಡವರಿಗೆ ದಾನ ಮಾಡಿ, ಎರಡೇ ಸೀರೆಯೊಂದಿಗೆ ತನ್ನ ಸಂಸಾರವನ್ನು ನಡೆಸಿದ ದಾನಶೀಲೆ ಅವರು.

ಶ್ರೀ ಸ್ವಾಮಿಯವರ ಸೇವೆಗೆ ಅಂಕಿತರಾದ ಮೇಲೆ, ಒಮ್ಮೆ ಒಬ್ಬ ಅನಾಥ ವ್ಯಕ್ತಿ ವಸ್ತ್ರ ಇಲ್ಲದೇ ಹೀನಾಯಸ್ಥಿತಿಯಲ್ಲಿದ್ದಾಗ, ತನ್ನ ಸೀರೆಯಿಂದ ಅರ್ಧ ಸೀರೆಯನ್ನು ಹರಿದು ದಾನ ಮಾಡಿ ಮಿಕ್ಕ ಅರ್ಧಭಾಗವನ್ನು ತಾನು ಉಪಯೋಗಿಸಿಕೊಂಡ ವೈರಾಗ್ಯ ಮೂರ್ತಿ ಅವರು.

ಮನೆಯಿಂದ ಒಂದು ಮೂಟೆ ಮೆಣಸಿನಕಾಯಿ ತರಿಸಿ, ಎರಡೇ ದಿನಗಳಲ್ಲಿ ಖಾಲಿ ಮಾಡುತ್ತಿದ್ದ ಮಹಾತಾಯಿ ಆಕೆ. ಸ್ವಲ್ಪ ಮೆಣಸಿನಕಾಯಿ ಅಗಸರಿಗೆ, ಕ್ಷೌರಿಕರಿಗೆ, ಕೆಲಸದವರಿಗೆ, ಬಡವರಿಗೆ ಕೊಟ್ಟು ಮಿಕ್ಕದ್ದು ಆಶ್ರಮದಲ್ಲಿ ಅಡಿಗೆ ಮಾಡಿ ಖರ್ಚು ಮಾಡುತ್ತಿದ್ದರಿಂದ, ಮೂರನೇ ದಿನಕ್ಕೆಲ್ಲ ಮತ್ತೆ ಮೆಣಸಿನಕಾಯಿಗೆ ಬರಗಾಲ ಬರುತ್ತಿತ್ತು. "ಆದೇನಮ್ಮಾ! ಎಲ್ಲಾ ಹಾಗೆ ಖರ್ಚು ಮಾಡಿಬಿಟ್ಟರೇ ಹೇಗಮ್ಮಾ?" ಎಂದು ಕೇಳಿದರೆ, "ನಮ್ಮನ್ನು ನೋಡಿಕೊಳ್ಳುವವರಿಗೆ ಒಂದು ಹಿಡಿ ಮೆಣಸಿನಕಾಯಿ ಕೂಡ ಕೊಡದಿದ್ದರೇ ಹೇಗಪ್ಪಾ?" ಎಂದು ಕೇಳುತ್ತಿದ್ದರು.

ಒಮ್ಮೆ ಬೇಸಿಗೆ ಕಾಲದಲ್ಲಿ ತರಕಾರಿಗಳು ಸಿಗದರಿಂದ, ಯಾರೊ ಒಬ್ಬ ಭಕ್ತ ತಮ್ಮ **121**
ಮನೆಯಲ್ಲಿ ಬೆಳದಿದ್ದ ನಾಲಕ್ಕು ಸೋರೇಕಾಯಿಗಳನ್ನು ತಂದು ಕೊಟ್ಟರು. ತುಲಸಮ್ಮನವರು ಆ ನಾಲಕ್ಕೂ ಒಂದೇ ದಿನ ಅಡಿಗೆ ಮಾಡಿ ಬಿಟ್ಟರು. "ಇದೇನಮ್ಮಾ! ಒಂದನ್ನಾದರೂ ನಾಳೆಗೆ ಇಡಬಾರದಿತ್ತಾ?" ಎಂದು ಕೇಳಿದಾಗ, "ಇದ್ದಾಗ ತಿನ್ನಲಿ ಬಿಡಯ್ಯಾ! ಪಾಪ! ಆಸೆ ತೀರುವಷ್ಟು ತಿನ್ನಲಿ. ಈ ಸೋರೇಕಾಯಿಗಳು ಇಲ್ಲೇ ಇದ್ದರೆ, ಮತ್ತೆ ಯಾರೂ ತರುವುದಿಲ್ಲ. ಖಾಲೀ ಆದಾಗಲೇ, ಶ್ರೀ ಸ್ವಾಮಿಯವರು, ಮತ್ತೆ ಯಾರಿಂದಲೋ ತರಿಸುತ್ತಾರೆ" ಎಂದರು. ಆಕೆ ಹೇಳಿದ್ದು ಅಕ್ಷರಶಃ ನಿಜವಾಗುತ್ತಿತ್ತು. **ತಮ್ಮ ಸಹಜೀವಿಗಳು ತೃಪ್ತರಾಗಿರುವುದೇ ಅವರ ಮುಖ್ಯ ಗುರಿ. 'ಪ್ರತಿಯೊಂದು ಜೀವಿಯಲ್ಲೂ ನಾನಿದ್ದೇನೆ'**

ಎಂದು ಸ್ವಾಮಿಯವರು ಹೇಳಿದ್ದರಲ್ಲವೇ!

ಮಾತಾಜೀ ತುಲಸಮ್ಮನವರಿಗೆ ಇರುವ ಇನ್ನೊಂದು ಮಹತ್ತರವಾದ ದೈವೀಸಂಪತ್ತು ನಿಷ್ಕಪಟತ್ವ. ಸ್ವಾಮಿಯವರ ದರ್ಶನಕ್ಕಾಗಿ ಬರುವ ಹೊಸ ಭಕ್ತರಿಗೆ, ಸ್ವಾಮಿಯವರಿಗೆ ಸಮೀಪವಾಗಿ ಇರಬೇಕು, ಅವರ ಕಾಲನ್ನು ಮುಟ್ಟಿ ನಮಸ್ಕರಿಸಬೇಕೆಂದು ಆಸೆಯು ಇರುತ್ತಿತ್ತು. ಸ್ವಾಮಿಯವರು ಯಾರಿಗೂ ತಾಕುವುದಕ್ಕೆ ಒಪ್ಪಿಗೆ ಕೊಡುತ್ತಿರಲಿಲ್ಲ. ಆದ್ದರಿಂದ, ತುಲಸಮ್ಮನವರು ಹೊಸದಾಗಿ ಬರುವ ಭಕ್ತರನ್ನು ಸ್ವಾಮಿಯವರ ಹತ್ತಿರ ಹೋಗ ಬೇಡಿ ಎಂದು ಜಗಳವಾಡುತ್ತಿದ್ದರು. "ಯಾವ ರೀತಿಯ ಮನುಷ್ಯರಯ್ಯಾ ನೀವು? ನಿಮಗೆ ತಲೆ ಇಲ್ಲವೇ? ಸ್ವಾಮಿಯವರು ನಮ್ಮ ಹಾಗೆ ಮನುಷ್ಯರು ಎಂದು ತಿಳಿದಿರಾ? ದೂರ ಬನ್ನಿ ದೂರ ಬನ್ನಿ" ಎಂದು ಗದರಿಸುತ್ತಿದ್ದರು. ಹತ್ತು ನಿಮಿಷಗಳ ನಂತರ ಅದೇ ಭಕ್ತರು ಅವರಿಗೆ ಕಂಡಾಗ, ಏನೂ ಆಗದಂತೆ ಅವರೇ ಹೋಗಿ ಮಾತನಾಡುತ್ತಿದ್ದರು. ಅವರಿಗೆ ಯಾವ ಅಡುಗೆ ಇಷ್ಟವೋ ತಿಳಿದುಕೊಂಡು ಅದನ್ನು ಮಾಡಿ ಹಾಕುತ್ತಿದ್ದರು. ಸ್ವಾಮಿಯವರು ತಿರುಗುತ್ತಿದ್ದ ಕುಗ್ರಾಮಗಳಲ್ಲಿ ಕಾಫೀ, ಟೀ ಸಿಗುತ್ತಿರಲಿಲ್ಲ. ಯಾರಾದರೂ ಪಟ್ಟಣದಿಂದ ಸ್ವಾಮಿಯವರ ದರ್ಶನಕ್ಕಾಗಿ ಬರುತ್ತಾರೆಂದು, ಅವರಿಗೋಸ್ಕರ ಕಾಫಿ ಪುಡಿ, ಸಕ್ಕರೆ ಗುಟ್ಟಾಗಿ ಮುಚ್ಚಿ ಇಡುತ್ತಿದ್ದರು.

ಸೋಮಾರಿಗಳನ್ನು ನೋಡಿದಾಗ ಅವರಿಗೆ ಎಲ್ಲೂ ಇಲ್ಲದ ಕೋಪ ಬರುತ್ತಿತ್ತು. ಸ್ವಾಮಿಯವರ ಸೇವಕರಲ್ಲಿ ಕೆಲವರು ಸೋಮಾರಿಗಳು ತಮ್ಮ ಕೆಲಸಗಳನ್ನು ತಪ್ಪಿಸು ಕೊಳ್ಳುತ್ತಿದ್ದರು. ಅವರುಗಳನ್ನು ತುಂಬಾ ಬಯ್ಯುತ್ತ - "ದಂಡಿಯಾಗಿ ತಿಂಡಿ ತಿಂದು ಕೆಲಸ ಮಾಡದಿದ್ದರೆ, ಶ್ರೀ ಸ್ವಾಮಿಯವರಿಗೆ ಋಣಪಡುತ್ತೀರಿ" ಎಂದು ಖಚಿತವಾಗಿ ಹೇಳುತ್ತಿದ್ದರು. ಆದರೆ, ಆದೇ ಸೋಮಾರಿ, ಮಧ್ಯಾಹ್ನ ಊಟಕ್ಕೆ ಬಂದರೆ, ಆಪ್ಯಾಯತೆಯಿಂದ ಅವರಿಗೆ ತೃಪ್ತಿ ಆಗುವಷ್ಟು ಬಡಿಸುತ್ತಿದ್ದರು. ಆಗ ಆ ಭಕ್ತ, "ಅವಳು ಗದರಿಸಿದರೂ ಅಥವಾ ಊಟ ಬಡಿಸಿದರೂ, ಅವಳು ತಾಯಿಯೇ, ಅಲ್ಲವೇ" ಎಂದು ಕೈ ಜೋಡಿಸಿ ನಮಸ್ಕರಿಸುತ್ತಿದ್ದರು.

ಇಂತಹ ಸದ್ಗುಣಗಳಿಂದ ಸ್ವಾಮಿಯವರನ್ನು ನಿರಂತರವಾಗಿ ಸೇವೆ ಮಾಡುವುದೇ ತನ್ನ ಗುರಿ ಎಂದುಕೊಂಡಿದ್ದಕ್ಕೇ, ಯಾವ ಸಾಧನೆ ಮಾಡದಿದ್ದರೂ, ಸ್ವಾಮಿಯವರು ಇವರಿಗೆ, "ಇನ್ನು ಇವರು ಮರು ಜನ್ಮ ಎತ್ತುವುದಿಲ್ಲ" ಎಂದು ಹೇಳಿದರು.

ಅನೇಕ ವರ್ಷಗಳಿಂದ ಸ್ವಾಮಿಯವರನ್ನು ಪೂಜಿಸುತ್ತಿದ್ದ ನೆಲ್ಲೂರು ಜಿಲ್ಲೆಯ ಫತ್ತೇಖಾನ್ ಪೇಟೆಯ ನಿವಾಸಿ, ಭಾಗವತುಲ ರಘುರಾಮಯ್ಯನವರು ಹೀಗೆ ತಿಳಿಸಿದರು. 1985 ರಲ್ಲಿ ನಾನು ಆರ್ಥಿಕವಾಗಿ ಬಹಳ ಕಷ್ಟದಲ್ಲಿದ್ದೆ. ಅದರ ಜೊತೆ, ನನ್ನ ಹೆಂಡತಿ ಎರಡು ತಿಂಗಳಿನಿಂದ ಅನಾರೋಗ್ಯದಿಂದ ಮಂಚ ಹಿಡಿದಿದ್ದಳು. 19-12-1985 ರಂದು ಸ್ವಾಮಿಯವರ ಪಟದ ಮುಂದೆ ನಮ್ಮ ಕಷ್ಟಗಳನ್ನು ಹೇಳಿಕೊಂಡಳು. ಆ ರಾತ್ರಿ, ಸ್ವಾಮಿಯವರು ಅವಳ ಕನಸಿನಲ್ಲಿ ಕಾಣಿಸಿಕೊಂಡು, "ಅಮ್ಮಾ! ನಾವು ನಮ್ಮ ಹಿಂದಿನ ಜನ್ಮದ ಕರ್ಮಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾವು ಅನುಭವಿಸ ಬೇಕಾಗಿದೆ" ಎಂದು ಸಮಾಧಾನ ಪಡಿಸಿದರು. 26-12-1985 ರಂದು, ಅವರು ಮತ್ತೆ ನನ್ನ

ಹೆಂಡತಿಯ ಕನಸಿನಲ್ಲಿ ಕಾಣಿಸಿಕೊಂಡನು, "ಅಮ್ಮಾ ನಿಮ್ಮ ಸಮಯ ಮುಗಿದಿದೆ ಎಂದು ಮೇಲಿನವರು ನ್ಯಾಯಾಲಯದಲ್ಲಿ ತೀರ್ಮಾನವನ್ನು ಕೊಟ್ಟಿದ್ದಾರೆ" ಎಂದರು. ಆಗ ಅವಳು ದುಃಖದಿಂದ ಅಳುತ್ತಾ "ಸ್ವಾಮೀ, ನನಗೆ ಚಿಕ್ಕ ಮಕ್ಕಳಿದ್ದಾರೆ, ಅವರ ಗತಿ ಏನು, ನಾನು ಈಗ ಸತ್ತರೆ ಅವರನ್ನು ಯಾರು ನೋಡಿಕೊಳ್ಳುತ್ತಾರೆ?" ಎಂದು ಮೊರೆ ಇಟ್ಟುಕೊಂಡಳು. "ಚೂಸ್ತಾಂಲೇಮ್ಮಾ" (ನೋಡುತ್ತೇವಮ್ಮಾ) ಎಂದರು ಸ್ವಾಮಿಯವರು. 28-12-1985 ರಂದು ಒಂದು ಶನಿವಾರ, ನಾನು ಸ್ವಾಮಿಯವರ ದರ್ಶನಕ್ಕಾಗಿ ಗೊಲಗಮೂಡಿಗೆ ಹೋಗಿ ಮಧ್ಯಾಹ್ನ 3 ಗಂಟೆಗೆ ಮನೆಗೆ ಬಂದೆ. ಅಂದು ಮಧ್ಯಾಹ್ನ 12 ಗಂಟೆಯಿಂದ ನನ್ನ ಹೆಂಡತಿಗೆ ಎದೆ ನೋವಿನಿಂದ ಸುಸ್ತಾಗಿತ್ತು. ನಾವು ಅವಳನ್ನು ಆಸ್ಪತ್ರೆಗೆ ಕರೆದು ಕೊಂಡು ಹೋಗಲು ಪ್ರಯತ್ನಿಸುತ್ತಿದ್ದೆವು. ನಾವು ಅವಳನ್ನು ವೈದ್ಯರ ನಿವಾಸಕ್ಕೆ ಕರೆದುಕೊಂಡು ಹೋದೆವು. ಅವರು ಅವಳನ್ನು ಪರೀಕ್ಷಿಸಿ, "ಇವರನ್ನು ಮನೆಗೆ ಕರೆದುಕೊಂಡು ಹೋಗುತ್ತೀರಾ ಅಥವಾ ಆಸ್ಪತ್ರೆಗೆ ಹೋಗುತ್ತೀರಾ" ಎಂದು ತುಂಬಾ ನಿರುತ್ಸಾಹದಿಂದ ಉಗುಳುನುಂಗುತ್ತಾ ನನ್ನನ್ನು ಕೇಳಿದರು. "ಇದೇನು ಹೀಗೆ ಕೇಳುತ್ತೀರ? ತಕ್ಷಣವೇ ಆಸ್ಪತ್ರೆಗೆ ಕರೆದುಕೊಂಡು ಹೋಗಿ" ಎಂದೆವು. 'ನಾನು ಫೋನ್ ಮಾಡಿ ಆಸ್ಪತ್ರೆಯಲ್ಲಿ ಹೇಳುತ್ತೇನೆ, ನೀವು ಇವರನ್ನು ಕರೆದುಕೊಂಡು ಹೋಗಿ ಆಸ್ಪತ್ರೆ ಸೇರಿಸಿ, ನಾನು ನಿಮ್ಮ ಹಿಂದೆ ಬರುತ್ತೇನೆ" ಎಂದರು ಡಾಕ್ಟರ್. ನಾವು ಅವಳನ್ನು ನೆಲ್ಲೂರಿನ ಕನಿಕಲ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಸ್ಟ್ರೆಚರ್ ಮೇಲೆ ಮಲಗಿಸುವ ಮೊದಲು, ಅವಳ ಉಸಿರಾಟವು ನಿಂತುಹೋಯಿತು. ವೈದ್ಯರು ಪರೀಕ್ಷಿಸಿ ಇನ್ನು ಪ್ರಯೋಜನವಿಲ್ಲ, ಮನೆಗೆ ಕರೆದುಕೊಂಡು ಹೋಗಿ ಎಂದರು. ನಾವು ಇಲ್ಲಿಯವರೆಗೆ ಬಂದಿರುವುದರಿಂದ, ದಯವಿಟ್ಟು ಅವಳಿಗೆ ಆಕ್ಸಿಜನ್ ಕೊಡಿ, ನಿಮ್ಮ ಕೈಲಾದಷ್ಟು ಮಾಡಿ ಎಂದು ಬೇಡಿಕೊಂಡೆವು. ಅವರು oxygen ಹಾಕಿ, ತಕ್ಷಣವೇ ರಕ್ತ ಪರೀಕ್ಷೆ ಮಾಡಿದರು. ರಕ್ತ ಕಪ್ಪು ಬಣ್ಣಕ್ಕೆ ತಿರುಗಿತ್ತು. ಈ ಆಂದೋಲನದ ಅರ್ಧ ಗಂಟೆಯೊಳಗೆ, ಅವಳ ಉಸಿರಾಟ ಪ್ರಾರಂಭವಾಗಿ ವೈದ್ಯರನ್ನು ಆಶ್ಚರ್ಯ ಪಡಿಸಿತು. 'ಇವರ ಉಸಿರಾಟವು ಮೂರು ಗಂಟೆಗಳ ಕಾಲ ಮುಂದುವರಿದರೆ, ಇನ್ಫೆಕ್ಷನ್ ಮೂಲಕ ನಾವು ಅವರ ರಕ್ತದ ಬಣ್ಣವನ್ನು ಬದಲಾಯಿಸ ಬಹುದು. ಇದು ದೇವರ ಅನುಗ್ರಹ' ಎಂದು ವೈದ್ಯರು ಅವರ ಪ್ರಯತ್ನ ಮಾಡುತ್ತಿದ್ದರು. ನಿರೀಕ್ಷಿತ ಸಮಯಕ್ಕೂ ಮೊದಲೇ ಆಕೆಯ ಸ್ಥಿತಿ ಸುಧಾರಿಸಿತು. ಇಷ್ಟರಲ್ಲಿ ನಮ್ಮ ಕುಟುಂಬ ವೈದ್ಯರು ಕೂಡ ಬಂದು ಅವಳನ್ನು ನೋಡಿದರು. ನಾವು, ಆ ಇಬ್ಬರು ವೈದ್ಯರಿಗೂ ನಮ್ಮ ಕೃತಜ್ಞತೆಯನ್ನು ವ್ಯಕ್ತ ಪಡಿಸಿದಾಗ, ಅವರು , "ಇದು ಕೇವಲ ದೇವರ ಕೃಪೆ, ನಮ್ಮ ಪ್ರಯತ್ನ ಇದರಲ್ಲೇನೂ ಇಲ್ಲ. ದೇವರಿಗೆ ಪ್ರಾರ್ಥನೆ ಮಾಡಿ " ಎಂದು ಹೇಳಿದರು. ಅವಳು ಜನವರಿ 15, 1986 ವರೆಗು ಆಸ್ಪತ್ರೆಯಲ್ಲಿದ್ದು ಚಿಕಿತ್ಸೆ ಪಡೆದಳು. ಈಗ ಶ್ರೀ ಸ್ವಾಮಿಯವರ ಕೃಪೆಯಿಂದ ನಾವು ಸುಖವಾಗಿ ಇದ್ದೇವೆ.

1985 ರಲ್ಲಿ ನನ್ನ ಹೆಂಡತಿಯ ಕನಸಿನಲ್ಲಿ ಸ್ವಾಮಿಯವರು ಕಂಡು, ಅವರು ಸ್ಲೇಟಿನ ಮೇಲೆ L.Min.E ಬರೆದು ತೋರಿಸುತ್ತಿದ್ದರು. ಮರುದಿನ ಬೆಳಿಗ್ಗೆ ಅವಳು ನನ್ನ ಮಗನಿಗೆ L.Min.E ನ ಅರ್ಥವನ್ನು ಕೇಳಿದಳು. ಪಾಲಿಟೆಕ್ನಿಕ್ನಲ್ಲಿ ಮೈನಿಂಗ್ ಮತ್ತು

ಇಂಜಿನಿಯರಿಂಗ್ ಕೋರ್ಸ್ ಎಂದು ಅವನು ಹೇಳಿದ. "ಸ್ವಾಮಿಯವರು ನನಗೆ ಸ್ವಪ್ನ ದರ್ಶನಕೊಟ್ಟು ನಿನ್ನನ್ನು L.Min.E ಓದಿಸು ಎಂದು ಹೇಳಿದರು. ಆದ್ದರಿಂದ, ನೀನು ಅದನ್ನು ಅಧ್ಯಯನ ಮಾಡಲು ಪ್ರಯತ್ನಿಸು" ಎಂದು ಹೇಳಿದಳು. ನನ್ನ ಹುಡುಗ S.S.C ನಲ್ಲಿ ಗಣಿತ, ಇಂಟರ್ಮೀಡಿಯೆಟ್ ನಲ್ಲಿ ಗಣಿತದ ಗ್ರೂಪ್ ತೆಗೆದುಕೊಂಡು ಪಾಸ್ ಆಗಲಿಲ್ಲ. ಆದ್ದರಿಂದ ಪ್ರವೇಶ ಪರೀಕ್ಷೆ ಬರೆದರೆ ತನಗೆ ಸೆಲೆಕ್ಷನ್ ಆಗುವುದಿಲ್ಲ, ಅವನ ತಾಯಿಯ ಸ್ವಪ್ನ ಕಾಕತಾಳೀಯ ಎಂದು ಭಾವಿಸಿ ಹಾಸ್ಯ ಮಾಡಿದನು.

ಆದರೆ, ಕೆಲವು ದಿನಗಳ ನಂತರ, ಅವನು ಪಾಲಿಟೆಕ್ನಿಕ್ ಪ್ರವೇಶವನ್ನು ತನ್ನ ಸ್ನೇಹಿತರ ಪ್ರೋತ್ಸಾಹದಿಂದ ಬರೆದಾಗ, ಸ್ವಾಮಿಯವರು ಹೇಳಿದಂತೆ ಮೈನಿಂಗ್ ಎಂಜಿನಿಯರಿಂಗ್ ನಲ್ಲಿ ಸೀಟು ಪಡೆದನು. ಆರ್ಥಿಕ ತೊಂದರೆಗಳಿಂದ ಕಾಲೇಜಿಗೆ ಸೇರಲಿಲ್ಲ. ಶುಲ್ಕ ಕಟ್ಟುವ ಸಮಯ ಮೀರಿತು.

ಆ ಸಮಯದಲ್ಲಿ ಅವನ ಚಿಕ್ಕಪ್ಪ ಕಡಪದಿಂದ ಫೋನ್ ಮಾಡಿ ವಿಷಯ ತಿಳಿದು, "ಫೀಜ್ ಕಟ್ಟುವ ಸಮಯ ಮುಂದೆ ಮಾಡಿದ್ದಾರೆ. ಸೀಟು ಹೋದರೆ ಮತ್ತೆ ಸಿಗುವುದಿಲ್ಲ, ಅದಕ್ಕೇ ತಪ್ಪದೇ ಅವನನ್ನು ಕಾಲೇಜಿಗೆ ಸೇರಿಸಿ" ಎಂದು ಪ್ರೋತ್ಸಾಹಿಸಿದರು. ಸ್ವಾಮಿಯವರ ಕೃಪೆಯಿಂದ ನನ್ನ ಮಗನ ಅಜ್ಜ(ನನ್ನ ಮಾವನವರು) ಅವನ ಅಧ್ಯಯನದ ವೆಚ್ಚವನ್ನು ಭರಿಸುವುದಾಗಿ ಭರವಸೆ ನೀಡಿ ಕಾಲೇಜಿನಲ್ಲಿ ಸೇರಿಸಿ ಓದಿಸುತ್ತಿದ್ದಾರೆ.

ನಾವು ಶ್ರದ್ಧಾ ಭಕ್ತಿಯಿಂದ ಸ್ವಾಮಿಯವರನ್ನು ಸೇವಿಸುತ್ತಿದ್ದರೆ, ನಾವುಗಳು ಕೇಳದಯೇ, ಅವಸರವಿದ್ದಾಗ ನಮಗೇನು ಒಳ್ಳೆಯದೋ ಅದು ಆಗುವ ಹಾಗೆ ಸ್ವಾಮಿಯವರೇ ನೋಡುತ್ತಾರೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. 122

ನಮ್ಮ ಕುಟುಂಬ ಶ್ರೀ ಸ್ವಾಮಿಯವರಿಗೆ ತುಂಬಾ ಋಣಿಯಾಗಿದೆ. ಶ್ರೀ ಸ್ವಾಮಿಯವರು ನಮಗೆ ಪ್ರಾಣ ಕಾಪಾಡಿದ ಅನೇಕ ಸಂದರ್ಭಗಳಲ್ಲಿ ಈ ಕೆಳಗಿನದೂ ಒಂದು. 1986 ರಲ್ಲಿ ನನ್ನ ಪತ್ನಿ ಎದೆ ನೋವು ಮತ್ತು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದಳು. ನೆಲ್ಲೂರು ವೈದ್ಯರು ಅವಳನ್ನು ಗುಣಪಡಿಸಲು ಸಾಧ್ಯವಾಗಲಿಲ್ಲ, ಆದ್ದರಿಂದ ಅವಳನ್ನು ಮದ್ರಾಸ್ ಅಪೋಲೋಗೆ ಸೇರಿಸಿದೆವು. 20,000 ರೂ ಖರ್ಚು ಮಾಡಿದರೂ ಅವಳ ಸಂಕಟ ಕಡಿಮೆಯಾಗಲಿಲ್ಲ. ಆಕೆಯ ಶರೀರ ಮತ್ತು ತಲೆಯ ನರಗಳು ಊದಿಕೊಂಡು ತುಂಬಾ ನೋವಿನಿಂದ ಬಳಲುತ್ತಿದ್ದಳು. ಹಗಲು ರಾತ್ರಿ ಅವಳ ಕಣ್ಣು ನೋವಿನಿಂದ ತೆರೆದಿತ್ತು. ಅವಳ ಕಷ್ಟವನ್ನು ನೋಡಲಾಗಲಿಲ್ಲ, ನನ್ನ ಮನಸ್ಸಿನಲ್ಲಿ ಸ್ವಾಮಿಯವರನ್ನು ನಿಷ್ಠೂರವಾಗಿ ಪ್ರಾರ್ಥಿಸಿದೆ. ಅಂದಿನ ರಾತ್ರಿ ಸ್ವಾಮಿಯವರು ನನ್ನ ಸ್ವಪ್ನದಲ್ಲಿ ಕಂಡು Neprosal ಎಂದು`ಅಕ್ಷರಗಳನ್ನು ಬರೆದು ತುಂಬಾ ಹೊತ್ತು ತೋರಿಸಿದರು. ತಕ್ಷಣವೇ ಎಚ್ಚರ ಆಯಿತು. ಆ ಅಕ್ಷರಗಳನ್ನು ಒಂದು ಕಾಗದದಲ್ಲಿ ಬರೆದುಕೊಂಡು ಬೆಳಗ್ಗೆ ಔಷಧಿಯ ಅಂಗಡಿಯಲ್ಲಿ ವಿಚಾರಿಸಿದರೇ ಅದು ರಕ್ತದ ಒತ್ತಡಕ್ಕೆ ಉಪಯೋಗಿಸುವ ಮಾತ್ರೆ ಎಂದು ತಿಳಿಯಿತು. ಆದರೆ, ಆ ಔಷಧಿಯು ಯಾವ ವೈದ್ಯರೂ ಈಕೆಗೆ ಕೊಟ್ಟಿರಲಿಲ್ಲ. ಆ ಔಷಧಿಯನ್ನು ಕೊಡಿ ಎಂದು ಹೇಳಿದರೆ ವೈದ್ಯರು ಕೋಪ ಮಾಡಿಕೊಳ್ಳಬಹುದು ಎಂದು, ಹೇಳದೇ ಸ್ವಲ್ಪ ತಡ ಮಾಡಿದೆ.

ನಮ್ಮ ಕುಟುಂಬದ ವೈದ್ಯರ ಹತ್ತಿರ ಹೋಗಿ, "ಸಾರ್, ಈ ಮಾತ್ರೆಯಿಂದ ನಮ್ಮ ಬಂಧುಗಳಿಗೆ ರಕ್ತದೊತ್ತಡ ಕಡಿಮೆ ಆಗಿದೆ. ನಾವೇ ಹೇಳಿದರೆ ಚೆನ್ನಾಗಿರುವುದಿಲ್ಲ. ನೀವು ದಯವಿಟ್ಟು, ನಿಮ್ಮ ಲೆಟೆರ್ ಹೆಡ್ ನಲ್ಲಿ ಬರೆದು ಕೊಡಿ" ಎಂದು ಕೇಳಿ ಕೊಂಡು, ಅವರ ಹತ್ತಿರ ಬರೆಸುಕೊಂಡು ಹೋಗಿ ಮದ್ರಾಸ್ ವೈದ್ಯರಿಗೆ ತೋರಿಸಿದೆ. ಅವರು ನನ್ನ ಪತ್ನಿಗೆ ಆ ಔಷಧಿ ಕೊಟ್ಟರು. ಆಶ್ಚರ್ಯಕರವಾಗಿ, ಅವಳ ತೊಂದರೆ ಕಡಿಮೆಯಾಗಿ ಸ್ವಸ್ಥಳಾದಳು. ತಕ್ಷಣ ಆಕೆಯನ್ನು ಡಿಸ್ಚಾರ್ಜ್ ಮಾಡಿಸಿಕೊಂಡು ಮನೆಗೆ ಬಂದು ಸೇರಿದೆವು. ಇತರ ಔಷಧಿಗಳಿಲ್ಲದೇ ಅವಳಿಗೆ ಗುಣವಾಯಿತು. ಆಮೇಲೆ, ಸ್ವಾಮಿಯವರು ಅವಳಿಗೆ ಸ್ವಪ್ನ ದರ್ಶನ ಕೊಟ್ಟು ಐದು ಕಿತ್ತಳೆ ಹಣ್ಣು ಐದು ತಾಮ್ರದ ನಾಣ್ಯಗಳನ್ನು ಪ್ರಸಾದಿಸಿದರು. ಆ ದಿನದಿಂದ, ಆಕೆಗೆ ಕಿತ್ತಳೆ ಹಣ್ಣಿನ ರಸವೇ ಮುಖ್ಯವಾದ ಆಹಾರವಾಯಿತು. ತಾಮ್ರದ ನಾಣ್ಯಗಳು ಕೊಟ್ಟಿದ್ದು ನಮ್ಮ ಭವಿಷ್ಯದ ಆರ್ಥಿಕ ಬೆಳವಣಿಗೆಯನ್ನು ಸೂಚಿಸಿತು.

ನನ್ನ ಹೆಂಡತಿಯ ಆರೋಗ್ಯ ಸಮಸ್ಯೆಗಳು ಸರಿಹೋದರೂ, ಅವಳು ತುಂಬಾ ದುರ್ಬಲ ಮತ್ತು ರಕ್ತ ಹೀನತೆಯಿಂದ ಬಳಲುತ್ತಿದ್ದಳು. ಒಂದು ತಿಂಗಳು ಪೂರ್ತಿ ಸಹಜ ಸ್ಥಿತಿ ಆಗುವುದಕ್ಕೆ ಕಾಯುತ್ತಿದ್ದರೂ ಪ್ರಯೋಜನವಿಲ್ಲದೆ, ಅವರು ಸಹನೆ ಕಳೆದುಕೊಂಡು, ಸಂಪೂರ್ಣ ಜವಾಬ್ದಾರಿಯನ್ನು ಸ್ವಾಮಿಯವರ ಮೇಲೆ ಹೊರಿಸಿ ಗೊಲಗಮೂಡಿಗೆ ಹೋಗಿ 1 ವಾರ ಸ್ವಾಮಿಯವರ ಸಮಾಧಿಗೆ ಅಭಿಷೇಕ ಮಾಡಿ ಅಭಿಷೇಕದ ನೀರು ಕುಡಿದಳು. ನಾವು ನಂಬಲಾರದಷ್ಟು ಅವಳ ಆರೋಗ್ಯದಲ್ಲಿ ಬದಲಾವಣೆ ಬಂದು, ಬಲಹೀನಳಾಗಿದ್ದ ಅವಳ ಶರೀರವು, ಒಂದೇ ವಾರದಲ್ಲಿ ಶರೀರದ ಬಣ್ಣ ಮಾಮೂಲಿನಂತೆ ಆಗಿ, ಅವಳು ಬಲಶಾಲಿ ಮತ್ತು ಆರೋಗ್ಯವಂತಳಾದಳು. ಇದು ಕೇವಲ ಸದ್ಗುರು ದರ್ಶನದ ಪ್ರಭಾವವೇ! **ಶ್ರೀ ಸ್ವಾಮಿಯವರ ಸಮಾಧಿಯ ದರ್ಶನ**

123 **ಎಷ್ಟು ಮಹಿಮಾನ್ವಿತ ಎಂದು ನಮಗೆ ತಿಳಿಯಿತು. ಎಂದು ಭಾಗವತುಲ ರಘುರಾಮಯ್ಯನವರು ಬರೆದರು.**

ಪೆನುವರ್ತಿಯ ನಿವಾಸಿ, ಪೋಲು ಮಸ್ತಾನಯ್ಯನವರಿಗೆ (R.T.C.ನೆಲ್ಲೂರು) ಶ್ರೀ ಸ್ವಾಮಿಯವರ ಮೇಲೆ ಹೇಗೆ ಭಕ್ತಿ ಉಂಟಾಯಿತು ಎನ್ನುವ ವಿಚಾರ ಹೀಗೆ ತಿಳಿಸಿದರು. "ಸಾವಿರ ಕುರಿಗಳ ಮಧ್ಯದಲ್ಲಿ ಇರುವ ನಮ್ಮ ಕುರಿಯನ್ನು ಕಾಲು ಹಿಡಿದು ಎಳೆದುಕೊಂಡು ಬರಲಾ" ಎನ್ನುವ ಸ್ವಾಮಿಯವರ ಮಾತು ನನ್ನ ವಿಚಾರದಲ್ಲಿ ನಿಜವಾಯಿತು. ಆ ದಿನಗಳಲ್ಲಿ ನಾನು ನಾಸ್ತಿಕ, ದೇವರಲ್ಲಿ ವಿಶ್ವಾಸ ಇರಲಿಲ್ಲ. ಸ್ವಾಮಿಗಳ ಹೆಸರು ಕೇಳಿದರೆ ಅಸಹ್ಯವಾಗುತ್ತಿತ್ತು. 1981ರಲ್ಲಿ ನಾನು ಮನೆಯಲ್ಲಿರದ ಸಮಯದಲ್ಲಿ 2000ರೂ ಬೆಲೆ ಬಾಳುವ ಎಮ್ಮೆಗೆ ಭಯಂಕರವಾದ ರೋಗ ಬಂದಿತು. ಮನೆಯ ಹೆಂಗಸರು ಮೂರು ದಿನಗಳು ಆ ಎಮ್ಮೆಗೆ ಮನೆವೈದ್ಯ ಮಾಡಿದರು. ಅದು ನೀರಾಗಲಿ ಹುಲ್ಲಾಗಲಿ ತೆಗೆದುಕೊಳ್ಳುತ್ತಿರಲಿಲ್ಲ. ನಾನು ಮನೆ ಸೇರುವ ಹೊತ್ತಿಗೆ, ಕಾಲ ಮೀರಿತ್ತು. ನಮ್ಮ ಊರಿನ ಪಶು ಚಿಕಿತ್ಸಾಲಯದ ಸಹಾಯಕರೂ ಸಮಯಕ್ಕಿರಲಿಲ್ಲ. ರಾತ್ರಿ ಹತ್ತು ಗಂಟೆಗೆ ನನ್ನ ಎಮ್ಮೆಯ ಬಗ್ಗೆ ಯೋಚಿಸುತ್ತಾ ತುಂಬಾ ಹೆದರಿ ಮಲಗಿದೆ.

ಇಷ್ಟರಲ್ಲಿ ನನ್ನ ತಮ್ಮನ ಮಗ, ಅವನಿಗೆ ಎಂಟು ವರ್ಷ ವಯಸ್ಸು, ಅವನು ಬಂದು, "ವೆಂಕಯ್ಯ ಸ್ವಾಮಿಯವರ ವಿಭೂತಿ ಎಮ್ಮೆಗೆ ಹಚ್ಚುತ್ತೇನೆ ದೊಡ್ಡಪ್ಪಾ" ಎಂದನು. 'ನಿನಗೆ ನಂಬಿಕೆ ಇದ್ದರೆ, ಹಚ್ಚು" ಎಂದು ನಾನು ಊಟ ಮಾಡದೇ ಮಲಗಿಬಿಟ್ಟೆ. ಅವನು ಆ ಎಮ್ಮೆಗೆ ಎಲ್ಲಿ ಎಷ್ಟು ವಿಭೂತಿ ಹಚ್ಚಿದನೋ ನನಗೆ ಗೊತ್ತಿಲ್ಲ ಆದರೆ, ಅವನು ನಿದ್ರೆಯಲ್ಲಿ "ಸ್ವಾಮಿ ಬಂದರು, ಸ್ವಾಮಿ ಬಂದರು" ಎಂದು ನಿದ್ರೆಯಲ್ಲಿ ಮಾತನಾಡುತ್ತಿದ್ದನಂತೆ. ಸ್ವಲ್ಪ ಹೊತ್ತಿಗೆ ಎಮ್ಮೆ ಎದ್ದು ಹುಲ್ಲು ತಿನ್ನಲು ಪ್ರಾರಂಭಿಸಿತು. ನನ್ನ ಮನೆಯವರು, ನನ್ನನ್ನು ನಿದ್ರೆಯಿಂದ ಎಚ್ಚರಿಸಿ, "ಎಮ್ಮೆ ಹುಷಾರಾಗಿದೆ, ನೀನು ಊಟ ಮಾಡು" ಎಂದು ಹೇಳಿ ಆ ಮಗು ನಿದ್ರೆಯಲ್ಲಿ ಮಾತನಾಡಿದ ವಿಚಾರವೂ ಹೇಳಿದರು.

ತಕ್ಷಣವೇ ನನಗೆ ಸತ್ಯ ಅರಿವಾಯಿತು. ನನ್ನ ನಾಸ್ತಿಕ ಭಾವನೆಗಳೆಲ್ಲಾ ಮಾಯವಾಗಿ, ತಕ್ಷಣ ಸ್ವಾಮಿಯವರ ದರ್ಶನ ಮಾಡಬೇಕೆಂದು ಬೆಳಗಾಗುವ ಮೊದಲೇ, ಮೂರು ಮೈಲಿ ನಡೆದು ಸ್ವಾಮಿಯವರನ್ನು ಗೊಲಗಮೂಡಿಯಲ್ಲಿ ದರ್ಶನ ಮಾಡಿದೆ. ನಾನು ಬಾಯಿಬಿಡುವುದಕ್ಕೆ ಮೊದಲೇ ಸ್ವಾಮಿಯವರು, "ಅಯ್ಯಾ! ನಿನ್ನ ಎಮ್ಮೆಗೆ ಗುಣವಾಯಿತಲ್ಲವೇ" ಎಂದರು. ಆ ಒಂದು ಮಾತು ಸ್ವಾಮಿಯವರು ಹೇಳಿಲ್ಲದಿದ್ದರೆ, ನನಗೆ ಮತ್ತೆ ಮತ್ತೆ ಅನುಮಾನಗಳು ಬರುತ್ತಿತ್ತೆಂದು ಸ್ವಾಮಿಯವರು ಹಾಗೆ ಕೇಳಿದರು. ಅವತ್ತಿನಿಂದ ನನಗೆ ದೈವ ಚಿಂತನೆ ಉಂಟಾಗಿ, ಶ್ರೀ ಸ್ವಾಮಿಯವರನ್ನೇ ನನ್ನ ದೇವರಾಗಿ ಪೂಜಿಸುತ್ತಾ ಅನೇಕ ಕಷ್ಟಗಳಿಂದ ರಕ್ಷಿಸಲ್ಪಡುತ್ತಿದ್ದೇನೆ.

ಕೊತ್ತೂರಿನ ನಿವಾಸಿ ಬರಿಗೆಲ ನಾಗಯ್ಯ ಬಹಳ ಕಾಲ ಸಮಾಧಿ ಮಂದಿರದ ಪೂಜೆ ಮಡುತ್ತಿದ್ದರು. ಇವರು, ಅವರಿಗೆ 18 ವರ್ಷದ ವಯಸ್ಸಿನಲ್ಲಿ ಬಟ್ಟೆಗಳು ಕೊಳ್ಳುವುದಕ್ಕೆ ಕಲುವಾಯಿ ಎನ್ನುವ ಊರಿಗೆ ಹೋದರು. 'ಬದ್ವೇಲು ದಿಬ್ಬದ ಮೇಲೆ ವೆಂಕಯ್ಯಸ್ವಾಮಿ ಎನ್ನುವ ಮಹಾತ್ಮರು ಬಂದಿದ್ದಾರೆ' ಎಂದು ಯಾರೋ ರಸ್ತೆಯಲ್ಲಿ ಮಾತಾಡಿದ್ದು ಇವರಿಗೆ ಕೇಳಿಸಿತು. "ವೆಂಕಯ್ಯಸ್ವಾಮೀ" ಎನ್ನುವ ಹೆಸರಿನೊಡನೆ ಇವರದ್ದು ಯಾವ ಜನ್ಮದ ಬಂಧವೋ ತಿಳಿಯದು, ಇವರು ಬಟ್ಟೆಗಳು ಕೊಳ್ಳುವ ಕೆಲಸ ಬಿಟ್ಟು ಶ್ರೀ ಸ್ವಾಮಿಯವರ ದರ್ಶನಕ್ಕೆ ಹೊರಟು ಹೋದರು. ಶ್ರೀ ಸ್ವಾಮಿಯವರು ಅಗ್ನಿ ಕುಂಡದ ವ್ಯವಸ್ಥೆ ಮಾಡುತ್ತಿದ್ದರು. ಜಯರಾಮರಾಜು, ಸ್ವಾಮಿಯವರಿಗೆ ಸಹಾಯ ಮಾಡುತ್ತಿದ್ದರು. ಶ್ರೀ ಸ್ವಾಮಿಯವರು ನಾಗಯ್ಯನವರಿಗೆ, ತಮ್ಮ ಪರಿ ಭಾಷೆಯಲ್ಲಿ, ಕೋಟಿ, ಮಣ, ಅದ್ಭುತ ಎನ್ನುವ ಪದಗಳಿಂದ ಮೂರು ಆಶಿರ್ವಾದದ ಚೀಟಿಗಳು, ಬೆರಳು ಮುದ್ರೆಗಳಿರುವ ಮೂರು ಕಾಗದಗಳು, ಮೂರು ದಾರಗಳು ಕೊಟ್ಟು ಅವರ ಬಟ್ಟೆಯಿಂದ ಮಂತ್ರಿಸಿ "ಹೋಗಿ ಬಾ" ಎಂದರು. ನಾಗಯ್ಯನವರಿಗೆ, "ನಾನು ರಾತ್ರಿ ಸ್ವಾಮಿಯವರೊಂದಿಗೆ ಇದ್ದರೆ ಚೆನ್ನಾಗಿರುತ್ತದೆ" ಎಂದು ಅನ್ನಿಸಿತು. ತಕ್ಷಣ ಶ್ರಿ ಸ್ವಾಮಿಯವರು, "ಅಯ್ಯಾ! ನೀವು ಅನುಕೊನ್ನದಿ ಏ ಕಾಲಾನಿಕ್ಕೆನ ಸರಿಪಡುತುಂದಿ. ಇಪ್ಪುಡು ಮಾತ್ರಂ ಪೆಂದಲಕಡನೇ ಇಂಟಿಕಿಪೋ" (ಅಯ್ಯಾ! ನೀನು ಅಂದುಕೊಂಡದ್ದು ಬೇರೆ ಯಾವಾಗಲಾದರೂ ಸರಿಹೋಗುತ್ತದೆ, ಆದರೆ, ಈಗ ಮಾತ್ರ ಬೇಗ ಮನೆಗೆ ಹೋಗು) ಎಂದು ಆಜ್ಞಾಪಿಸಿದರು.

ಸ್ವಾಮಿಯವರ ಆಜ್ಞೆಯನ್ನು ನಾಗಯ್ಯನವರು ಪಾಲಿಸಿದರು. ಅದರ ನಂತರ ಜರುಗಿದ ತಮ್ಮ ಅನುಭವವನ್ನು ಈ ಕೆಳಗೆ ತಿಳಿಸಿದರು.

"ಅಲ್ಲಿಂದ ಹತ್ತು ಕಿಲೋ ಮೀಟರ್ ದೂರವಿದ್ದ ನಮ್ಮ ಗ್ರಾಮಕ್ಕೆ ಹೇಗೆ ನಡೆದು ಹೋದೆನೋ ನನಗೆ ಗೊತ್ತಿಲ್ಲ. ದಾರಿಯ ಉದ್ದಕ್ಕೂ ದಿವ್ಯವಾದ ಅನುಭವವಾಗುತ್ತಿತ್ತು. ವಿಚಿತ್ರ ಏನೆಂದರೆ, ನಾನು ಸ್ವಾಮಿಯವರ ಹತ್ತಿರದಿಂದ ಹೊರಟಾಗ, ಸಂಜೆ ಆಗುವುದಕ್ಕೆ ಇನ್ನೂ 4 ಗಂಟೆ ಇತ್ತು. ನಾನು ಮನೆ ಸೇರುವಹೊತ್ತಿಗೆ ಕೂಡಾ ಸಂಜೆ ಆಗುವುದಕ್ಕೆ ಇನ್ನೂ 4 ಗಂಟೆ ಹಾಗೇ ಇತ್ತು. ನನ್ನ ಮನಸ್ಸಿನ ಮಾತು ಸ್ವಾಮಿಯವರು ಹೇಳಿದ್ದೂ ಅಲ್ಲದೇ ನನ್ನನ್ನು ದಾರಿ ಉದ್ದಕ್ಕೂ ನಡೆಸಿದ್ದರಲ್ಲಿ ಕೂಡಾ ಸ್ವಾಮಿಯವರು ತಮ್ಮ ದಿವ್ಯ ಶಕ್ತಿಯನ್ನು ಪ್ರಯೋಗಿಸಿದರು. ಆದರೆ ಋಣಾನುಬಂಧ ಮತ್ತು ಸಮಯ ಕೂಡಿ ಬರದಿದ್ದ ಕಾರಣದಿಂದ ಸುಮಾರು 25 ವರ್ಷಗಳಾದ ಮೇಲೆ ನಾನು ಮೈಕಾ ಗಣಿಯಲ್ಲಿ ಕೆಲಸ ಮಾಡಿ, ಕಲಿಚೇಡು ಎನ್ನುವ ಜಾಗದಲ್ಲಿ ಸ್ವಾಮಿಯವರನ್ನು ಅನೇಕ ಬಾರಿ ದರ್ಶನ ಮಾಡಿದೆ."

"ಒಮ್ಮೆ ನನಗೆ ಶ್ರಿ ಸ್ವಾಮಿಯವರ ಸೇವೆಯಲ್ಲಿ ಯಾವಾಗಲೂ ಇರಬೇಕು ಎಂದು ಆಸೆ ಹುಟ್ಟಿತು. ಅವರ ಅನುಮತಿ ಪಡೆಯಲು ನಾನು ಅವರ ಬಳಿ ಹೋದೆ. ನಾನು ಎರಡು ರೂಪಾಯಿಗಳನ್ನು ದಕ್ಷಿಣೆಯಾಗಿ ಸಮರ್ಪಿಸಿದೆ, ಸ್ವಾಮಿಯವರು "ಮಾತು ಬರುವುದಿಲ್ಲ. ಇನ್ನೂ ದಕ್ಷಿಣೆ ಕೊಡು" ಎಂದರು. ಮೂರು ರೂಪಾಯಿ ಸಮರ್ಪಿಸಿದೆ. ತಕ್ಷಣ "ಪಾತಾಳ ಲೋಕದ ಜಗದರ್ತಿಯಲ್ಲಿ 1ಭಾಗ ಈತನಿಗೆ ಇದೆ. 56 ಕೋಟಿಯದು ಒಂದು, 86 ಕೋಟಿಯದು ಒಂದು ಅಂತ ಎರಡು ರಶೀದಿಗಳು ಆತನದು ಅಲ್ಲಿಗೆ ಸೇರಿವೆ. 108 ರಲ್ಲಿ ಒಂದು ಭಾಗ ಮತ್ತು ನಮ್ಮಲ್ಲಿ ಕೂಡ ಆತನಿಗೆ ಒಂದು ಭಾಗ ಇದೆ" ಎಂದು ತಮ್ಮ ಆಶೀರ್ವಾದದ ಪತ್ರ ಬರೆಸಿದರು. ನಾನು ನಿಮ್ಮ ಸೇವೆ ಮಾಡುತ್ತ ನಿಮ್ಮ ಹತ್ತಿರ ಇರುತ್ತೇನೆ ಅಂದಾಗ, ಸ್ವಾಮಿಯವರು, "ನೀನು ಇನ್ನೂ 6 ತಿಂಗಳು ಈಗ ಮಾಡುತ್ತಿರುವ ಉದ್ಯೋಗ ಮಾಡಿದರೆ 6 ಕೋಟಿ 100 ರೂ ಆದಾಯ ಬರುತ್ತದೆ. ಆಮೇಲೆ ನಮ್ಮ ಹತ್ತಿರ ಬರಬಹುದು" ಎಂದು ಸ್ವಾಮಿಯವರು ಹೇಳಿದರು. ಅಂದಿನಿಂದ, ನಾನು ರಸ್ತೆಯಮೇಲೆ ನಡೆಯುತಿದ್ದರೆ ಸ್ವಾಮಿಯವರು ನನ್ನ ಮುಂದೆ ಅಷ್ಟು ದೂರದಲ್ಲಿ ನಡೆಯುತಿದ್ದ ಹಾಗೆ, ಎಲ್ಲಿ ಕೂತರೂ, ಮಲಗಿದರೂ ಸ್ವಾಮಿಯವರು ಹತ್ತಿರವಿದ್ದಂತೆ ಗೋಚರಿಸುತ್ತಿತ್ತು. ಮೂರು ತಿಂಗಳು ಕಳೆಯುವ ಹೊತ್ತಿಗೆ ಸಾಕಾಗಿ ಹೋಯಿತು. ನನಗೆ ಸ್ವಾಮಿಯವರಿಂದ ದೂರ ಇರುವುದು ತಡೆಯಲಾರದೆ, ಮತ್ತೆ ಸ್ವಾಮಿಯವರ ಬಳಿ ಹೋಗಿ ನನಗೆ ಅವರ ಸೇವೆ ಮಾಡುವ ಭಾಗ್ಯ ಕೊಡಿ ಎಂದು ಕೇಳಿಕೊಂಡೆ. ಆಗ ಅವರು "ಒಂದು ವರ್ಷ ತಡೆ" ಎಂದರು. ನಾನು, "ಸ್ವಾಮೀ ನೀವು ಹಿಂದೆ ಆರು ತಿಂಗಳು ತಡೆ ಎಂದು ಹೇಳಿದಿರಿ, ಮೂರು ತಿಂಗಳಾಗಿವೆ. ಇನ್ನು ನಾನು ನಿಮ್ಮಿಂದ ದೂರ ಇರಲಾರೆ" ಎಂದು ಹೇಳಿದೆ. ಆಗ ಸ್ವಾಮಿಯವರು, "ಅಯ್ಯಾ, ಇನ್ನೂ ಸ್ವಲ್ಪ ದಿನಗಳು ಕಳೆಯಲಿ, ಅಥವಾ ನಾಳೆ ಬಂದರೂ ಒಳ್ಳೆಯದು" ಎಂದು ತಮ್ಮ ಒಪ್ಪಿಗೆಯನ್ನು ನೀಡಿದರು. ಮರು ದಿನ ಬೆಳಗಾಗುತ್ತಲೇ, ಎಷ್ಟು ಜನ ಸ್ನೇಹಿತರು, ಅಧಿಕಾರಿಗಳು, ಗಣಿಯ ಮಾಲಿಕರು ಬೇಡ ಎಂದರೂ ಕೇಳದೆ, ನಾನು

ರಾಜಿನಾಮೆ ಪತ್ರ ಬರೆದು ಮ್ಯಾನೇಜರ್ ಟೇಬಲ್ ಮೇಲೆ ಇಟ್ಟು, ಬಂದು ಸ್ವಾಮಿಯವರ ಸೇವೆ ಮಾಡಲು ಪ್ರಾರಂಭಿಸಿದೆ. ಅಂದಿನಿಂದ, ಕರುಣಾಮೂರ್ತರಾದ ಸ್ವಾಮಿಯವರು, ನನಗೆ ಮನೆಗೆ ಹೋಗಬೇಕೆನ್ನುವ ಇಚ್ಛೆ ಹುಟ್ಟದ ಹಾಗೆ ನೋಡಿಕೊಂಡರು. ಆ ದಯಾಮೂರ್ತಿಯವರ ಋಣ ಹೇಗೆ ತೀರಿಸಬಲ್ಲೆ" ಎಂದು ಕೇಳಿದರು ಬರಿಗೆಲ ನಾಗಯ್ಯನವರು.

ಅವಧೂತ ಲೀಲೆ

ಅಧ್ಯಾಯ - 27

ಶ್ರೀಸ್ವಾಮಿಯ ಪ್ರಿಯ ಕಾರ್ಯದ ಹರ್ಷಭರಿತ ಆಚರಣೆ ಮತ್ತು ಆನಂದವನ್ನು ಅನುಭವಿಸಿ

ಅಸಂಖ್ಯ ಗುರುಗಳಲ್ಲಿ ಸತ್ಯವಾದ ಸದ್ಗುರುವನ್ನು ಗುರುತಿಸುವುದು ಅತ್ಯಂತ ಮಹತ್ತಾದ ವಿಷಯ. ಹಾಗೆ ಗುರುತಿಸಿ, ಅವರ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು, ಅವಲೋಕನ ಮಾಡುವುದು ಸರಳ ವಿಷಯ ಅಲ್ಲ. ಅವರ ಸ್ಥಿತಿಯನ್ನು ಗುರ್ತಿಸಿದ ನಂತರ, ಅವರ **ಮಾತಿನಲ್ಲಿ ಅಚಲವಾದ ನಂಬಿಕೆಯನ್ನು ಹೊಂದಿ, ಅದನ್ನು ಸಂಪೂರ್ಣವಾಗಿ ಆಚರಿಸುವುದಕ್ಕೆ, ನಮಗೆ ಅವರಲ್ಲಿ ಸಂಪೂರ್ಣ ಭಕ್ತಿ ಶ್ರದ್ಧೆ ಇಲ್ಲದಿದ್ದರೆ ಆಚರಿಸುವುದು ಸಾಧ್ಯವಾಗುವುದಿಲ್ಲ. ಅವರ ಮಾತು ಆಚರಿಸದಿದ್ದರೆ, ಅದರ ಫಲವು ಶೂನ್ಯ. ನಮ್ಮಲ್ಲಿ ಅಚಂಚಲ ಭಕ್ತಿ ಶ್ರದ್ಧೆ ಪಡೆಯಬೇಕಾದರೆ, ಅವರ ಸಾನಿಧ್ಯದಲ್ಲಿ ಇದ್ದು,** ಅವರ ಸೇವೆ ಮಾಡುವುದರಿಂದ, ನಾವು ಅಂತಹ ಶುಭ ಸಂಸ್ಕಾರಗಳನ್ನು ಪಡೆಯುತ್ತೇವೆ. ಪ್ರತ್ಯಕ್ಷ ಸನ್ನಿಧಿಯ ಅನುಪಸ್ಥಿತಿಯಲ್ಲಿ ಅವರ ಜೀವನ ಚರಿತ್ರೆಯ ಪಠಣವು, ಅವರ ಉಪಸ್ಥಿತಿಗೆ ಸಮನಾಗಿರುತ್ತದೆ. ಇದು ಹೇಗೆ ಸಾಧ್ಯ? ನಮ್ಮ ಪುಣ್ಯ ಕರ್ಮಗಳ ಪ್ರಭಾವ, ಪಾಪಕರ್ಮಗಳಿಗಿಂತ ಹೆಚ್ಚಿದ್ದಾಗ ಮಾತ್ರವೇ ದೇವರನ್ನು ನಿಯಮ ನಿಷ್ಠೆಗಳಿಂದ ಪ್ರಾರ್ಥಿಸ ಬಹುದು ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಅಂತಹ ಪುಣ್ಯಕರ್ಮಗಳು ಯಾವುದು? ದೇವರು, ದ್ವಿಜರು, ಗುರುಗಳು ಮತ್ತು ಪ್ರಾಜ್ಞ ಪೂಜೆ ಮತ್ತು ಭಗವಂತನ ನಾಮಸ್ಮರಣೆ ಮಾಡುವುದು.

124

ದೇವರ ಕೃಪೆ ಪಡೆಯುವುದಕ್ಕೆ, ಪೂಜೆ ಮತ್ತು ನಾಮ ಸ್ಮರಣೆ ಮಾಡುವುದು ಅತ್ಯಂತ ಪ್ರಾಮುಖ್ಯತೆ ಹೊಂದಿರುವ ಪ್ರಕ್ರಿಯೆ. ಆದ್ದರಿಂದ, ಶ್ರೀ ವೆಂಕಯ್ಯಸ್ವಾಮಿಯವರು, ಭಜನೆ, ನಾಮ ಸಂಕೀರ್ತನೆ ಹೆಚ್ಚಾಗಿ ಪ್ರೋತ್ಸಾಹಿಸುತ್ತಿದ್ದರು. ಅವರು, "ಓಂ ನಾರಾಯಣ ಆದಿ ನಾರಾಯಣ" ಎನ್ನುವ ನಾಮ ಅವರ ತಂಬೂರಿಯನ್ನು ಮೀಟುತ್ತಾ ಗಂಟೆಗಟ್ಟಲೆ ಅತ್ಯಂತ ಮಧುರ ಧ್ವನಿಯಲ್ಲಿ ಹಾಡುತ್ತಿದ್ದರು.

ಸ್ವಾಮಿಯವರ ದರ್ಶನಕ್ಕೆ ಬರುತ್ತಿದ್ದ ಭಕ್ತರಿಗೆ, "ಭಜನ ಚೇಸುಕೋಂಡಯ್ಯಾ" (ಭಜನೆ ಮಾಡಿಕೊಳ್ಳರಯ್ಯಾ) ಎಂದು ಹೇಳಿ, ಭಕ್ತರು ಭಜನೆ ಮಾಡುತ್ತಿದ್ದಾಗ ಅವರು ಬಹಳ ಶ್ರದ್ಧೆ ವಹಿಸಿ, ಭಕ್ತರ ಶ್ರದ್ಧೆಯನ್ನನುಸರಿಸಿ ಅನುಗ್ರಹಿಸುತ್ತಿದ್ದರು. ಆಗಾಗ, ಭಕ್ತರು ಹಾಡುತ್ತಿದ್ದ ಭಜನೆಯನ್ನು ನಿಲ್ಲಿಸಿ, "ಓಂ ನಾರಾಯಣ ಆದಿ ನಾರಾಯಣ" ಎನ್ನುವ

ಮಂತ್ರವನ್ನು ಹಾಡಿ ಎಂದು ಹಾಡಿಸುತ್ತಿದ್ದರು. ಹೃದಯಪೂರ್ವಕವಾಗಿ, ಪ್ರೀತಿಯಿಂದ ಭಗವನ್ನಾಮಸ್ಮರಣೆ ಸ್ವಾಮಿಯವರಿಗೆ ಅತಿ ಪ್ರೀತಿಕರವಾದದ್ದು. ಅಂತಹ ಕಾರ್ಯಕ್ರಮಗಳನ್ನು ಬಹಳ ಶ್ರದ್ಧೆಯಿಂದ ಆಲಿಸಿ, ತಮ್ಮ ಆಶಿರ್ವದಿಸುತ್ತಿದ್ದರು

ಒಮ್ಮೆ ಬೊಂತರಾಜುಪಾಳೆಂ ಎಂಬ ಒಂದು ಗ್ರಾಮದಲ್ಲಿ ಭಕ್ತರೆಲ್ಲಾ ತಮ್ಮ ಕಾಲಿಗೆ ಗೆಜ್ಜೆ ಕಟ್ಟಿ, ಕರತಾಳವನ್ನು ಕೈಯಲ್ಲಿ ಹಿಡಿದು ಬಹಳ ಉತ್ಸಾಹದಿಂದ ಹೆಜ್ಜೆ ಹಾಕುತ್ತಾ ವಿವಿಧ ಭಂಗಿಯಲ್ಲಿ ಭಜನೆ ಮಾಡುತ್ತಿದ್ದರು. ಪ್ರೇಕ್ಷಕರು, ದೇವರನ್ನು ಸ್ಮರಿಸುವುದನ್ನು ಮರೆತು, ಯಾರು ಚೆನ್ನಾಗಿ ಹೆಜ್ಜೆ ಹಾಕುತ್ತಿದ್ದಾರೆ? ಯಾರು ಒಳ್ಳೆ ಭಂಗಿಗಳು ಪ್ರದರ್ಶಿಸುತ್ತಿದ್ದಾರೆ ಎಂದು ವಿಮರ್ಶೆ ಮಾಡುತ್ತಾ ಇದ್ದರು. ಭಜನೆ ಮಾಡುವರ ವಿಷಯ ಹೇಳಬೇಕಾಗಿರಲಿಲ್ಲ. ಅವರ ದೃಷ್ಟಿಯೆಲ್ಲಾ ಪ್ರೇಕ್ಷಕರನ್ನು ಆಕರ್ಷಿಸುವುದರಲ್ಲಿ ಕೇಂದ್ರೀಕೃತವಾಗಿತ್ತು.

ಸ್ವಲ್ಪ ಸಮಯದ ನಂತರ , ಸ್ವಾಮಿಯವರು ಮುಗ್ದತೆಯಿಂದ "ಏಂದಯ್ಯಾ ವಾಳ್ಳು ಚೇಸೇದಿ?" (ಅವರು ಏನು ಮಾಡುತ್ತಿದ್ದಾರಯ್ಯಾ?) ಎಂದು ಕೇಳಿ ಜೋರಾಗಿ ನಕ್ಕು ಬಿಟ್ಟರು. ಸ್ವಾಮಿಯವರು ಏಕೆ ಹಾಗೆ ಹೇಳಿದರೆಂದು ನಮ್ಮೆಲ್ಲರಿಗೂ ತಿಳಿದ ವಿಷಯವೇ. ಆದ್ದರಿಂದ, ನಾವುಗಳು ಭಕ್ತಿ ಮತ್ತು, ಹಂಬಲದಿಂದ ಭಜನೆ, ನಾಮಸಂಕೀರ್ತನೆ ಮಾಡಿ ಸ್ವಾಮಿಯವರ ಕೃಪೆ ಪಡೆಯಲು ಪ್ರಯತ್ನಿಸೋಣ.

ಒಮ್ಮೆ ಒಬ್ಬ ಭಕ್ತ ಬಂದು, "ಸ್ವಾಮೀ! ನಮ್ಮ ಊರಿನಲ್ಲಿ ನಿಮಗೆ ಒಂದು ಮಂದಿರವನ್ನು ನಿರ್ಮಿಸುತ್ತೇನೆ. ನೀವು ನಮ್ಮ ಗ್ರಾಮದಲ್ಲೇ ಇದ್ದು ಎಲ್ಲರನ್ನೂ ಅನುಗ್ರಹಿಸಿ" ಎಂದು ಬೇಡಿಕೊಂಡನು. ಆಗ, ಸ್ವಾಮಿಯವರು, "ಒಕ್ಕರೇಮುಂದಯ್ಯಾ ಕಟ್ಟಿಂಚೇದಿ, ವೆಂಕಯ್ಯ ಚಾಟುಕು ಪೋಯಾಕ ಪ್ರತಿ ಊಳ್ಳೋ ಕಟ್ಟಿಂಚುಕುಂಟುಳ್ಳಾ" (ಒಬ್ಬರೇನಯ್ಯಾ ಕಟ್ಟಿಸುವುದು? ವೆಂಕಯ್ಯ ಕಣ್ಮರೆಯಾದಮೇಲೆ, ಪ್ರತಿ ಊರಿನಲ್ಲೂ ಕಟ್ಟಿಸುತ್ತಾರೆ) ಎಂದರು. ಸ್ವಾಮಿಯವರು ಹೇಳಿದಹಾಗೆಯೇ, ಪ್ರತಿ ಗ್ರಾಮದಲ್ಲೂ, ಒಬ್ಬರಿಬ್ಬಾರಾದರೂ, ಸ್ವಾಮಿಯವರ ಪಟವನ್ನು ಆ ಗ್ರಾಮದ ದೇವಾಲಯದಲ್ಲಿ ಇಟ್ಟು, ಊದುಕಡ್ಡಿ ಬೆಳಗಿಸಿ, ಸ್ವಾಮಿಯವರ ಚರಿತ್ರೆಯಲ್ಲಿ ಕನಿಷ್ಠ ನಾಲ್ಕು ಲೀಲೆಗಳನ್ನು ಓದಿ, "ಓಂ ನಾರಾಯಣ ಆದಿ ನಾರಾಯಣ" ಮಂತ್ರ ಜಪ ಮಾಡಿ ನಂತರ ಸ್ವಾಮಿಯವರ ಭಜನೆಗಳು ಹಾಡುವುದು ಎಷ್ಟೋ ಶ್ರೇಯಸ್ಕರ.

ಮಹಾತ್ಮರ ಚರಿತ್ರ ಪಠಣೆ ನಮ್ಮನ್ನು ಮುಕ್ತಗೊಳಿಸುವುದು ಮಾತ್ರವಲ್ಲದೆ ಇಡೀ ಗ್ರಾಮಕ್ಕೆ ಒಳಿತನ್ನು ಮಾಡುತ್ತದೆ. ಶ್ರೀ ಸ್ವಾಮಿಯವರ ಆಸರೆ ಆ ಗ್ರಾಮದಲ್ಲಿರುವ ಪ್ರತಿಯೊಬ್ಬರಿಗೂ ಲಭಿಸುತ್ತದೆ. ಬರಗಾಲದ ಪರಿಣಾಮಗಳು ಕಡಿಮೆಯಾಗುವುದು, ಮತ್ತು ಸಾಮೂಹಿಕ ರೋಗಗಳಿಂದ ರಕ್ಷಣೆ ಸಿಗುತ್ತದೆ. ಮೊದಲು, ಒಬ್ಬರಿಬ್ಬರಿಂದ ಭಜನೆಯ ಮಂಡಲಿಯನ್ನು ಪ್ರಾರಂಭಿಸಿದರೂ, ಸಮಯ ಕಳೆದಹಾಗೆ, ಸ್ವಾಮಿಯವರ ಕೃಪೆಯಿಂದ ಆ ಭಜನೆ ಮಂಡಲಿ ಬೆಳೆದು, ಪ್ರತಿಒಬ್ಬರೂ ಸ್ವಾಮಿಯವರ ಕೃಪೆ, ಅನುಭವಿಸುತ್ತಾರೆ. ಒಂದು ವಾರದಲ್ಲೇ ಮರಣ ಹೊಂದುವ ಪರಿಕ್ಷಿತ್ ರಾಜನಿಗೆ ಶುಕ ಮಹರ್ಷಿಗಳು ಶ್ರವಣ ಮಾಡಿಸುದ್ದು ಮಹನೀಯರ ಚರಿತ್ರೆಯೇ. ಅದೇ "ಭಾಗವತ". ಆದರೆ, ಇಂತಹ ಕಾರ್ಯಕ್ರಮಗಳನ್ನು ಆರಂಭಿಸುವುದೇ ಕಷ್ಟ. ಶ್ರಮ ಎಂದು ಭಾವಿಸದೇ,

ಸಂಕೋಚ ಪಡದೇ ಒಬ್ಬರಿಬ್ಬರಾದರೂ ಪ್ರಾರಂಭ ಮಾಡಿ ಮುಂದುವರಿಸಿದರೆ, ಆಮೇಲೆ, ಸ್ವಾಮಿಯವರೇ ತಮ್ಮ ಕಾರ್ಯವನ್ನು ನಡೆಸಿಕೊಳ್ಳುತ್ತಾರೆ.

ಶ್ರೀ ಸ್ವಾಮಿಯವರ ಕೃಪೆ, ಆ ಗ್ರಾಮಕ್ಕೆ ಲಭಿಸುವಂತೆ ಮಾಡುವುದೇ ನಿಜವಾದ
ನಿಷ್ಕಾಮ ಕರ್ಮ. ವಾರಕ್ಕೆ ಒಂದು ದಿನ ಅಲ್ಲದೇ, ನಿತ್ಯ ಭಜನೆ ಮಾಡುವುದು ತುಂಬಾ ಒಳ್ಳೆಯದು. ಇದು ಮಾನವ ಜನ್ಮವನ್ನು ಫಲಪ್ರದಗೊಳಿಸುವ ವಿಧಾನ ಎಂದು ನನ್ನ ಅನುಭವವು ತೋರಿಸುತ್ತದೆ.

ಓಂ ನಾರಾಯಣ - ಆದಿ ನಾರಾಯಣ

ಅವಧೂತ ಲೀಲೆ

ಅಧ್ಯಾಯ - 28

ರಚಯಿತರ ಸ್ವಾನುಭವಗಳು

ಆಚಾರ್ಯ ಶ್ರೀ ಭರದ್ವಾಜರವರ ಸಲಹೆ ಅನುಸರಿ ನಾನು ಸ್ವಾಮಿಯವರ ದರ್ಶನ ಪಡೆದು ದೈವಿಕ ಅನುಭವಗಳನ್ನು ಪಡೆಯುತ್ತಾ, ಕಳೆದ 12 ವರ್ಷಗಳಿಂದ ಶ್ರೀ ಸ್ವಾಮಿಯವರ ಸೇವೆ ಮಾಡುತ್ತಿದ್ದೇನೆ. ಕಳೆದ 15 ವರ್ಷಗಳಿಂದ ಶ್ರೀ ಶಿರಿಡೀ ಸಾಯಿನಾಥರ ಚರಿತ್ರೆ ಪಠಣ, ಮತ್ತು ಪೂಜೆ ಮಾಡುತ್ತಿದ್ದೇನೆ. ಆ ಪೂಜೆಯ ಫಲಿವೇ ಶ್ರೀ ವೆಂಕಯ್ಯ ಸ್ವಾಮಿಯವರ ರೂಪದಲ್ಲಿರುವ ಸಾಯಿನಾಥರು ನನಗೆ ಲಭಿಸಿದರು. ನಾನು ಸಾಯಿಲೀಲಾಮೃತಂ ಗ್ರಂಥದ ಪಾರಾಯಣ ಫಲವಾಗಿ, ಶ್ರೀ ವೆಂಕಯ್ಯಸ್ವಾಮಿಯವರು ಗುರುಪೂರ್ಣಿಮೆಗೆ ನಮ್ಮ ಮನೆಗೆ ಬಂದು ನಮ್ಮ ಆತಿಥ್ಯವನ್ನು ಸ್ವೀಕರಿಸಿ, ನನ್ನ ಸ್ನೇಹಿತರಾದ ಶ್ರೀ ಟಿ.ವೀ.ಶೇಷಗಿರಿರಾವು ಅವರ ಮನೆಯಲ್ಲಿ ಅಖಂಡ ನಾಮ ಸಂಕೀರ್ತನ ಮಾಡುತ್ತಿದ್ದ ವೃಂದದವರನ್ನು ಆಶೀರ್ವದಿಸಿದರು. 20 ವರ್ಷಗಳಿಂದ ನಾನು ಉಬ್ಬಸದಿಂದ ಬಳಲುತ್ತಿದ್ದೆ. ಎಷ್ಟೇ ನೋವಿದ್ದರೂ ಶ್ರೀ ಸ್ವಾಮಿಯವರ ಸನ್ನಿಧಿಯಲ್ಲಿ ಕುಳಿತ ಕೂಡಲೇ ನನ್ನ ನೋವೆಲ್ಲ ಯಾರೋ ತೆಗೆದುಹಾಕಿದಂತೆ ತೋರುತ್ತಿತ್ತು. ಎರಡು ಬಾರಿ ಸ್ವಾಮಿಯವರ ದರ್ಶನ ಮಾಡಿದ ತಕ್ಷಣ ನನ್ನನ್ನು ಮನೆಗೆ ಹಿಂತಿರುಗಿ ಹೋಗು ಎಂದು ಆಜ್ಞಾಪಿಸಿದರು. ಬಾಯಿ ಬಿಡದೇ ಸ್ವಾಮಿಯವರ ಆಜ್ಞೆ ಅನುಸರಿಸಿ ಮನೆಗೆ ಹಿಂತಿರುಗಿದಾಗ ನನ್ನ ವ್ಯಾಧಿ ಆ ದಿನವೇ ನಿವಾರಣೆ ಆಗುತ್ತಿತ್ತು. ಆದರೆ, ಒಮ್ಮೆ ನಾನು ಸ್ವಾಮಿಯವರ ಆಜ್ಞೆಯನ್ನು ಸಂಪೂರ್ಣವಾಗಿ ಆಚರಿಸದೇ ನನ್ನ ಅನುಕೂಲಕ್ಕೆ ತಕ್ಕಹಗೆ ನಿಯಮ ಭಂಗ ಮಾಡಿದಾಗ ವಿಪರೀತವಾದ ಅನಾರೋಗ್ಯಕ್ಕೆ ಗುರಿಯಾದೆ. ಆಗ ವೈದ್ಯರು ನನ್ನನ್ನು ಮದ್ರಾಸಿಗೆ ಹೋಗಿ ಚಿಕಿತ್ಸೆ ಪಡೆದು ಬಾ ಎಂದರು. ನಾನು ಗೊಲಗಮೂಡಿಯಲ್ಲಿ ಸ್ವಾಮಿಯವರ ಸಮಾಧಿಯನ್ನು ದರ್ಶಿಸದೇ ಮದ್ರಾಸಿಗೆ ಹೋಗುವುದಿಲ್ಲ ಎಂದು ಗೊಲಗಮೂಡಿಗೆ ಹೋಗ ಬೇಕೆಂದು ಬಸ್ಸನ್ನು ಹತ್ತಿದ ತಕ್ಷಣವೇ ನಾನು ಆರೋಗ್ಯವಂತನಾದೆ. ಅಂದಿನಿಂದ ಮೊದಲು, ನಾನು, ಸ್ವಾಮಿಯವರ ಸಮಾಧಿಯ ಬಳಿ ನನ್ನ ಸಂಸಾರ ಮಾಡಿದ ವೃತ್ತಾಂತವೆಲ್ಲಾ ಈ ಗ್ರಂಥಾರಂಭದಲ್ಲೇ ವಿವರಿಸಿದ್ದೇನೆ. ಇಲ್ಲಿ ಸ್ವಾಮಿಯವರು ಹೇಳಿದ ನಿಯಮಗಳನ್ನು ಅವರೇ ನನ್ನಿಂದ ಹೇಗೆ ಆಚರಿಸುವಹಾಗೆ ಮಾಡುತ್ತಿದ್ದಾರೋ ವಿವರಿಸುತ್ತೇನೆ.

ಶ್ರೀ ಸ್ವಾಮಿಯವರು ನನ್ನನ್ನು, "ನಿನ್ನ ಅನ್ನವನ್ನು ನೀನೇ ತಿನ್ನಯ್ಯಾ" ಎಂದು

ಆಜ್ಞಾಪಿಸಿದರು. ಅಂದರೇ, ನನ್ನ ಕಷ್ಟಾರ್ಜಿತ ಬಿಟ್ಟು ಬೇರೆಯವರ ಹಣವನ್ನು ಬಳಸಬಾರದೆಂದು, ಮತ್ತು, "ಜಿಡ್ಡಿಲ್ಲದ ಊಟ ಮಾಡು" ಎಂದು ಆದೇಶಿಸಿದರು, ಮತ್ತು ಶ್ರೀ ಸಾಯಿನಾಥರು ಉಪ್ಪು, ಹುಳಿ ಮತ್ತು ಕಾರ ತಿನ್ನಬೇಡ ಎಂದು ಆದೇಶಿಸಿದರು. ನಾನು ಈ ನಿಯಮಗಳನ್ನು ಸಾಧ್ಯವಾದಷ್ಟು ಅನುಸರಿಸುತ್ತಿದ್ದೇನೆ. ಆದರೆ, ಕಳೆದ ನಾಲಕ್ಕು ವರ್ಷಗಳಿಂದ, ಪ್ರಸಾದವೆಂದು, ಅಥವ ಸ್ನೇಹಿತರ ಬಲವಂತಕ್ಕೆ ಈ ನಿಯಮ ತಪ್ಪಿದ ಸಂದರ್ಭಗಳಿಂದ ಅಸ್ತ ವ್ಯಸ್ತನಾಗುತ್ತಾ ಇದ್ದೇನೆ. ಈ ಸ್ವಲ್ಪ ನಿಯಮಭಂಗವನ್ನು ಕೂಡ ಸ್ವಾಮಿಯವರು ಸಹಿಸಲಿಲ್ಲ. 1985 ಡಿಸೆಂಬರ್ ತಿಂಗಳಲ್ಲಿ ಒಬ್ಬರ ಮನೆಯ ಗೃಹಪ್ರವೇಶಕ್ಕೆ ಹೋಗಿ ಪ್ರಸಾದವೆಂದು ಸ್ವಲ್ಪ ಬಾಳೆ ಹಣ್ಣು ತಿಂದೆ. ಅಷ್ಟಕ್ಕೇ ನಿಲ್ಲದೆ ಮನೆಯ ಯಜಮಾನಿಗೆ ನಾನು ತಿನ್ನದಿದ್ದರೆ ಇತರರದೂರುತ್ತಾರೆಂದುಕೊಂಡು ಅರ್ಧ ಬಾಳೆಹಣ್ಣು ತಿಂದು ಉಳಿದೆದ್ದನ್ನು ಚೀಲದಲ್ಲಿಟ್ಟುಕೊಂಡೆ. ತಕ್ಷಣ ನನ್ನ ಎಡಗಣ್ಣು ನವೆ ಆಗಲು ಪ್ರಾರಂಭಿಸಿತು. ನಾನು ನನ್ನ ಕಣ್ಣನ್ನು ಉಜ್ಜಿದೆ, ತಕ್ಷಣ ಕಣ್ಣು ಊದಿಬಿಟ್ಟಿತು. ಬಾಳೇಹಣ್ಣು ತಿಂದಿದ್ದೇ ಕಾರಣ ಎಂದು ಅನುಮಾನಿಸುತ್ತಾ ಶಾಲೆಗೆ ಬಂದು, ಸುಮಾರು ಬೆಳಗ್ಗೆ 11 ಗಂಟೆಯ ಹೊತ್ತಿಗೆ ತುಂಬಾ ಹಸಿವಾಗಿ, ನನ್ನ ಚೀಲದಲ್ಲಿರುವ ಅರ್ಧ ಬಾಳೇಹಣ್ಣನ್ನು ಕೂಡಾ ತಿಂದುಬಿಟ್ಟೆ.

ತಕ್ಷಣ ನನ್ನ ಕಣ್ಣಿನ ಸಮಸ್ಯೆ ಹೆಚ್ಚಾಯಿತು. ಕುಡಿದವನಂತೆ ಮತ್ತು ಬಂದು ಬೆಂಚ್ ಮೇಲೆ ಬಿದ್ದೆ. ನಾನು 7 1/2 ಅಡಿ ಬಾಗಿಲ ಮುಂದೆ ನಿಂತು, 2 ಪಾದಗಳನ್ನು ಒಂದು ಕಡೆ ಇಟ್ಟು, 2 ಅಂಗೈಗಳಲ್ಲಿ ಬಾಗಿಲನ್ನು ನೂಕುತ್ತಿದ್ದೆ. ಎಲ್ಲೋ ಒಂದು ಜಾಗದಲ್ಲಿ ನೂಕಿದಾಗ, ಬಾಗಿಲು ತೆರೆದು ಕೊಂಡಿತು. ಆ ಪ್ರಯತ್ನದಲ್ಲಿ ನನ್ನ ಬಲಗಾಲು, 3 ಅಂಗುಲ ಪಕ್ಕಕ್ಕೆ ಜರುಗಿಸಿದೆ. ತಕ್ಷಣವೇ ಸಭೆಯಲ್ಲಿ ಹಿಂದಿದ್ದ ಹಿರಿಯರು, " ಅಯೋಗ್ಯ! ಪಕ್ಕಕ್ಕೆ ಜರುಗು" ಎಂದು ನನ್ನನ್ನು ಪಕ್ಕಕ್ಕೆ ತಳ್ಳುತ್ತಿದ್ದರು. "ಕಾಲನ್ನು ಸ್ವಲ್ಪ ಜರುಗಿಸಿದರೆ ಅದು ಕೂಡಾ ತಪ್ಪಾ? ಎಂದು ನಾನು ವಾದ ಮಾಡುತ್ತಿದ್ದೆ. **"ಚಿಕ್ಕ ತಪ್ಪಾದರೂ ತಪ್ಪೇ"** ಎಂದು 3 ಬಾರಿ ಹೇಳಿದರು. ತಕ್ಷಣ ನನಗೆ ಎಚ್ಚರವಾಗಿ ಸಂಜೆ 6 ಗಂಟೆ ಆಗಿಹೋಗಿದೆ ಎಂದು ಗಾಬರಿ ಪಟ್ಟು ಗಡಿಯಾರ ನೋಡಿದೆ. ಆದರೆ ಆಗ ಕೇವಲ 11:10 ಮಾತ್ರವೇ ಆಗಿತ್ತು. "ಈ ಹತ್ತು ನಿಮಿಷದಲ್ಲಿ ನನಗೆ ಈ ದೃಶ್ಯ ಏಕೆ ಕಂಡಿತು?" ಎಂದು ಯೋಚಿಸಿದಾಗ, ನಾನು ಪ್ರಸಾದದ ಹೆಸರಲ್ಲಿ ನಿಯಮ ಭಂಗ ಮಾಡಿದೆ. ಅದು ಚಿಕ್ಕ ತಪ್ಪಾದರೂ, ಆಧ್ಯಾತಿಮಿಕ ಸಾಧನೆಯಲ್ಲಿ ಅದು ದೊಡ್ಡ ತಪ್ಪೇ ಎಂದು ಶ್ರೀ ಸ್ವಾಮಿಯವರು ನನಗೆ ಒಂದು ದೃಶ್ಯದ ಮೂಲಕ ದರ್ಶನ ಮಾಡಿಸಿದರು ಎಂದು ತಿಳಿದುಕೊಂಡೆ. ಅಂದಿನಿಂದ ಶ್ರೀ ಸ್ವಾಮಿಯವರ ಕೃಪೆಯಿಂದ ಕಷ್ಟವಾದ ನಿಯಮಗಳನ್ನೂ ಸುಲಭವಾಗಿ ಅನುಸರಿಸಲು ಸಾಧ್ಯವಾಗುತ್ತಿದೆ.

ಆಧ್ಯಾತ್ಮಿಕ ಸಾಧನೆಯು ದೈವರಾಜ್ಯದ ಬಾಗಿಲು ತೆರೆಯುವ ಪ್ರಯತ್ನದಂತೆ. ಆ ಪ್ರಯತ್ನದಲ್ಲಿ ಒಂದು ಸಣ್ಣ ತಪ್ಪು ಮಾಡಿದರೂ ಅದು ತಪ್ಪೇ, ಮತ್ತು ಅಂತಹ ತಪ್ಪು ನಮ್ಮನ್ನು ಆ ಸಾಧನೆಗೆ ಅನರ್ಹರನ್ನಾಗಿ ಮಾಡುತ್ತದೆ ಎಂದು ಸ್ವಾಮಿಯವರು ಉಪದೇಶಿಸಿದ್ದಾರೆ. ಅಂದಿನಿಂದ ಎಷ್ಟೋ ದಿನಗಳಿಂದ ನಿಯಂತ್ರಿಸಲಾಗದ ಕೆಲವು ದೌರ್ಬಲ್ಯಗಳು ಅಳಿಸಿಹೋದವು. ಮಿಕ್ಕ ದೌರ್ಬಲ್ಯಗಳನ್ನು ಕೂಡಾ ಇದೇ ರೀತಿಯಲ್ಲಿ

ಸ್ವಾಮಿಯವರು ತೆಗೆದುಹಾಕಿ, "ನೀವು ನನ್ನನ್ನು ಬಿಟ್ಟರೂ, ನಾನು ನಿಮ್ಮನ್ನು ಬಿಡುವುದಿಲ್ಲ" ಎಂದು ಮಾಡಿದ ವಾಗ್ದಾನವನ್ನು ಪೂರ್ತಿ ಮಾಡುತ್ತಾರೆಂದು ನನ್ನ ವಿಶ್ವಾಸ. ನಮ್ಮ ಕಡೆಯಿಂದ ನಾವು ಸಂಪೂರ್ಣ ಭಕ್ತಿಯಿಂದ ಸ್ವಾಮಿಯವರನ್ನು ಪ್ರಾರ್ಥಿಸಿ, ಅವರ ಸೂಕ್ತಿಗಳನ್ನು ಆಚರಿಸುವುದೇ ನಮ್ಮ ಕರ್ತವ್ಯ. ಇಂತಹ ಆಚರಣೆಯನ್ನು ಶ್ರೀ ಸ್ವಾಮಿಯವರೆ ನಮಗೆಲ್ಲಾ ನೀಡಲಿ ಎಂದು ಪ್ರಾರ್ಥನೆ ಮಾಡೋಣ.

ಶ್ರೀ ಸ್ವಾಮಿಯವರ ಆಜ್ಞೆಯಂತೆ ನಾನು 1989 ವರ್ಷ, ನವಂಬರ್ ತಿಂಗಳ ವರೆಗೆ ಶ್ರೀ ಸ್ವಾಮಿಯವರ ಸಮಾಧಿಯ ಹತ್ತಿರ ನನ್ನ ಪತ್ನಿಯೊಡನೆ ಸಂಸಾರ ಮಾಡುತ್ತಾ ಪ್ರತಿದಿನ, 50 ಕಿ.ಮೀ ದೂರ ಹೋಗಿ ಉದ್ಯೋಗ ಮಾಡಿ ಬಂದು ರಾತ್ರಿಯವೇಳೆ ಶ್ರೀ ಸ್ವಾಮಿಯವರ ಸಮಾಧಿ ದರ್ಶನ ಮಾಡಿ ಅವರ ಸೇವೆ ಮಾಡುತ್ತಿದ್ದೆ. 03-11-1989 ರಿಂದ ಶ್ರೀ ಸ್ವಾಮಿಯವರ ಆಜ್ಞೆ ಪ್ರಕಾರ ಸ್ವಯಂ ನಿವೃತ್ತಿ ತೆಗೆದುಕೊಂಡು ಗೊಲಗಮೂಡಿಯಲ್ಲೇ ವಾಸಮಾಡುತ್ತಾ ಸ್ವಾಮಿಯವರ ಸೇವೆ ಮಾಡುತ್ತಿದ್ದೇನೆ.

ನಾನು ಕಲಿಚೇಡು ಬಿಟ್ಟು ಸ್ವಾಮಿಯವರ ಸನ್ನಿಧಿಯಲ್ಲಿ ಸಂಸಾರ ಮಾಡುತ್ತಿದ್ದ ದಿನಗಳಲ್ಲಿ ನನಗಿದ್ದ ಎರಡು ಸಮಸ್ಯೆಗಳ ಪರಿಹಾರಕ್ಕಾಗಿ ಸ್ವಾಮಿಯವರನ್ನು ಕೇಳಬೇಕೆಂದುಕೊಂಡೆ. ಸ್ವಾಮಿಯವರು, ಯಾವಾಗಲೂ ಅವರ ಮಾತುಗಳನ್ನು ಸಾಂಕೇತಿಕವಾಗಿ ತೋರಿಸುತ್ತಿದ್ದರು - ಇದು ನನ್ನ ಅನುಭವ. ಅವರ ಸಂಕೇತಗಳನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟವಾಗುತ್ತಿತ್ತು. ಆದರೆ, ಸಾಯಿನಾಥರು, ಬಹಳ ಸ್ಪಷ್ಟವಾಗಿ ತಮ್ಮ ಮಾತಿನ ಮೂಲಕ ತಿಳಿಸುತ್ತಾರೆಂದು ಯೋಚಿಸಿ, ನನ್ನ ಸಮಸ್ಯೆಗಳಿಗೆ ಪರಿಹಾರವನ್ನು ಕೇಳಲು ನಾನು ಶಿರಡಿಗೆ ಹೋಗಿ ಒಂದು ವಾರ ದೀಕ್ಷೆ ಮಾಡಿದೆ. ಸಾಯಿನಾಥರು ಕೂಡಾ ನನ್ನ ಸಮಸ್ಯೆಗಳಿಗೆ ಸಾಂಕೇತಿಕವಾಗಿ ಸಮಾಧಾನವನ್ನು ನೀಡಿ, "ಅಯ್ಯೋ ಹುಚ್ಚಪ್ಪಾ! ನನಗೂ ಸ್ವಾಮಿಯವರಿಗೂ ಏನೂ ಭೇದವಿಲ್ಲ. ನೀನು ಗೊಲಗಮೂಡಿಯಲ್ಲೇ ಇದ್ದು ಶ್ರೀ ಸ್ವಾಮಿಯವರನ್ನು ಯಾವುದೇ ಭೇದವಿಲ್ಲದೇ ಮನಸ್ಪೂರ್ತಿಯಾಗಿ ಆರಾಧಿಸು" ಎಂದು ಆತ್ಮಬೋಧನೆ ಮಾಡಿದರು. ಇದರಿಂದ ನಮಗೆಲ್ಲಾ ತಿಳಿಯುವ ವಿಷಯವೇನೆಂದರೆ, ತಾತ್ವಿಕವಾಗಿ, ಈ ಉಭಯ ಮಹನೀಯರ ಮಧ್ಯ ಯಾವುದೇ ಭೇದವಿಲ್ಲ. ಅದೂ ಅಲ್ಲದೇ ಇವರಿಬ್ಬರ ಮಧ್ಯೆ ಎಷ್ಟೋ ಗಾಢವಾದ ಅನುಬಂಧ ಇದೆ ಎಂಬುದು ನನ್ನ ನಂಬಿಕೆ.

ಹಾಗೆಯೇ ಶ್ರೀ ಸಾಯಿಯವರು ತಮ್ಮನ್ನು ಆಶ್ರಯಿಸಿದವರಿಗೆ ಅವರ ನಡತೆಯ ದೋಷಗಳನ್ನು ತೋರಿಸಿ ಅವರ ನಡತೆಯನ್ನು ಸರಿಪಡಿಸುತ್ತಿದ್ದರು - ಶ್ರೀ ಸ್ವಾಮಿ ಯಾವಾಗಲೂ ಮೌನವಾಗಿರುತ್ತಾರೆ ಆದರೆ ಶ್ರೀ ಸಾಯಿಯಂತೆ ಅವರು ನಮ್ಮ ತಪ್ಪುಗಳನ್ನು ಎತ್ತಿ ತೋರಿಸುವುದಿಲ್ಲ ಎಂದು ಭಾವಿಸುತ್ತಿದ್ದೆ. ಎರಡನೆಯದಾಗಿ, ಶ್ರೀ ಸ್ವಾಮಿಯವರು ಭೌತಿಕ ರೂಪದಲ್ಲಿ ಇಲ್ಲದಿದ್ದರಿಂದ ನಮ್ಮ ತಪ್ಪುಗಳನ್ನು ತೋರಿಸಿ ಶಿಕ್ಷಿಸಲು ಅವರಿಗೆ ಯಾವುದೇ ಮಾರ್ಗವಿಲ್ಲ ಎಂದು ನಾನು ಭಾವಿಸುತ್ತಿದ್ದೆ.

ಆದರೆ 1988 ಮೇ ತಿಂಗಳಲ್ಲಿ ನನಗೆ 15 ದಿನಗಳ ಕಾಲ ಶ್ರೀ ಸ್ವಾಮಿಯವರ ಸಮಾಧಿಯ ಪೂಜೆ ಮಾಡುವ ಭಾಗ್ಯ ಸಿಕ್ಕಿತು. ಆ ಸಮಯದಲ್ಲಿ ಸ್ವಾಮಿಯವರು,

ಯಾವಾಗಲೂ, ಎಲ್ಲ ವೇಳೆಯೂ ನಮ್ಮಹಿಂದೆ ನಿರಂತರವಾಗಿ ಇದ್ದು ನಮ್ಮ ದೋಷಗಳನ್ನು ಮಾತಿನಲ್ಲಿ ಹೇಳುವುದಕ್ಕಿಂತ, ಆತ್ಮಬೋಧನೆಯ ಮೂಲಕ ತಿಳಿಸುತ್ತಿರುತ್ತಾರೆಂದು ಮತ್ತು ನಮ್ಮ ತಪ್ಪುಗಳಿಗೆ ತಕ್ಷಣ ಶಿಕ್ಷೆಯಾಗುತ್ತದೆ ಎಂದು ನಾನು ತಿಳಿದುಕೊಂಡೆ. ಅಂದಿನ ದಿನವೇ ಅಲ್ಲ, ಇಂದಿನವರೆಗೂ, ನಮ್ಮಲ್ಲಿ ಯಾವ ಕೆಟ್ಟ ವಾಸನೆಗಳು ಬಂದರೂ, ಪರದೂಷಣೆ, ಸುಳ್ಳು ಹೇಳುವುದು, ಅಹಂಕಾರದಂತಹ ದುರ್ಗುಣಗಳು ಬಂದರೂ ತಕ್ಷಣವೇ ಸರಿಯಾದ ರೀತಿಯಲ್ಲಿ ಎಚ್ಚರಿಸುತ್ತಾರೆ. ಉದಾಹರಣೆಗೆ, ಈ ದುರ್ಗುಣಗಳು ತಲೆ ಎತ್ತಿದಾಗ, ಪೂಜೆ ಮಾಡುವ ಸಮಯದಲ್ಲಿ ಸಾಮ್ರಾಣಿ ಧೂಪ ಹಾಕಲು ಸರಿಯಾದ ಕೆಂಡ ಸಿಗುವುದಿಲ್ಲ. ಒಂದು ವೇಳೆ ಶ್ರಮಪಟ್ಟು ಕೆಂಡ ತರುವುದರೊಳಗೆ ಪೂಜೆ ಸಮಯ ದಾಟಿಹೋಗುತ್ತಿತ್ತು. ಕೆಲವೊಮ್ಮೆ ಪೂಜೆಯ ಕೋಣೆಯಲ್ಲಿ ಧೂಪ ಹಾಕಲು ಕೆಂಡ ತಯಾರಿಸಿಕೊಂಡರೆ, ಅದು ಆರಿ ಹೋಗುತ್ತಿತ್ತು. ಇನ್ನೂ ಕೆಲವೊಮ್ಮೆ ಪೂಜೆಯಲ್ಲೇ ಯಾವುದೋ ದೋಷ ಇರುತ್ತಿತ್ತು. "ಏಕೆ ಸ್ವಾಮಿ ಹೀಗಾಯಿತು" ಎಂದು ಮನಸ್ಸಿನಲ್ಲಿ ನಾನು ಯೋಚಿಸಿದಾಗ, "ಈಗ ನಿನಗಿದ್ದ ಅಹಂಕಾರಕ್ಕೆ ತಕ್ಕ ಶಿಕ್ಷೆ" ಎಂದು ತಿಳಿಸುತ್ತಿದ್ದರು. ಇಂದಿಗೂ ಸ್ವಾಮಿಯವರು ನಮ್ಮ ಸೇವೆಯನ್ನು ನಿರಾಕರಿಸುವ ಮೂಲಕ ನಮ್ಮನ್ನು ಎಚ್ಚರಿಸುತ್ತಾರೆ. ಅಂತಹ ದುರ್ಗುಣಗಳು ತಲೆ ಎತ್ತದಂತೆ ಕಾಪಾಡಿ ಎಂದು ಸ್ವಾಮಿಯವರನ್ನು ಸದಾ ಪ್ರಾರ್ಥಿಸುತ್ತಿರುತ್ತೇನೆ.

ಶ್ರೀ ಶಿರಿಡಿ ಸಾಯಿಬಾಬಾ ಚರಿತ್ರೆ ಓದಿದ ಮೇಲೆ ಅವರಂತೆ ಶ್ರೀ ವೆಂಕಯ್ಯಸ್ವಾಮಿಯವರು ಖಂಡ ಯೋಗ ಮಾಡಿದಂತೆ ಸಾಕ್ಷ್ಯಾಧಾರ ಇಲ್ಲವೇ ಎನ್ನುವುದು ನನ್ನನ್ನು ಬಹಳ ಸಮಯದಿಂದ ಕಾಡುತ್ತಿತ್ತು. ಇಂದಿಗೆ, ಸ್ವಾಮಿಯವರು ಆ ಕೊರತೆಯನ್ನು ತೀರಿಸಿದರು.

ಕಡಪ ಜಿಲ್ಲೆಯ, ಓಗೂರು ಪಕ್ಕದ ವಾಕಮಡ ಎಂಬ ಗ್ರಾಮ, ಬ್ರಾಹ್ಮಣಪಲ್ಲಿ ಮಂಡಲದಲ್ಲಿ ಇದ್ದ ಷೇಕ್ ರಹಮತುಲ್ಲಾರವರು, ಸ್ವಾಮಿಯವರಿಂದ ಅವರಿಗಾದ ಅನುಭವಗಳನ್ನು ಹೀಗೆ ವಿವರಿಸಿದರು - "ನನ್ನ ಬಲ ಮೊಣಕಾಲಿನ ಕೆಳಗಿದ್ದ ಮೂಳೆಗಳು ತೀವ್ರವಾಗಿ ನೋಯುತ್ತಿತ್ತು. ನಾಟಿ ವೈದ್ಯ, ಇಂಗ್ಲೀಷ್ ವೈದ್ಯ ಎಲ್ಲಾ ತರಹದ ಚಿಕಿತ್ಸೆಗಳನ್ನು ಮಾಡಿಸಿಕೊಂಡರೂ ಗುಣವಾಗಲಿಲ್ಲ. ಹಣ ಮಾತ್ರ ಸಾವಿರಾರು ಖರ್ಚಾದರೂ, ನನ್ನ ನೋವು ಮಾತ್ರ ಸ್ವಲ್ಪವೂ ಕಡಿಮೆ ಆಗಲಿಲ್ಲ. ನನ್ನ ಸ್ನೇಹಿತರ ಮೂಲಕ ಸ್ವಾಮಿಯವರ ವಿಚಾರ ತಿಳಿದು, ಕಡೆಯ ಪ್ರಯತ್ನ ಎಂದು ಪೆನ್ನಬದ್ವೇಲು ಗುಟ್ಟದ ಮೇಲೆ ಬಂದಿದ್ದ ಸ್ವಾಮಿಯವರ ದರ್ಶನಮಾಡಿದೆ. ಸ್ವಾಮಿಯವರು ತಮ್ಮ ಅಮೃತ ಹಸ್ತದಿಂದ ನನ್ನ ಕಾಲನ್ನು ಸ್ವಲ್ಪ ಹೊತ್ತು ಸರಿಪಡಿಸುವಂತೆ ಉಜ್ಜಿದರು. ಮೊದಲನೆಯ ದಿನವೇ ನನ್ನ ನೋವು ಸ್ವಲ್ಪ ಕಡಿಮೆ ಆಯಿತು. ಇಪ್ಪತ್ತು ದಿನಗಳ ಕಾಲ, ಶ್ರೀ ಸ್ವಾಮಿಯವರು ನನ್ನ ಕಾಲನ್ನು ಅದೇ ರೀತಿಯಲ್ಲಿ ಸ್ವಲ್ಪ ಹೊತ್ತು ಉಜ್ಜುತ್ತಿದ್ದರು. ಕೊನೆಗೆ, ಆ ನೋವು ಯಾವ ಔಷಧಿಯನ್ನು ಬಳಸದೇ ಸಂಪೂರ್ಣವಾಗಿ ಗುಣವಾಯಿತು. ನನಗೆ ಒಂದು ನೂತನ ಜೀವನವನ್ನು ಪ್ರಸಾದಿಸಿದ ಆ ಕರುಣಾಮೂರ್ತಿಯ ಋಣ ನಾನು ಎಂದಿಗೂ ತೀರಿಸಲು ಸಾಧ್ಯ ಆಗುವುದಿಲ್ಲ.

ಅಂದಿನ ದಿನ ಸ್ವಾಮಿಯವರಿದ್ದ ಆ ಜಾಗದಲ್ಲಿ ವಿದ್ಯುತ್ ಇರಲಿಲ್ಲ. ರಾತ್ರಿ ಜಲಬಾಧೆ ತೀರಿಸಲು ಎದ್ದಾಗ, "ಉಜ್ಜ್ವಲವಾಗಿ ಬೆಳಗುತ್ತಿದ್ದ ಅಗ್ನಿಕುಂಡ, ಅದರ ಬೆಳಕಿನಲ್ಲಿ ನನಗೆ ಕಂಡ ದೃಶ್ಯ ನೋಡಿ ಭಯಭ್ರಾಂತನಾಗಿ ನಡುಗಿದೆ. ಶ್ರೀ ಸ್ವಾಮಿಯವರ ಕೈಕಾಲುಗಳೆಲ್ಲ ತುಂಡಾಗಿ, ಕಾಲುಗಳು ಒಂದು ಜಾಗದಲ್ಲಿ, ಕೈಗಳು ಒಂದು ಜಾಗದಲ್ಲಿ, ತಲೆ, ಮುಂಡ ಮತ್ತು ಎಲ್ಲಾ ಅವಯವಗಳು ನೆಲದ ಮೇಲೆ ಬಿದ್ದಿದ್ದವು. ಆ ದೃಶ್ಯವನ್ನು ನೋಡಿದ ನಾನು ಭಯಭ್ರಾಂತನಾಗಿ, ನಡುಗುತ್ತಾ ಹತ್ತಿರದಲ್ಲಿದ್ದ ಗುಡಿಸಲಿನೊಳಗೆ ಓಡಿ ಹೋದೆ. ಅಲ್ಲಿ ಸ್ವಾಮಿಯವರು ಇರಲಿಲ್ಲ ಆದರೆ ಹತ್ತು ನಿಮಿಷಗಳಲ್ಲಿ ಅವರು ಅಗ್ನಿ ಕುಂಡದ ಬಳಿ ಕುಳಿತುಕೊಂಡಿದ್ದರು. ಅರ್ಧ ಘಂಟೆಯ ನಂತರ ಶ್ರೀ ಸ್ವಾಮಿಯವರು ಗುಡಿಸಲಿನೊಳಗೆ ನನ್ನ ಹತ್ತಿರ ಬಂದು "ಏಮಯ್ಯೋ ರಂತು ಸಾಯಿಬಾ! ನೀಕು ಲೋಕಂ ಕನಬಡಿಂದಿ ಗದಯ್ಯಾ! ಪ್ರೊದ್ದುನ್ನೇ ನೀವು ಮೀ ಗ್ರಾಮಂ ವೆಳ್ಳಿಪೋವಾಲಿ" (ಏನಯ್ಯೋ! ರಂತು ಸಾಯಿಬಾ! (ಷೇಕ್ ರಹಮತುಲ್ಲಾ ಅವರನ್ನ "ರಂತು ಸಾಹಿಬು(ಸಾಯಿಬಾ)" ಎಂದು ಸ್ವಾಮಿಯವರು ಕರೆದರು) ನಿನಗೆ ಲೋಕವೇ ಕಂಡಿತಲ್ಲವೇ! ಬೆಳಗಾಗುತ್ತಲೇ ನೀನು ನಿನ್ನ ಗ್ರಾಮಕ್ಕೆ ಹೊರಟು ಹೋಗು. ಇಲ್ಲಿ ಇರಬಾರದು) ಎಂದು ಪದೇ ಪದೇ ಹೇಳುತ್ತಾ ಚಾರ್ಜಿಗೆ ಹಣ ಕೊಟ್ಟು, 'ನಾಲ್ಕು ದಿನಗಳ ವರೆಗೆ ನೀನು ಇಲ್ಲಿ ಇರಬಾರದು' ಎಂದು ಆತುರ ಪಡಿಸಿ ನನ್ನ ಗ್ರಾಮಕ್ಕೆ ಕಳುಹಿಸಿಬಿಟ್ಟರು. ನಾನು ನೋಡಿದ ಖಂಡ ಯೋಗದ ವಿಚಾರ ಎಲ್ಲರಿಗೂ ಹೇಳುತ್ತೇನೆಂದು ಸ್ವಾಮಿಯವರು ನನ್ನನ್ನು ಕಳುಹಿಸಿಬಿಟ್ಟರು.

ಐದನೇ ದಿನ ನಾನು ಶ್ರಿ ಸ್ವಾಮಿಯವರ ಬಳಿ ಬಂದು ನಿದ್ರಿಸಿದೆ. ಬೆಳಗಾಗುತ್ತಲೇ "ಅಯ್ಯಾ! ರಂತುಸಾಯಿಬಾ! ಮೀ ತಮ್ಮುನಿ ಚೆಯ್ಯಿ ವಿರಿಗಿಂದಿ. ಕಟ್ಟು ಕಟ್ಟಿನಾರು, ಅದೇಮೀ ಚೇಯದುಲೇ ಪೋಯ್ಯಾ! (ಅಯ್ಯಾ! ರಂತುಸಾಹಿಬಾ! ನಿನ್ನ ತಮ್ಮನ ಕೈ ಮುರಿದಿದೆ. ಕಟ್ಟು ಕಟ್ಟಿದ್ದಾರೆ, ಅದು ಏನೂ ಆಗುವುದಿಲ್ಲ ನೀನು ಹೋಗಯ್ಯಾ) ಎಂದರು. ನಾನು ನನ್ನ ಗ್ರಾಮಕ್ಕೆ ಹೋಗಿ ವಿಚಾರಿಸಿದಾಗ ಶ್ರೀ ಸ್ವಾಮಿಯವರ ಮಾತು ಅಕ್ಷರಶಃ ನಿಜವಾಯಿತು. ನನ್ನ ತಮ್ಮ ಮೇಕೆಗಳಿಗೆ ಎಲೆ ಕುಯ್ಯುವುದಕ್ಕೆ ಮರ ಹತ್ತಿ, ಬಿದ್ದು ಕೈ ಮುರಿದುಕೊಂಡನು. ಅದಕ್ಕಾಗಿ, ಅವನ ಕೈಗೆ ಕಟ್ಟು ಕಟ್ಟಿದ್ದರು. ಶ್ರೀ ಸ್ವಾಮಿಯವರ ಆಶೀರ್ವಾದದಿಂದ ಸ್ವಲ್ಪ ದಿನಗಳಲ್ಲೇ ಯಾವ ಚಿಕಿತ್ಸೆ ಇಲ್ಲದೇ ಮುರಿದ ಕೈ ಸರಿಹೋಯಿತು.

<u>ಅವಧೂತ ಶ್ರಿ ವೆಂಕಯ್ಯಸ್ವಾಮಿಯವರಲ್ಲಿ ದರ್ಶಿಸಿದ ಸತ್ಯಗಳು :(ರಚ್ಚಿತ ಶ್ರೀ ಪೆಸಲ ಸುಬ್ಬರಾಮಯ್ಯನವರು)</u>

ಶ್ರಿ ಸ್ವಾಮಿಯವರು ತಲಪೂರಿನಲ್ಲಿ ಇದ್ದರು. ಅವರು ಬಿಡದಿ ಮಾಡಿದ ಜಾಗದಲ್ಲಿ ಆದಿನ ವಿದ್ಯುತ್ ದೀಪಗಳು ಇರಲಿಲ್ಲ. ಒಂದು ಲಾಟೀನು ತೂಗಿ ಹಾಕಿದ್ದರು. ರಾತ್ರಿ ಹತ್ತು ಘಂಟೆಯ ಸಮಯದಲ್ಲಿ ಸ್ವಾಮಿಯವರು, "ಅಯ್ಯಾ! ಇದು ಹಗಲಾ, ರಾತ್ರಿಯಾ" ಎಂದು ಕೇಳಿದರು. ಸೇವಕರು "ಸ್ವಾಮೀ! ಲಾಟೀನು ಬೆಳಕು ಅಷ್ಟು ಚೆನ್ನಾಗಿ ಕಾಣಿಸುತ್ತಿದೆ. ರಾತ್ರಿಯಾ-ಹಗಲಾ ಎಂದು ಕೇಳುತ್ತಿದ್ದೀರಲ್ಲಾ" ಎಂದು ನಕ್ಕುಬಿಟ್ಟರು.

ಇನ್ನೊಂದು ದಿನ ಶ್ರೀ ಸ್ವಾಮಿಯವರು, "ಅಯ್ಯಾ! ಇದು ಯಾವ ಊರು?" ಎಂದು ಕೇಳಿದರು. ಆಗ ಅದು ಸಂಜೆಯ ವೇಳೆ. ಸೇವಕರು, "ಸ್ವಾಮೀ! ನಿಮಗೆ ಇದು

ಯಾವ ಊರೆಂದೂ ತಿಳಿಯುತ್ತಿಲ್ಲವೇ? ಇದು ತಲಪೂರಲ್ಲವೇ ಸ್ವಾಮಿ! ಎಂದು ಎಲ್ಲರೂ ನಕ್ಕಬಿಟ್ಟರು. ಇದರಿಂದ, ಸ್ವಾಮಿಯವರು ರಾತ್ರಿ, ಹಗಲು ಭೇದವಿಲ್ಲದೆ, ಯಾವ ಗ್ರಾಮ ಎಂದು ಪರಿಸರನೋಡಿ ತಿಳಿದು ಕೊಳ್ಳುವ ಸ್ಥಿತಿಯಲ್ಲಿರಲಿಲ್ಲ ಎಂದು ನಮಗೆ ತಿಳಿಯಿತು.

ಹಾಗೆಯೇ ಶ್ರೀ ರಾಮಕೃಷ್ಣ ಪರಮಹಂಸರೂ "ಇವತ್ತು ಹುಣ್ಣಿಮೆಯಾ? ಅಮವಾಸ್ಯೆಯಾ?" ಎಂದು ಕೇಳಿದರು. ಅವಧೂತ ಸ್ಥಿತಿಯನ್ನು ಗುರುತಿಸದೇ ಮುಗ್ಧ ಸೇವಕರು ನಕ್ಕು ಬಿಟ್ಟರು.

ಒಮ್ಮೆ ಒಬ್ಬ ಸೇವಕ, "ಕೋಪ ಹೇಗೆ ಹೋಗುತ್ತದೆ ಸ್ವಾಮೀ?" ಎಂದು ಕೇಳಿದಾಗ, ಸ್ವಾಮಿಯವರು, "ಹಗಲು, ರಾತ್ರಿ ಎಂದು ಭೇದ ತಿಳಿಯದೆ ಹೋದಾಗ ಕೋಪ ಹೋಗುತ್ತದೆ" ಎಂದರು. ಆ ಭೇದ ತಿಳಿಯದೇ ಹೋಗಲು ಏನು ಮಾಡಬೇಕೆಂದು ಆ ಸೇವಕ ಕೇಳಲಿಲ್ಲ.

ಒಂದು ಬೇಸಿಗೆಯದಿನ, ಏಪ್ರಿಲ್ ತಿಂಗಳು, ಸ್ವಾಮಿಯವರು ತಲುಪೂರಿನಲ್ಲಿ ಮಸ್ತಾನಯ್ಯನವರ ಮನೆಯಲ್ಲಿ ಬಿಡದಿ ಮಾಡಿದ್ದರು. ಮಸ್ತಾನಯ್ಯನವರ ಮನೆ, ಊರಿನ ಕೊನೆಯಲ್ಲಿ ಪೂರ್ವ ದಿಕ್ಕಲ್ಲಿ ಇತ್ತು. ಆ ಮನೆಯ ಮುಂದೆ ಚಿಕ್ಕ ಚಿಕ್ಕ ಗಿಡಗಳು ಬಿಟ್ಟರೆ ಬೇರೆ ಯಾವ ನೆರಳು ಕೊಡುವ ಮರಗಳಿರಲಿಲ್ಲ. ಶ್ರೀ ಸ್ವಾಮಿಯವರು ಅಲ್ಲಿ ಒಂದು ಜಾಗದಲ್ಲಿ ಅಗ್ನಿ ಕುಂಡ ಸ್ಥಾಪಿಸಿ ಕುಳಿತಿದ್ದರು. ಮಧ್ಯಾಹ್ನ ಎರಡು ಘಂಟೆಯ ಸಮಯದಲ್ಲಿ ನಾನು ಮತ್ತು ನನ್ನ ಸ್ನೇಹಿತ ಶ್ರೀ ಟಿ.ವಿ.ಶೇಷಗಿರಿರಾವು ಇಬ್ಬರೂ ಶ್ರೀ ಸ್ವಾಮಿಯವರ ದರ್ಶನಕ್ಕೆ ಬಂದೆವು. ಹತ್ತು ನಿಮಿಷದಲ್ಲಿ ನನ್ನ ರಬ್ಬರ್ ಚಪ್ಪಲಿ ಬಿಸಿಯಾಗಿ, ಅದರ ಮೇಲೆ ನಿಲ್ಲುವುದಕ್ಕೆ ಸಾಧ್ಯವಾಗಲಿಲ್ಲ. ಶೇಷಗಿರಿರಾವುಅವರು ದೂರದಲ್ಲಿದ್ದ ಬೇವಿನ ಮರದ ಕೆಳಗೆ ನಿಲ್ಲಲು ಹೋದರು. ನಾನು ಕರಿ ಜಾಲಿ ಮರದ ಕೆಲವು ಕೊಂಬೆಗಳು ನನ್ನ ಚಪ್ಪಲಿಯ ಕೆಳಗೆ ಹಾಕಿ ಹಾಗೆಯೇ ನೋಡುತ್ತಾ ಕುಳಿತುಕೊಂಡುಬಿಟ್ಟೆ.

ಪೂರ್ವದಿಕ್ಕಿನಲ್ಲಿಮುಖಮಾಡಿಕೊಂಡು ಕುಳಿತಿದ್ದ ಸ್ವಾಮಿಯವರು, ಅಗ್ನಿಯನ್ನು ಪ್ರಜ್ವಲಗೊಳಿಸುತ್ತಾ, ಕೋಲಿನಿಂದ ಚಕ್ಕೆಗಳನ್ನು ಸರಿಮಾಡುತ್ತಾ, ಅಗ್ನಿಯ ಹತ್ತಿರವೇ ಕುಳಿತಿದ್ದರು. ಅವರ ಶರೀರದ ಮೇಲೆ ಕೌಪೀನ ಬಿಟ್ಟು ಬೇರೆ ಯಾವ ಬಟ್ಟೆಯೂ ಇರಲಿಲ್ಲ. ಶರೀರದಿಂದ ಬೆವರು ಸುರಿಯುತ್ತಿತ್ತು. ಶರೀರವೆಲ್ಲಾ ಮಸಿಯ ಕಲೆಗಳು, ಮುಖವೆಲ್ಲಾ ಬೂದಿ, ಮತ್ತು ಮಸಿಯ ಕಲೆಗಳಿಂದ ತುಂಬಿತ್ತು. ಆದರೆ ಅವರು ಉರಿಯನ್ನು ಜೋರಾಗಿ ಉರಿಯುವಂತೆ ಮಾಡುತ್ತಾ ಅಗ್ನಿ ಕುಂಡದ ಸಮೀಪದಲ್ಲೇ ಕುಳಿತಿದ್ದರು. ನಾನು ಎಷ್ಟೋ ದೂರದಲ್ಲಿ, ಕಾಲಿಗೆ ಚಪ್ಪಲಿ, ಚಪ್ಪಲಿಯ ಕೆಳಗೆ ಜಾಲಿ ಮರದ ಕೊಂಬೆಗಳು ಹಾಕಿ, ನನ್ನ ತಲೆಯ ಮೇಲೆ ಬಟ್ಟೆ ಹೊದ್ದಿಕೊಂಡಿದ್ದರೂ, ನನಗೆ ಆ ಬಿಸಿಲಿನ ತೀವ್ರತೆ ತಡೆಯಲಾಗಲಿಲ್ಲ. ಆದರೆ, ಶ್ರೀ ಸ್ವಾಮಿಯವರು ಆ ಪ್ರಜ್ವಲಿಸುತ್ತಿರುವ ಉರಿಗೆ ಬಹಳ ಹತ್ತಿರದಲ್ಲಿ ಹೇಗೆ ಕುಳಿತಿದ್ದಾರೆ ಎಂದು ಆಲೋಚಿಸುತ್ತಾ ಆಶ್ಚರ್ಯ ಪಡುತ್ತಿದ್ದೆ. ಆದಿನ, ಅದು ಅವಧೂತ ಸ್ಥಿತಿ ಎಂದೂ, ಹಾಗೆ ಇರಬಹುದೆಂಬುದು ಅವರ ಹಿರಿಮೆ ಅಂತ ಗೊತ್ತಿರಲಿಲ್ಲ.

ಅವಧೂತ ಲೀಲೆ

ಅಧ್ಯಾಯ - 29

ಮಹಾಸಮಾಧಿಯ ನಂತರ ಲೀಲೆಗಳು

"ಸೂರ್ಯಚಂದ್ರುಲುನ್ನಂತವರಕೂ ಉಂಡೇದೇ ಗದಯ್ಯಾ" (ಸೂರ್ಯಚಂದ್ರರು ಇರುವವರೆಗೆ ಇರುವುದೇ ಅಲ್ಲವೇನಯ್ಯಾ) ಎಂದು ಶ್ರಿ ಸ್ವಾಮಿಯವರು ಅಭಯ(ವಾಗ್ದಾನ) ನೀಡಿದರು. ಅವರು ನೀಡಿದ ವಾಗ್ದಾನ ಅಕ್ಷರಶಃ ನಿಜ ಎಂದು ಅವರ ಮಹಾಸಮಾಧಿಯ ನಂತರ ನಡೆಯುತ್ತಿರುವ ಲೀಲೆಗಳು ಮೂಲಕ ಅದು ಸಾಬೀತಾಗುತ್ತಿದೆ. **ಶ್ರೀ ಸ್ವಾಮಿಯವರನ್ನು ಸಂಪೂರ್ಣವಾಗಿ ಆಶ್ರಯಿಸಿದವರಿಗೆ, ಈ**

126 **ಮಹಾತ್ಮರು ಪರಿಪೂರ್ಣ ಆತ್ಮ ಜ್ಞಾನವನ್ನು ಪಡೆಯುವವರೆಗೆ ಅವರನ್ನು ರಕ್ಷಿಸುತ್ತಲೇ ಇರುತ್ತಾರೆ.**

ಅವರು ಭೌತಿಕ ಶರೀರದಲ್ಲಿದ್ದಾಗ ತಮ್ಮ ಮಹಿಮೆಗಳನ್ನು ಎಷ್ಟೋ ಗುಟ್ಟಾಗಿ ಇಟ್ಟಿದ್ದರು. ಅವರು ದೇಹತ್ಯಾಗ ಮಾಡಿದ ನಂತರ ಅವರ ಮಹಿಮೆಗಳನ್ನು ದಶ ದಿಕ್ಕುಗಳಲ್ಲಿಯೂ ಹರಡುವಹಾಗೆ ಮಾಡುತ್ತಾ, ಅವರು ತಮ್ಮ ಬಗ್ಗೆ ತಿಳಿದಿಲ್ಲದ ಹೊಸ ಜನರಿಗೆ ಕೂಡ ಸ್ವಪ್ನದರ್ಶನ ಕೊಟ್ಟು, ಗೊಲಗಮೂಡಿಯಲ್ಲಿರುವ ಅವರ ಸಮಾಧಿಯ ದರ್ಶನ ಮಾಡಿ ಎಂದು ಅದೇಶಿಸುತ್ತಿದ್ದಾರೆ. ಇಂದು ಅವರು ಭಕ್ತರಿಗೆ ಮೊದಲಿಗಿಂತ ಸುಲಭವಾಗಿ ಲಭ್ಯವಾಗುತ್ತಿದ್ದಾರೆ. ಒಮ್ಮೆ ಸ್ವಾಮಿಯ ಕಾಲಿಗೆ ಮೂಳೆ ಸವೆದು ಕಾಲು ಹಿಡಿದಹಾಗೆ ಆಗಿ, ನಡೆಯಲು ಸಾಧ್ಯವಾಗದೇ ಇದ್ದಾಗ, ಔಷಧಿ ತೆಗೆದುಕೊಳ್ಳಿ ಎಂದು ಹೇಳಿದ ಭಕ್ತರಿಗೆ, ಸ್ವಾಮಿಯವರು, "ಅಟ್ಲಾ ಮಂದು ತೀಸುಕುಂಟೇ ಮನಮೊಚ್ಚಿನ ಪನಿ ನಿಲಿಚಿಪೋತುಂದಿ" (ಔಷಧಿ ಸೇವಿಸಿದರೆ ನಾವು ಬಂದ ಕೆಲಸ ನಿಂತು ಹೋಗುತ್ತದೆ) ಎಂದು ಹೇಳಿದರು. ಆ ಕೆಲಸ ಏನು ಎಂಬುದು ನಮಗೆ ಆದಿನ ಅರ್ಥ ಆಗಲಿಲ್ಲ. ಆದರೆ, ಈಗ, ದೀನಜನ ರಕ್ಷಣೆಗಾಗಿ ಅವರ ಅವತಾರ ಕಾರ್ಯ ಎಂದು ಅರ್ಥವಾಗುತ್ತಿದೆ. ತಮ್ಮ ಸಮಾಧಿಯನ್ನು ದರ್ಶನ ಮಾಡಿದ ಪ್ರತಿಯೊಬ್ಬರ ಕಷ್ಟ, ಸಮಸ್ಯೆ ನಿವಾರಣೆ ಆಗುವುದೇ ಒಂದು ತಾರ್ಕಾಣ.

20-08-1983 ರಲ್ಲಿ ಶ್ರೀ ರಾಮಯ್ಯನವರು ತೋಟದಲ್ಲಿ ಒಂದು ಗುಡಿಸಲಿನಲ್ಲಿ ವಾಸಮಾಡುತ್ತಿದ್ದರು. ಶ್ರೀ ಸ್ವಾಮಿಯವರು ತಮ್ಮ ತಲೆಯಮೇಲೆ ಒಂದು ವಸ್ತ್ರ ಹಾಕಿಕೊಂಡಹಾಗೆ ದರ್ಶನ ಕೊಟ್ಟರು. "ಅಕ್ಕಡಂತ ಪನಿ ಜರುಗುತುಂಟೇ ಇಕ್ಕಡ ಕೂರ್ಚುನಿ ತಂಬುರ ಮೀಟುತುನ್ನಾವಾ?" (ಅಲ್ಲಿ ಅಷ್ಟು ಕೆಲಸಗಳು ನಡೆಯುತ್ತಿದ್ದರೆ ಇಲ್ಲಿ ತಂಬೂರಿಯನ್ನು ಮೀಟುತ್ತಾ ಕುಳಿತಿದ್ದೀಯಾ) ಎಂದು ಅವರ ಎರಡೂ ಕೈಗಳು ವಕ್ರವಾಗಿ ತೋರಿಸುತ್ತಾ ಸನ್ನೆ ಮಾಡುತ್ತಿದ್ದವು. ಬೆಳಗಾದಮೇಲೆ ರಾಮಯ್ಯ ಗೊಲಗಮೂಡಿಗೆ

ಹೋದರೆ ಅಲ್ಲಿ ನಡೆಯುತ್ತಿದ್ದ ಆರಾಧನೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ, ಎರಡು ತಿಂಗಳೂ ಆಶ್ರಮದಲ್ಲೇ ಇದ್ದುಬಿಟ್ಟರು.

20-04-1984 ರಲ್ಲಿ ಶ್ರೀ ರಾಮಯ್ಯನವರು ನಾಗುಲವೆಲ್ಲಟುರಿಂದ ಆಶ್ರಮಕ್ಕೆ ಬಂದರು. ಪ್ರತಿದಿನ, ಅನಿಕೇಪಲ್ಲಿಯಿಂದ ಆಶ್ರಮಕ್ಕೆ ಭಿಕ್ಷಾನ್ನ ತರುತ್ತಿದ್ದರು. ಇವರು 10 ದಿನಗಳು ಸ್ವಗ್ರಾಮಕ್ಕೆ ಹೋದಾಗ, ಸುಬ್ಬರಾಯುಡು ಎಂಬ ಅನ್ಯ ಭಕ್ತ ಭಿಕ್ಷೆ ತರುತ್ತಿದ್ದರು. ಶ್ರೀ ರಾಮಯ್ಯ ಹತ್ತು ದಿನಗಳನಂತರ ಆಶ್ರಮಕ್ಕೆ ಹಿಂತಿರುಗಿದ ಮೇಲೆ, ತನ್ನ ದಿನಚರಿಯ ಪ್ರಕಾರ ಭಿಕ್ಷೆಗೆ ಹೋಗುವುದು ಪುನಃ ಪ್ರಾರಂಭಿಸಿರಬೇಕಾಗಿತ್ತು. ಆದರೆ, ಸ್ವಲ್ಪ ಸೋಮಾರಿತನದಿಂದ, ಇನ್ನೂ ನಾಲಕ್ಕು ದಿನಗಳು ಸುಬ್ಬಾರಾಯುಡುನೇ ಹೋಗಲಿ ಎಂದು ಸ್ವಾಮಿಯವರ ಸ್ಮರಣೆ ಮಾಡುತ್ತಾ ಕುಳಿತುಬಿಟ್ಟರು. ತಕ್ಷಣವೇ ಸ್ವಾಮಿಯವರು ತಲೆಯಮೇಲೆ ಮುಸುಕು ಹಾಕಿಕೊಂಡು, ತಮ್ಮ ಮುಸುಕನ್ನು ಶ್ರೀ ರಾಮಯ್ಯನಿಗೆ ತೋರಿಸುತ್ತಾ, ಅಪಹಾಸ್ಯ ಮಾಡುತ್ತಿರುವಂತೆ ಅವನ ಮನೋನೇತ್ರಕ್ಕೆ ಕಾಣಿಸಿತು. "ಭಿಕ್ಷಕು ಪೋಕುಂಡಾ ಮುಸುಗೇಸುಕೊನಿ ಮೂಲಕೂರ್ಚೋ" (ಭಿಕ್ಷೆಗೆ ಹೋಗದೆ ಮುಸುಕು ಹಾಕಿಕೊಂಡು ಮೂಲೆಯಲ್ಲಿ ಕೂತುಕೋ) ಎಂದು ಸ್ವಾಮಿಯವರು ಹೇಳುತ್ತಿದ್ದಹಾಗೆ ಅವರಿಗೆ ಆತ್ಮಬೋಧನೆ ಆಯಿತು. ತಕ್ಷಣ ತಪ್ಪಾಯಿತೆಂದು ಕೆನ್ನೆಗೆ ಹೊಡೆದುಕೊಂಡು ಭಿಕ್ಷೆಗೆ ಹೊರಟರು.

ಕನ್ನವರಂ ರಾಜಯ್ಯನವರು, ಡಿಸೆಂಬರ್ 1984 ರಲ್ಲಿ ಒಂದು ವಾರ ಜ್ವರದಿಂದ ಬಳಲುತ್ತಿದ್ದರು. ಆಹಾರ ಸಹಿಸದೇ, ಬಹಳ ಬಲಹೀನರಾಗಿ, ಸಾಯುತ್ತೇನೆ ಎಂದು ಭಯ ಪಟ್ಟರು. ಆ ರಾತ್ರಿ, ಅವರು ಸ್ವಾಮಿಯವರಿಗೆ ತಾನು ಅನುಭವಿಸುತ್ತಿದ್ದದ್ದನ್ನು ಹೇಳಿಕೊಂಡು ಮಲಗಿದರು. ಅವರಿಗೆ ಸ್ವಾಮಿಯವರು ಸ್ವಪ್ನದಲ್ಲಿ ತಂಬೂರಿಯನ್ನು ಮೀಟುತ್ತಾ ದರ್ಶನ ನೀಡಿದರು. ಆ ಸ್ವಪ್ನದಲ್ಲಿ, ರಾಜಯ್ಯ ಸ್ವಾಮಿಯವರ ಮುಂದೆ ಕುಳಿತುಕೊಂಡಾಗ, ಸ್ವಾಮಿಯವರು, "ಎಪ್ಪುಡೂ ನೀ ವಿಷಯಂ ನಾಕು ಬಾಧೇನಯ್ಯಾ.. ಇದಿಗೋ ತಂಬೂರ ಪಟ್ಟುಕೋ"(ಯಾವಾಗಲೂ ನಿನ್ನ ವಿಷಯ ನನಗೆ ಸಂಕಟವೇನಯ್ಯಾ! ತಂಬೂರಿ ಹಿಡುಕೋ) ಎಂದು ತಂಬೂರಿಯನ್ನು ಕೊಟ್ಟರು. ತಕ್ಷಣ ಎಚ್ಚರ ಆಯಿತು. ಒಂದು ವಾರ ನಿರಂತರವಾಗಿ 104 degrees ಇದ್ದ ಜ್ವರ, ಪೂರ್ತಿಯಾಗಿ ಕಡಿಮೆಯಾಗಿ ಶರೀರವೆಲ್ಲಾ ಮಂಜು ಗಡ್ಡೆಯಾಗಿತ್ತು. ತುಂಬಾ ಹಸಿದಿದ್ದು, ತಕ್ಷಣ ಹಾಲು ಕುಡಿದು, ಬೆಳಗಾದ ಮೇಲೆ, ಅವರು ಸಾಮಾನ್ಯವಾಗಿ ಅನ್ನ ಊಟ ಮಾಡಲು ಪ್ರಾರಂಭಿಸಿದರು.

ಪೆನವರ್ತಿ ಎನ್ನುವ ಗ್ರಾಮಕ್ಕೆ ಸೇರಿದ, ಪೋಲು ಮಸ್ತಾನಯ್ಯನವರು 1983 ರಲ್ಲಿ ನೆಲ್ಲೂರಿನಲ್ಲಿ ತರಕಾರಿ ಖರೀದಿಸಿ ಸ್ವಾಮಿಯವರ ಆರಾಧನೆಗೆಂದು ರಿಕ್ಷಾದಲ್ಲಿ ಹಾಕಿಕೊಂಡು ಸ್ವಲ್ಪ ದೂರ ಬಂದರು, ಅವರು ಮಾರುಕಟ್ಟೆಯಲ್ಲಿ ಒಂದು ಚೀಲ ಮರೆತರೆಂದು ಅವರು ಅರಿತುಕೊಂಡು, ರಿಕ್ಷವನ್ನು ರಸ್ತೆಯ ಪಕ್ಕದಲ್ಲಿ ನಿಲ್ಲಿಸಿ, ಚೀಲ ತರಲು ಮತ್ತೆ ಮಾರುಕಟ್ಟೆಗೆ ಹೋದರು. ವಾಪಸ್ಸು ಬಂದಾಗ ರಿಕ್ಷಾ ಎಲ್ಲೂ ಕಾಣಲಿಲ್ಲ. ಸುತ್ತಲೂ ಹುಡುಕಿದರೂ ಕಾಣಲಿಲ್ಲ. 1 1/2 ಗಂಟೆಗಳ ನಂತರ ಆ ರಿಕ್ಷಾ ಸವಾರ ವಾಪಸ್ಸು ಬಂದ. "ಎಲ್ಲಿಗೆ ಹೋಗಿದ್ದೆ?" ಎಂದು ಕೇಳಿದಾಗ, ಅವನು ದೀನ ಧ್ವನಿಯಲ್ಲಿ "ಸ್ವಾಮಿ

ಬುದ್ದಿಗೆಟ್ಟು ರಿಕ್ಷಾ ಮುಂದೆ ಓಡಿಸಿಕೊಂಡು ಹೋದೆ. ಸ್ವಲ್ಪ ದೂರ ಹೋದಮೇಲೆ ರಿಕ್ಷಾ ತುಳಿಯಲು ಶಕ್ತಿಯಿಲ್ಲದಂತಾಯಿತು, ಕಣ್ಣು ಕಾಣಲಿಲ್ಲ, ಎಷ್ಟು ಪ್ರಯತ್ನ ಮಾಡಿದರೂ ಏನೂ ಲಾಭವಾಗಲಿಲ್ಲ. ಮಾಡಿದ ತಪ್ಪಿಗೆ ನನ್ನನ್ನು ಕ್ಷಮಿಸಿ" ಎಂದು ಬೇಡಿಕೊಂಡ. ಇದರಿಂದ ಸ್ವಾಮಿಯವರು ಸಜೀವರು ಎಂದು ತಿಳಿಯುತ್ತದೆ.

ಮಾರ್ಚಿ 1983 ರಲ್ಲಿ ಗೊಲಗಮೂಡಿಯ ಕಾಕುರಾಗಯ್ಯನವರ ಕರು ತಪ್ಪಿಸಿಕೊಂಡಿತ್ತು. ಒಂದು ತಿಂಗಳು ಹುಡುಕಿದರೂ ಸಿಕ್ಕಲಿಲ್ಲ. ಆ ರಾತ್ರಿ ಸ್ವಪ್ನದಲ್ಲಿ ಇವರು ಸ್ವಾಮಿಯವರ ಹಿಂದೆ ನಡೆಯುತ್ತಾ ಇಬ್ಬರೂ ಗೊಲಗಮೂಡಿಗೆ ಪೂರ್ವದಿಕ್ಕಲ್ಲಿದ್ದ ಗ್ರಾಮಕ್ಕೆ ಹೋದರು. ಆ ಊರಲ್ಲಿ ಒಂದು ಹಸುಗಳ ದೊಡ್ಡಿ ಇರುವ ಜಾಗಕ್ಕೆ ಹೋದರು. ಆ ದೊಡ್ಡಿಯಲ್ಲಿ ಸಗಣಿ ದಿಬ್ಬದ ಮೇಲೆ ಆ ಕರು ನಿಂತಿತ್ತು. ತಕ್ಷಣ ರಾಗಯ್ಯನಿಗೆ ಎಚ್ಚರ ಆಯಿತು. ಬೆಳಗಾಗುತ್ತಲೇ ಗೊಲಗಮೂಡಿಗೆ ನೇರವಾಗಿ ಪೂರ್ವದಿಕ್ಕಲ್ಲಿದ್ದ ಪೆನವರ್ತಿ ಗ್ರಾಮಕ್ಕೆ ಹೋಗಿ ಅವರ ಸ್ವಪ್ನ ದಲ್ಲಿ ಕಂಡ ಆ ಹಸುಗಳ ದೊಡ್ಡಿಗೆ ಹೋದರೇ, ಅಲ್ಲಿ ಆ ಕರು ಸ್ವಪ್ನದಲ್ಲಿ ಕಂಡಹಾಗೆ ಸಗಣಿಯ ದಿಬ್ಬದ ಮೇಲೆ ನಿಂತಿತ್ತು.

1983 ರಲ್ಲಿ ರಾಯಿ ಲಕ್ಷ್ಮೀನರಸಾರೆಡ್ಡಿ (ಗೋನುಪಲ್ಲಿ - ಪೆನವರ್ತಿ) ಅವರ 2 ಎತ್ತುಗಳು ತಪ್ಪಿಹೋಗಿದ್ದವು. ಒಂದು ತಿಂಗಳು ಹುಡುಕಿದರೂ ಸಿಕ್ಕಲಿಲ್ಲ. ರೆಡ್ಡಿಯವರ ಪತ್ನಿ ಒಂದು ರಾತ್ರಿ "ಸ್ವಾಮೀ! ವ್ಯವಸಾಯ ಹೇಗೆ ಮಾಡುವುದು? ಕುಟುಂಬವನ್ನು ಹೇಗೆ ಪೋಷಿಸುವುದು?" ಎಂದು ಕಣ್ಣೀರಿಡುತ್ತಾ ಸ್ವಾಮಿಯವರ ಪಟಕ್ಕೆ ಹೇಳಿಕೊಂಡು ನಮಸ್ಕರಿಸಿ ಮಲಗಿ ಕೊಂಡರು. ಆ ರಾತ್ರಿ ಶ್ರೀ ಸ್ವಾಮಿಯವರು ಸ್ವಪ್ನದಲ್ಲಿ ದರ್ಶನ ಕೊಟ್ಟರು. ಅವರ ಮೊಣಕಾಲಿನ ಕೆಳ ಭಾಗದಲ್ಲೆಲ್ಲಾ ಮುಳ್ಳುಚುಚ್ಚಿ ರಕ್ತ ಸುರಿಯುತ್ತಿತ್ತು. ಸ್ವಾಮಿಯವರು "ನೀ ಎದ್ದುಲು ತೋಲುಕುವಚ್ಚೇಸರಿಕಿ ಚೂಡಮ್ಮಾ ನಾ ಕಾಳ್ಳಕು ನೆತ್ತುರೆಲಾಕಾರುತುನ್ನದೋ?" (ನಿನ್ನ ಎತ್ತುಗಳನ್ನು ಕರೆದುಕೊಂಡು ಬರುವುದರಲ್ಲಿ ನೋಡಮ್ಮ ಹೇಗೆ ನನ್ನ ಕಾಲಿನಲ್ಲಿ ರಕ್ತ ಬರುತ್ತಿದೆಯೋ) ಎಂದರು. ಆಕೆಗೆ ಎಚ್ಚರವಾಗಿ, ಬಾಗಿಲು ತೆಗೆದು ನೋಡಿದರೇ ನಿಜವಾಗಿಯೂ ಎತ್ತುಗಳು ನಿಂತಿದ್ದವು. ಅವುಗಳ ಶರೀರದಮೇಲೆ ಕೂಡಾ ಮುಳ್ಳು ಚುಚ್ಚಿ ರಕ್ತ ಸುರಿಯುತ್ತಿತ್ತು.

ಗೊಲಗಮೂಡಿಯ ನಿವಾಸಿ ಪನಬಾಕ ಸುಬ್ಬರಾಮಯ್ಯ 1984 ರಲ್ಲಿ ಸ್ನೇಹಿತರ ಹತ್ತಿರ ಸಾಲ ಮಾಡಿ ನೆಲ್ಲೂರಿನಲ್ಲಿ "ದುಕ್ಕಿ ಪಿಂಡಿ(ದುಕ್ಕಿ ಇಟ್ಟು)"(Urea fertilizer) ಚೀಲವನ್ನು 450ರೂ ಖರೀದಿಸಿ, ಅದನ್ನು ರಿಕ್ಷಾದಲ್ಲಿ ಹಾಕಿಕೊಂಡು ಬಸ್ ನಿಲ್ದಾಣಕ್ಕೆ ಬರುತ್ತಿದ್ದನು. ಸ್ವಲ್ಪ ದೂರದಲ್ಲಿರುವಾಗ ಬಸ್ಸು ಹೊರಡುವುದರಲ್ಲಿತ್ತು. ಅವನು ರಿಕ್ಷಾ ಇಳಿದು ಬಸ್ಸನ್ನು ನಿಲ್ಲಿಸುವುದಕ್ಕೆ ಪ್ರಯತ್ನಿಸಿದನು. ಆದರೆ, ಬಸ್ಸು ಹೊರಟು ಹೋಯಿತು. ಹಿಂದೆ ತಿರುಗಿ ನೋಡಿದಾಗ ರಿಕ್ಷಾ ಇರಲಿಲ್ಲ. ಆ ಪ್ರಾಂತವೆಲ್ಲಾ ಹುಡುಕುತ್ತಾ, ಸ್ವಾಮಿಯವರನ್ನು ಸ್ಮರಿಸುತ್ತಾ ಕಣ್ಣೀರು ಹಾಕಿದನು. ಆ ಹಿಟ್ಟಿನ ಗಂಟುಗಳು ಇಲ್ಲದೇ ಊರಿಗೆ ಹೋದರೆ, ಸಾಲಗಾರರ ಹತ್ತಿರ ನಾನಾ ಮಾತುಗಳನ್ನು ಕೇಳುವುದಕ್ಕಿಂತ ಆತ್ಮಹತ್ಯೆ ಮಾಡಿಕೊಳ್ಳುವುದು ಉತ್ತಮ ಎಂದು ನಿಶ್ಚಯಿಸಿಕೊಂಡನು. ಯಾರೋ ಒಬ್ಬ ಪುಣ್ಯಾತ್ಮ ಇವನನ್ನು ತಡೆದು, "ನಿನ್ನ ಕೋಪ ಮತ್ತು ಆವೇಶ ಏತಕ್ಕೆ? ಹೀಗೆ ನೀನು ಓಡಿದರೇ

ಯಾವುದೋ ವಾಹನಕ್ಕೆ ಸಿಕ್ಕಿ ಸತ್ತರೆ ಏನು ಗತಿ? ನೀನು ಸ್ವಲ್ಪ ತಾಳ್ಮೆಯಿಂದಿರು, ನಿನ್ನ ಮೂಟೆಗಳು ಎಲ್ಲಿಗೂ ಹೋಗುವುದಿಲ್ಲ" ಎಂದು ಸಮಾಧಾನ ಮಾಡಿದರು. ಇನ್ನೊಂದು ಘಂಟೆಯಲ್ಲಿ ಆ ರಿಕ್ಷಾದವನು ಅದೇ ಜಾಗಕ್ಕೆ ಬಂದು ಚೀಲಗಳನ್ನು ಹಿಂತಿರುಗಿಸಿದನು.

ಚೆರುಕೂರು ಕೃಷ್ಣಯ್ಯನವರಿಗೆ (ಇವರು ಭಕ್ತವತ್ಸಲ ನಗರ್ ನಿವಾಸಿ) 1983 ರಲ್ಲಿ ಎದೆನೋವು ಬಂದು ನೆಲ್ಲೂರಿನ ಸರ್ಕಾರಿ ಆಸ್ಪತ್ರೆಯಲ್ಲಿದ್ದರು. ಒಂದೆರಡು ಬಾರಿ ಮಂಚದ ಮೇಲಿನಿಂದ ಕೆಳಗೆ ಬಿದ್ದಿದ್ದರು. ಆಸ್ಪತ್ರೆ ಉದ್ಯೋಗಿಗಳ ಮುಷ್ಕರ (strike) ದಿಂದ ಆಗಸ್ಟ್ ತಿಂಗಳಲ್ಲಿ ಮನೆಗೆ ಬಂದಿದ್ದರು. ಒಮ್ಮೆ ರಾತ್ರಿ ಹತ್ತು ಘಂಟೆಯ ಸಮಯದಲ್ಲಿ ಸ್ವಾಮಿಯವರ ಸಮಾಧಿ ದರ್ಶನ ಮಾಡಬೇಕೆಂದು ಪ್ರೇರಣೆ ಹೊಂದಿ, ಗೊಲಗಮೂಡಿಗೆ ಒಬ್ಬರೇ ಹೋಗುತ್ತಿದ್ದರು. ಕೊಂಡಾಯಪಾಳೆಂ ಹತ್ತಿರ ಇರುವ ಪುಷ್ಕರಣಿಯ ಬಳಿ ಕೆಂಪು ಪಂಚೆ, ಕೈಯಲ್ಲಿ ಕೋಲು ಹಿಡಿದು ಒಬ್ಬ ಮನುಷ್ಯ ಕಂಡು, "ಎಲ್ಲಿಗೆ ಹೋಗುತ್ತಿದ್ದೀಯ"? ಎಂದು ಕೇಳಿದರು. "ಗೊಲಗಮೂಡಿ ವೆಂಕಯ್ಯಸ್ವಾಮಿಯವರ ಹತ್ತಿರ ಹೋಗುತ್ತಿದ್ದೇನೆ" ಎಂದು ಹೇಳಿದರು. ಆಗ ಆ ವ್ಯಕ್ತಿ, "ನೀರನ್ನು ತುಂಬಿ ನಾನು ಕೂಡಾ ಬರುತ್ತೇನೆ" ಎಂದರು. ಕೃಷ್ಣಯ್ಯನವರು ನಾಲಕ್ಕು ಹೆಜ್ಜೆ ಹಾಕಿ ಹಿಂತಿರುಗಿದಾಗ ಆ ವ್ಯಕ್ತಿ ಇರಲಿಲ್ಲ. ಶ್ರೀ ಸ್ವಾಮಿಯವರ ಸಮಾಧಿಯ ಬಳಿ ಬಂದಮೇಲೆ ಎದೆ ನೋವು ಬಂದು, ಮುಂದೆ ಇರುವ ವರಾಂಡದಲ್ಲಿ ಬಿದ್ದು ಬಿಟ್ಟರು. ಅಲ್ಲಿ ಭಜನೆ ಮಾಡುತ್ತಿರುವ ಭಕ್ತರು ಇವರನ್ನು ಗುರ್ತಿಸಲಿಲ್ಲ. ಇವರ ಬಾಯಿನಿಂದ ಉಗುಳು ಬೀಳುತ್ತಿತ್ತು. ಆಗ ಒಬ್ಬ ವ್ಯಕ್ತಿ ಇವರ ಬೆನ್ನು ಗಟ್ಟಿಯಾಗಿ ತಟ್ಟಿ "ಹೋಗುತ್ತೆ ಬಿಡು" ಎಂದು ಹೇಳಿದಂತಾಯಿತು. ಬೆಳಗಾದಮೇಲೆ ಯಾವ ಔಷಧಿಯೂ ಬಳಸದೇ ಇವರ ಎದೆನೋವು ಗುಣವಾಯಿತು. ರಾತ್ರಿಯವೇಳೆ ಎದೆನೋವಿರುವ ವ್ಯಕ್ತಿ ಎಂಟು ಕಿ.ಮೀ ನಡೆದು ಬಂದಿದ್ದೇ ಆಶ್ಚರ್ಯ.

ಈದೂರು ಎಂಬ ಗ್ರಾಮದ ನಿವಾಸಿ, ಉಪ್ಪಲ ವೆಂಕಯ್ಯನವರ ಪತ್ನಿ ಶೇಷಮ್ಮ ನವರಿಗೆ 1981ರಿಂದ ಮೊಣಕಾಲಿನಿಂದ ಪಾದದ ವರೆಗೆ ವಿಪರೀತವಾಗಿ ಊದಿಬಿಟ್ಟು, ನೋವಿನಿಂದ ಹಗಲೂ ರಾತ್ರಿ ನಿದ್ರೆ ಬರದೇ ಬಳಲುತ್ತಿದ್ದರು. ಎಷ್ಟು ಜನ ವೈದ್ಯರ ಹತ್ತಿರ ಚಿಕಿತ್ಸೆ ಪಡೆದರೂ ಏನೂ ಪ್ರಯೋಜನವಾಗಲಿಲ್ಲ. ಒಬ್ಬ ಹೂವು ಮಾರುತ್ತಿದ್ದ ಸ್ವಾಮಿಯವರ ಭಕ್ತ ಆಕೆಗೆ ಸ್ವಾಮಿಯವರ ವಿಚಾರ ತಿಳಿಸಿ, ಸಮಾಧಿ ದರ್ಶನ ಮಾಡಿ ಎಂದು ಹೇಳಿದನು. ಆಕೆ, 1983 ರಲ್ಲಿ ಶ್ರಿ ಸ್ವಾಮಿಯವರ ಸಮಾಧಿಯ ದರ್ಶನ ಮಾಡಿ ಪ್ರಾರ್ಥಿಸಿದರು, ನೋವು ಸ್ವಲ್ಪ ಕಡಿಮೆಯಾಯಿತು. ವಾರಕ್ಕೊಂದು ಬಾರಿ ತಪ್ಪದೇ ಸಮಾಧಿ ದರ್ಶಸ ಮಾಡಿಕೊಂಡು ಹೋಗುತ್ತಿದ್ದರು. ಆಮೆಲೆ, ಕಾರಣಾಂತರಗಳಿಂದ ಸಮಾಧಿ ದರ್ಶನಕ್ಕೆ ಬರಲಾಗದೆ, ಮನೆಯಲ್ಲೇ ಸ್ವಾಮಿಯವರ ಪಟವನ್ನು ಪೂಜಿಸುತ್ತಿದ್ದರು. ಮತ್ತೆ, ಯಥಾಪ್ರಕಾರ ನೋವು ಪ್ರಾರಂಭ ಆಯಿತು. ಆಗ ಈಕೆ, "ಸ್ವಾಮಿ! ನಿಮ್ಮ ಸಮಾಧಿ ದರ್ಶನ ಮಾಡದೇ ಇದ್ದರೂ, ದಿನಾ ಮನೆಯಲ್ಲೇ ನಿಮ್ಮನ್ನು ಸ್ಮರಿಸುತ್ತಿದ್ದೇನೆ ಅಲ್ಲವೇ? ಮತ್ತೆ ನನಗೆ ಈ ನೋವು ಏಕೆ ಪ್ರಾರಂಭವಾಯಿತು?" ಎಂದು ಪ್ರಾರ್ಥನೆ ಮಾಡಿದರು. ಆ ರಾತ್ರಿ, ಸ್ವಾಮಿಯವರು ಸ್ವಪ್ನದಲ್ಲಿ ಕಂಡು, ಇವರ ಬೆನ್ನನ್ನು ತಟ್ಟಿ, "ಇದೇಮೈನಾ ನೆತ್ತಿನ ಬರುವಾ

ದಿಂಚೇದಾನಿಕಿ? ಮೂಡು ಸಂವತ್ಸರಾಲ ನುಂಡೀ ಉನ್ನದೇ ಕದಾ. ಇಕ್ಕಡೇ ಉಂಡಿ 'ನಾಯನಾ' ಅಂಟೇ ಸರಿಪೋತುಂದಾ?"(ಇದೇನಾದರೂ ತಲೆಯ ಮೇಲಿನ ಭಾರವೇ ಇಳಿಸುವುದಕ್ಕೆ? ಮೂರು ವರ್ಷಗಳಿಂದ ಇದ್ದ ನೋವೇ ಅಲ್ಲವೇ. ಇಲ್ಲೇ ಇದ್ದು "ತಂದೇ" ಅಂದರೇ ಸರಿಹೋಗುತ್ತದೆಯೇ?) ಎಂದರು. ಬೆಳಗಾದಮೇಲೆ, ಅಷ್ಟು ನೋವಿದ್ದರೂ ಸಮಾಧಿ ದರ್ಶನ ಮಾಡುವುದಕ್ಕೆ ನಡೆದುಕೊಂಡು ಹೋದರು. ಅವತ್ತಿನಿಂದ ಆಕೆಗೆ ನೋವು ಸಂಪೂರ್ಣವಾಗಿ ಗುಣವಾಯಿತು. ಆಗ ಅವರು, "ನಾನು ಸ್ವಾಮಿಯವರನ್ನು ನೋಡೇ ಇಲ್ಲ ಆದರೆ, ಅವರಿಗೆ ನಾನು ಮೂರು ವರ್ಷಗಳಿಂದ ನೋವು ಅನುಭವಿಸುತ್ತಿದ್ದೇನೆಂದು ಹೇಗೆ ತಿಳಿಯಿತು?" ಎಂದು ಆಶ್ಚರ್ಯದಿಂದ ಕೇಳಿದರು. "ದೇವರು ಎಲ್ಲಾ ಕಡೆ ಇರುತ್ತಾರೆ" ಎಂದು ನಂಬುವ ಭಕ್ತರಿಗೆ ಈ ಲೀಲೆ ಕಣ್ಣು ತೆರೆಸುತ್ತದೆ.

ಇವರ ಮಗಳು 1981 ರಲ್ಲಿ ಮುಟ್ಟಿನ ಹರಿವಿನಿಂದ ತೀವ್ರವಾಗಿ ಬಳಲುತ್ತಿದ್ದಿದ್ದರಿಂದ ಎಷ್ಟೋ ಚಿಕಿತ್ಸೆ ಮಾಡಿಸಿದರೂ ಗುಣವಾಗಲಿಲ್ಲ. ಶೇಷಮ್ಮ ನವರು ತನ್ನ ಮಗಳು ಸ್ವಾಮಿಯವರ ವಿಭೂತಿಯನ್ನು ಕೊಟ್ಟು ಏನಾದರು ಹರಕೆ ಮಾಡು ಎಂದು ಹೇಳಿದರು. ಆಗೆ ಅವರ ಮಗಳು, ಪ್ರತಿನಿತ್ಯ ವಿಭೂತಿಯನ್ನು ಸೇವಿಸುತ್ತಾ, ತನಗೆ ಗುಣವಾದರೆ, ಸಮಾಧಿ ದರ್ಶನ ಮಾಡುತ್ತೇನೆಂದು ಹರಕೆ ಮಾಡಿಕೊಂಡಳು. ಅಂದಿನಿಂದಲೇ ಅವಳ ಬಾಧೆ ಗುಣವಾಯಿತು.

ಕೊಜ್ಜಿಕೂಟಿ ನರಸಿಂಹುಲು ನಾಯುಡುರವರ ಎತ್ತಿಗೆ 1983 ರಲ್ಲಿ ರೋಗ ಬಂದಿದ್ದರಿಂದ, ಅದನ್ನು ಆಶ್ರಮದ ಬಳಿ ಕಟ್ಟಿ, ಅದರ ಬಾಯಿಯಲ್ಲಿ ವಿಭೂತಿ ತಿನ್ನಿಸುತ್ತಾ, ಅದರ ಶರೀರದ ಮೇಲೆ ವಿಭೂತಿ ಹಚ್ಚುತ್ತಾ ನಾಯುಡುರವರು, ಮೂರು ದಿನಗಳು ಅನನ್ಯವಾಗಿ ಸ್ವಾಮಿಯವರನ್ನು ಪ್ರಾರ್ಥನೆ ಮಾಡಿದರು. ಆದರೆ ಅದರ ವ್ಯಾಧಿ ಹೆಚ್ಚೂ ಕಡಿಮೆ ಆಗುತ್ತಿತ್ತು. ಇನ್ನು ಈ ಎತ್ತು ಬದುಕುವುದಿಲ್ಲವೆಂದು ನಿಶ್ಚಯಿಸಿ, "ಸ್ವಾಮಿಯವರನ್ನು ನಂಬಿದರೂ ಇದನ್ನು ಗುಣಮಾಡಲಿಲ್ಲ ಅಲ್ಲವೇ" ಎಂದು ದುಃಖ ಪಡುತ್ತಾ ಮಲಗಿದರು. ಆ ರಾತ್ರಿ ಸ್ವಪ್ನದಲ್ಲಿ ಸ್ವಾಮಿಯವರು ಪ್ರಕಾಶಮಾನವಾದ ಸಿಂಹಾಸನದ ಮೇಲೆ ಕುಳಿತಿದ್ದರು, ಯಾರೋ ಭಕ್ತರು ಅವರಿಗೆ ಚಾಮರ ಬೀಸುತ್ತಿದ್ದರು. ನಾಯುಡುರವರು ಸ್ವಾಮಿಯವರ ಬಳಿ ಹೋಗಿ ನಿಂತುಕೊಂಡ ತಕ್ಷಣ, "ನಿನ್ನ ಎತ್ತು ಗುಣವಾಗುತ್ತದೆ, ಹೋಗು" ಎಂದರು. ನಾಯುಡುರವರಿಗೆ ಎಚ್ಚರವಾಗಿ ನೋಡಿದಾಗ, ಎತ್ತು ಎದ್ದು ನಿಂತುಕೊಂಡು ಒಂದು ಬಿಂದಿಗೆ ತುಂಬುವಷ್ಟು ಗಂಜಲ ಸುರಿಸಿ, ಸಂಪೂರ್ಣವಾಗಿ ಗುಣವಾಗಿ, ಹುಲ್ಲು ಮೇಯುತ್ತಿತ್ತು.

ಗೊಲಗಮೂಡಿಯ ನಿವಾಸಿ, ತೂಪಿಲಿ ವೆಂಕಯ್ಯ 1984 ರಲ್ಲಿ ಒಂದು ದೊಡ್ಡ ಬಟ್ಟೆಯ ಮೂಟೆ ತಲೆಯಮೇಲಿಟ್ಟುಕೊಂಡು ಬಸ್ಸಿನ ಮೇಲೆ ಇಡುವುದಕ್ಕೆ ಏಣೀ ಹತ್ತಿದ್ದರು. ಇದು ತಿಳಿಯದೇ ಯಾರೋ "ರೈಟ್" ಎಂದು ಹೇಳಿದ್ದರಿಂದ ಬಸ್ ಹೊರಟಿತು. ತಕ್ಷಣ, ಏಣಿಯ ಮೇಲಿನಿಂದ ವೆಂಕಯ್ಯ ಒಂದು ಪಕ್ಕ, ಮೂಟೆ ಇನ್ನೊಂದು ಪಕ್ಕ ಬಿದ್ದರು. ಅರವತ್ತು ಅಡಿ ದೂರ ಹೋಗಿ ಬಸ್ ನಿಂತಿತು. "ವೆಂಕಯ್ಯನ ತಲೆ ಒಡೆದು ಮರಣಿಸಿದ" ಎಂದು ಅಲ್ಲಿದ್ದವರೆಲ್ಲರು ಅಂದುಕೊಂಡರು. ಆದರೆ, ಅವನಿಗೆ ಒಂದು ಸಣ್ಣ ಘಾಯವೂ

ಆಗದೆ, ಅವನು ಆ ಬಟ್ಟೆಯ ಮೂಟೆಯನ್ನು ತಲೆಯಮೇಲಿಟ್ಟುಕೊಂಡು ಬಸ್ಸಿನ ಹತ್ತಿರ ಓಡಿ ಬರುವುದನ್ನು ನೋಡಿ ಎಲ್ಲರೂ ದಿಗ್ಭ್ರಮೆ ಆಗಿ, "ನಿನ್ನ ಪತ್ನಿಯ ಮಾಂಗಲ್ಯಬಲ ತುಂಬಾ ಚೆನ್ನಾಗಿದೆ ಅಯ್ಯಾ" ಎಂದರು. ಆದರೆ, ಇದು ಕೇವಲ ಸ್ವಾಮಿಯವರ ಕೃಪೆಯಿಂದಲೇ ಸಾಧ್ಯವಾಯಿತೆಂದು ವೆಂಕಯ್ಯನ ಪತ್ನಿ ಪಿಚ್ಚಮ್ಮನವರಿಗೆ ಮಾತ್ರವೇ ತಿಳಿದಿತ್ತು. ಏಕೆಂದರೆ, ಮೂರು ದಿನಗಳ ಹಿಂದೆ ಪಿಚ್ಚಮ್ಮನವರಿಗೆ ಕನಸಿನಲ್ಲಿ ಸ್ವಾಮಿಯವರ ಭಕ್ತನಾದ ಸಮಾಧಿ ಮಂದಿರದ ಪೂಜಾರಿ ಕಂಡು ಇವರಿಗೆ "ಕುಂಕುಮ ಇಡುತ್ತೇನೆ" ಎಂದರು. ಆಗ, ಈಕೆ ಕೈಗೆ ಕೊಡಿ ಎಂದು ಕೇಳಿದಾಗ, ಆ ಪೂಜಾರಿ ಹಾಗೆಯೇ ಮಾಡಿದರು. ಅವಳಿಗೆ ಈ ಕನಸು ಕಾಣದಿದ್ದರೆ ವೆಂಕಯ್ಯ ಬದುಕುಳಿದಿದ್ದು ಕಾಕತಾಳೀಯ ಎಂದು ನಾವು ಒಪ್ಪಬಹುದಾಗಿತ್ತು.

ಸೆಪ್ಟೆಂಬರ್ 1983 ರಲ್ಲಿ ಸಮಾಧಿ ಮಂದಿರದ ಮುಂಭಾಗದ ನೆಲವನ್ನು 1 ಅಡಿ ಆಳ ಅಗೆದು ಅದರೊಳಗೆ ಅಗ್ನಿಕುಂಡವನ್ನು ಸ್ಥಾಪಿಸಲಾಯಿತು. ಒಂದು ದಿನ, ಈ ವೆಂಕಯ್ಯನ ಮಗಳು, ಮೂರು ವರ್ಷದ ಶ್ಯಾಮಲ, ಇನ್ನೊಂದು ಮಗುವಿನ ಜೊತೆ ಆಡುತ್ತಾ ಅಗ್ನಿಕುಂಡದ ಸುತ್ತಾ ತಿರುಗುತ್ತಿದ್ದರು. ಆ ಆಟದಲ್ಲಿ ಇನ್ನೊಂದು ಮಗು, ವೆಂಕಯ್ಯನ ಮಗಳನ್ನು ಅಗ್ನಿಕುಂಡದೊಳಗೆ ನೂಕಿಬಿಟ್ಟಿತು. ಆ ಪ್ರಜ್ವಲಿಸುತ್ತಿದ್ದ ಉರಿಯಲ್ಲಿ ಆ ಮಗು ಬಿದ್ದು ಬಿಟ್ಟಿತು. ಆ ಮಗುವಿನ ಮುಂಗೈಯವರೆಗೂ ಬೆಂಕಿ ಹೊತ್ತಿಕೊಂಡಿತ್ತು. ಆ ಮಗು ಭಯದಿಂದ ಮೂತ್ರ ಮಾಡಿ ಜೋರಾಗಿ ಕಿರುಚಿತು. ಇಪ್ಪತ್ತು ಅಡಿಯ ದೂರದಲ್ಲಿದ್ದ ನಾಗಯ್ಯನವರು ಓಡಿ ಬಂದು ಮಗುವನ್ನು ಆಚೆ ಎಳೆದು ಹಾಕಿದರು. ಪಿಚ್ಚಮ್ಮ ಭಾವಿಯ ಹತ್ತಿರದಿಂದ ಓಡಿ ಬಂದರು. ಅಷ್ಟು ದೊಡ್ಡ ಉರಿಯಲ್ಲಿ ಬಿದ್ದರೂ ಆ ಮಗುವಿನ ಕೂದಲೂ ಕೊಂಕಿರಲಿಲ್ಲ, ಕೈಗಳು ಕೂಡಾ ಸುಡಲಿಲ್ಲ.

ನಾವುಗಳು ನಮ್ಮ ಗಮನ ಬೇರೆಕಡೆ ಇರುವ ಸಮಯದಲ್ಲೂ, ಸರ್ವ ಸಮರ್ಥರಾದ ಸ್ವಾಮಿಯವರು ನಮ್ಮನ್ನು ಮಾತ್ರವಲ್ಲದೆ ನಮ್ಮ ಮಕ್ಕಳನ್ನು ಕೂಡ ಹೇಗೆ ರಕ್ಷಿಸುತ್ತಾರೋ ನೋಡಿ. 127

"ವೆಂಕಯ್ಯನವರ ಹೆಸರು ಹೇಳಿ ಒಂದು ಹಿಡಿ ಅಕ್ಕಿ ಹಾಕುವ ಅಥವಾ ತರುವವರಿಗೆ ಅವರ ಒಳಿತು ಕೆಡುಕುಗಳನ್ನೆಲ್ಲ ನಾವೇ ನೋಡಬೇಕಲ್ಲವೇ" ಎಂದು ಸ್ವಾಮಿಯವರು ಹೇಳಿದ್ದಾರೆ. ಪ್ರತಿ ನಿತ್ಯ, ಅಡಿಗೆ ಮಾಡಿದ ಮೇಲೆ, ಸ್ವಲ್ಪ ಆಹಾರವನ್ನು ಒಂದು ಎಲೆಯ ಮೇಲೆ ಬಡಿಸಿ, ಮನೆಯ ಹೊರಗೆ ಇಟ್,ಟು, "ಎಲ್ಲಾ ಜೀವಿಗಳಲ್ಲಿ ಇರುವ ಭಗವಾನ್ ವೆಂಕಯ್ಯ ಸ್ವಾಮಿಯವರಿಗೆ ಈ ಆಹಾರವನ್ನು ಅರ್ಪಿಸುತ್ತೇನೆ" ಎಂದು ನಮಸ್ಕರಿಸಿದರೆ, ಶ್ರೀ ಸ್ವಾಮಿಯವರ ಆಶೀರ್ವಾದ ನಿತ್ಯವೂ ನಮ್ಮ ಮೇಲೆ ಇದ್ದಂತೆಯೇ.

ಅಲ್ಲಿಪುರದ ನಿವಾಸಿ ಚೆಮುಡುಗುಂಟ ಆದೆಯ್ಯ, ಮಾರ್ಚಿ 1984 ರಲ್ಲಿ, ಕೈ ಪಾರ್ಶ್ವವಾಯು ಬಂದು(paralysis) ಮಂಚದ ಮೇಲೆ ಮಲಗಿ ಬಿಟ್ಟಿದ್ದರು. ಒಬ್ಬರ ಸಹಾಯದಿಂದ ಎಬ್ಬಿಸಿ ಕೂರಿಸಿದರೆ ಎದ್ದು ಕೂತುಕೊಳ್ಳುತ್ತಿದ್ದರು. ಹಿಡಿದು ನಿಲ್ಲಿಸಿದರೆ ನಿಂತುಕೊಳ್ಳುತ್ತಿದ್ದರು. ಆರ್ಥಿಕವಾಗಿ ಅವರು ಅನುಕೂಲವಾಗಿಲ್ಲದ್ದರಿಂದ ಒಂದು ತಿಂಗಳು ಯಾವ ಚಿಕಿತ್ಸೆಯನ್ನು ತೆಗೆದುಕೊಳ್ಳಲಾಗಲಿಲ್ಲ. ಒಂದು ದಿನ ಸ್ವಾಮಿಯವರು

ನೆನಪಿಗೆ ಬಂದು, "ಬೆಳಗಾಗುವ ಹೊತ್ತಿಗೆ ಸ್ವಲ್ಪ ನೋವು ಕಡಿಮೆಯಾದರೆ, ನಿಮ್ಮ ದರ್ಶನಕ್ಕೆ ಬರುತ್ತೇನೆ" ಎಂದು ಹರಸಿ ಕೊಂಡರು. ಬೆಳಗಾದ ಮೇಲೆ ಯಾರ ಸಹಾಯವೂ ಇಲ್ಲದೆ ಎದ್ದು ಕುಳಿತುಕೊಂಡರು. ತಕ್ಷಣವೇ ಸ್ವಾಮಿಯವರ ಸನ್ನಿಧಿಗೆ ಬಂದರು. ಮೊದಲು ಕೋಲಿನ ಸಹಾಯದಿಂದ ಸ್ವಲ್ಪ ನಡೆಯಲು ಪ್ರಾರಂಭಿಸಿದರು. ಮೂರನೇ ದಿನ ಸ್ವಾಮಿಯವರು ಸ್ವಪ್ನ ದರ್ಶನ ಕೊಟ್ಟು, "ಕೋಲು ಇಲ್ಲದೇ ನಡಿ, ನೋಡಬೇಕು" ಎಂದರು. ಮಾರನೇಯ ದಿನದಿಂದಲೇ ಕೋಲಿನ ಸಹಾಯ ವಿಲ್ಲದೇ ನಡೆಯಲು ಪ್ರಾರಂಭಿಸಿದರು. ಇವರ ಪತ್ನಿಗೆ ಹೊಟ್ಟೆಯಲ್ಲಿ ನೋವು ಮತ್ತು ಸೆಳತವಾಗಿ ತಿಂದ ಆಹಾರ ಜೀರ್ಣಿಸುತ್ತಿರಲಿಲ್ಲ. ಅವರು ಸ್ವಾಮಿಯವರ ಸನ್ನಿಧಿಗೆ ಬಂದಮೇಲೆ ಅವರು ಗುಣ ಮುಖರಾದರು. ಅವರು ಸ್ವಾಮಿಯವರ ಸನ್ನಿಧಿಯ ಹತ್ತಿರವೇ ಇರಬೇಕೆಂದು ಕೊಂಡು, ಅವರು ಗೊಲಗಮೂಡಿಗೆ ತನ್ನ ಸಂಸಾರ ಸಮೇತ ತೆರಳಿದರು.

ಅಪ್ಪಯ್ಯಗೇಟು ನಿವಾಸಿ ಗೋನುಗುಂಟ ರಾಮಮ್ಮ ಅವರನ್ನು ಕಾಡುತ್ತಿದ್ದ ಭೂತವನ್ನು ಸ್ವಾಮಿಯವರು ಹೇಗೆ ಓಡಿಸಿದರೋ ಹೀಗೆ ವಿವರಿಸುತ್ತಾರೆ: ಆಹಾರ ಸಹಿಸುತ್ತಿರಲಿಲ್ಲ ಬಲಹೀನತೆ, ದೇಹದ ನೋವು,ಇವುಗಳಿಂದ ಕುಸಿದುಹೋಗಿದ್ದರು. ಎಷ್ಟೋ ವೈದ್ಯರಿಗೆ ತೋರಿಸಿ, ಎಷ್ಟೋ ಔಷಧಿಗಳನ್ನು ಸೇವಿಸಿದರೂ ಅವರಿಗೆ ಗುಣವಾಗಲಿಲ್ಲ. ಆಕೆಯ ಸ್ನೇಹಿತೆಯರ ಸಲಹೆಯ ಮೇಲೆ, ಸ್ವಾಮಿಯವರ ಸಮಾಧಿ ದರ್ಶನ ಮಾಡಿದರು. ಆ ರಾತ್ರಿ ಸ್ವಪ್ನದಲ್ಲಿ ಒಬ್ಬ ವ್ಯಕ್ತಿ, "ಛೀ ಮೂರ್ಖ! ಇಲ್ಲಿಗೆ ಕೂಡಾ ಬಂದೆಯಾ? ಹೋಗು!" ಎಂದು ಹೇಳಿದಹಾಗೆ ಕೇಳಿತು. ಬೆಳಗಾಗುವ ಹೊತ್ತಿಗೆ, ಆಕೆಗೆ ಹಸಿವಾಗಿ, ಆಹಾರವನ್ನು ಸೇವಿಸಿದರು. ಒಂದು ವಾರದಲ್ಲೇ ಅವರು ಸಂಪೂರ್ಣವಾಗಿ ಆರೋಗ್ಯವಂತರಾದರು. 1983 ರಲ್ಲಿ ಇವರ ಎಮ್ಮೆಗೆ ಹೆರಿಗೆ ಸಂಕಟವಾಗಿ ಮೂರು ದಿನ ತುಂಬಾ ಬಳಲುತ್ತಾ ಕೆಳಗೆ ಬಿದ್ದುಹೋಗಿತ್ತು. ಪಶುವೈದ್ಯರು, ಪರೀಕ್ಷಿಸಿ, "ಕರು ಹೊಟ್ಟೆಯಲ್ಲೇ ಮರಣಿಸಿದೆ. ಅದನ್ನು ಈಚೆ ತೆಗೆದರೆ ಎಮ್ಮೆ ಬದುಕುತ್ತದೆ." ಎಂದು ಹೇಳಿ, ಕರುವನ್ನು ಈಚೇ ತೆಗೆದು ಹಾಕಿದರು. "ಕರುವನ್ನು ಹೊರಗೆ ಹಾಕಿ ಈ ಜಾಗವೆಲ್ಲಾ ಶುಭ್ರಮಾಡಿ, ಎಮ್ಮೆಗೆ ಒಂದು ಇಂಜಕ್ಷನ್ ಕೊಡುತ್ತೇನೆ" ಎಂದರು ಪಶುವೈದ್ಯರು. ರಾಮಮ್ಮ ದುಃಖದಿಂದ, "ಸ್ವಾಮಿ, ಎಮ್ಮೆಗೆ ಕರುವಿಲ್ಲದಂತೆ ಮಾಡುತ್ತೀರಾ?" ಎಂದು ಸ್ವಾಮಿಯವರನ್ನು ಪ್ರಾರ್ಥಿಸಿ, "ಮೂರು ಘಂಟೆಯಾ ಕಾಲ ಕಾದಮೇಲೆ ಆ ಕರುವನ್ನು ಇಲ್ಲಿಂದ ತೆಗೆಯುತ್ತೇನೆ" ಎಂದು ಹೇಳಿದರು. ಆಗ ವೈದ್ಯರು, "ಏನಮ್ಮಾ! ಮರಣಿಸಿದ ಕರು, ಹೇಗೆ ಬದುಕುತ್ತೇ? ಎಂದರು. ಆಗ, ಆಕೆ, ಏನೂ ಮಾತನಾಡದೆ, ಒಂದು ಒದ್ದೆ ಬಟ್ಟೆಯನ್ನು ಆ ಕರುವಿನ ಮೇಲೆ ಹೊದ್ದಿಸಿ, "ಸ್ವಾಮೀ! ಈ ಕರು ಬದುಕಿದರೆ, ಇದನ್ನು ಆಶ್ರಮಕ್ಕೆ ಸಮರ್ಪಿಸುತ್ತೇನೆ, ಮತ್ತು ಒಂದು ದಿನ, ಹಾಲನ್ನು ತಂದು ನಿಮಗೆ ಅರ್ಪಿಸುತ್ತೇನೆ" ಎಂದು ಹರಸಿ ಕೊಂಡು ಸ್ವಾಮಿಯವರನ್ನು ಸ್ಮರಿಸುತ್ತಾ ಕುಳಿತರು. ಮೂರು ಗಂಟೆ ಆಗುವ ಮೊದಲೇ ಕರು ಕಣ್ಣು ಬಿಟ್ಟಿತು. ಅಲ್ಲೇ ಇದ್ದ ಪಶುವೈದ್ಯರು, "ಇದು ಸ್ವಾಮಿಯವರ ಮಹಿಮೆನೇ" ಎಂದರು. 4 ತಿಂಗಳಾದರೂ ಆಕೆ ಹಾಲು ಸ್ವಾಮಿಯವರಿಗೆ ಸಮರ್ಪಿಸಲಿಲ್ಲ. ಆಗ, ಒಮ್ಮೆ ಸ್ವಾಮಿಯವರು ಇವರ ಸ್ವಪ್ನದಲ್ಲಿ ಕಂಡು, ಮೂರು

ತಿಂಗಳಾದರೂ ನನಗೆ ಕೊಟ್ಟ ಮಾತು ಮರೆತು ಬಿಟ್ಟೆಯಾ?" ಎಂದರು. ಬೆಳಗಾಗುತ್ತಲೇ, ಅವರು "ತಪ್ಪಾಯಿತು ಸ್ವಾಮೀ" ಎಂದುಕೊಳ್ಳುತ್ತಾ ಹಾಲನ್ನು ತಂದು ಆಶ್ರಮದಲ್ಲಿ ಸಮರ್ಪಿಸಿ, "ಕರು, ಅದರ ಅಮ್ಮನ ಹಾಲು ಕೂಡಿಯುವುದು ಮರೆತಮೇಲೆ, ಅದನ್ನೂ ತಂದು ಆಶ್ರಮಕ್ಕೆ ಸಮರ್ಪಿಸುತ್ತೇನೆ" ಎಂದು ಸ್ವಾಮಿಯವರ ಸಮಾಧಿಗೆ ಹೇಳಿಕೊಂಡು ಹೊರಟುಹೋದರು. ಹಣಕಾಸಿನ ತೊಂದರೆಯಿಂದ ಅವಳು ತನ್ನ ಎಮ್ಮೆಯನ್ನು ಮಾರಿದಳು. ಕರುವಿನ ಮೌಲ್ಯವನ್ನು ರೂ. 50. ಆದರೆ ಅವರು 18 ತಿಂಗಳವರೆಗೆ ಸ್ವಾಮಿಯವರಿಗೆ ಆ ಮೊತ್ತವನ್ನು ನೀಡಲಿಲ್ಲ. 18-1-85 ರಂದು ಸ್ವಾಮಿಯವರು ಆಕೆಯ ಕನಸಿನಲ್ಲಿ ಕಾಣಿಸಿಕೊಂಡು, "ನೀನು ನನಗೆ 130 ರೂ. ಬಾಕಿ ಇದ್ದೀಯ. ಆಶ್ರಮಕ್ಕೆ ಹೋಗಿ 19-12-85 ರ ಮೊದಲು ಮರುಪಾವತಿ ಮಾಡುವುದಾಗಿ ಕಾಗದದ ಮೇಲೆ ಬರೆದು ನಿನ್ನ ಹೆಬ್ಬೆರಳಿನ ಗುರುತು ಹಾಕಿ ಬಾ" ಎಂದು ಆದೇಶಿಸಿದರು. **ಆಕೆ ಸ್ವಾಮಿಯವರು ಹೇಳಿದಂತೆ ಮಾಡಿದರು. ಹರಿಕೆ ತಕ್ಷಣ ಸಲ್ಲಿಸದದಿದ್ದಕ್ಕೆ 80ರೂ ಜುಲ್ಮಾನೆ ಕೊಡಬೇಕಾಯಿತು. ಈ ಲೀಲೆ, ಹರಕೆ ತೀರುಸುವುದರಲ್ಲಿ ನಾವು ಎಷ್ಟು ಹುಷಾರಾಗಿರಬೇಕು ಎಂದು ತಿಳಿಸುತ್ತದೆ.** **128**

ಗುಂಡಬೋಯಿನ ನರಸಯ್ಯ, ಇವರು ಅನಪಲ ಪಾಡು ಎನ್ನುವ ಊರಿನ ನಿವಸಿ. ಇವರ ಮೊದಲ ಎರಡು ಮಕ್ಕಳು ಹುಟ್ಟಿದಾಗಲೇ ಮರಣಿಸಿದರು. 1983 ರಲ್ಲಿ ಮೂರನೇದು ಹೆಣ್ಣು ಮಗು ಹುಟ್ಟಿತು. ಆದರೆ ಐದನೇ ದಿನದಿಂದ ಮಗುವಿಗೆ ಜ್ವರ ಬರಲು ಪ್ರಾರಂಭವಾಗಿ, ಹಾಲು ಅಥವ ಔಷಧಿ ಕೊಟ್ಟರೆ ವಾಂತಿ ಮಾಡಿ ಕೊಳ್ಳುತ್ತಿತ್ತು. ಮಗುವಿನ ಶರೀರ ಬಹಳ ಬಿಸಿ ಆಗಿ ಸುಡುತ್ತಿತ್ತು. ಎರಡು ದಿನಗಳ ನಂತರ ಸಂಜೆಯ ವೇಳೆಗೆ ಆ ಮಗು ಬಲಹೀನತೆ ಇಂದ ಕಾಲುಗಳು ಮತ್ತು ಕೈಗಳು ಚಲಿಸಲಿಲ್ಲ. ಮಗುವಿನ ಕಣ್ಣುಗಳು ಮುಚ್ಚಲ್ಪಟ್ಟವು ಮತ್ತು ಅದರ ದೇಹ ತಣ್ಣಗಾಯಿತು. ಮೊದಲು ಎರಡು ಮಕ್ಕಳಂತೆ ಈ ಮಗುವನ್ನೂ ಕಳೆದುಕೊಳ್ಳುತ್ತೇವೆಂದು, ಮನೆಯವರೆಲ್ಲಾ ಜೋರಾಗಿ ಅಳುತ್ತಿದ್ದರು. ಎಲ್ಲರೂ ಒಟ್ಟುಗೂಡಿದರು. ಆ ರಸ್ತೆಯಲ್ಲಿ ಹೋಗುತ್ತಿದ್ದ ಗೋನುಗುಂಟ ರಾಮಮ್ಮನವರು ಈ ವಿಷಯವನ್ನು ತಿಳಿದು, ಆ ಮಗುವಿನ ಬಳಿ ಬಂದರು. ಶ್ರೀ ಸ್ವಾಮಿಯವರು, ಆ ಮಗುವನ್ನು ತಪ್ಪದೇ ಬದುಕಿಸುತ್ತಾರೆ ಎಂದು ಧೃಢವಾದ ನಂಬಿಕೆ ಬಂತು. ತಕ್ಷಣ ಬಜೆ (ಒಂದು ತರಹದ ಆಯುರ್ವೇದ ಮೂಲಿಕೆ) ತಂದರು. ಪಕ್ಕದ ಮನೆಯಾಕೆಯ ಹತ್ತಿರ ಹಾಲು ತೆಗೆದುಕೊಂಡು ಆ ಹಾಲಿನಲ್ಲಿ ಬಜೆಯನ್ನು ತೇಯ್ದು ಆ ಮಗುವಿಗೆ ಕೊಟ್ಟರು. ಅಲ್ಲಿಯವರೆಗೂ ಏನು ಕೊಟ್ಟರೂ ವಾಂತಿ ಮಾಡಿಕೊಳ್ಳುತ್ತಿದ್ದ ಮಗು, ಈ ಬಜೆಹಾಲು ಕುಡಿಯಿತು. ಆದರೆ, ಮಗುವಿನಲ್ಲಿ ಚಲನ ಇರಲಿಲ್ಲ. ರಾಮಮ್ಮನವರು ಶ್ರಿ ಸ್ವಾಮಿಯವರ ವಿಭೂತಿಯನ್ನು ಮಂಚದ ಕೆಳಗೆ ಹರಡಿ, ಮಗುವಿನ ಬಾಯಿಗೆ ಸ್ವಲ್ಪ ವಿಭೂತಿ ಹಾಕಿ, ಶರೀರಕ್ಕೆಲ್ಲ ಸವರಿ, ಮಗುವನ್ನು ಮಂಚದ ಮೇಲೆ ಮಲಗಿಸಿ, "ಈ ಮಗು ತಪ್ಪದೇ ಬದುಕತ್ತೆ" ಎಂದು ಹೇಳಿ ಹೊರಟುಹೋದರು. ಒಂದು ಘಂಟೆಯ ಒಳಗೆ, ಮಗು ಕಣ್ಣು ತೆರೆಯಿತು. ಬೆಳಗಾದಮೇಲೆ, ಹಾಲು ಕುಡಿಯಲು ಪ್ರಾರಂಭಿಸಿತು. ಸ್ವಾಮಿಯವರ ಕೃಪೆಯಿಂದಲೇ ಆ ಮಗು ಬದುಕಿತೆಂದು, ಅದಕ್ಕೆ ಸ್ವಾಮಿಯವರ ಹೆಸರನ್ನು ಇಟ್ಟರು.

ಪಂಚಾಕ್ಷರಿ ಮಸ್ತಾನಯ್ಯ, ಇವರು ಪೆನವರ್ತಿಯ ನಿವಾಸಿ. ಇವರು ಬಹಳ ಕಾಲದಿಂದ ಶ್ರೀ ಸ್ವಾಮಿಯವರ ಭಕ್ತರು. ಇವರಿಗೆ ಸ್ವಾಮಿಯವರು ಸ್ವಪ್ನ ಸಂದೇಶ ಕೊಟ್ಟು ಮುಂದೆ ಬರುವ ಅಪಾಯಗಳಿಂದ ಕಾಪಾಡುತ್ತಿದ್ದರು. 7-7-84 ರಲ್ಲಿ ಶ್ರೀ ಸ್ವಾಮಿಯವರು ಮಸ್ತಾನಯ್ಯನವರಿಗೆ ಸ್ವಪ್ನದರ್ಶನ ಕೊಟ್ಟು, "ಅಯ್ಯಾ! ಐದು ಶವಾಲು ಒಕೇತೂರಿ ಪೋವಲಸಿಯುನ್ನದಿ. ಸತಾಯಿಂಚುಟಕು ವೀಲುಲೇನಿ ಪರಿಸ್ಥಿತಿ. ಮೀರೇಮೋ ಚೆಬಿತೇ ಮಾಟ ವಿನಿಪಿನ್ನುಕೋನಿ ಮೊರಟು ಮನುಷುಲು" (ಅಯ್ಯಾ! ಐದು ಶವಗಳು ಒಂದೇ ಸರ್ತಿ ಹೊರಡಬೇಕಾಗಿದ್. ಅಸಮರ್ಥನೀಯ ಪರಿಸ್ಥಿತಿ. ನೀವೇನೋ ಹೇಳಿದ ಮಾತನ್ನು ಕೇಳದ ಮೂರ್ಖ ಜನರು) ಎಂದು ಹೇಳಿದರು. "ಇದೇನಿದು? ಸ್ವಾಮಿಯವರು ಹೇಗೆ ಹೇಳಿದರು?" ಎಂದು ಅವನು ಚಿಂತಿಸಿದನು ಆದರೆ ಅವನು ತನ್ನ ಕನಸಿನ ವಿಚಾರ ಯಾರಿಗೂ ಹೇಳಲಿಲ್ಲ. ಮರುದಿನ ಬೆಳಗ್ಗೆ 8-7-84 ನೇ ತಾರೀಖ್, ಟ್ರಾಕ್ಟರ್ ತೆಗೆದುಕೊಂಡು ಮಡವನೂರಿನಿಂದ ಪೆನವರ್ತಿಗೆ ಹೋಗಬೇಕು ಆದರೆ, ಮನಸ್ಸಿನಲ್ಲಿ ಆತಂಕವಾಗುತ್ತಿತ್ತು, ಮುಂದೆ ಹೋಗುವುದಕ್ಕೆ ಕಾಲು ಆಡಲಿಲ್ಲ.

ಆದರೆ, ಅವರ ಅಣ್ಣನವರಿಗೆ ಈತನ ಸ್ವಪ್ನದ ವಿಚಾರ ಗೊತ್ತಿರಲಿಲ್ಲ. ಟ್ರ್ಯಾಕ್ಟರ್ ತೆಗೆದುಕೊಂಡು ಹೋಗಲೇ ಬೇಕು ಎಂದು ಒತ್ತಾಯಿಸಿದರು. ರಸ್ತೆಯ ಮಧ್ಯದಲ್ಲಿ ಮಸ್ತಾನಯ್ಯ ಟ್ರ್ಯಾಕ್ಟರ್ ನಿಲ್ಲಿಸಿಬಿಟ್ಟರು, ಆದರೆ ಅವರ ಅಣ್ಣನ ಬಲವಂತಕ್ಕೆ ಅವರು ಮತ್ತೆ ಹೊರಟರು. ಮದ್ರಾಸ್ ರಸ್ತೆಯಿಂದ, ಗೊಲಗಮೂಡಿಯ ಮಣ್ಣಿನ ರಸ್ತೆಯ ತಿರುವಿನಲ್ಲಿ ತಿರುಗುವಾಗ, ಗೊಬ್ಬರದ ಲಾರಿ ರಾಂಗ್ ಸೈಡಿನಿಂದ ಬಂದು ಟ್ರ್ಯಾಕ್ಟರ್ನ ಎದುರಿನಿಂದ ಗುದ್ದಿತು. ಆ ಆಪತ್ತಿನ ಸಮಯದಲ್ಲಿ ಯಾರೋ, ಆಕಾಶದಲ್ಲಿ ಅಂಗೈ ತೋರಿಸಿದ ಹಾಗೆ ಮಸ್ತಾನಯ್ಯನವರಿಗೆ ಮಾತ್ರ ಮಸುಕಾಗಿ ಕಂಡಿತು. ಟ್ರ್ಯಾಕ್ಟರ್ ಗಾಳಿಯಲ್ಲಿ ಎಗಿರಿ, ರಸ್ತೆಯ ಪಕ್ಕದಲ್ಲಿ ಬಿದ್ದು ಬಿಟ್ಟಿತು. ಟ್ರ್ಯಾಕ್ಟರ್ ಮೇಲೆ ಸರಿಯಾಗಿ ಐದು ಜನರೇ ಕುಳಿತಿದ್ದರು.

1. ಡ್ರೈವರ್ ಮಸ್ತಾನಯ್ಯನವರಿಗೆ ತಲೆಯ ಮೇಲೆ ಚರ್ಮ ಸುಲಿದು ರಕ್ತ ಸುರಿಯ ತೊಡಗಿತು. ತೊಡೆಯ ಮೂಳೆ ಮುರಿಲಿಲ್ಲ ಆದರೆ, ಮಾಂಸಖಂಡ ಮಾತ್ರ ಬ್ಲೇಡಿನಲ್ಲಿ ಕುಯ್ದುಹಾಗೆ ನಾಲಕ್ಕು ಅಂಗುಲ ಸೀಳಿ ಹೋಗಿತ್ತು.
2. ಇವರ ಅಣ್ಣ ಟ್ರ್ಯಾಕ್ಟರ್ ಇಂಜನ್ ಕೆಳಗೆ ಬಿದ್ದು ಬಿಟ್ಟರು. ಹೊಟ್ಟೆಯ ಮೇಲೆ ಭಾರ ಬಿದ್ದದರಿಂದ ರಕ್ತವನ್ನು ಉಗುಳುತ್ತಾ ಕೊನೆಯ ಉಸಿರಿನೊಂದಿಗೆ ಇದ್ದರು
3. ಮಿಕ್ಕ ಮೂರು ಜನಕ್ಕೆ, ಸಾಧಾರಣವಾದ ಘಾಯವಾಗಿ ರಕ್ತ ಬರುತ್ತಿತ್ತು.

ರಕ್ತಸುರಿಯುತ್ತಿದ್ದ ಮಸ್ತಾನಯ್ಯ, ತೂರಾಡುತ್ತಾ, ಕೊನೆಯ ಉಸಿರಿನಲ್ಲಿದ್ದ ತಮ್ಮ ಅಣ್ಣನವರನ್ನ ನೋಡಿದರು. ಸ್ವಾಮಿಯವರ ಕೃಪೆಯಿಂದ, ಅವರ ಹತ್ತಿರ ವಿದ್ದ ಜಾಕಿ ರಾಡ್ ತೆಗೆದುಕೊಂಡು ಅದರಿಂದ ಅಣ್ಣನವರ ಮೇಲೆ ಬಿಡ್ಡಿದ್ದ ಟ್ರ್ಯಾಕ್ಟರ್ನ ನಾಲಕ್ಕು ಅಂಗುಳ ಎತ್ತಿದರು. ಅವರ ಅಣ್ಣ ಸ್ವಲ್ಪ ಉಸಿರು ಆಡಲು ಸಾಧ್ಯವಾಯಿತು. ಅಷ್ಟರಲ್ಲಿ ಅಲ್ಲಿಗೆ ಬಂದ ಬಸ್ಸಿನವರು ಇವರನ್ನೆಲ್ಲಾ ಆಸ್ಪತ್ರೆಗೆ ಸೇರಿಸಿದರು. ಮಸ್ತಾನಯ್ಯನವರ ಆಣ್ಣ ಬಿಟ್ಟು ಮಿಕ್ಕವರೆಲ್ಲಾ ಬಡುಕಿದರು. ಇಂಜಿನ್ ಬಿದ್ದ ವಿಧನ ನೋಡಿದರೆ, ಅವರ ಮೂಳೆ ಗಳೂ ಸ್ಕ್ಕದ ಸ್ಥಿತಿಯಲ್ಲಿತ್ತು. ಆ ರಾತ್ರಿ ಸ್ವಾಮಿಯವರು ಮಸ್ತಾನಯ್ಯ ನವರ ಸ್ವಪ್ನದಲ್ಲಿ ಬಂದು,

"ನಿನ್ನ ಗಾಡಿಯನ್ನು ಕೈಯ್ಯಿಂದ ನೂಕಿ ಆಚೆ ಹಾಕಬೇಕಾಯಿತಯ್ಯಾ!" ಎಂದು ಹೇಳಿದರು. ಐದು ಜನರು ಹೋಗಬೇಕಾಗಿತ್ತು ಆದರೆ ಸ್ವಾಮಿಯವರ ಕೃಪೆಯಿಂದ ಒಬ್ಬರೇ ಹೋಗಿ, ಮಿಕ್ಕ ೪ ಜನರು ಬದುಕಿದರು ಎಂದು ಸ್ವಪನದ ಮೂಲಕ ತಿಳಿಸಿದರು.

ಮಸ್ತಾನಯ್ಯ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ದಿನ ರಾತ್ರಿ ಸ್ವಾಮಿಯವರು ಆತನ ಸ್ವಪ್ನದಲ್ಲಿ ಕಂಡು, "ಮೊದಲು ಗೋಲಗಮೂಡಿಗೆ ಹೋಗಿ ನಿದ್ರೆ ಮಾಡಿ, ನಂತರ ಮದ್ರಾಸಿಗೆ ಹೋಗಿ ನಿಮ್ಮ ಆಣ್ಣನ್ನ ನೋಡಿ ಬಾ" ಎಂದು ಆದೇಶಿಸಿದರು. ಶ್ರೀ ಸ್ವಾಮಿಯವರ ಆದೇಶದಂತೆ ಆ ದಿನ ಟ್ರಾಕ್ಟರ್ ನಡೆಯಿಸದಿದ್ದರೆ ಹೇಗಿರುತ್ತಿತ್ತೋ ಅಲ್ಲವೇ? **ಸ್ವಾಮಿಯವರು ಕೃಪೆ ತೋರಿಸಿದರೂ, ಆ ಕೃಪೆಯನ್ನು ನಾವು** 129
ಉಳಿಸಿಕೊಳ್ಳಬೇಕಾದರೆ, ಸ್ವಾಮಿಯವರ ಮಾತನ್ನು ನಂಬಿ ಅವರು ಆಜ್ಞಾಪಿಸಿದಂತೆ ನಡೆಯಬೇಕಲ್ಲವೇ?

ಆಗಸ್ಟು1982 ರಲ್ಲಿ ಶ್ರೀ ಸ್ವಾಮಿಯವರು ಮಹಾಸಮಾಧಿಯಾದ ಬಳಿಕ, ಒಂದು ದಿನ ಮಸ್ತಾನಯ್ಯನವರನ್ನು "ಟ್ರಾಕ್ಟರ್ ನಡಿಸ ಬೇಡ" ಎಂದು ಸ್ವಾಮಿಯವರು ಸ್ವಪ್ನದಲ್ಲಿ ಎಚ್ಚರಿಸಿದರು. ಬೆಳಗ್ಗೆ ಟ್ರಾಕ್ಟರ್ ಕೀ ತೆಗೆದುಕೊಳ್ಳಲು ಹೋದಾಗ ಎರಡು ಬಾರಿ ಕೆಳಗೆ ಬಿದ್ದಿತು. ಆದರೆ, ಆ ದಿನ ಹೊಲದಲ್ಲಿ ಉಳಡಿದ್ದರೆ, ಆಮೇಲೆ ಉಳಲು ನೀರು ಸಿಕ್ಕುವುದಿಲ್ಲ ಸಸಿಗಳನ್ನು ನೆದದಿದ್ದರೆ ಅದರಿನ್ದ ತನ್ನ ಯಜಮಾನ ರೆಡ್ಡಿಯವರಿಗೆ ತುಂಬಾ ನಷ್ಟವಾಗುತ್ತದೆ. ಏನೂ ವಿಧಿ ಇಲ್ಲದೇ, ಶ್ರೀ ಸ್ವಾಮಿಯವರಿಗೆ ನಮಸ್ಕರಿಸಿ ಉಳಲು ಪ್ರಾರಂಭಿಸಿದನು. ಹೊಲದಲ್ಲಿ, ಒಂದು ಜಾಗದಲ್ಲಿ, ದುರಸ್ತಿಗೊಂಡ ಹಳ್ಳದಲ್ಲಿ ಟ್ರಾಕ್ಟರ್ ಮುಂಭಾಗದ ಚಕ್ರ ಹೂತಿ ಹೋಯಿತು, ಗೇರನ್ನು ಬದಲಾಯಿಸಿ ಟ್ರಾಕ್ಟರ್ ನ ಎಳಿಯುವ ಪ್ರಯತ್ನ ದಲ್ಲಿದ್ದಾಗ, ಹಿಂಬದಿಯ ಚಕ್ರಗಳು ಮೇಲಕ್ಕೆ ಎದ್ದು ಟ್ರ್ಯಾಕ್ಟರ್ ತಿರುಗಿ ಬಿದ್ದುಬಿಟ್ಟಿತು. ಮಸ್ತಾನಯ್ಯ ಸ್ಟೀರಿಂಗ್ ಕೆಳಗೆ ಬಿದ್ದು ಅವನು ಕೆಸರಿನಲ್ಲಿ ಸಿಲುಕಿಕೊಂಡರು. ಹೇಗೆ ತಪ್ಪಿಸಿಕೊಂಡು ಆಚೆ ಬಂದರೋ ಅವರಿಗೇ ತಿಳಿಯದು. ಅಲ್ಲಿದ್ದ ಜನರೆಲ್ಲಾ "ಕೆಸರಿನಲ್ಲಿ ಉಳುವಾಗ, ಈರೀತಿ ಅಪಘಾತ ಆದ ಚಾಲಕರು, ಅಲ್ಲೇ ಮರಣಿಸಿದರು. ನೀನು ಬದುಕಿ ಬಂದೆ ಎಂದರೆ, ಅದು ಕೇವಲ ದೈವ ಕೃಪೆಯೇ" ಎಂದು ತಮ್ಮ ಆಶ್ಚರ್ಯವನ್ನು ಪ್ರಕಟಿಸಿದರು.

ಒಮ್ಮೆ ಆದಿನಾರಾಯಣ ರೆಡ್ಡಿಯವರ ಹೊಲದಲ್ಲಿ ನೀರಿಗೋಸ್ಕರ ನಾಲಕ್ಕು ಜಾಗದಲ್ಲಿ ಬೋರಿಂಗ್ ಪಾಯಿಂಟು ಹಾಕಲು ಎಷ್ಟು ಪ್ರಯತ್ನ ಮಾಡಿದರೂ ನೀರು ಬರಲಿಲ್ಲ. ತಮ್ಮ ಯಜಮಾನರಿಗೆ ಆಗುವ ನಷ್ಟದ ಬಗ್ಗೆ ಮಸ್ತಾನಯ್ಯ ನೊಂದುಕೊಂಡು ಸ್ವಾಮಿಯವರಿಗೆ ಮೊರೆ ಇಟ್ಟು, "ಎಲ್ಲಿ ಬೋರಿಂಗ್ ಹಾಕಿದರೆ ನೀರು ಬರುತ್ತದೆಯೋ ನೀವೇ ತಿಳಿಸಿ" ಎಂದು ಪ್ರಾರ್ತಿಸಿದರು. ಆ ರಾತ್ರಿ ಇವರ ಸ್ವಪ್ನದಲ್ಲಿ ರೆಡ್ಡಿಯವರ ಹೊಲದಲ್ಲಿ ಕಾಗೆಗಳು, ಕೊಕ್ಕರೆಗಳು, ಮತ್ತು ನರಿಗಲು ಒಂದು ಜಾಗದಲ್ಲಿ ನೀರು ಕುಡಿಯುತ್ತಿದ್ದ ದೃಷ್ಯ ಕಂಡಿತು. ಆ ದೃಷ್ಯ ಕಂಡ ಜಾಗದಲ್ಲಿ ಬೋರಿಂಗ್ ಹಾಕಿದಾಗ ಸಮೃದ್ಧಿಯಾಗಿ ನೀರು ಬಂದಿತು.

"ನೀವು ನಮ್ಮನ್ನು ನೋಡಿದರೆ, ನಾವು ನಿಮ್ಮನ್ನು ನೋಡುತ್ತೀವಿ ಅಲ್ಲವೇ",
130 "ಅವರು ನಮಗೆ ಹೇಗಿದ್ದಾರೋ ಹಾಗೆಯೇ ನಾವು ಅವರಿಗೆ ಇರುವುದು" ಎಂದು ಸ್ವಾಮಿಯವರು ಅಭಯವನ್ನು ನೀಡಿದ್ದರು ಅಲ್ಲವೇ?"

ಬ್ರಾಹ್ಮಣಪಲ್ಲಿಯ ಗ್ರಾಮಸ್ಥರು ಬಟ್ಟೆಡ್ಡಿ ಶ್ರೀನಿವಾಸುಲುರೆಡ್ಡಿಯವರ ಪತ್ನಿ ಮನೋಜಮ್ಮನವರಿಗೆ ಮದುವೆ ಆಗಿ ನಾಲಕ್ಕು ವರ್ಷಗಳಾದರೂ ಸಂತಾನವಾಗಿರಲಿಲ್ಲ. ಸ್ವಾಮಿಯವರ ಜತೆ ಅವರಿಗಿದ್ದ ಅನುಭವದಿಂದ, 1986 ಫೆಬ್ರವರೀ ರಲ್ಲಿ ಶ್ರೀ ಸ್ವಾಮಿಯವರ ಸಮಾಧಿಯನ್ನು ದರ್ಶನ ಮಾಡಿ ತನ್ನ ಕೋರಿಕೆಯನ್ನು ತಿಳಿಸಿ ಪ್ರಾರ್ಥಿಸಿದರು. ಆದಿನ ರಾತ್ರಿ ಸ್ವಾಮಿಯವರು ಆಕೆ ಸ್ವಪ್ನದಲ್ಲಿ ಕಂಡು, "ಸಂತಾನ ಪ್ರಸಾದಿಸಿದೆ" ಎಂದು ಹೇಳಿ ತಮ್ಮ ಆಶಿರ್ವಾದದ ಸೂಚನೆ ಎಂಬಂತೆ ಒಂದು ದಾರವನ್ನು ಪ್ರಸಾದಿಸಿದರು. ಬೆಳಗಾದಮೇಲೆ ನೋಡಿದರೇ ನಿಜವಾಗಿಯೂ ಸ್ವಾಮಿಯವರು ಪ್ರಸಾದಿಸಿದ ದಾರ ಆಕೆಯ ಮಂಗಳಸೂತ್ರಕ್ಕೆ ಸುತ್ತಿಕೊಂಡಿತ್ತು. ಸ್ವಪ್ನದಲ್ಲಿ ಕೊಟ್ಟ ದಾರ ಬೆಳಗ್ಗೆ ಇದ್ದದ್ದ ಅನುಭವಗಳಲ್ಲಿ ಇದು ಎರಡನೆಯದು.

ಇಬ್ರಹೀಂಪಟ್ನದ ಎಲೆಕ್ಟ್ರಿಕಲ್ ಇಂಜನೀರ್ ಪೀ.ಮಾಧವರಾವು ನವರು ಜೀವನದಲ್ಲಿ ತುಂಬಾ ಕಷ್ಟಾನಷ್ಟಗಳನ್ನು ಅನುಭವಿಸಿ ಮನಶ್ಶಾಂತಿ ಇಲ್ಲದೇ ದೈವಿಕ ಚಿಂತನೆಯಲ್ಲಿ ಆಶ್ರಯ ಪಡೆದರು. ಬೆಜವಾಡ ಕನಕದುರ್ಗಮ್ಮನವರನ್ನ ಆರಾಧಿಸತೊಡಗಿದರು. ದೇವಿಯ ಸಾಕ್ಷಾತ್ಕಾರ ಆಯಿತು. ಆದರೂ ಮನಶ್ಶಂತಿ ಮಾತ್ರ ಲಭಿಸಲಿಲ್ಲ. ಆ ಸ್ಥಿತಿಯಲ್ಲಿ ದುರ್ಗಮ್ಮನವರ ಕೃಪೆಯಿಂದ, ಶ್ರೀ ವೆಂಕಯ್ಯಸ್ವಾಮಿಯವರ ಚರಿತ್ರೆ ಸಿಕ್ಕಿ ಪಾರಾಯಣೆ ಮಾಡಿದರು. ತಕ್ಷಣವೇ ಅವರಿಗೆ ಮನಶ್ಶಾಂತಿ ಸಿಕ್ಕಿತು. ಅವರು ಸ್ವಾಮಿಯವರ ಆಶ್ರಮಕ್ಕೆ ತಿಂಗಳಿಗೆ 50ರೂ ಕಳುಹಿಸಲು ಪ್ರಾರಂಭಿಸಿ ಸ್ವಾಮಿಯವರ ಚರಿತ್ರೆ ಪಠಣ ಮತ್ತು ಪೂಜೇ ಮಾಡತೊಡಗಿದರು. ಸ್ವಾಮಿಯವರ ಮೂರನೇ ಆರಾಧನೋತ್ಸವಕ್ಕೆ ಕುಟುಂಬ ಸಮೇತರಾಗಿ ಬಂದು ಒಂದು ವಾರ ಸ್ವಾಮಿಯವರ ಸೇವೆ ಮಾಡಿದರು. 24-8-85 ರಂದು, ಸ್ವಾಮಿಯವರ ಅಮೃತಶಿಲೆ ವಿಗ್ರಹದ ಪ್ರತಿಷ್ಟಾಪನೆಯ ದಿನ, ಜನಗಳ ಮಧ್ಯದಲ್ಲಿ ನಿಂತು, ಆ ವಿಗ್ರಹ ವನ್ನು, ಸಮಾಧಿಯನ್ನು ದೂರದಿಂದ ಇಣುಕಿ ನೋಡುತ್ತಿದ್ದರು. ಸಮಾಧಿಯಿಂದ ಸ್ವಾಮಿಯವರು ಸೊಂಟದ ವರಗೆ ಎದ್ದು, ದರ್ಶನ ಕೊಟ್ಟು, "ಇಕ್ಕಡೇಮಿ ಚೂಸ್ತಾವು, ಅಂದರಿಲೋ ನನ್ನು ಚೂಡು" (ಇಲ್ಲಿ ಏನು ನೋಡುತ್ತೀಯ, ಎಲ್ಲರಲ್ಲಿ ನನ್ನನ್ನು ನೋಡು" ಎಂದು ಹೇಳಿ ಅದೃಶ್ಯವಾದರು. ಅದರಿಂದ ಆರಂಭಿಸಿ ಅನ್ನಸಂತರ್ಪಣೆಯ ಬಳಿ ಸೇವೆಯಲ್ಲಿ ಪಾಲ್ಗೊಂಡರು.

ಅವರು ಇನ್ನೂ ತುಂಬಾ ವಿಷಯಗಳನ್ನು ಹೇಳಿದರು. "ನನಗೆ 1 1/2 ವರ್ಷ ದಿಂದ ಎದೆಯ ಎಡಭಗದಲ್ಲಿ ನೋವಾಗುತ್ತಿತ್ತು. ಹೆಚ್ಚು ಸಮಯ ಧ್ಯಾನದಲ್ಲಿ ಕುಳಿತುಕೊಳ್ಳಲು ಸಾಧ್ಯ ಆಗುತ್ತಿರಲಿಲ್ಲ. ವೈದ್ಯರು ಕೊಟ್ಟ ಔಷಧಿಗಳು ಪ್ರಯೋಜನವಾಗಲಿಲ್ಲ. ಪ್ರಾಣಾಪಾಯ ಇದೆ ಎಂದು ಭಯವಾಯಿತು. "ದಯವಿಟ್ಟು ನನ್ನ ಬಾಧೆಯನ್ನು ನಿವಾರಿಸಿ ಮತ್ತು ನಿಮ್ಮ ಧ್ಯಾನದಲ್ಲಿ ನನ್ನ ಸಮಯವನ್ನು ಕಳೆಯುವಂತೆ ಮಾಡಿ ಸ್ವಾಮೀ" ಎಂದು ಆರಾಧನೆಗೆ ಬಂದಾಗ ಪ್ರಾರ್ಥಿಸಿಕೊಂಡೆ. ಅವರ

ಸಮಾಧಿಯನ್ನು ಬಿಡಲಾರದೇ ಎಷ್ಟೋ ದುಃಖದಿಂದ ಮನೆಗೆ ಬಂದೆ. ಮನೆಗೆ ಬಂದ ಮರುದಿನದಿಂದ 15 ದಿನಗಳು ರಕ್ತ ವಿರೇಚನೆ ಆಯಿತು. 16 ನೇ ದಿನದಿಂದ ನಿಂತುಹೋಗಿ, ಎದೆ ನೋವು ಕೂಡಾ ಶಾಶ್ವತವಾಗಿ ಮಾಯ ಆಯಿತು. ಸ್ವಪ್ನದಲ್ಲಿ, ಶ್ರೀ ಲಕ್ಷ್ಮೀ ನಾರಾಯಣರ ರೂಪ ದರ್ಶನ ಆಯಿತು. ಈಗ ಮೊದಲಿಗಿಂತ ಎಷ್ಟೋ ಹೊತ್ತು ಧ್ಯಾನ ಮಾಡಲು ಸಾಧ್ಯವಾಗುತ್ತಿದೆ."

"ಆಗಸ್ಟ್ ತಿಂಗಳಿನಲ್ಲಿ, ಶ್ರೀ ಸಾಯಿನಾಥರು ಕಾಣಿಸಿಕೊಂಡು, ಕೋಣೆ ಸ್ವಚ್ಛವಾಗಿದೆ ಆದರೆ ಮೇಲೆ ಜೇಡರ ಬಲೆ ಇದೆ. ಆ ಬಲೆಯನ್ನು ಶುಭ್ರಪಡಿಸಿದಮೇಲೆ ಕೋಣೆಯೊಳಗೆ ಬರುತ್ತೇನೆ ಅಂದರು. ಇದು ಬಾಬಾರವರು ನನಗೆ ಮಾಡಿದ, ಆಧ್ಯಾತ್ಮಿಕ ಬೋಧನೆ ಎಂದು ನಂಬುತ್ತಿದ್ದೇನೆ.

ಸೆಪ್ಟೆಂಬರ್ 85 ರಿಂದ ಸ್ವಾಮಿಯವರು ಆಧ್ಯಾತ್ಮಿಕ ಬೋಧನೆ ಮಾಡುತ್ತಾ ಆ ಮಾರ್ಗದಲ್ಲಿ ನಡೆಸುತ್ತಿದ್ದರೆ. ಎಷ್ಟು ಒಳ್ಳೆಯ ಅವಗಾಹನೆ, ಹೃದಯ ಸ್ಪಂದನೆ, ಮನಶ್ಶಂತಿ ಪ್ರಸಾದಿಸಿದರೋ ಹೇಳಲು ಸಾಧ್ಯವಿಲ್ಲ. ಆಧ್ಯಾತಿಮ ವಿಷಯಗಳನ್ನು ಬೋಧಿಸುತ್ತಾ, ದೃಶ್ಯ ರೂಪದ ಮೂಲಕ ಕರ್ಮಕ್ಷಾಲನೆ ಮಾಡುತ್ತಿದ್ದಾರೆ. ಶ್ರೀ ಸ್ವಮಿಯವರಿಗೆ ಅಖಂಡ ದೀಪಾರಾಧನೆ ಮಾಡಿ, ಅವರ ಮಹಿಮೆ, ವಿಶ್ವರೂಪವನ್ನು ನೋಡಿ ಆನಂದಿಸುತ್ತಿದ್ದೇನೆ. ಈ ಜನ್ಮಕ್ಕೆ ಇದಕ್ಕಿಂತ ಎನ್ನೇನೂ ಹೆಚ್ಚಿಗೆ ಬೇಡ."

"ಸ್ವಾಮೀ! ನೀವು ಸಮಾಧಿ ಹೊಂದಿದರೆ ನಮ್ಮ ಗತಿಯೇನು?" ಎಂದು ದುಃಖ್ಖ ಪಟ್ಟ ಭಕ್ತರಿಗೆ "ಎಕ್ಕಡಿಕಯ್ಯ ಮೇಂ ಪೋಯೇದಿ ಸೂರ್ಯ ಚಂದ್ರುಲುನ್ನಂತ ವರಕು ವುಂಡೇದೇಗದಯ್ಯಾ!?(ನಾವು ಎಲ್ಲಿಗೆ ಹೋಗುತ್ತೇವೆ? ಸೂರ್ಯ ಮತ್ತು ಚಂದ್ರರು ಇರುವವರೆಗೂ ನಾವು ಇರುತ್ತೇವೆ ಅಲ್ಲವೇ?) ಎಂದು ಹೇಳಿದಾಗ, ಭಕ್ತರಿಗೆ ಅದು ಹೇಗೆ ನಿಜವಾಗುತ್ತದೆ ಎಂದು ಅರ್ಥ ಆಗಲಿಲ್ಲ. ಆದರೆ, ಸಮಯ ಕಳೆದಂತೆ, ಸ್ವಾಮಿಯವರ ಸಮಾಧಿಯ ಸಮಯದಿಂದ, ಅವರು ತಮ್ಮ ಭಕ್ತರೊಂದಿಗೆ ಮಾತನಾಡುತ್ತಿರುವ ಮತ್ತು ಅವರ ಪ್ರಾರ್ಥನೆಗಳನ್ನು ಕೇಳುತ್ತಿರುವ ಹಲವಾರು ಲೀಲೆಗಳು ತಿಳಿಸುತ್ತಿವೆ. ಸ್ವಾಮಿಯವರ ಸಮಾಧಿಯ ದರ್ಶನ ಮಾದಲಾಗದೆ, ದೂರದಲ್ಲಿ ತಮ್ಮ ಮನೆಗಳಲ್ಲಿ ಸ್ವಾಮಿಯವರ ಪಟದ ಮುಂಡೆ ಭಕ್ತಿಯಿಂದ ತಮ್ಮ ಕಷ್ಟಗಳನು ಹೇಳಿಕೊಂಡು ಪ್ರಾರ್ಥಿಸಿದವರ ಕಷ್ಟಗಳು ಕೂಡ ನಿವಾರಣೆ ಮಾಡುತ್ತಿದ್ದಾರೆಂದರೆ ಭಕ್ತಿಯ ಅವಲಂಬನೆಯು ನಮ್ಮನ್ನು ಸಂತೋಷದಲ್ಲಿ ಮುಳುಗಿಸುತ್ತದೆ.

ನೆಲ್ಲೂರು ಪ್ರಭುತ್ವ ಆಸ್ಪತ್ರೆ ಯಮ್.ಎನ್.ಓ.ಸಿ.ವಿ. ಸುಬ್ಬಯ್ಯನವರು ಸ್ವಾಮಿಯವರಿಂದ ತಮಗೆ ಆದ ಅನುಭವಗಳನ್ನು ಹೀಗೆ ತಿಳಿಸಿದರು. 1977 ರಲ್ಲಿ ತುಫಾನು ಬಂದು ನಮ್ಮ ಮನೆ ಬಿದ್ದುಹೋಯಿತು. ಎರಡು ಕಡೆ ಮಣ್ಣಿನ ಗೋಡೆಯಿಂದ ಮತ್ತೆ ಮನೆ ಕಟ್ಟಿಕೊಂಡೆವು.1978 ರಲ್ಲಿ ಮತ್ತೆ ಮೂರು ದಿನಗಳಿಂದ ಚಂಡಮಾರುತದ ಭೀತಿ ಇತ್ತು. ಕರೆಂಟು ಇರಲಿಲ್ಲ. ಬಲವಾದ ಗಾಳಿಯಿಂದ, ಮನೆ, ಗೋಡೆಗಳ ಸಹಿತ ಜೋರಾಗಿ ತೂಗಾಡಲು ಪ್ರಾರಂಭಿಸಿತು. ರಾತ್ರಿ ಆದ್ದರಿಂದ ಮನೆ ಬಿಟ್ಟು ಬೇರೆ ಜಾಗಕ್ಕೆ ಹೋಗುವ ಪರಿಸ್ಥಿತಿ ಇಲ್ಲದೆ, "ಸ್ವಾಮೀ! ಹೋದ ವರ್ಷ ಮನೆ ಬಿದ್ದುಬಿಟ್ಟು ಬಹಳ

ಕಷ್ಟನಷ್ಟಕ್ಕೆ ಗುರಿಯಾದೆ. ಮತ್ತೆ ಈಗಲೂ ಅದೇ ಪರಿಸ್ಥಿತಿ ಬರುವಂತೆ ಮಾಡುತ್ತಿದ್ದೀರಾ? ಏನಾದರೂ ಈ ಮನೆಯನ್ನು ಬಿಟ್ಟು ಹೋಗಲಾರೆ, ಕರುಣೆ ತೋರಿಸಿ" ಎಂದು ಬೇಡಿಕೊಂಡು ಮಲಗಿದೆ. ತಕ್ಷಣವೇ ಸ್ವಪ್ನದಲ್ಲಿ ಶ್ರೀ ಸ್ವಾಮಿಯವರು ಕಂಡರೆಂದು, ಎಚ್ಚರವಾಗಿ, ದೀಪ ಹಚ್ಚಿ ನೋಡಿದರೇ ಯಾರೂ ಇರಲಿಲ್ಲ. ಸ್ವಾಮಿಯವರ ಪಟಕ್ಕೆ ನಮಸ್ಕರಿಸಿ, ಮತ್ತೆ ಮಲಗಿದೆ. ಆ ಗಾಳಿ ಹೇಗೆ ಕಡಿಮೆ ಆಯಿತೋ ಗೊತ್ತಿಲ್ಲ! ನಮ್ಮ ಪ್ರಾಂತದಲ್ಲಿ ಅನೇಕ ಮನೆಗಳು ಬಿದ್ದು ಹೋಗಿದ್ದವು, ಆದರೆ ನಮ್ಮ ಮನೆ ಮಾತ್ರ ಹಾಗೇ ಇತ್ತು. ಸ್ವಾಮಿಯವರು ಆ ವಿಧವಾಗಿ ದರ್ಶನ ಕೋಡದಿದ್ದರೆ, ನಮ್ಮ ಮನೆ ಬೀಳದೇ ಇದ್ದದ್ದು ಸ್ವಾಮಿಯವರ ಕೃಪೆಯಿಂದ ಎಂದು ನಂಬುತ್ತಿರಲಿಲ್ಲವೇನೋ!

ಸ್ವಾಮಿಯವರು ಜೀವಂತರಾಗಿದ್ದಾಗ, ನನಗೆ ಯಾವಾಗಲೂ ಅವರ ಕಾಲು ಮುಟ್ಟಿ ನಮಸ್ಕರಿಸಲು ಬಿಡುತ್ತಿರಲಿಲ್ಲ. ಯಾವಾಗಲಾದರೂ, ನನಗೆ ಆ ಅವಕಾಶ ಬರದೇ ಹೋಗುತ್ತದೆಯೇ ಎಂದು ಆ ದಿನವನ್ನು ಎದುರು ನೋಡುತ್ತಿದ್ದೆ. ಆದರೆ ನನಗೆ ಆ ಭಾಗ್ಯ ಸಿಗದೇ ಸ್ವಾಮಿಯವರು ತಮ್ಮ ಶರೀರವನ್ನು ತ್ಯಜಿಸಿದರು. ಸ್ವಾಮಿಯವರು ನನಗೆ ಆ ಅವಕಾಶವನ್ನು ನೀಡಲಿಲ್ಲ ಎಂಬ ಕೊರತೆಯನ್ನು ನಾನು ಅನುಭವಿಸುತ್ತ ವ್ಯಥೆ ಪಡುತ್ತಿದ್ದೆ.

ಆದಾಗ್ಯೂ, ಅಕ್ಟೋಬರ್ 1985 ರಲ್ಲಿ, ನಾನಗೊಂದು ಸ್ವಪ್ನದಲ್ಲಿ, ಸ್ವಾಮಿಯವರು ಬಹಳ ವೇಗವಾಗಿ ನಡೆದುಕೊಂಡು ಹೋತ್ತಿದ್ದರು. ನಾನು ಸ್ವಾಮಿಯವರ ಎದುರಿಗೆ ಹೋಗಿ, ಅವರ ಕಾಲನ್ನು ಗಟ್ಟಿಯಾಗಿ ಹಿಡಿದುಕೊಂಡು ಒಂದು ಅಂಗುಲ ಕೂಡ ಅಲುಗಾಡಲು ಬಿಡಲಿಲ್ಲ. ಶ್ರೀ ಸ್ವಾಮಿಯವರು, ತಮ್ಮ ತಲೆಕೆರೆದುಕೊಳ್ಳುತ್ತಾ, ನಗುತ್ತಾ ಹಾಗೆ ನಿಂತಿದ್ದರು. ನಾನು ತೃಪ್ತಿಯಾಗುವವರೆಗೂ ನಮಸ್ಕಾರ ಮಾಡಿದೆ. ಅದು ಸ್ವಪ್ನದ ಅಂತ್ಯವಾಯಿತು. ಅವತ್ತಿನ ದರ್ಶನ ನನ್ನ ಹೃದಯದಲ್ಲಿ ಮರೆಯಲಾರದ ಮುದ್ರೆಯಾಗಿ ನಿಂತಿತು. ಆ ಸ್ವಪ್ನ ಯಾವಾಗ ನೆನಪಿಸಿಕೊಂಡರೂ ಆ ಅನುಭವ ತುಂಬಾ ಆನಂದದಲ್ಲಿ ಮುಳಿಗಿಸುತ್ತದೆ. ಸ್ವಾಮಿಯವರು, ನನ್ನ ತೀರದ ಆಸೆಯನ್ನು, ಸ್ವಪ್ನದ ಮೂಲಕ ತೀರಿಸಿದರು. ಆ ನಂತರವೂ ಸ್ವಾಮಿಗಳು ನನ್ನನ್ನು ಅನೇಕ ಬಾರಿ ರಕ್ಷಿಸಿದರು. 1983 ರಲ್ಲಿ ನಡೆದ ಒಂದು ವಿಚಿತ್ರವಾದ ಸ್ವಾಮಿಯವರ ಲೀಲೆಯನ್ನು ಹೇಳುತ್ತೇನೆ.

ನನಗೆ, ಗೊಲ್ಲಕಂದುಕೂರು ಎನ್ನುವ ಊರಿಗೆ ಎರಡು ಮೈಲಿ ದೂರದಲ್ಲಿ ಕೃಷಿಯೋಗ್ಯ ಭೂಮಿಗಳು ಇವೆ. ಒಮ್ಮೆ, ಹೊಲಕ್ಕೆ ನೀರು ಬಿಡಬೇಕಾಗಿಬಂದು, ಕನುಪೂರು ಕಾಲುವೆಗೆ ಆಯಿಲ್ ಎಂಜಿನ್ ಅನ್ನು ಬಿಗಿಗೊಳಿಸಿ, ನೀರು ಬೇಕಾಗಿದ್ದಾಗ, ನೀರು ಬಿಡುತ್ತಿದ್ದೆ. ಒಂದ್ತಿ್ತಕೊಂಡು ಹೋಗುತ್ತಿದ್ದರೆ, ಕೃಷಿ ಮಾಡುವುದುಉ ರಾತ್ರಿ, ಎಂಜಿನ್ ತೈಲ ಪೈಪ್ ಮತ್ತು ಅಟೊಮೈಜರ್(Automizer) ಅನ್ನು ಕಳ್ಳರು ಕದ್ದು ಬಿಟ್ಟರು. ನನಗಿದ್ದ ಎಷ್ಟೋ ಕೆಲಸಗಳನಡುವೆ, ಪ್ರತಿದಿನ ಇಂಜಿನನ್ನು ಕಾವಲು ಕಾಯುವುದು ನನಗೆ ಅಸಾಧ್ಯವಾಯಿತು. ಹೀಗೆ ಕಳ್ಳರು ಪ್ರತಿ ದಿನ ಇಂಜಿನು ಸಾಮಾನುಗಳನ್ನು ಎತ್ತಿಕೊಂಡು ಹೋಗುತ್ತಿದ್ದರೆ, ಸೈದ್ಯ ಮಾಡಲಾರೆ ಎಂದುಕೊಂಡೆ. ನಾನು ವಾರಕ್ಕೊಮ್ಮೆಯಾದರೂ ಗೊಲಗಮೂಡಿಗೆ ಹೋಗಿ ಸ್ವಾಮಿಯವರ ಸಮಾಧಿಯನ್ನು ದರ್ಶಿಸಿ, ಸೇವೆ ಮಾಡಿಕೊಂಡು ಬರುವುದು ನನಗೆ ರೂಢಿ. ಅದೇ ಪ್ರಕಾರ, ನಾನು ಗೊಲಗಮೂಡಿಗೆ

ಹೋಗಿ, ನನಗೆ ನಡೆದ ನಷ್ಟದ ವಿಚಾರ ಅಲ್ಲಿದ್ದ ಸ್ವಾಮಿಯವರ ಭಕ್ತರೊಂದಿಗೆ ಹೇಳಿಕೊಂಡೆ. ಅದನ್ನು ಕೇಳಿದ ಪೂಜಾರಿ ನಾಗಯ್ಯ ನವರು, ಸ್ವಾಮಿಯವರ ಒಂದು ದಾರವನ್ನು ನನ್ನ ಕೈಗೆ ಕೊಟ್ಟು, "ಈ ದಾರವನ್ನು ಸಂಪೂರ್ಣ ನಂಬಿಕೆಯಿಂದ ನಿನ್ನ ಆಇಲ್ ಇಂಜಿನ್ಗೆ ಕಟ್ಟು! ಕಳ್ಳರು ಬರುವುದಿಲ್ಲ. ಒಂದು ವೇಳೆ ಬಂದರೂ ಅವರೇ ಹೊರಟುಹೋಗುತ್ತಾರೆ" ಎಂದರು. ಅವರು ಹೇಳಿದ ಪ್ರಕಾರ, "ಸ್ವಾಮೀ! ಈ ಇಂಜಿನ್ ನೀವೆ ರಕ್ಷಿಸಬೇಕು. ಮತ್ತೆ ಕಳ್ಳರು ಬಂದು ಕದ್ದರೆ, ಬರುವ ನಷ್ಟವನ್ನು ನಾನು ತಡಿಯಲಾರೆ. ನಿಮ್ಮಮೇಲೆ ನಾನು ಹೊರಯನ್ನು ಹಾಕಿ ಬಿಟ್ಟಿದ್ದೇನೆ" ಎಂದು ಮನಸ್ಪೂರ್ತಿಯಗಿ ಪ್ರಾರ್ಥಿಸಿ ದಾರವನ್ನು ಇಂಜಿನ್ ಗೆ ಕಟ್ಟಿಬಿಟ್ಟೆ.

ನಂತರ ಸ್ವಲ್ಪ ದಿನ ನಾನು ಇಂಜಿನ್ ಕಡೆಗೆ ಹೋಗಲಿಲ್ಲ. ಡಿಸೆಂಬರ್ 84 ರಲ್ಲಿ ನನ್ನ ಜೊತೆರೈತರು, ನನ್ನ ಬಳಿ ಬಂದು 'ಎರಡು ದಿನಗಳಿಂದ ಹೊಲದಲ್ಲಿ ನಿನ್ನ ಇಂಜನ್ ಸಾಮಾನುಗಳನ್ನು ಬೇರೆ ಬೇರೆ ಆಗಿ ಬಿದ್ದಿದ್ದವೆ. ಹೋಗಿ ನೋಡು' ಎಂದರು. ನಾನು ಘಾಬರಿಯಿಂದ ಓಡಿ ಹೋಗಿ ನೋಡಿದರೇ, ಇಂಜನ್ ಸಾಮಾನುಗಳು ಬೇರೆ ಬೇರೆಯಾಗಿ ಬಿದ್ದಿದ್ದವು ಆದರೆ, ಬೇರೆ ಬೇರೆ ಮಾಡಿದ ಒಂದು ಭಾಗವನ್ನು ಕೂಡ ತೆಗೆದುಕೊಂಡು ಹೋಗಿರಲಿಲ್ಲ. ಇಂಜಿನ್ ರಕ್ಷಕರು ಸ್ವಾಮಿಯವರಲ್ಲದೇ ಬೇರೆ ಯಾರು??

ಶ್ರೀ ಸ್ವಾಮಿಯವರು ನಮ್ಮಿಂದ ಕೋರುವ ದಕ್ಷಿಣೆ, ನಮ್ಮ ಮನಸ್ಸು, ನಮ್ಮ ಸಮಯ ಮಾತ್ರವೇ. ಅವುಗಳನ್ನು, ಲೌಕಿಕ ವ್ಯವಹಾರಗಳಲ್ಲಿ ವ್ಯರ್ಥಮಾಡದೆ, ಅವರ ಸ್ಮರಣೆಯಲ್ಲಿ ನಿರತರಾಗಿದ್ದರೆ ನಮಗೆ ಅವರಿಂದ ರಕ್ಷಣೆ ಹೇಗೆ ಸಿಕ್ಕುತ್ತದೆಯೋ ನೋಡಿ.

ಮನುಬೋಲು ಎಂಬ ಗ್ರಾಮದ ನಿವಾಸಿ, ನಟ್ಟೇಟಿ ಲಕ್ಷ್ಮಮ್ಮನವರು ಪ್ರತಿದಿನ ಕನಸಿನಲ್ಲಿ ಯಮದೂತರನ್ನು ನೋಡುತ್ತಿದ್ದರು, ಅದರಿಂದ ಅವರು ಭಯಪಡುತ್ತಿದ್ದರು. ಹಗಲಿನ ಹೊತ್ತೂ ಬಹಳ ಭಯಪಡುತ್ತಿದ್ದರು. ಅವರಿಗೆ ಯಾವಾಗಲೂ ಒಬ್ಬರು ಜೊತೆ ಬೇಕಾಗಿತ್ತು. ಅವರು ಸ್ವಾಮಿಯವರ ಸಮಾಧಿಯನ್ನು ದರ್ಶನ ಮಾಡಿ ಬೆಳಗ್ಗೆ ಐದು , ಸಂಜೆ ಐದು ಪ್ರದಕ್ಷಿಣೆ ಮಾಡಿ ಮಿಕ್ಕ ಸಮಯದಲ್ಲಿ ಎನೋ ಮಾತನಾಡುತ್ತಾ ಕಾಲ ಕಳೆಯುತ್ತಿದ್ದರು. 20 ದಿನಗಳಾದರೂ ಅವರಿಗೆ ಏನೂ ಫಲಿತ ಸಿಗಲಿಲ್ಲ. ಒಬ್ಬ ಭಕ್ತನ ಸಲಹೆಯ ಮೇಲೆ ಬೆಳಗ್ಗೆ 108, ಸಂಜೆ 108 ಪ್ರದಕ್ಷಿಣೆಗಳು ಮಾಡಿ ಮಿಕ್ಕ ಸಮಯದಲ್ಲಿ ಸ್ವಾಮಿಯವರ ಸ್ಮರಣೆ ಮಾಡುತ್ತಾ ಇರುತ್ತಿದ್ದರು. ಮೂರನೇಯ ದಿನ ಮಧ್ಯಾಹ್ನ ಸ್ವಾಮಿಯವರ ಧುನಿಯ ಹತ್ತಿರ 12 ವರ್ಷದ ಬಾಲಕ ಇವರ ಕೈಗೆ ವಿಭೂತಿ ಕೊಟ್ಟ. ಲಕ್ಷ್ಮಮ್ಮನವರು, ಆ ವಿಭೂತಿಯನ್ನು ತಿಂದರು. ಅವರು ತಿಂದ ತಕ್ಷಣ ಆ ಬಾಲಕ ಅದೃಷ್ಯನಾದ. ಆ ಕ್ಷಣದಿಂದ ಆಕೆಗೆ ಭಯ ಹೋಯಿತು. ಸ್ವಾಮಿಯವರೇ ಬಾಲಕನ ರೂಪದಲ್ಲಿ ಆಕೆಯನ್ನು ಅನುಗ್ರಹಿಸಿದರು. ಅವರು ಪ್ರತಿದಿನ ನಿರಂತರ ಮುಟ್ಟಿನ ನೋವು ಅನುಭವಿಸುತ್ತಿದ್ದರು. ಶ್ರೀ ಸ್ವಾಮಿಯವರು ಸ್ವಪ್ನದಲ್ಲಿ ಕಂಡು, "3 ತಿಂಗಳು ಟೈಂ ಇದೆ. ಶ್ರದ್ದೆಯಿಂದ, ವಿಷ್ವಾಸವಿಟ್ಟು ನನ್ನನ್ನು ಸ್ಮರಿಸು" ಎಂದು ಹೇಳಿದರು. ಆಕೆಗೆ, ಸ್ವಾಮಿಯವರ ಸ್ಮರಣೆ ಮತ್ತು ಮೌನ ಅವನ್ನು ಅವರ ಕಷ್ಟದಿಂದ ಪಾರು ಮಾಡಿತು.

ಕೋವುರು ಗ್ರಾಮದಲ್ಲಿ ಐ.ಟೀ.ಐ ಕಂಪನೀಯಲ್ಲಿ ಕೆಲಸ ಮಾಡುತ್ತಿದ್ದ ವೈದ್ಯುಲ ಸುಧಾಕರ್ ಸ್ವಾಮಿಯವರಿಂದ ಪಡೆದ ಅನುಭವ ಹೀಗಿತ್ತು. " ಜನವರೀ 1983 ನನ್ನ ಬೀ.ಪೀ 240/89 ಇತ್ತು. ಮಾಮೂಲಾಗಿ, ರಕ್ತದೊತ್ತಡ ಸಾಮಾನ್ಯಕ್ಕಿಂತ ಹೆಚ್ಚಿದ್ದರೆ, ಅದು ಪಕ್ಷವಾತವೋ ಅಥವಾ ಇತರ ಅಪಾಯಕಾರಿ ಕಾಯಿಲೆಗೆ ಕಾರಣವಾಗುತ್ತದೆ. ಆದರೆ ನನಗೆ ಅಂತಹ ಯಾವುದೇ ಲಕ್ಷಣಗಳು ಕಂಡುಬಂದಿಲ್ಲ ಎಂದು ವೈದ್ಯರು ಆಶ್ಚರ್ಯಪಟ್ಟರು. ಇದರ ಜೊತೆಗೆ, ಆ ವೈದ್ಯರ ಅಸಿಸ್ಟೆಂಟ್, ಶೀಘ್ರವೇ ಕಣ್ಣಿನ ದೃಷ್ಟಿ ಹೋಗುತ್ತದೆ, ಆಪರೇಷನ್ ಮಾಡಿದರೂ ಪ್ರಯೋಜನವಾಗುವುದಿಲ್ಲ ಎಂದರು. ಮದ್ರಾಸ್ ಕರೆದುಕೊಂಡು ಹೋಗಿ ಅಲ್ಲಿ ಚಿಕಿತ್ಸೆ ಮಾಡಿಸಿದರು. ಅಲ್ಲಿ ವೈದ್ಯರು ನನಗೆ, ಜೀವನ ಪೂರ್ತಿ ಔಷಧಿ ಬಳಸುತ್ತಾ ಉಪ್ಪು, ಕಾರ ಇಲ್ಲದ ಆಹಾರವನ್ನು ತೆಗೆದುಕೊಳ್ಳುತ್ತಿರಬೇಕು" ಎಂದು ಸಲಹೆ ನೀಡಿದರು. "ಅಂತಹ ಸಂಕಟ ಪರಿಸ್ಥಿತಿಯಲ್ಲಿ, ನಾನು ಸಾಯಿ ಲೀಲಾಮೃತ, ಶ್ರೀ ಗುರುಚರಿತ್ರೆಯ ಜೊತೆಗೆ ಶ್ರೀ ವೆಂಕಯ್ಯಸ್ವಾಮಿಯವರ ಅವಧೂತಲೀಲೆ ಪಠಣ ಮಾಡಿ, ತಕ್ಷಣ ಗೊಲಗಮೂಡಿಯಲ್ಲಿ ಸ್ವಾಮಿಯವರ ಸಮಾಧಿಯನ್ನು ದರ್ಶಿಸಿದೆ. ಆ ರಾತ್ರಿ ನನ್ನ ಸ್ನೇಹಿತನ ಮನೆಯಲ್ಲಿ ಒಬ್ಬ ಸಾಧು ನನಗೆ ತೀರ್ಥ ಕೊಟ್ಟಹಾಗೆ ಒಂದು ಕನಸು ಬಿತ್ತು. ಎಚ್ಚರವಾಗಿ ಎದ್ದು ಬಿಟ್ಟೆ. ಆಗ ಅದು ಬೆಳಗಿನ ಜಾವ 4 ಆಗಿತ್ತು. ಶ್ರಿ ಸ್ವಾಮಿಯವರ ಪೂಜೆಗೆ ಹೋಗಬೇಕೆಂದು ಏಳುತ್ತಿದ್ದಾಗ, ಸಮಾಧಿ ಮಂದಿರದ ಪಶ್ಚಿಮಕ್ಕೆ, ಆಕಾಶದಲ್ಲಿ ದೊಡ್ಡ ಕೆಂಪು ಸುತ್ತಿನ ಬೆಳಕು ಕಾಣಿಸಿತು. ಆ ಬೆಳಕನ್ನು ನನ್ನ ಹೆಂಡತಿಗೂ ತೋರಿಸಿದೆ. ಆದು ಯಾವ ಬೆಳಕು ಎಂದು ಎಷ್ಟು ಯೋಚಿಸಿದರೂ ನಮಗೆ ಅರ್ಥವಾಗಲಿಲ್ಲ. ನಾವು ಪೂಜೆಗೆ ಹೋಗಿ, ಪೂಜೆ ಮುಗಿಸಿ ಬಂದಾಗ ಆ ಬೆಳಕು ಇರಲಿಲ್ಲ. ಸ್ವಾಮಿಯವರೇ ಆ ಬೆಳಕಿನ ರೂಪದಲ್ಲಿ ದರ್ಶನ ಕೊಟ್ಟರೆಂದು ಬಹಳ ಸಂತೋಷ ಪಟ್ಟೆವು. ಅಂದಿನಿಂದ ಕ್ರಮೇಣ ನನ್ನ ರಕ್ತದ ಒತ್ತಡ ಕಡಿಮೆಯಾಗಿ, ನನ್ನ ಆರೋಗ್ಯ ಸಾಮಾನ್ಯ ಸ್ಥಿತಿಗೆ ಬಂದಿತು. ಈಗ ನಾನು ಉಪ್ಪು ಮತ್ತು ಕಾರದ ಆಹಾರ ಕೂಡಾ ತಿನ್ನುತ್ತಿದ್ದೇನೆ".

"ಆದರೆ, ವೈದ್ಯರು ಹೇಳಿದಂತೆ ಪಥ್ಯ ಮಾಡದೇ ಇದ್ದುದರಿಂದ ಡೆಸೆಂಬರ್ 85 ರಲ್ಲಿ ಮತ್ತೆ ರಕ್ತದ ಒತ್ತಡ ಬಂದು ತುಂಬಾ ಗಂಭೀರ ಪರಿಸ್ಥಿತಿ ಉಂಟಾಯಿತು. ವೈದ್ಯರು, '24 ಗಂಟೆಗಳ ನಂತರ ಏನಾದರೂ ಹೇಳಬಹುದು' ಎಂದರು. ನನ್ನ ಹೆಂಡತಿ, ಸ್ವಾಮಿಯವನ್ನು ಆಶ್ರಯಿಸಿ, ಪ್ರಾರ್ಥನೆ ಮಾಡಿದಳು. ಸ್ವಾಮಿಯವರ ಕೃಪೆಯಿಂದ ಆ ಪ್ರಮಾದ ತಪ್ಪಿ ಆರೋಗ್ಯವಂತನಾದೆ. ಅಂದಿನಿಂದ, ಪಥ್ಯದ ವಿಚಾರದಲ್ಲಿ ಬಹಳ ಜಾಗ್ರತೆ ವಹಿಸುತ್ತಿದ್ದೆನೆ.

ಪೊದಲಕೂರು ಗ್ರಾಮಸ್ಥ ಚಿರಮನ ವೆಂಕಯ್ಯ 1984 ರಲ್ಲಿ ಡಿಸೆಂಬರ್ ತಿಂಗಳಿಂದ ಎರಡು ತಿಂಗಳುಕಾಲ ಆಹಾರ ತೆಗೆದುಕೊಳ್ಳಲಾಗದೇ ತುಂಬಾ ಬಲಹೀನರಾಗಿ, ಯಾರಾದರೂ ಹಿಡಿದುಕೊಂಡರೆ ಎರಡು ಹೆಜ್ಜೆ ಇಡುತ್ತಿದ್ದರು. ಅವರಿಗೆ ಕೆಮ್ಮು, ಸುಸ್ತು, ಕಫ ಜೊತೆಗೆ ಸ್ವಲ್ಪ ರಕ್ತವೂ ಬರುತ್ತಿತ್ತು. ಪೊದಲಕೂರಿನ, ಬುಚ್ಚಿರೆಡ್ಡಿಪಾಳೆಂ ನಲ್ಲಿ ಇದ್ದ ಯಂ.ಬೀ.ಬೀ.ಯಸ್ ವೈದ್ಯರಿಗೆ ಏನೂ ಮಾಡಲು ಸಾಧ್ಯವಾಗಲಿಲ್ಲ. ಅವರ

ಬಂಧುಗಳ ಸಲಹೆಯಂತೆ ಶ್ರೀ ಸ್ವಾಮಿಯವರ ಸಮಾಧಿಯನ್ನು ದರ್ಶಿಸಿದರು. ಮರುದಿನದಿಂದ, ಸ್ವಲ್ಪ ನೆಮ್ಮದಿ ಸಿಕ್ಕಿ, ಆಹಾರ ತಿಂದು, ನಡೆಯ ತೊಡಗಿದರು. ಐದನೇ ದಿನದ ರಾತ್ರಿ ಸ್ವಾಮಿಯವರು ಸ್ವಪ್ನದಲ್ಲಿ ಕಂಡು, ತಮ್ಮ ಕೈಯಿಂದ ಶ್ವಾಸ ಕೋಶದಲ್ಲಿ ಒಂದು ಗಡ್ಡೆಯನ್ನು ಹೊಸೆದು ಹಾಕಿದ ಹಾಗೆ, ಅದರಿಂದ ರಕ್ತ, ಮತ್ತು ಕೀವು ಇವರ ಬಾಯಿನಿಂದ ಹೊರಗೆ ಬಂದಂತೆ ಕಂಡಿತು. ತಕ್ಷಣ ಎಚ್ಚರವಾಯಿತು. ಜೋರಾಗಿ ಕೆಮ್ಮು ಬಂದು ಯಾವಾಗಲೂ ಬೀಳದಷ್ಟು ಕೇವು, ರಕ್ತ ಹೊರಗೆ ಬಿತ್ತು. 90% ಅರೋಗ್ಯವಂತರಾದರು. 8 ನೇ ದಿನ ಸ್ವಪ್ನದಲ್ಲಿ ಸ್ವಾಮಿಯವರು ಮತ್ತೆ ಕಂಡು, ಆ ಗೆಡ್ಡೆಯನ್ನು, ಹಾಲುಕರೆಯುವಹಾಗೆ, ಹಿಚುಕಿ ಒಂದು ಕೆಟ್ಟ ಪದಾರ್ಥವನ್ನು ಒಂದು ಎಲೆಯಮೇಲೆ ಇರಿಸಿ ತೋರಿಸಿದರು. ಬೇಳಗಾದ ನಂತರದಿಂದ ನಾಲುಕ್ಕು ದಿನಗಳಲ್ಲಿ ಸಂಪೂರ್ಣವಾಗಿ ಆರೋಗ್ಯವಂತನಾದರು. ಅವರು ಇವತ್ತಿಗೂ ಸ್ವಾಮಿಯವರ ಸಮಾಧಿಯನ್ನು ಸೇವಿಸುತ್ತಿರುತ್ತಾರೆ.

ನೆಲ್ಲೂರಿನ ಯಸ್.ಪಿ. ಬಂಗಲೆ ಪಕ್ಕದಲ್ಲಿ ವಾಸಿಸುತ್ತಿರುವ ಶ್ರೀ ಪಟ್ನಂ ಖಾದರ್ ಮಸ್ತಾನ್ರವರು ಹೀಗೆ ತಿಳಿಸಿದರು. "ಫಿಬ್ರವರಿ 1985 ರಲ್ಲಿ ನನಗೆ ರಕ್ತ ವಿರೋಚನೆ ಆಗುತ್ತಿತ್ತು. ಮದ್ರಾಸ್ ಕ್ಯಾನ್ಸರ್ ಆಸ್ಪತ್ರೆಯವರು ನನಗೆ ಕ್ಯಾನ್ಸರ್ ಇದೆ ಎಂದು ನಿರ್ಧಾರಿಸಿದರು. "ತಕ್ಷಣವೆ ಶಸ್ತ್ರಚಿಕಿತ್ಸೆ ಮಾಡಿ, ಕರಳನ್ನು ತೆಗೆದು ಆಚೆ ಇಡಬೇಕಾಗುತ್ತದೆ. ಆಗ, ಒಂದು ಡಬ್ಬದಲ್ಲಿ ಮಲವಿಸರ್ಜನೆ ಆಗುತ್ತಿರುತ್ತದೆ. ಅದನ್ನು ನಿಯಮಿತವಾಗಿ ಸ್ವಚ್ಛಗೊಳಿಸಬೇಕು. ಹಾಗೆ ಹತ್ತು ತಿಂಗಳು ಆಸ್ಪತ್ರೆಯಲ್ಲೇ ಇದ್ದರೆ ಗುಣವಾಗಬಹುದು, ಇಲ್ಲವಾದರೆ, ಮರಣಿಸುವುದು ಸತ್ಯ" ಎಂದರು. ಆಸ್ಪತ್ರೆಯಲ್ಲಿ ಇರುವುದಕ್ಕಿಂತ, ಮರಣವೇ ಮೇಲು ಎಂದು ಮನೆಗೆ ಬಂದೆವು. ಒಂಗೋಲಿನಲ್ಲಿ ನಾಟು ಔಷಧಿಯನ್ನು ತೆಗೆದುಕೊಂಡೆ. ಆದರೆ ಗುಣವಾಗಲಿಲ್ಲ. ಸ್ವಾಮಿಯವರು ಜೀವಂತವಾಗಿ ಇದ್ದಾಗ, ಅವರನ್ನು ದರ್ಶನ ಮಾಡಿದ ವಿಷಯ ನೆನಪಿಗೆ ಬಂದು, ಒಂದು ರಾತ್ರಿ ಸ್ವಾಮಿಯವರನ್ನು ಸ್ಮರಿಸಿ ಅತ್ತುಬಿಟ್ಟೆ.

ಅದೆ ರಾತ್ರಿ ಸ್ವಾಮಿಯವರು ಸ್ವಪ್ನದಲ್ಲಿ ಕಂಡು ವೆಲ್ವೆಟ್ ಬಟ್ಟೆಯಿಂದ ಗಾಳಿ ಹಾಕುತ್ತಿದ್ದರು. ಎಚ್ಚರವಾಗಿ ನೋಡಿದಾಗ ಸ್ವಾಮಿಯವರು ನಿಜವಾಗಿಯು ನನ್ನ ಮಂಚದ ಹತ್ತಿರದಿಂದ ಹೊರಟುಹೋಗುತ್ತಿದ್ದರು. ನಾನು ದಿಗ್ಭ್ರಮೆಗೊಂಡು ಅವರನ್ನು ಕರೆಯಲು ಬಾಯಿ ಬಿಡಲಾಗಲಿಲ್ಲ, ಕಾಲು ಚಲಿಸಲಿಲ್ಲ. ಬೆಳಿಗ್ಗೆ ಎದ್ದನಂತರದಿಂದಲೇ ರಕ್ತಸ್ರಾವ ಪೂರ್ತಿಯಾಗಿ ನಿಂತಿತು. ಒಂದು ವಾರದಲ್ಲೇ ಪೂರ್ತಿ ಆರೋಗ್ಯವಂತನಾಗಿಬಿಟ್ಟೆ. ಸ್ವಾಮಿಯವರ ಋಣ ನಾನು ಹೇಗೆ ತೀರಿಸಬಲ್ಲೆ?

ನಿಜವಾದ ಭಕ್ತಿಯಿಂದ ಕಣ್ಣೀರು ಹಾಕುವ ಭಕ್ತರ ಕಷ್ಟಗಳು ಎಷ್ಟು ಕಠಿಣವಾಗಿದ್ದರೂ, ಸ್ವಾಮಿಯವರು ತಕ್ಷಣವೇ ಆ ಕಷ್ಟಗಳನ್ನು ನಿವಾರಿಸುತ್ತಾರೆ. ಇದು ಎಷ್ಟೋ ಜನರ ಅನುಭವಗಳಿಂದ ತಿಳಿಯುತ್ತದೆ. ಭಕ್ತಿಯಿಲ್ಲದ ಪ್ರಾರ್ಥನೆ ವ್ಯರ್ಥ ಎಂದು ರಾಮಕೃಷ್ಣ ಪರಮಹಂಸರು ಹೇಳಿದ್ದರಲ್ಲವೇ!!

ನೆಲ್ಲೂರು ನಿವಾಸಿ ಚೆರುಕೂರು ರಾಜಮ್ಮನವರಿಗೆ ಒಮ್ಮೆ ಅಪೆಂಡಿಸೈಟಿಸ್

ಆಪರೇಷನ್ ಆಗಿತ್ತು, ಮತ್ತು ಸ್ವಲ್ಪ ವರ್ಷಗಳಾದ ಮೇಲೆ, ಗರ್ಭಕೋಶ ತೆಗೆಯಲು ಆಪರೇಷನ್ ಮಾಡಿದರು. 1985 ರಲ್ಲಿ ಅವರಿಗೆ ಹೊಟ್ಟೆಯಲ್ಲಿ ಉರಿ, ಆಹಾರ ತಿಂದರೇ ವಾಕರಿಕೆ, ಯಾವಾಗಲೂ ತಲೆನೊವಿನಿಂದ ಬಳಲುತ್ತಿದ್ದರು. ವೈದ್ಯರು "ಹೊಟ್ಟೆಯಲ್ಲಿ ಗೆಡ್ಡೆ ಇದೆ, ಆಪರೇಷನ್ ಮಾಡಬೇಕು" ಎಂದರು. ಮೂರನೇ ಬಾರಿಗೆ ತನ್ನ ಹೊಟ್ಟೆಯನ್ನು ಕತ್ತರಿಸುವ ಭಯದಿಂದ ಆಕೆ ತನ್ನ ಸಂಬಂಧಿಕರ ಸಲಹೆಯ ಮೇರೆಗೆ ಸ್ವಾಮಿಯವರ ಸಮಾಧಿಯನ್ನು ದರ್ಶಿಸಿ ದೀಕ್ಷೆ ಹಿಡಿದಂಡಂತೆ ದಿನಕ್ಕೆ 108 ಪ್ರದಕ್ಷಿಣೆಗಳನ್ನು ಮಾಡಿ, ಉಳಿದ ಸಮಯದಲ್ಲಿ ಶ್ರದ್ಧೆಯಿಂದ ಸ್ವಾಮಿಯವರನ್ನು ಸ್ಮರಿಸುತ್ತಾ, ಆಶ್ರಮದ ಕೆಲಸಗಲ್ಲಿ ಸಹಕರಿಸುತ್ತಾ ಸೇವಿಸಿದರು. ಸಮಾಧಿ ದರ್ಶನಕ್ಕೆ ಮುಂಚೆ ಆಕೆಗೆ, ಆಹಾರ ನೋಡಿದರೆ ವಾಕರಿಕೆ ಬರುತ್ತಿತ್ತು. ಆದರೆ ಅವರು ಸಮಾಧಿ ದರ್ಶನ ಪಡೆದ ಸಮಯದಿಂದ ಊಟ ಮಾಡಲು ಪ್ರಾರಂಭಿಸಿದರು. ಐದನೇ ದಿನ ಶ್ರೀ ಸ್ವಾಮಿಯವರ ಒಬ್ಬ ಸೇವಕಿ ಸ್ವರ್ಗೀಯ ತುಳಸಮ್ಮನವರು ರಾಜಮ್ಮನವರಿಗೆ ಸ್ವಪ್ನದಲ್ಲಿ ಕಂಡು "ಮರಗೆಣುಸು ತಿನ್ನು" ಎಂದು ಹೇಳಿದರು. ಅವರು ಅದನ್ನು ತಿಂದ ಮೇಲೆ ಆಕೆಯ ಆರೋಗ್ಯ ಸರಿಹೋಯಿತು. ಆದರೆ, ಶ್ರೀ ಸ್ವಾಮಿಯವರು ಮನೆಗೆ ಹೋಗು ಎಂದು ಹೇಳದಿದ್ದ ಕಾರಣದಿಂದ ಆಕೆ ಆಶ್ರಮದಲ್ಲೇ ಇದ್ದರು. ಒಮ್ಮೆ ಸ್ವಾಮಿಯವರ ಸಮಾಧಿಯನ್ನು ಪೂಜಿಸುತ್ತಿದ್ದ ನಾಗಯ್ಯನವರು ಇವರ ಸ್ವಪ್ನದಲ್ಲಿ ಕಂಡು, "ನಿನಗೆ ಅನಾರೋಗ್ಯವಿಲ್ಲ ನೀನು ಯಾವಾಗಲೂ ಆರೋಗ್ಯವಾಗಿರುತ್ತೀಯ" ಎಂದರು. ಆದರೆ, ಅವರು ಮನೆಗೆ ಹೋಗು ಎಂದು ಹೇಳಲಿಲ್ಲವಾಗಿ, ಆಕೆ ಆಶ್ರಮದಲ್ಲೇ ಇದ್ದರು. ಎರಡು ದಿನಗಳ ನಂತರ, ಸ್ವಾಮಿಯವರ ಇನ್ನೊಬ್ಬ ಸೇವಕ ಸ್ವಪ್ನದಲ್ಲಿ ಕಂಡು, "ನಿನಗೆ ಅನಾರೋಗ್ಯವಿಲ್ಲ. ಈ ಔಷಧೀಗುಣವಿರುವ ಈ ಎಲೆಯನ್ನು ನೀನು ಯಾರಿಗೆ ಕೊಟ್ಟರೂ ಅವರಿಗೆ ಯಾವುದೇ ರೋಗ ಇದ್ದರೂ ಅದು ಗುಣವಾಗುತ್ತದೆ,' ಎಂದು ಒಂದು ಎಲೆಯನ್ನು ರಾಜಮ್ಮನವರಿಗೆ ಕೊಟ್ಟಂತೆ ಸ್ವಪ್ನದಲ್ಲಿ ಕಂಡಿತು. ಆಗ ಆಕೆ ಮನೆಗೆ ಹೋದರು. ಮನೆಗೆ ಹೋದ ಸ್ವಲ್ಪ ದಿನಗಳಲ್ಲೇ ಅಂಬೇಡ್ಕರ್ ಸಂಸ್ಥೆಯಲ್ಲಿ, ತಿಂಗಳಿಗೆ 500 ರೂ ಸಂಬಳದ, ಬಟ್ಟೆ ಹೊಲಿಯುವ ಕೆಲಸ ಸಿಕ್ಕಿತು. ಆಕೆಗೆ ಆರೋಗ್ಯವೇ ಅಲ್ಲದೇ, ಉದ್ಯೋಗವನ್ನೂ ಸ್ವಾಮಿಯವರು ಪ್ರಸಾದಿಸಿದರು.

ಗೊಲಗಮೂಡಿ ನಿವಾಸಿ ಗೊಡ್ಡಟಿ ಶೇಷಯ್ಯ ಹೀಗೆ ಹೇಳಿದರು. ನನ್ನ ಹೊಲದಲ್ಲಿ ಫಸಲು ಬಂದಿತ್ತು. ಹೊಲದಲ್ಲಿ ರಾತ್ರಿ ಕಾವಲು ಇಲ್ಲದಿದ್ದರೆ, ಕಾಡಿನ ಹಂದಿಗಳು ಬಂದು ಫಸಲನ್ನು ಹಾಳು ಮಾಡುತ್ತಿದ್ದವು. ಹೊಲದಲ್ಲಿ ಮಲಗಿದರೆ, ಸೊಳ್ಳೆಯ ಕಾಟ, ಛಳಿ, ಸಣ್ಣ ಮಳೆ, ಈ ಪರಿಸ್ಥಿತಿಯಲ್ಲಿ ಹತ್ತು ದಿನ ಕಾವಲು ಇದ್ದರಿಂದ ಸರಿಯಾದ ನಿದ್ರೆ ಇರಲಿಲ್ಲ. ಆದ್ದರಿಂದ ಅನಾರೋಗ್ಯ ಆಗುತ್ತೇ ಎಂದು ಭಯದಿಂದ ಸ್ವಾಮಿಯವರ ಸಮಾಧಿ ಬಳಿ ಬಂದು, "ಏನಾದರೂ ನಿಮ್ಮದೇ ಭಾರ, ನನ್ನ ಹೊಲದಲ್ಲಿ ಹಂದಿಗಳು ಹೀಗೆ ತಿಂದುಬಿಟ್ಟರೆ, ಪ್ರತಿ ವರ್ಷ ನಿಮಗೆ ಕೊಡಬೇಕಾದ 2 ತೂಮುಗಳ (24 kgs) ಭತ್ತ ಕೂಡಾ ಕೊಡಲಾರೆ. ನಿಮ್ಮಷ್ಟ" ಎಂದು ಪ್ರಾರ್ಥಿಸಿ ಮನೆಗೆ ಬಂದು ಮಲಗಿದೆ. ನನಗೆ ಸ್ವಪ್ನದಲ್ಲಿ, "ಖಾಕಿ ನಿಕ್ಕರ್, ಹಸಿರು ಬನೀನು, ಹಸಿರು ಟೋಪಿ ಧರಿಸಿದ 20 ವರ್ಷದ ಯುವಕ, ಸ್ವಮಿಯವರ

ಸಮಾಧಿಯ ಹತ್ತಿರದಿಂದ ವೇಗ ವಾಗಿ ಬಂದು, "ಎಲ್ಲಿ ಆ ಹಂದಿ ಇನ್ನೂ ಬರುತ್ತಿದೆಯಾ?" ಎನ್ನುತ್ತಾ ನನ್ನ ಕಯ್ಯಲ್ಲಿದ್ದ ಬಿದಿರಿನ ದೊಣ್ಣೆಯನ್ನು ತೆಗೆದುಕೊಂಡು ಹೋಗುತ್ತಿದ್ದ. ಈ ವ್ಯಕ್ತಿ ನನ್ನ ಹೊಲದ ಕಾವಲು ಕಾಯಲು ಹೋಗುತ್ತಿಲ್ಲವೇ! ಬೇರೆ ದಾರಿಯಲ್ಲಿ ಹೋಗುತ್ತಿದ್ದಾನೆ ಎಂದುಕೊಳ್ಳುತ್ತಾ ನಾನು ನನ್ನ ಹೊಲದ ಕಡೆ ಹೋದೆ. ಆ ಯುವಕ, ಬೇರೆ ರಸ್ತೆಯಿಂದ ನನಗಿಂತ ಮುಂಚೆ ನನ್ನ ಹೊಲದ ಒಳಗೆ ಹೋಗುತ್ತಿದ್ದ. ನಿಜವಾಗಲೂ ಈ ಯುವಕ ನನ್ನ ಹೊಲದ ಕಾವಲು ಕಾಯುತ್ತಾನೆ ಎಂದುಕೊಂಡೆ. ಅಷ್ಟರಲ್ಲಿ ನನ್ನ ಸ್ವಪ್ನ ಮುಗಿಯಿತು. ಆ ದಿನದಿಂದ ಒಂದು ರಾತ್ರಿಯೂ ನಾನು ಕಾವಲು ಕಾಯುವುದಕ್ಕೆ ಹೋಗಲಿಲ್ಲ. ಹಂದಿಗಳು ಬರಲಿಲ್ಲ.

ನನ್ನ ಹರಿಕೆಯ ಪ್ರಕಾರ, 2 ತೂಮುಗಳ (24 kgs) ಭತ್ತ ಕೊಡುತ್ತೇನೆ ಎಂದುಕೊಂಡ ಹಿಂದಿನ ರಾತ್ರಿ ನನಗೆ ಸ್ವಪ್ನ ದಲ್ಲಿ 2 ತೂಮುಗಳ (24 kgs) ಭತ್ತದ ಮೂಟೆ ಸಮಾಧಿ ಮುಂದೆ ಇಟ್ಟೆ. ತಕ್ಷಣ ಸ್ವಾಮಿಯವರ ಸೇವಕ ಬುಜ್ಜಯ್ಯನವರು ಕಾಣಿಸಿಕೊಂಡು 'ನೀನು ಎಷ್ಟು ಭತ್ತ ಇಟ್ಟೆ? ಎಷ್ಟು ಬಾಕೀ ಇದ್ದೀಯ?' ಎಂದು ಕೇಳುತ್ತಿದ್ದರು. ತಕ್ಷಣ ಪೂಜೇ ಮಾಡುವ ಬರಿಗೆಲ ನಾಗಯ್ಯನವರು "ಇವರು, 4 ತೂಮುಗಳ (48 kgs) ಭತ್ತ ಬಾಕಿ ಇದ್ದಾರೆ, ಕೊಡುತ್ತಾರೆ, ಜಮ ಬರೆದುಕೋ" ಎಂದು ಹೇಳಿದರು. ಸ್ವಪ್ನ ಮುಗಿದು ನನಗೆ ಎಚ್ಚರ ಆಯಿತು. ನನ್ನ ಹೊಲದಲ್ಲಿ ಕಾವಲು ಇದ್ದರಿಂದ ಎರಡು ತೂಮುಗಳು ಹೆಚ್ಚು ಸ್ವಾಮಿಯವರು ಕೇಳುತ್ತಿದ್ದಾರೆಂದು ಅರ್ಥವಯಿತು. ಅದರಂತೆಯೇ ಸ್ವಾಮಿಯವರಿಗೆ ನಾನು ಎರಡು ಹೆಚ್ಚಿಸಿ ಸಮರ್ಪಿಸಿದೆ.

ನಿಜವಾದ ಭಕ್ತಿ, ಶ್ರದ್ಧೆ, ವಿಶ್ವಾಸದಿಂದ, ಕಣ್ಣೀರಿನ ಜೊತೆ ಪ್ರಾರ್ಥನೆ ಮಾಡಿಕೊಂಡರೆ, ಸ್ವಾಮಿಯವರ ಹೃದಯವನ್ನು ಹೇಗೆ ಕದಲಿಸುತ್ತದೆ ಎನ್ನುವ ವಿಷಯ ಅಕ್ಷರಜ್ಞಾನ ಇಲ್ಲದ ಒಬ್ಬ ಭಕ್ತೆಯ ಅನುಭವ ಧ್ರುಢಪಡಿಸುತ್ತದೆ.

ನಲುಬಾಯಿ ಸುಬ್ಬರಾಮಯ್ಯ, ಮತ್ತು ಅವರ ಪತ್ನಿ ಸಿದ್ದಮ್ಮನವರು ಗೊಲಗಮೂಡಿಯ ಎರುಕಲ ಪಾಳೆಂ ನಿವಾಸಿಗಳು. ಆ ದಂಪತಿಗಳಿಗೆ ಮದುವೆಯಾಗಿ 8 ವರ್ಷವಾದರೂ ಮಕ್ಕಳಾಗಿರಲಿಲ್ಲ. ಮಕ್ಕಳಿಗೋಸ್ಕರ, ಅವರು ಎಷ್ಟೋ ಡಕ್ಟರ್, ಹಕೀಮರು, ಮಂತ್ರವಾದಿಗಳು, ಹರಿಕೆ, ತಾಯಿತಿ ಎಲ್ಲಾ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ತರುಣವಾಯಿ ಎನ್ನುವ ಒಂದು ಪ್ರದೇಶದಲ್ಲಿ ಇದ್ದ ಮಸ್ತಾನು ಔಲಿಯಾರವರ ಸಮಾಧಿಯನ್ನು ದರ್ಶಿಸಿ, ಮೂರು ವರ್ಷ ಅಲ್ಲೇ ಇದ್ದು ಸೇವೇ ಸಲ್ಲಿಸಿದರೆ ಫಲಿತ ಸಿಗುತ್ತದೆ ಎಂದು ಯಾರೋ ತಿಳಿಸಿದರು. ಸಿದ್ದಮ್ಮನವರು ಜ್ವರದಿಂದ ಬಳಲುತ್ತಿದ್ದರಿಂದ, ಅವರನ್ನು ನೆಲ್ಲೂರು ಡಾಕ್ಟರ್ ಇಂದಿರಮ್ಮನವರ ಹತ್ತಿರ ಸೇರಿಸಿದರು. ಒಂದು ವಾರ ಅಲ್ಲಿದ್ದರೂ ಜ್ವರ ಒಂದು ಡಿಗ್ರೀ ಕೂಡ ಕಡಿಮೇ ಆಗಲಿಲ್ಲ. ಆಹಾರ ತೆಗೆದುಕೊಳ್ಳದೇ ಇದ್ದರಿಂದ ಸಿದ್ದಮ್ಮನವರು ಮರಣಿಸುತ್ತಾರೆ ಎಂದು ಭಯಪಟ್ಟು ಮನೆಗೆ ಬಂದು ಬಿಟ್ಟರು. ಆಕೆಗೆ ಶ್ರೀ ವೆಂಕಯ್ಯ ಸ್ವಾಮಿಯವರು ನೆನಪಿಗೆ ಬಂದು ಅವರ ಬಳಿಗೆ ಹೋಗುತ್ತೇನೆ ಎಂದು ಹೇಳಿದರು. ಮನೆಯವರು, "ಬಿಸಿ ನೀರು ಕಾಯಿಸುತ್ತೇವೆ,

ಸ್ನಾನಮಾಡಿ ಹೋಗು" ಎಂದರು. ಒಂದು ಬೆಂಕಿ ಪೆಟ್ಟಿಗೆ ಪೂರ್ತಿ ಹಚ್ಚಿ ಪ್ರಯತ್ನ ಪಟ್ಟರೂ ಒಲೆ ಉರಿಯಲಿಲ್ಲ. ಅದನ್ನು ನೋಡಿ ಸಿದ್ದಮ್ಮ "ನಾನು ಮರಣಿಸಿದರೂ ಚಿಂತೆಯಿಲ್ಲ ಕೆರೆಯಲ್ಲಿ ಮುಳುಗಿ ಸ್ನಾನ ಮಾಡಿ ಸ್ವಾಮಿಯವರ ಪ್ರದಕ್ಷಿಣೆ ಮಾಡುತ್ತೇನೆ" ಎಂದು ಬಂದು ಸ್ನಾನ ಮಾಡಿ, ಪ್ರದಕ್ಷಿಣೆ ಮಾಡಿ ಅಂದಿನ ರಾತ್ರಿ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಮಲಗಿದರು. ಬೆಳಗಾಗುವ ಹೊತ್ತಿಗೆ, ಜ್ವರ ಪೂರ್ತಿ ಕಡಿಮೆಯಾಗಿ, ಊಟ ಮಾಡಿದರು.

ಇದರಿಂದ, ಆಕೆಗೆ, ಸ್ವಾಮಿಯವರಲ್ಲಿ ದೃಢವಾದ ನಂಬಿಕೆಯಾಗಿ, "ಸ್ವಾಮಿಯವರೇ ನನಗೆ ಮಕ್ಕಳಗುತ್ತಾರೆಂದು ಆಶೀರ್ವಾದ ಮಾಡುವ ವರೆಗೆ ನಾನು ಸ್ವಾಮಿಯವರನ್ನು ಸೇವಿಸುತ್ತೇನೆ" ಎಂದು ನಿರ್ಧರಿಸಿ, ಆಶ್ರಮದಲ್ಲಿಯೇ ಮರದ ಕೆಳಗೆ ಇರುತ್ತಾ, ಅಡಿಗೆಯನ್ನು ತಾನೇ ಮಾಡಿಕೊಳ್ಳುತ್ತಾ, ಯಾವಾಗಲೂ ಸ್ವಾಮಿಯವರ ಸ್ಮರಣೆ ಮಾಡುತ್ತಾ ಇರುತ್ತಿದ್ದರು. ಪ್ರತಿನಿತ್ಯ 108 ಪ್ರದಕ್ಷಿಣೆ ಮಾಡುತ್ತಿದ್ದರು. ಒಂದು ರಾತ್ರಿ ಕನಸಿನಲ್ಲಿ, ಇವರ ಮನೆಯಲ್ಲಿ ಒಂದು ಹಂದಿ ಇತ್ತು. ಆ ಹಂದಿ ಹೊಲದಲ್ಲಿ ಬಿದ್ದಾಗ, ರೈತರು ಅದನ್ನು ಹೊಡೆಯುತ್ತಿದ್ದರೆ, ಈಕೆ ಅದಕ್ಕೆ ಹಿಂಸೆ ಮಾಡ ಬೇಡಿ ಎಂದು ಬೇಡಿಕೊಳ್ಳುತ್ತಿದ್ದಾಗ, ಸ್ವಾಮಿಯವರು ಬಂದು, "ಇದರಿಂದಲೇ ನಿನಗೆ ಈ ಕಷ್ಟಗಳು ಬರುತ್ತಿದೆಯಮ್ಮಾ ಇದನ್ನು ಬದುಕಲು ಬಿಡ ಬಾರದು" ಎಂದು ಹೇಳಿ, ಆ ಹಂದಿಯನ್ನು ತೆಗೆದುಕೊಂಡು ಹೋಗಿ ಸಮುದ್ರದಲ್ಲಿ ಎಸೆದಂತೆ ಕಂಡಿತು. ಈಕೆ, ಆಶ್ರಮದಲ್ಲೇ 35 ದಿನಗಳಿದ್ದರೂ ಸ್ವಾಮಿಯವರು ಮಕ್ಕಳು ಆಗುತ್ತಾರೆಂದು ಆಶೀರ್ವಾದ ಕೊಟ್ಟಿಲ್ಲವೆಂದು ಕೊರಗಿದರು. ಆ ಕೊರಗಿನಲ್ಲಿ ಊಟವಾಗಲಿ, ದ್ರವ್ಯ ಪದಾರ್ಥವಾಗಲಿ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಆ ರಾತ್ರಿ ಸ್ವಾಮಿಯವರ ಭಕ್ತ ಕೊಜ್ಜಕೂಟಿ ಬುಜ್ಜಯ್ಯನವರು, ಇವರ ಕೈಗಳಿಗೆ ಬಳೆಯನ್ನು ತೊಡಗಿಸಿದಹಾಗೆ ಕಂಡಿದರೂ, ಸ್ವಾಮಿಯವರು ದರ್ಶನ ಕೊಟ್ಟು ಆಶೀರ್ವದಿಸಲಿಲ್ಲ ಎಂದು, ಮರುದಿನವೂ ಆಹಾರ, ಪಾನೀಯಗಳು ತೆಗೆದುಕೊಳ್ಳದೇ ತುಂಬಾ ಕೊರಗಿದರು. ಆ ರಾತ್ರಿ ಸ್ವಾಮಿಯವರೇ ಇವರ ಸ್ವಪ್ನದಲ್ಲಿ ದರ್ಶನ ಕೊಟ್ಟು, ಒಂದು ಹಿಡಿ ಅಡಿಕೆಯನ್ನು ಇವರ ಸೆರಗಿನೊಳಗೆ ಹಾಕುತ್ತಾ, "ಸಂತಾನ ಕೊಟ್ಟಿದ್ದೇನೆ. ಇನ್ನಾದರೂ ಅನ್ನ ತಿನ್ನಮ್ಮಾ" ಎಂದು ಬಹಳ ಆಪ್ಯಾಯವಾಗಿ ಮಾತನಾಡಿದ ಹಾಗೆ ಕಂಡಿತು. ಅದರೊಂದಿಗೆ ಆಕೆ ತನ್ನ ಉಪವಾಸ ಮತ್ತು ದೀಕ್ಷೆಯನ್ನು ಕೊನೆಗೊಳಿಸಿದರು. ಸ್ವಾಮಿಯವರು ಹೇಳಿದಂತೆಯೇ ಇವರಿಗೆ ಮಕ್ಕಳಾದರು. ಮೊದಲ್ನೆಯ ಮಗುವಿಗೆ ಸ್ವಾಮಿಯವರ ಹೆಸರಿಡಬೇಕೆಂದು ಬಯಸಿದಾಗ, ಸ್ವಾಮಿಯವರು ಸ್ವಪ್ನ ದರ್ಶನಕೊಟ್ಟು, "ಮೊದಲನೆಯ ಸಂತಾನಕ್ಕೆ ನಿಮ್ಮ ಕುಲದೇವರ ಹೆಸರಿಡಿ, ಎರಡನೇಯ ಸಂತಾನಕ್ಕೆ ನನ್ನ ಹೆಸರಿಡಿ" ಎಂದರು. ಇವತ್ತಿನವರೆಗೂ ಸಿದ್ದಮ್ಮನವರಿಗೆ ಯಾವುದೇ ಕಷ್ಟ ಬಂದರೂ, ಸ್ವಾಮಿಯವರ ಸಮಾಧಿಯ ಬಳಿ ಮಲಗಿ, ತನ್ನ ಕಷ್ಟವನ್ನು ಹೇಳಿಕೊಂಡಾಗ, ಸ್ವಾಮಿಯವರೇ, ಸ್ವಪ್ನದಲ್ಲಿ ಕಂಡು ಸಮಾಧಾನ ಹೇಳುತ್ತಾರಂತೆ. ಆಕೆಯ ವಿಶ್ವಾಸದ ಬಗ್ಗೆ ನಾವು ಹೇಗೆ ವರ್ಣಿಸಲು ಸಾಧ್ಯ?

1985 ರಲ್ಲಿ ವಲ್ಲಪುರೆಡ್ಡಿ ಆದಿನಾರಾಯಣರೆಡ್ಡಿ ಯವರಿಗೆ ಎಲ್ಲಾ ತೊಂದರೆಗಳು ಒಟ್ಟಿಗೇ ಬಂದವು. ಅವರ ಟ್ರ್ಯಾಕ್ಟರ್ ಗೆ ಎರಡು ಬಾರಿ ಅಪಘಾತವಾಯಿತು, ಅವರ ಪತ್ನಿಗೆ

ಅನಾರೋಗ್ಯದ ಕಾರಣದಿಂದ ಶಸ್ತ್ರಚಿಕಿತ್ಸೆ ಮಾಡಬೇಕಾಯಿತು, ಬೆಳೆಗಳಲ್ಲಿಕೂಡ ತೀವ್ರವಾದ ನಷ್ಟ ಬಂದಿತು. ಆಗ ಅವರು, "ಏನು ಸ್ವಾಮೀ! ನನ್ನ ಈ ಕಷ್ಟಗಳಿಗೆ ಕೊನೆಯೇ ಇಲ್ಲವೇ?" ಎಂದು ದುಃಖ್ಖ ಪಟ್ಟರು. ಆ ರಾತ್ರಿ ಅವರಿಗೆ ಒಂದು ವಿಚಿತ್ರವಾದ ಸ್ವಪ್ನ ಕಂಡಿತು. ಆ ಸ್ವಪ್ನದಲ್ಲಿ ರೆಡ್ಡಿಯವರೊಂದಿಗೆ ಇನ್ನೂ ಇಬ್ಬರು ವ್ಯಕ್ತಿಗಳು, ತುಂಬಿ ಹರಿತಿರುವ ನದಿಯ ದಡದಲ್ಲಿ ಇದ್ದರು. ಅದರಲ್ಲಿ ಒಬ್ಬ ವ್ಯಕ್ತಿ, ಆ ನದಿಯಲ್ಲಿ ಇಳಿದು, ಪ್ರವಾಹದಲ್ಲಿ ಕೊಚ್ಚಿ ಕೊಂಡು ಹೋಗುತ್ತಿದ್ದರು. ಆ ವ್ಯಕ್ತಿಯನ್ನು ರಕ್ಷಿಸಲು ಇನ್ನೊಬ್ಬ ವ್ಯಕ್ತಿ ನದಿಯಲ್ಲಿ ಇಳಿಯುತ್ತಿದ್ದರು. ಅವರನ್ನು ನಾರಾಯಣ ರೆಡ್ಡಿಯವರು, ಬೇಡ ವೆಂದು ನಿಲ್ಲಿಸಿದರೂ ಕೇಳದೇ ಆ ವ್ಯಕ್ತಿ ಇಳಿದರು. ಆಗ, ಇಬ್ಬರೂ ಕೊಚ್ಚಿಕೊಂಡು ಹೋಗುತ್ತಿದ್ದರು. ರೆಡ್ಡಿಯವರು ಮಾತ್ರ ದಡದಲ್ಲೇ ಕ್ಷೇಮವಾಗಿ ನಿಂತು ನೋಡುತ್ತಿದ್ದರು.

ಕರ್ಮಫಲ, ಜೋರಾಗಿ ಪ್ರವಹಿಸುವ ನದಿಯಂತೆ. ಆ ವ್ಯಕ್ತಿಗಳ ಹಾಗೆ ಆತುರ ಪಟ್ಟರೆ, ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿ ಪ್ರಾಣ ಕಳೆದು ಕೊಳ್ಳಬೇಕಾಗುತ್ತದೆ. ಸಹನೆಯಿಂದ ಇದ್ದು ನಿರಂತರವಾಗಿ ನಾಮಸ್ಮರಣೆಯ ಮೂಲಕ, ಕರ್ಮಫಲ 131
ಕಾಲಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವ ವರೆಗೆ, ಕೆಟ್ಟಕರ್ಮದ ಪ್ರವಾಹ ಬಲ ಕಡಿಮೆ ಆಗುವವರೆಗೆ ಸಹನೆಯೊಂದಿಗೆ ಇದ್ದರೆ ಸಂಸಾರ ಎನ್ನುವ ನದಿಯನ್ನು ಸುಲಭವಾಗಿ ದಾಟಬಹುದು ಎಂದು ಸೂಚಿಸುತ್ತಾ ರೆಡ್ಡಿಯವರಿಗೆ ಸ್ವಾಮಿಯವರು ಆತ್ಮಬೋಧನೆ ಮಾಡಿದರು.

ರೆಡ್ಡಿಯವರ ಪತ್ನಿಗೆ ನೆಲ್ಲೂರಿನಲ್ಲಿ ಮಾಡಿದ ಶಸ್ತ್ರಚಿಕಿತ್ಸೆಯಲ್ಲಿ ಏನೋ ತಪ್ಪಾಗಿದ್ದರಿಂದ, ಮತ್ತೆ ಶಸ್ತ್ರಚಿಕಿತ್ಸೆ ಮಾಡಲು ಅವರನ್ನು ಮದ್ರಾಸ್ಗೆ ಕರೆದುಕೊಂಡು ಹೋದರು. ರೆಡ್ಡಿಯವರು ಶ್ರೀ ಸ್ವಾಮಿಯವರನ್ನು ಪ್ರಾರ್ಥಿಸಿದರು. ಆ ರಾತ್ರಿ ಸ್ವಪ್ನದಲ್ಲಿ ಅವರ ಗ್ರಾಮದ ನಿವಾಸಿಯಾದ ಚಿನ್ನ ಮೆಕಾನಿಕ್ ಬಂದು 'ನಿನಗೋಸ್ಕರ ಪೆನವರ್ತಿಗೆ ಹೋಗಿದ್ದೆ ನೀನು ಅಲ್ಲಿ ಇರಲಿಲ್ಲ, ಇಲ್ಲಿಗೆ ಬಂದೆ. ಶಿಬಿಚಕ್ರವರ್ತಿ ಅಂತಹವರಿಗೆ ವಿಭೂತಿ ಕೊಟ್ಟು, 3 ತಿಂಗಳಲ್ಲಿ ಗುಣ ಮಾಡಬೇಕೆಂದುಕೊಂಡೆ, ಆದರೆ ಗುಣವಾಗಲು 7 ತಿಂಗಳು ಹಿಡಿಯಬಹುದು' ಎಂದು ಹೇಳಿ, 'ನನ್ನ ಕೃಪೆಯಿಂದ ಕರ್ಮಕ್ಷಾಲನೆ ಮಾಡುತ್ತೇನೆ. ಆದರೆ ಸಮಯ ಬೇಕಾಗುತ್ತದೆ. ತಾಳ್ಮೆಯಿಂದಿರು" ಎಂದು ಸ್ವಾಮಿಯವರು ಹೇಳಿದ ಹಾಗಾಯಿತು.

ಹಣ ಖರ್ಚು ಮಾಡುವ ವಿಚಾರದಲ್ಲಿ ರೋಶಿ ರೆಡ್ಡಿಯವರಿಗೆ ಹೀಗೆ ಹೇಳಿದರು,
132 **"ಅಯ್ಯಾ ಒಂದು ರೂಪಾಯಿ ಸಂಪಾದಿಸ ಬೇಕೆಂದರೆ ಎಷ್ಟು ಕಷ್ಟ ಪಡಬೇಕು? ಆದ್ದರಿಂದ ನಾವು ಅದನ್ನು ತುಂಬಾ ಎಚ್ಚರಿಕೆಯಿಂದ ಉಪಯೋಗಿಸಬೇಕು'.** ಸ್ವಾಮಿಯವರ ಈ ಮತಿಗೆ ಎರಡು ದೃಷ್ಟಿ ಕೋಣಗಲಿವೆ. ಒಂದು ಲೌಕಿಕವಾದ ಹಣ ಮತ್ತೊಂದು ಪರಮಾರ್ಥಿಕ ಧನದ ಸಂಕೇತ. **"ಎಷ್ಟೋ ಪುಣ್ಯ ಮಾಡಿದ್ದರಿಂದ ಸದ್ಗುರು ಸನ್ನಿಧಿ ದೊರಕುತ್ತದೆ, ಅದನ್ನು ವ್ಯರ್ಥಮಾಡಿಕೊಳ್ಳದೆ ಎಚ್ಚರಿಕೆಯಿಂದ, 'ಇದು ಸನ್ನಿಧಿ' ಎನ್ನುವ ಅರಿವುನೊಂದಿಗೆ ನಿರಂತರ ಜೀವುಸುತ್ತಾ ಆ ಸನ್ನಿಧಿಯನ್ನು ಸಾರ್ಥಕ ಮಾಡಿಕೊಳ್ಳಿ"** ಎಂದು ಸ್ವಾಮಿಯವರು ಎಚ್ಚರಿಸಿದರು. ಧರ್ಮ ಅಧರ್ಮಗಳ

ವಿಚಾರವಾಗಿ ಸ್ವಾಮಿಯವರು ಎಷ್ಟು ಚೆನ್ನಾಗಿ ವಿವರಿಸಿದರೋ ನೋಡಿ. ಸ್ವಾಮಿಯವರ ಸೇವಕರಲ್ಲಿ ಇಬ್ಬರು ಜಗಳವಾಡಿದರು. ಒಬ್ಬರದ್ದು ಧರ್ಮವಾದದ್ದು, ಇನ್ನೊಬ್ಬರದ್ದು ಅಧರ್ಮವಾದದ್ದು. ಧಾರ್ಮಿಕನಾಗಿದ್ದವನಿಗೆ ಬೆಂಬಲವಾಗಿ ರೋಶಿ ರೆಡ್ಡಿಯವರು, "ನೀನು ಹೀಗೆ ಮಾತನಾಡುವುದು ಒಳ್ಳೆಯದಲ್ಲ" ಎಂದು ಗಟ್ಟಿಯಾಗಿ ಅವರು ಅಧರ್ಮವಾಗಿದ್ದವರನ್ನು ಎಚ್ಚರಿಸಿದರು. ರೋಶಿ ರೆಡ್ಡಿಯವರು, ನನಗೇಕೆ ಎಂದು ಸುಮ್ಮನಿರಲಿಲ್ಲ. ಆ ದಿನ ಸ್ವಾಮಿಯವರು, "ರೋಶಿರೆಡ್ಡಿ! ನಿನಗೆ ಈದಿನ ಒಂದು ಲೋಕದ ಪುಣ್ಯ ಬಂದಿದೆ" ಎಂದರು.

ಇದರ ಅರ್ಥ, ಅಧರ್ಮವನ್ನು ಖಂಡಿಸಿ, ಧರ್ಮದ ಪರ ವಹಿಸುವುದು, ನಮ್ಮ
133 ಧರ್ಮ. ಹೀಗೆ ಮಾಡಿದರೆ, ನಮಗೆ ತುಂಬಾ ಪುಣ್ಯ ಬರುತ್ತದೆ. ಹಾಗೆಯೇ, ಅಧರ್ಮವನ್ನು ಖಂಡಿಸಲು ಯಥಾ ಶಕ್ತಿ ಪ್ರಯತ್ನಿಸದಿದ್ದರೆ, ಅದು ಮಹಾ ಪಾಪದ ಕೆಲಸ.

ನೆಲ್ಲೂರಿನ ಸಂತಪೇಟೆಯ ನಿವಾಸಿ ಕೊಣಿದಲ ನಾಗೇಶ್ವರರಾವ್ ಹಲವಾರು **134**
ವರ್ಷಗಳಿಂದ ಸ್ವಾಮಿಯವರನ್ನು ಸೇವಿಸುತ್ತಿದ್ದರು. ಸ್ವಾಮಿಯವರ ಯಾವುದೇ ಕಾರ್ಯಕ್ರಮಗಳಿಗೆ ಅವರೇ ತಮ್ಮ ಟ್ರ್ಯಾಕ್ಟರ್ ಅಥವಾ ಲಾರಿ ತಂದು ತಾವೇ ಓಡಿಸುತ್ತಿದ್ದರು. ಅವರು ತಮ್ಮ ಅನುಭವಗಳನ್ನು ಹೀಗೆ ವಿವರಿಸಿದರು. " 21-08-1985 ರಿಂದ ಶ್ರೀ ಸ್ವಾಮಿಯವರ ಆರಾಧನೆ ಮಹೋತ್ಸವಕ್ಕೆ, ಮಣ್ಣು ಮರದ ಕಂಬಗಳು, ಷಾಮಿಯಾನ, ಪಾತ್ರೆಗಳು, ಮಿಕ್ಕ ಸಾಮಾನುಗಳನ್ನು, ಹಗಲು-ರಾತ್ರಿ ಆಶ್ರಮಕ್ಕೆ ನಾನು ಸಾಗಿಸುತ್ತಿದ್ದೆ. 23 ನೆ ತಾರೀಖು ರಾತ್ರಿ ನೆಲ್ಲೂರಿನಿಂದ ಹೂವಿನ ಹಾರಗಳು, ಬಾಳೆ ಕಂದುಗಳು ಮೊದಲಾದ ಸಾಮಾನುಗಳನ್ನು ತೆಗೆದುಕೊಂಡು ಟ್ರ್ಯಾಕ್ಟರ್ ನಡೆಸುತ್ತಿದ್ದೆ. ಎರಡು ರಾತ್ರಿ ನಿದ್ದೆ ಮಾಡದ ಕಾರಣ, ರಾತ್ರಿ 12 ಘಂಟೆಯ ಸಮಯದಲ್ಲಿ ಕಲ್ಲೂರುಪಲ್ಲೆ ಸೇತುವೆ ದಾಟಿದ ನಂತರ ಟ್ರ್ಯಾಕ್ಟರ್ ನಡೆಸುತ್ತಾ ನಿದ್ದೆ ಮಾಡಿಬಿಟ್ಟೆ. ಸ್ವಲ್ಪ ಸಮಯದ ನಂತರ ಎಚ್ಚರವಾದಾಗ, ನನ್ನ ಮುಂದೆ 20 ಅಡಿ ದೂರದಲ್ಲಿ ಗೊಲಗಮೂಡಿಯ ಸೇತುವೆಯಲ್ಲಿ ಒಂದು ದೊಡ್ಡ ರಂಧ್ರ ಕಂಡು ತುಂಬಾ ಭಯಪಟ್ಟೆ. ನನ್ನ ಶಕ್ತಿಯನ್ನೆಲ್ಲಾ ಕೂಡಿಸಿ ಜಾಗ್ರತೆಯಿಂದ ಸೇತುವೆಯನ್ನು ದಾಟಿದೆ. ಸುಮಾರು ಮೂರು ಕಿ.ಮೀ ದೂರವನ್ನು ಅನೇಕ ತಿರುವುಗಳನ್ನು, ಟ್ರ್ಯಾಕ್ಟರ್ ಮತ್ತು ನಾನು ಹೇಗೆ ಗೊಲಗಮೂಡಿ ಸೇತುವೆಯನ್ನು ಸೇರಿದೆವು ಎಂದು ದಿಗ್ಭ್ರಮೆ ಗೊಂಡೆ. ಈ ಮೂರು ಕಿ.ಮೀ ಟ್ರ್ಯಾಕ್ಟರ್ ನಡೆಸಿದ್ದಲ್ಲದೇ, ನಿದ್ರೆ ಮಾಡುತ್ತಿದ್ದ ನಾನು ಬೀಳದಂತೆ ಕಾಪಾಡಿದ ರಕ್ಷಕರು ಕರುಣಾಸಮುದ್ರರಾದ ಶ್ರೀ ವೆಂಕಯ್ಯ ಸ್ವಾಮಿಯವರಿಗೆ ಈ ಇಡೀ ಜೀವನಕ್ಕೇ ನಾನು ತುಂಬಾ ಋಣಿಯಾಗಿರುತ್ತೇನೆ. **ನಾವು ನಿಜವಾಗಿಯೂ ನಮ್ಮ ಶರೀರವನ್ನು ಸ್ವಾಮಿಯವರಿಗೆ ಅರ್ಪಿಸಿದರೆ, ಅದರ ರಕ್ಷಣೆಯ ಭಾರ ಅವರು ಹೇಗೆ ನಿರ್ವಹಿಸುತ್ತಾರೆಂದು ನಾವು ಈ ಲೀಲೆಯ ಮೂಲಕ ತಿಳಿಯುತ್ತೇವೆ.**

ನೆಲ್ಲೂರು, ಸಂತಪೇಟದ ನಿವಾಸ ತಾಳ್ಳೂರು ಶ್ರೀನಿವಾಸುಲು ರವರು, ತಮಗೆ ಸ್ವಾಮಿಯವರು ಪ್ರಾಣಭಿಕ್ಷೆ ನೀಡಿದ ವಿಚಾರ ಹೀಗೆ ಹೇಳಿದರು. 1986, ಮೇ ತಿಂಗಳಿನಲ್ಲಿ ನಮ್ಮ ಮನೆಯಮೇಲೆ ಎರಡು ಕೋಣೆಗಳು(ರೂಮ್ಸ್) ಒಂದು ವರಾಂಡವನ್ನು

ನಿರ್ಮಿಸಿದೆ. ಕೆಳಗಿನ ಭಾಗ ಬಾಡಿಗೆಯವರಿಗೆ ಕೊಟ್ಟಿದ್ದೆ. ಅವರ ಕೋಣೆಯಿಂದ, ಹಳೇ ವಿದ್ಯುತ್ ತಂತಿ ಉಪಯೋಗಿಸಿ, ತಾತ್ಕಾಲಿಕವಾಗಿ, ಪ್ಲಗ್ ಪ್ಲಗ್ಪಾಯಿಂಟ್ನಲ್ಲಿ ತಂತಿಯನ್ನು ತೂರಿಸಿ, ಮಹಡಿಮೇಲೆಗೆ ವಿದ್ಯುತ್ ತಂದು, ಒಂದು ಕೋಣೆಯಲ್ಲಿ ಒಂದು ಬಲ್ಬ್ , ಇನ್ನೊಂದು ಬಲ್ಬ್ ವರಾಂಡದಲ್ಲಿ ಹಾಕಿದೆ. ವರಾಂಡದಲ್ಲಿ ಕಾರಣಾಂತರದಿಂದ ಬಲ್ಬ್ ತೆಗೆದು, ಹೋಲ್ಡರ್ ಮಾತ್ರ ಬಿಟ್ಟಿತ್ತು. ಮೇ ಮೂರನೇ ತಾರೀಖು ಒಳ್ಳೆಯದಿನ ಎಂದು, ಹೊಸ ಕೋಣೆಗಳಲ್ಲಿ ಹಾಲು ಉಕ್ಕಿಸ ಬೇಕೆಂದುಕೊಂಡೆವು. ಬೆಳಗಿನಝಾವ ಮೂರು ಘಂಟೆಗೆ, ನನ್ನ ನಾದನಿ ಆ ಎರಡು ಕೋಣೆಗಳು, ವರಂಡ, ಕೆಳಗಿನ ಮೆಟ್ಟಿಲು ತೊಳೆಯುತ್ತಿದ್ದಳು. ನನ್ನ ಪತ್ನಿ ನಲ್ಲಿಯಿಂದ ನೀರು ತಂದು ನನ್ನ ನಾದಿನಿಗೆ ಕೊಡುತ್ತಿದ್ದಳು. ನಾನು ಸ್ನಾನಮಾಡಿ ಒದ್ದೆಬಟ್ಟೆಯೊಂದಿಗೆ, ಮಹಡಿಯ ಮೇಲೆ ಬಂದೆ. ಒಂದು ಕೋಣೆಯಲ್ಲಿ ದೀಪ ಉರಿಯುತ್ತಿತ್ತು. ಇನ್ನೊಂದು ಕೋಣೆಯಲ್ಲಿ ದೀಪ ಹಾಕಬೇಕೆಂದು, ವರಾಂಡದಲ್ಲಿ ಬಲ್ಬಿಲ್ಲದ ಹೋಲ್ಡರ್ನ ತಂತಿಯ ಜೊತೆಯಲ್ಲಿ ತೆಗೆದೆ. ಆ ತಂತಿಯನ್ನು ಒಂದು ಜಾಗದಲ್ಲಿ ಇಲಿ ಕಚ್ಚಿ ಹಾಕಿ, ಅದರ ಇನ್ಸುಲೇಷನ್ ಹೋಗಿತ್ತು. ನಾನು ಅದು ನೋಡದೇ, ಆ ತಂತಿಯನ್ನು ಅದೇ ಜಾಗದಲ್ಲಿ ಹಿಡಿದುಕೊಂಡೆ. ತಕ್ಷಣ ಜೋರಾಗಿ ಕಿರಿಚಿಕೊಂಡು ಬಿದ್ದುಬಿಟ್ಟೆ. ನನ್ನ ನರಗಳೆಲ್ಲ ನುಜ್ಜುಗುಜ್ಜಾದವು, ತಂತಿಯನ್ನು ಕೈನಿಂದ ಬಿಡಿಸಿಕೊಳ್ಳಲು ಬಹಳ ಪ್ರಯತ್ನ ಪಟ್ಟೆ, ಆದರೆ ವಿಫಲನಾದೆ. ವಿಲ ವಿಲ ವದ್ದಾಡುತ್ತಿದ್ದೆ.

ಅಷ್ಟರಲ್ಲಿ ನನ್ನ ಕೂಗು ಕೇಳಿ ನನ್ನ ನಾದಿನಿ ಬಂದು ನಾನು ವಿಲವಿಲ ಒದ್ದಾಡುತ್ತಿರುವುದನ್ನು ನೋಡಿದಳು. ಅದೇ ಸಮಯದಲ್ಲಿ ಮನೆಯಲ್ಲಾ ಒದ್ದೆಯಾಗಿದ್ದರಿಂದ, ಅರ್ತಿಂಗ್ ಆಗಿ, ಆಕೆಗೂ ಕಾಲಿಗೆ ಶಾಕ್ ಹೊಡೆಯಿತು. ಆಕೆ, "ಭಾವನಿಗೆ ಕರೆಂಟ್ ಶಾಕ್ ಹೊಡೆಯಿತು" ಎಂದು ಕೂಗುತ್ತಾ ಕೆಳಗೆ ಓಡಿ ಬಂದು ಹೇಳಿದಳು. ಅದನ್ನು ಕೇಳಿದ ನನ್ನ ಪತ್ನಿ, ವಿದ್ಯುತ್ ತೆಗೆದುಕೊಂಡ ಕೊಣೆಯಲ್ಲಿ ಮಲಗಿದ್ದವರನ್ನು ಬಾಗಿಲು ಬಡೆದು ಎಚ್ಚರಿಸಿ, ಭಯದಿಂದ ಮೂರ್ಛೆ ಹೋದಳು. ಕೋಣೆಯಲ್ಲಿದ್ದವರು ನಿದ್ರೆಯಿಂದ ಎದ್ದರು ಆದರೆ, ವಿಷಯ ಏನೆಂದು ಗೊತ್ತಾಗದೇ, ಅವರ ಮುಂದೆ ಬಿದ್ದಿರುವ ನನ್ನ ಪತ್ನಿಯನ್ನು ಎದ್ದೇಳಲು ಸಹಾಯ ಮಾಡಿ ಅವಳನ್ನು ಹಾಸಿಗೆಯ ಮೇಲೆ ಮಲಗಿಸಿದರು. ಇಷ್ಟರಲ್ಲೇ ನನ್ನ ನಾದನಿಯ ಕೂಗಾಡುತ್ತಿದ್ದ ಮಾತು ಕೇಳಿ ವಿಚಾರವನ್ನು ಊಹಿಸಿ, ಪ್ಲಗ್ನಿಂದ ತಂತಿ ಎಳೆದು ಹಾಕಿದರು.

ಈ ಗಲಾಟೆಯಲ್ಲಾ ಐದೇ ನಿಮಿಷಗಳಲ್ಲಿ ನಡೆಯಿತು. ಈ ಸಮಯದಲ್ಲಿ ನನ್ನ ಪರಿಸ್ಥಿತಿ ಹೇಗಿತ್ತು ಅಂತ ಊಹಿಸುವುದಕ್ಕೆ ಆಗುವುದಿಲ್ಲ. ಕೊನೆಯ ಉಸುರಿನಲ್ಲಿದ್ದೆ ಆದರೆ ಪ್ರಜ್ಞೆ ಇತ್ತು. ಸ್ವಾಮಿಯವರನ್ನು, "ಸ್ವಾಮೀ ನನಗೆ ಇಂತಹ ಮರಣವನ್ನು ನೀಡಿದ್ದೀರ?" ಎಂದು ಸ್ಮರಿಸಿದೆ. ತಕ್ಷಣ ನನ್ನ ಕೈಯಲ್ಲಿದ್ದ ತಂತಿ ಯಾರೋ ಎಳೆದು ಹಾಕಿದಂತೆ ಕೆಳಗೆ ಬಿದ್ದು ಹೋಯಿತು. ಕಷ್ಟಪಟ್ಟು ಎದ್ದು ನಾಲಕ್ಕು ಹೆಜ್ಜೆ ಹಾಕಿದೆ. ಆಗ ಪಕ್ಕದ ಕೋಣೆಯ ದೀಪ ಆರಿ ಹೋಯಿತು. ಕೆಳಗಿದ್ದವರು ಮೇಲಕ್ಕೆ ಬಂದರು. ವಿಚಿತ್ರವೆಂದರೆ

1. ಯಾರೋ ಎಳೆದ ಹಾಗೆ ನನ್ನ ಕೈಯಲ್ಲಿದ್ದ ವಿದ್ಯುತ್ ತಂತಿ ತಾನಾಗಿಯೇ ಬಿದ್ದಿದ್ದು.

2. ಅದಕ್ಕಿಂತ ಆಶ್ಚರ್ಯ ಏನೆಂದರೆ, ಮನೆತೊಳೆದಿದ್ದರಿಂದ, ಇನ್ಸುಲೇಷನ್ ಇಲ್ಲದೆ ವಿದ್ಯುತ್ ಪಾಸ್ ಆಗುತ್ತಿದ್ದ ತಂತಿ, ನೀರಿನಲ್ಲಿ ಬಿದ್ದು ಮನೆಯಲ್ಲೆಲ್ಲಾ ಕರೆಂಟ್ ಇತ್ತು. ಆದರೆ ನಾನು ಕಷ್ಟ ಪಟ್ಟು ಎದ್ದು ನಾಲಕ್ಕು ಹೆಜ್ಜೆ ಹಾಕಿದ ಮೇಲೆಯೇ ಇನ್ನೊಂದು ಕೋಣೆಯಲ್ಲಿದ್ದ ದೀಪ ಆರಿತು. ಅಂದರೆ ಆಗ ಕೆಳಗಿನವರು ತಂತಿಯನ್ನು ಪ್ಲಗ್ನಿಂದ ಎಳಿದುಹಾಕಿರಬಹುದು.

ವಿದ್ಯುದಾಘಾತದಿಂದ ಕಪ್ಪಾಗಿ ಕಂದಿ ಹೋಗಿದ್ದ ನನ್ನ ಕೈಯ್ಯನ್ನು ನೋಡಿದ ವೈದ್ಯರು ಆಶ್ಚರ್ಯದಿಂದ, "ಹೀಗೆ ಕಂದಿ ಹೋದರೆ ಮಾಂಸಖಂಡಗಳು, ಚರ್ಮ ದಿಂದ ನೀರು ಹರಿದುಹೋಗಿರಬೇಕಾಗಿತ್ತು. ಹಾಗೆ ಆಗಲಿಲ್ಲ ಎಂದರೇ ನಿಮ್ಮನ್ನು ಯಾವುದೋ ದೈವೀಶಕ್ತಿ ರಕ್ಷಿಸಿದೆ. ನಿಮ್ಮ ಕೈ ಮೂರು ರಿಂದ ಆರು ತಿಂಗಳ ಒಳಗೆ ಕ್ರಮೇಣಾ ನಿಯಂತ್ರಣಕ್ಕೆ ಬರುತ್ತದೆ" ಎಂದು ಹೇಳಿದರು.

ಮೂಳೆ ಮುರಿದಿದೆ ಎಂದು ಕೈಗೆ ಕಟ್ಟು ಕಟ್ಟಿ, ಇಂಜಕ್ಷನ್ ಕೂಡಾ ಕೊಟ್ಟರು. ಈ ಅಪಘಾತ ಬೇಸಿಗೆ ಕಾಲದಲ್ಲಿ ನಡೆದದ್ದು, ಆದ್ದರಿಂದ ಕಡಿತ ತಡೆಯಲಾರದೇ ಕಟ್ಟನ್ನು ಬಿಚ್ಚಿ, ಎಲ್ಲಾ ಭಾರವೂ ಸ್ವಾಮಿಯವರ ಮೇಲೆ ಹಾಕಿ, ಮೇ 14 ನೇ ತಾರಿಖು ಗೊಲಗಮೂಡಿಗೆ ಬಂದು ಸ್ವಾಮಿಯವರ ಹತ್ತಿರ ಕುಳಿತುಕೊಂಡೆ. ಆ ರಾತ್ರಿ ನನ್ನ ಕನಸಿನಲ್ಲಿ, ನನ್ನ ಸ್ನೇಹಿತರು ನನ್ನ ಕಾಲಿನ ಹೆಬ್ಬೆರಳ ಹತ್ತಿರ ಆಪರೇಷನ್ ಮಾಡಿ, ಗಟ್ಟಿಯಾಗಿದ್ದ ಹಳದೀ ಬಣ್ಣದ ದ್ರವ ಪದಾರ್ಥ ವನ್ನು ತೆಗೆದಂತೆ ಕಂಡಿತು. ವೈದ್ಯರು 6 ತಿಂಗಳು ಹೇಳಿದ್ದರು, ಆದರೆ ಒಂದು ತಿಂಗಳೊಳಗೆ ನನ್ನ ಕೈ ನಿಯಂತ್ರಣಕ್ಕೆ ಬಂದು ಬಿಟ್ಟಿತು.

ಈ ಗಂಡಾಂತರದಲ್ಲಿ ನಾನು ಮರಣಿಸ ಬೇಕಾಗಿತ್ತು, ಆದರೆ ಶ್ರೀ ಸ್ವಾಮಿಯವರು ನನಗೆ ಪ್ರಾಣ ದಾನ ಮಾಡಿದರೆಂದು ಹೇಳುವುದಕ್ಕೆ ಒಂದು ನಿದರ್ಶನವಿದೆ. ಇದಕ್ಕೆ 19 ದಿನಗಳ ಹಿಂದೆ ನನಗೆ ಬಂದ ಕನಸೇ ಇದಕ್ಕೆ ಆಧಾರ. ಆ ಕನಸಿನಲ್ಲಿ ನೋಡಿದ ದೃಷ್ಯ, "ಒಂದು ಜಾಗದಲ್ಲಿ ಚಲನ ಚಿತ್ರ ಗಾಯಕನಾದ ಮೊಹಮದ್ರಫಿಯವರ ಕಚೇರಿ ನಡೆಯುತ್ತಿತ್ತು. ವೇದಿಕೆಯ ಮೇಲೆ, ಮಹಾತ್ಮಾ ಗಾಂಧೀಯವರು ಕುಳಿತುಕೊಂಡಿದ್ದರು. ಅವರ ಮುಖ ಸ್ವಾಮಿಯವರ ಮುಖದಂತೆಯೇ ಇತ್ತು. ಅವರ ಅಕ್ಕ ಪಕ್ಕದಲ್ಲಿ ರಾಜೇಂದ್ರಪ್ರಸಾದ್, ನೆಹ್ರೂ, ಲಾಲ್ಬಹದೂರ್ಶಾಸ್ತ್ರಿ, ರಾಧಾಕೃಷ್ಣನ್, ತಂಗುಟೂರು ಪ್ರಕಾಶಂ (ಇವರು ಆಂಧ್ರ ರಾಷ್ಟ್ರದ ಸ್ವಾತಂತ್ರ ಹೋರಾಟಗಾರರು, ಇವರು "ಆಂಧ್ರ ಕೇಶರಿ" ಎಂದು ಜನಪ್ರಿಯರು) ಮೊದಲಾದ ನಾಯಕರು, ಕೇವಲ ಪರಮಗತಿ ಹೊಂದಿರುವವರು ಕುಳಿತಿದ್ದರು. ಅದರಲ್ಲಿ ಒಬ್ಬರು ಕೂಡ ಬದುಕಿಲ್ಲ. ನಾನು ಹೋಗಿ, ಗಾಂಧೀ ಯವರನ್ನ ನೋಡಿ, ಇವರು ಶ್ರೀ ವೆಂಕಯ್ಯಸ್ವಾಮಿಯವರೇ ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾ ನಮಸ್ಕಾರ ಮಾಡಿದೆ. ಅವರು ನನ್ನ ಬಳಿ ಬಂದು "ನೀನು ಇಲ್ಲೆಗೆ ಏಕೆ ಬಂದೆ? ಹೊರಟು ಹೋಗು!" ಎಂದರು. ಆಗ, "ನಾನು ವೆಂಕಯ್ಯ ಸ್ವಾಮಿಯವರ ಭಕ್ತ, ಗೊಲಗಮೂಡಿಗೆ

ಹೋಗಿ ಬರುತ್ತಿರುತ್ತೇನೆ" ಎಂದೆ. ಆಗ, "ಈ ವಿಷಯ ನನಗೆ ಗೊತ್ತು, ಇದಕ್ಕೂ ಮುಂಚೆ ಎರಡು ಬಾರಿ ಹೇಳಿದ್ದೆ ಅಲ್ಲವೇ?" ಎನ್ನುತ್ತಾ ಐದು ಪಾಕೆಟ್ ಸೈಜ್ ಶಿರಿಡಿ ಸಾಯಿಬಾಬಾರವರ ಫೋಟೋಗಳನ್ನು ಕೊಟ್ಟು, ನನ್ನನ್ನು ಕಳುಹಿಸಿದರು. ನನ್ನ ಸ್ವಪ್ನ ಮುಗಿಯಿತು.

ಶ್ರೀ ಸ್ವಾಮಿಯವರು ಪ್ರಸಾದಿಸಿದ ಐದು ಫೋಟೋಗಳು ನನ್ನ ಪಂಚ ಪ್ರಾಣಗಳ ಸಂಕೇತ. ಆ ಮಹಾನಾಯಕರು ಸೇರಿದ, ಪರಲೋಕಕ್ಕೆ ನಾನೂ ಹೋಗ ಬೇಕಾಗಿತ್ತು. ಆದರೆ, ಕರುಣಾ ಮಯರಾದ ಸ್ವಾಮಿಯವರು, "ಇನ್ನೂ ಸ್ವಲ್ಪ ಕಾಲ ಈ ಲೋಕದಲ್ಲೇ ಇರು" ಎಂದು ಹೇಳಿ ಕಳುಹಿಸಿದರು. ಆದ್ದರಿಂದಲೇ ಈ ಗಂಡಾಂತರದಿಂದ ಬದುಕಿದೆ. ನಾನು, ನನ್ನ ಕುಟುಂಬದವರು ಸ್ವಾಮಿಯವರ ಋಣ ತೀರಿಸಲಾರೆವು.

ನೆಲ್ಲೂರು ತಾಲೂಕು ವಿಡಂಪಲ್ಲಿ ಗ್ರಾಮಸ್ಥರಾದ ಯಾಮಲ ಚೆಂಚಯ್ಯನವರ ಪತ್ನಿ ವಸಮ್ಮನವರು ತಮ್ಮ ಮಗುವನ್ನು ಸ್ವಾಮಿಯವರು ಹೇಗೆ ಕಾಪಾಡಿದರೆಂದು ಹೀಗೆ ಟಿಳಿಸಿದರು. "ನಮ್ಮ ಐದನೇ ಹೆಣ್ಣು ಮಗುವಿಗೆ ಮೂರನೇ ತಿಂಗಳ ವಯಸ್ಸಿನಲ್ಲಿ ಎಡ ಕಿವಿಯ ಕೆಳಗೆ ಊದಿಬಿಟ್ಟು ತುಂಬಾ ನೋವಿನಿಂದ ಬಳಲುತ್ತಿತ್ತು. ವೈದ್ಯರ ಚಿಕಿತ್ಸೆ ಅಲ್ಲದೆ, ನಾಟಿ ವೈದ್ಯರು, ಮಂತ್ರ ಹಾಕುವವರು ಎಲ್ಲರಿಂದ ಚಿಕಿತ್ಸೆ ಮಾಡಿಸಿದರೂ ಗುಣವಾಗಲಿಲ್ಲ. ಆ ಊತ, ಕ್ರಮೇಣ ಕೆಳಗಿನವರೆಗೆ ಇಳಿದು, ಕೊನೆಗೆ ಎಡಗಾಲಿನ ಚಿಕ್ಕ ಬೆರಳಿನ ಮೇಲೆ ಗೆಡ್ಡೆ ಬಂದಿತು. ಆ ಗೆಡ್ಡೆ ಒಡೆದು, ಕೀವು ಬರಲು ಪ್ರಾರಂಭವಾಯಿತು. ಕೊಳೆತ ರಂಧ್ರಗಳ ಮೂಲಕ ತೆಳುವಾದ ಮೂಳೆಗಳು, 2 ಇಂಚು ಉದ್ದ ಆರು ಆರು ತುಂಡುಗಳು ಆಚೆ ಬಂದಿದ್ದವು. ಕಾಲಿನಿಂದ ದುರ್ವಾಸನೆ ಬರುತ್ತಿದ್ದರಿಂದ, ಮಗುವಿನ ಹತ್ತಿರ ನಿಲ್ಲಲು ಸಾಧ್ಯವಾಗುತ್ತಿರಲಿಲ್ಲ. ಪಿ.ಸಿ. ಶಾಸ್ತ್ರಿ ವೈದ್ಯರು ಎಕ್ಸ್ರೇ ತೆಗೆದು ಪರಿಕ್ಷೆ ಮಾಡಿ, "ಕಾಲು ತೆಗೆಯಬೇಕು, ಇಲ್ಲದಿದ್ದರೆ, ಮಗುವಿಗೆ ಪ್ರಾಣಾಪಾಯವಿದೆ" ಎಂದರು. ಆ ಚಿಕಿತ್ಸೆ ಮಾಡಿಸಲು, ಮದ್ರಾಸ್ಗಾಗಲಿ, ನೆಲ್ಲೂರಿಗಾಗಲಿ ಕರೆದು ಕೊಂಡು ಹೋಗಿ ಎಂದರು. ಇನ್ನೂ ಇಬ್ಬರು - ಮೂರು ಜನ ವೈದ್ಯರ ಅಭಿಪ್ರಾಯ ಕೂಡ ಕಾಲು ತೆಗೆದುಹಾಕ ಬೇಕೆಂದು ಔಷಧಿಯನ್ನು ಸೂಚಿಸಲಿಲ್ಲ.

ಹೆಣ್ಣುಮಗು ಕುಂಟಿಯಾಗಿರುವುದಕ್ಕಿಂತ ಮರಣವೇ ಒಳ್ಳೆಯದು ಎಂದು ನಮ್ಮ ತಂದೆ ಬೆಲ್ಲಂಕೊಂಡ ಪುಲ್ಲಯ್ಯನವರು ಶಸ್ತ್ರಚಿಕಿತ್ಸೆ ಮಾಡಿಸಲು ಸುತರಾಂ ಒಪ್ಪಲಿಲ್ಲ. ಏಪ್ರಿಲ್ 19, 1986 ರಂದು, ನನ್ನ ಸ್ನೇಹಿತೆಯ ಸಲಹೆಯ ಮೇರೆಗೆ ನನ್ನ ತಂದೆ ಮತ್ತು ನಾನು ನನ್ನ ಮಗುವಿನೊಂದಿಗೆ ಶ್ರೀ ವೆಂಕಯ್ಯಸ್ವಾಮಿಯವರ ಸಮಾಧಿ ದರ್ಶನ ಮಾಡಲು ಬಂದೆವು. ಅಲ್ಲಿ ನಮ್ಮ ತಂದೆಯವರು, "ಸ್ವಾಮಿ, ಈ ಮಗುವಿಗೆ ಕಾಲು ಗುಣವಾದರೆ, ನಿಮ್ಮ ಕೀರ್ತಿಯನ್ನು ಮೂರು ವಾರ ಮೈಕ್ನಲ್ಲಿ ಪ್ರಚಾರ ಮಾಡಿತ್ತೇನೆ" ಎಂದು ಹರಕೆ ಮಾಡಿಕೊಂಡರು. ನಾನು "ಪೊಂಗಲ್ ಮಾಡಿ ಸಮರ್ಪಿಸುತ್ತೇನೆ" ಎಂದು ಹರಕೆ ಮಾಡಿಕೊಂಡೆ. ಶ್ರೀ ಸ್ವಾಮಿಯವರ ಅಖಂಡ ದೀಪದ ಎಣ್ಣೆಯಲ್ಲಿ ವಿಭೂತಿಯನ್ನು ಕಲೆಸಿ ಹಚ್ಚತೊಡಗಿದೆ. ಒಂದು ವಾರದೊಳಗೆ 3 ರಂಧ್ರಗಳು ಗುಣವಾದವು. ಸುಮಾರು 2

ಇಂಚು ಉದ್ದದ ಮೂಳೆಯ ತುಂಡು ಮಾಂಸ ಕಂಡದಲ್ಲಿ ಅಡ್ಡವಾಗಿ ತಿರುಗಿ 1/2 ಇಂಚು ಆಚೆಬಂದಿತ್ತು.

2 ವಾರ, ಜನಗಳು ಹೆಚ್ಚಾಗಿದ್ದುದರಿಂದ ಎಣ್ಣೆ ಕೂಡ ಸಿಕ್ಕಲಿಲ್ಲ. ಹಳೆಯ ಎಣ್ಣೆಯನ್ನೇ ಉಪಯೋಗಿಸಿದೆವು. ಶ್ರೀ ಸ್ವಾಮಿಯವರು ಸ್ವಪ್ನದಲ್ಲಿ ಬಂದು ಆಶೀರ್ವದಿಸಿದರು. ನನ್ನ ಸ್ವಪ್ನದಲ್ಲಿ "ಮಗುವಿನ ಕಾಲು ಮುರಿದು ಕೆಳಗೆ ಬಿದ್ದುಹೋಗಿತ್ತು. ನಾನು ದುಃಖಿಸುತ್ತಿದ್ದೆ. ಆಗ ಒಬ್ಬ ವೃದ್ಧರು ಬಂದು, "ಕಾಲು ಬಿದ್ದು ಹೋಯಿತು ಎಂದು ದುಃಖ ಪಡುತ್ತಿದ್ದೀಯಾ? ಪರವಾಗಿಲ್ಲ. ಸೂಜಿ ದಾರ ಇದ್ದರೆ ಕೊಡು" ಎಂದು ಹೇಳಿ ಮುರಿದ ಕಾಲನ್ನು ಜೋಡಿಸಿ ಹೊಲೆದು ಬಿಟ್ಟರು. ನನಗೆ ಎಚ್ಚರವಾಯಿತು.

ಬಳಿಕ ಗಾಯದಲ್ಲಿದ್ದ ಮೂಳೆಯ ತುಂಡು ತಾನಾಗಿಯೇ ಹೊರಬಂದಿತು. ಯಾವ ಔಷಧಿ, ವೈದ್ಯರ ಚಿಕಿತ್ಸೆ ಇಲ್ಲದೆ, ಸ್ವಾಮಿಯವರ ಅಖಂಡ ದೀಪದ ಎಣ್ಣೆ ವಿಭೂತಿಯಿಂದಲೇ ಕಾಲು ಗುಣವಾಯಿತು. ಮುರಿದ ಮೂಳೆಗಳು ಅದಾಗೇ, ಅಂಟು ಬಿಟ್ಟಿತು. ಸ್ವಾಮಿಯವರ ಕೃಪೆಯಿಂದ ಈಗ ನನ್ನ ಮಗಳು ಕುಂಟು ಇಲ್ಲದೇ ಸುಖವಾಗಿ ನಡೆಯುತ್ತಿದ್ದಾಳೆ. ನಾನು ಮತ್ತು ನನ್ನ ಮಗಳು ಸ್ವಾಮಿಯವರಿಗೆ ಸದಾ ಋಣಿಯಾಗಿದ್ದೇವೆ.

ನೆಲ್ಲೂರು ಜಿಲ್ಲೆಯ ಕೋವೂರು ಜೆಡ್.ಪಿ. ಶಾಲೆಯಲ್ಲಿ ಹೊಲಿಗೆ ಕಲಿಸುವ ಶಿಕ್ಷಿಕಿ ಪಿ. ಕೋಟೇಶ್ವರಮ್ಮನವರ ಅನುಭವ ಹೀಗೆ ತಿಳಿಸಿದರು. "ನನ್ನ ತಾಯಿಯವರಿಗೆ 1982-1986 ಮಧ್ಯದಲ್ಲಿ 3 ಬಾರಿ ರಕ್ತ ವಿರೋಚನೆ ಪ್ರಾರಂಭವಾಗಿ, ಅವರು ನಿಶ್ಶಕ್ತಿಯಿಂದ ಅಸ್ತಿಪಂಜರದಂತೆ ಕಾಣುತ್ತಿದ್ದರು. ಅವರು ಯಾವುದೇ ಆಹಾರ ತಿಂದರೂ ರಕ್ತ ವಿರೋಚನೆ ಆಗಿ, ಶರೀರವೆಲ್ಲಾ ವಿಪರೀತವಾಗಿ ನೋಯುತ್ತಿತ್ತು. ಅವರಿಗೆ ಗಿಂಡಿಯಲ್ಲಿ ದ್ರವಹಾರ ಮಾತ್ರ ಕೊಡುತ್ತಿದ್ದೆವು. ನೆಲ್ಲೂರು ಅಮೇರಿಕನ್ ಆಸ್ಪತ್ರೆಯಲ್ಲಿ ನಾಲಕ್ಕು ದಿನಗಳು ಚಿಕಿತ್ಸೆ ಮಾಡಿಸಿದರೂ ಗುಣವಾಗಲಿಲ್ಲ. "ಎನಿಮಾ" ಕೊಟ್ಟು ಪರಿಕ್ಷೆ ಮಾಡ ಬೇಕೆಂದು ವೈದ್ಯರು ಪ್ರಯತ್ನಿಸಿದರು. 3 ದಿನ ಎನಿಮಾ ಟ್ಯೂಬ್ ಕರುಳಿನೊಳಗೆ ಹೋಗಲಿಲ್ಲ. ನಂತರ, ಕೆಲವು ವಿಶೇಷ ಪರೀಕ್ಷೆಗಳು ಮಾಡಿದಾಗ, ಹೊಟ್ಟೆಯಲ್ಲಿ ದೊಡ್ಡ ಕ್ಯಾನ್ಸರ್ ಗಡ್ಡೆ ತುಂಬಾ ಮುಂದವರಿದ ಹಂತದಲ್ಲಿತ್ತು. ಅದು ಯಾವ ಕ್ಷಣದಲ್ಲಾದರೂ ಒಡೆದು, ಅವರು ಮರಣಿಸುವ ಸಂಭವವಿತ್ತು. ಆದ್ದರಿಂದ ವೈದ್ಯರು," ಇದು ಆಕೆಯ ಕೊನೆಯ ದೆಶೆ. ಮನೆಗೆ ಕರೆದುಕೊಂಡು ಹೋಗಿ ಆಕೆಯ ಎಲ್ಲಾ ಆಸೆಗಳನ್ನು ಪೂರೈಸಿ" ಎಂದು ಹೇಳಿ ಆಸ್ಪತ್ರೆಯಿಂದ ಕಳುಹಿಸಿ ಬಿಟ್ಟರು. ಎಷ್ಟು ಬೇಡ್ಕೊಂಡರೂ, "ಆಕೆ ಬದುಕುವುದಿಲ್ಲ. ಈ ಆಸ್ಪತ್ರೆಯಲ್ಲಿ ಏಕೆ ಮರಣಿಸ ಬೇಕು? ಎಂದರು. ನಮಗೆ ಚಿಕಿತ್ಸೆ ನಿಲ್ಲಿಸುವುದಕ್ಕೆ ಇಷ್ಟವಿಲ್ಲದೇ, ಈ ಆಸ್ಪತ್ರೆಯ ವೈದ್ಯರ ಹತ್ತಿರ ಕಾಗದ ತೆಗೆದುಕೊಂಡು, ಮದ್ರಾಸಿನ ಕ್ಯಾನ್ಸರ್ ಆಸ್ಪತ್ರೆಗೆ ಕರೆದುಕೊಂಡೂ ಹೋಗುವುದಕ್ಕೆ ತಯಾರಾಗುತ್ತಿದ್ದೆವು.

ನಮ್ಮ ಪಯಣವನ್ನು ಗಮನಿಸಿದ ನಮ್ಮ ಮನೆಯೊಡತಿ(landlady), ಒಂದು ಪೈಸೆ ಖರ್ಚಿಲ್ಲದೆ ಗುಣಪಡಿಸಬಲ್ಲ ಒಬ್ಬ ಅದ್ಭುತ ವೈದ್ಯನನ್ನು ಬಿಟ್ಟು ಮದ್ರಾಸಿಗೆ ಏಕೆ ಹೋಗುತ್ತೀರ ಎಂದು, ಶ್ರೀ ವೆಂಕಯ್ಯ ಸ್ವಾಮಿಯವರನ್ನು ನಂಬಿ ಗೊಲಗಮೂಡಿಗೆ ಹೋಗಿ ಎಂದು ಬಹಳ ಒತ್ತಾಯ ಮಾಡಿ ಹೇಳಿದರು. ಆ ಆಪತ್ಕಾಲದಲ್ಲಿ ನಾನು, "ಸ್ವಾಮೀ, ನಾನು

ಮದ್ರಾಸಿಗೆ ಹೋಗದೆ ನಿಮ್ಮ ಬಳಿ ಬಂದರೆ ಹಣ ಖರ್ಚಾಗುತ್ತದೆ, ಚಿಕಿತ್ಸೆ ಮಾಡಿಸಲಿಲ್ಲ ಎಂದು ನನ್ನ ತಂದೆಯ ಸಮೇತ ಎಲ್ಲರೂ ನನ್ನನ್ನು ದೂಷಿಸುತ್ತಾರೆ. ಆದ್ದರಿಂದ ನಾನು ಕ್ಯಾನ್ಸರ್ ಆಸ್ಪತ್ರೆಗೆ ಅಮ್ಮನನ್ನು ಕರೆದುಕೊಂಡು ಹೋಗುತ್ತೇನೆ. ಅಲ್ಲಿ ವೈದ್ಯರು ಕ್ಯಾನ್ಸರ್ ಇಲ್ಲ ಎಂದು ಹೇಳಿದರೆ, ಅಮ್ಮನ ಆರೋಗ್ಯ ಸುದಾರಿಸಿದರೆ, ನಿಮ್ಮ ಪಟವನ್ನು ಇಟ್ಟು ಪೂಜೇ ಮಾಡುತ್ತೇನೆ ಎಂದು ಪ್ರಾರ್ಥಿಸಿದೆ. ನಾವು ರೈಲಿನಲ್ಲಿ ಅರ್ಧ ದೂರ ಹೋದ ನಂತರ, ಅಲ್ಲಿಯ ವರೆಗೂ ಏನೂ ತಿನ್ನದೆ ಇದ್ದ ನಮ್ಮ ಅಮ್ಮ, ಆಹಾರ ಕೊಡು ಎಂದು ಕೇಳಿ ಊಟ ಮಾಡಿದರು. ಅದು ಅಮ್ಮನ ಕೊನೆಯ ಕ್ಷಣಗಳಾಗಿದ್ದರಿಂದ ನಾನು ಅವರಿಗೆ ಮೊಸರು ಅನ್ನವನ್ನು ಕೊಟ್ಟೆ, ಅವರು ಅದನ್ನು ಚೆನ್ನಾಗಿ ತಿಂದರು. ಆಗಿನಿಂದ, ಹಣ್ಣು ಬಿಸ್ಕೆಟ್ಟು ಎಲ್ಲಾ ತಿನ್ನುವ್ದಕ್ಕೆ ಪ್ರಾರಂಭಿಸಿದರು. ಎಲ್ಲಾ ತಿಂದರೂ, ಅವರಿಗೆ ರಕ್ತದ ವಿರೋಚನೆ ಆಗಲಿಲ್ಲ. ಸೆಂಟ್ರಲ್ ಸ್ಟೇಷನಲ್ಲಿ ಇಳಿದು, "ನನ್ನ ಆರೋಗ್ಯ ಈಗ ಚೆನ್ನಾಗಿದೆ, ಆಸ್ಪತ್ರೆಗೆ ಬೇಡ, ಮನೆಗೆ ಹೋಗೋಣ" ಎಂದರು. ಹೇಗೋ ಅವರನ್ನು ಒಪ್ಪಿಸಿ, ಅಡಯಾರು ಕ್ಯಾನ್ಸರು ಆಸ್ಪತ್ರೆಗೆ ಕರೆದುಕೊಂಡು ಹೋಗಿ, 1600ರೂ ಖರ್ಚು ಮಾಡಿ ಎಲ್ಲಾ ಪರಿಕ್ಷೆಗಳನ್ನು ಮಾಡಿಸಿದರೂ ಯಾವ ರೋಗ ಇಲ್ಲವೆಂದು ತಿಳಿಯಿತು. ಅಲ್ಲದೇ, ಈ ವಯಸ್ಸಿನಲ್ಲಿ ಆಕೆಯ ರಕ್ತದ ಒತ್ತಡ, ಹೃದಯ, ಮೂತ್ರ ಪಿಂಡ ಎಲ್ಲಾ ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದೆಯೆಂದರೆ ತುಂಬಾ ಅದೃಷ್ಟವಂತರು ಎಂದು ವೈದ್ಯರು ಒಂದು ಸರ್ಟಿಫಿಕೆಟ್ ಕೊಟ್ಟರು. ಇವತ್ತಿಗೂ ನನ್ನ ಅಮ್ಮ ಯಾವ ಔಷಧಿಯೂ ಇಲ್ಲದೆ, ಆರೋಗ್ಯವಾಗಿದ್ದಾರೆ. ಸ್ವಾಮಿಯವರಲ್ಲಿ ನಮಗೆ ಮೊದಲು ಪರಿಚಯ ಇಲ್ಲದಿದ್ದರೂ, ಸ್ಮರಿಸಿದ ತಕ್ಷಣ ನಮ್ಮನ್ನು ರಕ್ಷಿಸಿ, ನಮ್ಮ ಕಷ್ಟಗಳನ್ನೆಲ್ಲಾ ತೀರಿಸಿದ ಆ ಮಹಾತ್ಮರಿಗೆ ನಾವು ತುಂಬಾ ಋಣಿ.

ಕೇವಲ ಬಾಹ್ಯೀಕರಿಸಿದ ಪ್ರಾರ್ಥನೆಗಳಲ್ಲದೇ, ಶ್ರೀ ಸ್ವಾಮಿಯವರು, ತಮ್ಮ ಭಕ್ತರು, ಮನಸ್ಸಲ್ಲಿ ಪೂರ್ತಿ ನಂಬಿಕೆ ಇಟ್ಟು ಪ್ರಾರ್ಥಿಸಿದವರನ್ನು ಹೇಗೆ ರಕ್ಷಿಸುತ್ತಿದ್ದಾರೋ ನೋಡೋಣ. ಗೂಡೂರು ತಾಲೂಕಿನ, ಓಜಿಲಿಯ ನಿವಾಸಿ, ಒಬ್ಬ ಮುಸ್ಲಿಂ ಯುವಕನ ವಯಸ್ಸು 20 ವರ್ಷಗಳು. 1988 ರಲ್ಲಿ ಜನವರಿ ತಿಂಗಳಲ್ಲಿ ಇದ್ದಕ್ಕಿದ್ದಹಾಗೆ, ಹುಚ್ಚನಂತೆ ವರ್ತಿಸಲು ಪ್ರಾರಂಭಿಸಿದನು. ತನ್ನ ಶರೀರದ ಮೇಲಿರುವ ಬಟ್ಟೆಗಳನ್ನೆಲ್ಲಾ ತೆಗೆದು ಹಾಕುತ್ತಿದ್ದ. ಅವನು ಹೆಂಗಸರನ್ನು ಕಂಡರೆ ಅವರನ್ನು ಓಡಿಸುತ್ತಿದ್ದನು. ಅವನ ಕಾಲು, ಕೈಗಳು ಕಟ್ಟಿ ವಿವಿಧ ಚಿಕಿತ್ಸೆಗಳನ್ನು ಮಾಡಿಸಿದರು. ಇವನ ಕುಟುಂಬ ಕೂಲಿ ಮಾಡಿ ಬದುಕುತ್ತಿದ್ದರಿಂದ ಎರಡು ಸಾವಿರ ರೂಪಾಯಿ ಸಾಲ ಮಾಡಿ ಎಲ್ಲ ರೀತಿಯ ಚಿಕಿತ್ಸೆಗಳನ್ನು ಮಾಡಿಸಿ, ಪ್ರಯೋಜನವಾಗದೇ, ಅಸಹಾಯಕರಾಗಿ, ಶ್ರೀ ಸ್ವಾಮಿಗೆ ಶರಣಾದರು.

ಆ ಯುವಕ, ಹಗಲೂ ರಾತ್ರಿ ನಿದ್ರೆ ಮಾಡದೇ, ತೋಳದಂತೆ ಮಲಗಿ ಭಯಂಕರವಾಗಿ ಕಿರುಚುತ್ತಾ, ಕಾಲು ಕೈಗಳನ್ನು ಕಟ್ಟಿದ ಹಗ್ಗಗಳನ್ನು ಬಾಯಿನಿಂದ ಕಚ್ಚುತ್ತಿದ್ದ. ಅವನ ಕಾಲು, ಕೈಗಳು ಬಾಯಿಗೆ ಸಿಕ್ಕದಹಾಗೆ ಮಾಡಬೇಕೆಂದು, ಅವನ ಕೈಗಳನ್ನು ಕಾಲುಗಳ ನಡುವೆ ಕಟ್ಟಿ ಅವನ ಕಾಲುಗಳ ನಡುವೆ ಒಂದು ಕೋಲನ್ನು ಸಿಕ್ಕಿಸುತ್ತಿದ್ದರು. ನೋಡುವವರಿಗೆ ಅದು ಭಯಂಕರ ದೃಷ್ಯ.

ಶ್ರೀ ಸ್ವಾಮಿಯವರ ಸನ್ನಿಧಿಯಲ್ಲಿದ್ದ ಕೆಲವರು ಅಮಾಯಕ ಭಕ್ತರು ಆ

ಯುವಕನನ್ನು ಕಾಕುಪಲ್ಲೆ ಪಾಲ್ಟೂರಿ (ಗ್ರಾಮಗಳು) ಗೆ ಕರೆದುಕೊಂಡು ಹೋದರೆ ಗುಣವಾಗುತ್ತದೆ ಎಂದು ವಿವಿಧ ಸಲಹೆಗಳನ್ನು ನೀಡುತ್ತಿದ್ದರು. ಆ ಹುಡುಗನ ನಿಸ್ಸಹಾಯಕ ತಂದೆ ಒಂದೇಮಾತು ಹೇಳುತ್ತಿದ್ದರು. "ನನ್ನ ಮಗ ಸತ್ತರೆ ಇಲ್ಲೇ ಸಮಾಧಿ ಮಾಡುತ್ತೇನೆ. ಬದುಕಿ ಗುಣವಾದರೆ ಸ್ವಾಮಿಯವರಿಗೆ ಒಂದು ತೆಂಗಿನಕಾಯಿ ಅರ್ಪಿಸುತ್ತೇನೆ. **ಅದು ಬಿಟ್ಟರೆ ನನಗೆ ಬೇರೆ ಯಾವ ಶಕ್ತಿಯೂ ಇಲ್ಲ. ನಾನು ಎಲ್ಲಿಯೂ ಹೋಗುತ್ತಿಲ್ಲ" ಎಂದು ಅವರು ತಮ್ಮ ದೃಢ ನಿರ್ಣಯವನ್ನು ಹೇಳುತ್ತಿದ್ದರು. ಸಂಪೂರ್ಣ ನಂಬಿಕೆ, ತುಂಬಿದ ಭಕ್ತಿಗಿಂತ ಮತ್ತೊಂದು ಸಾಧನೆ ಇಲ್ಲ.**

ಮೂರನೆಯ ದಿನದಿಂದ ಆ ಹುಡುಗನ ಕಿರುಚಾಟ ಮತ್ತು ನಿಯಂತ್ರಣವಲ್ಲದ ವರ್ತನೆ ಕಡಿಮೆ ಆಗಿ, ಕಟ್ಟುಗಳನ್ನು ಬಿಚ್ಚಿದರೆ ಹಾಗೇ ಕೂತಿರುತ್ತಿದ್ದ. ಒಂದೇ ವಾರದಲ್ಲಿ ಅವನು ಸಹಜ ಸ್ಥಿತಿಗೆ ಬಂದ. ಒಂದು ತಿಂಗಳು ನೋಡಿದರು. ಶ್ರೀ ಸ್ವಾಮಿಯವರ ಅಪ್ಪಣೆ ಪಡೆಯದೇ ಮನೆಗೆ ಹೋಗುವುದಿಲ್ಲ ಎಂದು ಅಲ್ಲೇ ಉಳಿದುಕೊಂಡರು. ಅವನು ಸಂಪೂರ್ಣವಾಗಿ ಗುಣವಾಗಿ ಎರಡು ತಿಂಗಳ ನಂತರ ಸ್ವಾಮಿಯವರ ಅಪ್ಪಣೆ ಪಡೆದು ಮನೆಗೆ ಹೊರಟು ಹೋದರು. ಪ್ರತಿ ಶನಿವಾರ ಅವರು ಬಂದು ಪ್ರೀತಿಯಿಂದ ಸ್ವಾಮಿಯವರ ಸಮಾಧಿಯನ್ನು ದರ್ಶಿಸಿ, ಸೇವೆ ಇಂದಿಗೂ ಸಲ್ಲಿಸುತ್ತಿದ್ದಾರೆ.

ಆತ್ಮಕೂರು ತಾಲೂಕು, ಬೊಮ್ಮವರಂ ಗ್ರಾಮದಲ್ಲಿದ್ದ ಪಾರ್ಲಪಲ್ಲಿ ವೆಂಕಟೆಶ್ವರ್ಲುರವರು ಹೀಗೆ ಹೇಳಿದರು. " 1970 ರಲ್ಲಿ ನಮ್ಮ ಮೇಕೆಗಳಿಗೆ ರೋಗ ಬಂದು ಮರಣಿಸುತ್ತಿದ್ದ ಕಾರಣ, ಸ್ವಾಮಿಯವರ ಆಶೀರ್ವಾದ ಪಡೆಯಲು ಚಿಲಕಮರ್ರಿ ಎಂಬ ಗ್ರಾಮಕ್ಕೆ ಹೊದೆ. ಸ್ವಾಮಿಯವರ ಸುತ್ತಲೂ ಬಹಳ ಭಕ್ತರಿದ್ದುದರಿಂದ, ನಾನು ದೂರದಲ್ಲಿ ನಿಂತು ಮನಸ್ಸಿನಲ್ಲೇ ಪ್ರಾರ್ಥಿಸುತ್ತಿದ್ದೆ. ಇಷ್ಟರಲ್ಲಿ ಸ್ವಾಮಿಯವರ ಶಿಶ್ಯನೊಬ್ಬ ಬಂದು ನನ್ನನ್ನು ಸ್ವಾಮಿಯವರು ಕರೆಯುತ್ತಿದ್ದಾರೆಂದು ಹೇಳಿ ಸ್ವಾಮಿಯವರ ಬಳಿ ಕರೆತಂದನು. ಸ್ವಾಮಿಯವರು, "ಇಕ ಜೀವಾಲು ನಷ್ಟಂಗಾವು, ಇಕ ಅನ್ನೀ ಬಾಗುಂಟಾಯಿ" (ಇನ್ನು ಜೀವಗಳಿಗೆ ಏನೂ ನಷ್ಟ ಆಗುವುದಿಲ್ಲ. ಇನ್ನುಮುಂದೆ ಎಲ್ಲಾ ಚೆನ್ನಾಗಿರುತ್ತವೆ) ಎಂದು ಒಂದು ಹಾಮೀ ಪತ್ರವನ್ನು ಬರೆಸಿ ಕೊಟ್ಟರು. ಅಂದಿನಿಂದ ಮೊದಲು, ಒಂದು ಮೇಕೆಯೂ ಮರಣಿಸಲಿಲ್ಲ. 1978 ರಲ್ಲಿ ಭಾರೀ ಚಂಡಮಾರುತದ ಕಾರಣ, ನಾನು ಎಲ್ಲಾ ಮೇಕೆಗಳನ್ನು ಬೆಟ್ಟದ ಕಡೆಗೆ ಓಡಿಸಿದೆ. ಅವುಗಳು ಹಿಂತಿರುಗುವ ಭರವಸೆ ನನಗಿರಲಿಲ್ಲ. ಆ ರಾತ್ರಿ, ಸ್ವಾಮಿಯವರು ನನ್ನ ಕನಸಿನಲ್ಲಿ ಬಂದು, "ನಮ್ಮ ಜೀವಗಳೆಲ್ಲ ಚೆನ್ನಾಗಿವೆ ಅಯ್ಯ" ಎಂದು ಹೇಳಿದರು. ನಮ್ಮ ಗ್ರಾಮದಲ್ಲಿ ತುಂಬಾ ಜನರ ಮೇಕೆಗಳು ಮರಣಿಸಿದೆವು, ಆದರೆ ನನ್ನ ಒಂದು ಮೇಕೆಯೂ ಸಾಯಲಿಲ್ಲ

ನನಗೆ 1984 ರಲ್ಲಿ ನನಗೆ ಅತಿಯಾಗಿ ಹೃದಯ ಕಂಪಿಸುತ್ತಿದ್ದ ಕಾರಣ, ನನ್ನ ಕುಟುಂಬದವರು, ಆತ್ಮಕೂರಿನ ಡಾ. ಸುಂದರರಾಮಿರೆಡ್ಡಿಯವರ ಬಳಿ ಸೇರಿಸಿದರು. ಎರಡು ದಿನಕ್ಕೆ ಎರಡು ಸಾವಿರ ರೂಪಾಯಿ ಖರ್ಚಾಯಿತು. ಡಕ್ಟರ್, ನಾನು ಮರಣಿಸಿದೆ ಎಂದು ನನ್ನ ಕುಟುಂಬದವರಿಗೆ ತಿಳಿಸಿ, ನನ್ನ ಮೃತದೇಹವನ್ನು ಮನೆಗೆ ತೆಗೆದುಕೊಂಡು ಹೋಗಲು ಹೇಳಿದರು. ನನ್ನ ಮೃತದೇಹವನ್ನು ಕಾರಿನಲ್ಲಿ ಮನೆಗೆ ಕರೆದುಕೊಂಡು

ಬಂದರು. ಎಲ್ಲರೂ ಅಳುತ್ತಾ ಕೂತ ಕಡೆಯೇ ನಿದ್ರೆಮಾಡಿದರು. ನನ್ನ ತಂದೆ ತಾಯಿಯವರಿಗೆ ಸ್ವಾಮಿಯವರು ಸ್ವಪ್ನದಲ್ಲಿ ದರ್ಶನ ಕೊಟ್ಟು, "ನನ್ನ ಭಕ್ತನನ್ನು ನಾನು ರಕ್ಷಿಸಿಕೊಳ್ಳುತ್ತೇನೆ" ಎಂದು ಹೇಳಿದರಂತೆ. ಬೆಳಗಾಗುವ ಹೊತ್ತಿಗೆ, ನಾನು ಕಣ್ಣು ತೆರೆದು, ಕ್ರಮೇಣ ಎರಡು ತಿಂಗಳಲ್ಲಿ ಯಾವುದೇ ಔಷಧಿಯೂ ಇಲ್ಲದೇ ಆರೋಗ್ಯವಂತನಾದೆ. ಈ ವಿಚಿತ್ರವನ್ನು ಕಂಡವರೆಲ್ಲ ಶ್ರೀ ಸ್ವಾಮಿಯರ ಮಹಿಮೆಯನ್ನು ಕೊಂಡಾಡಿದರು.

1984 ರಲ್ಲಿ ಶ್ರೀ ಸ್ವಾಮಿಯವರ ಆರಾಧನೆಗೆ ಬಂದು "ಸ್ವಾಮಿಯವರು ಜೀವಂತವಾಗಿ ಇದ್ದಾಗ ನನ್ನನ್ನು ಅವರ ಸೇವೆ ಮಾಡಲು ಹತ್ತಿರ ಇರಿಸಿಕೊಳ್ಳದೇ ದೂರ ಮಾಡಿದರು" ಎಂದು ದುಃಖ ಪಟ್ಟೆ. ಆ ರಾತ್ರಿ ಸ್ವಾಮಿಯವರು ಅಗ್ನಿ ಕುಂಡದಲ್ಲಿ ಕೂತಿರುವಹಾಗೆ ಸ್ವಪ್ನದಲ್ಲಿ ದರ್ಶನ ಕೊಟ್ಟರು. ಇನ್ನೊಂದು ದೃಶ್ಯದಲ್ಲಿ ಸ್ವಾಮಿಯವರ ಶರೀರದ ಮೇಲೆ ಅಸಂಖ್ಯಾತವಾದ ಕರ್ಪೂರದ ಬಿಲ್ಲೆಗಳು ಬೆಳಗುತ್ತಿದ್ದಂತೆ ಕಾಣಿಸಿತು. ಈ ಸ್ವಪ್ನ ದರ್ಶನದಿಂದ ಸ್ವಾಮಿಯವರು, "ನಾನು ಎಲ್ಲರಂತೆ ಮರಣಿಸಲಿಲ್ಲ. ಈ ಅಗ್ನಿಕುಂಡದ ಅಗ್ನಿಯಂತೆ ಶಾಶ್ವತವಾಗಿ ಬೆಳಗುತ್ತಿರುತ್ತೇನೆ" ಎಂದು ನನಗೆ ನೆನಪಿಸಿದ ಹಾಗೆ ಭಾಸವಾಯಿತು.

ಆರಾಧನೋತ್ಸವದಿಂದ ನಾನು ಮನೆಗೆ ಬಂದ ನಾಲಕ್ಕು ದಿನಗಳಾದ ನಂತರ, ನನಗೆ ರಕ್ತದ ವಿರೋಚನೆ ಪ್ರಾರಂಭವಾಗಿ, ತುಂಬಾ ಬಟ್ಟೆಗಳು ಒದ್ದೆ ಆಗುತ್ತಿದ್ದವು. ಕುಟುಂಬದವರೆಲ್ಲಾ, "ಬೇಡ ಎಂದರೆ ಆರಾಧನೆಗೆ ಹೋಗಿ, ಈ ಆರೋಗ್ಯ ಪರಿಸ್ಥಿತಿಯನ್ನು ಖರಿದಿಸಿ ತಂದಂತಾಯಿತು, ಇನ್ನು ಲಾಭವಿಲ್ಲ, ಮರಣಿಸುತ್ತಾನೆ" ಎಂದು ಬಾಯಿಗೆ ಬಂದಂತೆ ಮಾತನಾಡಿದರು. ನಾನು, "ಸ್ವಾಮಿಯವರು ನನ್ನೊಂದಿಗಿದ್ದರೆ ಕಾಪಾಡುತ್ತಾರೆ, ಇಲ್ಲದಿದ್ದರೆ ನನ್ನನ್ನು ಅವರಲ್ಲಿ ಐಕ್ಯ ಪಡಿಸುಕೊಳ್ಳುತ್ತಾರೆ" ಎಂದು ನಂಬಿ, ನಾನು ಯಾವುದೇ ಔಷಧಿಯನ್ನೂ ಬಳಿಸಲಿಲ್ಲ. ಆ ರಾತ್ರಿ ನನ್ನ ಸ್ವಪ್ನದಲ್ಲಿ ಶ್ರೀ ಸ್ವಾಮಿಯವರು ತಮ್ಮ ತೆರೆದ ಸಮಾಧಿಯಲ್ಲಿ ಅಭಯ ಹಸ್ತ ತೋರಿಸುತ್ತಾ ನಿಂತಿದ್ದ ಹಾಗೆ ಕಂಡರು. ಬೆಳಗಾದ ಮೇಲೆ, ನಾನು ಆರಾಮಾಗಿ ನಡೆಯುತ್ತಿರುವುದನ್ನು ನೋಡಿ ಎಲ್ಲಾ ಆಶ್ಚರ್ಯ ಪಟ್ಟರು. ಸ್ವಾಮಿಯವರನ್ನು ಸಂಪೂರ್ಣವಾಗಿ ನಂಬಿಕೊಳ್ಳುವುದೇ ನನಗೆ ಗೊತ್ತಿರುವುದು. ಮಿಕ್ಕದ್ದು ಸ್ವಾಮಿಯವರ ದಯೆ.

136 ಸದ್ಗುರುಗಳನ್ನು "ಭುಕ್ತಿ, ಮುಕ್ತಿ ಪ್ರದಾತರು" ಎಂದು ಸ್ತುತಿಸುತ್ತೇವೆ. ಮಹಾಸಮಾಧಿಯಾದ ನಂತರವೂ ಸ್ವಾಮಿಯವರು ತಮ್ಮ ಭಕ್ತರನ್ನು ಹೇಗೆ ಕಾಪಾಡುತ್ತಿದ್ದಾರೆ ಎನ್ನುವುದನ್ನು ನೋಡಿದರೆ ಅವರು ನಿತ್ಯಸತ್ಯರು ಎಂದು ಗ್ರಹಿಸಬಲ್ಲೆವು.

ರಾಪೂರು ತಾಲುಕು, ಮುದಿಗೇಡು ಗ್ರಾಮದ ನಿವಾಸಿ ಕೋಡುರು ಯಾನಾದಿ ರೆಡ್ಡಿಯವರು, ಅವರ 16ನೇ ವರ್ಷದ ವಯಸ್ಸಿನಿಂದ, ಸ್ವಾಮಿಯವರನ್ನು ಅನುಸರಿಸುತ್ತಿದ್ದ ಭಕ್ತರು. ಇವರಿಗೆ ಇದ್ದ ಉಬ್ಬಸ ವ್ಯಾಧಿಯನ್ನು ಗುಣಪಡಿಸಿ, ಸ್ವಾಮಿಯವರು ಇವರನ್ನು ದೊಡ್ಡ ಭಾಗ್ಯವಂತರನ್ನಾಗಿ ಮಾಡಿದರು. ಅವರು

ಯಾವಾಗಲೂ ಹಣಕಾಸಿನ ತೊಂದರೆಯಲ್ಲಿದ್ದ ಕಾರಣ, ಸ್ವಾಮಿಯವರು ತಮ್ಮ ಗ್ರಾಮಕ್ಕೆ ಬಂದಾಗ ಹೊರತುಪಡಿಸಿ ಮಿಕ್ಕ ಸಮಯದಲ್ಲಿ ಸ್ವಾಮಿಯವರನ್ನು ಸ್ಮರಿಸುತ್ತಿರಲಿಲ್ಲ.

1985 ಜೂನ್ ತಿಂಗಳಲ್ಲಿ ವ್ಯಾಧಿ ಪೀಡಿತರಾಗಿ, ಎಷ್ಟೋ ಕಷ್ಟದಿಂದ ದಿನಕ್ಕೆ ಒಂದು ಕಪ್ಪು ಕಾಫಿ ಕುಡಿಯುತ್ತಿದ್ದರು. ಬೇರೆ ಯಾವ ಆಹಾರವನ್ನು ನೋಡಿದರೂ ಅದು ವಿಷದ ಹಾಗೆ ತೋರುತ್ತಿತ್ತು. ಎರಡು ತಿಂಗಳುಗಳಲ್ಲಿ ಎಷ್ಟೋ ಔಷಧಿಗಳು, ಇಂಜಕ್ಷನ್ಗಳನ್ನು ತೆಗೆದುಕೊಂಡರೂ ಗುಣವಾಗದೇ, ಅಸ್ತಿಪಂಜರದಂತಾದರು. ಆಗಸ್ಟು ತಿಂಗಳಿನಲ್ಲಿ ದಿನಕ್ಕೆ 30 ವಿರೋಚನೆ ಆಯಿತು. ಇದರ ಕಾರಣ ಏನೆಂದು ವೈದ್ಯರಿಗೆ ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ಈತ ತನ್ನ ಪ್ರಾಣದ ಆಸೆಯನ್ನು ಬಿಟ್ಟುಬಿಟ್ಟರು.

ಆಗಸ್ಟು 22 ನೇ ತಾರೀಖು ಇವರ ಸ್ನೇಹಿತರು ಅಕ್ಕಿಂ ವೆಂಕಟ್ರಾಮಿರೆಡ್ಡಿಯವರು, ಇವರು ಗೊಲಗಮೂಡಿಗೆ ಬಂದು, ಸ್ವಾಮಿಯವರ ಆರಾಧನೋತ್ಸವದಲ್ಲಿ ದರ್ಶನ ಮಾಡಿದರೆ, ವ್ಯಾಧಿ ಗುಣವಾಗುತ್ತದೆ ಎಂದು, ಇವರು ಬರುತ್ತೇನೆ ಎಂದರೆ, ಎರಡು ಎತ್ತಿನಬಂಡಿಯಲ್ಲಿ ಕೂರಿಸಿಕೊಂಡು, ಬಸ್ನಿಲ್ದಾಣದವರೆಗೆ ಕರೆದುಕೊಂಡು ಹೋಗಿ, ಅಲ್ಲಿಂದ ಬಸ್ಸಿನಲ್ಲಿ ಹೋಗೋಣ ಎಂದು ತುಂಬಾ ಬಲವಂತ ಮಾಡಿದರು. ಈತನಿಗೆ ಸಹಾಯವಿಲ್ಲದೇ ಏಳುವ ಪರಿಸ್ಥಿತಿಯಿಲ್ಲದಿದ್ದರೂ, ಅವರ ಸ್ನೇಹಿತನ ಪ್ರೋತ್ಸಾಹ ನೋಡಿ "ಬರುತ್ತೇನೆ" ಎಂದು ಹೇಳೇದರು. ಆಮೆಲೆ ಯಾನಾದಿರೆಡ್ಡಿಯವರು ತಮ್ಮ ಅನುಭವವನ್ನು ಹೀಗೆ ವಿವರಿಸಿದರು.

"ನಾನು ಸ್ವಾಮಿಯವರ ದರ್ಶನಕ್ಕೆ ಬರುತ್ತೇನೆ ಎಂದು ಹೇಳಿದ ಮರುಕ್ಷಣದಿಂದ ನನ್ನಲ್ಲಿ ಹೇಳಲಾಗದಷ್ಟು ಬದಲಾವಣೆ ಆಯಿತು. ಯಾರ ಸಹಾಯವೂ ಇಲ್ಲದೇ ಮನೆಯೊಳಗೆ, ನಡೆದುಕೊಂಡು ಹೋಗಿ, "ಹಸಿವಾಗುತ್ತದೆ, ಆಹಾರ ಕೊಡಿ" ಎಂದು ಆತುರ ಪಡಿಸಿದೆ. ಮನೆಯವರೆಲ್ಲಾ ದಿಗ್ಭ್ರಮೆಯಿಂದ, "ಇದು ಸಾವಿನ ಬಲ, ಮರಣಕ್ಕೇ ಈ ಹಸಿವು" ಎಂದು ಅಳಲು ಪ್ರಾರಂಭಿಸಿದರು. ನಾನು ಸಾಧಾರಣವಾಗಿ ಊಟ ಮಾಡಿ, ತಣ್ಣೀರಿನ ಸ್ನಾನ ಮಾಡಿ, ಒಗೆದ ಬಟ್ಟೆ ಧರಿಸಿ, ಗೊಲಗಮೂಡಿಗೆ ಹೋಗಲು ತಯಾರಾಗಿ ಕುಳಿತುಕೊಂಡೆ. ನನ್ನನ್ನು ನೋಡಿದ ವೆಂಕಟ್ರಾಮಿರೆಡ್ಡಿ "ಸಾಯುವ ಸ್ಥಿತಿಯಲ್ಲಿದ್ದೆಯಲ್ಲಾ! ಇಷ್ಟರಲ್ಲೇ, ಈಗ ಮದುವೆ ಗಂಡಿನ ಹಾಗೆ ತಯಾರಾಗಿದ್ದೇಯಲ್ಲಾ" ಎಂದು ಹೇಳಿ, "ಇದೆಲ್ಲಾ ಸ್ವಾಮಿಯವರ ಮಹಿಮೆ ಅಲ್ಲವೇ?" ಎಂದರು.

ಎರಡು ತಿಂಗಳು ಆಹಾರ ಇಲ್ಲದ ನಾನು, ಗಾಡಿ ಇಲ್ಲದೇ, ಒಂದು ಮೈಲಿ ನಡೆದು ಬಸ್ ಹತ್ತಿ ಗೊಲಗಮೂಡಿಗೆ ಬಂದು ಅಲ್ಲಿ ಎಲ್ಲವನ್ನು ಊಟಮಾಡಿದೆ. ಆಗಿನಿಂದ, ಯಾವ ಔಷಧಿಯೂ ಇಲ್ಲದೆ, ನಾನು ಆರೋಗ್ಯವಂತನಾಗಿದ್ದೇನೆ. ಇದು ಮಾನವರು ಊಹೆ ಮಾಡಲಾಗದ ಅನುಭವ. ಶ್ರಿ ಸ್ವಾಮಿಯವರ ಕೃಪೆಗೆ ನಾನು ಅರ್ಹನಲ್ಲ, ಆದರೂ ಆ ಕರುಣಾಮೂರ್ತಿ ನನ್ನನ್ನು ಏಕೆ ಕಾಪಾಡಿದರೆಂದು ಅವರ ಮಾತೃ ಪ್ರೇಮಕ್ಕೆ ಮಾತ್ರ ತೀಳಿಯುವುದು.

ನೆಲ್ಲೂರು ಜಿಲ್ಲೆಯಲ್ಲಿ, ಕಾಪುವೀಧಿ ಎಂಬ ರಸ್ತೆಯ ಬಳಿ ನಿವಾಸಿಸುತ್ತಿದ್ದ ಭಿಟ್ರಗುಂಟ ವೆಂಕಟ್ರಾಮಿರೆಡ್ಡಿ, ಅವರ ಪತ್ನಿ ಕೌಸಲ್ಯಮ್ಮ. ಆಕೆ, ತಮ್ಮ ಅನುಭವವನ್ನು

ಹೀಗೆ ತಿಳಿಸಿದರು. ಮೇ 1, 1991 ರಂದು, ಇದ್ದಕ್ಕಿದ್ದಂತೆ ನನ್ನ ಬಲಗಣ್ಣು ವಿಪರೀತವಾಗಿ ನೋಯಲು ಆರಂಭಿಸಿತು. ಕೋವೂರಿನಲ್ಲಿ ನೇತ್ರ ವೈದ್ಯರು ಇರಲಿಲ್ಲದರಿಂದ ಅರ್ಧರಾತ್ರಿಯ ವೇಳೆ ನೆಲ್ಲೂರಿಗೆ ಕರೆದುಕೊಂಡು ಹೋಗುವುದು ಸಾಧ್ಯವಿರಲಿಲ್ಲ ವಾದ್ದರಿಂದ, ನಿದ್ರೆ ಬರುವ ಇಂಜೆಕ್ಷನ್ ಕೊಟ್ಟು ಮಲಗಿಸಿದರು. ಬೆಳಗಾದ ಮೇಲೆ, ನೆಲ್ಲೂರಿನಲ್ಲಿ ನೇತ್ರ ವೈದ್ಯರಿಗೆ ತೋರಿಸಿದರೆ, ಅವರು ರಾಯವೇಲೂರಿಗೆ ಹೋಗಿ ಎಂದರು. ಕಣ್ಣುಗಳಿಂದ ದುರ್ವಾಸನೆಯ ಜಿಬರು ಹರಿಯುತ್ತಾ ವಿಪರೀತ ವಾದ ಬಾಧೆ ಮತ್ತು ಅಸಹನೀಯವಾಗುವಂತೆ ದುರ್ವಾಸನೆ ಬರುತ್ತಿತ್ತು. ರಾಯವೇಲೂರಿನಲ್ಲಿ ಮೂರು ದಿನಗಳು ಚಿಕಿತ್ಸೆ ಪಡೆದರೂ ನನಗೆ ಗುಣವಾಗಲಿಲ್ಲ. ಆ ನೋವು ತಡೆಯಲಾರದೆ ಚಿತ್ತೂರಿನಲ್ಲಿ ಸ್ಪೆಷಲಿಸ್ಟ್ ಗೆ ತೋರಿಸಿದೆವು. ಆದರೆ ಏನೂ ಪ್ರಯೋಜನವಾಗದೇ, ಮದ್ರಾಸಿಗೆ ಹೋಗಿ ಮುದ್ದುಕೃಷ್ಣಾರೆಡ್ಡಿಯವರ ಆಸ್ಪತ್ರೆಯಲ್ಲಿ ಹತ್ತು ದಿನ ಚಿಕಿತ್ಸೆ ಪಡೆದೆ. ಅಲ್ಲಿಯೂ ಏನೂ ಪ್ರಯೋಜನವಾಗಲಿಲ್ಲ. ನನ್ನ ಬಾಧೆ ತಡಿಯಲಾರದೆ, ಒಂಗೋಲು ಹತ್ತಿರ ಚೀಮಕುರ್ತಿಯಲ್ಲಿ ನೇತ್ರ ವೈದ್ಯರ ಹತ್ತಿರ ೪ ದಿನ ಚಿಕಿತ್ಸೆ ಪಡೆದರೂ ಪ್ರಯೋಜನವಾಗಲಿಲ್ಲ. ಕಣ್ಣಿನ ಗುಡ್ಡೆ ಪೂರ್ತಿ ಒಳಕ್ಕೆ ಹೋಗಿ ರೆಪ್ಪೆ ಮುಚ್ಚಿ ಹೋಗಿ, ನನ್ನ ಕಣ್ಣಿನ ಗುಡ್ಡೆ ಕಾಣಿಸುತ್ತಿರಲಿಲ್ಲ. ನನ್ನ ಬಾಧೆಯನ್ನು ನೋಡಲಾರದೆ, ನಮ್ಮ ಮನೆಯವರು, ಎಲ್ಲಿ ಕಣ್ಣಿನ ಸ್ಪೆಷಲಿಸ್ಟ್ ಇದ್ದಾರೆ ಎಂದರೆ ಅಲ್ಲಿಗೆ ಕಾರಿನಲ್ಲಿ ಕರೆದು ಕೊಂಡು ಹೋಗುತ್ತಿದ್ದರು. ಕೊನೆಗೆ, ತಿರುಪತಿಯಲ್ಲಿ ಮಂಜುಳಮ್ಮನವರಿಗೆ ತೋರಿಸಿದಾಗ, ಅವರು, "ಇನ್ನು ಕಣ್ಣು ಕಾಣಿಸುವುದಿಲ್ಲ. ಹೀಗೇ ಬಿಟ್ಟರೆ, ಎರಡನೇಯ ಕಣ್ಣಿಗೆ ಕೂಡ ಈ ರೋಗ ಬರುವ ಪ್ರಮಾದ ಇದೆ. ಆದ್ದರಿಂದ ತಕ್ಷಣ ಶಸ್ತ್ರ ಚಿಕಿತ್ಸೆ ಮಾಡಿ ಪಿಂಗಾಣಿ ಕಣ್ಣು ಇಡುತ್ತೇನೆ. ಇನ್ನು ಮುಂದೆ, ಒಂದು ಕಣ್ಣಿನಿಂದ ನೋಡುವುದನ್ನು ಸರಿಹೊಂದಿಸಬೇಕು ಎಂದು ಅವರ ತೀರ್ಮಾನವನ್ನು ಹೇಳಿದರು.

ಆ ಮಾತು ಕೇಳಿ ತುಂಬಾ ದುಃಖದಿಂದ ಅಳುತ್ತಾ ನಿದ್ರೆ ಮಾಡಿದೆ. ನನ್ನ ಸ್ವಪ್ನದಲ್ಲಿ, ಯಾವಾಗಲೋ ಮರಣಿಸಿದ ನನ್ನ ತಂದೆಯವರು ಕಾಣಿಸಿ, "ಅಲ್ಲಿಗೆ ಬಾ, ಅಲ್ಲಿಗೆ ಬಾ, ಅಲ್ಲಿಗೆ ಬಾ" ಎಂದು ಮೂರು ಬಾರಿ ಹೇಳಿದರು. ನನಗೆ ಎಚ್ಚರವಾಯಿರ್ತು. ತಂದೆಯವರು ಈಗ ಇಲ್ಲವಾದುದರಿಂದ, ನನ್ನ ಕೂಡಾ, ತಮ್ಮ ಹತ್ತಿರ ಬಾ ಎಂದು ಕರೆಯುತ್ತಿದ್ದಾರೆ ಎಂದು ಭಾವಿಸಿ, ನಾನು ಮರಣಿಸುತ್ತೇನೆ ಎಂದು ತುಂಬಾ ದುಃಖ ಪಟ್ಟೆ. ಕಣ್ಣು ತೆಗಿಸಿಕೊಂಡು ಪಿಂಗಾಣಿ ಕಣ್ಣು ಇಡಿಸುಕೊಳ್ಳುವುದಕ್ಕೆ ನಾನು ಒಪ್ಪದೆ, ಮನೆಗೆ ಹಿಂತಿರುಗಿ ಬಂದೆ.

ಇಲ್ಲಿಯವರೆಗೆ, ನಾನು ಶ್ರೀ ವೆಂಕಯ್ಯಸ್ವಾಮಿಯವರ ಬಗ್ಗೆ ಕೇಳಿದ್ದೇನೆ, ಆದರೆ ನಾನು ಗೊಲಗಮೂಡಿ ನೋಡಿಲ್ಲ. ಆದರೆ, ನನ್ನ ಅಂತರಾತ್ಮದಲ್ಲಿ, "ತಕ್ಷಣವೇ ಗೊಲಗಮೂಡಿಗೆ ಹೋಗು" ಎಂದು ಒಂದು ಅದೃಷ್ಯ ಶಕ್ತಿ ಬಲವಾಗಿ ಒತ್ತಾಯ ಪಡೆಸಿತು. ಗೊಲಗಮೂಡಿಗೆ ಕರೆದುಕೊಂಡು ಹೋಗಲು ಮನೆಯವರು ಒಪ್ಪಲಿಲ್ಲ. ನನ್ನಗೆ, ಮನೆಯಲ್ಲಿ ಉಳಿಯಲಾಗದೆ, ಯಾರಿಗೂ ಹೇಳದೆ, ಅರ್ಧರಾತ್ರಿ, ಉಟ್ಟಬಟ್ಟೆಯಲ್ಲಿ, ಗೊಲಗಮೂಡಿ ಬಂದು ಸೇರಿದೆ. ಸಮಾಧಿ ಮಂದಿರದ ಬಲ ಭಾಗದ ವರಾಂಡದಲ್ಲಿ

ಮಲಗಿದೆ. ಮುಖಕ್ಕೆ ಒಂದು ಬಟ್ಟೆ ಹೊದ್ದಿಕೊಂಡು ಬಹಳ ದುಃಖದಿಂದ ಕೊರಗುತ್ತಾ ಮೂರು ದಿನಗಳು ಅಲ್ಲೇ ಕಳಿದರೂ ನೋವು ಸ್ವಲ್ಪವೂ ಕಡಿಮೇ ಆಗಲಿಲ್ಲ. ಮೂರನೆ ದಿನ ಶನಿವಾರ ಆದ್ದ ಕಾರಣ, ವಿಪರೀತವಾದ ಭಕ್ತರು ಸೇರಿದ್ದರು. ಅಗ್ನಿಕುಂಡದಿಂದ ಹೊಗೆ ಜೋರಾಗಿ ಬರುತ್ತಿತ್ತು. ಆ ಹೊಗೆಯಿಂದ ನನ್ನ ಕಣ್ಣಿನ ತೊಂದರೆ ತಡಿಯಲಾರದಷ್ಟಾಗಿ, ಸ್ವಾಮಿಯವನ್ನು ಸ್ವಲ್ಪ ನಿಷ್ಠೂರವಾಗಿ ಮಾತನಾಡಿಸಿದೆ. "ಸ್ವಾಮಿ, ನನ್ನನ್ನು ಏಕೆ ನಿಮ್ಮ ಸನ್ನಿಧಿಗೆ ಕರೆಸಿಕೊಂಡಿರಿ? ಈ ಹೊಗೆಯಿಂದ ನನ್ನನ್ನು ಏಕೆ ಕೊಲ್ಲುತ್ತಿದ್ದೀರಿ? ನಿಮ್ಮ ವೈಭವ ತೋರಿಸುಕೊಳ್ಳುವುದಕ್ಕಾ? ಅಥವಾ ನಿಮ್ಮ ಕೋಪ ನನ್ನ ಮೇಲೆ ತೀರಿಸುವುದಕ್ಕಾ?" ಎಂದು ನನ್ನ ಮನಸ್ಸಿಗೆ ಬಂದ ಹಾಗೆಲ್ಲಾ ಅಂದುಕೊಂಡೆ. ಸ್ವಲ್ಪ ನಿದ್ರೆ ಹತ್ತಿತು. ಆ ನಿದ್ರೆಯಲ್ಲಿ ಒಂದು ಸುಂದರವಾದ ಕನಸ್ಸನ್ನು ಕಂಡೆ. ಪಿಂಗಾಣಿ ಪಾತ್ರೆಯಲ್ಲಿ ನೀರು ತೆಗೆದುಕೊಂಡು ಒಂದು ಬಿಳೀಸೀರೆ ಉಟ್ಟುಕೊಂಡಿದ್ದ ಒಬ್ಬ ಯುವತಿ, ಔಷಧಿಯ ಪೆಟ್ಟಿಗೆ ಹಿಡಿದುಕೊಂಡು, ಕಪ್ಪನೆ ಕೋಟು ಧರಿಸಿದ್ದ ವೈದ್ಯರು ನನ್ನನ್ನು ಸಮೀಪಿಸಿದರು. ಅವರಿಬ್ಬರೂ ಏನೋ ಮಾತನಾಡಿಕೊಂಡ ಮೇಲೆ, ಆ ವೈದ್ಯರು ಹತ್ತಿಯನ್ನು ನೀರಿನಲ್ಲಿ ಒದ್ದೆ ಮಾಡಿ, ನನ್ನ ಕಣ್ಣನ್ನು ಒರೆಸಿ, ತಕ್ಷಣವೇ ವಿಚಿತ್ರವಾಗಿ ತಮ್ಮ ಬೆರಳುಗಳಿಂದ ನನ್ನ ಕಣ್ಣನ್ನು ಹಿಸುಕಿ ನೀರಲ್ಲಿ ಹಾಕಿದರು. ನೀರು ಚಿಮ್ಮುವುದನ್ನು ಸಹ ನಾನು ನೋಡಿದೆ. ಹತ್ತಿಯನ್ನು ಕೆಂಪು ಔಷಧಿಯಲ್ಲಿ ಒದ್ದೆ ಮಾಡಿ ನನ್ನ ಕಣ್ಣನ್ನು ಸವರಿ, ಕಣ್ಣಿನ ಮೇಲಿಟ್ಟು ಅವರಿಬ್ಬರೂ ಹೊರಟು ಹೋದರು. ತಕ್ಷಣವೇ ಎಚ್ಚರ ಆಗಿ, "ನನ್ನ ಕಣ್ಣು ಬಂದಿದೆ, ನನಗೆ ಕಣ್ಣು ಕಾಣುತ್ತದೆ" ಎಂದು ಜೋರಾಗಿ ಕೂಗುತ್ತಾ ಎದ್ದು ಕುಳಿತೆ. ನನ್ನ ಪಕ್ಕದಲ್ಲಿದ್ದವರೆಲ್ಲಾ ನನ್ನ ಕಣ್ಣಿನ ಗುಡ್ಡೆ ಯಥಾ ಸ್ಥಿತಿಗೆ ಬಂದು ನಾನು ಸ್ಪಷ್ಟವಾಗಿ ನೋಡುವುದನ್ನು ನೋಡಿ ಶ್ರೀ ಸ್ವಾಮಿಯವರ ದಿವ್ಯ ಮಹಿಮೆಯನ್ನು ಹೊಗಳು ತೊಡಗಿದರು.

ಆವಾಗಿನಿಂದ ನನ್ನ ಕಣ್ಣು ನೋವಿಲ್ಲದೆ, ಸ್ಪಷ್ಟವಾಗಿ ಕಾಣಿಸುತ್ತದೆ. ಅಷ್ಟು ದಿನ ತೊಂದರೆ ಯಲ್ಲಾ ಕ್ಷಣದಲ್ಲಿ ಮಾಯವಾಯಿತೆಂದರೆ ಅದು ಸ್ವಾಮಿಯವರೊಬ್ಬರಿಗೇ ಸಾಧ್ಯವಲ್ಲವೇ? ಇನ್ನೊಮ್ಮೆ ಸ್ವಾಮಿಯವರ ಶಿಷ್ಯ ಒಬ್ಬರು ಕಾಣಿಸುಕೊಂಡು, "ಅಮ್ಮಾ! ವಯಸ್ಸಾಗಿ, ನಿನ್ನ ಎರಡನೇ ಕಣ್ಣು ಕಾಣದಿದ್ದರೂ, ನಾನು ಕೊಟ್ಟಿರುವ ಕಣ್ಣು ಯಾವ ಅಡಚಣೆಯೂ ಇಲ್ಲದೇ ಕಾಣಿಸುತ್ತದೆ" ಎಂದು ಹೇಳಿದರು. ಇದೆಲ್ಲಾ ಕರುಣಾಮಯರಾದ ಸ್ವಾಮಿಯವರ ಕೃಪೆಯ ಉದಾಹರಣೆಯೇ. ನಾನು ಮಾಡಿರುವ ಸಾಧನೆ ಏನೂ ಇಲ್ಲ.

137 **ಈ ವಿಷಯದಲ್ಲಿ ಪೂರ್ವ ಜನ್ಮದ ಪುಣ್ಯ, ಸ್ವಾಮಿಯವರೊಂದಿಗೆ ಆಕೆಗೆ ಇದ್ದ ಋಣಾನುಬಂಧ, ಮುಖ್ಯವಾಗಿ ಸ್ವಾಮಿಯವರ ಕೃಪೆಯನ್ನು ಪಡೆಯುವುದಕ್ಕೆ ಕಾರಣ ಎಂದು ತಿಳಿಯ ಬೇಕು. ಆದ್ದರಿಂದ, ನಮಗೆ ಯಾವ ರೀತಿಯ ಸಮಸ್ಯೆಗಳು ಇಲ್ಲದಿದ್ದರೂ, ನಾವು ನಿಸ್ವಾರ್ಥರಾಗಿ ಶ್ರೀ ಸ್ವಾಮಿಯವರನ್ನು ಈ ಜನ್ಮದಲ್ಲಿ ಸೇವಿಸಿದರೆ, ಅದು ಭವಿಷ್ಯದಲ್ಲಿ, ನಮಗೆ ಸ್ವಾಮಿಯವರ ಕೃಪೆಯನ್ನು ಅನಾಯಾಚಿತವಾಗಿ ಸಿಗುತ್ತದೆ.**

ನಾನು ಕೃತಜ್ಞತಾಭಾವದಿಂದ ಆರು ತಿಂಗಳ ಕಾಲ ನಿರಂತರವಾಗಿ ಶ್ರೀ ಸ್ವಾಮಿಯವರನ್ನು ಸೇವೆ ಮಾಡಿದೆ. ನಾನು 5 ವರ್ಷದಿಂದ ಬಳಲುತ್ತಿದ್ದ ಇಸಿನೊಫಿಲಿಯಾ

ಸಂಪೂರ್ಣವಾಗಿ ಗುಣವಾಯಿತು. ಪ್ರಸ್ತುತ, ನಾನು ತುಂಬಾ ಶೀತ ವಾತಾವರಣದಲ್ಲಿ ಮಲಗಿದರೂ, ಅಥವಾ ತಣ್ಣೀರಿನಲ್ಲಿ ಸ್ನಾನ ಮಾಡಿದರೂ, ನನಗೆ ಉಬ್ಬಸವಿಲ್ಲ. ಅದೂ ಅಲ್ಲದೇ, ಎಷ್ಟೋ ವರ್ಷಗಳಿಂದ ಬಾಧಿಸುತ್ತಿದ್ದ ನನ್ನ ಕುಟುಂಬ ಸಮಸ್ಯೆಗಳು ಕೂಡ ಪರಿಹಾರ ಮಾಡಿದರು.

ಪರಮ ಕಾರುಣ್ಯಮೂರ್ತಿಯಾದ ಸ್ವಾಮಿಯವರು ಅವರ ಕೃಪೆ ನನ್ನ ಮೇಲೆ ಇದ್ದರೂ, ಮಾನವ ಸಹಜವಾದ ವಕ್ರ ಬುದ್ಧಿಯನ್ನು ನಾನು ಬಿಡಲಾಗಲಿಲ್ಲ. ಸ್ವಾಮಿಯವರು ನನ್ನ ವಕ್ರ ಬುದ್ಧಿಯನ್ನು ಹೇಗೆ ಸರಿ ಮಾಡಿದರೋ ನೋಡಿ.

ಎಲ್ಲರೂ ಸ್ವಾಮಿಯವರಿಗೆ ತಮ್ಮ ಕೇಶವನ್ನು ಸಮರ್ಪಿಸುತ್ತಿದ್ದರೆ, ನಾನು ಕೂಡ ಸಮರ್ಪಿಸ ಬೇಕೆಂದು ನಿರ್ಧಾರ ಮಾಡಿದೆ. ಆದರೆ, ತಲೆ ಬೋಳಿಸಿ ಇರುವುದು ನನಗೆ ಇಷ್ಟವಾಗದೆ, ನನ್ನ ಕೇಶವನ್ನು ಸಮರ್ಪಿಸಲಿಲ್ಲ. ಎರಡೇ ದಿನಗಳಲ್ಲಿ ನನ್ನ ತಲೆಯ ತುಂಬಾ ಹುಣ್ಣುಗಳಾಗಿಬಿಟ್ಟವು. ಒಂದು ವಾರ, ನಾನು ಇಂಜೆಕ್ಷನ್ ತೆಗೆದುಕೊಂಡರೂ ಸ್ವಲ್ಪವೂ ಗುಣವಾಗಲಿಲ್ಲ. ಕೊನೆಗೆ, ಇದು ಸ್ವಾಮಿಯವರ ಮಹಿಮೆ ಎಂದು ಅರ್ಥವಾಗಿ, ಅಭಿಷೇಕದ ನೀರನ್ನು ತಲೆಗೆ ಸವರಿಕೊಳ್ಳುತ್ತಾ, ನಾನಗೆ ಗುಣವಾದರೆ, ನನ್ನ ಕೇಶವನ್ನು ತಪ್ಪದೇ ಸಮರ್ಪಿಸುತ್ತೇನೆ ಎಂದು ಕ್ಷಮಾಪಣೆ ಕೇಳಿಕೊಂಡೆ. ಎಷ್ಟು ವಿಚಿತ್ರವಾಗಿ ಆ ಹುಣ್ಣುಗಳು ಬಂದವೋ ಅಷ್ಟೇ ವಿಚಿತ್ರವಾಗಿ, ಅವು ಕಡಿಮೆ ಆದವು. ನಾನು ತಕ್ಷಣ "ತಪ್ಪಾಯಿತೆಂದು" ನನ್ನ ಕೇಶವನ್ನು ಅರ್ಪಿಸಿದೆ. ಇದಕ್ಕೇ ಇರಬಹುದು ಹಿರಿಯರು, **"ದಾಸನ ದಂಡನ ಮುಂಡನ"** ಎಂದು ಹೇಳುತ್ತಾರೆ.

ನಗರಿ ಶ್ರೀ ರಾಮುಲು, ತೆಲುಗು ಪಂಡಿತರು, ಅದೋನಿಯಲ್ಲಿ ನಿವಸಿಸುತ್ತಿದ್ದರು. ಇವರು, ತಮ್ಮ ಅನುಭವವನ್ನು ಹೀಗೆ ವಿವರಿಸಿದರು. ಜುಲೈ 1991 ವರೆಗೆ, ನನಗೆ ಶ್ರೀ ವೆಂಕಯ್ಯ ಸ್ವಾಮಿಯ ಬಗ್ಗೆ ಹೆಚ್ಚು ತಿಳಿದಿರಲಿಲ್ಲ. ಶ್ರೀ ಎಂ.ಕೆ.ಆನಂದ ವೆಂಕಟೇಶ್ವರಲುರವರು (ಸ್ಟೆಷಲ್ ಏ.ಸಿ.ಟಿ.ಓ. ಅದೋನಿ), ಶ್ರೀ ಶಿರಡಿ ಸಾಯಿ ಬಾಬಾರವರ ಪರಮ ಭಕ್ತರಲ್ಲಿ ಒಬ್ಬರು, ಅವರು ಶ್ರೀ ವೆಂಕಯ್ಯ ಸ್ವಾಮಿಯವರ ಜೀವನಕ್ಕೆ ಸಂಬಂಧಿಸಿದ ನಾಲ್ಕು ಭಾಗಗಳ "ಅವಧೂತ ಲೀಲಾ" ಎಂಬ ಪುಸ್ತಕವನ್ನು ಓದಲು ನನಗೆ ಕೊಟ್ಟರು. ನಾನು ಆ ಪುಸ್ತಕವನ್ನು ಆಗಷ್ಟ 19, 1991 ಹೊತ್ತಿಗೆ ನಾಲ್ಕು ಭಾಗಗಳೂ ಓದಿ, ಆ ರಾತ್ರಿ ಮಲಗುವ ಸಮಯದಲ್ಲಿ, ಭಕ್ತಿಯಿಂದ ಸ್ವಾಮಿಯವರನ್ನು ಹೀಗೆ ಪ್ರಾರ್ಥಿಸಿದೆ. "ಸ್ವಾಮೀ! ನೀವು ಸಮಾಧಿಯ ನಂತರವೂ, ಅನೇಕ ಜನರಿಗೆ, ಪ್ರತ್ಯಕ್ಷವಾಗಿ, ಸ್ವಪ್ನದಲ್ಲಿ, ಶುಭವಾದ ದಿವ್ಯ ಲೀಲೆಗಳನ್ನು ತೋರಿಸಿದ್ದೀರಿ. ಇದೆಲ್ಲಾ ನಿಜವಾಗಿದ್ದಲ್ಲಿ, ನನಗೇನಾದರೂ ಸಂಕೇತ ಕೊಟ್ಟು ನಿಮ್ಮ ಸಮಾಧಿಯ ದರ್ಶನಕ್ಕೆ ಬರುವಂತೆ ದಯವಿಟ್ಟು ಮಾಡಿ" ಎಂದು ಮನಸಾರ ಪ್ರಾರ್ಥಿಸಿಕೊಂಡು ಮಲಗಿದೆ. ಆ ರಾತ್ರಿ ನನಗೆ ಒಂದು ಸ್ವಪ್ನ ಬಂದಿತು. ಅದರಲ್ಲಿ, ಒಬ್ಬ ಅಪರಿಚಿತ ವ್ಯಕ್ತಿ ನನ್ನನ್ನು ತಮ್ಮ ಮನೆಗೆ ಆಹ್ವಾನಿಸಿ, ಸ್ವಾಮಿಯವರವನ್ನು ನನ್ನ ಮೇಲೆ ಕೆರಳಿಸಿದರು. ಶ್ರಿ ಸ್ವಾಮಿಯವರು ಮಹಾಬಲವಂತನಾದ ಪೈಲ್ವಾನ್ ತರಹ, ಶರೀರದಲ್ಲಿ ಬೆವರು ಬಂದಹಾಗೆ, ಒಬ್ಬ ಪೈಲ್ವಾನ್ನನ್ನು ಇನ್ನೊಬ್ಬ ಪೈಲ್ವಾನ್ ಕುಸ್ತಿಗೆ ಕರೆಯುವ ಭಂಗಿಯಲ್ಲಿ ನನ್ನ ಮೇಲೆ ಬಂದರು. ಭಯವೆನ್ನುವುದೇ ಗೊತ್ತಿಲದ ನನಗೆ

ಸ್ವಾಮಿಯವರನ್ನು ನೋಡಿ ಭಯವಾಯಿತು. ನಾನು ಆಗ, ಕೈಗಳನ್ನು ಜೋಡಿಸಿ, "ಸ್ವಾಮಿ, ನನಗೆ ಮಧುಮೇಹವಿದೆ. ಅಧಿಕ ರಕ್ತದೊತ್ತಡ ಮತ್ತು ಹೃದ್ರೋಗ ಕೂಡ ಇದೆ. ನೀವು ಒಂದು ಏಟು ಹೊಡೆದರೆ, ನಾನು ಬದುಕ ಬಲ್ಲೆನಾ? ದಯವಿಟ್ಟು ನನ್ನನ್ನು ಹೊಡೆಯಬೇದಿ" ಎಂದು ಬೇಡಿಕೊಂಡೆ. ಆದರೂ ಸ್ವಾಮಿಯವರು ಪೈಲ್ವಾನ್ ನಡಗೆಯಲ್ಲಿ ನನ್ನ ಮುಂದೆ ಬಂದು ಭಯ ಬರುವಂತೆ ಮಾಡಿದರು." ಕೊನೆಗೆ ಆ ಸ್ವಪ್ನ ಅಂತ್ಯವಾಯಿತು.

"ಮರುದಿನ, ಆಗಸ್ಟ್ 20, 1991, ನನಗೆ ಶ್ರೀ ಸ್ವಾಮಿಯವರ "ಅವಧೂತ ಲೀಲೆ" ಯನ್ನು ಪ್ರಸಾದಿಸಿದ ಶ್ರೀ. ಎಂ. ಕೆ. ಆನಂದ್ ವೆಂಕಟೆಶ್ವರುಲು ರವರ ಹತ್ತಿರ ನಾನು ಹೋಗಿ ನನ್ನ ಸ್ವಪ್ನದ ವಿಷಯ ವಿವರವಾಗಿ ತಿಳಿಸಿದೆ. ಅವರು, "ನಿಮಗೆ ಬಂದ ಸ್ವಪ್ನ ಒಳ್ಳೆಯದೇ. ಸ್ವಾಮಿಯವರು ನಿಮ್ಮನ್ನು ಕರುಣಿಸಿದರು. ಸ್ವಪ್ನದಲ್ಲಿ ಅವರು ಭಯ ಪಡಿಸಿದ್ದು ನಿಮ್ಮಲ್ಲಿರುವ ರೋಗಗಳನ್ನು. ನಿಮ್ಮನ್ನಲ್ಲ" ಎಂದರು. ತಕ್ಷಣವೇ ನಾನು ಪ್ರಯೋಗ ಷಾಲೆಗೆ ಹೋಗಿ, ಆರೋಗ್ಯದ ಪರೀಕ್ಷೆ (ರಕ್ತ ಮತ್ತು ಮೂತ್ರ) ಮಾಡಿಸಿದೆ. ಎರಡು ಪರೀಕ್ಷೆಗಳಿಂದಲೂ ನನಗೆ ಮಧುಮೇಹ ಇಲ್ಲವೆಂದು ಹೇಳಿದರು. ರಕ್ತದೊತ್ತಡೆಯ ಪರೀಕ್ಷೆ ಮಾಡಿಸಿದರೆ, ಸಾಮಾನ್ಯವಾಗಿದೆ ಎಂದರು. ಆದರೂ ನನಗೆ ಸಮಾಧಾನ ಆಗದೆ, ನಾನು ಈ ರೋಗಗಳಿಗೆ ತೆಗೆದುಕೊಳ್ಳುತ್ತಿದ್ದ ಔಷಧಿಗಳನ್ನು ನಿಲ್ಲಿಸಿದೆ. ಬೆಲ್ಲ ತುಪ್ಪವನ್ನು ರೊಟ್ಟಿಯ ಜೊತೆ ತಿಂದೆ. ಈ ರೋಗಗಳಿಗೆ ನಿಶಿದ್ಧವಾದ ಆಹಾರಗಳನ್ನು ಸೇವಿಸಿ, ಬೇರೆ, ಬೇರೆ ವೈದ್ಯರ ಹತ್ತಿರ ಮತ್ತು ಪ್ರಯೋಗ ಶಾಲೆಗಳಲ್ಲಿ ಪರೀಕ್ಷೆ ಮಾಡಿಸಿದೆ. ಸ್ವಾಮಿಯವರ ಮಹಿಮೆಯಿಂದ ಮಧುಮೇಹಾ, ರಕ್ತದ ಒತ್ತಡ ಅಥವ ಹೃದಯದ ರೋಗ ಯಾವುದೂ ಇರಲಿಲ್ಲ. ಕಡೆಯ ಬಾರಿ ಎಂದು ಅಕ್ಟೋಬರ್ 30, 1991 ರಂದು ಕರ್ನೂಲಿನಲ್ಲಿ ಪ್ರಸಿದ್ಧವಾದ ಪ್ರಯೋಗ ಶಾಲೆಯಲ್ಲಿ ಪರೀಕ್ಷೆ ಮಾಡಿಸಿದೆ. ರಕ್ತದ ಒತ್ತಡವೂ ಇಲ್ಲ, ಮಧುಮೇಹವೂ ಇರಲಿಲ್ಲ. ಇಬ್ಬರು ವೈದ್ಯರು ಪರೀಕ್ಷಿಸಿ ಎಲ್ಲಾ ನಾರ್ಮಲ್ ಆಗಿದೆ ಎಂದು ಹೇಳಿದರು. ಇದು ಸ್ವಾಮಿಯವರ ಮೊದಲನೆಯ ಸ್ವಪ್ನದ ವಿಷಯ.

ಶ್ರೀ ಸ್ವಾಮಿಯವರ ಎರಡನೆಯ ಸ್ವಪ್ನ ದರ್ಶನದ ವಿವರ ಹೀಗಿತ್ತು. 20-9-1991 ರಾತ್ರಿ ಸ್ವಪ್ನದಲ್ಲಿ ಸ್ರೀ ಸ್ವಾಮಿಯವರು ಪಲ್ಲಕಿಯಲ್ಲಿ ಮೆರವಣಿಗೆ ಬರುತ್ತಿದ್ದರು. ಪಲ್ಲಕಿಯ ಸುತ್ತಾ ತುಂಬಾ ಜನ ಸೇರಿ ಸ್ವಾಮಿಯವರ ದರ್ಶನ ಮಾಡುತ್ತಾ ಪ್ರಾರ್ಥಿಸುತ್ತಿದ್ದರು. ನಾನು ದೂರದಲ್ಲಿ ನಿಂತುಕೊಂಡು, "ಸ್ವಾಮೀ, ಈ ಜನರನ್ನು ತಳ್ಳಿಕೊಂಡು ನಾನು ನಿಮ್ಮ ಹತ್ತಿರ ಬರಲಾರೆ. ಇಲ್ಲಿಂದಲೇ ನನ್ನ ನಮಸ್ಕಾರವನ್ನು ಸ್ವೀಕರಿಸಿ" ಎಂದು ಪ್ರಾರ್ಥಿಸಿದೆ. ಸ್ವಾಮಿಯವರು ತಕ್ಷಣವೇ ಆ ಜನಗಳನ್ನು ಪಕ್ಕಕ್ಕೆ ಕಳುಹಿಸುತ್ತಾ "ಆಯನತೋ ನಾಕು ಪನಿ ವುನ್ನದಿ. ಪ್ರಕ್ಕಕು ತೊಲಗಂಡಯ್ಯಾ" (ಆತನ ಹತ್ತಿರ ನನಗೆ ಕೆಲಸವಿದೆ. ಪಕ್ಕಕ್ಕೆ ಹೋಗಿರಯ್ಯಾ) ಎನ್ನುತ್ತಾ ನನ್ನ ಹತ್ತಿರ ಬಂದರು. ಪಲ್ಲಕಿಯಲ್ಲಿ ಸ್ವಾಮಿಯವರ ಜೊತೆ, ಇನ್ನೊಬ್ಬ ಸ್ವಾಮಿಯವರಿದ್ದರು. ಸ್ವಾಮಿಯವರು, ಪಕ್ಕದಲ್ಲಿದ್ದ ಸ್ವಾಮಿಯವರನ್ನು, ಹಣ ಕೊಡಿ ಎಂದು ಕೇಳಿದರು. ಆ ಸ್ವಾಮಿಯವರು, ವೆಂಕಯ್ಯ ಸ್ವಾಮಿಯವರಿಗೆ, ಪಲ್ಲಕಿಯ ಮೇಲೆ ಬಿದ್ದಿದ್ದ ಹಣದಿಂದ ಒಂದು 100 ರೂಪಾಯಿನ ನೋಟು, 1 ಹತ್ತು ರೂಪಾಯಿನ

ನೋಟು, ಕೆಲವು ರೂಪಾಯಿಗಳನ್ನು ಕೊಟ್ಟರು. ಶ್ರೀ ವೆಂಕಯ್ಯ ಸ್ವಾಮಿಯವರು ಆ ಹಣವನ್ನು ತೆಗೆದುಕೊಂಡು, "ನೂಟ ಪದಹಾರ್ಲು ತೀಸುಕೋವಯ್ಯಾ" (116 ರು ತೆಗೆದುಕೋ) ಎಂದರು. 'ಈ ಹಣ ನನಗೇಕೆ ಸ್ವಾಮಿ!' ಎಂದು ಕೇಳಿದಾಗ, ಸ್ವಾಮಿಯವರು "ತೀಸುಕೋವಯ್ಯಾ!"(ತೆಗುದುಕೊಳ್ಳಯ್ಯಾ) ಎಂದು ನನ್ನ ಬೊಗಸೆಯಲ್ಲಿ ಹಾಕಿದರು. ನಾನು ಅದನ್ನು ನನ್ನ ಜೇಬಿನಲ್ಲಿಟ್ಟುಕೊಂಡೆ.

ಮರುದಿನ 21-9-91 ರಂದು ನಾನು ಯಾವುದೋ ಕೆಲಸದ ಮೇಲೆ ಕರ್ನೂಲಿಗೆ ಹೋಗಿದ್ದೆ. ಅಲ್ಲಿ ಡಾ. ಸುದರ್ಶನಂ ಅವರು ನನಗೆ 'ಸ್ವಾಮಿ ಕೃಪ' ಎಂಬುವ ಒಂದು ಪುಸ್ತಕವನ್ನು ಓದಲು ಕೊಟ್ಟರು. ಆ ಪುಸ್ತಕವನ್ನು ನಾನು ಓದಿ, ನನ್ನ ತಂಗಿಗೆ ಕೊಟ್ಟು 22-9-91 ರಂದು ಮತ್ತೆ ಆದೋನಿಗೆ ಬಂದೆ. 2-10-91 ಗಾಂಧಿ ಜಯಂತಿ ಯ ದಿನ, ಕರ್ನೂಲು, ಸೇಯಿಂಟ್ ಜೋಸೆಫ್ ಕಾಲೇಜು, ಶ್ರೀಮತಿ ರೋಜಮ್ಮನವರ ವಿದ್ಯಾಲಯದಲ್ಲಿ ನಡೆಯ ಬೇಕಾದ, "ಅಷ್ಟಾವಧಾನ" ಕಾರ್ಯಕ್ರಮದಲ್ಲಿ ಪೃಚ್ಛಕನಾಗಿ (ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ, ಪ್ರಶ್ನೆಕೇಳುವವರಾಗಿ) ಭಾವಗವಹಿಸಲು ಆಹ್ವಾನ ಬಂದಿತು. ನಾನು ಆಹ್ವಾನವನ್ನು ಸ್ವೀಕರಿಸಿ ಅವಧಾನದಲ್ಲಿ ಭಾಗವಹಿಸಿದೆ. ಮಹಾ ಉದಾರ ಸ್ವಭಾವದವರು, ಸಾರಸ್ವತಾಭಿಮಾನಿಯಾದ, ಶ್ರೀಮತಿ ರೋಜಮ್ಮನವರು, ತಾಂಬೂಲ, ತೆಂಗಿನಕಾಯಿ, ಹಣ್ಣುಗಳ ಜೊತೆ ಒಂದು ಉಣ್ಣೆಯ ಶಾಲು (woollen shawl) ಒಂದು ಕವರು, ಇವನ್ನೆಲ್ಲಾ ಒಂದು ಸ್ಟೆಯಿನ್ಲೆಸ್ ಸ್ಟೀಲ್ ತಟ್ಟೆಯಲ್ಲಿಟ್ಟು, ಪೃಚ್ಛಕರಿಗೆ, ಅವಧಾನಿಗಳಿಗೆ, ಅಧ್ಯಕ್ಷರಿಗೆ ಕೊಟ್ಟು ಸನ್ಮಾನಿಸಿದರು. ನಾನು ಆ ಕವರ್ನಲ್ಲಿ ಏನಿತ್ತು ಎಂದು ನೋಡಲಿಲ್ಲ. ಯಾವಾಗಲೋ ಅದನ್ನು ತೆಗೆದು ನೋಡಿದಾಗ, ಅದರಲ್ಲಿ 100-10-5-1 ರೂಪಾಯಿಗಳ ನೋಟು ಇತ್ತು. ಒಟ್ಟು 116 ರೂ ಸ್ವಾಮಿಯವರು 20-9-1991 ರಂದು ಕನಸಿನಲ್ಲಿ ಪ್ರಸಾದಿಸಿದ 116 ರೂ, 20-9-1991 ರಂದು ನಿಜವಾಗಿಯೂ ಸಿಕ್ಕಿತು.

"ಮಾರ್ಚ್10,1991ರಂದು ಕರ್ನೂಲ್ ನಿಂದ ಅದೋನಿಗೆ ಬಂದು, ಆ ರಾತ್ರಿ ನಾನು ಸ್ವಾಮಿಯವರಿಗೆ, "ಸ್ವಾಮಿ! ನನಗೆ ನಿಮ್ಮ ದಿವ್ಯ ಲೀಲೆಗಳನ್ನು ಪ್ರದರ್ಶಿಸಿದ್ದೀರಿ. ಅದು ನಿಜವಾಗಿದೆ. ಈಗ, ದಯವಿಟ್ಟು ನನ್ನನ್ನು ಗೊಲಗಮೂಡಿಗೆ ಕರೆಸಿಕೊಳ್ಳಿ. ಆ ಪ್ರಯಾಣಕ್ಕೆ, ಬೇಕಾದ ಅನುಕೂಲಗಳನ್ನು ವ್ಯವಸ್ಥೆ ಮಾಡಿ ಎಂದು ಪ್ರಾರ್ಥಿಸಿದೆ. ನಮಗೆ 9-10-1991 ರಿಂದ ದಸರಾ ರಜಗಳು ಪ್ರಾರಂಭವಾಯಿತು. ನನಗೆ ಆ ತಿಂಗಳ ಸಂಬಳ ಬಂದಿರಲಿಲ್ಲ. ಗೊಲಗಮೂಡಿಗೆ ಮೂರು ಜನ ಪ್ರಯಾಣ ಮಾಡಲು, ಛಾರ್ಜೀ ಇಲ್ಲದ ಉಚಿತ ಪ್ರಯಾಣ, ಮಿಕ್ಕ ಖರ್ಚುಗಳಿಗೆ ಬೇಕಾದ 550 ರೂ ಹಣ ಸ್ವಾಮಿಯವರೇ ನನ್ನ ಸ್ನೇಹಿತರ ಮೂಲಕ ವ್ಯವಸ್ಥೆ ಮಾಡಿದರು. 12-10-1991 ರಂದು, ನಾನು, ನನ್ನ ತಾಯಿಯವರು, ಮೂರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ, ಒಟ್ಟು 6 ಸದಸ್ಯರು ಗೊಲಗಮೂಡಿಗೆ ಹೋಗಿ ಸ್ವಾಮಿಯವರ ದರ್ಶನ ಮಾಡಿ ತುಂಬಾ ಸಂತೋಷಪಟ್ಟೆವು. 16-10-1991 ರಂದು ರಾತ್ರಿ ಒಂದು ಘಂಟೆಗೆ ಅದೋನಿಗೆ ಬಂದು, ವಿಜಯದಶಮಿ ಆಚರಿಸಿ, ಗುರು ಹಿರಿಯರಿಗೆ, ಬಂಧು ಮಿತ್ರರಿಗೆ ಶಮೀ ಪತ್ರ ಕೊಟ್ಟು ಅವರ ಆಶಿರ್ವಾದ ಪಡೆದುವು.

ನಾವು ಗೊಲಗಮೂಡಿಗೆ ಹೊರಟ ದಿನ, 12-10-1991 ರಂದು ಸ್ವಾಮಿಯವರು ನನ್ನ ಪತ್ನಿಗೆ ಸ್ವಪ್ನದಲ್ಲಿ ದರ್ಶನ ಕೊಟ್ಟಿದ್ದೂ ಅಲ್ಲದೇ, ಆದಿನ ಶನಿವಾರ, ಸ್ವಾಮಿಯವರ ದಿವ್ಯ ಕ್ಷೇತ್ರದಲ್ಲಿ ಜರಗುವ ಕಾರ್ಯಕ್ರಮಗಳನ್ನೆಲ್ಲಾ ಸ್ವಪ್ನದಲ್ಲೇ ತೋರಿಸಿದರು. ನಾನು ಗೊಲಗಮೂಡಿಯಿಂದ ಬಂದ ದಿನ ನನ್ನ ಪತ್ನಿ ಈ ವಿಚಾರ ತಿಳಿಸಿದಳು. "ಸ್ವಾಮಿಯವರ ಕೃಪೆ ನಿನ್ನಮೇಲಿದೆ" ಎಂದು ಹೇಳಿ, 18-10-1991 ರಂದು, ನನ್ನ ಪತ್ನಿ, ನನ್ನ ಹಿರಿಯ ಮಗ ಚಿ|| ರಾಘವೇಂದ್ರ, ನನ್ನ ಕಿರಿಯ ಮಗ ಚಿ|| ಸಿತಾರಾಮಾನುಜಂ, ಇವರುಗಳ ಜೊತೆ ಉಚಿತ ಪ್ರಯಾಣ ಸೌಕರ್ಯದಲ್ಲಿ ಗೊಲಗಮೂಡಿಗೆ ರಾತ್ರಿ ಹತ್ತು ಘಂಟೆಗೆ ಸೇರಿದೆವು.

ನನ್ನ ಪತ್ನಿ ಮತ್ತು ಮಕ್ಕಳೊಂದಿಗೆ ಗೊಲಗಮೂಡಿ ತಲುಪಿದ ತಕ್ಷಣವೇ, ಆ ಕ್ಷೇತ್ರದಲ್ಲಿದ್ದ ಸ್ವಾಮಿಯವರನ್ನು, ಅನ್ನಶಾಲೆ, ಅಡುಗೆಯ ಮನೆ, ಶನಿವಾರ ಅಲ್ಲಿ ನಡೆಯುವ ಕಾಯಕ್ರಮ ವಿಝ್ಯುಂಭಣೆ ಎಲ್ಲಾ ನೋಡಿ ನನ್ನ ಪತ್ನಿ ಆಶ್ಚರ್ಯ ಪಟ್ಟಳು. 12-10-1991 ರಾತ್ರಿ ತಾನು ಸ್ವಪ್ನದಲ್ಲಿ ಇವುಗಳನ್ನೇ ಯಥಾ ವಿಧಿಯಾಗಿ ಶ್ರೀ ಸ್ವಾಮಿಯವರ ಕೃಪೆಯಿಂದ ನೋಡಿದ್ದೆ ಎಂದು ಹೇಳಿದಳು.

ಕಾಮಸಾನಿ ಚಂದ್ರಶೇಖರ ರೆಡ್ಡಿಯವರು ಸರೋಜಿನೀದೇವಿ ರೋಡ್ ತಿರುಪತಿ 5-1-75 ಬಿ (ಕಟ್ಟಿಗೆಯ ಡೆಪೋ) ನಲ್ಲಿ ನಿವಾಸಿಸುತ್ತಿದ್ದರು. ಅವರು ತಮ್ಮ ಅನುಭವ ಹೀಗೆ ಹೇಳಿದರು. 1991 ರಲ್ಲಿ, ನನ್ನ ಮುಖದ ತುಂಬಾ ಗುಳ್ಳೆಗಳಾಗಿ, ಅದರಿಂದ ಕೀವು ಕೂಡ ಬರುತ್ತಿತ್ತು. ಮೊದಲು ಅವು ಮಡವೆಯ ಹಾಗೆ ಕಂಡಿದ್ದರಿಂದ, ಅಶ್ರದ್ಧೆ ಮಾಡಿದೆ. ಅದು ಮುಖವೆಲ್ಲಾ ಹರಡಿ, ಹಗಲೂ ರಾತ್ರಿ, ಚುಚ್ಚುತ್ತಿದ್ದ ಹಾಗೆ ನೋವಿನಿಂದ ತಡೆಯುವುದಕ್ಕೆ ಆಗುತ್ತಿರಲಿಲ್ಲ. ಔಷಧಿಗಳು ಸೇವಿಸುತ್ತಾ, ಕೀವು ಹೆಚ್ಚಿಸುವ ಆಹಾರ ಪದಾರ್ಥಗಳನ್ನೆಲ್ಲಾ ನಿಲ್ಲಿಸಿದೆ. ಆದರೂ, ಕೀವು ದಿನವೆಲ್ಲ ಬರುತ್ತಿತ್ತು. ನನ್ನ ಮುಖವನ್ನು ಕೈಯ್ಯಲ್ಲಿ ಉಜ್ಜಿ ತೊಳೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಮದ್ರಾಸ್ ಜರ್ಮನಿ ಆಸ್ಪತ್ರೆ, ಬೆಂಗಳುರು ಪ್ರಕಾಶ್ ಡಕ್ಟರು, ತಿರುಪತಿ ರುಯಾ ಆಸ್ಪತ್ರೆ, ಮುಂತಾದವುಗಳ ಕಡೆ ಚೆಕಿತ್ಸೆ ಮಾಡಿಸುಕೊಂಡು, 10,000 ರೂಪಾಯಿಗಿಂತ ಹೆಚ್ಚು ಖರ್ಚು ಮಾಡಿದೆ. ನಾಟಿ ವೈದ್ಯ, ಮಂತ್ರ, ತಂತ್ರ, ಭೂತ ವೈದ್ಯ ಎಲ್ಲವನ್ನೂ ಮಾಡಿಸಿದರೂ ಫಲಿತ ಮಾತ್ರ ಏನೂ ಸಿಗಲಿಲ್ಲ. 1991 ಹೊತ್ತಿಗೆ ನೋವು ಬಹಳ ಹೆಚ್ಚಾಗಿ, ಸಹಿಸಲಾರದಷ್ಟಿತ್ತು. ನೀದ್ರೆ ಮಾತ್ರೆ ತೆಗೆದುಕೊಂಡರೂ, ಸ್ವಲ್ಪ ಹೊತ್ತಿಗೆ, ತಡೆಯಲಾರದಷ್ಟು ನೋವಿನಿಂದ ಎಚ್ಚರ ಆಗಿ ಮತ್ತೆ ಮಲಗುವದಕ್ಕೆ ಸಾಧ್ಯವಾಗುತ್ತಿರಲಿಲ್ಲ.

ನನ್ನ ಸ್ನೇಹಿತರಿಗೆ ಕೂಡಾ ಮುಖತೋರಿಸಲು ಸಾಧ್ಯವಾಗದೆ, ಕತ್ತಲಾದ ಮೇಲೆ ಮನೆಯಿಂದ ಹೊರಗೆ ಬರುತ್ತಿದ್ದೆ. ನನ್ನ ಮುಖ ಅಸಹ್ಯವಾಗಿ ಕಾಣುತ್ತಿತ್ತು. ಈ ಅಸಹನೀಯ ನೋವಿನಿಂದ ನಾನು ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕೆಂದು ನಿರ್ಧರಿಸಿದೆ. ಅಂತಹ ವಿಷಮ ಪರಿಸ್ಥಿತಿಯಲ್ಲಿ ಕೃಪಾಕರರಾದ ಶ್ರೀ ಸ್ವಮಿಯವರನ್ನು, ನಾನು ಆಶ್ರಯ ಪಡೆಯದಿದ್ದರೂ, ಅವರೇ ನನಗೆ ಕೃಪೆಯನ್ನು ತೋರಿಸಿದರು. ಅದೇ ಒಂದು ದೊಡ್ಡ ವಿಶೇಷ.

ನಮ್ಮ ಮನೆಯ ಎದುರು ಮನೆಯಲ್ಲಿದ್ದ ಸರೋಜಮ್ಮನವರು ಶ್ರೀ ಸ್ವಾಮಿಯವರ ಭಕ್ತೆ. ಅವರ ತಾಯಿಯವರು, ನನ್ನನ್ನು ಮಾತನಾಡಿಸಿ, ಸ್ವಾಮಿಯವರ ಎಣ್ಣೆ ಕೊಟ್ಟು ಹಚ್ಚಿಕೋ ಎಂದು ಹೇಳಿ, ತೀರ್ಥ ಮತ್ತು ದಾರ ಕೊಟ್ಟು ಕತ್ತಿನಲ್ಲಿ ಧರಿಸು ಎಂದರು. ನಾನು ಎಣ್ಣೆ ಹಚ್ಚಿಕೊಂಡ ರಾತ್ರಿಯಿಂದಲೇ ನೋವು ಸ್ವಲ್ಪ ಕಡಿಮೆ ಆಗಿ ಒಳ್ಳೇ ನಿದ್ರೆ ಮಾಡಿದೆ. ಕ್ರಮೇಣಾ ಎರಡು ದಿನಗಳಲ್ಲೇ ನನ್ನ ನೋವು ತುಂಬಾ ಕಡಿಮೆ ಆಯಿತು. ತಕ್ಷಣ ಗೊಲಗಮೂಡಿಗೆ ಹೋಗಿ ಸ್ವಾಮಿಯವರನ್ನು ಸೇವಿಸ ಬೇಕೆಂದು ಹಂಬಲಿಸಿದೆ. ಸರೋಜಮ್ಮನವರು ಆಶ್ರಮದ ನಿವಾಸಿಗಳಿಗೆ ಪತ್ರ ಬರೆದು ನನ್ನನ್ನು ಕೆಲವು ದಿನಗಳ ಕಾಲ ಆಶ್ರಮದಲ್ಲಿ ಇರಿಸುವಂತೆ ಕೋರಿದರು. ಶ್ರೀ ಸ್ವಾಮಿಯವರ ಕೃಪೆಯಿಂದ ನಾನು ಗೊಲಗಮೂಡಿ ಸೇರುವ ಹೊತ್ತಿಗೆ , ನನ್ನ ಬರವನ್ನೇ ಎದುರು ನೋಡುತ್ತಿರುವ ಹಾಗೆ, ಕಟ್ಟಡಗಳಿಗೆ ನೀರುಣಿಸುವ ಕ್ಯೂರಿಂಗ್ ಕೆಲಸ ನನಗಾಗಿ ಕಾದಿತ್ತು. ಸ್ವಾಮಿಯವರ ಪ್ರಸಾದವನ್ನು ಸೇವಿಸುತ್ತಾ, ಕ್ಯೂರಿಂಗ್ ಕೆಲಸ ಮಾಡುತ್ತಾ ಸ್ವಲ್ಪ ಕಾಲ ಅಲ್ಲೇ ಇದ್ದೆ. ಕೆಲಸದ ಒತ್ತಡದಿಂದ ನಾಮಮಾತ್ರಕ್ಕೆ ಮಾತ್ರ ಪ್ರದಕ್ಷಿಣೆ ಮಾಡುತ್ತಿದ್ದೆ. ನನ್ನ ಮುಖವು ಮೊಡವೆಗಳು ಮತ್ತು ಕೀವುಗಳಿಂದ ಸಂಪೂರ್ಣವಾಗಿ ಗುಣವಾಯಿತು. ಅವು ಹೇಗೆ ಕಾಣಿಸಿಕೊಂಡವೋ ಹಾಗೆಯೇ ಕಣ್ಮರೆಯಾದವು. ಈ ರೀತಿ ತಮ್ಮ ಸಮಾಧಿಗೆ ಕರೆತಂದು ಆತ್ಮಹತ್ಯೆ ಮಾಡಿಕೊಳ್ಳಲು ಬಯಸಿದ ನನ್ನನ್ನು ಸಂಪೂರ್ಣವಾಗಿ ಗುಣಪಡಿಸಿದ ಸ್ವಾಮಿಯವರಿಗೆ ನಾನು ಎಷ್ಟು ಸೇವೆ ಮಾಡಿದರೂ, ಅವರ ಋಣವನ್ನು ತೀರಿಸಲು ಸಾಧ್ಯವಿಲ್ಲ. ಸ್ವಾಮಿಯವರಿಗೆ ಸದಾ ಋಣಿಯಾಗಿರುತ್ತೇನೆ.

ಬೇಡಿದವರಿಗೆ, ಅವರು ಬೇಡಿದಂತೆ ತನ್ನ ಕೃಪೆಯನ್ನು ಧಾರೆಯೆರೆಯುವ ದಯಾಳು ಶ್ರೀ ಸ್ವಾಮಿಯವರು. ವಿಮಲಮ್ಮ ಅವರು ಶ್ರೀ.ವಿ. ಬಾಲಕೃಷ್ಣ ಸಹಾಯಕ ಖಜಾನೆ ಅಧಿಕಾರಿ (ನೆಲ್ಲೂರು) ಅವರ ಪತ್ನಿ, ಈ ರೀತಿಯಲ್ಲಿ ತಮ್ಮ ದಿವ್ಯ ಅನುಭವಗಳನ್ನು ಹೇಳುತ್ತಾರೆ. "ಸ್ವಾಮಿಯವರ ವಿಶಿಷ್ಠತೆಯನ್ನು ಶ್ರೀ ಆಚಾರ್ಯ ಭರದ್ವಾಜ ರಿಂದ ತಿಳಿದುಕೊಂಡೆನು. ಆದರೆ ನಾನು ಗೋಲಗಮೂಡಿಗೆ ಬಂದಿರಲಿಲ್ಲ. 1989 ರಲ್ಲಿ ನಾನು ಸ್ವಾಮಿಯವರಿಗೆ ಈ ಮನವಿ ಮಾಡಿದೆ, "ಸ್ವಾಮೀ! ನಾನು ನಿಮ್ಮ 'ಅವಧೂತ ಲೀಲೆ' ಗ್ರಂಥವನ್ನು ಶ್ರದ್ಧೆಯಿಂದ ಮೂರು ಬಾರಿ ಪಾರಾಯಣ ಮಾಡುತ್ತೇನೆ. ನನ್ನ ಪಾರಾಯಣದ ನಂತರ ನಮ್ಮ ಮನೆಯ ಪಾರಿಜಾತ ಗಿಡದ ಹತ್ತಿರ ಸಾರಿಸಿ, ರಂಗೋಲಿ ಇಟ್ಟ ಜಾಗದಲ್ಲಿ ನಾನು ಕರೆಯದೇ ನೀವೇ ಬಂದು ನನ್ನ ಆತಿಥ್ಯ ಸ್ವೀಕರಿಸಬೇಕು. ಖಚ್ಚಿತವಾಗಿ ಮಧ್ಯಾಹ್ನ 12.30 ರಿಂದ 1.30 ಘಂಟೆಯ ಮಧ್ಯದಲ್ಲೇ ಬರಬೇಕು' ಎಂದು ಪ್ರಾರ್ಥಿಸಿದೆ. ಅದೇ ರೀತಿ ಪಾರಾಯಣ ಪೂರ್ತಿ ಮಾಡಿ, ಅಡಿಗೆ ಮಾಡಿ, ಅವರ ಬರವನ್ನೇ ಎದುರು ನೋಡುತ್ತಾ ಕುಳಿತುಕೊಂಡಿದ್ದೆ. ಒಂದು ಘಂಟೆಯಾದರೂ ಅವರು ಬರಲಿಲ್ಲ. ನಾನು ತುಂಬಾ ನಿರಾಶೆಗೊಂಡು, 'ಏನು ಸ್ವಾಮೀ! ನನ್ನ ಪಾರಾಯಣ ವ್ಯರ್ಥವೇ? ನನ್ನ ತಪ್ಪೇನು ತಂದೆ? ಎಂದು ಕೇಳಿದೆ. ನನ್ನ ಬಾಧೆಯನ್ನು ಪಕ್ಕದ ಮನೆಯಾಕೆ ನೋಡಿ, ಯಾರಾದರೂ ಭಿಕ್ಷಕರನ್ನು ಕರೆದುಕೊಂಡು ಬರುತ್ತೇನೆ ಎಂದು ಹೊರಟರು. ಆದರೆ ನಾನು ಒಪ್ಪಲಿಲ್ಲ. ಮನೆಯೊಳಗೆ ಸ್ವಾಮಿಯವರ ಪಟದ ಬಳಿ ಕುಳಿತುಕೂಡಲೇ, 'ಅಮ್ಮಾ!' ಎಂದು

ಯಾರೋ ಬಹಳ ಮಧುರ ಧ್ವನಿಯಲ್ಲಿ ಕರೆದ ಹಾಗೆ ಕೇಳಿ ನಾನು ಆತುರದಿಂದ ಆಚೆ ಬಂದೆ. ಮೊಣಕಾಲ ವರೆಗಿನ ಪಂಚೆ, ಚಿಕ್ಕ ಟವೆಲ್, ಖಾಕಿ ಷರ್ಟ್ ಹಾಕಿಕೊಂಡು, ಒಂದು ಕಯ್ಯಲ್ಲಿ ಕೋಲು, ಮತ್ತೊಂದು ಕಯ್ಯಲ್ಲಿ ಅಲ್ಯೂಮಿನಿಯಂ ಡಬರಿ ಹಿಡಿದುಕೊಂಡಿದ್ದ ವ್ಯಕ್ತಿ, 'ಅಮ್ಮಾ! ಸ್ವಲ್ಪ ಅನ್ನ ಕೊಡುತ್ತೀಯಾ' ಎಂದು ತುಂಬಾ ಮಧುರವಾದ ಧ್ವನಿಯಿಂದ ಕೇಳಿದ ವ್ಯಕ್ತಿ ಸ್ವಾಮಿಯವರೇ ಎಂದು ಗುರ್ತಿಸಿದೆ. ನನಗೆ ತಡೆಯಲಾರದಷ್ಟು ಸಂತೋಷವಾಗಿ, ಸಂಭ್ರಮದಿಂದ, 'ಬನ್ನಿ ಸ್ವಾಮಿ, ಊಟ ಮಾಡಿ ಬನ್ನಿ' ಎಂದು ಸ್ವಾಗತಿಸುತ್ತಾ ಅವರನ್ನು ಒಳಗೆ ಆಹ್ವಾನಿಸಿದೆ. ನಾನು ಮುಂದೆ, ಸ್ವಾಮಿಯವರು ನನ್ನ ಹಿಂದೆ ನಡೆಯುತ್ತಿದ್ದೆವು. ಆ ಸಂತೋಷದಲ್ಲಿ ನಾನು ಭೂಮಿಯಮೇಲೆ ನಡೆಯುತ್ತಿದೆನೋ ಅಥವಾ ಗಾಳಿಯಲ್ಲಿ ತೇಲುತ್ತಿದೆನೋ ಎನ್ನುವುದೇ ತಿಳಿಯಲಿಲ್ಲ. ಒಳಗೆ ಓಡಿ ಹೋಗಿ, ಪೊಂಗಲ್, ಅನ್ನ, ಪಲ್ಯ ಮುಂತಾದವುಗಳನ್ನು ತರುವುದರಲ್ಲಿ ಸ್ವಾಮಿಯವರು ಮತ್ತೊಂದು ಬಾರಿ ನನ್ನನ್ನು ಆಶ್ಚರ್ಯ ಪಡೆಸಿದರು. ಸ್ವಾಮಿಯವರು, ಪಾರಿಜಾತ ಗಿಡದ ಹತ್ತಿರ, ಸಾರಿಸಿ, ರಂಗೋಲಿ ಇಟ್ಟ ಜಾಗದಲ್ಲೇ ಹಾಯಾಗಿ ಕುಳಿತು ಬಿಟ್ಟರು. ಮಾಮೂಲು ಭಿಕ್ಷಕರಾದರೆ, ಅಲ್ಲಿ ಕೂತಿಕೊಳ್ಳುವುದಕ್ಕೆ ಸಾಹಸ ಮಾಡುತ್ತಿರಲಿಲ್ಲ ಅಲ್ಲವೆ? ಅನ್ನ ಡಬರಿಯಲ್ಲಿ ಬಡೆಸು ಎಂದರು. ಆದರೆ ನನ್ನ ಪ್ರಾರ್ಥನೆಯನ್ನು ಸ್ವೀಕರಿಸಿ, ಊಟದ ಎಲೆಯ ಮೇಲೆ ಬಡಿಸು ಎಂದರು. ಅಂಗಯ್ಯನ್ನು ನೀಡಿ ತುಪ್ಪ ಹಾಕಿಸಿಕೊಂಡರು. ಆ ಕಯ್ಯನ್ನು ಅನ್ನದ ಮೇಲೆ ವಿಚಿತ್ರ ವಾಗಿ ಹಿಂದೆ ಮುಂದೆ ತಿರುಗಿಸಿ, ಜಾಸ್ತಿ ಅನ್ನವನ್ನು ಎಲೆಯ ಸುತ್ತಲೂ ಕಟ್ಟೆಯ ಹಾಗೆ ಇಟ್ಟರು. ಮಧ್ಯದ ಅನ್ನವನ್ನು ಒಂದು ಕ್ಷಣದಲ್ಲಿ ತಿಂದು ಕೈ ತೊಳೆದುಕೊಂಡು ಬಿಟ್ಟರು. ನಂತರ ಅವರು ವಾಪಸ್ಸು ಹೋಗುತ್ತಾ ಹಿಂದಕ್ಕೆ ತಿರುಗಿ, 'ದಕ್ಷಿಣ ಕುಕ್ಷಿಣ ಏಮೈನಾ ಇಸ್ತಾವಮ್ಮಾ?' (ದಕ್ಷಿಣೆ ಏನಾದರು ಕೊಡುತ್ತೀಯಾ ಅಮ್ಮಾ?) ಎಂದು ಕೇಳಿದರು. ನಾನು ಆನಂದಾಷ್ಚರ್ಯದಲ್ಲಿ ತೇಲುತ್ತಾ, ದಕ್ಷಿಣೆಯನ್ನು ಸಮರ್ಪಿಸಿ, ನಮಸ್ಕಾರ ಮಾಡಿದೆ. ಆಗ, ಅವರು ನನ್ನ ತಲೆಯ ಮೇಲೆ ಕೈ ಯಿಟ್ಟು ಆಶೀರ್ವಾದ ಮಾಡಿದರು. ತಕ್ಷಣ ನನ್ನ ತಲೆ ಝುಂ ಎಂದು ಆನಂದದಿಂದ ಬಾಹ್ಯ ಪ್ರಪಂಚವೇ ತಿಳಿಯದೇ ಹೋಯಿತು. ಈ ಸ್ಥಿತಿ ಸ್ವಲ್ಪ ಕಾಲ ಇತ್ತು, ಕ್ರಮೇಣ ನಾನು ಮಾಮೂಲು ಸ್ಥಿತಿಗೆ ಬಂದೆ. ನಾನು ಅವರನ್ನು ಬೀಳ್ಕೊಡಲು ಅವರ ಹಿಂದೆಯೇ ಹೋದೆ, ಅವರು ಮೂರು ಮನೆಗಳನ್ನು ದಾಟುವ ವರೆಗೆ ನಾನು ಅವರನ್ನು ಹಿಂಬಾಲಿಸಿದೆ. ನನ್ನ ಕಣ್ಣುಮ್ಮಂದೆಯೇ ಅದೃಷ್ಯವಾದರು.

ಪಾರಿಜಾತ ಗಿಡದ ಹತ್ತಿರವೇ ಕೂತುಕೊಳ್ಳಬೇಕೆಂದೂ, 12.30 - 1.30 ಘಂಟೆಯ ಮಧ್ಯವೇ ಬರಬೇಕೆಂದು ನಾನು ಹೇಳಿದ ಷರತ್ತುಗಳೆಲ್ಲವೂ ಜರುಗಿದರೂ, ಬಂದವರು ಸ್ವಾಮಿಯವರ ಹಾಗೆ ಇರುವ ವ್ಯಕ್ತಿ ಇರಬಹುದೆಂದು, ನಾನು ಅನುಮಾನ ಪಡುವ ಸಾಧ್ಯತೆ ಇತ್ತು. ಅದನ್ನು ತಿಳಿದು ಸ್ವಾಮಿಯವರು ನನ್ನ ಮುಂದೆ ಅದ್ರುಷ್ಯರಾದರೆಂದು ನನ್ನ ನಂಬಿಕೆ. ಎರಡನೆಯದು, ಅವರು ನನಗೆ ಪ್ರಸಾದಿಸಿದ ಆನಂದಾನುಭೂತಿ. ನಾನು ಆಹ್ವಾನಿಸಿದ ತಕ್ಷಣವೇ ಬಂದು ನನ್ನನ್ನು ಅನುಗ್ರಹಿಸಿದ ಪ್ರೇಮ ಮೂರ್ತಿಗೆ ನಾನು ಸದಾ ಋಣಿಯಾಗಿದ್ದೇನೆ.

"ವಾಳ್ಳುಂಡೇ ದಾನ್ನಿ ಬಟ್ಟಿ ಗದಯ್ಯಾ ಮನಮುಂಡೇದಿ" (ಅವರು ಇರುವಹಾಗೇ ಅಲ್ಲವೇನಯ್ಯಾ ನಾವು ಇರುವುದು) ಎಂದು ಹೇಳಿದ ಸ್ವಾಮಿಯವರು, ಮಹಾಸಮಾಧಿಯ ಬಳಿಕವೂ ಅವರು ಕೊಟ್ಟ ವಾಗ್ದಾನ ಅಕ್ಷರಶಃ ನಿಜ ಎಂದು ನಿರೂಪಿಸುತ್ತಿದ್ದಾರೆ.

ಪಾಂಡಿಚೆರಿಯ ನಿವಾಸಿ ಡಾ|| ಸುಭಾಷಿಣಿ ಅವರು ತಮ್ಮ ದಿವ್ಯಾನುಭವಗಳನ್ನು ಹೀಗೆ ತಿಳಿಸುತ್ತಿದ್ದಾರೆ. ಶ್ರೀ ಸ್ವಾಮಿಯವರ ವಿಭೂತಿ, ದಾರಗಳ ಮಹಾತ್ಮೆಯ ವಿಚಾರ, ಒಂದು ಚಿಕ್ಕ ಪುಸ್ತಕದಲ್ಲಿ ಓದಿ, ಗೊಲಗಮೂಡಿಯಲ್ಲಿ ದರ್ಶನ ಪಡೆದು, ವಿಭೂತಿ, ದಾರಗಳನ್ನು ತೆಗೆದುಕೊಂಡು ಪಾಂಡಿಚೆರಿಯಲ್ಲಿ ನಮ್ಮ ಮನೆಯಲ್ಲಿಟ್ಟು ನಿತ್ಯಪೂಜೆ ಮಾಡುತ್ತಿದ್ದೇನೆ. ಶ್ರೀ ಸ್ವಾಮಿಯವರು ನನಗೆ ಸ್ವಪ್ನದಲ್ಲಿ ದರ್ಶನ ಕೊಟ್ಟು, "ಅಬ್ಬಾಯಿ ಪುಡಿತೇ ನಾ ಪೇರು ಪೆಟ್ಟುಕೋ" (ಗಂಡು ಮಗು ಹುಟ್ಟಿದರೇ ನನ್ನ ಹೆಸರು ಇಡು) ಎಂದು ಹೇಳಿ ಆಶೀರ್ವಾದ ಮಾಡಿದರು. ನನಗೆ ನವ ಮಾಸಗಳು ತಿಂಬಿದವು. ಶ್ರೀ ಸ್ವಾಮಿಯವರ ಪಟ ನನ್ನ ಹತ್ತಿರ ಇರಲಿಲ್ಲ. ಪ್ರತಿದಿನ, ಪೂಜೆ ಆದ ಮೇಲೆ ವಿಭೂತಿಯನ್ನು ಸೇವಿಸುತ್ತಾ, 'ಸ್ವಾಮೀ! ನನ್ನ ಭಾರವೆಲ್ಲಾ ನಿಮ್ಮ ಮೇಲೆ ಇಟ್ಟಿದ್ದೇನೆ" ಎಂದು ಪ್ರಾರ್ಥನೆ ಮಾದುತ್ತಿದ್ದೆ. ಪ್ರಸವದ ಸಮಯ ಹತ್ತಿರ ಬಂದಾಗ, ನನಗೆ ತಳಮಳ ಮತ್ತು ಭಯ ಹೆಚ್ಚಾಯಿತು. ನಾನು ಮತ್ತು ನನ್ನ ಪತಿ, ಇಬ್ಬರೂ ಎಂ.ಬಿ.ಬಿ.ಯಸ್ ಡಾಕ್ಟರ್ಸ್ ಆದರೂ ನನಗೆ ಇದು ಮೊದಲನೆಯ ಪ್ರಸವ ಆದ್ದರಿಂದ, ಭಯ ಹೆಚ್ಚಾಗಿ ರಾತ್ರಿಯೆಲ್ಲಾ ಅಳುತ್ತಾ ಮಲಗಿದೆ.

ರಾತ್ರಿ 3.00 ಘಂಟೆಯ ಸಮಯದಲ್ಲಿ ಸ್ವಾಮಿಯವರು ನನಗೆ ಸ್ವಪ್ನ ದರ್ಶನ ಕೊಟ್ಟರು. ನಮ್ಮ ಮನೆಯಲ್ಲಿ ದೇವರ ಪಟಗಳ ಕೆಳ ಭಾಗದಲ್ಲಿ ಒಂದು ಅಗ್ನಿ ಕುಂಡದಲ್ಲಿ ಸ್ವಾಮಿಯವರು ಪ್ರಕಾಶಮಾನವಾಗಿ ಹೊಳೆಯುತ್ತಾ ಕುಳಿತಿದ್ದರು. 'ನೀಕು ಭಯಮೆಂದುಕಮ್ಮಾ ನೇನು ನೀತೋ ಕೂಡಾನೆ ಉಳ್ಳಾ?' (ನಿನಗೆ ಭಯ ಏಕಮ್ಮಾ? ನಾನು ನಿನ್ನ ಜೊತೆಯಲ್ಲೇ ಇಲ್ಲವೇ?) ಎಂದು ಕೇಳಿದರು. ಅಂದಿನಿಂದ ನನಗೆ ಧೈರ್ಯ ಬಂದು, ಘಂಟೆಗೊಂದು ಬಾರಿ ವಿಭೂತಿಯನ್ನು ನೀರಿನ ಜೊತೆ ಕುಡಿಯುತ್ತಿದ್ದೆ. ಸ್ವಾಮಿಯವರ ಕೃಪೆಯಿಂದ ಸುಗಮವಾಗಿ ಪ್ರಸವವಾಯಿತು. ಗಂಡು ಮಗು ಆಯಿತು. ಸ್ವಾಮಿಯವರ ಆದೇಶದಂತೆ, ಮಗನಿಗೆ 'ಹರಿತ್' ಎಂದು ಹೆಸರಿಟ್ಟವು. ನನ್ನ ಅಣ್ಣ ತಮ್ಮಂದಿರುಗಳಿಗೆ ಕೂಡ, ಅವರ ಅವಶ್ಯಕತೆಗಳಿಗೆ ಅನುಸಾರವಾಗಿ, ಸ್ವಾಮಿಯವರು ದರ್ಶನ ಕೊಟ್ಟು ಸಂದೇಶಗಳನ್ನು ಕೊಡುತ್ತಿದ್ದಾರೆ. ನಂಬಿದವರನ್ನು ರಕ್ಷಿಸುವ ಮಹಾವಿಷ್ಣು ಅವತಾರವೇ ಶ್ರೀ ವೆಂಕಯ್ಯ ಸ್ವಾಮಿಯವರು.

ರೈಲಿನ ಕೆಳಗೆ ಬಿದ್ದ ವ್ಯಕ್ತಿ ಬದುಕುವುದು ಸಾಧ್ಯವೇ?

ಶ್ರೀ ಸ್ವಾಮಿಯವರ ಭಕ್ತನಿಗೆ ಅದು ಸಾಧ್ಯ ಎಂದು ಸ್ವಾಮಿಯವರು ನಿರೂಪಿಸಿದರು. ಶ್ರೀ ಸ್ವಾಮಿಯವರ ಆಶಿರ್ವಾದ ಪಟ್ಟು ರೈಲ್ವೇ ಉದ್ಯೋಗದಲ್ಲಿ ಸೇರಿದ ಉಡತಾ ರಮಣಯ್ಯ ಎಷ್ಟೋ ಕೃತಜ್ಞತಾ ಭಾವದಿಂದ ಭಕ್ತಿ ಶ್ರದ್ಧೆಯಿಂದ ಸ್ವಾಮಿಯವರ

ಸ್ಮರಣೆ ಮಾಡುತ್ತಾ ಸೇವೆ ಮಾಡುತ್ತಿದ್ದಾರೆ. ಅವರ ಬೆರಳಿನಲ್ಲಿ ಸ್ವಾಮಿಯವರ ಉಂಗುರ ಧರಿಸಿದ್ದಾರೆ. ಇವರು, ತಮ್ಮ ಅನುಭವ ಹೀಗೆ ತಿಳಿಸಿದರು.

16-6-92 ರಂದು, ನಾನು 'ಕೀ' ಮೇನ್ ಕೆಲಸ ಮಾಡುತ್ತಾ ವೇದಾಯಪಾಳೆಂ - ವೆಂಕಟಾಚಲಂ ಮಧ್ಯದ ಲೈನ್ ಪರೀಕ್ಷಿಸುತ್ತಾ ನೆಲ್ಲೂರು ಕಡೆಗೆ ಬರುತ್ತಿದ್ದೆ. ಆ ಸಮಯದಲ್ಲಿ ಮದ್ರಾಸ್ ಹೋಗುತ್ತಿದ್ದ ರೈಲ್ವೇ ಗಾಡಿಯನ್ನು ಮತ್ತೆ ನೆಲ್ಲೂರಿಗೆ ಹಿಂತಿರುಗಿ ಬರುವಂತೆ ಹೇಳಿದ್ದರಿಂದ ಡ್ರೈವರ್ ವೇದಾಯಪಾಳೆಂ ತನಕ ರೈಲ್ ಗಾಡಿಯನ್ನು ರಿವರ್ಸಲ್ಲಿ ನಡೆಸುತ್ತಿದ್ದರು. ಹಾಗೆ ರಿವರ್ಸ್ ನಲ್ಲಿ ನಡೆಸುತ್ತಾ 15 ಕಿ.ಮೀ. ವೇಗದಲ್ಲಿ ವಿಜಿಲ್ ಶಬ್ದ ಮಾಡದೇ ಬರುತ್ತಿದ್ದ ಡ್ರೈವರ್ ಲೈನ್ ಮೇಲೆ ನನ್ನನ್ನು ನೋಡಲಿಲ್ಲ. ಅದೇ ಸಮಯದಲ್ಲಿ ಪಕ್ಕದ ಲೈನ್ ಮೇಲೆ ಇನ್ನೊಂದು ರೈಲು ಗಾಡಿ ಬರುತ್ತಿದ್ದರಿಂದ ನನ್ನ ಹಿಂದೆ ಬರುತ್ತಿದ್ದ ಗಾಡಿಯ ಶಬ್ದ ನನಗೆ ಕೇಳಲಿಲ್ಲ. ನನ್ನ ಹಿಂದೆ 15 ಕಿ.ಮೀ. ವೇಗದಲ್ಲಿ ಬರುತ್ತಿದ್ದ ಗಾಡಿ ನನ್ನನ್ನು ಹಿಂದಿನಿಂದ ಡಿಕ್ಕಿ ಹೊಡೆದಿತು. ಡಿಕ್ಕಿ ಆಯಿತೆಂದು ತಿಳಿದ ತಕ್ಷಣ ನಾನು ತೊದಲುತ್ತಾ "ಸ್ವಾಮೀ!" ಎಂದು ಕೂಗುತ್ತಾ, ಎರಡು ರೈಲು ಹಳಿಗಳ ನಡುವೆ ಬೋರಲಾಗಿ ಬಿದ್ದೆ. ರೈಲು ನನ್ನ ಮೇಲಿನಿಂದ ಹೋಗುತ್ತಾ ನನ್ನ ಅಂಗಿ, ಪಂಚೆ, ಮತ್ತು ಬನೀನು ತೆಗೆದುಕೊಂಡು ಹೋಯಿತು. ನನ್ನ ಮುಖದ ಮೇಲೆ ಮತ್ತು ಕುತ್ತಿಗೆಯ ಮೇಲೆ ಸಣ್ಣ ಸಣ್ಣ ಕಲ್ಲುಗಳು ಚುಚ್ಚಿಕೊಂಡು ಸಣ್ಣಪುಟ್ಟ ಗಾಯಗಳಾದವು. ನನ್ನ ಬಲಗಾಲಿನ ಹಿಮ್ಮಡಿಗೆ ತೀವ್ರ ಗಾಯವಾಗಿತ್ತು. ನನ್ನನ್ನು ರೈಲ್ವೇ ಆಸ್ಪತ್ರೆಯಲ್ಲಿ ಸೇರಿಸಿದರು. ಆ ರೈಲು ಚಾಲಕನನ್ನು ಬಂಧಿಸಿದರು. ಹತ್ತು ದಿನಗಳಲ್ಲಿ ನನ್ನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದರು. ಹಲವಾರು ಪರೀಕ್ಷೆಗಳು ಮಾಡಿ ನನಗೆ ಯಾವುದೇ ರೀತಿಯ ಬಾಧೆ ಇಲ್ಲ ಎಂದು ನಿರ್ಧಾರಣೆ ಮಾಡಿ ಕೆಲಸಕ್ಕೆ ಹಾಜರಾಗ ಬಹುದು ಎಂದರು. ಆದರೆ ನಾನು ಬಯಸಿದರೆ ಪೂರ್ಣ ಸಂಬಳದಲ್ಲಿ ವಿಶ್ರಾಂತಿ ಪಡೆಯಲು ಸಹ ನನಗೆ ಅವಕಾಶ ನೀಡಿದರು. ಆರೋಗ್ಯವಾಗಿದ್ದು, ವಿಶ್ರಂತಿ ತೆಗೆದುಕೊಳ್ಳುವುದು ಅಧರ್ಮ ಎಂದು ನಾನು ಕೆಲಸಕ್ಕೆ ಹಾಜರು ಆದೆ.

ಈ ಗಂಡಾಂತರದಿಂದ ಶ್ರೀ ಸ್ವಾಮಿಯವರೇ ನನ್ನನ್ನು ರಕ್ಷಿಸಿದರು. ಇಲ್ಲದಿದ್ದರೆ, ಮರಣವು ಅಥವಾ ಅಂಗವಿಕಲತೆ ತಪ್ಪದೇ ಸಂಭವಿಸುತ್ತಿತ್ತು. ಈ ರೀತಿಯ ಅಪಘಾತದಿಂದ ಬದುಕಿದ್ದು, ರೈಲ್ವೇ ಚರಿತ್ರೆಯಲ್ಲೇ ಇರಲಿಲ್ಲ ಎಂದು ಎಲ್ಲರೂ ಆಶ್ಚರ್ಯ ಪಟ್ಟರು. ನಾನು ಮತ್ತು ನನ್ನ ಕುಟುಂಬದವರು ಸ್ವಾಮಿಯವರಿಗೆ ಜೀವಮಾನವಿಡೀ ಋಣಿಯಾಗಿರುತ್ತೇವೆ.

ಶ್ರೀ ಸ್ವಾಮಿಯವರ ಪ್ರತಿಯೊಂದು ಮಾತು ಯಾವಾಗಲೂ ನೂರಕ್ಕೆ ನೂರುಪಾಲು ಸತ್ಯವಾಗುತ್ತದೆ. ಇದು ವೇದವಾಕ್ಯ ಎಂದು ಶ್ರೀ ಉಡತ ರಮಣಯ್ಯನವರು (ಗೊಲಗಮೂಡಿಯ ನಿವಾಸಿ) ತಮ್ಮ ಅನುಭವದಲ್ಲಿ ಸ್ವಾಮಿಯವರ ಆಶೀರ್ವಾದವು ಸರ್ವಶ್ರೇಷ್ಠವಾಗಿರುತ್ತದೆ ಎಂದು ಹೇಳುತ್ತಿದ್ದಾರೆ.

ನಾನಗೆ 19 ವರ್ಷದ ವಯಸ್ಸಿನಲ್ಲಿ ದಿನಕ್ಕೆ 1 rU4 ಆಣೆ (1.25 ಪೈಸೆ) ದಿನ ಕೂಲಿಗೆ ರೈಲ್ವೇ ಗ್ಯಾಂಗ್ ಕೆಲಸಕ್ಕೆ ಹೋಗುತ್ತಿದ್ದೆ. ನಾಲ್ಕು ವರ್ಷಗಳ ಕಾಲ ಹಾಗೆ ಮಾಡಿದ

ನಂತರ, ನನ್ನ ಅತ್ತೆಯವರು, ನಾನು ಕೇವಲ ಒಂದು ರೂಪಾಯಿ ನಾಲಕ್ಕಾಣೆ ಕೂಲಿಗೆ ದಿನವಿಡೀ ದುಡಿಯುತ್ತಿದ್ದೇನೆ ಎಂದು ನನ್ನನ್ನು ಅವಮಾನಿಸಿದರು. ಹಾಗಾಗಿ ರೈಲ್ವೇ ಕೆಲಸ ಬಿಟ್ಟು ಒಬ್ಬರ ಹತ್ತಿರ ಸೈದ್ಯಕ್ಕೆ ಹೋದೆ. ಸುಮಾರು ಒಂದು ವರ್ಷ ಹೀಗೆ ವ್ಯವಸಾಯ ಮಾಡಿದ ಮೇಲೆ, ಒಂದು ದಿನ ನೀರಿನ ಕಾವಡಿ ಹೋರುತ್ತಾ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಇದ್ದ ಶ್ರೀ ಸ್ವಾಮಿಯವರ ಹತ್ತಿರ ಬಂದೆ. ಶ್ರೀ ಸ್ವಾಮಿಯವರು ನಾನು ಅವರನ್ನು ಏನೂ ಕೇಳದೆ, " ಅಯ್ಯಾ! ಪದಿ ರೂಪಾಯಲು ಖರ್ಚು ಪೆಡಿತೇ ನೂರು ರೂಪಾಯಲು ಆದಾಯಂ ಉಂಟುಂಡ್ಲಾಯ್ಯಾ. ನೀಕು ಗವರ್ನಮೆಂಟು ವಾಳ್ಳು ಉದ್ಯೋಗಮಿಸ್ತಾರು. ನೀ ಚೇತಿ ಗುಂಡಾ ಎಂತೋ ಅನ್ನದಾನಮುಂಡ್ಲಾಯ್ಯಾ - ನಿನ್ನು ಗವರ್ನಮೆಂಟು ವಾಳ್ಳು ಪಿಲುಸ್ತಾರು, ಉದ್ಯೋಗಾನಿಕಿ ಪೋಯ್ಯಾ" (ಅಯ್ಯಾ! ಹತ್ತು ರೂಪಾಯಿ ಖರ್ಚು ಮಾಡಿದರೆ ನೂರು ರೂಪಾಯಿ ಆದಾಯ ಬರುತ್ತದೆ. ಸರ್ಕಾರ ನಿನಗೆ ಕೆಲಸ ಕೊಡುತ್ತದೆ. ನಿನ್ನ ಕೈಗಳಿಂದಾ ತುಂಬಾ ಅನ್ನದಾನ ಮಾಡುತ್ತೀಯ - ನಿನ್ನನ್ನು ಗವರ್ನಮೇಂಟ್ನವರು ಕರೆಯುತ್ತಾರೆ, ಉದ್ಯೋಗಕ್ಕೆ ಹೋಗಯ್ಯಾ) ಎಂದು ಹೇಳಿದರು. ನಾನು, "ಹೋಗು ಸ್ವಾಮಿ, ನಿನ್ನದೊಂದು ಹುಚ್ಚು. ನಾನು ರೈಲಿನ ಕೆಲಸ ಬಿಟ್ಟು ಕೂಲಿ ಮಾಡಿಕೊಂಡು ಬದುಕುತ್ತಿದ್ದೀನಿ" ಎನ್ನುತ್ತಾ ಹೊರಟುಹೋದೆ. ಶ್ರೀ ಸ್ವಾಮಿಯವರ ಮಾತಿಗೆ ಒಂದು ಕಾಸಿನ ಬೆಲೆ ಕೊಡಲಿಲ್ಲ.

ಸ್ವಲ್ಪ ವರ್ಷಗಳ ನಂತರ, ರೈಲ್ವೇ ಅಧಿಕಾರಿಗಳು ಕೆಲವು ಆದೇಶಗಳನ್ನು ಜಾರೀ ಮಾಡಿದರು. ಆ ಆದೆಷದಲ್ಲಿ 1960ಕ್ಕಿಂತ ಮೊದಲು 6 ತಿಂಗಳ ಕಾಲ ರಜ ತೆಗೆದುಕೊಳ್ಳದೆ ಕೆಲಸ ಮಾಡುತ್ತಿದ್ದವರಿಗೆ ತಾತ್ಕಾಲಿಕ ಹುದ್ದೆಯನ್ನು ನೀಡಿ,ಅವರಿಗೆ, ಕಾಯಂ ನೌಕರರು ತಿಂಗಳಿಗೆ ಪಡುತಿದ್ದರೂ.170 ವೇತನ ಇವರುಗಳಿಗೆ ನೀಡಬೇಕೆಂದು ತಿಳಿಸಿದರು. ಅದರ ಪ್ರಕಾರ ನಾನು 170 ರೂ ಸಂಬಳ ಪಡೆಯಲು ಅರ್ಹನಾದೆ. ಆ ಪಟ್ಟಿಯಲ್ಲಿ ನನ್ನ ಹೆಸರು ಕಾಣಿಸಿಕೊಂಡಾಗ, ನನ್ನ ಸ್ನೇಹಿತರು ನನ್ನ ತಾಯಿಗೆ ಹೇಳಿ ನನ್ನನ್ನು ರೈಲ್ವೆ ಗ್ಯಾಂಗ್‌ನಲ್ಲಿ ಕೆಲಸಕ್ಕೆ ಕಳುಹಿಸಿ ಎಂದು ಹೇಳಿದರು. ನಮ್ಮ ಇನ್ಸ್ಪೆಕ್ಟರ್ ನನ್ನ ಮೇಲೆ ಅವರಿಗಿದ್ದ ಅಭಿಮಾನದಿಂದ ನನ್ನನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದು ಒಬ್ಬ ವ್ಯಕ್ತಿಯನ್ನು ನನ್ನನ್ನು ಕರೆತರಲು ಕಳುಹಿಸಿದರು. ಕೆಲಸದಲ್ಲಿ ಸೇರಿದಾಗ, ರೈಲ್ವೇ ಸರ್ಕಾರ ನನಗೆ ಬಾಕಿ ಇದ್ದ ರೂ. 5,000 ಕೊಟ್ಟರು. ಹಾಗಾಗಿ, ನಾನು 7 ಎಕರೆ ಜಮೀನು ಖರೀದಿಸಿದೆ. ಶ್ರೀ ಸ್ವಾಮಿಯವರ ಆಶ್ರಮಕ್ಕೆ ಪ್ರಸ್ತುತ ವರ್ಷಕ್ಕೆ 4 ತೊಲೆ (48 kgs) ಭತ್ತವನ್ನು ಅರ್ಪಿಸುತ್ತಿದ್ದೇನೆ. ಈಗ ನನಗೆ 3000 ರೂ ಸಂಬಳ, ಆಲ್ ಇಂಡಿಯಾ ಪಾಸ್, ಪಿ.ಟಿ.ಓ ಗಳು, ಎಲ್ಲಾ ರೈಲ್ವೇ ವಸತಿ ಸೌಕರ್ಯಗಳು ಮತ್ತು ಪೆನ್ಷನ್ಗೆ ಅರ್ಹತೆ ಪಡೆದಿದ್ದೇನೆ. ಶ್ರೀ ಸ್ವಾಮಿಯವರು ಹೇಳಿದ ಮಾತುಗಳು ಅಕ್ಷರಶಃ ನಿಜವಾಗತ್ತದೆ. ಅವರ ಮಾತು ಬ್ರಹ್ಮನ ವಾಕ್ಯದಂತೆ.

ಶ್ರೀ ಗುದ್ದೇಟಿ ಆಂಜನೇಯುಲು ಅವರು, ಕೋವುರು ಗ್ರಾಮದಲ್ಲಿ ಎಲಕ್ಟ್ರಿಸಿಟೀ ಡೆಪಾರ್ಟ್ಮೆಂಟ್ ನಲ್ಲಿ ಉದ್ಯೋಗ ಮಾಡುತ್ತಿದ್ದರು. ಇವರು, ತಮಗೆ ಸ್ವಾಮಿಯವರು ಪ್ರಾಣಭಿಕ್ಷೆ ಕೊಟ್ಟಿದ ವಿಷಯ ಹೀಗೆ ವಿವರಿಸಿದರು. ನವೆಂಬರ್ 1985 ರಲ್ಲಿ ನಾನು, ನನ್ನ

ಹೆಂಡತಿ ಮತ್ತು ಕೆಲವರು ಜಟಕಾ ಬಂಡಿಯಲ್ಲಿ ಸವಾರಿ ಮಾಡುತ್ತಿದ್ದೆವು. ಅನಿಕೆಪಲ್ಲಿ ಬಸ್ ನಮ್ಮ ಗಾಡಿಗೆ ಹಿಂದಿನಿಂದ ಡಿಕ್ಕಿ ಹೊಡೆದಿತು. ಬಂಡಿಯಲ್ಲಿ ಇದ್ದವರೆಲ್ಲಾ ಚಲ್ಲಾಪಿಲ್ಲಿ ಆಗಿ ಬಿದ್ದು ಬಿಟ್ಟೆವು. ಕುದುರೆಯ ಸಮೇತ ಯಾರಿಗೂ ಗಂಭಿರ ಗಾಯವಾಗಲಿಲ್ಲ. ಬಂಡಿ ಮಾತ್ರ ಚೂರು ಚೂರು ಆಗಿಬಿಟ್ಟಿತು. ನನ್ನ ಬೆನ್ನು ಮೂಳೆಯಲ್ಲಿ ತೀವ್ರವಾದ ನೋವಾಗಿ, ನಿದ್ರೆ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಏನಾಯಿತೆಂದು ನನಗೆ ಗೊತ್ತಿಲ್ಲ. ಮದ್ರಾಸ್, ಹೈದರಾಬಾದು, ಗುಂಟೂರಿನ ವೈದ್ಯರೆಲ್ಲಾ ಚಿಕಿತ್ಸೆಮಾಡಿದರು. ಸುಮಾರು ಒಂದು ಲಕ್ಷ ರೂಪಾಯಿಗಳು ಖರ್ಚಾಯಿತು. ಸ್ವಲ್ಪವೂ ನೋವು ಇಳಿಯಲಿಲ್ಲ. ಈ ರೀತಿಯಲ್ಲಿ ಎರಡು ವರ್ಷಗಳು ಚಿತ್ರ ಹಿಂಸೆ ಅನುಭವಿಸಿದೆ. ಕೊನೆಗೆ, ವೈದ್ಯರು ನಾನು ಹೆಚ್ಚು ದಿನಗಳು ಬದುಕುವುದಿಲ್ಲ ಎಂದು ಹೇಳಿದರು. ಆ ಭಯದಿಂದ ಆಹಾರ ಸಹಿಸದೆ, , ಕುಟುಂಬದವರೆಲ್ಲಾ ಉಪವಾಸ ಇರುತ್ತಿದ್ದರು. ಅವರೆಲ್ಲರ ಸಲುವಾಗಿ, ನಾನು ನನ್ನ ಹೃದಯವನ್ನು ಕಲ್ಲಾಗಿಸಿ ಆಹಾರ ತಿನ್ನಲು ಪ್ರಾರಂಭಿಸಿದೆ. ನನ್ನ ದೈಹಿಕ ನೋವಿನ ಜೊತೆಗೆ ಮಾನಸಿಕ ಸಂಕಟ ನನ್ನನ್ನು ಆವರಿಸಿತ್ತು, ನನ್ನ ಸ್ಥಿತಿ ವರ್ಣನಾತೀತವಾಗಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅತ್ಯಂತ ಕರುಣಾಮಯರಾದ ಶ್ರೀ ಸ್ವಾಮಿಯವರು ತಮ್ಮ ದಿವ್ಯ ತಪೋ ಭೂಮಿಗೆ ಬರುವಂತೆ ನನ್ನ ಸ್ನೇಹಿತರ ಮೂಲಕ ನನಗೆ ಸಂದೇಶವನ್ನು ಕಳುಹಿಸಿದರು.

ಸ್ನೇಹಿತರ ಸಲಹೆಯ ಮೇಲೆ ಗೊಲಗಮೂಡಿ ದಿವ್ಯ ಕ್ಷೇತ್ರವನ್ನು ಸಂದರ್ಶಿಸಿದೆ. ಒಂದು ಮಹಾ ಅದ್ಭುತವಾದ, ಮಹಿಮಾನ್ವಿತ ಭಗವಾನ್ ಶ್ರೀ ಸ್ವಾಮಿಯವರ ಕರುಣಾಮಯ ದೃಷ್ಟಿ ನನ್ನ ಮೇಲೆ ಪ್ರಸರಣಗೊಂಡಿತು. ನಂಬಲಾಗದ ರೀತಿಯಲ್ಲಿ 75% ನೋವು ಪರಿಹಾರ ಆಯಿತು. ಇದು ಯಾರಿಗೂ ನಂಬಲಾಗದ ಬದಲಾವಣೆ. ಕರುಣಾಮಯರಾದ ಸ್ವಾಮಿಯವರೇ, ಸಾಯುವ ಅಂಚಿನಲ್ಲಿರುವ ನನಗೆ ಹೊಸ ಬದುಕನ್ನು ಕೊಟ್ಟರು. ಸ್ವಾಮಿಯವರಿಗೆ ಹೇಗೆ ಕೃತಜ್ಞತೆ ಸಲ್ಲಿಸಬೇಕೆಂದು ತಿಳಿಯುತ್ತಿಲ್ಲ. ಅಂದಿನಿಂದ, ವಾರಕ್ಕೆ ಒಮ್ಮೆ ಬಂದು ಸ್ವಾಮಿಯವರ ಸೇವೆ ಮಾಡುತ್ತಿದ್ದೇನೆ. ಕ್ರಮೇಣ, ನನ್ನ ನೋವು 95% ಕ್ಕೆ ಇಳಿಯಿತು. ಅದಾಗ್ಯೂ, ನನ್ನ ಪ್ರಾರಬ್ಧವನ್ನು ಗಮನದಲ್ಲಿಟ್ಟುಕೊಂಡು, 5% ನೋವನ್ನು ಸಹಿಸಿಕೊಳ್ಳುವುದು ಉತ್ತಮ ಎಂದು ನಾನು ನಿರ್ಧರಿಸಿ, ನನ್ನ ನೋವನ್ನು ಕಡಿಮೆ ಮಾಡಿ ಎಂದು ಸ್ವಾಮಿಯವರನ್ನು ನಾನು ಎಂದಿಗೂ ಪ್ರಾರ್ಥಿಸಲಿಲ್ಲ.

ಶ್ರೀ ಸ್ವಾಮಿಯವರ ಕೃಪೆಯಿಂದ ತಮ್ಮ ಮಗ ಹೇಗೆ ಆರೋಗ್ಯವಂತನಾದ ಎಂದು, ಗುದ್ದೇಟಿ ಆಂಜನೇಯುಲುರವರು ಹೀಗೆ ಹೇಳಿದರು. ಸ್ವಾಮಿಯವರನ್ನು ಕರೆದ ತಕ್ಷಣ ಓಡಿಬರುವ ಪರಮಾತ್ಮರೆಂದು ಮತ್ತೊಮ್ಮೆ ತಮಗೆ ನಿರೂಪಿಸಿದರೆಂದು ಗುದ್ದೇಟಿ ಆಂಜನೇಯುಲುರವರು ಹೀಗೆ ತಿಳಿಸಿದರು. "1988 ರಲ್ಲಿ ನಾನು ಅಧಿಕೃತ ಕರ್ತವ್ಯಕ್ಕಾಗಿ, ನಾಗಾರ್ಜುನಸಾಗರಕ್ಕೆ ಹೋಗಬೇಕಾಗಿತ್ತು. ನಾನು ಪ್ರಯಾಣಕ್ಕಾಗಿ ಟಿಕೆಟ್ ಖರೀದಿಸಿದೆ. 5 ನೇ ದಿನ, ನನ್ನ ಆರು ವರ್ಷದ ಮಗನಿಗೆ ಅನಾರೋಗ್ಯ ವಾಯಿತು. ಅವನ ಇಡೀ ಶರೀರ ನಿಶ್ಚೇಷ್ಟಿತವಾಗಿ, ಇದ್ದಕ್ಕಿದ್ದಂತೆ ಕೆಳಗೆ ಬೀಳುತ್ತಿದ್ದನು. ಮತ್ತೆ ಸ್ವಲ್ಪ ಹೊತ್ತಾದ ನಂತರ ಸರಿಹೋಗುತ್ತಿದ್ದನು. ಈ ರಿತಿ ಅವನಿಗೆ ದಿನಕ್ಕೆ ನಾಲ್ಕು ಬಾರಿ ಆಗುತಿತ್ತು. ನಾನು

ನಾಗರ್ಜುನಸಾಗರ್ ಗೆ ಹೋಗುವುದಕ್ಕೆ ಮೊದಲು ಮಗ ಗುಣವಾಗಬೇಕೆಂದು, ಮೂರು ವೈದ್ಯರನ್ನು ಬದಲಯಿಸಿ ಚಿಕಿತ್ಸೆ ಮಾಡಿಸಿದೆ, ಆದರೂ ಏನೂ ಪ್ರಯೋಜನ ಇರಲಿಲ್ಲ. ಕೊನೆಗೆ, ಪ್ರಯಾಣ ಮಾಡಬೇಕೋ ಬೇಡವೋ ಎಂದು ನನ್ನ ಆಲೋಚನೆಗಳು ತೂಗಾಡುತ್ತಿದ್ದವು. ಕೊನೆಗೆ ನಾನು ಶ್ರೀ ಸ್ವಾಮಿಯವರನ್ನು ಆಶ್ರಯಿಸಿ, 'ಸ್ವಾಮಿ! ನಿಮ್ಮ ಆದೇಶ ಏನು? ನೀವು ಏನು ಮಾಡು ಎನ್ನುತ್ತೀರಿ?' ಎಂದು ಮನಸ್ಸಿನಲ್ಲೇ ನೋವಿನಿಂದ ಪ್ರಾರ್ಥಿಸಿದೆ. ಆ ರಾತ್ರಿ ಸ್ವಾಮಿಯವರು ಕನಸಿನಲ್ಲಿ ಕಾಣಿಸಿಕೊಂಡು, 'ಅಯ್ಯಾ! ಹುಡುಗನ ಆರೋಗ್ಯ ಸರಿಹೋಗುತ್ತೆ, ಆದರೆ ನೀನು ಶಿಬಿರಕ್ಕೆ ಹೋಗು. ಸುಬ್ಬಾರಾವನ್ನು ಕಳುಹಿಸಬೇಡ' ಎಂದು ಆದೇಶಿಸಿದರು. ಸ್ವಾಮಿಯವರ ಆಜ್ಞೆಯಂತೆ, ನಾನು ಕ್ಯಾಂಪಿಗೆ ಹೋದೆ. ನಾನು ಹಿಂತಿರುಗಿ ಬರುವುದರಲ್ಲಿ ಮಗ ಸಂಪೂರ್ಣವಾಗಿ ಆರೋಗ್ಯವಂತನಾದನು. ಸ್ವಾಮಿಯವರು ನನ್ನ ಸ್ವಪ್ನದಲ್ಲಿ ಬಂದು ಆ ಆದೇಶ ಮಾಡದಿದ್ದರೆ, ಔಷಧಿಯಿಂದಲೇ ಮಗುವಿಗೆ ಗುಣವಾಯಿತೆಂದು ನಾವು ಭಾವಿಸುತ್ತಿದ್ದೆವು. ಈ ವಿಚಾರ ತಿಳಿದೇ ಸ್ವಾಮಿಯವರು, ನಮ್ಮ ಭಕ್ತಿ ಶ್ರದ್ಧೆಗಳು ಹೆಚ್ಚಿಸಲು ಸ್ವಪ್ನ ದ ಮೂಲಕ ಆದೇಶವನ್ನು ನೀಡಿ ಮಗುವನ್ನು ಗುಣಪಡಿಸಿದರು. ನನಗೆ, ಮಧುಮೇಹ ಇತ್ತು. ಶ್ರೀ ಸ್ವಾಮಿಯವರ ಸೇವೆ ಮಾಡುತ್ತಾ, ಊದಿಯನ್ನು ಮಾತ್ರ ಸೇವಿಸುತ್ತಿದ್ದೆ. ಮಿಕ್ಕ ಔಷಧಿಗಳನ್ನೆಲ್ಲಾ ನಿಲ್ಲಿಸಿಬಿಟ್ಟೆ. ಶ್ರೀ ಸ್ವಾಮಿಯವರ ಕೃಪೆಯಿಂದ ನನ್ನ ಆರೋಗ್ಯ ಚೆನ್ನಾಗಿದೆ. ಈಗ ನನಗೆ ಯಾವ ರೀತಿಯ ಶಾರೀರಕ ಬಾಧೆಯೂ ಇಲ್ಲ.

ವನಸ್ಥಲಿಪುರಂ ನಿವಾಸಿ ಶ್ರೀಮತಿ ಶೋಭರವರ ಅತ್ಯಂತಸುಂದರವಾದ ಅನುಭವ. "ನನಗೆ 1992 ರಲ್ಲಿ ಚರ್ಮದ ವ್ಯಾಧಿ ಬಂದು ನನ್ನ ಮುಖದ ಮೇಲೆಲ್ಲಾ ಸುಟ್ಟ ಮಚ್ಚೆಗಳಂತೆ ಬಂದು ಮುಖವೆಲ್ಲಾ ವಿಕಾರವಾಗಿತ್ತು. ಮುಖವೆಲ್ಲಾ ತುಂಬ ನವೆ ಆಗಿ, ಶರೀರದ ಮೇಲೆ ಅಲ್ಲಲ್ಲಿ ಇಂತಹ ಮಚ್ಚೆಗಳು ಬಂದವು. ಎಲ್ಲೆಲ್ಲಿಂದಲೋ ಔಷಧಿಗಳನ್ನು ತರಿಸಿ ತೆಗೆದುಕೊಂಡೆ. ಅಲ್ಲದೆ, ನಾನು ಚರ್ಮರೋಗ ವೈದ್ಯರ ಬಳಿಗೆ ಹೋಗಿ ಜೆಲ್ಲಿಯಂತೆ ಕಾಣುವ ಮುಲಾಮನ್ನು ತಂದು ಒಂದು ತಿಂಗಳು, ನಿರಂತರವಾಗಿ ಹಚ್ಚಿಕೊಂಡೆ. ಆದರೂ ಕಡಿಮೆ ಆಗದೇ, ಶರೀರದ ಮೇಲೆಲ್ಲಾ ಮಚ್ಚೆಗಳು ಬಂದವು. ನನ್ನ ಸಹೋದರರಿಬ್ಬರೂ ಎಂ.ಬೀ.ಬೀ.ಎಸ್ ಓದಿದ್ದ ಡಾಕ್ಟರ್ ಗಳು. ಅವರಿಬ್ಬರಿಗೂ ನನ್ನ ವ್ಯಾಧಿ ಹೇಗೆ ಕಡಿಮೆ ಆಗುತ್ತೆ ಎಂದು ಯೋಚನೆ ಆಯಿತು. ನನಗೆ ಬೇಜಾರಾಗಿ, ಎಲ್ಲಾ ಔಷಧಗಳನ್ನು ನಿಲ್ಲಿಸಿ ಸ್ವಾಮಿಯವರನ್ನು ಪ್ರಾರ್ಥಿಸಿದೆ. 'ಸ್ವಾಮಿ! ನನ್ನ ಪಾಪಫಲ ಏನಾದರು ಇದ್ದರೆ, ಅದನ್ನ ಕ್ಷಮಿಸಿ, ಈ ಚರ್ಮದ ವ್ಯಾಧಿಯನ್ನು ಕಡಿಮೆ ಮಾಡಿ, ಮತ್ತು ನಿಮ್ಮಲ್ಲಿ ಸಂಪೂರ್ಣ ನಂಬಿಕೆಯನ್ನು ಹೊಂದಲು ನನಗೆ ಅನುಗ್ರಹಿಸಿ, ನಾನು ಒಂದು ವಾರ ನಿಮ್ಮ ವಿಭೂತಿಯನ್ನು ಹಚ್ಚುತ್ತೇನೆ' ಎಂದುಕೊಂಡು ವಿಭೂತಿಯನ್ನು ಹಚ್ಚಿಕೊಳ್ಳಲು ಪ್ರಾರಂಭಿಸಿದೆ. ಆ ಕರುಣಮಯರು, ನನ್ನ ಕರ್ಮವನ್ನು ತೆಗೆದು, ನಾಲ್ಕೇ ದಿನದಲ್ಲಿ ಮುಖದಲ್ಲಷ್ಟೇ ಅಲ್ಲ, ಇಡೀ ದೇಹದ ಮೇಲಿದ್ದ ಕಲೆಗಳು ಮಾಯ ಮಾಡಿದರು. ಶ್ರೀ ವೆಂಕಯ್ಯ ಸ್ವಾಮಿಯವರು ಈ ಕಲಿಯುಗದ ಪ್ರತ್ಯಕ್ಷ ದೈವ.

ಶ್ರೀ ಪಾಬೋಲು ಪಿಚ್ಚಯ್ಯನವರು - ಜ್ಯೋತಿನಗರ್, ಎರಡನೇಯ ಬೀದಿ,

ನೆಲ್ಲೂರು. ಈವರು ಹೀಗೆ ತಿಳಿಸಿದರು. 1982ರಲ್ಲಿ ನನಗೆ ಬಲಗಾಲಿನ ಮೇಲೆ ಹೆಸರುಕಾಳಿನಂತೆ ಊತ ಬಂದಿತು. ಅದು ಕ್ರಮೇಣ ದೊಡ್ಡದಾಗುತ್ತಾ ಟೆನ್ನಿಸ್ ಚೆಂಡಿನ ಗಾತ್ರ ಬೆಳೆಯಿತು. ಅದು ಬೆಳೆಯುತ್ತಲೇ ಇತ್ತು. ನೆಲ್ಲೂರಿನಲ್ಲಿ 2 ಬಾರಿ ಶಸ್ತ್ರಚಿಕಿತ್ಸೆ ಮಾಡಿಸಿದರೂ ಪ್ರಯೋಜನವಾಗಲಿಲ್ಲ. 3 ನೇ ಬಾರಿ ಕೂಡಾ ಅದೇ ರೀತಿ ಬೇಳೆಯಿತು. ಈ ಬಾರಿ ಕ್ಯಾನ್ಸರ್ ಎಂದು ಅನುಮಾನಿಸಿ, ತಿರುಪತಿ ಗೆ ಬೈಆಪ್ಸೀ ಗೆ ಕಳುಹಿಸಿದರೆ, ಅದು ಕ್ಯಾನ್ಸರ್ ಎಂದು ದೃಢಪಡಿಸಿದರು. ಮದ್ರಾಸ್, ಅಡಯಾರ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮತ್ತು ರೇಡಿಏಷನ್ ಮಾಡಿಸಿ, ಎರಡು ತಿಂಗಳಿಗೆ ಸುಮಾರು 30,000 ರೂ|| ಖರ್ಚಾಯಿತು. ಮತ್ತೆ ಶರೀರದಲ್ಲಿ ಇದೇ ರೀತಿ ಬಂದರೆ, ಹಣ ಖರ್ಚಾಗುತ್ತದೆ ವಿನಹ ಏನೂ ಪ್ರಯೋಜನ ಇಲ್ಲದೆ 'ಪ್ರಾಣಹಾನಿ' ಎಂದು ಆಸ್ಪತ್ರೆಯವರು ತಿಳಿಸಿದರು.

ಮತ್ತೆ, ಒಂದು ವರ್ಶದ ನಂತರ ಅದೇ ಬಲಗಾಲಿನ ಹೆಬ್ಬೆರಳು ಮತ್ತು ಅದರ ಪಕ್ಕದ ಬೆರಳಿನ ಮೇಲೆ ಊತ ಪ್ರಾರಂಭವಾಯಿತು. ಕ್ರಮೇಣ, ಕಾಲಿಗೆ ಚಪ್ಪಲಿ ಹಾಕಿಕೊಳ್ಳಲು ಸಾಧ್ಯವಾಗದಷ್ಟು ಅದು ಬೆಳೆದಿತು. ಮದ್ರಾಸ್ ಅಡಯಾರು ಆಸ್ಪತ್ರೆಯವರು ಹೇಳಿದ ಮಾತಿನ ಪ್ರಕಾರ, ನಾನು ಮರಣಿಸುತ್ತೇನೆ ಎಂಬ ಭಯದಿಂದ ತೀವ್ರವಾಗಿ ದುಃಖಿಸಿದೆ. ನಾನು ಇನ್ನೂ ಇಬ್ಬರು ಹೆಣ್ಣುಮಕ್ಕಳ ಮದುವೆ ಮಾಡಬೇಕಾಗಿತ್ತು. ಈ ಸಂಕಟ ಪರಿಸ್ಥಿತಿಯಲ್ಲಿ, ನಾನು ಪ್ರತಿ ಶನಿವಾರ ಗೊಲಗಮೂಡಿಗೆ ಹೋಗಿ ಶ್ರೀ ವೆಂಕಯ್ಯ ಸ್ವಾಮಿಯವರ ದರ್ಶನ ಮಾಡುತ್ತಿದ್ದೆ. ಒಮ್ಮೆ ಆ ಗ್ರಾಮದಲ್ಲಿದ್ದ ನನ್ನ ಮಗ್ಳು ನನಗೆ ಒಂದು ಸಲಹೆ ನೀಡಿದಳು. ಆ ಸಲಹೆಯಂತೆ ಚಿಕ್ಕ ಹರಕೆ ಮಾಡಿಕೊಂಡು ಸ್ವಾಮಿಯವರನ್ನು ಪ್ರಾರ್ಥಿಸಿದೆ. ಆಶ್ಚರ್ಯವೆಂದರೆ, ಮತ್ತೆ ಶನಿವಾರದ ಹೊತ್ತಿಗೆ, ನಾನು ಯಾವುದೇ ಚಿಕಿತ್ಸೆ ಅಥವಾ ಔಷಧಿ ಇಲ್ಲದೆ ನನ್ನ ಕ್ಯಾನ್ಸರ್ ಗಡ್ಡೆ ಸಂಪೂರ್ಣವಾಗಿ ಮಾಯವಾಯಿತು. ಇದು ಶ್ರೀ ಸ್ವಾಮಿಯವರ ಕರುಣೆಯ ಪ್ರಭಾವವೆಂದು ಹೃದಯ ಪೂರ್ವಕವಾಗಿ ನಂಬುತ್ತಿದ್ದೇನೆ. ನಾನು ಸ್ವಾಮಿಯವರು ಬೋಧಿಸಿದ ಧರ್ಮ ಮಾರ್ಗದಲ್ಲಿ ನಡೆಯುತ್ತಾ ನನ್ನ ಜೀವನವನ್ನು ಅವರ ಸೇವೆಯಲ್ಲಿ ಕಳೆಯುತ್ತಿದ್ದೇನೆ.

ನೆಲ್ಲೂರು ಗಾಂಧಿನಗರ್ ನಿವಾಸಿ, ಐತಾ ನಾರಾಯಣರವರ ಅನುಭವ, ಅವರ ವಿಶ್ವಾಸ ನಮೆಲ್ಲರಿಗೆ ಗುಣ ಪಾಠದಂತೆ ತೋರುತ್ತದೆ. ಸಾಧಾರಣವಾಗಿ ಒಂದು ಮಂಡಲ ದಿನಗಳು ಸ್ವಾಮಿಯವರ ಸನ್ನಿಧಿಯಲ್ಲಿ ಸೇವೆ ಮಾಡಬೇಕೆಂದರೆ, ತುಂಬಾ ತೊಂದರೆ ಎಂದು ಭಾವಿಸುವ ಮನಸ್ತತ್ವ ಮಾನವರದ್ದು. ತಿಂಗಳಾನುಗಟ್ಟಲೆ ಅಚಂಚಲವಾದ ನಂಬಿಕೆಯಿಂದ ಶ್ರೀ ಸ್ವಾಮಿಯವರನ್ನು ಸೇವೆ ಮಾಡಿ ಅವರ ಕರುಣೆಗಾಗಿ ಕಾಯುವ ಅದ್ಭುತ ಕಥೆ ಇದು.

ನನ್ನ ಹೆಂಡತಿ 1992 ರಲ್ಲಿ ಒಂದು ಮದುವೆಗೆ ಹೋಗಿ ಬಂದ ನಂತರ, ಅವಳ ಸೊಂಟದ ಬಲಭಾಗದಲ್ಲಿ ನೋವು ಪ್ರಾರಂಭವಾಯಿತು. ಅವಳು ಬಚ್ಚಲಮನೆ ಹೋದಾಗ ಬಿದ್ದಳು. ಅಂದಿನಿಂದ, ಅವಳು ತನ್ನ ಕಾಲು ಮಡಚುತ್ತಾಳೆ ಆದರೆ ಅದನ್ನು ಚಾಚಲು ಸಾಧ್ಯವಾಗಲಿಲ್ಲ. ಅವಳ ಸೊಂಟದ ನೋವಿನಿಂದ ನೆಲ್ಲೂರು ಸರ್ಕಾರೀ ಆಸ್ಪತ್ರೆಯಲ್ಲಿ ತೋರಿಸಿದೆವು. ಇನ್ನೊಬ್ಬ ಸ್ಪೆಷಲಿಸ್ಟ್ಗೂ ಕೂಡಾ ತೋರಿಸಿದೆವು. ಬೆನ್ನು

ಮೂಳೆಯಲ್ಲಿನ ದ್ರವವನ್ನು ಪರೀಕ್ಷಿಸಿ ಚಿಕಿತ್ಸೆ ಮಾಡಿದರು. ಸ್ವಲ್ಪವೂ ಕಡಿಮೇ ಆಗಲಿಲ್ಲ. ಚಿಕಿತ್ಸೆಯ ವೆಚ್ಚ ತುಂಬಾ ಹೆಚ್ಚಾಗಿ, ಅದನ್ನು ಭರಿಸಲು ಸಾಧ್ಯವಾಗಲಿಲ್ಲ. ಅದರ ನಂತರ ಆಯುರ್ವೇದದ ಚಿಕಿತ್ಸೆ ಮಾಡಿಸಿದೆವು. ಕಾಲಿನಲ್ಲಿ ರಕ್ತ ಪ್ರಸರಣ ಪ್ರಾರಂಭವಾಯಿತು, ಆದರೆ ಕಾಲು ಚಾಚಲು ಸಾಧ್ಯವಾಗಲಿಲ್ಲ, ನೋವು ಕಡಿಮೇ ಆಗಲಿಲ್ಲ. ಶರೀರವೆಲ್ಲಾ ಉರಿಯುತ್ತಿತ್ತು. ಆಯುರ್ವೇದದ ವೈದ್ಯರು ಸ್ವಲ್ಪ ಸಮಯ ಚಿಕಿತ್ಸೆ ಮಾಡಿ, 'ಇನ್ನು ನಾನೇನೂ ಮಾಡಲಾರೆ, ತಿರುಪತಿಯ ರುಯಾ ಆಸ್ಪತ್ರೆಗೆ ಹೋಗಿ' ಎಂದರು. ಆರ್ಥಿಕ ಸಮಸ್ಯೆಯಿಂದ ನಾನು ಎಲ್ಲಿಗೂ ಹೋಗಲು ಸಾಧ್ಯವಾಗಲಿಲ್ಲ. ಮಂತ್ರ ತಂತ್ರಗಳೂ ವಿಫಲವಾದವು. ನಿಸ್ಸಹಾಯದ ಪರಿಸ್ಥಿತಿಯಲ್ಲಿ ನಾವು ಗೊಲಗಮೂಡಿಗೆ ಬಂದೆವು. ಗೊಲಗಮೂಡಿಗೆ ಬರುವ ಹೊತ್ತಿಗೆ ನನ್ನ ಹೆಂಡತಿ ಚಲನಶೀಲತೆಯನ್ನು ಕಳೆದುಕೊಂಡಳು. ನಾನೇ ಚಿಕ್ಕಮಕ್ಕಳನ್ನು ಎತ್ತಿಕೊಂಡಂತೆ ಆಕೆಯನ್ನು ಎತ್ತಿಕೊಂಡು ಪ್ರದಕ್ಷಿಣೆ ಮಾಡಿಸುತ್ತಿದ್ದೆ. ತುಂಬಾ ದುರ್ಬಲಳಾದಳು. ಮೊದಲು ನಾವು ಅಗ್ನಿ ಹೋತ್ರದ ಹತ್ತಿರವೂ ಬರಲಾಗಲಿಲ್ಲ. ಒಂದೆರಡು ಪ್ರದಕ್ಷಿಣೆ ಮಾಡಿಸುತ್ತಿದ್ದಾಗ, ಯಾದೃಚ್ಛಿಕವಾಗಿ ಮೂತ್ರವಿಸರ್ಜನೆ ಮಾಡಿಬಿಟ್ಟಳು. ಈ ಪವಿತ್ರ ಸ್ಥಳದಲ್ಲಿ ಅವಳನ್ನು ಇರಸಲಾರದೆ, ಹೊರಗಡೆ ಕೂರಿಸಿ, ನಾನೇ ಅವಳ ಪ್ರದಕ್ಷಿಣೆ ಮಾಡಲು ಪ್ರಾರಂಭಿಸಿದೆ. ಶ್ರೀ ಸ್ವಾಮಿಯವರ ಸನ್ನಿಧಿಯಲ್ಲಿ ನಲವತ್ತು ದಿನಗಳು ಸೇವೆ ಮಾಡುವುದಕ್ಕೆ, ಮೂರು ತಿಂಗಳು ಹಿಡಿಯಿತು ಏಕೆಂದರೆ, ನನ್ನ ಹೆಂಡತಿಗೆ ಅನಿಯಮಿತವಾದ ಮುಟ್ಟಿನ ದಿನಗಳು ಬರುತ್ತಿದ್ದರಿಂದ. ಆದರೆ ಶ್ರೀ ಸ್ವಾಮಿಯವರ ಕೃಪೆಯಿಂದ ಮೂರ್ನಾಲ್ಕು ದಿನಗಳಲ್ಲಿ ಶರೀರದಲ್ಲಿನ ಉರಿ ಕಡಿಮೆಯಾಯಿತು. ಮನೆಗೆ ಹೋದರೂ ಸ್ವಾಮಿಯವರ ಸೇವೆ ಮಾಡುತ್ತಿದ್ದೆ. ಗೊಲಗಮೂಡಿಗೆ ಬಂದು ಆದಷ್ಟು ದಿನಗಳಿದ್ದು ಸೇವೇ ಮಾಡುತ್ತಾ, ಮತ್ತೆ ನನ್ನ ಹೆಂಡತಿಗೆ ರಜದ ದಿನಗಳಲ್ಲಿ ಮನೆಗೆ ಹೋಗುತ್ತ ಹೀಗೆ ಒಂದು ವರ್ಷ ಹಠ ಹಿಡಿದು ಪ್ರಯಾಣ ಮಾಡಿದೆ. ಆಗ, ಸ್ವಾಮಿಯವರು ನಮ್ಮ ಮೇಲೆ ತಮ್ಮ ಕೃಪೆಯನ್ನು ತೋರಿ, ನನ್ನ ಹೆಂಡತಿ, ಸ್ವತಂತ್ರವಾಗಿ, ಒಂದು ಕೋಲು ಹಿಡಿದು ನಡೆಯುವಹಾಗೆ ಮಾಡಿದರು. ಈಗ, ತನ್ನ ಕೆಲಸಗಳನ್ನು ತಾನೆ ಮಾಡಿಕೊಳ್ಳುವುದಲ್ಲದೇ, ನಮಗೆ ಅಡುಗೆಯ ಕೆಲಸದಲ್ಲಿ ಕೂಡ ಸಹಾಯ ಮಾಡುವಂತಾಗಿದ್ದಳೆ. ಆ ಕರುಣಾಮೂರ್ತಿಯ ಶಕ್ತಿ, ದಯೆ ಮತ್ತು ಪ್ರೀತಿಯನ್ನು ಯಾರಿಂದಲೂ ವರ್ಣಿಸಲು ಸಾಧ್ಯವಿಲ್ಲ. ಶ್ರೀ ಸ್ವಾಮಿಯವರ ಮೇಲೆ ನಮಗಿರುವ ನಂಬಿಕೆಯೇ ಅವರ ಕೃಪೆ ನಮ್ಮ ಮೇಲೆ ಧಾರೆ ಎರೆಯುತ್ತದೆ.

ಕಳೆದ 15 ವರ್ಷಗಳಿಂದ ನೆಲ್ಲೂರು ಜಿಲ್ಲೆಯ ಕೃಷ್ಣಪಟ್ಟಣದ ನಿವಾಸಿ ಚಲ್ಲಾ ಶ್ರೀ ರಾಮುಲು ಶೆಟ್ಟಿಯವರು, ಗೊಲಗಮುಡಿಯಲ್ಲಿ ಶ್ರೀ ಸ್ವಾಮಿಯವರ ಸೇವೆಯಲ್ಲಿದ್ದು ಅನಿಕೆಪಲ್ಲಿಯಿಂದ ಬಿಕ್ಷಾನ್ನ ತರುತ್ತಿದರು. ಇವರಿಗೆ, 2002 ರಲ್ಲಿ, ಪಾರ್ಶ್ವವಾಯುವಾಗಿ, ಅವರ ಬಾಯಿ ಒಂದು ಪಕ್ಕಕ್ಕೆ ಜಾರಿತ್ತು. ಅವರು ಸಂವೇದನೆ ಕಳೆದುಕೊಂಡಿದ್ದರಿಂದ ಅವರಿಗೆ ನಡೆಯಲು ಸಾಧ್ಯವಾಗಲಿಲ್ಲ. ಇವರ ಮಗಳು ಮತ್ತು ಅಳಿಯನಿಗೆ ಸಮಾಚಾರ ತಿಳಿಸಿದರು. ಅವರುಗಳು ಶೆಟ್ಟಿಯವರನ್ನ ತಮ್ಮ ಮನೆಗೆ ಕರೆದುಕೊಂಡು ಹೋಗಲು ಬಂದರು. ಆದರೆ ಇವರು, 'ನಾನು ಸ್ವಾಮಿಯವರನ್ನು ಬಿಟ್ಟು ಬರುವುದಿಲ್ಲ, ನಾನು ಈ

ಪುಣ್ಯಭೂಮಿಯಲ್ಲೇ ಮರಣಿಸುತ್ತೇನೆ' ಎಂದು ಹಠ ಹಿಡಿದು ಆಶ್ರಮದಲ್ಲೇ ಉಳಿದುಕೊಂಡರು. ಇವರ ಪಾರ್ಶ್ವವಾಯುಗೆ ಯಾರೋ ಯಾವುದೋ ಎಲೆಯ ರಸತೆಗೆದು ಕೊಟ್ಟರು, ಇವರು ಅದನ್ನು ಸ್ವೀಕರಿಸಿದರು. ಆದರೆ ಅದು ಗುಣಪಡಿಸಲಿಲ್ಲ. ಒಂದು ವಾರ ಮುಗಿಯುವದರಲ್ಲಿ ಇವರಿಗೆ ಸ್ವಪ್ನ ದಲ್ಲಿ ಯಾರೊ ಒಬ್ಬ ವ್ಯಕ್ತಿ ಬಂದು, ಇವರ ಮುಂದೆ ಕುಳಿತು, "ಏನಪ್ಪಾ! ಆರೋಗ್ಯ ಸರಿಯಿಲ್ಲವೇ? ಸರಿಹೋಗುತ್ತದೆ ಬಿಡು. ಈ ಸಕ್ಕರೆ ತೆಗೆದುಕೋ" ಎಂದು ಶ್ರೀ ರಮುಲುಶೆಟ್ಟಿಯವರು ಹಿಡಿದ ಚೀಲದಲ್ಲಿ ಹಾಕಿದರು. ಆ ಸಕ್ಕರೆ, ಚೀಲದ ಒಳಗೆ ಬಿತ್ತಾ, ಅಥವಾ ಕೆಳಗೆ ಬಿತ್ತಾ ಎಂದು ನೆಲದ ಮೇಲೆ ಮುಟ್ಟಿ ನೋಡಿದರೆ ನೆಲದ ಮೇಲೆ ಸಕ್ಕರೆ ಬಿದ್ದಂತೆ ಕಾಣಲಿಲ್ಲ. ತಲೆ ಮೇಲೆತ್ತಿ ನೋಡಿದಾಗ, ಆ ವ್ಯಕ್ತಿಯೂ ಅಲ್ಲಿ ಇರಲಿಲ್ಲ. ಬೆಳಗಾಗುವಹೊತ್ತಿಗೆ, ಅವರ ಕೈಕಾಲುಗಳು ಪೂರ್ಣ ಸಂವೇದನೆಯನ್ನು ಪಡೆದು, ಅವರು ಹಿಂದಿನಂತೆ, ಪೂರ್ಣ ಆರೋಗ್ಯದಿಂದ, ಮಾತಡಲು ಮತ್ತು ನಡೆಯಲು ಪ್ರಾರಂಭಿಸಿದರು.

ಮೇ ತಿಂಗಳಲ್ಲಿ ಬಿಸಿಲು ತುಂಬಾ ತೀವ್ರವಾಗಿತ್ತು. 'ಹತ್ತು ದಿನ ಭಿಕ್ಷೆಗೆ ಅನಿಕೇಪಲ್ಲಿಗೆ ಹೋಗಬೇಡ, ವಿಶ್ರಾಂತಿ ತೆಗೆದುಕೋ' ಎಂದು ಅಲ್ಲಿದ್ದ ಮಿಕ್ಕ ಸೇವಕರು ಹೇಳಿದರು. ಶೆಟ್ಟಿಯವರು, ಹಾಗೆ ಮಾಡಿದರು. ಒಮ್ಮೆ ಅವರ ಕನಸಿನಲ್ಲಿ, ಅವರು ಅನಿಕೆಪಲ್ಲಿಯಲ್ಲಿ ಭಿಕ್ಷೆ ಬೇಡುತ್ತಿದ್ದಹಾಗೆ ಕಂಡಿತು. ಇದು ಸ್ವಾಮಿಯವರು ಕೊಡುತ್ತಿರುವ ಸಂಕೆತವೆಂದು ಭಾವಿಸಿ, ಬೆಳಗಾದಮೇಲೆ, ತೀವ್ರವಾದ ಬಿಸಿಲಿದ್ದರೂ ಭಿಕ್ಷೆ ಬೇಡುವುದಕ್ಕೆ ಅನಿಕೇಪಲ್ಲಿಗೆ ಹೋಗಲು ಪ್ರಾರಂಭಿಸಿದರು.

ಶೆಟ್ಟಿಯವರನ್ನು, ಈ ಅಪಾಯದಿಂದ ಪಾರುಮಾಡಿದವರು ಶ್ರೀ ಸ್ವಾಮಿಯವರೇ ಎಂದು ಒಂದು ಕನಸಿನ ಮೂಲಕ ನಿದರ್ಶಿಸಿದರು. ಅವರು ಪಾರ್ಶ್ವವಾಯುವಿಗೆ ಒಳಗಾದ ಹಿಂದಿನ ರಾತ್ರಿ ಅವರು ಸ್ವಪ್ನದಲ್ಲಿ ಒಂದು ದೊಡ್ಡ ವಿಮಾನವನ್ನು ಆಕಾಶದಲ್ಲಿ ಕಂಡರಂತೆ. ಶ್ರೀ ಸ್ವಾಮಿಯವರು ತಾಟಿ ಮರದಷ್ಟು ಎತ್ತರವಾಗಿದ್ದ ಒಂದು ಬಿದಿರಿನ ಕೋಲನ್ನು ಹಿಡಿದು ನಿಂತಿದ್ದರಂತೆ. ಅದನ್ನು ಕಂಡು ಆ ವಿಮಾನ ಹೊರಟು ಹೋಯಿತಂತೆ. ಇದರಿಂದ ಶ್ರೀ ಸ್ವಾಮಿಯವರೇ ಇವರಿಗೆ ಬರುತ್ತಿದ್ದ ಆ ದೊಡ್ಡ ಆಪತ್ತಿನಿಂದ ಪಾರುಮಾಡಿದರೆಂದು ತಿಳಿದುಬರುತ್ತದೆ. ಇವರು ಈ ಅಪಾಯದಿಂದ ಪಾರಾಗಲು ಕಾರಣ, **"ನಾನು ಈ ಪವಿತ್ರ ಭೂಮಿಯನ್ನು ಬಿಡುವುದಿಲ್ಲ"** ಎಂಬ ಅವರ ನಂಬಿಕೆ ಕೂಡಿದ ಮಾತೇ ಎಂದು ನಾವು ಗುರ್ತಿಸಬೇಕು. ವಿಷ್ವಾಸ ಬೆಟ್ಟಗಳನ್ನೇ ಕದಿಲಿಸುತ್ತದೆ ಎಂದು ಹಿರಿಯರು ಹೇಳಿದ ಮಾತಿಗೆ ಉದಾಹರಣೆ ಇದೇ ಅಲ್ಲವೇ?

ಶ್ರೀ ಸ್ವಾಮಿಯವರ ಮಾತಾಡುವ ಪ್ರತಿಯೊಂದು ಮಾತಿನಲ್ಲಿ ಅರ್ಥ ತುಂಬ ಆಳವಾಗಿ ಇರುತ್ತದೆ. ಆ ಮಾತು ಎಷ್ಟು ಸೂಕ್ಷ್ಮವಾಗಿ ಇರುತ್ತದೆ ಎಂದು ತಿಳಿಯಲು ಸಾಮಾನ್ಯ ಮನುಷ್ಯರಿಗೆ ಸಾಧ್ಯವಾಗದು. ದಮ್ಮಪೇಟೆಯ ನಿವಾಸಿ ಶ್ರೀ ಡಿ. ನಾಗೇಶ್ವರರಾವು ಅವರು ಸ್ವಾಮಿಯವರು ಹೇಳಿದ ಮಾತಿನ ಅರ್ಥ ತಿಳಿಯದೇ, ತಮಗೆ ಅರ್ಥ ಆಗುವಂತೆ ತಿಳಿಸಿ ಎಂದು ಕಣ್ಣಿರು ಹಾಕುತ್ತ ಸ್ವಾಮಿಯವರನ್ನು ಬೇಡಿಕೊಂಡರು. ಸ್ವಾಮಿಯವರು ಹೇಳಿದ ಮಾತು ನಮಗೆ ಅರ್ಥವಾಗದಿದ್ದರೆ, ಅದನ್ನು ವಿವರವಾಗಿ ತಿಳಿಸಿ ಎಂದು

ಬೇಡಿಕೊಳ್ಳಬೇಕು. ಇಲ್ಲದಿದ್ದರೆ, ರೋಶಿ ರೆಡ್ಡಿ ಹೇಳಿದಂತೆ, "ಓ ಪ್ರಭು, ನಿಮ್ಮ ಮಾತಿನ ನಿಗೂಢತ್ವ ನನಗೆ ತಿಳಿಯದಿದ್ದರೆ, ನನಗೆ ನನ್ನ ಪ್ರವರ್ತನೆಯಿಂದ ನಿಮ್ಮನ್ನು ಮೆಚ್ಚಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ, 'ಸ್ವಾಮಿ, ನಾನು ನಿಮ್ಮಮಾತನ್ನು ಪಾಲಿಸಿ, ನಿಮ್ಮಮೆಚ್ಚುಗೆ ಪಡೆಯುವುದಕ್ಕೆ ಸಾಧ್ಯವಾಗುವಂತೆ ನನ್ನನ್ನು ಪ್ರೇರೇಪಿಸಿ' ಎಂದು ಸ್ವಾಮಿಯವರನು ಹೃದಯ ಪೂರ್ವಕವಾಗಿ ಕಣ್ಣೀರಿ ನೊಂದಿಗೆ ಪ್ರಾರ್ಥಿಸ ಬೇಕು. ಒಂದು ವೇಳೆ ಸ್ವಾಮಿಯವರ ಮಾತು ಅರ್ಥವಾಗಲಿಲ್ಲ ಎಂದು ಬಿಟ್ಟುಬಿಟ್ಟರೆ, ನಷ್ಟವಾಗುವುದು ನಾವೆ ಎಂದು ಸ್ವಾಮಿಯವರು ಹೇಳಿದರು.

ನನ್ನ ಸ್ನೇಹಿತನಿಗೆ ಶ್ರೀ ಸ್ವಾಮಿಯವರು - "ಅಯ್ಯಾ! ನೀವು ಉಂಡೇ ಇಲ್ಲು ವದಿಲಿ ಪೆಡಿತೇ ನೀಕು ಕಷ್ಟಾಲು ವಸ್ತಾಯಿ" (ಅಯ್ಯಾ! ನೀನು ಇರುವ ಮನೆ ಬಿಟ್ಟುಹೋದರೆ, ನಿನಗೆ ಕಷ್ಟಗಳು ಬರುತ್ತದೆ) ಎಂದು ಹೇಳಿದರು. ಈ ಮಾತು ಹೇಳಿದ ಕೆಲವು ವರ್ಷಗಳಾದ ಮೇಲೆ, ನನ್ನ ಸ್ನೇಹಿತ, ಆ ಮನೆಯನ್ನು ಬಿಟ್ಟು ನೆಲ್ಲೂರಿಗೆ ಹೋದರು. ನಂತರ, ಇವರ ಹತ್ತಿರ ಇದ್ದ ಒಂದು 4000ರೂ ಬೆಲೆ ಬಾಳುವ ಎತ್ತು ಮರಣಿಸಿತು. ಸ್ವಾಮಿಯವರ ಮಾತು ನೆನಪಿಗೆ ಬಂದು ಅವರು ತಮ್ಮ ಹಳೆಯ ಮನೆಗೆ ಕುಟುಂಬದವರ ಸಮೇತವಾಗಿ ಮರಳಿದರು. ಕೆಲವು ವರ್ಷಗಳು ಅವರ ಹಳೆಯ ಮನೆಯಲ್ಲೇ ಆರಾಮವಾಗಿದ್ದರು. ಅವರ ಗುಡಿಸಲು ಇರುವ ಸ್ಥಳದಲ್ಲಿ ಮಹಡಿಯ ಮನೆ ಕಟ್ಟಬೇಕೆಂದು, ಅವರು, ಬೇರೆ ಮನೆಗೆ ಹೋದರು. ಬೇರೆ ಮನೆಗೆ ಹೋದ ನಂತರ, ಅವರ ಬಲಗೈ ಆಗಿದ್ದ ಮನೆಯ ಎಲ್ಲಾ ಕೆಲಸಗಳನ್ನು ನಂಬಿಕೆಯಿಂದ ಮಾಡುತ್ತಿದ್ದ ವ್ಯಕ್ತಿ ಮರಣಿಸಿದರು. ಆವಾಗನಿಂದ ಅವರು ಕಷ್ಟದಲ್ಲೇ ಮುಳಿಗಿದರು. ಸ್ವಾಮಿಯವರ ಮಾತನ್ನು ಕೇಳಿ, ಅವರು ಆ ಗುಡಿಸಲಿನಲ್ಲೇ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತಲ್ಲವೇ?

ಕಣ್ಣೀರಿಗೆ ಕರಿಗಿಹೋಗುವ ಸ್ವಾಮಿ

ಹೃದಯ ಪೂರ್ವಕವಾಗಿ, ಯಾರಾದರೂ ಕಣ್ಣೀರಿಟ್ಟರೆ, ಬೆಣ್ಣೆಯ ಹಾಗೆ ಇರುವ ಸ್ವಾಮಿಯವರ ಹೃದಯ ಕರಗಿ ತಕ್ಷಣ ಅವರ ಕಷ್ಟಗಳನ್ನು ಪರಿಹರಿಸುತ್ತಾರೆ.

ಸೂಳ್ಳೂರು ಪೇಟೆಯ ಸಮೀಪದಲ್ಲಿ ಇರುವ ಉಚ್ಚೂರು ಗ್ರಾಮದ ನಿವಾಸಿ ಶ್ರೀ ವೈ.ಶಿವರಾಮಯ್ಯ ನವರಿಗೆ ಅವರ ಎರಡು ಮೂತ್ರಪಿಂಡಗಳು ಹಾಳಾಗಿ ಮದರಾಸಿನ ವೈದ್ಯರು ಏನೂ ಮಾಡಲು ಸಾಧ್ಯವಿಲ್ಲ ಎಂದು ಹೇಳಿಬಿಟ್ಟಾಗ, ಗೊಲಗಮೂಡಿಯಲ್ಲಿ ಶ್ರೀ ಸ್ವಾಮಿಯವರನ್ನು ಪ್ರಾರ್ಥಿಸಿ ದೇವಸ್ಥಾನಕ್ಕೆ ಬಂದರು. ಅಲ್ಲಿ ಎಲ್ಲಾ ಭಕ್ತರು ಪ್ರದಕ್ಷಿಣೆ ಮಾಡುವುದನ್ನು ನೋಡಿ, ತಾವು ಪ್ರದಕ್ಷಿಣೆ ಮಾಡುವ ಸ್ಥಿತಿಯಲ್ಲಿ ಇಲ್ಲವೆಂದು ಕಣ್ಣೀರು ಹಾಕಿದರು. ಆ ರಾತ್ರಿ ಸ್ವಾಮಿಯವರು ಇವರಿಗೆ ಸ್ವಪ್ನದಲ್ಲಿ ಕಂಡು, "ಒಂದು ಹೊತ್ತು ಉಪ್ಪು ಇಲ್ಲದೇ ಊಟ ಮಾಡಯ್ಯ" ಎಂದು ಹೇಳಿದರು. ಹಾಗೆ ಮಾಡಿದ ಕೂಡಲೆ ಅವರು ಸಂಪೂರ್ಣವಾಗಿ ಆರೋಗ್ಯವಂತರಾದರು.

ಒಂಗೋಲು ನಿವಾಸಿ ಪದ್ಮ ತಡಿಯಲಾರದಷ್ಟು ಸೊಂಟದ ನೋವಿನಿಂದ ಗೊಲಗಮೂಡಿಗೆ ಬಂದು ಕಣ್ಣೀರಿನೊಂದಿಗೆ ಪ್ರಾರ್ಥನೇ ಮಾಡಿದ ತಕ್ಷಣ, ಶ್ರೀ

ಸ್ವಾಮಿಯವರು ಇವರ ನೋವನ್ನು ಗುಣಪಡಿಸಿದರು. ಇನ್ನೊಬ್ಬ ಭಕ್ತ, ಡಿ. ನಾಗೇಶ್ವರರಾವು ಅವರು (ದಮ್ಮಪೇಟ) ಅವರಿಗೆ ಶ್ರೀ ಸ್ವಾಮಿಯವರ ಮಾತು ಅರ್ಥವಾಗಲಿಲ್ಲ ಎಂದು ಕಣ್ಣಿರಿನೊಡನೆ ಪ್ರಾರ್ಥಿಸಿದಾಗ, ಮತ್ತೆ ಸ್ವಪ್ನದಲ್ಲಿ ಸ್ವಾಮಿಯವರು ಕಂಡು, ತಾವು ಹೇಳಿದ ಮಾತಿನ ಅರ್ಥ ಸ್ಪಷ್ಟವಾಗಿ ವಿವರಿಸಿದರು.

ಒಮ್ಮೆ ಮೊಣಕಾಲು ನೋವು ಸಹಿಸಲಾಗುತ್ತಿಲ್ಲ ಎಂದು ಗೊಲ್ಲಮೂಡಿ ನಿವಾಸಿಯೊಬ್ಬರು ಅಳಲುತ್ತಾ ಪ್ರಾರ್ಥಿಸಿದಾಗ ಯಾವುದೇ ಹರಿಕೆ ಇಲ್ಲದೇ ಸ್ವಾಮಿಯವರು ಆಕೆಯ ಸ್ವಪ್ನದಲ್ಲಿ ಕಂಡು ಒಂದು ಎಲೆಯ ರಸಾಯನ ಹಚ್ಚಿ, ಆಕೆಯ ನೋವನ್ನು ತೊಲಗಿಸಿದರು. ಗೊಲಗಮೂಡಿಯ ಎರುಕಲಪಾಳ್ಯದ ನಲಬೋಯಿ ಸಿದ್ದಮ್ಮನವರಿಗೆ ಸಂತಾನ ಇಲ್ಲದೇ ಸ್ವಾಮಿಯವರನ್ನು ಕಣ್ಣಿರಿಡುತ್ತಾ ಪ್ರಾರ್ಥಿಸಿದಾಗ, ಸ್ವಾಮಿಯವರು ಆಕೆಗೆ ಸಂತಾನಭಾಗ್ಯ ಪ್ರಸಾದಿಸಿದರು. **ಸ್ವಾಮಿಯವರು ನಮ್ಮಿಂದಾ ಕೋರುವ ದಕ್ಷಿಣೆ, ಹೃದಯ ಪೂರ್ವಕವಾದ ಪ್ರೀತಿ ಮತ್ತು ವಿಶ್ವಾಸ ಮಾತ್ರ.**

ಬೋಧಯಜ್ಞಾಯನಮಃ

ತಮ್ಮ ದಿವ್ಯ ಬೋಧನೆಗಳನ್ನು ನಮಗೆ ನೀಡುವುದರಲ್ಲಿ ಸ್ವಾಮಿಯವರು, ಅವರಿಗೆ ಅವರೇ ಸಾಟಿ. ಆ ದಿನಗಳಲ್ಲಿ, ನನಗೆ ಪೂಜೆಯಂದರೆ ಸದಭಿಪ್ರಾಯ ಇರಲಿಲ್ಲ. ಸ್ವಾಮಿಯವರು, 'ನಿರ್ಗುಣ ನಿರಾಕಾರರು. ನಾವು, ನಮ್ಮ ತೃಪ್ತಿಗಾಗಿ, ಸ್ವಾಮಿಯವರಿಗೆ ಸಮರ್ಪಿಸುತ್ತಿರುವ ನೈವೇದ್ಯವನ್ನು ಅವರು ಸ್ವೀಕರಿಸುತ್ತಾರೆಯೇ? ಎಂದು ಯೋಚಿಸುತ್ತಾ, ನಾನು ಯಾಂತ್ರಿಕವಾಗಿ, ಲಾಂಛನ ಪ್ರಾಯವಾದ ಪೂಜೆ ಮಾಡುತ್ತಿದ್ದ ಕಾಲ ಅದು. ಗೂಡೂರಿನ ಹರಿಬಾಬು ಅವರು ನನ್ನ ಸ್ನೇಹಿತ. ಅವರಿಗೆ ಶ್ರದ್ಧಕರ್ಮಗಳು, ಸಂವತ್ಸರದಲ್ಲಿ ಮಾಡುವ ಕರ್ಮಗಳು, ಶ್ರಾದ್ಧ, ಪುಜೇಗಳ ವಿಚಾರವಾಗಿ ನನ್ನ ಹಾಗೆಯೇ ಅನೇಕ ಸಂದೇಹಗಳಿದ್ದವು. ಅದು ಶ್ರೀ ಭರದ್ವಾಜ ಮೇಷ್ಟರ ಹತ್ತಿರ ಕೇಳಿ ತಮ್ಮ ಅನುಮಾನ ಬಗೆ ಹರಿಸಕೊಳ್ಳ ಬೇಕೆಂದು ಹಲವಾರು ಪ್ರಯತ್ನ ಮಾಡಿದರು. ಆದರೆ, ಮೇಷ್ಟರ ಹತ್ತಿರ ಹೋದಾಗ, ಮರೆತುಹೋಗುತ್ತಿದ್ದರು. ಒಮ್ಮೆ ಶಿರಿಡಿಗೆ ಹೋಗಿ, ಶ್ರೀ ಶಿವನೇಶನ್ ಸ್ವಾಮಿಯವರನ್ನು ದರ್ಶಿಸೆ ನಮಸ್ಕಾರ ಮಾಡಿ ಕುಳಿತಿದ್ದನಂತೆ. ಹರಿಬಾಬು ತನಗಿರುವ ಸಂದೇಹವನ್ನು ಕೇಳಕ್ಕೂ ಮುಂಚೆ, ಶ್ರೀ ಶಿವನೇಶನ್ ಸ್ವಾಮಿಯವರೇ ಹೀಗೆ ಹೇಳಲು ಪ್ರಾರಂಭಿಸಿದರಂತೆ, "ಒಬ್ಬ ಕೋಟೀಶ್ವರನಿಗೆ ಒಬ್ಬನೇ ಮಗ. ಆ ಮಗ ಯುಕ್ತ ವಯಸ್ಸಿಗೆ ಬಂದಾಗ ಮರಣಿಸಿದ. ಆ ತಂದೆಯವರಿಗೆ ನಂಬಿಕೆ ಇಲ್ಲದಿದ್ದರೂ ಮರಣಿಸಿದ ಮಗನಿಗಾಗಿ ಎಲ್ಲಾ ಕರ್ಮಗಳನ್ನೂ ಮಾಡುತ್ತಿದ್ದರು. ಒಮ್ಮೆ ತಂದೆಯವರಿಗೆ ಎಚ್ಚರವಾಗಿದ್ದಾಗಲೇ, ಬೆಳಗಿನ ಸಮಯದಲ್ಲಿ ಮರಣಿಸಿದ ಮಗ ಕಾಣಿಸಿಕೊಂಡು, ದೂರದ ನಗರದಲ್ಲಿದ್ದ ತಮ್ಮ ಕಾರ್ಖಾನೆಯಲ್ಲಿ ಹಣ ಯಾರ್ಯಾರು ತಿಂದರೋ, ಆ ವಿಷಯವನ್ನು ಹೀಗೆ ಮರೆಮಾಡಿ ತಪ್ಪು ಲೆಕ್ಕಾಚಾರಗಳು ತೋರಿಸಿದರೆಂದು ಹೇಳಿದನಂತೆ. ಆ ವಿಷಯವನ್ನು ಆ ತಂದೆ ನಿರ್ಲಕ್ಷಿಸಿದರು. ಮತ್ತೆ ಕೆಲವು ವಿಷಯಗಳನ್ನು

ಹೇಳಲು 2-3 ಬಾರಿ ಪ್ರಯತ್ನಿಸಿದನಂತೆ. ಮರಣಿಸಿದವನು ಬಂದು ಹೇಳಿದ್ದನ್ನು ಹೇಗೆ ನಂಬುವುದು ಎಂದು ಅವರು ನಿರ್ಲಕ್ಷಿಸದರು.

ಕೊನೆಗೆ, ವರ್ಷದ ಶ್ರಾದ್ಧದ ದಿನ, ಎಲ್ಲಾ ಆಹಾರದ ಪದಾರ್ಥಗಳನ್ನು ಇಟ್ಟು, ನೈವೇದ್ಯ ಮಾಡಿ ನಮಸ್ಕಾರ ಮಾಡುವ ಹೊತ್ತಿಗೆ ಮತ್ತೆ ಮಗ ಕಾಣಿಸಿಕೊಂಡು, "ಆ ಪಾಯಸದಲ್ಲಿ ಸಿಹಿ ಕಡಿಮೆ ಯಾಗಿದೆ ನೋಡಿ" ಎಂದು ಹೇಳಿದನಂತೆ. ರುಚಿ ನೋಡಿದಾಗ, ಅವನು ಹೇಳಿದ ಮಾತು ನಿಜ ಆಗಿತ್ತು. ತಂದೆಯವರು "ನಿನಗೆ ಇದು ಹೇಗೆ ತಿಳಿಯಿತು ?" ಎಂದು ಕೇಳಿದರು. ಆಗ ಮಗ, "ನಾವು ಸೂಕ್ಷ್ಮರೂಪದಲ್ಲಿ ಬಂದು ಆ ಪದಾರ್ಥಗಳ ಸೂಕ್ಷ್ಮವನ್ನು ಗ್ರಹಿಸುತ್ತೇವೆ" ಎಂದು ಹೇಳಿದನಂತೆ. ಆಗ ಮಗನ ಮಾತು ನಂಬಿ, ಆ ತಂದೆಯವರು, ಕಾರ್ಖಾನೆಯಲ್ಲಿ ವಿಚಾರಣೆ ಮಾಡಿದಾಗ ಮಗ ಹೇಳಿದ ಮಾತುಗಳು ಎಲ್ಲಾ ಸತ್ಯ ಎಂದು ತಿಳಿದುಕೊಂಡರು" ಎಂದು ಶ್ರೀ ಶಿವನೇಶನ್ ಸ್ವಾಮಿಯ ರೂಪದಲ್ಲಿ ಶ್ರೀ ವೆಂಕಯ್ಯ ಸ್ವಾಮಿಯವರೇ ಹರಿಬಾಬು ಅವರಿಗೆ ಸಂದೇಶ ಕೊಟ್ಟು, ಎಲ್ಲಾ ಸಂದೇಹಗಳನ್ನು ಪರಿಹರಿಸಿ, ಲಾನ್ಚನ ಪ್ರಾಯವಾಗಿ ಮಾಡುವ ಪೂಜೆ ಮುಂತಾದವುಗಳನ್ನು ಸರಿಯಾದ ಮಾರ್ಗದಲ್ಲಿ ಮಾಡಲು ಹೇಳಿದರು. ಶ್ರೀ ಸ್ವಾಮಿಯವರು ಈ ವಿಷಯ ಹರಿಬಾಬುರವರ ಮೂಲಕ ನನಗೆ ತಿಳಿಸಿ ನನ್ನನ್ನು ಸತ್ಮಾರ್ಗದಲ್ಲಿ ನಡೆಯಿಸಿದರು. ಅದಕ್ಕೇ ಶ್ರೀ ಭರದ್ವಾಜ ಮೇಷ್ಟರು, "ಸಿದ್ಧ ಪುರುಷರನುನ್ನ ಮಾತ್ರವೇ ಗುರುವಾಗಿ ಸೇವಿಸಿ ಧನ್ಯರಾಗಿ" ಎಂದು ಒತ್ತಿ ಒತ್ತಿ ಹೇಳಿದರು.

ಮನುಷ್ಯನಿಗೆ ನಿರಂತರವಾಗಿ ಅಂಟಿಕೊಳ್ಳುವ ಪಾಪ

ಶ್ರೀ ವೆಂಕಯ್ಯ ಸ್ವಾಮಿಯವರು, "ನೀವು ಮನುಷುಲ್ಲೋಕಿ ಪೋಯಿ ವಚ್ಚಾವು, ನೀವು ಪೋಸೇ ಗಂಜಿ ವದ್ದುಪೋ" (ನೀನು ಮನುಷ್ಯರ ನಡುವೆ ಹೋಗಿ ಬಂದ್ದೀದ್ದೀಯ, ನೀನು ಕೊಡುವ ಗಂಜಿ ಬೇಡ ಹೋಗು) ಎಂದು ನಿತ್ಯವೂ ಅವರಿಗೆ ಗಂಜಿ ಕೊಡುತ್ತಿದ್ದ ಸೇವಕನ ಸೇವೆಯನ್ನು, ಬೇರೊಬ್ಬರಿಂದ ಮಾಡಿಸಿಕೊಳ್ಳುತ್ತಿದ್ದರು. "ಮನುಷ್ಯರ ನಡುವೆ ಹೋಗಿ ಬಂದಿದ್ದೀಯ" ಅಂದರೆ, ಬಾಹ್ಯವಾಗಿ ಮನುಷ್ಯರನ್ನು ಸ್ಪರ್ಷಿಸಿದನು ಎಂದು ಅರ್ಥವಲ್ಲ. ಆ ಸೇವಕ ಗೊಲಗಮೂಡಿಯಲ್ಲಿ ಕೆರೆಯ ಬಳಿ ಇದ್ದ ಮೀನುಗಾರರು, ರಾಜಕೀಯದ ಮಾತಾಡುತ್ತಾ, ಇಂದಿರಾ ಗಾಂಧಿ ಮತ್ತು ರಾಜೀವ್ ಗಂಧಿಯವರನ್ನು ಟೀಕಿಸುತ್ತಿದ್ದಾಗ, ಈ ಸೇವಕನೂ ಅವರ ಸಂಭಾಷಣೆಯಲ್ಲಿ ಪಾಲುಗೊಂಡು ವಿಮರ್ಷಿಸಿದ. ಇತರರ ಬಗ್ಗೆ ಮಾತನಾಡುವುದು ಅವನು ಮಾಡಿದ ಪಾಪ ಎಂದು ಶ್ರೀ ಸ್ವಾಮಿಯವರ ಅಭಿಪ್ರಾಯ.

"ಪಾಪ" "ಪುಣ್ಯ" ಎಂದರೆ ಏನು**? 'ಪರಪೀಡನೆ' ಪಾಪ - 'ಪರೋಪಕಾರ' ಪುಣ್ಯ** (ಇತರರನ್ನು ಪೀಡಿಸುವುದೇ ಪಾಪ, ಇತರರಿಗೆ ಉಪಕಾರ ಮಾಡುವುದೇ ಪುಣ್ಯ) ಎಂದು ಮಹನೀಯರು ಹೇಳುತ್ತಾರೆ. ಮೇಲಿನ ಸಂದರ್ಭದಲ್ಲಿ ಆ ಸೇವಕನಾಗಲಿ, ಮೀನುಗಾರರಾಗಲಿ, ತಮ್ಮ ಸಂಭಾಷಣೆಯಲ್ಲಿ, ಈಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿಯವರನ್ನು ವಿಮರ್ಷಿಸುತ್ತಾ ಅವರ ಖ್ಯಾತಿಗೆ ಧಕ್ಕೆ ತರುವಂತೆ ಮಾತನಾಡುತ್ತಿದ್ದರು. ಇದನ್ನೇ "ಪರಪೀಡನೆ/ ಪಾಪ" ಎನ್ನುತ್ತಾರೆ. ಇದು ಪ್ರತಿಒಬ್ಬ ಮನುಷ್ಯನಿಗೂ ಅನ್ವಯಿಸುತ್ತದೆ. ಎಲ್ಲಿಯವರೆಗೆ ನಾವು ಪ್ರತಿ ನಿಮಿಷವೂ ಈ ಪಾಪದಿಂದ ಹೊರ ಬರುವುದಿಲ್ಲವೋ ಅಲ್ಲಿಯವರೆಗೆ ನಾವು ಶ್ರೀ ಸ್ವಾಮಿಯವರ ಉಪದೇಶವನ್ನು ನಮ್ಮ ಹೃದಯದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಿಲ್ಲ. ಶ್ರೀ ಸ್ವಾಮಿಯವರ ಪವಿತ್ರ ಸನ್ನಿಧಿಗೆ ಬಂದು ಕೂಡ ಇತರರನ್ನು ವಿಮರ್ಶಿಸಿದರೆ, ಅದು ಎಷ್ಟು ದೊಡ್ಡ ಅಪರಾಧವೋ ಯೋಚಿಸಿ.

ಪೂಜೆ

ಈ ಪುಸ್ತಕದ ಲೇಖಕರಾದ ಶ್ರೀ ಪೆಸಲ ಸುಬ್ಬರಾಮಯ್ಯ ಅವರು ತಮ್ಮ ಗುರುಗಳಾದ ಶ್ರೀ ಎಕ್ಕಿರಾಲಾ ಭಾರದ್ವಾಜಾರವರಿಂದ (ಇವರ ವಿದ್ಯಾರ್ಥಿಗಳು ಭರದ್ವಾಜರವರನ್ನ, ಪ್ರೀತಿಯಿ ಮತ್ತು ಗೌರವದಿಂದ "ಮಾಸ್ಟರ್" ಎಂದು ಸಂಬೋಧಿಸುತ್ತಾರೆ) ಪ್ರಭಾವಿತರಾಗಿ, ಸ್ಫೂರ್ತಿ ಪಡೆದಿದ್ದಾರೆ. ಮುಂದಿನ ಸಾಲುಗಳಲ್ಲಿ ಲೇಖಕರು ತಮ್ಮ ಗುರುಗಳು ವಿವರಿಸಿದಂತೆ "ಪೂಜೆ" ಬಗ್ಗೆ ವಿವರಿಸುತ್ತಾರೆ. ನಾವು ಮಾಡುವ ಪೂಜೆಯ ವಿಧಾನ ಕೇವಲ ಯಾಂತ್ರಿಕ ಅಥವಾ ಔಪಚಾರಿಕ ಪ್ರಕ್ರಿಯೆಯಾಗಿರದೆ ಅದನ್ನು ಸಜೀವ ಪ್ರಕ್ರಿಯೆಯಾಗಿ ಹೇಗೆ ಆರಾಧಿಸಬಹುದು ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ನಾವು ಪೂಜೆ ಮಾಡಲು ಪ್ರಾರಂಭಿಸಿದಾಗ, ಪ್ರತಿಯೊಂದು ಹೆಸರಿನ ಅರ್ಥವನ್ನು ತಿಳಿದುಕೊಂಡು, ಅದಕ್ಕೆ ಸಂಬಂಧಿಸಿದ ಎಲ್ಲಾ

ಲೀಲೆಗಳನ್ನು ಮನಸ್ಸಿನಲ್ಲಿ ನಿಧಾನವಾಗಿ ನೆನಪಿಸಕೊಳ್ಳಬೇಕು. ಉದಾಹರಣೆಗೆ: "ಸ್ಮೃತಿ ರಹಿತ ಪ್ರಸನ್ನಾಯ ನಮಃ" ಅಂದಾಗ, "ವೆಂಕಯ್ಯ ಸ್ವಾಮಿಯವರು, ಹಲವಾರು ಜನಗಳ ಕಷ್ಟಗಳನ್ನು ಹೇಗೆ ನಿವಾರಿಸಿದರು. ರೋಶಿ ರೆಡ್ಡಿಯವರ ಮಗ, ಮಾವಿನಕಾಯಿ ತುಂಬಿದ ಗಾಡಿಯ ಜೊತೆಯಲ್ಲಿ ಬೆಟ್ಟದ ಮೇಲಿನಿಂದ ಪ್ರಪಾತಕ್ಕೆ ಬಿದ್ದಾಗ, ಆ ಹುಡುಗ ಸ್ವಾಮಿಯವರ ಸ್ಮರಣೆ ಮಾಡದಿದ್ದರೂ, ಅವನನ್ನು ರಕ್ಷಿಸಿದರು ಸ್ವಾಮಿಯವರು. ಕಸ್ತೂರಿ ಅಂಕಯ್ಯನವರ ಮಗ ಭಾವಿಯಲ್ಲಿ ಬಿದ್ದಾಗ, ಯಾರು ಸ್ವಾಮಿಯವರನ್ನು ಪ್ರಾರ್ಥಿಸದಿದ್ದರೂ, ಸ್ವಾಮಿಯವರು ಆ ಮಗುವನ್ನು ಕಾಪಾಡಿದರು. ತೂಪಿಲಿ ಪಿಚ್ಚಮ್ಮನವರ ಮಗಳು ಅಗ್ನಿ ಕುಂಡ ದಲ್ಲಿ ಬಿದ್ದಾಗ, ಸ್ವಾಮಿಯವರು ಅವಳನ್ನು ರಕ್ಷಿಸಿದರು. ಇಂತಹ ಹಲವಾರು ಲೀಲಗಳನ್ನು ನಾವು ನಿಧಾನವಾಗಿ ಸ್ಮರಿಸುತ್ತಿದ್ದರೆ, ಅದು ಸಜೀವವಾದ ಪೂಜೆ ಆಗುತ್ತದೆ.

ನಾವು ನಮ್ಮ ಜೀವನದಲ್ಲಿ ಕೆಲಸಗಳ ಕಾರಣದಿಂದ ನಮ್ಮ ಪೂಜೆಯನ್ನು ಕೇವಲ ಅರ್ದ ಘಂಟೆಯಲ್ಲೇ ಮಾಡಿ ಮುಗಸಬಹುದು. ಆದರೆ, ಎಲ್ಲಾ ನಾಮಗಳನ್ನು ಹೇಳಲಿಲ್ಲ ಎನ್ನುವ ಅಸಂತ್ರೂಪ್ತಿ ಹೊಂದುವ ಅವಶ್ಯಕತೆ ಇಲ್ಲ. ಒಂದೆರಡು ನಾಮಗಳು ಹೇಳಿಕೊಂಡು, ಅದಕ್ಕೆ ಸಂಬಂಧಿಸಿದ ಲೀಲೆಗಳನ್ನು ಸ್ಮರಿಸಿ, ಕೊನೆಯ ಐದು ನಿಮಿಷದಲ್ಲಿ ಎಲ್ಲಾ ನಾಮಗಳನ್ನು ಸ್ಮರಿಸಬಹುದು. ಈ ರೀತ್ಯಲ್ಲಿ ಪೂಜೆ ಮಾಡಿದರೆ ಅದು ಯಾಂತ್ರಿಕ ಅಥವ ಔಪಚಾರಿಕ ಪ್ರಕ್ರಿಯೆ ಆಗದೆ, ಸಜೀವವಾದ ಪೂಜೆ ಆಗುತ್ತದೆ.

ಕಾಕಬಲಿ

ಸ್ವಾಮಿಯವರು, ನಮಗೆ, ತಮ್ಮ ಆಚರಣೆಯ ಮೂಲಕ ಬೋಧಿಸಿದ ಬೋಧನೆಗಳಲ್ಲಿ ಮುಖ್ಯವಾದದ್ದು "ಕಾಕಬಲಿ". ನಾವು ತಿನ್ನುವ ಆಹಾರವೆಲ್ಲಾ ಭಗವಂತನಿಂದ ಪ್ರಸಾದವಾಗಿ ನೀಡಲಾಗಿದೆ. ಒಂದು ಅಕ್ಕಿಯ ಕಾಳು ಪಡೆಯುವುದಕ್ಕೆ, ಎಷ್ಟು ಜೀವಗಳ ಪರಿಶ್ರಮ ಅದರಲ್ಲಿ ಕೂಡಿದೆಯೋ ಯೋಚಿಸಿ. ಹೊಲವನ್ನು ಊಳುವುದಕ್ಕೆ, ನೇಗಿಲಿಗೆ ಕಬ್ಬಿಣ ಬೇಕು. ಕಬ್ಬಿಣವನ್ನು ಗಣಿಯಿಂದ ತೆಗೆದು, ಹೊಲ ಊಳುವ ಟ್ರ್ಯಾಕ್ಟರ್ ರೂಪದಲ್ಲಿ ಮಾಡಬೇಕೆಂದರೆ ಎಷ್ಟು ಜನರ ಪರಿಶ್ರಮ ಅಗತ್ಯ. ಹಾಗೆಯೇ, ಭಾವಿ, ಬಕೆಟ್, ಹಗ್ಗ ಅಡುಗೆ ಮಾಡಲು ಪಾತ್ರೆಗಳು, ಒಲೆ, ಗ್ಯಾಸ್, ನಾವು ವಾಸಿಸುವ ಮನೆ, ಇವುಗಳ ತಯಾರು ಮಾಡಲು ಎಷ್ಟು ಜನರ ಶ್ರಮೆ ಅಗತ್ಯ ಯೋಚಿಸಿ. ಗೊಬ್ಬರ ತಯಾರು ಮಾಡಲು ಎಲ್ಲೆಲ್ಲಿಂದಲೋ ಕಸವನ್ನು ತಂದು, ಎಷ್ಟು ಕೋಟ್ಯಾಂತರ ಸೂಕ್ಷ್ಮ ಜೀವಗಳ ಅವಶ್ಯಕತೆ ಇರುತ್ತದೆಯೋ! ಹಾಗೆಯೇ ನಾವು ತಿನ್ನುವ ಆಹಾರವನ್ನು ಜೀರ್ಣಿಸಲು, ನಮ್ಮ ಕರುಳಿನಲ್ಲಿ ಅಸಂಖ್ಯಾತವಾದ ಸೂಕ್ಷ್ಮ ಜೀವಿಗಳ ಪಾತ್ರೆ ಅತಿ ಮುಖ್ಯ. ಹಾಗೆಯೇ, ಹಾಲು, ತುಪ್ಪ, ಬೇಳೆ, ತರಕಾರಿಕಳು, ನಾವು ಧರಿಸುವ ವಸ್ತ್ರಗಳು ನಮಗೆ ಬೇಕೆಂದರೆ ಎಷ್ಟು ಜೀವಗಳು ಶ್ರಮ ಪಡಬೇಕೋ ಯೋಚಿಸಿ? ಇವುಗಳು ಮಾತ್ರವೇ ಅಲ್ಲ ಪಂಚಭೂತಗಳು ನಿರಂತರವಾಗಿ ಸಹಕರಿಸಬೇಕು. ಪಂಚಭೂತಗಳೆಂದರೆ, ಭೂಮಿ, ಅಗ್ನಿ(ಸೂರ್ಯ), ಆಕಾಶ, ನೀರು, ಗಾಳಿ. ಜೀವಗಳರೂಪದಲ್ಲಿ, ಪಂಚಭೂತಗಳ ರೂಪದಲ್ಲಿ ಆ ಪರಮಾತ್ಮನೇ ನಮಗೆ ಆಹಾರ, ಮನೆ, ವಸ್ತ್ರ ಎಲ್ಲವನ್ನೂ ಕೊಡುತ್ತಿದ್ದಾರೆ.

ಇದಕ್ಕೆ ಕೃತಜ್ಞತಾ ಪೂರ್ವಕಯಾಗಿ ಆ ಪರಮಾತ್ಮನಿಗೆ ಪ್ರೀತಿಯಿಂದ ಅಪ್ರಿಪಿಸುವುದೇ 'ಕಾಕಬಲಿ'. " ಓ ಭಗವಂತ! ಅಸಂಖ್ಯಾತ ಜೀವಗಳ ರೂಪದಲ್ಲಿ, ಪಂಚಭೂತಗಳ ರೂಪದಲ್ಲಿ, ಪ್ರತಿಕ್ಷಣ ಶ್ರಮಿಸಿ, ನನಗೆ ಈ ಆಹಾರವನ್ನು ನೀವು ಒದಗಿಸಿದ್ದೀರಿ. ನಾನು ತಮಗೆ ಸಮರ್ಪಿಸುವ ಈ ಆಹಾರವನ್ನು ಸ್ವೀಕರಿಸಿ ನನ್ನನ್ನು ಋಣಮುಕ್ತರನ್ನಾಗಿ ಮಾಡಿ" ಎಂದು ಮನಸ್ಪೂರ್ತಿಯಾಗಿ ಹೇಳಿಕೊಂಡು ಪ್ರೀತಿ ಮತ್ತು ಕೃತಜ್ಞತೆಗಳೊಂದಿಗೆ ಸಮರ್ಪಿಸುವುದೇ ಕಾಕಬಲಿ. ನಮಗೆ ಆಹಾರ ಇದೆ ಎಂಬ ಕಾರಣಕ್ಕೆ ಮುಷ್ಟಿ ಊಟವನ್ನು ಬಿಸಾಡುವುದು ಸರಿಯಲ್ಲ ಎಂದು ಹಿರಿಯರು ಹೇಳುತ್ತಾರೆ. ಕಾಕಬಲಿಯನ್ನು ಅರ್ಪಿಸಲು ತುಂಬಿ ತುಳುಕುವ ಕೃತಜ್ಞತಾ ಭಾವ ಇರಬೇಕು ಎನ್ನುತ್ತಾರೆ ಹಿರಿಯರು. ಹಾಗೆ ಆಚರಿಸಿ ತೋರಿಸಿದರು ಸ್ವಾಮಿಯವರು. ನಮ್ಮನ್ನೂ ಹಾಗೆ ಆಚರಿಸಿ ಋಣಮುಕ್ತರಾಗಿ ಎಂದು ಹೇಳಿದರು ಸ್ವಾಮಿಯವರು.

ದಾನ ಮಾಡಿದ ವಸ್ತುಗಳ ಮೇಲೆ ಹೆಸರುಗಳನ್ನು ಹಾಕಿಸುವುದು

ಯಾವುದೇ ವಿಷಯದಲ್ಲಾದರೂ ಸಿದ್ಧ ಪುರುಷರ ಮಾತುಗಳು ನಮಗೆ ಶಿರೋಧಾರ್ಯ. ಶ್ರೀ ಜ್ಞಾನೇಶ್ವರ ಮಹಾರಾಜರವರು ಒಬ್ಬ ದೊಡ್ಡ ಸಿದ್ಧಪುರುಷರು. ಕಟ್ಟಿಗೆ ಸಿಕ್ಕಲಿಲ್ಲವೆಂದು ಪಕ್ಕದಮನೆಯವರನ್ನು ಕೇಳಿದಾಗ, ಆ ಪಕ್ಕದಮನೆಯವರು ಬೈದರು ಎಂದು ಅಳುತ್ತಿದ್ದ ತನ್ನ ತಂಗಿಯನ್ನು ನೋಡಿ, ತನ್ನ ಯೋಗ ಶಕ್ತಿಯಿಂದ, ತನ್ನ ಬೆನ್ನನ್ನು ದೋಸೆಯ ಕಾವಲಿಯಂತೆಮಾಡಿ, ಚೆನ್ನಾಗಿ ಬಿಸಿಯಾದ ಮೇಲೆ ದೋಸೆಯನ್ನು ಮಾಡಿಸಿದರು. ಅವರ ಸ್ನೇಹಿತ ಮರಣಿಸಿದ ಎಂದು ಎಲ್ಲರೂ ಅಳುತ್ತಿದ್ದರೆ, ಆ ಹುಡುಗನ ಕೈ ಹಿಡಿದುಕೊಂಡು, "ಆಟ ಆಡೋಣ ಬಾ" ಎಂದು ಕರೆಯುತ್ತಿದ್ದಂತೆಯೇ ಆ ಹುಡುಗ ಎದ್ದು ಜ್ಞಾನೇಶ್ವರ ಮಹರಾಜ ಅವರ ಜೊತೆ ಹೋದನು. ಇವರು ಯಾವಾಗಲು "ಸರ್ವವೂ ಬ್ರಹ್ಮಮಯ" ಎಂದು ಹೇಳುತ್ತಿದ್ದರು. ಆಗ ಒಬ್ಬ ಬ್ರಾಹ್ಮಣ, ಜ್ಞಾನೇಶ್ವರರನ್ನು, "ಸರ್ವವೂ ಬ್ರಹ್ಮಮಯ ಅಂದಾಗ, ನೀನು ವೇದ ಪಠಿಸಬಲ್ಲ ಅಲ್ಲವೇ! ಹಾಗಾದರೆ, ಆ ಕೋಣ ವೇದ ಪಠಿಸ ಬಲ್ಲದಾ? ಎಂದು ಕೇಳಿದಾಗ, ಜ್ಞಾನೇಶ್ವರರು "ಅದು ಕೂಡಾ ವೇದ ಹೇಳುತ್ತದೆ" ಎಂದು ಆ ಕೋಣವನ್ನು ಮುಟ್ಟಿ, "ವೇದ ಹೇಳು" ಎಂದು ಆಜ್ಞಾಪಿಸಿದರು. ತಕ್ಷಣ ಆ ಕೋಣ 4.5 ಘಂಟೆಯ ಕಾಲ ಸುಸ್ವರದಿಂದ ವೇದ ಘೋಷ ಮಾಡಿತು.

ಈ ಲೀಲೆಯಿಂದ ಜ್ಞಾನೇಶ್ವರ್ ಮಹರಾಜ ಕೀರ್ತಿ ನಾಲಕ್ಕು ದಿಕ್ಕುಗಳಲ್ಲಿ ವ್ಯಾಪಿಸಿತು. ಒಮ್ಮೆ, ಚಾಂಗ್ದೇವ್ ಎನ್ನುವ ಒಬ್ಬ ಯೋಗಿ, ನಾಗರ ಹಾವನ್ನು ಕಂಠದಲ್ಲಿ ಧರಿಸಿ, ತನ್ನ ಯೋಗಶಕ್ತಿಯಿಂದ ಹುಲಿಯನ್ನು ವಾಹನ ಮಾಡಿಕೊಂಡು ತುಂಬಾ ಹೆಸರು, ಪ್ರತಿಷ್ಠೆ ಪಡೆದಿದ್ದರು. ಆತ, ಹುಲಿಯ ಮೇಲೆ ಸವಾರಿ ಮಾಡಿ, ಜ್ಞಾನೇಷ್ವರ ಮಹಾರಾಜ್ ಅವರನ್ನು ನೋಡಲು ಬಂದರು. ಚಾಂಗ್ದೇವ್, ತನ್ನ ಆ ಸಾಧನೆಯನ್ನು ಪುನರಾವರ್ತಿಸಲು, ಜ್ಞಾನೇಶ್ವರನಿಗೆ ಸವಾಲು ಹಾಕಬೇಕೆಂದು ಬಯಸಿದರು. ಆ ಸಮಯದಲ್ಲಿ ಜ್ಞಾನೆಷ್ವರ್ ಮಹರಾಜ, ತನ್ನ ಸ್ನೇಹಿತರೊಡನೆ ಆಡುತಿದ್ದರು. ಸ್ನೇಹಿತರೆಲ್ಲರೂ, ಚಾಂಗ್ದೇವ್ ಅವರನ್ನು

ನೋಡಬೇಕೆಂದು ಬಯಸಿದರು. ಆಗ, ಜ್ಞಾನೆಷ್ವರ್, ತನ್ನ ಸ್ನೇಹಿತರೊಡನೆ ಒಂದು ಗೋಡೆಯ ಮೇಲೆ ಕುಳಿತು, ಆ ಗೋಡೆಯನ್ನು ಮುಂದೆ ಹೋಗು ಎಂದು ಆಜ್ಞಾಪಿಸಿದರು. ಆ ಗೋಡೆ ಕುದುರೆಯಂತೆ ಓಡಿ ಹೋಗಿ ಚಾಂಗ್ದೇವ್ರವರ ಎದುರಿಗೆ ನಿಂತಿತು. ಈವರ ಸಾಧನೆ ಶಕ್ತಿಯನ್ನು ನೋಡಿ, ಚಾಂಗ್ದೇವ್ ವಿನಮ್ರವಾದರು.

ಹೀಗೆ ಲೆಖ್ಖವಿಲ್ಲದ ಲೀಲೆಗಳನ್ನು ತೋರಿಸಿದ ಜ್ಞಾನೇಶ್ವರ್ ಮಹರಾಜರ ವಯಸ್ಸು ಕೇವಲ 12 ವರ್ಷಗಳೇ. ಈ ಮಹನೀಯರು ಬರೆದ ಭಗವದ್ಗೀತೆಯ ವ್ಯಾಖ್ಯಾನಕ್ಕೆ "ಜ್ಞಾನೇಶ್ವರೀ ಭಗವದ್ಗೀತ" ಎಂದು ಹೆಸರು. ಜ್ಞಾನೇಶ್ವರೀ ಭಗವದ್ಗೀತೆಯ 16ನೇ ಅಧ್ಯಾಯದಲ್ಲಿ ಶ್ರೀ ಜ್ಞಾನೇಶ್ವರ ಮಹರಾಜ್ ಹೇಗೆ ಹೇಳಿದ್ದಾರೆ - ಈ ಲೋಕದಲ್ಲಿ ಅಥವಾ ಪರಲೋಕದಲ್ಲಿ ನಾವು ಧರ್ಮವನ್ನು ಆಚರಿಸುತ್ತಿದ್ದೇವೆ ಎಂದು ಅಹಂಕಾರದಿಂದ ಹೇಳಿದಾಗ, ಆ ಧರ್ಮವೇ ಹಾನಿಕಾರಕವಾಗಬಹುದು. ಅದಕ್ಕಾಗಿಯೇ ಓ ಅರ್ಜುನ, ನಾವು ಎಂದಿಗೂ ನಮ್ಮ ಧರ್ಮ ಕಾರ್ಯಗಳನ್ನು ಪ್ರಚಾರ ಮಾಡಬಾರದು. ನಮ್ಮ ಎಲ್ಲಾ ಧರ್ಮ ಕಾರ್ಯಗಳಲ್ಲಿ ಗೌಪ್ಯತೆಯನ್ನು ಅನುಸರಿಸಬೇಕು. ಅದಕ್ಕಾಗಿಯೇ ವಿದ್ಯಾನಗರದಲ್ಲಿ ಪೂಜ್ಯಶ್ರೀ ಭಾರದ್ವಾಜರ ನೇತೃತ್ವದಲ್ಲಿ ನಿರ್ಮಿಸಲಾದ ಶ್ರೀ ಶಿರಡಿ ಸಾಯಿ ದೇವಾಲಯದಲ್ಲಿ, ದೇವಾಲಯವನ್ನು ನಿರ್ಮಿಸಲು ಸಹಾಯ ಮಾಡಿದವರ ಹೆಸರನ್ನು ವಸ್ತುಗಳ ಮೇಲಾಗಲಿ, ಅಥವ ದೇವಲಯದಲ್ಲಾಗಲಿ ಬರೆಯಲಾಗಿಲ್ಲ. ಅದಕ್ಕಾಗಿಯೇ ಹಿರಿಯರು ಇದನ್ನು ಗುಪ್ತ ದಾನ ಎಂದು ಕರೆಯುತ್ತಾರೆ. ನೀವು ನಿಮ್ಮ ಬಲಗೈಯಿಂದ ದಾನ ಮಾಡಿದರೆ, ಎಡಗೈಗೆ ತಿಳಿಯಬಾರದು ಎಂದು ಅವರು ಹೇಳುತ್ತಾರೆ.

ಮುಖ್ಯವಾಗಿ ಗಮನಿಸ ಬೇಕಾದ ವಿಷಯ:- ಗೊಲಗಮುಡಿಯಲ್ಲಿ ಅನೇಕ ಮೋಸಗಾರರಿದ್ದಾರೆ, ಸಣ್ಣಪುಟ್ಟ ಪರಿಹಾರ ಹೇಳಿ ನಿಮ್ಮ ಸಮಸ್ಯೆ ಬಗೆಹರಿಸಿ ಮೋಸ ಮಾಡುತ್ತಿದ್ದಾರೆ. ದಯವಿಟ್ಟು ಶ್ರೀ ಸ್ವಾಮಿಯನ್ನು ಬಿಟ್ಟು ಯಾರನ್ನೂ ನಂಬ ಬೇಡಿ

.

ಪಾಠ ಕೋಷ್ಠಕ

ಪಾಠ ಸಂಖ್ಯೆ	ಪುಟ ಸಂಖ್ಯೆ
1.	18
2.	29
3.	33
4.	36
5.	36
6.	38
7.	40
8.	42
9.	43
10.	44
11.	45
12.	46
13.	50
14.	52
15.	56
16.	61
17.	62
18.	64
19.	64
20.	70
21.	70
22.	71
23.	73
24.	74
25.	76
26.	78
27.	85
28.	97
29.	102
30.	102
31.	108
32.	114
33.	115
33A	115
34.	119
35.	126

ಪಾಠ ಸಂಖ್ಯೆ	ಪುಟ ಸಂಖ್ಯೆ
36.	127
37.	127
38.	127
39.	135
40.	136
41.	137
42.	140
43.	148
44.	148
45.	149
46.	151
47.	151
48.	158
49.	158
50.	159
51.	159
52.	160
53.	163
54.	163
55.	165
56.	166
57.	166
58.	166
59.	168
60.	168
61.	169
62.	170
63.	170
64.	170
65.	171
66.	174
67.	175
68.	175
69.	176
70.	176
71.	176

ಪಾಠ ಸಂಖ್ಯೆ	ಪುಟ ಸಂಖ್ಯೆ
72.	177
73.	177
74.	178
75.	179
76.	179
77.	180
78.	180
79.	181
80.	181
81.	182
82.	182
83.	182
84.	183
85.	183
86.	183
87.	183
88.	183
89.	184
90.	184
91.	184
92.	184
93.	184
94.	185
95.	185
96.	186
97.	186
98.	187
98A	187
99.	188
100.	189
101.	189
102.	191
103.	191
104.	192
105.	193
106.	193

ಪಾಠ ಸಂಖ್ಯೆ	ಪುಟ ಸಂಖ್ಯೆ
107.	195
108.	197
109.	198
110.	198
111.	198
112.	199
113.	200
114.	202
115.	215
116.	216
117.	216
118.	217
119.	217
120.	220
121.	221
122.	224
123.	225
124.	229
125.	231
126.	239
127.	244
128.	246
129.	248
130.	249
131.	258
132.	258
133.	259
134.	259
135.	265
136.	266
137.	269